ಬಸವರಾಜದೇವರ

ಅರುಣಾಲಯ ಪ್ರತಿ.

ಹೊಂಬೆಳಗ ಬಿ.ಬಿ. ಬಸವರಾಜನ
(ಕಾವ್ಯದ)
ವಿದ್ಯಾರ್ಥಿ ವೃತ್ತಿಯ ಬಳುವಳಿ-
ಅವನ ಅಕ್ಕರೆಯವಳಿಗೆ
ಇರಲಾಗದೆ

ಪ್ರೀತಿ
ಲ. ಹೈ. ಶಿವರುದ್ರಪ್ಪ

-3-21

ಬಸವಣ್ಣನವರ
ಅಷ್ಟಶತ ಸಾಂವತ್ಸರಿಕೋತ್ಸವದ ಸ್ಮಾರಕ

ಬಸವರಾಜ ದೇವರು

ಆದಿ ಪುರುಷನು ಬಸವರಾಜನ-। ನಾದಿ ಪುರುಷನು ಬಸವರಾಜನು ।
ನಾದ ಪುರುಷನು ಬಸವರಾಜನು. ಬಸವರಾಜನನು
ವೇದ ಶಾಸ್ತ್ರಗಳರಸಲರಿಯದೆ। ಹೋದವೆನುತಲಿ ಬಸವರಾಜನ-।
ನೈದೆ ಪೊಗಳುತಲಲ್ಲಮಪ್ರಭುರಾಯನಿಂತೆಂದ ॥

(ಚಾಮರಸನ ಪ್ರಭುಲಿಂಗಲೀಲೆ)

ಲೇಖಕ:
ಲಕ್ಕಪ್ಪ ಅ. ಶಿರಹಟ್ಟಿ
ಅಸಿ. ಡೆಪುಟಿ ಎಜ್ಯುಕೇಶನಲ್ ಇನಸ್ಪೆಕ್ಟರ (ನಿವೃತ್ತ)

ಪ್ರಕಾಶಕರು :
ಬಾಗೇವಾಡಿಯ ಶ್ರೀ ಶಿವಯೋಗೀಶ್ವರ ಸ್ಮಾರಕ
ಬಸವೇಶ್ವರ ಲಿಂಗಾಯತ ಜಾಗ್ರತ ಸಂಸ್ಥೆಯ ಪರವಾಗಿ
ಶ್ರೀ ಮಹಾಲಿಂಗಪ್ಪ ಚೆನ್ನಮಲ್ಲಪ್ಪ ಕೋರಿ
ಕಾರ್ಯದರ್ಶಿ

ಪ್ರಥಮ ಮುದ್ರಣ, ೧೦೦೦ ಪ್ರತಿಗಳು.

ಬೆಲೆ: ೫ ರೂ.

ಮುದ್ರಕರು :
ಶ್ರೀ ಬಸವರಾಜ ಹೊರಡಿ
ಲಲಿತ ಮುದ್ರಣಾಲಯ, ಲೈನಬಝಾರ-ಧಾರವಾಡ.

ಓಂ

ಅರ್ಪಣ

ಇಹ-ಪರವಿದ್ಯಾದಾನಿ, ಸಮ್ಯಗ್‌ಜ್ಞಾನಿ,
ಸಮಾಜ ಹಿತಚಿಂತಕ, ಪ್ರಮಥಾಚಾರ ದೀಪಕ,
ಲೋಕೋಪಕಾರಿ, ಭಕ್ತಮಾನಸವಿಹಾರಿ
ಶ್ರೀಮನ್ನಿರಂಜನ ಪ್ರಣವ ಸ್ವರೂಪಿ
ಬಂಥನಾಳದ
ಶ್ರೀ ಸಂಗನಬಸವ ಮಹಾಶಿವಯೋಗಿ
ಅವರ ದಿವ್ಯಸನ್ನಿಧಿಗೆ

ಶ್ರೀ ಸಂಗನ ಬಸವರಾಜದೇವರ

ಈ ಚರಿತ್ರಗ್ರಂಥವನ್ನು
ಭಕ್ತಿಪೂರ್ವಕವಾಗಿ ಅರ್ಪಿಸಿದೆ.

ತತ್ಪಾದಾವನತ
ಲೇಖಕ

ಪ್ರಕಾಶಕರ ಅರಿಕೆ

ಮಹಾವಿಭೂತಿ ಮಹಾತ್ಮಾ ಬಸವಣ್ಣನವರು ಬಹುಕಾಲ ಅಸಾಧ್ಯವಾದ ಜಾತ್ಯತೀತ ಸಮಾಜಸಂಘಟನೆಯನ್ನು, ಮಾನವಕುಲೋದ್ಧಾರವನ್ನು ಕೈಕೊಂಡು ಕಾರ್ಯಗತಗೊಳಿಸಿ ಇಂದಿಗೆ ಎಂಟುನೂರು ವರ್ಷಗಳು ಸಲ್ಲುತ್ತವೆ. ಈ ಸಮಯದಲ್ಲಿ ಅವರ ಸಾಧನೆಗಳನ್ನು ಸ್ಮರಿಸಿ, ಅವರ ಜೀವನದ ಆದರ್ಶವನ್ನು ಮಾರ್ಗದರ್ಶನವನ್ನಾಗಿ ನಾವು ಇರಿಸಿಕೊಳ್ಳುವದು ಅತ್ಯಾವಶ್ಯಕವದೆ. ಈ ಉದ್ದೇಶದಿಂದ ಇಡೀ ಕನ್ನಡನಾಡಿನಲ್ಲಿ ಶ್ರೀ ಬಸವಣ್ಣನವರ ಅಷ್ಟಶತಸಾಂವತ್ಸರಿಕ ಉತ್ಸವವನ್ನು ಅತಿ ಉತ್ಸಾಹದಿಂದ ಜರುಗಿಸಲಾಗುತ್ತಿದೆ. ಈ ಸಮಯದಲ್ಲಿ ಬಸವಣ್ಣನವರ ಜನ್ಮಪ್ರದೇಶದಲ್ಲಿರುವ ನಮ್ಮ ಸಂಸ್ಥೆಯುವರು ಅವರ ಬಗೆಗೆ ತಮ್ಮ ಪಾಲಿನ ಕರ್ತವ್ಯವನ್ನು ನೆರವೇರಿಸುವದಕ್ಕೋಸ್ಕರ ಈ 'ಬಸವರಾಜ ದೇವರು' ಎಂಬ ಚರಿತ್ರಗ್ರಂಥವನ್ನು ಪ್ರಕಟಿಸುವ ನಿರ್ಣಯವನ್ನು ಮಾಡಿದರು.

ಈ ಚರಿತ್ರೆಯನ್ನು ಯಥಾರ್ಥರೀತಿಯಿಂದ ಬರೆದು ಕೊಟ್ಟವರು ಶ್ರೀ ಲಕ್ಕಪ್ಪ ಅವ್ವಪ್ಪ ಶಿರಹಟ್ಟಿ, ನಿವೃತ್ತ ಅಸಿ. ಡೆಪುಟಿ ಎಜ್ಯುಕೇಶನಲ್ ಇನಸ್ಪೆಕ್ಟರ ವಿಜಾಪುರ (ತೊರವಿ) ಇವರು. ಇದನ್ನು ತಜ್ಞರಿಂದ ಪರಿಶೀಲಿಸಿ ಪ್ರಕಟಿಸಲಾಗುತ್ತಿದೆ. ಈ ಕಾರ್ಯಕ್ಕಾಗಿ ಲೇಖಕರಿಗೂ ಪರಿಶೀಲಿಸಿದವರಿಗೂ ನನ್ನ ಧನ್ಯವಾದಗಳು.

ಈ ಚರಿತ್ರೆಯನ್ನು ಅಂದವಾಗಿ ಮುದ್ರಿಸಿದ ಧಾರವಾಡದ ಲಲಿತ ಮುದ್ರಣಾಲಯದ ಒಡೆಯರಿಗೂ, ಅಚ್ಚಿನ ಪ್ರತಿಗಳನ್ನು ತಿದ್ದುವ ಕಾರ್ಯ ವಹಿಸಿದ ಶ್ರೀ ಕೆ. ಎಸ್. ಪಾಟೀಲ ನಿವೃತ್ತ ಟ್ರೇ. ಕಾ. ಹೆಡ್‌ಮಾಸ್ತರ, ಧಾರವಾಡ ಇವರಿಗೂ ನಮ್ಮ ಸಂಘದ ಪರವಾಗಿ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಪಡಿಯಚ್ಚುಗಳನ್ನು ಕೊಟ್ಟ ಶ್ರೀ ಬಸವೇಶ್ವರ ದೇವಾಲಯ ಸಂಸ್ಥೆ ಬಾಗೇವಾಡಿ, ಗ್ರಾಮಾಂತರ ವಿದ್ಯಾವರ್ಧಕ ಸಂಘ ಬಬಲೇಶ್ವರ, ಶ್ರೀ ಸೋಮಶೇಖರಪ್ಪನವರು ಬಳ್ಳಾರಿ, ಗದಗ, ಶ್ರೀ ಮಲ್ಲಾಬಾದಿ ವೀರಭದ್ರಪ್ಪನವರು, ಕ. ವಿ. ವಿದ್ಯಾಲಯ ಧಾರವಾಡ ಇವರೆಲ್ಲರಿಗೂ ತುಂಬ ಉಪಕೃತನಾಗಿರುವೆ.

ಮೇಲೆ ವಿವರಿಸಿದ ಎಲ್ಲ ಕಾರ್ಯಗಳಲ್ಲಿ ಸಹಾಯ-ಸಹಕಾರಗಳನ್ನು ಸಲ್ಲಿಸಿದ ಮಹನೀಯರಿಗೆ ಶ್ರೀ ಬಸವೇಶ್ವರರ ಕರುಣೆಯಿಂದ ಅಭೀಷ್ಟ ಸಿದ್ಧಿಯೂ ಆನಂದವೂ ಉಂಟಾಗಲೆಂದು ಹಾರೈಸುವೆ.

ವಿಜಾಪುರ
೧೬-೧ ೧೯೬೭

ಮಹಾಲಿಂಗಪ್ಪ ಚೆನ್ನಮಲ್ಲಪ್ಪ ಕೋರಿ
ಕಾರ್ಯದರ್ಶಿ
ಶಿ. ಸ್ವಾ. ಬಸವೇಶ್ವರ ಲಿಂ. ಜಾ. ಸಂಸ್ಥೆ, ಬಾಗೇವಾಡಿ

ಮುನ್ನುಡಿ

(ಶ್ರೀ ಷ. ಬ್ರ. ಶಾಂತವೀರ ಶಿವಾಚಾರ್ಯರು ಬಬಲೇಶ್ವರ ಹರಳೇಶ್ವರ ಅವರಿಂದ)

ಬಸವಣ್ಣನವರು ದೇಶವತ್ಸಲರಾಗಿ ಕೆಲಸಮಾಡಿ ತಮ್ಮ ಜನಾಂಗವನ್ನು ಉದ್ಧರಿಸಿದ ಪುಣ್ಯಪುರುಷರು; ಸ್ವಾತಂತ್ರ್ಯ ಸಮತೆಗಳನ್ನಿತ್ತು, ಪತಿತ ಜನಾಂಗವನ್ನು ಉದ್ಧರಿಸಿ ಎಲ್ಲಕ್ಕೂ ಹೆಚ್ಚಾಗಿ ಪ್ರಪಂಚಕ್ಕೆ ಮಾದರಿಯಾಗುವ ಮಟ್ಟಿಗಿನ ಶೀಲಶುದ್ಧಿಯಿಂದ ಅವರು ಬಾಳಿದರು. ಮನುಷ್ಯಜೀವನಕ್ಕೆ ಒಪ್ಪ ವಿಟ್ಟು ಅದನ್ನು ಉತ್ತಮಗೊಳಿಸಿದ ಈ ಮಹಾಪುರುಷರು ಜಗತ್ತಿನ ದಿವ್ಯ-ಜ್ಯೋತಿಗಳಾಗಿ ಬೆಳಗುತ್ತಿದ್ದಾರೆ. ಅಂಥ ಮಹಾಮಹಿಮರ ಚರಿತ್ರೆಯನ್ನು ಬರೆಯುವದು ಸರಳವಾದ ಕೆಲಸವಲ್ಲ; ಪವಾಡ ಕಥನಗಳೂ ಅಲೌಕಿಕ ಘಟನೆಗಳೂ, ಬೇರೆಬೇರೆ ಲೇಖಕರಲ್ಲಿ ಕಂಡುಬರುವ ಪರಸ್ಪರ ವಿರೋಧ-ವ್ಯತ್ಯಾಸಗಳೂ ಬಸವಣ್ಣನವರ ಆದರ್ಶಜೀವನದ ನಿಜಸ್ವರೂಪವನ್ನು ಮರೆಮಾಡಿರುವಾ ಅವರ ಜೀವನವನ್ನು ಕುರಿತು ಪ್ರಾಮಾಣಿಕವಾದ ಸರ್ವಜನರಿಗೂ ಸುಲಭವಾದ, ಐತಿಹಾಸಿಕ ಘಟನೆಗಳಿಗನುಗುಣವಾದ, ವೈಜ್ಞಾನಿಕ ದೃಷ್ಟಿಕೋಣವನ್ನೊಳಗೊಂಡ ಚರಿತ್ರೆ ಬರೆಯುವದು ಮತ್ತಷ್ಟು ಕಠಿಣ. ಈ ಕಠಿಣ ಕಾರ್ಯವನ್ನು ಶ್ರೀ ಶಿರಹಟ್ಟಿಯವರು ಕೈಕೊಂಡು ಅದರಲ್ಲಿ ಸಫಲರಾಗಿದ್ದಾರೆ. ಜನಸಾಮಾನ್ಯರನ್ನು ರಂಜಿಸಬಹುದಾದ ಬಸವಣ್ಣನವರ ಸಹಜ ಹಾಗೂ ವಾಸ್ತವಿಕ ಜೀವನ ಚರಿತ್ರೆಯನ್ನು ಅವರು ಬರೆದು ನಮಗಿರುವ ಬಹು ದೊಡ್ಡ ಕೊರತೆಯನ್ನು ದೂರ ಮಾಡಿದ್ದಾರೆ.

ಬಸವಣ್ಣನವರ ಜೀವನ ನಾನಾ ಸಾಧನೆಗಳ ಒಂದು ದೊಡ್ಡ ಭಂಡಾರ! ಒಂದು ರಾಜ್ಯದ ಪ್ರಧಾನಿಯಾಗಿ ರಾಜಸೇವೆಯಲ್ಲಿದ್ದರೂ ಅವರು ತಮ್ಮ ಜೀವನವನ್ನು ದೀನದಲಿತರ ಉದ್ಧಾರಕ್ಕಾಗಿ ಮುಡಿಪಾಗಿರಿಸಿದರು. ಲೋಕ ಸೇವೆ ಮತ್ತು ರಾಜಸೇವೆಗಳೆರಡನ್ನೂ ತೃಪ್ತಿಕರವಾಗಿ ನೆರವೇರಿಸುವದು ಕಷ್ಟ. ಆದರೆ ಬಸವಣ್ಣನವರು ಬಲದೇವರ ಅಪಾರ ಸಂಪತ್ತಿಗೆ ವಾರಸದಾರರಾಗಿ

ದ್ದರೂ ಅದನ್ನು ದಾಸೋಹಕ್ಕೆ ಧಾರೆಯೆರೆದು, ತಮ್ಮ ಕಾಯಕದಿಂದ ಸಂಪಾದಿಸಿದ್ದನ್ನೂ ಸಮಾಜಕ್ಕೆ ಅರ್ಪಿಸಿ ನಿಸ್ಪೃಹಿಗಳಾಗಿ ಬಿಜ್ಜಳನ ಆಡಳಿತವನ್ನು ಬಲಪಡಿಸಿದರು. ಬಸವಣ್ಣನವರ ನಿರ್ಮಲ ಜೀವನದಿಂದ ಪ್ರಭಾವಿತನಾದ ಬಿಜ್ಜಳನು ರಾಜ್ಯದ ಸರ್ವಾಧಿಕಾರವನ್ನು ಅವರಿಗೆ ಒಪ್ಪಿಸಿದ್ದಲ್ಲದೆ ತನ್ನ ತಂಗಿಯಾದ ನೀಲಲೋಚನೆಯನ್ನು ಬಸವಣ್ಣನವರಿಗೆ ಕೊಟ್ಟು ವಿವಾಹ ಮಾಡಿದನು. ಹೀಗೆ ಕೇವಲ ಆಧ್ಯಾತ್ಮಿಕವಾಗಿ ಅಲ್ಲ, ಲೌಕಿಕವಾಗಿಯೂ ಸಫಲ ಜೀವನ ನಡಿಸಿದ ಬಸವಣ್ಣನವರು ತಮ್ಮ ಬಾಳಿನಲ್ಲಿ ಇಹ–ಪರಗಳ ಸಮನ್ವಯ ಸಾಧಿಸಿದ್ದರು.

ಬಸವಣ್ಣನವರು ಬಡವರ ಬಂಧುಗಳೂ ಕೆಳಗಿನ ಜನರ ಬೆಂಬಲಿಗರೂ ಆಗಿದ್ದರು ಜನಸೇವೆಯೇ ಅವರ ಜೀವನದ ಉಸಿರಾಗಿತ್ತು. ಜನರಲ್ಲಿಯ ಅಜ್ಞಾನ ಮತ್ತು ಅಂಧಾನುಕರಣೆಗಳ ವಿರುದ್ಧ ಹೋರಾಡಿದರು ಕರ್ಮಕಾಂಡ ಸಂಪ್ರದಾಯಗಳನ್ನು ಹೊಡೆದು ಹಾಕಿ ನವೀನ ಸಮಾಜದ ನಿರ್ಮಾಣ ಮಾಡಿದರು ಅನೇಕ ದೇವರ ಪೂಜೆಯನ್ನು ಅಲ್ಲಗಳೆದು 'ಕಲ್ಲು ಮಣ್ಣು ಮರ ಪಂಚಲೋಹಗಳಲ್ಲಿ ಮಾಡಿದ ದೇವರು ದೇವರಲ್ಲ; ತನ್ನ ತಾನರಿದು ತಾನಾರೆಂದು ತಿಳಿದರೆ ತಾನೇ ದೇವರೆಂದು, ದೇಹವೇ ದೇವಾಲಯವೆಂ'ದು ಹೇಳಿ ಜನರಿಗೆ ದೇವರ ವಿಷಯದಲ್ಲಿದ್ದ ಮೂಢನಂಬಿಕೆಯನ್ನು ಹೊಡೆದು ಹಾಕಿದರು ವೈದಿಕ ಸಂಪ್ರದಾಯಗಳನ್ನು ಖಂಡಿಸಿ, ಯಜ್ಞಯಾಗಾದಿಗಳನ್ನು ವಿರೋಧಿಸಿ, ಸರಳವಾದ ಭಕ್ತಿಮಾರ್ಗವನ್ನು ಪ್ರತಿಪಾದಿಸಿದರು. ವಿಪ್ರಮೊದಲು ಅಂತ್ಯಜ ಕಡೆಯಾಗಿ ಶಿವಭಕ್ತರನ್ನೆಲ್ಲ ಒಂದೆಂದು ಹೇಳಿ, ಜಾತಿ ಮತಗಳ ಭೇದವನ್ನು ದೂರಮಾಡಿ ಸಮಾನತೆಯನ್ನು ಸ್ಥಾಪಿಸಿದರು. ಮರ್ತ್ಯಲೋಕ ಕರ್ತಾರನ ಕಮ್ಮಟ, ಇಲ್ಲಿ ಸಲ್ಲುವವರು ಅಲ್ಲಿಯೂ ಸಲ್ಲುವರೆಂದು ಹೇಳಿ ಆಚಾರ, ಶೀಲ, ಸದಾಚಾರಗಳಿಗೆ ಮಹತ್ವಕೊಟ್ಟರು.

ಬಸವಣ್ಣನವರು ಸ್ತ್ರೀಯರ ಧಾರ್ಮಿಕ ಸಾಮಾಜಿಕ ಹಾಗು ಆರ್ಥಿಕ ಸ್ವಾತಂತ್ರ್ಯಕ್ಕಾಗಿ ಹೋರಾಡಿದರು. ಸ್ತ್ರೀಯರಿಗೆ ಲಿಂಗಧಾರಣೆ ಮಾಡಿಕೊಳ್ಳುವ ಅವಕಾಶವನ್ನು ಕಲ್ಪಿಸಿ, ಅವರಿಗೆ ಸ್ವತಂತ್ರವಾಗಿ ತನ್ನ ಆಧ್ಯಾತ್ಮಿಕ ವಿಕಾಸದ ಮಾರ್ಗವನ್ನು ಕಂಡುಕೊಳ್ಳಲು ಅನುಕೂಲ ಮಾಡಿಕೊಟ್ಟರು. ಸ್ತ್ರೀಯರ ನೈತಿಕ ಆಚರಣೆಗೂ ಮಹತ್ವವಿತ್ತು, ಪರವಧುವನ್ನು ಮಹಾದೇವಿಯೆಂದ

ಕಾಣಬೇಕೆಂದು ಪುರುಷರಿಗೆ ಹೇಳಿದರೆ, ಪರಮ ಪತಿವ್ರತೆಗೆ ಗಂಡನೊಬ್ಬನೆಂದು ಹೇಳಿ, ಸ್ತ್ರೀಯರಿಗೆ ಅವರ ಪಾತಿವ್ರತ್ಯದ ಬಗ್ಗೆ ಎಚ್ಚರಿಕೆಯನ್ನಿತ್ತರು. ಸ್ತ್ರೀಪುರುಷರ ಭೇದವನ್ನು ಕಿತ್ತು ಹಾಕಿ, ಸ್ತ್ರೀ ಪ್ರತ್ಯಕ್ಷದೇವರೆಂದು ಭಾವಿಸಿದರು. ಅವರ ಈ ಕ್ರಾಂತಿಯ ಪರಿಣಾಮವಾಗಿ ಅಕ್ಕಮಹಾದೇವಿ, ಅಕ್ಕನಾಗಮ್ಮ ಮೊದಲಾದ ನಾರೀ ರತ್ನಗಳು ಬೆಳಕಿಗೆ ಬಂದವು.

ಬಸವಣ್ಣನವರು ಸಮಾಜವನ್ನು ಆರ್ಥಿಕ ದೃಷ್ಟಿಯಿಂದ ಭದ್ರಗೊಳಿಸಲು ಮತ್ತು ಸ್ವಾವಲಂಬಿಯಾಗಿಸಲು ಕಾಯಕದ ಮಹತ್ವವನ್ನು ಪ್ರತಿಪಾದಿಸಿದರು. ಕಾಯಕದಲ್ಲಿ ಮೇಲು ಕೀಳುಗಳನ್ನು ತೆಗೆದು ಹಾಕಿ, ವೃತ್ತಿಗೌರವವನ್ನು ಎತ್ತಿ ಹಿಡಿದರು. ಕಾಯಕವೇ ಕೈಲಾಸವೆಂದು ಹೇಳಿ ಕಾಯಕದ ಪಾವಿತ್ರ್ಯ ಹಾಗು ಪರಿಶುದ್ಧತೆಯನ್ನು ಪ್ರತಿಪಾದಿಸಿದರು.

ಬಸವಣ್ಣನವರು ಶ್ರೇಷ್ಠ ಸಾಧಕರು. ಅವರ ವಚನಗಳಲ್ಲಿ ಅವರ ಆಧ್ಯಾತ್ಮಿಕ ಹೋರಾಟದ ಕೆಚ್ಚನ್ನು ಕಾಣಬಹುದು. ಅವರ ಭಕ್ತಿ ಉತ್ಕಟವಾದುದು ಆಧ್ಯಾತ್ಮಿಕ ಸಾಧನೆಯಿಂದ ತಮಗಾದ ಆನಂದವು ಎಲ್ಲರಿಗೂ ದೊರೆಯಬೇಕೆಂದು ಅವರ ಹಂಬಲ; ಅದಕ್ಕಾಗಿ ಶರಣಧರ್ಮದ ಉನ್ನತ ತತ್ವಗಳನ್ನು ಒಡೆದು ಹೇಳಿ ಜ್ಞಾನ ಪ್ರಸಾರ ಮಾಡಲು ಅನುಭವ ಮಂಟಪ ಸ್ಥಾಪಿಸಿದರು. ಅನುಭವಮಂಟಪ ಆಧ್ಯಾತ್ಮಿಕ ಸಂಶೋಧನಾಲಯ ! ಶರಣರೆಲ್ಲರೂ ಸತ್ಯಸಂಶೋಧಕರು ! ಬಸವಣ್ಣನವರ ಪ್ರಯತ್ನದ ಫಲವಾಗಿ ಅಲ್ಲಮಪ್ರಭುಗಳ ಹಿರಿಯತನದಲ್ಲಿ ಅನುಭವಮಂಟಪವು ಜ್ಞಾನದ ಪವಿತ್ರ ಮಂದಿರವಾಗಿ ಬೆಳಗಿತು. ಬಸವಣ್ಣನವರ ಧಾರ್ಮಿಕ ಕ್ರಾಂತಿಗೆ ಮಾರ್ಗದರ್ಶನ ಮಾಡುವ ಉನ್ನತ ಸಂಸ್ಥೆ ಅನುಭವ ಮಂಟಪವಾಗಿತ್ತು. ವ್ಯಕ್ತಿ, ಸ್ಥಾನ, ಕುಲಗಳ ಭೇದವನ್ನೆಣಿಸದೆ ಸಮಾನತೆಯ ಆಧಾರದ ಮೇಲೆ ಆಂತರಿಕ ಅನುಭವವನ್ನೂ ವಿಚಾರವನ್ನೂ ನಿರ್ವಂಚನೆಯಿಂದ ವಿನಿಮಯ ಮಾಡುವ ಅವಕಾಶ ಅಲ್ಲಿ ಇತ್ತು.

ಬಸವಣ್ಣನವರು ಗಹನವಾದ ಧಾರ್ಮಿಕ ಮಾತುಗಳನ್ನು ತಿಳಿಯುವ ಭಾಷೆಯಲ್ಲಿ ಸಕಲರ ಮನಮುಟ್ಟುವಂತೆ ಹೇಳಿದರು. ಅವರ ವಚನಗಳು ಕನ್ನಡ ಸಾಹಿತ್ಯದ ರತ್ನಗಳು. ಉದಾತ್ತ ವಿಚಾರ, ಸರಸ ಕಾವ್ಯಶಕ್ತಿ

ಸಂಗೀತದ ಮಾಧುರ್ಯ ಇವುಗಳನ್ನೊಳಗೊಂಡ ಅವರ ವಚನಗಳು ನಮ್ಮ ಅಮೂಲ್ಯ ಸಂಪತ್ತು.

ಪರಿಶುದ್ಧ ಆಚಾರ ವಿಚಾರಗಳಿಂದ ಕೂಡಿ, ನ್ಯಾಯನಿಷ್ಠುರರಾಗಿ, ಯಾರ ದಾಕ್ಷಿಣ್ಯಕ್ಕೂ ಒಳಗಾಗದೆ, 'ನಾಳೆ ಬಪ್ಪುದು ನಮಗಿಂದೇ ಬರಲಿ' 'ಮರಣವೇ ಮಹಾನವಮಿ' ಎಂದು ಲೋಕವಿರೋಧವನ್ನು ನಿರ್ಭಯವಾಗಿ ಎದುರಿಸಿದ ಬಸವಣ್ಣನವರ ಜೀವನದಲ್ಲಿ ನಿಸ್ಪೃಹತೆ–ಆತ್ಮವಿಶ್ವಾಸಗಳ ಕೆಚ್ಚನ್ನು ನಾವು ಕಾಣುತ್ತೇವೆ. ಸಕಲ ಜೀವಾತ್ಮರಿಗೆ ಲೇಸನೇ ಬಯಸಿ, ದಯವೇ ಧರ್ಮದ ಮೂಲವೆಂದು, ಎನಗಿಂತ ಕಿರಿಯರಿಲ್ಲವೆಂದು, ಲೋಕದ ಡೊಂಕ ತಿದ್ದದೆ ನಿಮ್ಮ ಡೊಂಕ ತಿದ್ದಿಕೊಳ್ಳಿರೆಂದು ಹೇಳಿ, ಆಚಾರವೇ ಸ್ವರ್ಗವೆಂದು ಸಾರಿ, ಕಾಯಕವೇ ಕೈಲಾಸವೆಂದು ಘೋಷಿಸಿ ಶರಣರ ಕಣ್ಮಣಿಯಾಗಿ, ಸಕಲರಿಗೂ ಅಣ್ಣನಾಗಿ, ಭಕ್ತಿ ಭಾಂಡಾರಿಯಾಗಿ, ವಿಶ್ವಮಾನವರಾಗಿ ಅವರು ಬೆಳಗಿದ್ದಾರೆ. "ಅವರ ಹೃದಯವು ಒಟ್ಟು ಪ್ರಪಂಚದಷ್ಟು ವಿಶಾಲವಾಗಿದ್ದಿತು; ಆದರೆ ಅಪಕಾರ ನಡೆದುದರ ವಿಚಾರ ಅಲ್ಲಿರಲು ಸ್ಥಾನವೇ ಇರಲಿಲ್ಲ." ಎಂದು ಎಮರ್ಸನ್ನರು ಲಿಂಕನ್ನನ ಬಗ್ಗೆ ಹೇಳಿದ ಮಾತನ್ನು ಬಸವಣ್ಣನವರ ಬಗ್ಗೆಯೂ ಹೇಳಬಹುದಾಗಿದೆ. ಹೀಗೆ ವರ್ಣಮಯವಾಗಿರುವ ಬಸವಣ್ಣನವರ ಜೀವನವನ್ನು ಅಷ್ಟೇ ವರ್ಣಮಯವಾಗಿ ಲೇಖಕರು ಚಿತ್ರಿಸಿದ್ದಾರೆ.

ಬಸವಣ್ಣನವರ ಚರಿತ್ರವು ಸ್ವಾಭಾವಿಕವೂ ದೋಷರಹಿತವೂ ಪರಿಣಾಮಕಾರಿಯೂ ಆಗುವಂತೆ ಲೇಖಕರು ಕೆಲವು ಹೊಸ ತಂತ್ರಗಳನ್ನು ಯಶಸ್ವಿಯಾಗಿ ಉಪಯೋಗಿಸಿದ್ದಾರೆ. ಬಾಲ್ಯದಲ್ಲಿ ಬಸವಣ್ಣನವರು ಉಪನಯನವನ್ನು ನಿರಾಕರಿಸಿ ಕರ್ಮಕಾಂಡವನ್ನು ಧಿಕ್ಕರಿಸಿದ್ದಾರೆ. 'ಎಲ್ಲರೂ ಶಿವನ ಮಕ್ಕಳು' ಎಂಬ ಭಾವನೆಯನ್ನು ರೂಪಿಸಿಕೊಂಡು ಜಾತೀಯತೆಯನ್ನು ನಿರಾಕರಿಸಿದ್ದಾರೆ. ಈ ವಿಚಾರಗಳ ಮೊಳಕೆಯೊಡೆದು ವಿಕಾಸಗೊಳ್ಳಲು ತಕ್ಕ ವಾತಾವರಣ ಚರಿತ್ರೆಯಲ್ಲಿ ನಿರ್ಮಿತವಾಗಿದೆ. ಅಗ್ರಹಾರದ ಪಂಡಿತೋತ್ತಮ ರುದ್ರಭಟ್ಟರ ಚಿರಂಜೀವನ ಉಪನಯನದಲ್ಲಿ, ಕರ್ಮಚಾರಿಗಳ ಅತ್ಯಾಚಾರ, ಹಿಂದುಳಿದವರ ಬಂಧು ಪಂಡಿತ ಚಂದಿರಾಜನ ಪ್ರಭಾವ ಇವುಗಳಿಂದ ಬಸವಣ್ಣನವರಲ್ಲಿ ಸ್ವಾಭಾವಿಕವಾಗಿಯೇ ಕರ್ಮಕಾಂಡದ ಬಗ್ಗೆ ತಿರಸ್ಕಾರ

ದೀನದಲಿತರ ಬಗ್ಗೆ ಸಹಾನುಭೂತಿ ಬೆಳೆದಿವೆ. ಅಸಾಮಾನ್ಯ ಬುದ್ಧಿಶಕ್ತಿ-ಜ್ಞಾನದೃಷ್ಟಿ ಉಳ್ಳ ಬಾಲಕ ಬಸವಣ್ಣನವರ ಪ್ರಕಾಶಮಾನವಾದ ವಿಚಾರಗಳನ್ನು ನಿರಾಕರಿಸುವ ಮನಸ್ಸು ಮಾದಿರಾಜನಿಗೆ ಬಾರದೆ ಹೋದದ್ದರಿಂದ ಮುಂಜಿವೆ ಕೈಬಿಡಬೇಕಾಯಿತು.

ಬಸವಣ್ಣನವರು ಸ್ವರ್ಗದೋಲೆಯನ್ನು ಓದಿ ಬಿಜ್ಜಳನ ಮೆಚ್ಚಿಗೆಯನ್ನು ಗಳಿಸದೆ, ಸಮರ್ಥ ಕರಣಿಕನಾಗಿ ಬಿಜ್ಜಳನ ಹದಗೆಟ್ಟ ಹಣಕಾಸಿನ ಸ್ಥಿತಿಯನ್ನು ಸರಿಪಡಿಸಿ, ಸ್ಪಷ್ಟವಾದ ಆರ್ಥಿಕ ಯೋಜನೆಯ ಪುನರ್ಘಟನೆಯಿಂದ ಬಿಜ್ಜಳನ ರಾಜ್ಯದ ಆರ್ಥಿಕ ಸ್ಥಿತಿಯನ್ನು ಬಲಪಡಿಸಿ, ಹಳೆಯ ಶಾಸನದ ಆಧಾರದ ಮೇಲೆ ಹೂಳಿಟ್ಟ ಅಪಾರ ಸಂಪತ್ತಿಯನ್ನು ದೊರಕಿಸಿ, ರಾಜ್ಯದ ಆರ್ಥಿಕ ತೊಂದರೆಯನ್ನು ದೂರಗೊಳಿಸಿ ಬಿಜ್ಜಳನ ಆಡಳಿತಕ್ಕೆ ಭದ್ರ ತಳಹದಿಯನ್ನು ಹಾಕಿದ್ದರಿಂದ ಈ ಮಹಾಪ್ರತಿಭಾಶಾಲಿ ರಾಜಕಾರಣಿಯನ್ನು ಬಿಜ್ಜಳನು ಮರೆಯುವದು ಸಾಧ್ಯವಿರಲಿಲ್ಲ.

ಹರಳಯ್ಯ ಶರಣರ ಮಗ ಶೀಲವಂತ, ಪ್ರತಿಭಾಶಾಲಿ ಕಲಾವಿದ. ನಡೆಯಲ್ಲಿಯೂ ಶೀಲವಂತ! ಪರಿಶುದ್ಧತೆಯಿಂದಲೇ ಪೂರ್ಣತ್ವ ಕಾಣುವ ನಿಸ್ಪೃಹ ಕಲಾವಿದ. ಸಾಮಂತಮಂತ್ರಿ ಮಧುವರಸನ ಏಕಮಾತ್ರ ಪುತ್ರಿ ಕಲಾವತಿಯು ನಿಜವಾಗಿಯೂ ಕಲಾವತಿ. ಆಕೆಯ ಕಲಾಭಿಜ್ಞತೆಗೆ ಶೀಲವಂತನು ತಲೆಬಾಗಿದ್ದನು. ಕಲೆ ಹಾಗು ಶೀಲಗಳ ಪವಿತ್ರ ಸಂಗಮ ರೂಪಕವೆನಿಸಿದರೂ ಯಥಾರ್ಥವಾಗಿದೆ. ಶೀಲವಂತ ಹಾಗು ಕಲಾವತಿಯ ವಿವಾಹದಲ್ಲಿ ಪ್ರೇಮ ಕಲೆ ಶೀಲಗಳ ಮಧುರ ಸಂಬಂಧವಿದೆ. ಅಲ್ಲಿ ಜಾತೀಯತೆಗೆ ಅವಕಾಶವೆಲ್ಲಿ? ವರ್ಣಧರ್ಮದ ವಿವೇಚನೆಯನ್ನು ಶಾಸ್ತ್ರೀಯವಾಗಿ ಪ್ರತಿಪಾದಿಸಿ ವಿವಾದವನ್ನು ಸಮರ್ಥಿಸಿದ್ದಾರೆ. ಬಸವಣ್ಣನವರ ಮುಖ್ಯ ಮಾತು ಇವು: ಮೂಲತಃ ವರ್ಣಭೇದವು ಉದ್ಯೋಗ ಭೇದದಿಂದ ಬಂದುದು. ಅದು ವೈಷಯಿಕ ಹಿತಾಸಕ್ತಿಗಳಿಂದ ದೃಢಗೊಂಡು ಅನಿಷ್ಟಕಾರಕ ಜಾತೀಯ ಸ್ವರೂಪ ತಳೆಯಿತು. ಅದರಲ್ಲಿ ಶೂದ್ರನ ಜೀವನ ತೀರ ಕೀಳಾಗಿ ಉಚ್ಚವರ್ಣದವರ ಅತ್ಯಾಚಾರಕ್ಕೆ ಒಳಗಾಯಿತು. ಅದರ ದುಷ್ಪರಿಣಾಮವನ್ನು ಕಂಡು ಅದನ್ನು ವಿರೋಧಿಸುವ ಚಳವಳಿಯು ಭಾರತ ಕಾಲದಲ್ಲಿ ಶ್ರೀಕೃಷ್ಣನಿಂದಲೇ ಆರಂಭವಾಯಿತು.

'ಗುಣ ಶೀಲಗಳೇ ದ್ವಿಜತ್ವದ ಗುರುತು. ಸತ್ಯ, ದಯೆ, ತಪಸ್ಸು ಮುಂತಾದ ಸದ್ಗುಣಗಳು ಶೂದ್ರನಲ್ಲಿದ್ದರೂ ಅವನು ಬ್ರಾಹ್ಮಣನು. ಇವಿಲ್ಲದ ಬ್ರಾಹ್ಮಣ ಬ್ರಾಹ್ಮಣನಲ್ಲ,' ಎಂದು ಭಾರತ ಹೇಳುತ್ತದೆ. ಶಿವಸಂಸ್ಕಾರಿತರಲ್ಲಿ ಪೂರ್ವಾಶ್ರಯದ ಜಾತಿ ಪಂಥಗಳು ನಾಶವಾಗಿ ಹೋಗಿರುವವು. ಹರಳಯ್ಯ, ಮಧುವಯ್ಯನವರು ಶಿವಸಂಸ್ಕಾರಿತರು, ಶರಣರು. ಅವರ ಮಕ್ಕಳ ಮದುವೆ ಒಂದೇ ಧರ್ಮದ ಒಂದೇ ತತ್ವವಿಚಾರದ ಶುದ್ಧ ಸಂತಾನದ ಮದುವೆ.

ಬಸವ ಪುರಾಣದ ಪ್ರಕಾರ ಬಿಜ್ಜಳನನ್ನು ಕೊಲೆ ಮಾಡಲು ಪ್ರೇರೇಪಿಸಿದವರು ಬಸವೇಶ್ವರರು ಚೆನ್ನಬಸವ ಪುರಾಣದ ಪ್ರಕಾರವಾದರೋ ಚೆನ್ನಬಸವೇಶ್ವರರು. ಇನ್ನು ಕೆಲವರ ಪ್ರಕಾರ ಜಗದೇವ ಮಲ್ಲಿಬೊಮ್ಮಯ್ಯರೆಂಬ ಶಿವಶರಣರು ಬಿಜ್ಜಳನ ಕೊಲೆ ಮಾಡಿದರು. ರಾಘವಾಂಕನು ಸಿದ್ಧರಾಮ ಚಾರಿತ್ರದಲ್ಲಿ "ಭೂಪ ಬಿಜ್ಜಳನಳಿದ ವೀರಜಗದೇವನಿಂ ಸಿದ್ಧ ಸಂಕೇತದಂತೆ" ಎಂದು ಹೇಳಿದ ಪ್ರಕಾರ ಬಿಜ್ಜಳನನ್ನು ಕೊಂದವನು ಜಗದೇವನೆಂಬವನು; ಅವನನ್ನು ಕೊಂದದ್ದು ಒಬ್ಬ ಸಿದ್ಧನ ಸಂಕೇತದಂತೆ! ಇಲ್ಲಿ ಲೇಖಕರು ಜಗದೇವಮಲ್ಲಬೊಮ್ಮಯ್ಯರು ಬಿಜ್ಜಳನ ಕೊಲೆ ಮಾಡಿದರು ಎಂದು ಹೇಳಿದ್ದಾರೆ. ಈ ಜಗದೇವ ಶರಣನಲ್ಲ; ಚಾಲುಕ್ಯ ಚಕ್ರವರ್ತಿ ತೈಲಪನ ಸೋದರ; ಚಾಲುಕ್ಯ ಸಿಂಹಾಸನದ ವಾರಸುದಾರ. ಮಲ್ಲಿಬೊಮ್ಮಯ್ಯ ಶರಣನಲ್ಲ; ಕಾರ್ಯಸಾಧನೆಗಾಗಿ ಶರಣನಾದ ಚಾಲುಕ್ಯ ವಂಶದ ನಿಷ್ಠಾವಂತ ಸಾಮಂತ. ತೈಲಪನ ರಾಣಿಯ ಪ್ರೇರಣೆಯಿಂದ ಈ ಒಳಸಂಚು ನಡೆಯಿತು. ಶರಣರಿಗೂ ಬಿಜ್ಜಳನಿಗೂ ಆದ ಮನಸ್ತಾಪವನ್ನು ಉಪಯೋಗಿಸಿಕೊಂಡು ಅವರು ಈ ಕಾರ್ಯ ಸಾಧಿಸಿದರು. ಹೀಗೆ ಬಿಜ್ಜಳನ ಕೊಲೆಗೆ ಕಾರಣರಾದವರು ಬಸವೇಶ್ವರ-ಚೆನ್ನಬಸವೇಶ್ವರರಲ್ಲ; ಶರಣರಲ್ಲ; ಚಾಲುಕ್ಯವಂಶೀಯರ ಒಳಸಂಚೇ ಕಾರಣವಾಗಿತ್ತೆಂದು ಲೇಖಕರು ಪ್ರತಿಪಾದಿಸಿ ಬಸವೇಶ್ವರರಿಗೂ ಶರಣರಿಗೂ ಬಂದ ಕಲಂಕವನ್ನು ಹೋಗಲಾಡಿಸಿ ಐತಿಹಾಸಿಕ ಸತ್ಯವನ್ನು ಪ್ರತಿಪಾದಿಸಿದ್ದಾರೆ.

ಇನ್ನು ಬಸವಣ್ಣನವರ ಅಂತಿಮ ಜೀವನದ ಬಗ್ಗೆ ವೀರಶೈವ ಸಾಹಿತ್ಯದಲ್ಲಿ ಅನೇಕ ಸಂದಿಗ್ಧ ಹಾಗು ವಾದಗ್ರಸ್ತ ವಿಷಯಗಳು ಸೇರಿಕೊಂಡಿದ್ದು ಅವು

ಅನೇಕ ಊಹೆಗಳಿಗೆ ಆಸ್ಪದ ಕೊಡುತ್ತವೆ. ಈ ಪುಸ್ತಕದಲ್ಲಿ ಲೇಖಕರು, ಬಿಜ್ಜಳನ ಆಜ್ಞೆಯಿಂದ ಬಸವಣ್ಣನವರು ಕಲ್ಯಾಣವನ್ನು ಬಿಟ್ಟು ಸಂಗಮಕ್ಕೆ ಬಂದರೆಂದೂ ಅಲ್ಲಿ ಕಲ್ಯಾಣದ ದುರ್ಘಟನೆಗಳನ್ನು ಕೇಳಿದ ನಂತರ ಐಕ್ಯರಾದರೆಂದೂ ಹೇಳಿರುವರು. ಶರಣರ ಹಾಗು ಬಹುಜನರ ಕಲ್ಯಾಣದ ದೃಷ್ಟಿಯಿಂದ ಬಸವಣ್ಣನವರು ಕಲ್ಯಾಣ ತ್ಯಜಿಸಿದರು. ಆದರೆ ಅವರು ತಪ್ಪಿಸಬೇಕೆಂದಿದ್ದ ಅನಾಹುತ ನಡೆದುಹೋಯಿತು. ಅಧಿಕಾರದಾಹ ಏನೆಲ್ಲ ಮಾಡಿಸಬಲ್ಲದು. ಅನುಶಾಸನಪ್ರಿಯರೂ ಸಕಲ ಜೀವಾತ್ಮರಿಗೆ ಲೇಸನೇ ಬಯಸಿದವರೂ ಬಸವಣ್ಣನವರು. ಬಿಜ್ಜಳನ ಆಜ್ಞೆಯನ್ನು ಪ್ರತಿಭಟಿಸದೆ ಕೂಡಲಸಂಗಮಕ್ಕೆ ಬಂದದ್ದು ಅವರ ಉದಾರ ಚರಿತ್ರೆಗೆ ಅನುಗುಣವಾಗಿದೆ. ಅವರು ಶರಣರು, ಬಿಜ್ಜಳನ ಶಾಸನ ವಿರೋಧಿಸಿ ರಾಜ್ಯವಾಳುವದು ಅವರಿಗೆ ಬೇಕಿರಲಿಲ್ಲ. ಎಲ್ಲಿದ್ದರೂ ಹೇಗಿದ್ದರೂ ಶರಣಧರ್ಮ ಉಳಿಯಲಿ ಎಂಬುದು ಅವರ ಉದಾತ್ತ ಧ್ಯೇಯ! ಅದರಿಂದ ಅವರ ಕಲ್ಯಾಣತ್ಯಾಗ ತುಂಬ ಸ್ವಾಭಾವಿಕವಾಗಿದೆ.

ಬಸವಣ್ಣನವರ ಚರಿತ್ರೆಯ ಜೊತೆಗೆ ಅಕ್ಕನಾಗಮ್ಮ, ಮಹಾದೇವಿಯಕ್ಕ, ನೀಲಲೋಚನೆ, ಗಂಗಾಂಬಿಕೆ, ಅಲ್ಲಮಪ್ರಭು, ಚೆನ್ನಬಸವಣ್ಣ ಮೊದಲಾದವರ ಚರಿತ್ರೆಗಳೂ ಸ್ಪಷ್ಟವಾಗಿ, ಸ್ವಾಭಾವಿಕವಾಗಿ ಮೂಡಿ ಬಂದಿವೆ. ಅಕ್ಕನಾಗಮ್ಮನಂತೂ ಬಸವಣ್ಣನವರ ನೆರಳಾಗಿ ಆ ಪುಣ್ಯಪುರುಷರ ಉನ್ನತಿಗಾಗಿ ತುಂಬ ಶ್ರಮಿಸಿದ್ದಾಳೆ. ಅವಳ ದಿವ್ಯ ಚರಿತ್ರೆಯನ್ನು ಲೇಖಕರು ಮನಸಾರೆ ಹೊಗಳಿದ್ದಾರೆ.

ಹೀಗೆ ಸಾಂಪ್ರದಾಯಿಕವಾಗಿ ಕಂಡು ಬರುವ ದೋಷಗಳನ್ನು ಸರಿಪಡಿಸಿ, ಪವಾಡಕಥನಗಳಿಗೆ ವಾಸ್ತವಿಕ ಅರ್ಥರೂಪಣೆ ನೀಡುತ್ತ, ಐತಿಹಾಸಿಕ ಘಟನೆಗಳಿಗೆ ವ್ಯತ್ಯಯ ಬಾರದಂತೆ ಪ್ರಾಮಾಣಿಕವೆನಿಸಬಹುದಾದ ಬಸವಣ್ಣನವರ ಚರಿತ್ರೆಯನ್ನು ಬರೆದಿದ್ದಾರೆ. ಸನ್ನಿವೇಶಕ್ಕೆ ತಕ್ಕಂತೆ ವಚನಗಳನ್ನು ಉದಾಹರಿಸಿ, ಅಲ್ಲಲ್ಲಿ ಸಂಭಾಷಣೆಗಳನ್ನು ಜೋಡಿಸಿ, ಚರಿತ್ರೆಗೆ ಸಹಜತೆಯನ್ನೂ ಗತಿಯನ್ನೂ ಒದಗಿಸಿ ಅದನ್ನು ಹೆಚ್ಚು ವಾಸ್ತವಿಕವಾಗಿಸಿದ್ದಾರೆ. ಹೀಗಾಗಿ ಈ ಚರಿತ್ರೆಯನ್ನು ಓದುವಾಗ ಶುಷ್ಕ ಜೀವನ ಚರಿತ್ರೆಯನ್ನು ಓದಿದಂತೆ ಎನಿ

ಸದೆ ಕಾದಂಬರಿಯನ್ನು ಓದಿದಂತೆ ಎನಿಸುತ್ತದೆ. ಬಸವಣ್ಣನವರ ಜೀವನವೇ ವಿವಿಧತೆಯನ್ನೊಳಗೊಂಡ ರಮ್ಯಕಾವ್ಯವಾದಾಗ ಅವರ ಚರಿತ್ರೆ ರಮ್ಯವಾಗ ದಿನ್ನೇನು? ಚರಿತ್ರೆಯ ಉದ್ದಕ್ಕೂ ಶ್ರೀ ಪುಟ್ಟಸ್ವಾಮಯ್ಯನವರ ಐತಿಹಾಸಿಕ ಕಾದಂಬರಿಗಳ ಪ್ರಭಾವ ಎದ್ದುಕಾಣುತ್ತದೆ. ಸುಂದರ ವರ್ಣನೆ, ಆಕರ್ಷಕ ಶೈಲಿ, ತಿಳಿಯಾದ ಭಾಷೆ, ನಡುನಡುವೆ ಮಿಂಚಿನಂತೆ ದಿವ್ಯತತ್ವನಿರೂಪಣೆ ಚರಿತ್ರೆಯನ್ನು ಆಕರ್ಷಣೀಯವಾಗಿಸಿವೆ. ಪವಾಡಗಳ ಮರುಭೂಮಿಯಲ್ಲಿ ಮರೆಯಾದ ಬಸವಣ್ಣನವರ ಚರಿತ್ರರೂಪಿ ಗಂಗಾನದಿಯನ್ನು ಹೊರಹೊಮ್ಮಿಸಿ ಶ್ರೀ ಶಿರಹಟ್ಟಿಯವರು ಭಗೀರಥನ ಕಾರ್ಯಮಾಡಿದ್ದಾರೆ. ಬಸವಣ್ಣನವರ ಅನೆಯ ಶತಮಾನೋತ್ಸವದ ಇಂದಿನ ಶುಭ ಸಮಯದಲ್ಲಿ ಬಸವಣ್ಣನವರ ಸಮಗ್ರಜೀವನ ಹಾಗು ತತ್ವಗಳು ನಮ್ಮ ಜೀವನಕ್ಕೆ ಬೆಳಕನ್ನು ನೀಡಬೇಕಾಗಿದೆ. ಆ ಬೆಳಕಿನ ದಾರಿಯಲ್ಲಿ ಮುನ್ನಡೆಯಲು ಚರಿತ್ರೆಯು ಮಾರ್ಗ ದರ್ಶಕವಾಗಿದೆ. ವೀರಶೈವ ಧರ್ಮತತ್ವಗಳನ್ನು ಚೆನ್ನಾಗಿ ಅರಗಿಸಿಕೊಂಡು ಬಸವಣ್ಣನವರ ಬದುಕಿನ ಬಗ್ಗೆ ವಿಶೇಷ ಶ್ರದ್ಧೆಯನ್ನಿರಿಸಿಕೊಂಡ ಶ್ರೀ ಶಿರಹಟ್ಟಿಯವರು ಅಣ್ಣನವರ ಚರಿತ್ರೆಯನ್ನು ಜನತೆಯ ಮುಂದಿರಿಸಿ ಮಹತ್ವದ ಕಾರ್ಯ ಮಾಡಿದ್ದಾರೆ. ಅವರಿಂದ ಇನ್ನೂ ಇಂತಹ ಅಮೂಲ್ಯ ಕೃತಿಗಳು ಹೊರ ಬರಲಿ ಎಂದು ಹಾರೈಸುವೆನು.

ಸುಕ್ಷೇತ್ರ ಹರಳೇಶ್ವರಾಶ್ರಮ
ದಿನಾಂಕ ೧೬–೧–೧೯೬೭ —ಶಾಂತವೀರ ಸ್ವಾಮಿ.

ಓಂ

ಬಂಥನಾಳದ ಶ್ರೀ ನಿ. ಪ್ರ. ಸ್ವ. ಗಳಾದ ಮಹಾಶಿವಯೋಗಿಗಳವರ ವಾಣಿಯಲ್ಲಿ

ಬಸವಣ್ಣನವರ ಹಿರಿಮೆ

ಭಗವಾನ್ ಬಸವೇಶ್ವರರು ಅವತಾರಿಕ ಪುರುಷರೂ ಅಹುದು, ಆದರ್ಶ ಪುರುಷರೂ ಅಹುದು. ಅವರು ಅವತಾರಿಕ ಪುರುಷರಾಗಿ ಶಿವಭಕ್ತರೆಲ್ಲರಿಗೆ ಆದರಣೀಯರೂ ಪೂಜ್ಯರೂ ಆಗಿದ್ದಾರೆ. ಅದರಂತೆ ಆದರ್ಶ ಪುರುಷರಾಗಿ ಸಮಾಜಕ್ಕೆ ಅನುಕರಣೀಯರೂ ಆಗಿರುವರು. ಅವತಾರಿಕರೆಂದು ಭಾವಿಸುವವರು ಅವರ ನಾಮ ಜಪ ಮಾಡಿ ಕೃತಾರ್ಥರಾಗಲಿ. ಆದರೆ, ಈಗ ಸಮಾಜಕ್ಕೆ ಆದರ್ಶ ಪುರುಷರ ಆವಶ್ಯಕತೆ ಅತಿಯಾಗಿರುತ್ತದೆ. ಯಾಕಂದರೆ ಅವರ ಸಾಹಸ-ಶಕ್ತಿಯನ್ನು ಸದ್ಗುಣಗಳನ್ನು ಆಚಾರ-ವಿಚಾರಗಳನ್ನು ಸಾಮಾನ್ಯ ಜನರು ಕೂಡ ಅನುಕರಣ ಮಾಡಿ ತಾವೂ ಅವರ ದಾರಿಯಲ್ಲಿ ನಡೆಯುವ ಪ್ರಯತ್ನ ಮಾಡಲು ಅನುಕೂಲವಾಗುತ್ತದೆ. ಬಹಿರಂಗದ ಯುದ್ಧಕಲೆಯನ್ನು ಕಲಿಯ ಬಯಸುವವರು ನೆಪೋಲಿಯನ್ನನಿಗೆ ತಲೆಬಗ್ಗಿಸಬೇಕಾದಂತೆ, ಅಂತರಂಗದ ಯುದ್ಧದಲ್ಲಿ ಜಯಶೀಲರಾಗಲು ಬಯಸುವವರು ಬಸವೇಶ್ವರನಿಗೆ ಶರಣಾಗತರಾಗಲೇ ಬೇಕಾಗುವದು.

ಪ್ರಭು ಹೊರಗೆ ಜ್ಞಾನಿಯಾಗಿದ್ದರೂ ಒಳಗೆ ಭಕ್ತಿಭಾವದಿಂದ ಕೂಡಿದ್ದರು. ಬಸವೇಶ್ವರರು ಹೊರಗೆ ಭಕ್ತಿಭಾಂಡಾರಿಯೆಂದು ಕರೆಯಿಸಿಕೊಂಡರೂ ಒಳಗೆ ಮಹಾಜ್ಞಾನಿಗಳಾಗಿದ್ದರು. ದೇವವಾಣಿಯು (ಸಂಸ್ಕೃತವು) ಜನವಾಣಿಯಾಗುವದು ಅಸಾಧ್ಯವೆನಿಸಿದಾಗ, ಜನವಾಣಿಯನ್ನೇ ದೇವವಾಣಿಯ ಮಟ್ಟಕ್ಕೇರಿಸಿದ ಅದ್ಭುತಶಕ್ತಿಯು ಬಸವಾದಿ ಪ್ರಮಥರದಾಗಿರುತ್ತದೆ.

ಕೆಲವು ಧರ್ಮಸ್ಥಾಪಕರು ಹಾಗು ಉದ್ಧಾರಕರು ಲೌಕಿಕವನ್ನು ಹಳಿದು ಪರಲೋಕಕ್ಕೆ ಹೆಚ್ಚು ಮಹತ್ವವನ್ನು ಕೊಟ್ಟರು; ಚಾರ್ವಾಕಾದಿಗಳು ಪರಲೋಕಾದಿಗಳನ್ನು ಅಲ್ಲಗಳೆದು ಇಹಲೋಕಕ್ಕೆ ಮಹತ್ವ ಕೊಟ್ಟರು. ಆದರೆ ಬಸವೇಶ್ವರರು ಅವೆರಡನ್ನೂ ಸಮನ್ವಯಗೊಳಿಸಿ 'ಇಲ್ಲಿ ಸಲ್ಲುವವರು ಅಲ್ಲಿ ಸಲ್ಲುವರಯ್ಯ; ಇಲ್ಲಿ ಸಲ್ಲದವರು ಅಲ್ಲಿಯೂ ಸಲ್ಲರಯ್ಯಾ ಕೂ. ಸಂ. ದೇವಾ' ಎಂದು ಸಾರಿದರು.

ಉಳಿದ ಧರ್ಮಸ್ಥಾಪಕರು ಪೂಜಾ, ಭಜನೆ ಮೊದಲಾದ ಧರ್ಮಾಚಾರಗಳಿಗೆ ಮಹತ್ವಕೊಟ್ಟು ಭಿಕ್ಷುಕರ ತಂಡವನ್ನೇ ನಿರ್ಮಿಸಿದರೆ, ಬಸವಮಹಾನುಭಾವರು ಕಾಯಕವೇ ಕೈಲಾಸವೆಂದು ಅಪ್ಪಣೆ ಕೊಡಿಸಿ ಸ್ವಾವಲಂಬಿಗಳಾಗುವಂತೆ ಮಾಡಿದರು.

ಕಾಮಭಾವನೆಯಿಂದ ಸ್ತ್ರೀಯರನ್ನು ಪುರಸ್ಕರಿಸುವದು ಹೇಗೆ ಅಪರಾಧವೋ, ಹಾಗೆ ವೈರಾಗ್ಯದಿಂದ ಸ್ತ್ರೀಯರನ್ನು ತಿರಸ್ಕರಿಸುವದು ಕೂಡ ಅಪರಾಧವಾಗಿರುವದು. ಹೀಗೆ ಈ ಎರಡೂ ಮಾರ್ಗಗಳು ಸ್ತ್ರೀಯರ ಪ್ರಗತಿಗೆ ಆತಂಕಗಳಾಗಿರುವವೆಂದು ಯಥಾರ್ಥವಾಗಿ ತಿಳಿದುಕೊಂಡು 'ಪರವಧುವನ್ನು ಮಹಾದೇವಿಯೆಂಬೆ' ಎಂದು ಬಸವೇಶ್ವರರು ಹೇಳಿ 'ಮಾತೃದೇವೋ ಭವ' ಎಂಬ ಶ್ರುತಿಯ ಅಭಿಪ್ರಾಯವನ್ನು ಪುಷ್ಟೀಕರಿಸಿದರು. ಇಲ್ಲಿ ಪುರಸ್ಕಾರದಿಂದಾಗುವ ದೋಷವೂ ಇಲ್ಲ, ತಿರಸ್ಕಾರದಿಂದಾಗುವ ದೋಷವೂ ಇಲ್ಲ. ಈ ರೀತಿಯಾಗಿ ನಡೆದು ಗುಲಾಮಗಿರಿಯಲ್ಲಿದ್ದ ಸ್ತ್ರೀ ಸಮಾಜವನ್ನು ಎತ್ತಿ ಹಿಡಿದರು.

ಇತರ ಧರ್ಮಸ್ಥಾಪಕರು (ಉದ್ಧಾರಕರು) ಮತ್ತು ಬಸವೇಶ್ವರರಲ್ಲಿ ಬಹಳ ಅಂತರವಿದೆ. ಇತರರು ತಮ್ಮ ಸಂಬಂಧವನ್ನು ದೇವರಿಗೆ ಹಚ್ಚಿ ತಾವೂ ದೇವರಂತೆ ಪೂಜೆಗೊಳ್ಳಲು ಪ್ರಯತ್ನಿಸಿದರು. ಆದರೆ ಬಸವೇಶ್ವರರು ತಮಗಿಂತ ಕಿರಿಯರಿಲ್ಲ ಶಿವಭಕ್ತರಿಗಿಂತ ಹಿರಿಯರಿಲ್ಲ ಎಂದು ಸಾರಿದರು. ಜನರು ತಮ್ಮನ್ನು ದೊಡ್ಡವರೆಂದು ಹೊಗಳಿದುದಕ್ಕೆ 'ಹೊಗಳಿ ಹೊಗಳಿ ಎನ್ನ ಹೊನ್ನ ಶೂಲದಲ್ಲಿಕ್ಕಿದರು' ಎಂದು ಅಭಿಪ್ರಾಯಪಟ್ಟರು.

ಎಲ್ಲ ಶರಣ-ಶರಣೆಯರ ಅನುಭವದ ಅಭಿಪ್ರಾಯದ ಮೇಲೆ ಅನುಭವ ಮಂಟಪದ ಮುಖಾಂತರವಾಗಿ ಧರ್ಮನಿರ್ಣಯವನ್ನು ಮಾಡಿ, ಅದು ಸಿದ್ಧಾಂತವಾಗಿ ಆಚರಣೆಗೆ ಬರುವಂತೆ ಮಾಡಿದರು. ಉಳಿದ ಧರ್ಮ ಪ್ರಚಾರಕರು ಬೇರೆ ಬೇರೆ ಕಡೆಗೆ ಸಂಚರಿಸಿ ಧರ್ಮಪ್ರಸಾರ ಮಾಡಿದರೆ ಬಸವೇಶ್ವರರು ತಾವಿದ್ದಲ್ಲಿಗೆ ಎಲ್ಲರನ್ನು ಆಕರ್ಷಿಸಿಕೊಂಡು ಧರ್ಮೋದ್ಧಾರ ಮಾಡಿದರು.

ಇಂತಹ ಮಹಾತ್ಮರ ಯಥಾರ್ಥ ಚರಿತ್ರೆಯನ್ನು ಸರ್ವರೂ ಓದಿ ತಿಳಿದು ತಣಿಯಲಿ !

—ಬಂಥನಾಳ ಶಿವಯೋಗಿಗಳವರು

ಲೇಖಕನ ಮೊದಲ ಮಾತುಗಳು

ಬಸವಣ್ಣನವರ ವ್ಯಕ್ತಿತ್ವದ ಘನತೆಯು ಪರಿಶೀಲನೆಗೂ ಊಹೆಗೂ ನಿಲುಕದಷ್ಟು ಅಪಾರ ! ಅದನ್ನು ಸರಿಯಾಗಿ ಗ್ರಹಿಸಿ ನಿರೂಪಿಸುವದೆಂದರೆ, ಹಿಮಾಚಲವನ್ನು ಕೈಗನ್ನಡಿಯಲ್ಲಿ ತೋರಿಸಲು ತೊಡಗಿದಂತೆ !

ಅದಲ್ಲದೆ ಮಹಾತ್ಮರಾದವರ ಜೀವನಚರಿತ್ರೆ ಬರೆಯುವದಕ್ಕೆ ಆ ಮಹಾತ್ಮರ ಆದರ್ಶದಲ್ಲಿ ನಡೆಯುತ್ತಿರುವವರೇ ತಕ್ಕವರು. ನನಗೆ ಅಂತಹ ಅರ್ಹತೆಯೂ ಇಲ್ಲ, ಪಾಂಡಿತ್ಯವೂ ಇಲ್ಲ. ಪೂಜ್ಯ ಗುರು–ಜಂಗಮ ಶಿವಯೋಗಿಗಳ ಪ್ರೇರಣೆಯೂ ಆಶೀರ್ವಾದವೂ ನನ್ನನ್ನು ಈ ಕಾರ್ಯದಲ್ಲಿ ನಿಲ್ಲಿಸಿವೆ. ಇದು ಸರಿಯಾಗಿ ಪೂರೈಸಿದ್ದರೆ ಶ್ರೇಯಸ್ಸು ಆ ಮಹಾಪಾದಕ್ಕೆ ಸಲ್ಲುವದು. ಅಪೂರ್ಣವಾದರೆ–ದೋಷಗೂಡಿದ್ದರೆ ಆ ನ್ಯೂನತೆ ಅಲ್ಪನಾದ ನನಗೆ ಸೇರಿದುದು.

ಆರ್ಯಪೂರ್ವದ ಶೈವಮತವು ವೇದಕಾಲದಿಂದ ಪರಿಷ್ಕೃತವಾಗುತ್ತ ಹಲವು ಮುಖದಿಂದ ಹರಿದಿದ್ದರೂ, ಆಚರಣೆಯಲ್ಲಿಯ ವರ್ಣಾಶ್ರಮಗಳ ತಿರುಗಣಿಯಲ್ಲಿಯೇ ಸುತ್ತುತ್ತ ಪಾರಮ್ಯದ ತುತ್ತ ತುದಿಯನ್ನು ಕಾಣದಾಗಿರುವಾಗ ಬಸವಣ್ಣನವರು ಆ ಅಪೂರ್ಣತೆಗೆ ಅತೃಪ್ತಿಗೊಂಡರು. ಆ ಬಂಧನಗಳಾಚೆಯ ಸರ್ವಸ್ವತಂತ್ರ ನಿತ್ಯ ನಿಜೈಕ್ಯ ತತ್ವವನ್ನು ತಮ್ಮ ಧ್ಯಾನಾನುಭವದಲ್ಲಿ ಕಂಡರು. ಅದನ್ನು ಬೆಳಕಿಗೆ ತಂದು ತಾವು ನಡೆದು ಜನತೆಯನ್ನು ನಡೆಯಿಸಿ, ವ್ಯಾವಹಾರಿಕ ಜೀವನಕ್ಕೆ ಹೊಂದುವಂತೆ ವ್ಯವಸ್ಥೆಗೊಳಿಸಿದರು. ಷಟ್‌ಸ್ಥಲ ಸಿದ್ಧಾಂತದ ಸತ್ಯಮಾರ್ಗವನ್ನು ನಿಲುಕಡೆಗೊಳಿಸಿದರು. ತಮ್ಮ ನಡೆನುಡಿಗಳಿಂದ ಆಧ್ಯಾತ್ಮಿಕದ ದಿವ್ಯದರ್ಶನ ಮಾಡಿಸಿದರು. ಪ್ರಪಂಚವನ್ನು ಪವಿತ್ರಗೊಳಿಸಿ, ಅದರಲ್ಲಿ ಪಾರಮಾರ್ಥವನ್ನು ಹೆಣೆದು ಸಿದ್ಧಾಂತಗೊಳಿಸಿದರು. ಇದರಿಂದ ಇಹಕ್ಕೂ ಪರಕ್ಕೂ ಅದ್ವಿತೀಯರೆನಿಸಿದರು. ಇಂತಹ ಮಹಾನುಭಾವಿ-ಮಹಾವಿಭೂತಿ ಆದ ಅಣ್ಣನವರಿಗಾಗಿ ಅಭಿಮಾನಿಸುವ ಅನುಯಾಯಿಗಳು ಮಾತ್ರವಲ್ಲದೆ ಸಕಲರೂ ಅವರ ಚರಿತ್ರವನ್ನೂ ವಿಚಾರಗಳನ್ನೂ ಸಾಧ್ಯವಾದಷ್ಟಾದರೂ ಅರಿತುಕೊಳ್ಳುವದು ಅಗತ್ಯವಾಗಿದೆ.

ಪ್ರೊ. ಲಿಂ. ಶಿ ಶಿ. ಬಸವನಾಳ M. A. ಅವರು ಹೇಳಿದ್ದು ಹೀಗೆ :

'ಬಸವಣ್ಣ, ಚೆನ್ನಬಸವಣ್ಣ, ಅಲ್ಲಮಪ್ರಭು ಮೊದಲಾದ ಪ್ರಮಥರ ವಿಷಯದಲ್ಲಿ ಮೊದಲು ವಿಪುಲ ಸಾಹಿತ್ಯವು ನಿರ್ಮಾಣವಾದುದು ನಿಜ. ಆದರೆ ಅದನ್ನೆಲ್ಲ ರಚಿಸಿದವರು ಸತ್ಯವನ್ನೇ ಅರಿಸಿಕೊಳ್ಳುವ ಐತಿಹಾಸಿಕ ದೃಷ್ಟಿಯುಳ್ಳವರಾಗಿರಲಿಲ್ಲ. ಅವರು ತಮ್ಮ ತಮ್ಮ ಚರಿತ್ರನಾಯಕರನ್ನು ಕಾರಣಿಕರು-ಅವತಾರಿಕರು-ಅಲೌಕಿಕರು ಎಂದು ವರ್ಣಿಸುವ ಭರದಲ್ಲಿ ಸತ್ಯಕ್ಕಿಂತ-ಯಥಾರ್ಥಕ್ಕಿಂತ-ಕಲ್ಪನೆಗೆ ಹೆಚ್ಚು ಎಡೆಗೊಟ್ಟಿರುವರು. ಬೇರೆಬೇರೆಯವರಿಂದ ಹಾಗೂ ಬೇರೆ ಬೇರೆ ಕಾಲಗಳಲ್ಲಿ ಬರೆಯಲ್ಪಟ್ಟ ಗ್ರಂಥಗಳಲ್ಲಿ ಪರಸ್ಪರ ವಿರೋಧಗಳೂ ವ್ಯತ್ಯಾಸಗಳೂ ಉಂಟಾಗಿವೆ. ಅಸಹಜವಾದ ಸಂಗತಿಗಳ ವಿವರಣೆಗಳೂ ಪವಾಡ ಕಥನಗಳೂ ಅವರ ಆದರ್ಶ ಜೀವನದ ನಿಜಸ್ವರೂಪವನ್ನು ಮರೆಮಾಡಿವೆ................? *

ಈ ಅಭಿಪ್ರಾಯವು ಸತ್ಯಪೂರ್ಣವಾಗಿದೆ. ಇತ್ತೀಚೆಗೆ ಸಂಶೋಧನೆಗಳು ನಡೆದಂತೆ ಶರಣರ ಸಂಬಂಧದ ಐತಿಹಾಸಿಕ ಅಂಶಗಳೂ, ವಚನ ಸಾಹಿತ್ಯ ಪ್ರಕಟವಾದಂತೆ ಅವರ ವ್ಯಕ್ತಿತ್ವದ, ಜ್ಞಾನ-ಅನುಭವಗಳ ಬಗೆಯೂ ಬೆಳಕಿಗೆ ಬರಹತ್ತಿವೆ. ಈಗ ಗ್ರಂಥಕಾರರು ಬಸವಣ್ಣನವರ ಆತ್ಮೈಕಜ್ಞಾನ, ಸತ್ಯ ಪ್ರೇಮ, ಸದಾಚಾರ, ಸೇವೆ, ಸ್ವಾವಲಂಬನ, ಕಾಯಕ ಪಾರಮ್ಯ, ಭೂತಾನುಕಂಪೆ, ತ್ಯಾಗ ಇವುಗಳ ಪರಿಚಯವನ್ನು, ಹಾಗು ಸಕಲ ಜೀವರ ಲೇಸನೇ ಬಯಸುವ ಅವರ ಹೃದಯದ ಪರಿಚಯವನ್ನು ಬಹುಜನ ಸಮುದಾಯಕ್ಕೆ ಮಾಡಿಕೊಡುವದು ಅಗತ್ಯವಾಗಿದೆ. ಇದಲ್ಲದೆ ಅವರ ವ್ಯಕ್ತಿತ್ವದ ಘನತೆಯು ಪವಾಡಗಳಿಂದ ಕಂಡುಬರುವದಕ್ಕಿಂತಲೂ ನಿಜವಾಗಿ ಬಲುದೊಡ್ಡದೆಂಬುದನ್ನು ಅರಿಕೆಗೊಳಿಸುವುದೂ ಅಗತ್ಯವೆಂದು ನಾನು ತಿಳಿಯುತ್ತೇನೆ.

ಬಸವಣ್ಣನವರ ಬಗೆಗೆ ನನಗಿರುವ ಅಭಿಮಾನ, ಹಾಗು ಅವರ ಚಾರಿತ್ರಿಕ ವಿವೇಚನೆಯ ಕುತೂಹಲ ಇವುಗಳಿಂದಾಗಿ ಅವರ ಚರಿತ್ರದ ಒಂದು ಕಿರುಹೊತ್ತಿಗೆಯ ಸೇವೆಯನ್ನಾದರೂ ಮಾಡುವ ಹಂಬಲ ಹಲವು ದಿನಗ

---

*'ಬಸವಣ್ಣನವರ ಷಟ್‌ಸ್ಥಲದ ವಚನಗಳು' ಗ್ರಂಥದಲ್ಲಿ 'ಬಸವಣ್ಣನವರ ಜೀವನದ ಐತಿಹಾಸಿಕ ವಿವೇಚನೆ' ಎಂಬ ಭಾಗವನ್ನು ನೋಡಿರಿ. (ಧಾರವಾಡ ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆಯ ಶಾಖೆ ಸಮಿತಿಯು ಪ್ರಕಟಿಸಿದುದು.)

ಳಿಂದಿದೆ. ಆದರೆ ನನ್ನ ಅಲ್ಪಜ್ಞತೆಯು ಅರಿವು ಅದನ್ನು ಇದು ವರೆಗೆ ತಡೆಯುತ್ತ ಬಂದಿದೆ. ಹೀಗಿರುವಾಗ ಒಮ್ಮೆ ಶ್ರೀಮಾನ್ ಬಿ. ಪುಟ್ಟಸ್ವಾಮಯ್ಯನವರು ಬರೆದ 'ಬಸವೇಶ್ವರರ ಜೀವಿತಕಾಲ ಕುರಿತಾದ ಆರು ಕಾದಂಬರಿಗಳನ್ನು ಓದುವದಾಯಿತು. ಅವುಗಳಿಂದ ಪ್ರಭಾವಿತನಾದಾಗ ಈ ಕಾದಂಬರಿಗಳಲ್ಲಿ ಗರ್ಭೀಕೃತವಾಗಿರುವ ಬಸವಣ್ಣನವರ ಕಥೆಯು, ಅವರ ಸತ್ಯ ಸಹಜ ಚರಿತ್ರದ ನಿಜ ಚಿತ್ರದ ಕಲ್ಪನೆಗೆ ಬೆಳಕು ತಂದುಕೊಟ್ಟಿತು. ಆ ಬೆಳಕು ಅಣ್ಣನವರಿಗೆ ಸಂಬಂಧಿಸಿದ ಮತ್ತೆ ಕೆಲವು ಸಾಹಿತ್ಯವನ್ನು ನೋಡಹಚ್ಚಿತು. ಅದರಿಂದ ನನ್ನ ಹಂಬಲಕ್ಕೆ ಹವಣಿಸುವ ಯೋಜನೆ ಮೂಡಿತು. ಅದನ್ನು ನನ್ನ ಪರಮಪೂಜ್ಯರಾದ ಸ್ವಾಮಿಗಳ ಸನ್ನಿಧಿಯಲ್ಲಿ ಪ್ರಸ್ತಾಪಿಸಿದೆನು. ಆ ಮಹಾಸ್ವಾಮಿಗಳವರು 'ಅಣ್ಣನವರಿಗೆ ಮತ್ತು ಅವರ ಕಾರ್ಯವ್ಯಾಪ್ತಿಗೆ ಸಂಬಂಧಿಸಿದ ಸಹಜ-ಸಮಂಜಸ ಘಟನೆಗಳನ್ನು ಚಿತ್ರಿಸಿ ವಿವರಿಸುವ ಗ್ರಂಥವೊಂದನ್ನು ಸಾಮಾನ್ಯರಿಗಾಗಿ ಬರೆಯಬೇಕು' ಎಂದು ಆಜ್ಞಾಪಿಸಿ ಪ್ರೋತ್ಸಾಹಿಸಿದರು. ಇದೇ ಅಭಿಪ್ರಾಯದಿಂದ ಸ್ನೇಹಿತರು ಒತ್ತಾಯಪಡಿಸಿದರು. ಹೀಗೆ ಸ್ಫೂರ್ತಿ–ಪ್ರೇರಣೆ–ಒಲುಮೆಗಳಿಗೆ ಒಳಗಾಗಿ, ಶ್ರೀಗಳವರ ಆಶೀರ್ವಾದದ ಬಲದಲ್ಲಿ ನನ್ನ ಅಸಾಮರ್ಥ್ಯವನ್ನು ಅಲಕ್ಷಿಸಿ ಈ ಕಾರ್ಯವನ್ನು ಕೈಕೊಳ್ಳುವದಾಯಿತು.

ದೃಷ್ಟಿಕೋನ ಮತ್ತು ಕ್ರಮ

ಬಸವಣ್ಣನವರ ಬಗೆಗೆ ಇತ್ತೀಚೆಗೆ ಉಂಟಾದ ಹೊಸಗನ್ನಡ ಗದ್ಯ ಗ್ರಂಥಗಳೆಲ್ಲ ಅವರ ಜೀವನ ವಿಮರ್ಶೆ ಮಾಡುವ, ಅವರ ಘನತೆಯನ್ನು ಎತ್ತಿ ತೋರಿಸುವ, ಇಲ್ಲವೆ ವಾದವಿವೇಚನೆಗೆ ನೆರವಾಗುವ ಗ್ರಂಥಗಳಾಗಿವೆ ಇವು ಅಭ್ಯಾಸಿಗಳಿಗೂ ಸಂಶೋಧಕರಿಗೂ ವಾದಿಗಳಿಗೂ ಪಂಡಿತರಿಗೂ ಮಾತ್ರ ಉನ್ನತಮಟ್ಟದಲ್ಲಿ ಪ್ರಯೋಜನಕರವಾಗಿವೆ ಆ ಉದ್ದೇಶವು ನನಗೆ ಮುಖ್ಯವಾದುದಲ್ಲ. ನನ್ನ ಮುಖ್ಯ ಉದ್ದೇಶವು ಅನುಸರಿಸಿದ ಕ್ರಮವು ಹೀಗೆ:

೧. ಚರಿತ್ರೆಯು ಬಹುಸಂಖ್ಯಾಕರಾದ ಸಾಮಾನ್ಯರಿಗೆ ಆಕರ್ಷಣೀಯವಾಗಿ ಅವರು ಓದುವಂತಾಗಬೇಕು. ಇದರಿಂದ ಅವರಿಗೆ ಅಣ್ಣನವರ ಸಹಜವಾದ ಮತ್ತು ವಾಸ್ತವಿಕವಾದ ಇಡಿಯ ಜೀವನ ಕ್ರಮದ ಕಲ್ಪನೆಯಾಗಬೇಕು. ಇದಕ್ಕಾಗಿ ರಂಜನೆಗೊಳಿಸುವ ಕಥೆಯ ರೂಪದಲ್ಲಿ ಬರೆಯುವದು.

೨. 'ಬಸವಣ್ಣನವರು ಅವತಾರಿಕರು, ಆ ಅಗಾಧತೆಗೂ ನಮಗೂ ಏನು ಸಂಬಂಧ?' ಎಂಬ ಸಾಮಾನ್ಯರಲ್ಲಿರುವ ನಿರ್ಬಲ ಕಲ್ಪನೆಯನ್ನು ತೊಲಗಿಸಿ, ಆ ಮಹಾತ್ಮರು ಸಾಮಾನ್ಯರಿಗೆ ಎಷ್ಟು ನಿಕಟಸಂಬಂಧಿಗಳಾಗಿ ವರ್ತಿಸಿ ಜೀವಿಸಿದರೆಂಬುದನ್ನು ಬಿಂಬಿಸುವದು.

೩. ಮಾನವನು ದೇವನಾಗುವ ಅವರ ಆದರ್ಶ ಜೀವನ ಪ್ರಕಾಶವು ಬಹುಜನರ ಭಾವನೆಯನ್ನು ಬೆಳಗಬೇಕು; ಅವರ ಉನ್ನತ ವಿಚಾರಗಳು ಜನ ಸಾಮಾನ್ಯರಲ್ಲಿ ಪ್ರಚಾರವಾಗಬೇಕು; ಅವರ ಬಗೆಗೆ ಗೌರವಾದರಗಳು ಬೆಳೆಯಬೇಕು. ಈ ಧ್ಯೇಯಗಳನ್ನು ಗಮನದಲ್ಲಿರಿಸುವದು.

೪. ಘಟನೆಗಳ ಐತಿಹಾಸಿಕ ಅಂಶಗಳು ಗರ್ಭೀಕೃತವಾಗಿರುವದು; ಅಣ್ಣನವರ ಉನ್ನತ ವಿಚಾರಗಳನ್ನು ಸನ್ನಿವೇಶ ವಿವರಗಳಲ್ಲಿ ಸುಲಭವಾಗಿ ಪವಣಿಸುವದು.

ಈ ಗುರಿಯನ್ನಿಟ್ಟುಕೊಂಡು ಈ ಗ್ರಂಥವನ್ನು ಕಥಾ-ಪ್ರಬಂಧ-ರೂಪಕಗಳ ಸಂಯುಕ್ತ ರೂಪದಲ್ಲಿ ಬರೆಯಲಾಗಿದೆ. ಉದ್ದೇಶವನ್ನು ಎಷ್ಟರಮಟ್ಟಿಗೆ ಸಾಧಿಸಲಾಗಿದೆಯೆಂಬವನ್ನು ನಾನು ಹೇಳಲಾರೆನು.

ಸಾಧನ-ಸಾಮಗ್ರಿಯ ವಿಚಾರ

'ಮಾಡಿದೆನೆಂಬುದು ಮನದಲ್ಲಿ ಮೂಡಬಾರದು' ಎನ್ನುವ ಅಣ್ಣನವರು ತಮ್ಮ ಕಾರ್ಯಗಳನ್ನೂ ಹೆಸರನ್ನೂ ಶಾಸನಗೊಳಿಸುವದು ಶಕ್ಯವೇ ಇರಲಿಲ್ಲ. ಅವರ ಹೆಸರು ಬರುವ ನಾಲ್ಕಾರು ಶಾಸನಗಳು ಮಾತ್ರ ಇದುವರೆಗೆ ಸಿಕ್ಕಿವೆ. ಆದರೆ, ಅವರ ಬಗೆಗೆ ಅಪಾರ ಸಾಹಿತ್ಯ ರಚಿಸಲ್ಪಟ್ಟಿದೆ. ಅವರ ಕೀರ್ತಿಕಥೆಯ ಪ್ರವಾಹವು ಓತಪ್ರೋತವಾಗಿ ಅಂದಿಂದಿಗೆ ಹರಿಯುತ್ತಲೇ ಇದೆ.

ಕೆಲವು ಕೆಳಗಿನ ರಾಜಾಧಿಕಾರಿಗಳು ಕಸಪಯ್ಯ ದಂಡನಾಯಕನನ್ನು ಕೊಂಡಾಡಿ ತಮ್ಮ ಸಂಬಂಧ ಸೂಚಿಸಿ ತಮ್ಮ ಕೃತಿಗಳನ್ನು ಶಾಸನ ಮಾಡಿಸಿದ್ದಾರೆ. ಕೆಲವು ಶಾಸನಗಳಲ್ಲಿ ಬಿಜ್ಜಳನೊಡನೆ ಕಸಪಯ್ಯನಾಯಕನ ಹೆಸರು ಬರುತ್ತದೆ. ಮತ್ತೊಂದು ಕಡೆ ಮತದ ಮತ್ತು ರಾಜಕೀಯ ದ್ವೇಷವುಳ್ಳವನೊಬ್ಬ ಮುಂದಿನ ಅಧಿಕಾರಿಯು ಕಸಪಯ್ಯ ಮಂತ್ರಿಯನ್ನು ಟೀಕಿಸಿ, ತನ್ನ

ಪ್ರತಿಷ್ಠೆಯನ್ನು ಮೆರಿಸಿ ಶಾಸನ ಮಾಡಿಸಿದ್ದಾನೆ. ಆ ಎಲ್ಲ ಶಾಸನಗಳ ಕಸೆಪಯ್ಯನೇ ಬಸವರಾಜನೆಂದು, ಚಂದ್ರರಾಜ-ಚಂದ್ರಾಂಬೆಯರು ಅವರ ತಂದೆ ತಾಯಿಗಳೆಂದು, ಮಾದರಸನು ಸಾಕು ತಂದೆಯೆಂದು ಮಣಿಂಗವಳ್ಳಿಯ ಶಾಸನ ಸಂಬಂಧಪಡಿಸುತ್ತದೆ. 'ಬಸವಣ್ಣನವರ ಕಾಲ' ಗ್ರಂಥಕಾರರಾದ ಶ್ರೀ ಚೆನ್ನಮಲ್ಲಿಕಾರ್ಜುನರವರು ಇದನ್ನು ಸಮರ್ಥಿಸಿದ್ದಾರೆ. ಶ್ರೀ ಬಿ. ಪುಟ್ಟಸ್ವಾಮಯ್ಯನವರೂ ಅದನ್ನೇ ಅನುಸರಿಸಿದ್ದಾರೆ. ಆದರೆ ಈ ನಿರ್ಣಯವು ಬೇರೆ ಹಲವು ಪ್ರಾಮಾಣ್ಯ ಸಂಗತಿಗಳಿಗೆ ಸರಿಹೋಗದಿರುವದರಿಂದ ಬಹುಜನ ಪಂಡಿತರು ಅದನ್ನು ಒಪ್ಪುವದಿಲ್ಲ. ನಾನೂ ಒಪ್ಪಲಾರೆ.

'ಬಸವಣ್ಣನವರ ಕಾಲ' ಗ್ರಂಥದಲ್ಲಿ ಶ್ರೀ ಚೆನ್ನಮಲ್ಲಿಕಾರ್ಜುನ ಮಾಸ್ತರರೇ ಸೂಚಿಸುವಂತೆ ಅವರ ನಿರ್ಣಯಗಳು ನಿರ್ವಿವಾದವಾಗಿರದೆ ಸಂಶೋಧನೆಗಳು ಇನ್ನೂ ಮುಂದುವರಿಯಬೇಕಾಗಿದೆ. ಅವರು ಗೊತ್ತುಪಡಿಸಿದ, ಬಸವರಾಜರ ಜನನವು ಕ್ರಿ. ವ. ೧೧೦೬ರಲ್ಲಿ ಎಂಬದೂ ನನ್ನ ಮಟ್ಟಿಗೆ ನಿರ್ವಿವಾದವಾಗಿಲ್ಲ. ಬಸವಣ್ಣನವರು ಬಿಜ್ಜಳನಿಗೆ ಸಮವಯಸ್ಕರಾಗಿರಬಹುದು, ಆದರೆ ಹಿರಿಯ ವಯಸ್ಸಿನವರು ಎಂಬುದನ್ನು ಒಪ್ಪುವಂತಿಲ್ಲ ಈ ಮೊದಲು ತಿಳಿದಂತೆ ೧೧೩೧ ರಲ್ಲಿ ಜನನವೆಂಬದು ತೀರ ಅಸಮಂಜಸವಾಗಿದೆ ಶ್ರೀ ಸಿಂದಗಿ ಸಿದ್ಧಪ್ಪನವರು ಹೇಳಿದ ೧೧೨೭ ಶ್ರೀ. ಬಿ. ಪುಟ್ಟಸ್ವಾಮಯ್ಯನವರು ಹೇಳುವ ೧೧೨೩ ಇವು ತುಸು ಹೆಚ್ಚು ಕಡಿಮೆ ಸಮಂಜಸವಾಗಿವೆ. ಅಣ್ಣನವರ ಜೀವಿತದ ಘಟನೆಗಳ ಕ್ರಮಕ್ಕೆ ೧೧೨೩ ಹೊಂದಿಕೆಯಾಗುವದು. ಆದನ್ನೇ ನಾನು ಗ್ರಹಿಸಿದ್ದೇನೆ. ಹಾಗೆಯೇ ಉಪನಯನವನ್ನು ತಿರಸ್ಕರಿಸಿದರೋ ಅಥವಾ ಹಿಂದಿನಿಂದ ಜನ್ನವಾರವನ್ನು ಬಿಸುಟರೋ ಎಂಬುದೂ, ಮೊದಲ ಮದುವೆ ಗಂಗಾಂಬಿಕೆಯೊಡನೆಯೋ ನೀಲಾಂಬಿಕೆಯೊಡನೆಯೋ ಎಂಬುದೂ ಇನ್ನೂ ನಿಷ್ಕರ್ಷವಾಗಿಲ್ಲ.

ಚರಿತ್ರಾಂಶಗಳಿಗೆ ಆಧಾರವಾಗುವ ಶಾಸನಗಳನ್ನು ಇಲ್ಲವೆ ಗ್ರಂಥಸ್ಥ ಸಾಧನಗಳನ್ನು ಮುಂದೆ ಅನುಬಂಧದಲ್ಲಿ ಕೊಡಲಾಗಿದೆ. ಇದು ಪ್ರಮಾಣ ಗ್ರಂಥವಾಗದಿದ್ದರೂ ಪ್ರಮಾಣಗಳ ಬೆಂಬಲವುಳ್ಳ ಗ್ರಂಥವಾಗಿದೆ.

ಈ ಗ್ರಂಥದಲ್ಲಿಯ ಸಂಭಾಷಣೆಗಳು, ಪಾತ್ರಗಳ ತಾತ್ಕಾಲಿಕ ಚಟವಟಿಕೆಗಳು ಆಯಾ ಸನ್ನಿವೇಶಗಳ ರೂಪಕವಾಗಿವೆ ಅವು ಘಟನೆಗಳ ಸ್ವಭಾವ

ಮತ್ತು ಪರಿಣಾಮಗಳು ಸ್ಪಷ್ಟವಾಗುವದಕ್ಕಾಗಿ ಕಲ್ಪಿಸಿದವುಗಳು. ಇವುಗಳ ಮೂಲಕವಾಗಿ ಸಾಮಾನ್ಯ ವಿದ್ಯಾವಂತರ ಮನಸ್ಸು ಆಕರ್ಷಿಸಲ್ಪಟ್ಟು, ಅಲ್ಲಿ ಅಣ್ಣನವರ ನೈಜ ಜೀವನಕ್ರಮ, ವ್ಯಕ್ತಿತ್ವದ ಮಹತಿ, ಕಾರ್ಯಗಳ ಘನತೆ, ಇವು ಮೂಡಿ ಬರಲಿ ಎಂಬ ಆಸೆಯನ್ನು ಇರಿಸಿಕೊಳ್ಳಲಾಗಿದೆ.

ಭಾರವಾದ ಹೃದಯ

ಇವರ ಹಸ್ತಪ್ರತಿಯನ್ನು ಆಮೂಲಾಗ್ರವಾಗಿ ಓದಿ ಪರಿಶೀಲಿಸಿ
ಹಲಕೆಲವು ಮಾರ್ಪಾಟುಗಳನ್ನು ಸೂಚಿಸಿ,
ಪ್ರಮಾಣಗಳನ್ನು ಒದಗಿಸಿ, ಅಚ್ಚುಹಾಕಿ ಪ್ರಕಟಿಸಲು ಪ್ರೋತ್ಸಾಹಿಸಿ
ಅಚ್ಚಿಗೆ ಕಳಿಸುತ್ತಿರುವಾಗಲೇ (ದಿ. ೫-೧೧-೬೬ರಂದು)
ಲಿಂಗೈಕ್ಯರಾದ
ಬಸವಲಿಂಗಪ್ರಾಣಿ, ವೀರಶೈವ ತತ್ವಜ್ಞಾನಿ, ಧರ್ಮಸಾಹಿತ್ಯಾಭಿಮಾನಿ
ಶ್ರೀ ಗುರುಸಿದ್ಧಪ್ಪ ಬಸವಪ್ಪ ಬಳ್ಳಾರಿ
ಇವರ ಕೀರ್ತಿಶರೀರಕ್ಕೆ ಶ್ರದ್ಧಾಂಜಲಿಯನ್ನೀವೆನು.

ಈ ಗ್ರಂಥದ ಕಥನಗತಿಯು ಹಲವು ಕಡೆ ಶ್ರೀಮಾನ್ ಬಿ. ಪುಟ್ಟಸ್ವಾಮಯ್ಯನವರ ಗ್ರಂಥಗಳಲ್ಲಿಯ ಕ್ರಮವನ್ನೇ ಅನುಸರಿಸಿದೆ. ಕೆಲವು ಸಂದರ್ಭಗಳಲ್ಲಿ ಅವರ ಸನ್ನಿವೇಶ ಚಿತ್ರಣಗಳನ್ನೇ ಸಂಕ್ಷೇಪಿಸುವ ಬೇರೆ ವರ್ಣಗಳಿಂದ ಚಿತ್ರಿಸಿ ಬಳಸಿಕೊಳ್ಳಲಾಗಿದೆ. ಬೆಂಗಳೂರಲ್ಲಿ ಈ ಮಹಾಸಾಹಿತಿಗಳ ದರ್ಶನ ಪಡೆದಾಗ ಇವರು ತಮ್ಮ ಕಾದಂಬರಿಗಳಲ್ಲಿ ಬಳಸಿದ ತಂತ್ರಗಳನ್ನು ವಿವರಿಸಿದರಲ್ಲದೆ; ನಾನು ಪ್ರಾರ್ಥಿಸಿಕೊಂಡುದಕ್ಕೆ ನನ್ನ ಬರೆಹದಲ್ಲಿ ಅವುಗಳಿಂದ ನನಗೆ ಬೇಕಾದ ಸತ್ತ್ವಾಂಶಗಳನ್ನು ಆಧರಿಸಿಕೊಳ್ಳಲು ಅನುಮತಿಯನ್ನಿತ್ತರು. ಈ ಕಾರಣಗಳಿಂದ ನಾನು ಪ್ರಪ್ರಥಮವಾಗಿ ಶ್ರೀ ಬಿ. ಪುಟ್ಟಸ್ವಾಮಯ್ಯನವರಿಗೆ ನಿರಂತರ ಕೃತಜ್ಞತೆಗಳನ್ನು ಸಲ್ಲಿಸುತ್ತಿರುವೆ. ಇದಲ್ಲದೆ ಮುಂದೆ ಕೊಟ್ಟಿರುವ ಪಟ್ಟಿಯಂತೆ ನೆರವಿಗೆ ಪಡೆದ ಗ್ರಂಥಗಳ ಇನ್ನುಳಿದ ಗ್ರಂಥಕಾರರಿಗೂ ನನ್ನ ಆದರದ ನೆನಕೆಗಳು ಸಲ್ಲುತ್ತಿವೆ.

ಇದನ್ನು ಬರೆಯುವಾಗ ಸಹಾಯಕ ಗ್ರಂಥಗಳನ್ನು ಒದಗಿಸಿದ ಪ್ರೊ. ಎಸ್. ಎಸ್. ಕಬ್ಬಿನ M. A. ಸಾಹಿತ್ಯರತ್ನ S. B. ಕಾಲೇಜ, ಶ್ರೀ ಶಿವಪುತ್ರಪ್ಪ ಮುಧೋಳ, ಶ್ರೀ ಚನ್ನಪ್ಪ ಕೋರಿ, ಶ್ರೀ ವೀರಪ್ಪ ಸವದಿ ಈ ಮಹಾಶಯ ಮಿತ್ರರಿಗೆ ನನ್ನ ಕೃತಜ್ಞತೆ ಸಲ್ಲುವದು.

ಇದನ್ನು ಮುದ್ರಿಸಿ ಪ್ರಕಟಿಸಲು ಮುಂದೆ ಬಂದು ಬೆಳಕಿಗೆ ತಂದ ಬಾಗೇವಾಡಿಯ ಶ್ರೀ. ಶಿ. ಸ್ವಾ. ಬಸವೇಶ್ವರ ಲಿಂ. ಜಾ. ಸಂಸ್ಥೆಯ ಸದಸ್ಯರಿಗೆ ವಂದನೆಗಳು.

ಮುದ್ರಣಕಾಲದ ನನ್ನ ಹೊಣೆಯನ್ನು ನಿರ್ವಹಿಸಿದ ಬಂಧು ಶ್ರೀ ಕೆ. ಎಸ್. ಪಾಟೀಲ ಪೇ. ಹೆ. ಮಾ. ಪ್ರಾ. ಸ್ಕೂ. ಟ್ರೇ. ಕಾ. ಧಾರವಾಡ ಇವರಿಗೆ ಋಣಿಯಾಗಿರುವೆ.

ಇನ್ನು ಗ್ರಂಥರಚನೆಗೆ ಪ್ರೇರಕರೂ ಪ್ರವರ್ತಕರೂ ಆದುದಲ್ಲದೆ ಬಸವಣ್ಣನವರ ಹಿರಿಮೆ ಎಂಬ ಲೇಖವನ್ನೂ, ಅಂದವಾದ ಮುನ್ನುಡಿಯನ್ನೂ ಬರೆದು ದಯಪಾಲಿಸಿದ ಮಹಾಸ್ವಾಮಿಗಳಿಬ್ಬರ ಪಾದಾರವಿಂದಗಳನ್ನು ಮನದಲ್ಲಿ ನೆನಹಾಗಿರಿಸಿ ವಿರಮಿಸುವೆನು.

ವಿಜಾಪುರ
ದಿ. ೧೯-೧-೬೭

— ಲಕ್ಕಪ್ಪ ಅ. ಶಿರಹಟ್ಟಿ

ಗ್ರಂಥಾವಲೋಕನ

೧. ಬಸವೇಶ್ವರ ಜೀವಿತ ಕಾಲ ಕುರಿತಾದ ಆರು ಕಾದಂಬರಿಗಳು.	ಶ್ರೀ. ಬಿ. ಪುಟ್ಟಸ್ವಾಮಯ್ಯ
೨. ಬಸವಣ್ಣನವರ ಷಟ್‌ಸ್ಥಲ ವಚನಗಳು.	ಧಾರವಾಡ ಲಿಂ. ವಿ. ಸಂಸ್ಥೆಯ ಸಾಹಿತ್ಯ ಸಮಿತಿ
೩. ಭಕ್ತಿ ಭಾಂಡಾರಿ ಬಸವಣ್ಣನವರು.	ದಿ. ಶ್ರೀ. ಎಮ್. ಆರ್. ಶ್ರೀನಿವಾಸಮೂರ್ತಿ
೪. ಲಿಂಗವಂತರ ಅಮರ ಕೃತಿಗಳು. ಮತ್ತು ಲಿಂಗವಂತ ಕವಿಗಳು.	ಲಿಂ. ಶ್ರೀ. ಗುರುಸಿದ್ಧಪ್ಪನವರು ಬಳ್ಳಾರಿ
೫. ಅಣ್ಣನ ಆದರ್ಶ.	ಶ್ರೀ. ಟಿ. ಜಿ. ಸಿದ್ದಪ್ಪಾರಾಧ್ಯ
೬. ಅಲ್ಲಮಪ್ರಭುದೇವ.	ಶ್ರೀ. ಟಿ. ಜಿ. ಸಿದ್ದಪ್ಪಾರಾಧ್ಯ
೭. ಬಸವಣ್ಣನವರ ಕಾಲ.	ಶ್ರೀ. ಚೆನ್ನಮಲ್ಲಿಕಾರ್ಜುನರು. ಮೈಸೂರು
೮. ಶಿವಶರಣರ ಕತೆಗಳು ಭಾಗ ೧, ೨.	ಲಿಂ. ಡಾ. ಪಿ. ಜಿ. ಹಳಕಟ್ಟಿ
೯. ಶಿವಶರಣೆಯರ ಕತೆಗಳು.	ಲಿಂ. ಡಾ. ಪಿ. ಜಿ. ಹಳಕಟ್ಟಿ
೧೦. ಕನ್ನಡನಾಡಿನ ಧರ್ಮಗಳು.	ಡಾ. ನಂದಿಮಠ
೧೧ ಶರಣಚರಿತಾಮೃತ.	ಶ್ರೀ. ಸಿದ್ಧಯ್ಯ ಪುರಾಣಿಕ
೧೨. ಷಟ್‌ಸ್ಥಲ ಪ್ರಭೆ.	ಡಾ. ಆರ್. ಸಿ. ಹಿರೇಮಠ
೧೩. ಪ್ರಭುಲಿಂಗಲೀಲೆ.	ಕವಿ ಚಾಮರಸ

ಪರಿವಿಡಿ

ಒಪ್ಪೋಲೆ

ದಯವಿಟ್ಟು ತಿದ್ದಿಕೊಂಡು ಓದುವದು :

ಪುಟ	ಸಾಲು	ಇದನ್ನು	ಹೀಗೆ
೧೦೦	೨೫	ತಲೆಯಲ್ಲಿ	ತಟ್ಟೆಯಲ್ಲಿ
೧೪೫	೧೧	ಎಳೆತನವೂ	ಎಳೆತವೂ
೧೪೮	೨೫	ದೇವ	ದೇವನ
೧೬೧	೨	ವಿಸ್ತರಣಾಧಿಕಾರಿ	ವಿತರಣಾಧಿಕಾರಿ
೧೬೬	೧೩	ಬಂದವರಾಗಿ	ಬಂದವರಿಗಾಗಿ
,,	೨೧	ವಿಕ್ರಮ	ವಿಕ್ರಯ
೧೭೭	೨	ಕೂಡಲಸಂಗಮ	ಕೂಡಲಚನ್ನಸಂಗಮ
೧೮೮	೨೦	ಮುರ್ತ	ಮುಹೂರ್ತ
೨೧೨	೨೭	ಪೂರ್ವಾಶ್ರಮ	ಪೂರ್ವಾಶ್ರಯ
೨೧೭	೪	ಸಹಾಯ	ಸಹಾಯಕ
೨೩೭	೧೫	ಆ	ಆಗ
೨೮೨	೨೦	ಅಂದೊಂದು	ಅದೊಂದು
,,	೨೧	ವಟುಗಳ	ವಟುಗಳು
೨೮೭	೧೧	ಇಷ	ಇಷ್ಟ
೩೦೧	೧೧	ಕಾರಣಗಳಿಂದ	ಈ ಕಾರಣಗಳಿಂದ
೩೦೧	೨೫	ಪಾಲಿಗೆ	ಪಾಲನೆ
೩೦೯	೧೮	ದುರ್ಬಲವನ್ನು	ದುರ್ಬಲರನ್ನು
೩೨೪	೧೬	ಸಮಾತ	ಸಮತಾ
೩೨೭	೪	ಪರತನು	ಪರನು
,,	೯	ಅರ್ಥ	ಅರ್ಥ

ಪುಟ ೩೦೨ ರ ಕೆಳಗಿನ ಅಡಿಟಿಪ್ಪಣಿಯು ಪುಟ ೩೦೧ ರ ಕೆಳಗೆ ಇರತಕ್ಕದ್ದು.




ಶ್ರೀ ಬಸವರಾಜದೇವರು

ತರ್ದೇವಾಡಿ ನಾಡಿನ ಈಗಿನ ಮಹಾಸ್ವಾಮಿಗಳಿಬ್ಬರು



ಶ್ರೀ ನಿ. ಪ್ರ. ಸ್ವ.
ಶ್ರೀ ಸಂಗನಬಸವ ಮಹಾಶಿವಯೋಗಿಗಳು
ಬಂಥನಾಳ



ಶ್ರೀ ಷ. ಬ್ರ. ಮೂ.
ಶ್ರೀ ಶಾಂತವೀರ ಮಹಾಸ್ವಾಮಿಗಳು
ಬಬಲೇಶ್ವರ, ಹರಲೇಶ್ವರ

ಓಂ

ಶ್ರೀಗುರು ಬಸವಲಿಂಗಾಯ ನಮಃ

ಬಸವರಾಜ ದೇವರು

೧ ಬಸವಯುಗದ ಪೂರ್ವದಲ್ಲಿ

(ಶ್ರೀ ಬಸವರಾಜರ ಚರಿತ್ರೆಯನ್ನು ಪ್ರಾರಂಭಿಸುವ ಮೊದಲು ಅವರ ಕಾರ್ಯಾರಂಭಕ್ಕೆ ಹಿನ್ನೆಲೆಯಾಗಿರುವ ದೇಶ-ಕಾಲ-ಪರಿಸ್ಥಿತಿಯನ್ನು ಈ ...ನೆಯ ಅಧ್ಯಾಯದಲ್ಲಿ ಸ್ಥೂಲವಾಗಿ ತಿಳಿಸಲಾಗುತ್ತಿದೆ.)

ಪ್ರಭುತ್ವ ಪರಿಸ್ಥಿತಿ

ಭಾರತದ ಇತಿಹಾಸದಲ್ಲಿ ೧೧ನೆಯ ಹಾಗೂ ೧೨ನೆಯ ಶತಮಾನಗಳ ಅವಧಿ ಬಹು ಮಹತ್ವದ ಕಾಲವಾಗಿದೆ. ೧೧ನೆಯ ಶತಮಾನದಲ್ಲಿ ಮಹಮ್ಮ...ೀಯರು ಪರಕೀಯರಾಗಿ ಉತ್ತರ ಭಾರತಕ್ಕೆ ಬಂದು ಇಲ್ಲಿಯ ರಾಜರನ್ನು ...ೋಲಿಸಿ, ದೇವಾಲಯಗಳನ್ನು ಭಗ್ನಗೊಳಿಸಿ ಸಂಪತ್ತನ್ನು ಸುಲಿದು ಸೂರೆ ...ೊಂಡರು; ಜನರ ಧರ್ಮವನ್ನೂ ಸಂಸ್ಕೃತಿ-ಕಲೆಗಳನ್ನೂ ಹಾಳುಮಾಡಿ ...ದರು. ಅವರನ್ನು ಎದುರಿಸುವದಕ್ಕಾಗಿ ಭಾರತೀಯ ರಾಜರು ತಮ್ಮಲ್ಲಿ ...ಕ್ಕಟ್ಟನ್ನು ಸ್ಥಾಪಿಸಲು ಪ್ರಯತ್ನಿಸಿ ವಿಫಲರಾದರು. ಹಲವರು ಅಲ್ಪ ...್ವಾರ್ಥಕ್ಕಾಗಿ ಸ್ವಜನ-ಸ್ವದೇಶ ದ್ರೋಹವನ್ನೂ ಬಗೆದರು. ಮುಂದೆ ಮಹ...ಮ್ಮದೀಯರು ಈ ದೇಶದಲ್ಲಿ ನೆಲಸಿ ಇಲ್ಲಿಯವರಾಗಿ ಬಾಳುವವರೆಗೂ ಈ ಪರಿಸ್ಥಿತಿಯಿತ್ತು.

ಉತ್ತರದಲ್ಲಿಯ ಈ ರಾಜಕೀಯ ಬೇಗೆಯು ದಕ್ಷಿಣಕ್ಕೂ ಹಬ್ಬಬಹು...ೆಂಬದನ್ನು ದಕ್ಷಿಣದಲ್ಲಿಯ ಅರಸರು ಅರಿಯದಿದ್ದುದು ದುರ್ದೈವದ ಸಂಗತಿ ...ಯಾಗಿತ್ತು. ಅವರು ತಮ್ಮ ತಮ್ಮಷ್ಟಕ್ಕೆ ಪ್ರಜಾಪಾಲನೆಯಲ್ಲಿ ದಕ್ಷರಾಗಿ ...ದ್ದರು. ಕರ್ನಾಟಕದಲ್ಲಿ ಕಲ್ಯಾಣದ ಚಾಲುಕ್ಯರು ಪ್ರಬಲರಾಗಿದ್ದರು.

ಚಾಲುಕ್ಯ ಚಕ್ರವರ್ತಿ ತ್ರಿಭುವನಮಲ್ಲ ೬ನೆಯ ವಿಕ್ರಮಾದಿತ್ಯನು ಸಾ ಜ್ಯವನ್ನು ವಿಸ್ತರಿಸಿ ಕ್ರಿ. ಶ. ೧೦೭೬ ರಿಂದ ೧೧೨೬ರ ವರೆಗೆ ರಾಜ್ಯವಾಳಿ ಇವನಿಗೆ ಹಲವು ರಾಜರು ಸಾಮಂತರಾಗಿದ್ದರು. ಪೂರ್ವದ ಪ್ರೋಲ್ಲರಾ ದಕ್ಷಿಣದ ಹೊಯ್ಸಳ, ಪಾಂಡ್ಯರಾಜರೂ ಸ್ನೇಹಿತರಾಗಿದ್ದರು. ಆಗ ದೇ ಸುಖಶಾಂತಿಗಳು ನೆಲಸಿದ್ದವು. ಮಹಾರಾಜನು ದೇಶದ ಸಂಪನ್ಮೂಲಗ ಹೆಚ್ಚಿಸಿ, ಕಲೆ-ಕೈಗಾರಿಕೆಗಳಿಗೆ ನೆರವಾಗಿ ವ್ಯಾಪಾರವನ್ನು ಅಭಿವೃದ್ಧಿಗ ದನು. ಧರ್ಮ-ಸಾಹಿತ್ಯ-ಸಂಸ್ಕೃತಿಗಳಿಗೆ ಉತ್ತೇಜನ ಕೊಟ್ಟನು. ಪಂಡಿ ಹಲವಾರು ಕಾವ್ಯಗಳು, ಶಾಸ್ತ್ರಗಳು ನಿರ್ಮಾಣವಾದವು. ಈ ಕರ್ನಾಟಕವೈಭವಸೂರ್ಯನ ಮಧ್ಯಾಹ್ನಕಾಲವಾಗಿತ್ತು.

ಇವನ ಮಗನಾದ ಸರ್ವಜ್ಞಸೋಮೇಶ್ವರನೂ ಸಾಮ್ರಾಜ್ಯದ ಕ ಯನ್ನು ಕಾಪಾಡಿಕೊಂಡು ಬಂದನು. ತರುವಾಯದ ಚಾಲುಕ್ಯರಾ ತೇಜೋಹೀನರಾದರು. ಇವನ ಮಕ್ಕಳಲ್ಲಿ ಪೆರ್ಮೆಜಗದೇಕಮಲ್ಲ, ತೈ ಜಗದೇಕಮಲ್ಲ ಎಂಬವರು ಕ್ರಮವಾಗಿ ಸಿಂಹಾಸನಕ್ಕೆ ಬಂದರು. ೩ನೇ ನಾದ ನೂರ್ಮಡಿತೈಲಪನು ಅಲಸಿಯೂ ವಿಲಾಸಿಯೂ ರಾಜ್ಯಭಾರ ನಿ ಸುವದಕ್ಕೆ ತೀರ ಅಸಮರ್ಥನೂ ಆಗಿದ್ದನು. ರಾಜ್ಯಾಧಿಕಾರಿಗಳೂ ವಿ ದಲ್ಲಿ ಕಾಲಕಳೆಯುತ್ತಿದ್ದರು. ಪ್ರಜೆಗಳ ಹಿತವು ಅಲಕ್ಷಿಸಲ್ಪಟ್ಟಿತು. ಪ್ರ ತರು ಸಾಮಾನ್ಯರನ್ನು ಶೋಷಿಸಿ ಕುಗ್ಗಿಸಿದರು. ಈ ಸಂಧಿ ಸಾಧಿಸಿ ಸಾಮ ರಲ್ಲಿ ಕೆಲವರು ಸ್ವತಂತ್ರರಾಗಲು ಸಂಚು ನಡಿಸಿದರು. ಆಗ ತೈಲಪನು ಮಂ ವಾಡದ ಮಂಡಲೇಶ್ವರ ಬಿಜ್ಜಳನನ್ನು ಮಹಾಮಂಡಲೇಶ್ವರ ಪದವಿಗೇ ಸಾಮ್ರಾಜ್ಯದ ಆಡಳಿತವನ್ನು ಅವನಿಗೆ ಒಪ್ಪಿಸಿದನು. ಮುಂದೆ ಬಿಜ್ಜ ಶೌರ್ಯ ಸಾಹಸಗಳಿಂದಲೂ ಮುತ್ಸದ್ದಿಗಳಾದ ಮಂತ್ರಿಗಳ ನೆ ಸಿಂದಲೂ ಚಾಲುಕ್ಯ ಸಾಮ್ರಾಜ್ಯವು ಒಡೆದು ಹೋಗುವ ಸಂದರ್ಭ ತಾತ್ಕಾಲಿಕವಾಗಿ ತಪ್ಪಿತು.

ಚಕ್ರವರ್ತಿಗೆ ಅಧೀನರಾಗಿ ಹಲವರು ಸಾಮಂತರಾಜರು ತಮ್ಮ ರಾ ಗಳನ್ನಾಳುತ್ತಿದ್ದರು. ಚಕ್ರವರ್ತಿಯ ಸ್ವಂತದ ರಾಜ್ಯದಲ್ಲಿ ಮಂಡಲೇ ರೆಂಬ ಅಧಿಕಾರಿಗಳಿರುತ್ತಿದ್ದರು. ಇವರೆಲ್ಲರು ಸೈನ್ಯವನ್ನು ಕಟ್ಟಿಕೊಂಡಿರ ದ್ದರು. ಮಂಡಲೇಶ್ವರರ ಹಾಗೂ ಸಾಮಂತರ ಆಡಳಿತದ ಮೇಲ್ವಿಚಾರ

ಚಕ್ರವರ್ತಿಗಳಿಂದ ನಿಯಮಿಸಲ್ಪಟ್ಟ ಮಹಾಮಂಡಲೇಶ್ವರರೆಂಬ ಗೌರವಾನ್ವಿತ ರಾದ ಅಧಿಕಾರಿಗಳಿರುತ್ತಿದ್ದರು. ಮಂತ್ರಿಮಂಡಲ, ದಂಡನಾಯಕರು, ಮಹಾಮಂಡಲೇಶ್ವರರು ಇವರ ಸಭೆಯು ಸಲಹೆಯಂತೆ ಸಾಮ್ರಾಜ್ಯದಾಡಳಿತೆ ನಡೆಯುತ್ತಿತ್ತು. ಮಹತ್ವದ ಸಮಯದಲ್ಲಿ ಪ್ರಜಾಪ್ರತಿನಿಧಿಸಭೆಯೂ ಸೇರುತ್ತಿದ್ದಿತು.

ಜನಜೀವನ ಮತ್ತು ಆರ್ಥಿಕ ಪರಿಸ್ಥಿತಿ

೧೨ನೆಯ ಶತಮಾನದ ಸುಮಾರಿಗೆ ಭಾರತದ ಜನಸಂಖ್ಯೆಯು ೧೦-೧೨ ಕೋಟಿ ಮಾತ್ರ ಇದ್ದಿತು. ದಕ್ಷಿಣದಲ್ಲಿ ದುರ್ಗಮವಾದ ಕಾಡುಗಳು ಅಲ್ಲಲ್ಲಿ ಉಳಿದಿದ್ದವು. ಜನವಸತಿ ವಿರಲವಾಗಿತು. ರಮ್ಯವಾದ ವನಪ್ರದೇಶ ಗಳು ವಿಪುಲವಾಗಿದ್ದವು. ಜನರು ಅವುಗಳಿಂದ ಗಡ್ಡೆ ಗೆಣಸು, ಹಣ್ಣು-ಹಂಪಲ, ಜೇನು ಮುಂತಾದ ಮಹತ್ವದ ಜೀವನೋಪಯುಕ್ತವಾದ ಜಿನಸು ಗಳನ್ನು ಪಡೆಯುತ್ತಿದ್ದರು. ಫಲವತ್ತಾದ ಭೂಮಿಯಲ್ಲಿ ಬೇಸಾಯ ನಡಿಸಿ ಬೇಕಷ್ಟು ಧಾನ್ಯಗಳನ್ನು ಬೆಳೆಯುತ್ತಿದ್ದರು. ಪಶುಸಂಪತ್ತು ಪುಷ್ಟವಾಗಿತ್ತು; ಹೈನು ಬೇಕಾದಷ್ಟು ! ಜನರು ಸಶಕ್ತರು !! ಯುದ್ಧಗಳು ಶಸ್ತ್ರಧಾರಿಗಳಿಗಷ್ಟೇ ಸಂಬಂಧಿಸಿದ್ದುದರಿಂದ ಪ್ರಜೆಗಳ ನೆಮ್ಮದಿಯು ಅವುಗಳಿಂದ ಹಾಳಾಗುತ್ತಿರ ಲಿಲ್ಲ. ಸಾಮಾನ್ಯರ ಜೀವನಾವಶ್ಯಕ ಒಡವೆಗಳು ಆಯಾ ಪ್ರದೇಶದಲ್ಲಿಯೇ ವಿನಿಮಯದಿಂದ ಪ್ರಾಪ್ತವಾಗುತ್ತಿದ್ದವು. ಅರಸರ, ಮನ್ನೆಯರ, ಶ್ರೀಮಂತರ ವಿಲಾಸಜೀವನದ ರೇಶಿಮೆ, ಚಿನ್ನ, ಬೆಳ್ಳಿ ಮುತ್ತು-ರತ್ನಾದಿಗಳೂ, ಕುದುರೆ ಗಳೂ ದೂರ ದೂರದ ನಾಡುಗಳ ಪರಸ್ಪರ ವ್ಯಾಪಾರದಿಂದ ಲಭಿಸುತ್ತಿದ್ದವು. ಇಂತಹ ವ್ಯಾಪಾರದಲ್ಲಿಯೂ ಆಡಳಿತದ ವ್ಯವಹಾರದಲ್ಲಿಯೂ ಮಾತ್ರ ನಾಣ್ಯಗಳು ಬಳಸಲ್ಪಡುತ್ತಿದ್ದವು. ಗದ್ಯಾಣ, ವರಹ ಮುಖ್ಯ ನಾಣ್ಯಗಳು.

ದೂರದ ವ್ಯಾಪಾರಗಳು ನಗರಗಳಲ್ಲಿ ಬಣಂಜು ಸಂಘಗಳ ಮುಖಾಂತರ ನಡೆಯುತ್ತಿದ್ದವು. ಮಹಾನಗರಗಳಲ್ಲಿ ಇವುಗಳ ಕೇಂದ್ರ ಸಂಸ್ಥೆಗಳಿದ್ದು ಇವುಗಳಿಗೆ 'ವೀರ ಬಣಂಜು ಸಂಘ'ಗಳೆಂದು ಹೆಸರು. ಕುದುರೆಗಳ ವ್ಯಾಪಾ ರದ ಅರಬರೂ, ಉತ್ತರದ ನಯವಾದ ಬಟ್ಟೆಗಳ ವರ್ತಕರೂ, ಸಿಂಹಳದ ಮುತ್ತುಗಳ ಮಾರಾಟಗಾರರೂ ಈ ವೀರ ಬಣಂಜು ಸಂಘಗಳ ಸದಸ್ಯರಾಗಿ

ದ್ದರು. ಈ ಸಂಘಗಳ ಲಾಭಾಂಶವು ಅರಸರಿಗೂ, ದೇವ ಮಂದಿರ, ಅಗ್ರಹಾರ, ಮಠ, ವಿದ್ಯಾಸಂಸ್ಥೆ ಇವುಗಳಿಗೂ ಸಲ್ಲುತ್ತಿದ್ದಿತು. ಆಪತ್ಕಾಲದಲ್ಲಿ ಅರಸರು ಈ ಸಂಘಗಳಿಂದ ಸಾಲ ಪಡೆಯುತ್ತಿದ್ದರು. ಆದ್ದರಿಂದ ಈ ಸಂಘಗಳ ಆಡಳಿತದ ಅಧಿಪತಿಗಳು ಗೌರವಾನ್ವಿತರಾಗಿದ್ದರು.

ಶಿಕ್ಷಣ-ಸಾಹಿತ್ಯ-ಕಲೆ

ಜನಸಾಮಾನ್ಯರ ಶಿಕ್ಷಣವು ಅರಸರಿಂದ ನಿರ್ವಹಿಸಲ್ಪಡುತ್ತಿರಲಿಲ್ಲ. ಅಗ್ರಹಾರಗಳು-ಮಠಗಳು ನಡಿಸುತ್ತಿರುವ ಪಾಠಶಾಲೆಗಳು ಉಚ್ಚವರ್ಣದವರಿಗೆ ಮೀಸಲಾಗಿದ್ದವು. ಜನರು ಸ್ವೇಚ್ಛೆಯಿಂದ ಶಾರೀರಿಕ ಶಿಕ್ಷಣವನ್ನು ಹೊಂದುತ್ತಿದ್ದರು. ಕತ್ತಿವರಸೆ, ಮಲ್ಲಯುದ್ಧಗಳ ಮೂಲಕ ಯುದ್ಧಕಲೆಯ ಪ್ರಾಥಮಿಕ ಅಭ್ಯಾಸವು ಪ್ರತಿ ಗ್ರಾಮಗಳಲ್ಲಿ ನಡೆಯುತ್ತಿತ್ತು. ಯುದ್ಧಕಾಲದಲ್ಲಿ ತಾತ್ಕಾಲಿಕವಾದ ಯೋಜನೆಗಳಿಂದ ಮಂಡಲೇಶ್ವರರು, ದಂಡನಾಯಕರು ಜನರಿಗೆ ಸೈನಿಕ ಶಿಕ್ಷಣವನ್ನಿತ್ತು ಸೈನ್ಯವನ್ನು ಸಿದ್ಧಗೊಳಿಸುತ್ತಿದ್ದರು. ಬಹು ದೊಡ್ಡ ಸೈನ್ಯವು ಸದಾ ಸಿದ್ಧವಾಗಿರುತ್ತಿರಲಿಲ್ಲ. ಶಸ್ತ್ರಾಭ್ಯಾಸದ ದೊಡ್ಡ ವಿದ್ಯಾಸಂಸ್ಥೆಯೊಂದು ಚಾಲುಕ್ಯಸಾಮ್ರಾಜ್ಯದ ಗೋಮಾಂತಕದಲ್ಲಿತ್ತು.

ಶಾಸ್ತ್ರ-ಪಂಡಿತರ, ಕವಿಗಳ, ಮಠಾಚಾರ್ಯರ ವಿದ್ಯಾಭ್ಯಾಸವು ಮಠಗಳಲ್ಲಿ ನಡೆಯುತ್ತಿತ್ತು. ತತ್ವಜ್ಞಾನ-ನೀತಿ-ಧರ್ಮಾಚಾರಗಳೇ ಅಲ್ಲಿಯ ವಿಷಯಗಳು. ಸುಸಂಘಟಿತವಾದ, ವಿಶಾಲವಾದ ಮಹಾವಿದ್ಯಾಲಯಗಳೂ ಕೆಲವು ಇದ್ದವು. ಅವು ಅರಸರು ಕೊಡುವ ಉಂಬಳಿಯಿಂದಲೂ ಮಹಾಜನರು ಕೊಡುವ ಕಾಣಿಕೆಗಳಿಂದಲೂ ಕಾರ್ಯನಿರ್ವಹಿಸುತ್ತಿದ್ದವು. ಐಹೊಳೆ, ಪವಿಟ್ಟಗೆ, ಬಳ್ಳೀಗಾಂವಿ, ಸಂಗಮ ಇವು ಕ್ರಮವಾಗಿ ಹೆಸರಿಗೆ ಬಂದ ಆಗಿನ ಕಾಲದ ಮಹಾವಿದ್ಯಾಲಯಗಳು. ಬಸವ ಯುಗದ ಪೂರ್ವದಲ್ಲಿ ಬಹುತರವಾಗಿ ಇವು ಶೈವ ಸಿದ್ಧಾಂತ ಪ್ರವರ್ತಕ ಪಂಡಿತರನ್ನೇ ನಿರ್ಮಿಸುತ್ತಿದ್ದವು.

ಸಾಕ್ಷರತೆ, ಕೈಗಾರಿಕೆ, ಶಿಲ್ಪಕಲೆ, ಭೂಮಾಪನ, ಜ್ಯೋತಿಷ, ವೈದ್ಯ ಮುಂತಾದ ವಿದ್ಯೆಗಳು ಆಯಾ ಮನೆತನಗಳಲ್ಲಿ ವಂಶಪರಂಪರೆಯಿಂದ ಮುಂದುವರಿಯುತ್ತಿದ್ದವು.

ರಾಷ್ಟ್ರಕೂಟ ಅರಸರ ಕಾಲದಲ್ಲಿ ಆರಂಭವಾದ ಕನ್ನಡ ಕಾವ್ಯ ರಚನೆಯ ಕಾರ್ಯವು ಕಲ್ಯಾಣಚಾಲುಕ್ಯರ ಆಳಿಕೆಯಲ್ಲಿ ವಿಶೇಷವಾಗಿ ಮುಂದುವರಿಯಿತು. ಮುಖ್ಯವಾಗಿ ಜೈನ ಕವಿಗಳು ಪ್ರೌಢವಾದ ಚಂಪೂಕಾವ್ಯಗಳನ್ನು ರಚಿಸಿ ಕನ್ನಡ ಸರಸ್ವತಿಯ ಭಂಡಾರಕ್ಕೆ ಸೇರಿಸಿದರು. ಬಸವ ಯುಗದ ಪೂರ್ವದ ಆ ಕಾಲದಲ್ಲಿ ವೀರಶೈವ ಸಾಹಿತ್ಯವು ನಿರ್ಮಾಣವಾದುದು ತೀರ ಕಡಿಮೆ! ದೇವರದಾಸಿಮಯ್ಯ ಶರಣರ ಕನ್ನಡ ವಚನ ಮುಂತಾದ ಕೆಲ ಸಾಹಿತ್ಯ ಮಾತ್ರ ಆಗಿನದು ಕಂಡು ಬರುತ್ತದೆ. ಆಗಿನ್ನೂ ಸಂಸ್ಕೃತದ ಮೋಹದಲ್ಲಿದ್ದ ಬ್ರಾಹ್ಮಣ ಕವಿಗಳು ಕನ್ನಡದಲ್ಲಿ ಕಾವ್ಯರಚಿಸುವದನ್ನು ಉಪೇಕ್ಷಿಸಿದಂತಿತ್ತು. ಒಟ್ಟಿನಲ್ಲಿ ಸಾಮಾನ್ಯ ಜನರು ಗ್ರಹಿಸುವದಕ್ಕೆ ತಕ್ಕುದಾದ ಸುಲಭ-ಸರಳ-ಬಳಕೆಯ ಭಾಷೆಯಲ್ಲಿ ಸಾಹಿತ್ಯವು ನಿರ್ಮಾಣವಾಗದಿರುವದು ಒಂದು ದೋಷವಾಗಿದ್ದಿತು, ಇದರಿಂದ ಬಹುಜನರ ಜ್ಞಾನ ಸಾಧನೆಗೆ ಆತಂಕವಾಗಿದ್ದಿತು. ಶರಣರು ಇದನ್ನು ಬೇಗನೆ ಅರಿತುಕೊಂಡರು.

ಬಾದಾಮಿಯ ಚಾಲುಕ್ಯರ ಕಾಲದಲ್ಲಿ ಪರಿಣತೆಗೆ ತಲುಪಿದ ಶಿಲ್ಪ ಕಲೆಯು ರಾಷ್ಟ್ರಕೂಟರ ಕಾಲದಲ್ಲಿ ಅತ್ಯುನ್ನತಿಗೇರಿತು. ಇಲಾಪುರ (ವೇಳೂರ) ಕೈಲಾಸ ದೇವಾಲಯ ಇದಕ್ಕೆ ತಕ್ಕ ನಿದರ್ಶನವಾಯಿತು. ಕಲ್ಯಾಣದ ಚಾಲುಕ್ಯರು ಶಿಲ್ಪಕಲೆಯನ್ನು ಪೋಷಿಸಿ, ಬೆಳೆಸಿಕೊಂಡು ಬಂದರು. ಆದರಿಂದ ನಾಡಿನಲ್ಲೆಲ್ಲ ಭವ್ಯವಾದ ಸುಂದರವಾದ ದೇವ ಮಂದಿರಗಳು ನಿರ್ಮಾಣವಾದವು.

ನಯವಾದ ಬಟ್ಟೆಗಳನ್ನು ಮನೋಹರವಾದ ರತ್ನಾಭರಣಗಳನ್ನು ನಿರ್ಮಿಸುವಲ್ಲಿ ಕಾರ್ಮಿಕರು ಕುಶಲರಾಗಿದ್ದರು. ಚಿತ್ರಕಲೆಯೂ ಅಭಿವೃದ್ಧಿ ಹೊಂದಿದ್ದಿತೆಂಬುದಕ್ಕೆ ಅಜಂತೆಯ ಗವಿಯೊಳಗಿನ ಬಣ್ಣದ ಚಿತ್ರಗಳೇ ನಿದರ್ಶನವಾಗಿವೆ. ಅಜಂತೆಯ ಸಮೀಪದ ಚೀರಘಟ್ಟಿಯೆಂಬಲ್ಲಿ ಚಿತ್ರ ಕಲೆಯ ಶಾಲೆಯೊಂದಿದ್ದಿತಂತೆ!

ಧಾರ್ಮಿಕ ಪರಿಸ್ಥಿತಿ

ಆರ್ಯರು ಬರುವ ಮೊದಲೇ ಭಾರತದಲ್ಲಿ ಶಿವೋಪಾಸನೆಯು ಬಳಕೆಯಲ್ಲಿತ್ತು. ಮೊಹೆಂಜೋದಾರೋ ಹಾಗು ಇನ್ನೂ ಕೆಲವುಕಡೆಗೆ ಖನನದಲ್ಲಿ

ಕಂಡುಬಂದಿರುವ ಆರುಸಾವಿರ ವರ್ಷಗಳ ಹಿಂದಿನ ದ್ರಾವಿಡಸಂಸ್ಕೃತಿಯ ಅವಶೇಷಗಳಿಂದ ಈ ಮಾತು ವಿಶ್ವಸನೀಯವಾಗಿದೆ. ಆರ್ಯರು ನೆಲೆಯಾಗುತ್ತಿದ್ದ ವೇದಕಾಲದ ರುದ್ರನು ಉಪನಿಷತ್ಕಾಲದಲ್ಲಿ ರುದ್ರಶಿವನೆಂದು ಕರೆಯಲ್ಪಟ್ಟಿದ್ದಾನಲ್ಲದೆ, ಆತನು ದೇವತೆಗಳಲ್ಲಿ ಒಬ್ಬನು ಮಾತ್ರವಾಗಿರದೆ, ಆತನೇ ಪರಬ್ರಹ್ಮ, ಪರವಸ್ತು, ಸರ್ವಾಂತರ್ಯಾಮಿ, ಸರ್ವಕರ್ತೃ, ಸರ್ವಾಶೀತನೆಂದೆನಿಸುವ ಓರ್ವನೇ ದೇವನೆಂದು ಘೋಷಿಸಲ್ಪಟ್ಟನು.

ಮುಂದೆ ಆರ್ಯರ ಸಂಪರ್ಕದಿಂದ, ಆರ್ಯ-ದ್ರಾವಿಡ ಸಂಸ್ಕೃತಿಗಳ ಸವಿಶಮ್ಮಿಲನದಿಂದ, ಶೈವಧರ್ಮದ ಸ್ವರೂಪದಲ್ಲಿ ಬದಲಾವಣೆಯಾಗುತ್ತ ಬಂದಿತು. ಈ ಬದಲಾವಣೆಗಳು ಆರ್ಯರ ವರ್ಣಾಶ್ರಮ ವ್ಯವಸ್ಥೆಯ ತರಗತಿಗಳಿಂದಲೂ, ಹಳೆ ಹೊಸ ಋಷಿಗಳ ಅನುಭವಗಳ ತಾರತಮ್ಯಗಳಿಂದಲೂ ಸಂಪರ್ಕ ಸಾಧನವಿಲ್ಲದ ಪ್ರದೇಶಾಂತರ ಭೇದದಿಂದಲೂ ವಿವಿಧ ರೀತಿಯಲ್ಲಿ ಮುಂದುವರೆದು ಕಾಲಾನುಕ್ರಮದಲ್ಲಿ ಶೈವಮತದಲ್ಲಿ ಹಲವು ಪ್ರಕಾರಗಳಾದವು. ಈ ಶಿವಮತದ ಆಚಾರವು ಅನಾಗರಿಕ ಜನರಲ್ಲಿ ಮೂಢಶ್ರದ್ಧೆಯ ಸ್ವರೂಪದಲ್ಲಿಯೂ ವಿಚಾರವಂತರಲ್ಲಿ ತಾತ್ವಿಕ ಭಕ್ತಿಯ ಸ್ವರೂಪದಲ್ಲಿಯೂ ಇದ್ದಿತು. ತಾತ್ವಿಕರು ವೇದೋಪನಿಷತ್ತುಗಳಲ್ಲಿಯ ಮೂಲ ಮಂತ್ರಗಳನ್ನು ಆಧರಿಸುತ್ತಿದ್ದರೂ ಅವುಗಳ ಅರ್ಥಮಾಡುವಲ್ಲಿಯೂ ಭಿನ್ನತೆಯಿತ್ತು. ಶಿವನ ಸ್ವರೂಪವಾದ ಲಿಂಗವನ್ನು ಭೂಮಿಯ ಮೇಲೆ ಸ್ಥಾಪಿಸಿ ಪೂಜಿಸುತ್ತಿದ್ದರು. ಒರಬರುತ್ತ ಕೆಲವರು ಮೈಮೇಲೆ ಧರಿಸಿ ಪೂಜಿಸಹತ್ತಿದರು. ಯಜ್ಞೋಪವೀತ, ಲಿಂಗ ಎರಡನ್ನೂ ಕೆಲವರು ಧರಿಸುತ್ತಿದ್ದರು ಇದರಂತೆ ಕರ್ಮದಲ್ಲಿಯೂ ಭೇದಗಳಾಗಿದ್ದವು. ಕೆಲವರು ಯಜ್ಞಗಳನ್ನು ಮಾಡುತ್ತಿದ್ದರು. ಈ ಬಗೆಯಾಗಿ ಉಂಟಾದ ಶೈವದ ಹಲವು ಪಂಗಡಗಳಲ್ಲಿ ಕಾಶ್ಮೀರಿಶೈವ, ತಮಿಳುನಾಡ (ದಾಕ್ಷಿಣಾತ್ಯ) ಶೈವ, ಪಾಶುಪತ, ಲಕುಲೀಶ, ಕಾಳಾಮುಖ ಎಂಬ ಶಾಖೆಗಳು ಪ್ರಮುಖವಾದವುಗಳು. ಇವು ಶಿಲಾಶಾಸನಗಳಲ್ಲಿ ಉಲ್ಲೇಖಿತವಾಗಿವೆ. ಇವುಗಳಲ್ಲಿ ಪಾಶುಪತವು ಪರಿಷ್ಕೃತವಾದುದಾಗಿತ್ತು. ಅದು ಕರ್ನಾಟಕದಲ್ಲಿ ಬಹಳವಾಗಿ ಹಬ್ಬಿಕೊಂಡಿದ್ದಿತು.

ಇನ್ನುಳಿದ ಮತಗಳಲ್ಲಿ ಬೌದ್ಧ ಧರ್ಮವು ತನ್ನ ಪಾವಿತ್ರ್ಯವನ್ನು ಕಳೆದುಕೊಂಡಿದ್ದಿತು. ಶಂಕರಾಚಾರ್ಯರಿಂದ ಆರಂಭವಾದ ಅದರ ಉಚ್ಚಾ

ಟನೆಯು ಈಗ ಪೂರ್ಣವಾಗುವದರಲ್ಲಿತ್ತು. ಜೈನ ಮತದ ಗತಿಯೂ ಚೆನ್ನಾಗಿರಲಿಲ್ಲ. ಹೊಯ್ಸಳ ಬಿಟ್ಟಿದೇವನು ಜೈನಮತವನ್ನು ತ್ಯಜಿಸಿ ವೈಷ್ಣವ ಮತವನ್ನು ಸ್ವೀಕರಿಸಿದಾಗ ಜೈನ ಧರ್ಮವು ಪೂರ್ಣವಾಗಿ ನಿರಾಶ್ರಿತವಾಯಿತು. ಕೆಲವರಲ್ಲಿ ಸೀಮಿತವಾಗಿದ್ದ ವೈಷ್ಣವಪಂಥದ ಪ್ರಚಾರದ ಪ್ರಯತ್ನಗಳು ಈಗ ಆರಂಭವಾಗಿದ್ದರೂ ಅದು ಸಾಮಾನ್ಯರನ್ನು ಆಕರ್ಷಿಸಲು ಸಮರ್ಥವಾಗಿರಲಿಲ್ಲ. ಆದ್ದರಿಂದ ಆಗ ಪ್ರಮುಖ ಮತವೆಂದರೆ ಪಾಶುಪತ ಶೈವಮತವೇ ಆಗಿದ್ದಿತು.

ಚಾಲುಕ್ಯಸಮ್ರಾಟ ಸರ್ವಜ್ಞಸೋಮೇಶ್ವರ (ಕ್ರಿ.ಶ. ೧೧೨೬-೧೧೩೮)ನ ಒಲುಮೆಯಿಂದ ಪಾಶುಪತಶೈವ ಮಠಗಳು ಹೆಚ್ಚಿದವು. ಶಿವದೇವಾಲಯಗಳು ಬಹುಸಂಖ್ಯೆಯಲ್ಲಿ ನಿರ್ಮಿತವಾದವು. ಧಾರ್ಮಿಕ ವಿದ್ಯಾಲಯಗಳು ಏರ್ಪಟ್ಟವು. ಬನವಾಸಿ ನಾಡಿನ ಬಳ್ಳಿಗಾಂವಿ, ಉಡುತಡಿ, ಜಯಂತಿಗಳ ಮಠಗಳು ಹೆಸರಾಗಿದ್ದವು. ಬಳ್ಳಿಗಾಂವಿಯ ಕೋಡಿಮಠವು ಧರ್ಮಶಾಸ್ತ್ರಗಳ ಮಹಾವಿದ್ಯಾಲಯಕ್ಕೆ ಆಶ್ರಯವಾಗಿದ್ದಿತು. ಸಂಗಮದಲ್ಲಿ ಶೈವಶಾಸ್ತ್ರವಿದ್ಯಾಪೀಠವಿತ್ತು. ಹೀಗಿದ್ದರೂ ಪಾಶುಪತ ಪಂಥವು ಕೂಡ ಸಂಪೂರ್ಣ ದೋಷರಹಿತವಾಗಿರಲಿಲ್ಲ. ಇನ್ನುಳಿದ ಶೈವ ಶಾಖೆಗಳು ಇನ್ನೂ ಹೆಚ್ಚಿನ ನ್ಯೂನತೆಗೊಳಗಾಗಿದ್ದವು. ಇವು ಯಾವವೂ ಸರ್ವಸಾಮಾಜಿಕ ಧರ್ಮವಾಗಲು ಅರ್ಹವಾಗಿರಲಿಲ್ಲ, ವರ್ಣಧರ್ಮಗಳ ಮೇಲು-ಕೀಳು ಭಾವನೆಯ ಬಲೆಗೊಳಗಾಗಿದ್ದವು ಧರ್ಮದ ಹೆಸರಿನಿಂದ ಶೋಷಣೆ, ಪರಪೀಡೆ, ಹಿಂಸಾಚಾರಗಳು ನಡೆಯುತ್ತಿದ್ದವು. ಬಡತನ-ಸಿರಿತನಗಳ ತರಗತಿಗಳೂ, ವರ್ಣವ್ಯತ್ಯಾಸದ ಹೇಯ ವಿಚಾರಗಳೂ ತುಂಬಿದ್ದವು. ಪಾಶುಪತಶೈವರಲ್ಲಿಯೇ ಜನಿಸಿದ ಬಸವಣ್ಣನವರು ಮಾನವಕುಲದಲ್ಲಿಯ ಭೇದಗಳನ್ನೂ ಶಾಂತಿ ಸಮತೆ ಸೌಖ್ಯಗಳಿಲ್ಲದೆ ಸತತ ಪರಿತಪಿಸುತ್ತಿರುವ ಅವರ ಬಾಳನ್ನು ನೋಡಿ ಹೇಯವೆನಿಸಿ, ಜಾತಿ-ಕುಲ-ಕರ್ಮಗಳ ನಿಯಮ ನಿರ್ಬಂಧಗಳನ್ನು ತಿರಸ್ಕರಿಸಿ ಬಿಟ್ಟಿದ್ದರು. ಇಷ್ಟರೊಳಗಾಗಿಯೇ ಪ್ರಚಲಿತ ಶೈವಮತಗಳಲ್ಲಿಯ ಅದರಲ್ಲಿಯೂ ಹೆಚ್ಚುಮುಂದುವರಿದ ಪಾಶುಪತಪಂಥದಲ್ಲಿಯ-ಅಂತಿಮ ಫಲವು ಕೂಡ ಅಪೂರ್ಣವೆಂದು ಕಂಡ ಕೆಲವರು-ಶರಣರು, ಅನುಭಾವಿಗಳು-

ಸಾಧನೆಯಿಂದ ಶಿವಜೀವೈಕ್ಯ (ಲಿಂಗಾಂಗ ಸಾಮರಸ್ಯ) ದ ಪರಮ ಪದದ ಸಾಕ್ಷಾತ್ಕಾರ ಹೊಂದಿ ಅದನ್ನು ಪ್ರಚುರಪಡಿಸಹತ್ತಿದ್ದರು.

ಇವರಲ್ಲಿ ದೇವರ ದಾಸಿಮಯ್ಯ (ಗೊಬ್ಬೂರ ಶಾಸನ ಕ್ರಿ. ವ. ೧೦೪೮) ಮುಂತಾದವರು ಷಟ್‌ಸ್ಥಲ ತತ್ತ್ವೋಪದೇಶ ಮಾಡಿ ರಚಿಸಿದ ವಚನಸಾಹಿತ್ಯವು ಈ ವರೆಗೆ ದೊರೆತ ಕನ್ನಡದ ತತ್ವಸಾಹಿತ್ಯದಲ್ಲಿ ಮೊದಲಿನದು. ಬಳಿಕ ಏಕಾಂತ ರಾಮಯ್ಯ (ಅಬ್ಬಲೂರ ಶಾಸನ) ನೂ, ಬಸವಣ್ಣನವರಿಗಿಂತ ಸ್ವಲ್ಪ ಮೊದಲು ರೇವಣಸಿದ್ಧ ಶಿವಯೋಗಿಯೂ ಧರ್ಮಜಾಗೃತಿಯನ್ನು ಕೈಕೊಂಡುದು ಶಾಸನಗಳಿಂದ ತಿಳಿಯುತ್ತದೆ. ಆ ಮುಂದೆ ಬಸವಣ್ಣನವರ ನೇತೃತ್ವದಲ್ಲಿ ಪ್ರಮಥರಿಂದ ಶರಣಧರ್ಮದ ಆಂದೋಲನವು ವ್ಯಾಪಕವಾಗಿ ನಡೆಯಿತು. ಪ್ರಮಥರು ಪ್ರಚಲಿತವಾಗಿದ್ದ ವಿಷಮವಾದ ಸಮಾಜ ಧರ್ಮದ ವಿಚಾರವನ್ನೂ ಅವುಗಳಿಗೆ ಪ್ರಮಾಣವೆನಿಸಿದ ಉಪನಿಷತ್, ಸ್ಮೃತಿ, ಶಾಸ್ತ್ರಗಳ ವಿಚಾರವನ್ನೂ ಬದಿಗಿಟ್ಟು ಸ್ವತಂತ್ರವಾಗಿ ಆತ್ಮಾನುಸಂಧಾನದ ಉಗ್ರಸಾಧನದಿಂದ- ಅನುಭವ ವಿಚಾರಗಳ ಮಂಥನದಿಂದ–ಆಧ್ಯಾತ್ಮಿಕ ಗೂಢತತ್ವಗಳನ್ನು ಸ್ವಾಯತಮಾಡಿಕೊಂಡರು. ಅವರು ಕಂಡ ತತ್ವಾರ್ಥಗಳಿಗೆ, ಉಪನಿಷತ್ತುಗಳಲ್ಲಿಯ ಕೆಲವು ಉತ್ತಮಾಂಶಗಳು ಹೊಂದಿಕೊಂಡುದು ಆಕಸ್ಮಿಕವು. ಆದ್ದರಿಂದ ಬಸವಾದಿ ಪ್ರಮಥರು ಉದ್ಗರಿಸಿದ ವಚನಗಳೇ ಲಿಂಗವಂತರ ವೇದಗಳು, ಉಪನಿಷತ್ತುಗಳು ಎನಿಸಿದವು. ಉಪನಿಷತ್ತುಗಳಲ್ಲಿಯ ಈ ಅಪೂರ್ಣತೆಯನ್ನು ಈ ವಚನ ಸಾಹಿತ್ಯವು ತುಂಬಿತಂದಿತು. 'ಉಪನಿಷತ್ತುಗಳಲ್ಲಿಯ ವಿಷಯುಗಳೆಲ್ಲ ವಚನಗಳಲ್ಲಿ ಸಿಗುತ್ತವೆ; ವಚನಗಳಲ್ಲಿದ್ದ ವಿಷಯುಗಳೆಲ್ಲ ಉಪನಿಷತ್ತುಗಳಲ್ಲಿ ಸಿಗುವದು ಸಾಧ್ಯವಿಲ್ಲ' ಎಂದು ಆಧ್ಯಾತ್ಮಿಕ ಸಾಹಿತ್ಯಪಂಡಿತರಾದ ಶ್ರೀ ದಿವಾಕರ ರಂಗರಾಯರು ಹೇಳಿದುದು ಯಥಾರ್ಥವಾಗಿದೆ. ಇರಲಿ, ಹೀಗೆ ಆ ಪ್ರಯತ್ನವು ಸ್ವತಂತ್ರವಾಗಿದ್ದರೂ, ಶೈವ ಸುಧಾರಣೆಯೇ ಅವರ ಉದ್ದೇಶವಾದುದರಿಂದಲೂ, ಪಾಶುಪತದ ಪರಿಪಕ್ವ ವಿಚಾರಗಳು ಇದರಲ್ಲಿ ಅಡಕವಾಗಿದ್ದುದರಿಂದಲೂ 'ಶೈವದಲ್ಲಿ ಅಡಗಿ ಇದ್ದ ವೀರಶೈವವು' ಶೈವ ಸುಧಾರಣೆಯ ಪ್ರತೀಕವೆನ್ನುವಂತೆ ಹೊರಹೊಮ್ಮಿ ಪ್ರಕಾಶಗೊಂಡಿತೆನ್ನುವಂತಾಯಿತು. ಉಳಿದ ಶೈವ ಶಾಖಾಮತಗಳೆಲ್ಲ ತಮ್ಮ ತಮ್ಮಲ್ಲಿಯ ತತ್ವ

ಭಿನ್ನತೆಯನ್ನು ಅಳಿಸಿಕೊಂಡು ವೀರಶೈವದಲ್ಲಿ ಲೀನವಾದವು. ಎಲ್ಲ ಶೈವ ಮಠಗಳೂ ವೀರಶೈವ ಮಠಗಳಾದವು.

ಪ್ರಮಥರ ಈ ಕಾರ್ಯವು ಧಾರ್ಮಿಕ ಕ್ರಾಂತಿಯೆನಿಸುವಷ್ಟು ಬಹು ದೊಡ್ಡ ಪ್ರಮಾಣದಿಂದ ಹಾಗು ತಕ್ಕ ಶಿಸ್ತಿನಿಂದ ನಡೆದಾಗ ಬಸವಣ್ಣನವರು ಅದಕ್ಕೆ ಮುಂದಾಳು ಆಗಿದ್ದರು. ಕಲ್ಯಾಣವು ಕೇಂದ್ರವಾಗಿತ್ತು. ಅಲ್ಲಮ ಪ್ರಭು, ಚೆನ್ನಬಸವಣ್ಣ, ನಾಗಲಾಂಬಿ, ಸಕಲೇಶ ಮಾದರಸು, ಮಾಚಿದೇವ ಮುಂತಾದವರು ಅಣ್ಣನಿಗೆ ಸ್ಫೂರ್ತಿದಾಯಕರೂ, ಮಾರ್ಗದರ್ಶಕರೂ ಸಹಾಯಕರೂ ಆಗಿದ್ದರು. ಬಸವಣ್ಣನವರ ಆತ್ಮಶಕ್ತಿ, ಬುದ್ಧಿ ಕೌಶಲ್ಯ, ಕರ್ತೃತ್ವದ ಬಲ ಇವು ಧಾರ್ಮಿಕ ಕ್ಷೇತ್ರಕ್ಕೆ ಮಾತ್ರ ಸೀಮಿತವಾಗಿರದೆ, ದೀನ–ದಲಿತರ ಉದ್ಧಾರ, ಮೇಲು ಕೀಳು ಭಾವನೆಯ ನಾಶ, ಸ್ತ್ರೀಯರುನ್ನತಿ, ಸಮಾಜದಲ್ಲಿ ನೀತಿ, ಸಾಮಾನ್ಯರಲ್ಲಿ ಜ್ಞಾನಲಾಲಸೆ, ಧಾರ್ಮಿಕ ಸಾಂಸ್ಕೃತಿಕ ಸಾಹಿತ್ಯದ ನಿರ್ಮಾಣ, ನಾಡಿನ ಆರ್ಥಿಕಾಭಿವೃದ್ಧಿ, ಅಂತರ್ಯುದ್ಧಗಳ ನಿವಾರಣೆ ಇತ್ಯಾದಿ ಅಮೂಲ್ಯ ಸಾಧನೆಗಳ ಸಿದ್ಧಿಗೂ ಸಮರ್ಥವಾದವು. ಇವೆಲ್ಲವುಗಳಿಗೆ ಅಣ್ಣನ ಜೀವನಘಟನೆಗಳೂ ವಿಚಾರಗಳೂ ಸೂತ್ರವಾದವು! ಸಿದ್ಧಾಂತವಾದವು! ಆದರ್ಶವಾದವು!!

ಕರ್ನಾಟಕದಲ್ಲಿ ಜನಜೀವನದ ಸರ್ವಾಂಗದಲ್ಲಿಯೂ ಈ ಬಗೆಯ ಪರಿಷ್ಕಾರಮೂಲವಾದ ಕ್ರಾಂತಿಯ, ಹಾಗು ಕ್ರಾಂತಿಯ ಅನಂತರದ ಸಮಯವು 'ಬಸವಯುಗ'ವೆಂದೂ ಬಸವಣ್ಣನವರು ಯುಗಪ್ರವರ್ತಕರೆಂದೂ ಪ್ರಸಿದ್ಧಿಯುಂಟಾದುದರಲ್ಲಿ ಆಶ್ಚರ್ಯವಿಲ್ಲ. ಅಣ್ಣನವರ ಜೀವನವೇ ಈ ಮಹಾಸಾಧನೆಯಾದುದರ ವಿವರವೇ ಈ ಚಿಕ್ಕ ಚರಿತ್ರಗ್ರಂಥವಾಗಿರುವದು.

ಬಸವಣ್ಣನವರ ಪೂರ್ವಜರು

೧೦ನೆಯ ಶತಮಾನದ ಉತ್ತರಾರ್ಧದಲ್ಲಿ ಚಾಲುಕ್ಯವಂಶದ ತೈಲಪನು ರಾಷ್ಟ್ರಕೂಟರಿಂದ ತಮ್ಮ ರಾಜ್ಯವನ್ನು ಮರಳಿ ಗೆದ್ದುಕೊಂಡನು. ಆ ಮಹಾರಾಜನು 'ಈ ಗೆಲವಿಗೆ ಪಾಶುಪತಶೈವ ಜಗದ್ಗುರು ಮಹಾತಪಸ್ವಿ ಈಶ್ವರ ಗಹಲೀಶರ ಅನುಗ್ರಹವೇ ಕಾರಣವೆ'ಂದು ನಂಬಿದ್ದನು. ಗೆಲವಿನಿಂದ ಸಂತುಷ್ಟನಾದ ಆತನು ಜಗದ್ಗುರುಗಳಿಗೆ ಅವರ ಆರಾಧನೆ, ಜ್ಞಾನೋಪ

ದೇಶಗಳ ನಿರ್ವಹಣೆಗೆಂದು ತರ್ದೇವಾಡಿ ಭಾಗದ ಮಾಣಿಕ್ಯವಲ್ಲಿ (ಮಣಿಂಗವಳ್ಳಿ) ಬಾಗೇವಾಡಿ ಮುಂತಾದ ಹನ್ನೆರಡು ಗ್ರಾಮಗಳನ್ನು ದಾನವಾಗಿ ಸಲ್ಲಿಸಿದನು.

ಈಶ್ವರ ಗಹಲೀಶರು ಮಣಿಂಗವಳ್ಳಿಯಲ್ಲಿ ಬೃಹನ್ಮಠವನ್ನು ಸ್ಥಾಪಿಸಿ, ಐನೂರು ಜನ ಆರಾಧ್ಯಬ್ರಾಹ್ಮಣರ ಅಗ್ರಹಾರವನ್ನು ವಿರಚಿಸಿ ಅಲ್ಲಿ ನೆಲಿಸಿದರು. ಮುಂದೆ ಅವಸಾನಕಾಲದಲ್ಲಿ ತಮ್ಮ ಹಾರೀತ ಗೋತ್ರದ ಪ್ರಮುಖ ಶಿಷ್ಯನಿಗೆ ಮಠಾಧಿಪತ್ಯವನ್ನೂ ಆ ಹನ್ನೆರಡು ಗ್ರಾಮಗಳ ಒಡೆತನವನ್ನೂ ಒಪ್ಪಿಸಿದರು. ಆ ಅಧಿಪತಿಯ ವಂಶದಲ್ಲಿ ೧೨ನೆಯ ಶತಮಾನದಲ್ಲಿ ಮಾದಿರಾಜನು ಆ ನಾಡ ಪ್ರಭುವೂ ಮಠದ ಅಧ್ಯಕ್ಷನೂ ಆಗಿದ್ದನು. ಆಗ ಅಗ್ರಹಾರದ ಗ್ರಾಮಗಳಲ್ಲಿ ಬಾಗೇವಾಡಿ, ಇಂಗಳೇಶ್ವರ, ಮಣಿಂಗವಳ್ಳಿ ಇವು ಮೂರು ಮುಖ್ಯವಾಗಿದ್ದವು. ಮಾದಲಾಂಬಿಕೆ ಮಾದಿರಾಜನ ಪತ್ನಿ. ಇವರೇ ಬಸವಣ್ಣನವರ ಪುಣ್ಯವಂತ ತಂದೆತಾಯಿಗಳು.

ಅದೇ ಕಾಲಕ್ಕೆ ಬಾಗೇವಾಡಿಯಲ್ಲಿ ಹುಬ್ಬಿನ ಚಂದಿರಾಜ (ಚಂದ್ರರಾಜ) ಎಂಬ ಕಾಶ್ಯಪಗೋತ್ರದ ಪಂಡಿತನೊಬ್ಬನಿದ್ದನು ಆತನೂ ಪಾಶುಪತ ಶೈವನೇ ! ಆದರೆ ಅದರಲ್ಲಿಯ ಸಾಂಪ್ರದಾಯಿಕವಾದ ಧಾರ್ಮಿಕಾಚಾರದಲ್ಲಿಯ ಜಾತಿಕುಲಭೇದವನ್ನು ಬಲವಾಗಿ ಖಂಡಿಸಿದವನು ! ಅದರಿಂದ ಸನಾತನಿಗಳು ಅವನನ್ನು ದ್ವೇಷಿಸಹತ್ತಿದರು. ಚಂದಿರಾಜನು ತರ್ಕಶಾಸ್ತ್ರ ಪಂಡಿತನಿದ್ದು ತ್ರಿಪುರಿಯ ಶೈವಸಿದ್ಧಾಂತಪರಿಷತ್ತಿನಲ್ಲಿ ಕಾಶ್ಮೀರಿಪಂಡಿತರನ್ನು ಜಯಿಸಿ, 'ವಾದೀಭಸಿಂಹ' ಎಂಬ ಬಿರುದು ಪಡೆದನು. ಅದರಿಂದ ಅಸೂಯೆಪಟ್ಟ ದ್ವೇಷಿಗಳ-ಸನಾತನಿಗಳ-ದ್ವೇಷ ಮತ್ತಿಷ್ಟು ಹೆಚ್ಚಿತು. ಇದರ ಪರಿಣಾಮವಾಗಿ ಅವನು ಅವರಿಂದ ಸಾಮಾಜಿಕ ಬಹಿಷ್ಕಾರ ಹೊಂದಿ, ಅದೇ ಯಾತನೆಯಲ್ಲಿ ಕೊರಗಿ ಸತ್ತನು; ಅವನ ಸತಿಯೂ ಕಸಪಯ್ಯನೆಂಬ ಚಿಕ್ಕ ಮಗನೂ ಅನಾಥರಾದರು. ಆ ಕಸಪಯ್ಯನೇ ಮಾದಿರಾಜನ ಸಾಕುಮಗನಾಗಿ ಮುಂದೆ ಬಸವೇಶ್ವರನೆಂದು ಪ್ರಸಿದ್ಧನಾದನೆಂದು ಇತ್ತೀಚಿನ ಕೆಲವರ ಮತವಿದೆ. ಇದಕ್ಕೆ ಮಣಿಂಗವಳ್ಳಿಯ ಶಿಲಾಶಾಸನವು ಆಧಾರವಾಗಿದೆ. ಆದರೆ ಬಸವಣ್ಣನವರ ಸಮಕಾಲದಿಂದ ಬಹುಕಾಲದ ವರೆಗೆ ನಿರ್ಮಿತವಾದ, ಅವರಿಗೆ ಸಂಬಂಧಿಸಿದ ವಿಪುಲ ಸಾಹಿತ್ಯದಲ್ಲಿ ಈ ಮಾತು ಹೇಳಲ್ಪಟ್ಟಿಲ್ಲ.

ಆದ್ದರಿಂದ ಬಹುಜನ ಪಂಡಿತರು ಈ ನೂತನ ಅಭಿಪ್ರಾಯವನ್ನು ಒಪ್ಪುವದಿಲ್ಲ. ಬಳ್ಳಾರಿಯ ಶ್ರೀ ಸಿಂದಗಿ ಸಿದ್ದಪ್ಪನವರು ಬರೆದ 'ಬಸವ ಚರಿತ್ರ'ದಲ್ಲಿ 'ಮಾದಿರಾಜ ಮಾದಲಾಂಬಿಕೆಯರಿಗೇ ಚಂದ್ರರಾಜ-ಚಂದ್ರಾಂಬೆಯರೆಂದೂ ಅನ್ನುತ್ತಿರಬಹುದು' ಎಂದು ಹೇಳಲಾಗಿದೆ. ಹೀಗೆಂದರೂ ಮಾದಿರಾಜ ಮಾದಲಾಂಬಿಕೆಯರೇ ಬಸವಣ್ಣನವರ ತಂದೆತಾಯಿಗಳೆಂದು ಹೇಳಿದಂತಾಯಿತು.

ಬಸವಣ್ಣನವರ ಜನ್ಮ ಕ್ರಿ. ಶ. ೧೧೨೩ರಲ್ಲಿ. ಈ ಜನ್ಮಕಾಲದ ವಿಷಯದಲ್ಲಿಯೂ ಒಮ್ಮತವಿಲ್ಲ. ಭೀಮಕವಿಯ ಅಭಿಪ್ರಾಯದ ಕ್ರಿ. ಶ. ೧೧೩೧ ತೀರ ಅಸಮಂಜಸವಾಗಿದೆ. ಕ್ರಿ. ಶ. ೧೧೦೬ ಎಂದು ಇತ್ತೀಚಿನ ಕೆಲವು ಸಂಶೋಧಕರ ಮತ! ಆದರೆ ಇದು ಅಣ್ಣನವರ ಜೀವನದ ಘಟನಾನುಕ್ರಮಗಳಿಗೆ ಹೊಂದುವದಿಲ್ಲ. ಅವುಗಳಿಗೆ ಸರಿಯಾಗುವಂತೆ ಕ್ರಿ. ಶ. ೧೧೨೩ ಎಂದು ಕೆಲವರ ಮತವಿದೆ ಅದು ನನಗೆ ತುಂಬಾ ಗ್ರಾಹ್ಯವಾಗಿದೆ.


೨. ಬಾಲಕ ಬಸವಣ್ಣ

ಅಕ್ಕ ತಮ್ಮಂದಿರು

ವಂದೇ ಶಂಭುಮುಮಾಪತಿಂ ಸುರಗುರುಂ ವಂದೇ ಜಗತ್ಕಾರಣಂ
ವಂದೇ ಪನ್ನಗಭೂಷಣಂ ಮೃಗಧರಂ ವಂದೇ ಪಶೂನಾಂ ಪತಿಂ ॥
ವಂದೇ ಸೂರ್ಯಶಶಾಂಕವಹ್ನಿನಯನಂ ವಂದೇ ಮುಕುಂದಪ್ರಿಯಂ
ವಂದೇ ಭಕ್ತಜನಾಶ್ರಯಂ ಚ ವರದಂ ವಂದೇ ಶಿವಂ ಶಂಕರಂ ॥

ಒಲವು-ನಲಿವುಗಳಿಗಾಗರವಾಗಿದ್ದ ತಮ್ಮನನ್ನು ಮುಂದೆ ಕೂಡ್ರಿಸಿಕೊಂಡು ಕುಸುಮಮಾಲೆಯ ಕಟ್ಟುತ್ತಿದ್ದ ನಾಗಲೆಯು ಈ ಮಂಗಲಪದ್ಯವನ್ನು ತುಂಬುಕಂಠದಿಂದ ಒಮ್ಮೆ ಹಾಡಿದಳು. ಬಳಿಕ ಒಂದೊಂದೇ ಪದವಂತೆ ಹೇಳಿ ಅವನಿಂದ ಅನ್ನಿಸಿದಳು. ಬಸವಣ್ಣನು ಓರಣವಾಗಿ ಕುಳಿತನು. ನಾಗಲೆ ಕೈಮುಗಿದಂತೆ ಮುಗಿದನು. ದೃಷ್ಟಿಯನ್ನು ಒಳಗು ಮಾಡಿದನು. ಆಕೆ ಹೇಳಿದಂತೆ ಪಠಿಸಿದನು. "ಈಗಲೇ ಇವನಿಗೆ ಎಷ್ಟೊಂದು ಆಸಕ್ತಿ ಭಕ್ತಿಯಲ್ಲ!" ಎನ್ನಿಸಿತು ನಾಗಲೆಗೆ! ಅವನನ್ನು ನೆಟ್ಟ ದೃಷ್ಟಿಯಿಂದ ನೋಡಿ ಮನವುಕ್ಕಿಬರಲು ಸೆಳೆದಪ್ಪಿದಳು. ಅಷ್ಟರಲ್ಲಿ ಹೊರಗೆ ಹೊರಟ ಮಾದಿರಾಜನು, 'ಬಸವಾ' ಎಂದು ಕೂಗಲು ಬಸವನು ಓಡಿಹೋಗಿ ತಂದೆಯ ಕೈ ಬೆರಳು ಹಿಡಿದುಕೊಂಡನು. ನಾಗಲೆಯು ಪುಷ್ಪಮಾಲೆಯ ಪೊಟ್ಟಣವನ್ನು ತಂದೆಯ ಕೈಗೆ ಕೊಟ್ಟಳು. ಮಾದಿರಾಜನು ಮಗನೊಡನೆ ಬ್ರಹ್ಮಜ್ಞಾನದ ಸಭೆಗಾಗಿ ಗಹಲೀಶಮಠಕ್ಕೆ ನಡೆದನು. ನಾಗಲೆ ನೋಡಿ ಸಂತೋಷಬಟ್ಟು ನಡುಮನೆಗೆ ನಡೆದಳು.

ನಾಗಲೆಯ ಬೆನ್ನಮೇಲೆ ಬಹಳ ವರ್ಷಗಳ ಬಳಿಕ ಮಾದಲಾಂಬಿಕೆಯು ನೂರಾರು ವ್ರತ-ನೇಮಗಳನ್ನು ಆಚರಿಸಿ ಮಹಾ ವಿಭೂತಿ ಬಸವಣ್ಣನನ್ನು ಹೆತ್ತಿದ್ದಳು. ನಂದಿಯನ್ನು ಪೂಜಿಸಿದ ಫಲವಾಗಿ ಆ ವೃಷಭರಾಜನೇ ತಮ್ಮುದರದಲ್ಲಿ ಜನಿಸಿದನೆಂಬ ನಂಬಿಗೆಯಿಂದ ಮಗುವಿಗೆ 'ಬಸವ'ನೆಂದು ಹೆಸರಿಟ್ಟಿದ್ದರು. ಅಷ್ಟರಲ್ಲಿ ವಯಸ್ಸಾದ ಆ ತಾಯಿ ಆ ವ್ರತಾಚಾರಗಳಲ್ಲಿ





ಬಾಲಕ ಬಸವಣ್ಣ ಮಿಂದ ಪುರಾತನ ಹೊಂಡ (ಪುಣ್ಯತೀರ್ಥ) ಬಾಗೇವಾಡಿ

ಕೃಶಳಾಗಿ ಹೋಗಿದ್ದಳು. ಆ ಭಕ್ತಿಯ ಭರದಲ್ಲಿ ಅದೇ ಕರ್ಮನಿಷ್ಠೆಯ ಸೆಳವಿಗೊಳಗಾದ ಆಕೆಗೆ ಆ ಮಗನ ಲಾಲನೆ-ಪಾಲನೆಗಳಲ್ಲಿ ವಿಶೇಷ ಗಮನವಿರಲಿಲ್ಲ. ಅದು ಪ್ರೌಢೆಯಾದ ನಾಗಲೆಯ ಪಾಲಿಗಾಗಿತ್ತು. ತಮ್ಮನ ಬಗೆಗೆ ನಾಗಲೆಗಿರುವ ಅಕ್ಕರೆಗೆ ಅಳತೆಯಿರಲಿಲ್ಲ. ಅಂದು ಬಸವನ ಮೇಲಿನ ಮಮತೆಗೆ ಹೊಸ ಮುಗುಳೊಡೆದಂತಿತ್ತು ಆಕೆಗೆ ! ಆಗ ಬಸವನಿಗೆ ಎರಡು ವರ್ಷಗಳು !

ಬ್ರಹ್ಮಜ್ಞಾನ ಸಭೆಯ ಮಂಗಲವಾಗಿ, ದೇವಾಲಯದ ವಾದ್ಯಗಳು ಮೊಳಗಿದ ಸ್ವಲ್ಪ ಹೊತ್ತಿನ ಮೇಲೆ ಮಾದಿರಾಜನು, ಮಗನು ಕೇಳುವ ಮುದ್ದು ಮಾತಿನ ಪ್ರಶ್ನೆಗಳಿಗೆ ಉತ್ತರ ಕೊಡುತ್ತ ಮನೆಗೆ ಬಂದನು; ನಾಗಲೆ ಎದುರಿಗಿದ್ದಳು; ಬಸವನನ್ನು ಎತ್ತಿಕೊಂಡಳು. ತಾನು ನೋಡಿದುದನ್ನು ಕೇಳಿದುದನ್ನು ಆತನು ದಿನದಂತೆ ಅಕ್ಕನಿಗೆ ಆತುರದಿಂದ ಹೇಳಿದನು. ಮತ್ತೆ ಅವರಿಬ್ಬರಲ್ಲಿ ಹಲವು ಹಾಡು-ಆಟ-ಪಾಟಗಳು ನಡೆದವು. ಆಗ ತಾಯಿ ಬಸವನನ್ನು ಕರೆದು ಪಾಲೋಗರವ ಉಣ್ಣಿಸಿದಳು. ಬಳಿಕ ಬಸವ ಬಂದು ತಮ್ಮಿಬ್ಬರಿಗಾಗಿ ಅಕ್ಕ ಹಾಸಿದ ಹಾಸಿಗೆಯ ಮೇಲೆ ಮಲಗಿದನು.

ತನ್ನ ಪೂಜೆ ಪ್ರಸಾದ ಸೇವನೆಗಳನ್ನು ಮುಗಿಸಿ ನಾಗಲೆಯು ತಮ್ಮನ ಬಳಿಗೆ ಬಂದು ಸೊಡರಕುಡಿಯನ್ನೇರಿಸಿ ಚೆನ್ನಾದ ಬೆಳಕಿನಲ್ಲಿ ಹೊದಿಕೆ ಸರಿಸಿ ನೋಡಿದಳು; ದಿವ್ಯರೂಪ ! ವಿಶಾಲವಾದ ಹಣೆ ! ನೀಳವಾದ ಮೂಗು ! ದೊಡ್ಡ ಕಣ್ಣುಗಳು ನಸುದೆರೆದು ನಿದ್ರೆಯಲ್ಲಿ ನಿಶ್ಚಲಿತವಾಗಿದ್ದವು. ಯಾವ ನೋವೂ ಸೋಂಕದ ಆನಂದ ಭಾವವು ಮುಖದಲ್ಲಿ ಚಮಕಿಸುತ್ತಿತ್ತು. ನಾಗಲೆಯು ನೋಡಿಯೇ ನೋಡಿದಳು; ತೃಪ್ತಿಯೇ ಇಲ್ಲ. ಕಂದನ ಕೈ ಕಾಲು ಬೆರಳುಗಳನ್ನು ಹಿಡಿದು ನೋಡಿದಳು 'ಏನು ಲಕ್ಷಣ! ತಮ್ಮ ಮೂಲ ಗುರು ಈಶ್ವರ ಗಹಲೀಶರ ಕರುಣೆ, ಶಿವನ ವರ ಈ ತಮ್ಮ!' ಎಂದು ಅಲ್ಲಿಯೇ ಮಗ್ಗುಲಾಗಿ ಮಗುವನ್ನು ಮುಂದೆಳೆದು ಅವಚಿಕೊಂಡು ತುಂಬ ಹೊದಿಸಿ ಮೈಮೇಲೆ ಕೈಯೆಳೆದಳು. ಅವಳಲ್ಲಿ ಗುಪ್ತವಾಗಿದ್ದ ಮಾತೆಯ ಮಮತೆ ಆಗಲೇ ಮೈಮನಗಳನ್ನು ವ್ಯಾಪಿಸಿತ್ತು. ಆದರ್ಶ ಪುರುಷನಾಗುವಂತೆ ಅವನ ಭವ್ಯ ಭವಿಷ್ಯವನ್ನು ಬಗೆಬಗೆಯಾಗಿ ಕಲ್ಪಿಸುವದರಲ್ಲಿ ಅವಳಿಗೆ ಆನಂದವೇ ಆನಂದ !

ಬಸವಣ್ಣ ಹುಟ್ಟುವ ಮೊದಲು ಹದಿನೈದು ವರುಷ ನಾಗಲೆಯೊಬ್ಬಳೇ ಮಾದಿರಾಜನಿಗೆ ಮಗಳು ! ಲಕ್ಷಣವಂತೆ ! ತಂದೆತಾಯಿಗಳ ಸಲುಗೆಯಲ್ಲಿ ಬೆಳೆದವಳು. ಆದರೂ ಹಟಮಾರಿಯಲ್ಲ; ಗರ್ವಿಷ್ಟಳಲ್ಲ; ಆದರೆ ಸ್ವತಂತ್ರ ವಿಚಾರದವಳೂ ಸತ್ಯವನ್ನು ಮಂಡಿಸುವಲ್ಲಿ ಧೀರೆಯೂ ಆಗಿದ್ದಳು. ತಂದೆಯಲ್ಲಿಯೇ ತಕ್ಕ ಶಿಕ್ಷಣ ಪಡೆದಿದ್ದಳು. ಪ್ರೌಢೆಯಾದಂತೆ ನ್ಯಾಯ-ನೀತಿ-ಧರ್ಮಗಳ ವಿಷಯದಲ್ಲಿ ಆಸಕ್ತಿಯನ್ನು ಹೆಚ್ಚಿಸಿಕೊಂಡು ಸಾತ್ವಿಕತೆಯ ಬೆಳಕು ಬೀರತೊಡಗಿದಳು. ಪ್ರಾಪಂಚಿಕ ವಿಷಯಗಳನ್ನು ಅಷ್ಟು ಗಮನಿಸುತ್ತಿರಲಿಲ್ಲ. ಮಗಳ ಬುದ್ಧಿಪ್ರಭಾವಕ್ಕೆ ಒಳಗಾದ ಮಾದಿರಾಜನು ಆಕೆಯ ಒಲವಿನಂತೆಯೇ ವರ್ತಿಸುತ್ತಿದ್ದನು. ಈಗ ಬಸವಣ್ಣನ ಲೀಲೆ ಅವಳ ಭಾವನೆಯಲ್ಲಿ ತನ್ನ ಪ್ರಭಾವವನ್ನು ಬೀರಿದ್ದಿತು. ಪವಿತ್ರವಾದ ಮಾತೃಭಾವನೆಯು ಅವಳಲ್ಲಿ ಅಂಕುರಿಸಿದ್ದಿತು. ಆಕೆಯ ಸ್ವತಂತ್ರ ವಿಚಾರಗಳ ಮಧ್ಯದಲ್ಲಿ ಶ್ರದ್ಧೆಯೂ ಸಾವಧಾನವೂ ತಲೆದೋರಿದ್ದವು. ದಿಟ್ಟತನದ ಸ್ಥಳದಲ್ಲಿ ನಯವು ನೆಲೆಗೊಂಡಿದ್ದಿತು, ತಂದೆಯ ಮಾತುಗಳಲ್ಲಿ ಅಕೆಗೆ ಗೌರವಾದರಗಳು ಇಮ್ಮಡಿ-ಮುಮ್ಮಡಿಯಾಗಿದ್ದವು. ಮದುವೆಯೆಂದರೆ ಅದೊಂದು ಪಾರತಂತ್ರ್ಯವೆಂಬ ಭಾವನೆಯಿಂದ ಉದಾಸೀನಳಾಗಿರುತ್ತಿದ್ದ ನಾಗಲೆ ಈಗ ತಂದೆಯ ಆ ಅಭಿಮತವನ್ನು ಅನುಮೋದಿಸುವವಳಾಗಿದ್ದಳು. ಆದರೆ ಪೂಜಾಧ್ಯಾನಗಳಲ್ಲಿ ಮೈಮರೆಯುತ್ತಿದ್ದ ಆಕೆ, ತನ್ನ ಪಾರಮಾರ್ಥಿಕ ಸಾಧನೆಗೆ ಅನುಕೂಲವಾಗುವ ಸಂಬಂಧವನ್ನು ಮಾತ್ರ ಬಯಸಿದ್ದಳು.

ಮುಂದೆ ಮಾದಿರಾಜನ ನಂಟು-ಸಂಬಂಧಿಕನೂ ನಚ್ಚಿನವನೂ ಆದ ಶಿವದೇವನೊಡನೆ ನಾಗಲಾಂಬೆಯ ಮದುವೆಯಾಯಿತು.

ಎಲ್ಲರೂ ಶಿವನ ಮಕ್ಕಳು

ಮೂರು ನಾಲ್ಕು ವರ್ಷದವನಾಗುತ್ತಿದ್ದ ಮಗನ ಚುರುಕು ಬುದ್ಧಿಗೆ ಮಾದರಸನು ದಂಗಾಗಿ ಹೋಗಿದ್ದನು. ತಾನು ಹೇಳುವ ನೀತಿ ಶಾಸ್ತ್ರ ತತ್ವಗಳ ಬಿಡಿ ಮಾತುಗಳನ್ನು ಆತನು ಸೂಜಿಗಲ್ಲಿನಂತೆ ಹಿಡಿದುಕೊಳ್ಳುತ್ತಿದ್ದನು. ಸಮರ್ಪಕವಾದ ಪ್ರಶ್ನೆ ಕೇಳುತ್ತಿದ್ದನು. ಗಹಲೀಶಮಠದಲ್ಲಿ ಪ್ರವಚನ ನಡೆದಾಗ ನಿತ್ಯವೂ ತಪ್ಪದೆ ಹೋಗಿ ಕುಳಿತಿರುತ್ತಿದ್ದನು. ಬಾಲ್ಯದ

ಲ್ಲಿಯೇ ಇಂತಿರುವ ಜಿಜ್ಞಾಸೆಯು, ಅವನು ಪರಮ ಭಕ್ತನೂ ಮಹಾಜ್ಞಾನಿಯೂ ಆಗುವನೆಂಬುದನ್ನು ಸೂಚಿಸುತ್ತಿತ್ತು. ತಂದೆಯು ಅವನನ್ನು ಪಾಠಶಾಲೆಗೆ ಕಳುಹಿದನು.

*   *   *   *

ಬಸವಣ್ಣನೊಮ್ಮೆ ಗ್ರಾಮದ ಹೊರವಲಯದಲ್ಲಿ ಗಹಲೀಶ ಮಠದ ದಾರಿಯಲ್ಲಿ ನಡೆದಿದ್ದನು. ಆ ಬೀದಿಯ ಬದಿಯ ಬಂಡೆಗಲ್ಲಿನ ಮೇಲೆ ದೀನನಾದ ಹುಡುಗನೊಬ್ಬನು ಬಳಪದಿಂದ ಏನೋ ಬರೆಯುತ್ತ ನಿಂತುದನ್ನು ಕಂಡನು. ಕೂಡಲೆ ಅವನ ಹತ್ತಿರ ಬಂದನು. ಬಸವನನ್ನು ಕಂಡು ಆ ಬಡಬಾಲಕನು ಸರಿದು ನಿಂತನು. 'ಸರ್ವಜೀವಿಗಳಲ್ಲಿ ಶಿವನಿದ್ದಾನೆ' ಎಂದು ಅಲ್ಲಿ ಆತ ಬರೆದುದನ್ನು ನೋಡಿ ಬಸವಣ್ಣನು ಬಗೆದುಂಬಿಬಂದು ಆತುರದಿಂದ ಆ ಬಂಧುವನ್ನು ಅಪ್ಪಿಕೊಳ್ಳಹೋದನು.

"ದೂರ, ದೂರ ಒಡೆಯ, ನನ್ನನ್ನು ಮುಟ್ಟಬಾರದು."

"ಯಾಕೆ ಅಣ್ಣಾ ? ಹೀಗೇಕೆ ಹೇಳುವೆ ?"

"ನಮ್ಮದು ಕಡಿಮೆಯ ಕುಲ !"

"ಪಾಠಶಾಲೆಯಲ್ಲಿ ಯಾರೂ ಮುಟ್ಟುವದಿಲ್ಲವೇ ?"

"ನಮಗೆಲ್ಲಿ ಪಾಠಶಾಲೆ ! ಅಲ್ಲಿ ನಮ್ಮನ್ನು ಕರೆದುಕೊಳ್ಳುವದೇ ಇಲ್ಲ."

"ಹಾಗಾದರೆ ಎಲ್ಲಿ ಕಲಿತದ್ದು ಈ ಪಾಠವನ್ನು ?"

"ಹಿಂದುಳಿದವರ ಬಂಧು ಪಂಡಿತ ಚಂದಿರಾಜರ ಹತ್ತಿರ ! ಅವರು ದೀನದಲಿತರ ತಂದೆಯಾಗಿದ್ದರು. ಮಾನವರಲ್ಲಿ ಕುಲಭೇದ ಮಾಡದೆ ನಡೆದದ್ದರಿಂದ ಅವರನ್ನು ಊರವರು ಹೊರಗಿಟ್ಟಿದ್ದರು. ಅದೇ ಕೊರಗಿನಲ್ಲಿ ನಿನ್ನೆ........"

ಆ ಬಾಲಕನಿಗೆ ಅಳು ಬಂದಿತು. ಬಸವಣ್ಣನ ಕಣ್ಣಲ್ಲಿಯೂ ನೀರೂರಿತು. ಬಸವನು ಹಾತೊರೆದು ಅವನ ಹೆಗಲಮೇಲೆ ಕೈಯಿಕ್ಕಿ ಕರೆದುಕೊಂಡು ಬಂದು ಕಟ್ಟೆಯ ಮೇಲೆ ಕುಳಿತನು. ಬಹಳ ಹೊತ್ತಿನವರೆಗೆ ಮಾತನಾಡಿದರು. ಚಂದಿರಾಜನ ಹತ್ತಿರ ತಿರಸ್ಕೃತ ಸಮಾಜದವರು ಬರು

ತ್ತಿದ್ದುದನ್ನೂ ಪಂಡಿತರು ಅವರಿಗೆ ಭಕ್ತಿ ನೀತಿ ಧರ್ಮಗಳನ್ನು ಬೋಧಿಸುತ್ತಿದ್ದುದನ್ನೂ ಮಕ್ಕಳಿಗೆ ಪಾಠ ಹೇಳುತ್ತಿದ್ದುದನ್ನೂ ಕೇಳಿ ಬಸವಣ್ಣ ಸಂತೋಷಪಟ್ಟನು. ಅಂತಹ ಪಂಡಿತರು ಗತಿಸಿ ಅವರ ಪತ್ನಿ ಚಂದ್ರಾಂಬೆ ನೆಲಹಿಡಿದುದನ್ನು ಕೇಳಿ ಕಳವಳಿಸಿದನು. "ಅವರ ಕುಟೀರದ ಮುಂದೆ ನಿನ್ನ ಗೆಳೆಯರೊಡನೆ ಆಡಲು ನಾನೂ ಬರಲೇ ? ಆ ತಾಯಿಯನ್ನು ನೋಡಬೇಕು" ಎಂದನು. ಅದಕ್ಕೆ ಆ ಬಾಲಕ ಹೇಳಿದನು :

"ಬೇಡಯ್ಯಾ ! ನಾಡಪ್ರಭುವಿನ ಮಗ ನೀನು ! ನಿನ್ನ ತಂದೆಗೂ ಕೊಂವರೆ ತಂದಾರು ಅಗ್ರಹಾರದವರು !"

ಬಸವಣ್ಣನ ಮುಖ ಸಪ್ಪಗಾಯಿತು. 'ಆಗಲಿ ನೋಡೋಣ !' ಎಂದು ಎದ್ದು ಮನೆಯ ಕಡೆಗೆ ಬಂದನು.

"ಮಾನವರೆಲ್ಲ ದೇವರ ಮಕ್ಕಳು ! ಆ ದೇವನೊಬ್ಬನೇ ! ಕುಲದಲ್ಲಿ ಹೆಚ್ಚು ಕಡಿಮೆಯೇಕೆ ? ಎಲ್ಲ ಕುಲದವರು ಪಾಠಶಾಲೆಗೆ ಬರಬಾರದೇ ?"

ಎಂದು ಒಮ್ಮೆ ಸಮಯ ನೋಡಿ ಅಕ್ಕನನ್ನು ಕೇಳಿದನು.

"ಒಂದು ಗುಂಪಿನವರ ಸ್ವಾರ್ಥದಾಟವಿದು ! ಈ ಆಟ ಬಹುಕಾಲ ನಡೆದು ರೂಢವಾಗಿ ಬಿಟ್ಟಿದೆ‥ ...." ಎಂದು ಹೇಳಿ ನಾಗಲಾಂಬೆಯು ತಾತ್ಕಾಲಿಕ ನಿರುಪಾಯವನ್ನು ಸೂಚಿಸಿದಳು. ಬಸವಣ್ಣನಿಗೆ ಸಮಾಧಾನವಾಗಲಿಲ್ಲ.

ಮತ್ತೊಂದು ದಿನ ತಂದೆಯೊಡನೆ ಅದೇ ದಾರಿಯಿಂದ ಗಹಲೀಶಮಠಕ್ಕೆ ಹೋಗುತ್ತಿದ್ದಾಗ ಬಸವನು ಒಂದು ಕಡೆ ಕೈ ತೋರಿಸಿ ತಂದೆಯನ್ನು ಕೇಳಿದನು.

"ಅಪ್ಪಾ ಆ ಓಣಿಯ ಮಕ್ಕಳನ್ನು ಪಾಠಶಾಲೆಯಲ್ಲಿ ಕರೆದುಕೊಳ್ಳುವದಿಲ್ಲವೇಕೆ ? ನೀವು ಹೇಳಬೇಕು; ಕೇಳಿ ಸುಮ್ಮನಿರುವಿರಾ ?"

"ಅವರು ಅಂತ್ಯಜರು; ಅವರಿಗೆ ಸಂಸ್ಕಾರವಿಲ್ಲ; ವಿದ್ಯೆಯೂ ಬೇಡ. ಉಚ್ಚ ಜಾತಿಯವರ ಸೇವೆ ಅವರ ಕಾರ್ಯ !"

"ಯಾರು ಮಾಡಿದ್ದಾರೆ ಹೀಗೆ ? ದೇವರೇ ?"

"ದೇವವಾಣಿ ವೇದ ! ವೇದದಲ್ಲಿ ಹೀಗೆ ಹೇಳಿದೆ; ಸಂಪ್ರದಾಯ ಉಂಟಾಗಿದೆ."

"ಅವರೂ ಶಿವನ ಮಕ್ಕಳೇ ಅಲ್ಲವೇ ?"

"ಅದೆಲ್ಲಾ ನಿನಗೆ ಈಗೇಕೆ ?"

ತಂದೆಯು ಏರುದನಿಗೆ ಬಸವಣ್ಣ ಸುಮ್ಮನಾದನು. ಆದರೆ ಅವನ ಒಳ ದನಿಯು 'ಈಗೇಕೆ ?........ಯಾವಾಗ ?........' ಎಂದು ಮೊರೆಯಿತು.

ಪ್ರತಿಭಾವಂತ

ಐದಾರು ವರ್ಷದವ ಬಸವಣ್ಣ ! ಪಾಠಶಾಲೆಯಲ್ಲಿ ಅಧ್ಯಾಪಕನು ಚಿಕ್ಕವರ ಹಲಗೆಗಳ ಮೇಲೆ 'ಶ್ರೀ' ಎಂದು ಬರೆದು ತೀಡಲು ಹೇಳಿದನು. ಆಗ ಬಸವನು "ಆ 'ಶ್ರೀ' ಕಾರದ ಅರ್ಥವೇನು" ಎಂದು ಕೇಳಿದನು.

"ಅಷ್ಟು ದೊಡ್ಡ ಮಾತು ನಿನಗೇಕೆ ? ಸುಮ್ಮನಿರು." ಎಂದು ಗುರು ಗದ್ದರಿಸಿದನು.

ಅಂದು ಬಸವಣ್ಣನಿಗೆ ಜತೆಗಾರರೊಡನೆ ನಡೆದ ಪಾಠದಲ್ಲಿ ಮನವಿರ ಲಿಲ್ಲ. ಸುಮ್ಮನೆ ಕುಳಿತು ಮನೆಗೆ ಬಂದನು. ರಾತ್ರಿಯಲ್ಲಿ ನಿದ್ರೆ ಬರ ಲಿಲ್ಲ. ಶ್ರೀ ಅಂದರೇನು ? ಪ್ರವಚನದಲ್ಲಿ ತಾನು ಕೇಳಿದ ಪಂಚಾಕ್ಷರಿ, ಪ್ರಣವ, ಷಡಕ್ಷರಿ, ಶಿವ, ಶಕ್ತಿ, ಮಾಯೆ, ಬಂಧ, ಮೋಕ್ಷ, ಸಾಧನೆ, ಸಾಕ್ಷಾತ್ಕಾರ ಮುಂತಾದ ಪಾರಮಾರ್ಥಿಕ ಶಬ್ದಗಳ ಅರ್ಥವಿವರಣೆಗಳನ್ನೆಲ್ಲ ಸ್ಮರಿಸುತ್ತ ಅವುಗಳ ಸಂಯೋಜನೆ ಸಂಬಂಧಗಳನ್ನು ಉಪಯೋಗಿಸಿಕೊಂಡು ತಾನೊಂದು ಬಗೆಯಿಂದ ಶ್ರೀಕಾರದ ಅರ್ಥವನ್ನು ನಿರ್ಣಯಿಸಿಕೊಂಡನು. ತಾನು ಗ್ರಹಿಸಿದುದನ್ನು ಮರುದಿನ ಅಧ್ಯಾಪಕನ ಸಮ್ಮುಖದಲ್ಲಿ ವಿವರಿಸಿದನು.

'ಶಿವ ಪಂಚಾಕ್ಷರಿಯು ಓಂ ಪ್ರಣವದಲ್ಲಿ ಸೂಕ್ಷ್ಮವಾಗಿ ನೆಲಿಸಿರುವದ ರಿಂದ ಓಂಕಾರದಿಂದ ಆರಂಭಿಸಿ ಷಡಕ್ಷರ ಮಂತ್ರವನ್ನು ಹೇಳುತ್ತಾರೆ. ಹಾಗೆಯೇ ಸರ್ವ ಶುಭವೂ ಸಕಲ ವಿದ್ಯಾಶಾಸ್ತ್ರಗಳೂ ಶ್ರೀಕಾರದಲ್ಲಿ ಸೂಕ್ಷ್ಮ ವಾಗಿ ನೆಲಸಿರುವದರಿಂದ ಅದನ್ನು ಮೊದಲು ಪಠಿಸುವದು ಮಂಗಲಕರ ವಾಗಿದೆ. ಎಲ್ಲ ವಿದ್ಯೆಗಳಿಗೂ ಶಿವಸಾಕ್ಷಾತ್ಕಾರವೇ ಕೊನೆಯ ಗುರಿಯಾಗಿ ರುವದರಿಂದ ವಿದ್ಯಾಮೂಲವಾದ ಶ್ರೀಕಾರವೂ ಪ್ರಣವವೇ ಆಗಿರುವದು.'

ಮೇಲಿನ ವರ್ಗದ ವಿದ್ಯಾರ್ಥಿಗಳೂ 'ಸೈ' ಎಂದು ಚಪ್ಪಾಳೆ ತಟ್ಟಿದರು. ಅಧ್ಯಾಪಕನಿಗೆ ಆನಂದವಾಗಲಿಲ್ಲ; ಮುಖಭಂಗವಾಯಿತು. ಆತನು ಬಸ

ವಣ್ಣನ ಕೈ ಹಿಡಿದು ಕರೆದುಕೊಂಡು ಬಂದು, ಪಂಡಿತರೊಡನೆ ಮಾತಾಡುತ್ತ ಕುಳಿತ ಮಾದಿರಾಜನ ಮುಂದೆ ನಿಂತನು.

"ಪ್ರಭು ನಿಮ್ಮ ಈ ಮಗನಿಗೆ ಕಲಿಸುವದು ನನ್ನಿಂದಾಗದು ಶ್ರೀಕಾರದ ಅರ್ಥ ಹೀಗೆಂದು ದೊಡ್ಡ ಉಪನ್ಯಾಸವನ್ನೇ ಮಾಡಿಬಿಟ್ಟು ಪ್ರೌಢ ಪಾಠಕರೆದುರಿನಲ್ಲಿ ನನಗೆ ಅಪಚಾರ ಮಾಡಿದನು........"ಎಂದು ಅರಚಿದನು.

ಕುಳಿತವರು ಆತನ ಮುಖ ನೋಡಿದರು. ಮಾದರಸು 'ಏನಪ್ಪಾ ಬಸವಾ, ನಿನ್ನ ಅರ್ಥವಿವರಣೆ ? ನಮಗಷ್ಟು ತಿಳಿಸು' ಎಂದನು.

ಬಸವ ನೆಟ್ಟಗೆ ನಿಂತನು. ತಾನು ತಿಳಿದುದನ್ನು ಮತ್ತೆ ವಿವರಿಸಿ ಹೇಳಿದನು. ಪಂಡಿತರು ಬಾಲಕನ ಗ್ರಹಿಕೆ-ನಿರೂಪಣೆಗಳಿಗೆ ತಲೆದೂಗಿ ಅಧ್ಯಾಪಕನತ್ತ ಉಪಹಾಸದ ನಗೆ ಬೀರಿದರು; ಬಸವಣ್ಣ ಒಳ್ಳೆ ಪ್ರತಿಭಾವಂತನೆಂದು ಹೊಗಳಿದರು. ಅಧ್ಯಾಪಕ ಕಾಲು ಕಿತ್ತಿದ್ದನು. ಒಬ್ಬ ಹಿರಿಯನು ಪಾಠಶಾಲೆಯುವರೆಗೆ ಹೋಗಿ ಅಧ್ಯಾಪಕನನ್ನು ಸಮಾಧಾನಗೊಳಿಸಿ ಬಸವಣ್ಣನನ್ನು ಕೂಡ್ರಿಸಿ ಬಂದನು.

ಮುಂದೆ ಪಾಠಶಾಲೆಯ ನಡೆವಳಿಕೆಯು ಬಸವಣ್ಣನಿಗೆ ಹಿಡಿಸಲಿಲ್ಲ. ಬೋಧೆಯೂ ತೃಪ್ತಿಯನ್ನುಂಟುಮಾಡಲಿಲ್ಲ. ಮಠದ ಪ್ರವಚನಗಳಲ್ಲಿಯೂ ಒಂದು ಭಾಗವನ್ನು ಮೆಚ್ಚಿದರೆ ಒಂದು ಭಾಗದಲ್ಲಿ ಸಮಾಧಾನವಾಗದೆ ಚಡಪಡಿಸುವನು. ನಗರದ ಹೊರವಲಯದಲ್ಲಿ ಹೆಚ್ಚು ಅಡ್ಡಾಡುವನು. ಕಷ್ಟ ತಾಪತ್ರಯಗಳಿದ್ದಲ್ಲಿ ಕರುಳು ಕರಗಿಸುವನು. ಪ್ರಬಲರ ದುರಾಗ್ರಹಗಳಿಗೆ ಅಸಹ್ಯಪಡುವನು. ಒಮ್ಮೆ ದಲಿತ ವರ್ಗದ ಚೊಕ್ಕಟವಾದ ಮತಿವಂತ ಮಕ್ಕಳನ್ನು ಕರಕೊಂಡು ಪಾಠಶಾಲೆಗೆ ಹೋದನು. 'ಇವರನ್ನು ಪಾಠಶಾಲೆಗೆ ಸೇರಿಸಿಕೊಂಡು ಪಾಠ ಹೇಳಬೇಕು' ಎಂದು ಅಧ್ಯಾಪಕರಿಗೆ ಬಿನ್ನವಿಸಿದನು. ಅಧ್ಯಾಪಕರೂ ವಿದ್ಯಾರ್ಥಿಗಳೂ ಕೂಡಿಯೇ ಅವರನ್ನು ತಿರಸ್ಕರಿಸಿ ಹೊರಗೆ ಹಾಕಿದರು.

ತಂದೆಯ ತಲೆಯಲ್ಲಿ

ಅಂದಿನಿಂದ ಬಸವಣ್ಣನ ಭಾವನೆಗಳಲ್ಲಿ ಬಹಳ ಬದಲಾವಣೆಗೆ ಆರಂಭವಾಯಿತು. ಮನಸ್ಸು ಹಲವು ಸಮಸ್ಯೆಗಳಿಗೆ ಆಗರವಾಯಿತು. ತಂದೆಯ

ಹತ್ತಿರ ಬರುವ ಮಹಾಜನರ ಮಾತುಗಳಲ್ಲಿಯೂ ಪ್ರವಚನಸಭೆಯಲ್ಲಿಯೂ ಕೇಳುತ್ತಿದ್ದ ಸಂಗಮ ಗುರುಕುಲ (ಮಹಾವಿದ್ಯಾಲಯ)ದ ಖ್ಯಾತಿಯೂ, ಕುಲಪತಿ ಜಾತವೇದಿ ಮುನಿಗಳ ಕೀರ್ತಿಯೂ ನೆನಹಿಗೆ ಬಂದು ಅವನ ಆತ್ಮ ದಾಹಕ್ಕೆ ಶಾಂತಿಯನ್ನು ಉಂಟುಮಾಡುವ ಆಸೆಯನ್ನು ಹುಟ್ಟಿಸಿದವು. 'ಅಲ್ಲಿಯಾದರೂ ಈ ತೊಡಕು-ತೊಂದರೆಗಳಿಗೆ, ಕಷ್ಟ ಕಾರ್ಪಣ್ಯಗಳಿಗೆ ಪರಿಹಾರ ದೊರೆಯಬಹುದೇ' ಎಂದು ಹಾತೊರೆಯುತ್ತಿದನು. ಮುಂದೆ ಕೂಡ್ರಿಸಿಕೊಂಡು ಮಮತೆಯಿಂದ ಮೈದಡವುವ ನಾಗಕ್ಕನಲ್ಲಿ ಮಾತ್ರ ತನ್ನ ಒಳಬ್ಬಗೆಯ ನೋವನ್ನು ತೋಡಿಕೊಳ್ಳುತ್ತಿದ್ದನು. ಆಕೆ ಅತನ ನವೋದಿತ ವಿಶಾಲ ಭಾವನೆಗಳಿಗೆ ಹಿಗ್ಗಿ ಪ್ರೋತ್ಸಾಹ ಕೊಡುತ್ತಿದ್ದಳು. ಅವಳೂ ಭಾಗ್ಯ ವಂತೆ !

ಬಸವಣ್ಣನಲ್ಲಿ ಅಸಾಮಾನ್ಯ ಬುದ್ಧಿಶಕ್ತಿ, ಜ್ಞಾನದೃಷ್ಟಿ, ತತ್ವಜಿಜ್ಞಾಸೆ, ದಯಾಧರ್ಮದಲ್ಲಿ ಆಸಕ್ತಿ, ನಿಶ್ಚಲವಾದ ಧ್ಯಾನವೃತ್ತಿ ಮುಂತಾದ ಉಚ್ಚತಮ ಗುಣಗಳು ಎಡೆವಿಡದೆ ಪ್ರಕಟವಾಗಿ ದಿನದಿನಕೆ ಬೆಳೆಯುತ್ತಿರುವದನ್ನು ತಿಳಿದು ಮಾದರಸನಿಗೆ ಪರಮಾಶ್ಚರ್ಯವಾಗಿತ್ತು ! ಒಳಗೆ ಮಗನ ಬಗೆಗೆ ಈ ಅದ್ಭುತ ಆನಂದವನ್ನು ಅನುಭವಿಸುತ್ತಿದ್ದರೂ ಹೊರಗೆ ಸಮಾಜದಲ್ಲಿ ಬಸವಣ್ಣನ ನಡೆವಳಿಕೆ ಅವನಿಗೊಂದು ಸಮಸ್ಯೆಯಾಗಿತ್ತು. ತಾನು ಬಾಗೇವಾಡಿ ೧೨ ಗ್ರಾಮಗಳ ನಾಡಪ್ರಭು; ಗಹಲೀಶ ಜಗದ್ಗುರುಗಳಿಂದ ನೇಮಕವಾದ ಪಾಶುಪತಶೈವ ಮಠಾಧ್ಯಕ್ಷರ ಪರಂಪರೆಯಲ್ಲಿ ಬಂದವನು. ಸಮಾಜದಲ್ಲಿ ವರ್ಣಾಶ್ರಮ ಧರ್ಮಾನುಸರಣೆಗೆ ಮಾರ್ಗದರ್ಶಕನಾಗಿರಬೇಕಾಗಿತ್ತಲ್ಲದೆ, ರಾಜಕೀಯವಾಗಿ ಆ ಧರ್ಮರಕ್ಷಕನೂ ಆಗಿರಬೇಕಾದ ಪ್ರಸಕ್ತಿ ಇತ್ತು. ಬಸವಣ್ಣನನ್ನು ಈ ಶುಷ್ಕ-ಸಾಂಪ್ರದಾಯಿಕ ಧರ್ಮಾಚರಣೆಗೆ ಹಚ್ಚುವದು ಸಾಧ್ಯವಿರಲಿಲ್ಲ. ಹಾಗೆಯೇ ಅವನ ಪ್ರಕಾಶಮಯವಾದ ಸ್ವತಂತ್ರ ವಿಚಾರಗಳನ್ನು ನಿರಾಕರಿಸುವದಕ್ಕೂ ಮನಸ್ಸಿರಲಿಲ್ಲ. ಹೀಗೆ ಮಾದಿರಾಜನು ಬಸವಣ್ಣನ ೮ ವರ್ಷಗಳ ವಯಸ್ಸಿನ ಸಮಯದಲ್ಲಿ ಸಂದಿಗ್ಧ ಪರಿಸ್ಥಿತಿಯಲ್ಲಿ ಪೇಚಾಡುತ್ತಿದ್ದನು. ಹೀಗಿದ್ದರೂ ಮಾದರಸನ ಒಳಬಗೆಯು ತನ್ನ ಮಗನು ಮಹಾಪುರುಷನಾಗುವ ಕನಸು ಕಾಣುತ್ತಿದ್ದಿತು. ಅವನ ಉಪನಯನವನ್ನು ನೆರವೇರಿಸುವ ವಿಚಾರವೂ ಮೂಡಿಬಂದಿದ್ದಿತು.

ಹೀಗಿರುವಾಗ ಒಂದು ದಿನ ಅಗ್ರಹಾರದ ಪಂಡಿತೋತ್ತಮ ರುದ್ರ ಭಟ್ಟರ ಚಿರಂಜೀವನ ಉಪನಯನದ ಅಂಗವಾಗಿ ವಟುಗಳ ಮೆರವಣಿಗೆ ಹೊರಟಿದ್ದಿತು. ಮುಖ್ಯಬೀದಿಗಳಲ್ಲಿ ನೀರು ಹೊಡೆದು ಶುಚಿಗೊಳಿಸಿ ಕಾಯ್ದುಕೊಂಡಿದ್ದರು. ಉತ್ಸವವು ಬರುವ ಹೊತ್ತಿಗೆ ಬಸವಣ್ಣನು ತನ್ನ ಗೆಳೆಯರೊಂದಿಗೆ ಆ ಬೀದಿಯಲ್ಲಿ ಬಂದನು. ಆ ಗೆಳೆಯರಲ್ಲಿ ಕೆಲವರು ಕೆಳಗಿನ ಕುಲದವರಿದ್ದರು ಕರ್ಮಚಾರಿಗಳು ಅಂಥವರನ್ನು ಹಿಡಿದು ಥಳಿಸಿದರು. ಒಬ್ಬ ಬಡಬಾಲಕನಿಗೆ ಬಹಳ ಪೆಟ್ಟಾಯಿತು. ಬಸವಣ್ಣನು ಅವನನ್ನು ಕರಕೊಂಡು ಹೋಗಿ ಅವನ ಮನೆಗೆ ಮುಟ್ಟಿಸಿ ಸಂತೈಸಿದನು. ತಾನು ಮನೆಗೆ ಬಂದು ಮೌನವಾಗಿ ಮಲಗಿಕೊಂಡು ಬಿಟ್ಟನು. ಅಕ್ಕ ಗಾಬರಿಯಿಂದ ಬಂದು ಪ್ಪೆದಡವಿ 'ಯಾಕಪ್ಪ ಹೀಗೆ ?' ಎಂದಳು. ಅಕ್ಕನ ಮುಂದೆ ಆತ್ಮವನ್ನು ಬಚ್ಚಿಡುವದು ಬಸವನಿಗೆ ಸಾಧ್ಯವಿಲ್ಲ ನಡೆದ ಸಂಗತಿ ಹೇಳಿದನು. ಕೇಳಿ ನಾಗಲಾಂಬೆಯೂ ಮಮ್ಮಲ ಮರುಗಿದಳು. ಈ ಎರಡೂ ಪವಿತ್ರಾತ್ಮಗಳು ಒಂದರ ಪ್ರಭಾವದಿಂದೊಂದು ವಿಕಾಸಗೊಳ್ಳಲು ಅಣಿಯಾಗುತ್ತಿದ್ದವು.

ಮರುದಿನ ಮಾದರಸನು ಬಸವಣ್ಣನಿಗೆ ಬೇಗನೆ ಉಪನಯನವನ್ನು ಮಾಡುವ ವಿಚಾರವನ್ನು ಪ್ರಕಟಿಸಿದನು. ನಾಗಲಾಂಬೆ ಕಾತರಗೊಂಡಳು. ಬಸವಣ್ಣ ತಂದೆಯ ಹತ್ತಿರ ಬಂದು ವಿನಯದಿಂದ ಹೇಳಿದನು :

"ಒಣ ಕರ್ಮಾಚಾರದ ಬಂಧನದಲ್ಲಿ ಸಿಲುಕಿಸುವ ಉಪನಯನ ಸಂಸ್ಕಾರವು ನನಗೆ ಬೇಡ ! ಮತ್ತಿದೇತಕೆ ? ನಾನೊಲ್ಲೆ ! ಸಂಗಮದ ವಿದ್ಯಾಲಯದಲ್ಲಿ ಕಲಿಯುವ ಆಸೆ ನನಗೆ ಬಲವಾಗಿದೆ. ದಯವಿಟ್ಟು ಅಲ್ಲಿಗೆ ಕಳಿಸಿ ಕೊಡಿ. ನಾನಿಲ್ಲಿ ನಿಲ್ಲಲಾರೆ !"

ಮಾದರಸನು ತುಸು ಬಿರುಸಾಗಿ ನೋಡಿ, "ಎಲ್ಲವನ್ನೂ ನಿನಗೆ ತಿಳಿದಂತೆಯೇ ಮಾಡಬೇಕೇನು ?........" ಎನ್ನುತ್ತ ಹೊರಗೆ ನಡೆದನು. ಬಸವಣ್ಣನು ಎರಡು ದಿವಸ ಊಟ ಉಪಚಾರಗಳನ್ನು ಸರಿಯಾಗಿ ಸ್ವೀಕರಿಸದೆ ಮೌನ ಧ್ಯಾನದಲ್ಲಿಯೇ ನಿರತನಾಗಿದ್ದನು.

ಸಂಗಮದಲ್ಲಿ ನೆಲೆ

ಅಷ್ಟರಲ್ಲಿ ಮಾದರಸನು ಮಗನ ಬಗೆಗೆ ಬೇಗನೆ ಒಂದು ನಿರ್ಧಾರಕ್ಕೆ ಬಂದನು. "ವರ್ಣಾಶ್ರಮ ಧರ್ಮ ಸಂಪ್ರದಾಯಗಳನ್ನು ಮೀರಿ ಉಪನಯನ

ವಿಲ್ಲದ ಮಗನನ್ನು ಮನೆಯಲ್ಲಿಟ್ಟುಕೊಳ್ಳಲಿಕ್ಕಾಗದು. ಸಕಲ ಶಾಸ್ತ್ರಗಳ ಅಧ್ಯಾಪನ ನಡೆಯುವ ಸಂಗಮವಿದ್ಯಾಪೀಠದಲ್ಲಿ ಅಭ್ಯಾಸ ಮಾಡಿದ ಬಳಿಕ ಇವನ ವ್ಯಕ್ತಿತ್ವವು ಹೇಗೆ ರೂಪಗೊಳ್ಳುವದೋ ನೋಡುವಾ! ಹೇಗಿದ್ದರೂ ಇವನು ಮಹಾಜ್ಞಾನಿಯಾಗುವಲ್ಲಿ ಸಂದೇಹವಿಲ್ಲ. ಸಂಗಮಕ್ಕೆ ಹೋಗಲಿ. ಶಾಸ್ತ್ರಾಧ್ಯಯನ ಜ್ಞಾನಸಾಧನೆಗಳಿಂದ ಘನವಂತನಾದ ಬಳಿಕ, ಗಹಲೀಶಮಠದ ಪಟ್ಟಾಧ್ಯಕ್ಷನಾಗಿ ಅದರ ಕೀರ್ತಿಯನ್ನಾದರೂ ಬೆಳಗಲಿ, ಅಥವಾ ಮಹಾತ್ಮನಾಗಿ ಜಗಜ್ಜ್ಯೋತಿಯಾದರೂ ಆಗಲಿ !!'

ಮಾದರಸನು ನಾಗಲಾಂಬೆಯ ಮುಂದೆ ತನ್ನ ಈ ನಿರ್ಧಾರವನ್ನು ತಿಳಿಸಿದನು. ನಾಗಲಾಂಬೆ ಅನುಮೋದಿಸಿದಳು. ಹಾಗೂ ತಾಯಿಗೆ ತಿಳಿಸಿ ಹೇಳಿ ಒಪ್ಪಿಸಿದಳು. ಬಸವಣ್ಣ ಅಕ್ಕನ ಮಡಿಲಲ್ಲಿ ತಲೆಯಿಟ್ಟು ಕೃತಜ್ಞತೆಯ ಕಂಬನಿ ಕರೆದನು.

ಮುಂದೆ ಕೆಲವೇ ದಿವಸಗಳಲ್ಲಿ ಮಾದಿರಾಜನು ಸಂಗಮ ಗುರುಕುಲದ ಕುಲಪತಿ-ಸಂಗಮನಾಥ ಜಾತವೇದಿ ಮುನಿಗಳಿಗೆ ಒಂದು ವಿಜ್ಞಾಪನಾಪತ್ರವನ್ನು ಬರೆದು, ಬಸವನನ್ನು ಯಾತ್ರಿಕರ ತಂಡದೊಡನೆ ಸಂಗಮಕ್ಕೆ ಕಳಿಸುವ ಏರ್ಪಾಡು ಮಾಡಿದನು. ಆದರೆ ಹೊಸದಾದ ಸ್ಥಳಕ್ಕೆ ಎಂಟು ವರ್ಷದ ಬಾಲಕನಾದ ತಮ್ಮನೊಬ್ಬನನ್ನೇ ಕಳಿಸಲು ನಾಗಲಾಂಬೆ ಒಪ್ಪಲಿಲ್ಲ. ತಾನೇ ಕರಕೊಂಡು ಹೋಗಿ ಅಲ್ಲಿ ವ್ಯವಸ್ಥೆಗೊಳಿಸಿ ನಾಲ್ಕೆಂಟುದಿನ ಇದ್ದು ಬರಲು ಸಿದ್ಧಳಾದಳು. ಮಾದಿರಾಜನು ಅದನ್ನೊಪ್ಪಿ, ಮಠದ ಸೇವಕನೊಬ್ಬನನ್ನು ಅವರ ಜತೆಗೆ ಹೋಗಲು ನೇಮಿಸಿದನು. ಮಕ್ಕಳಿಬ್ಬರೂ ತಾಯಿ ತಂದೆಗಳ ಆಶೀರ್ವಾದ ಪಡೆದು ಬೀಳ್ಕೊಂಡರು.

ಕುಲಪತಿ ಜಾತವೇದಿ ಮುನಿಗಳು ಮಾದಿರಾಜನ ವಿಜ್ಞಾಪನೆಯನ್ನು ಆದರದಿಂದ ಸ್ವೀಕರಿಸಿ ಬಸವಣ್ಣ-ನಾಗಲಾಂಬೆಯರನ್ನು ಪ್ರೀತಿಯಿಂದ ಬರಮಾಡಿಕೊಂಡರು. ಅವರ ಉಪಚಾರ-ವಸತಿಗಳ ವ್ಯವಸ್ಥೆ ಮಾಡಿದರು.

ಭವ್ಯ-ಮನೋಹರವಾದ ಸಂಗಮದ ಸೃಷ್ಟಿ ಸೌಂದರ್ಯವೂ ಆಶ್ರಮದ ಪವಿತ್ರ-ಪ್ರಶಾಂತ ವಾತಾವರಣವೂ ಜ್ಞಾನಾನಂದಮಯ ನಾದವೂ ನಾಗಲಾಂಬೆಯನ್ನು ತುಂಬಾ ಆಕರ್ಷಿಸಿದವು. ಆಕೆಗೆ ಬಾಗೇವಾಡಿಗೆ ಮರಳಲು ಮನಸ್ಸಾಗಲಿಲ್ಲ. 'ಉಳಿದ ವಿದ್ಯಾರ್ಥಿಗಳ ಜೊತೆಗೆ ಸ್ವತಂತ್ರವಾಗಿರು

ವದು ಬಾಲಕ ಬಸವಣ್ಣನಿಗೆ ಈಗಲೇ ಶಕ್ಯವಾದೀತೇ ?' ಎಂದು ಗುರುಗಳು ಅನುಮಾನಿಸಿದ್ದರು. ಆ ಮಾತು ಆಕೆಗೆ ಅನುಕೂಲವಾದ ಕಾರಣವನ್ನೇ ಒದಗಿಸಿದ್ದಿತು. ಕೂಡಲೇ ತಂದೆಗೆ ಪತ್ರ ಬರೆದಳು :

'ಬಸವಣ್ಣನ ಪೋಷಣೆಗಾಗಿ ನಾನು ಇಲ್ಲಿ ಕೆಲವು ದಿವಸ ನಿಲ್ಲುವದು ಆವಶ್ಯವೆಂದು ತೋರುತ್ತದೆ. ಗುರುಗಳ ಅಭಿಪ್ರಾಯವೂ ಹಾಗಿದೆ. ಆಶ್ರಮದ ನೆರೆಯಲ್ಲಿ ಚಿಕ್ಕ ಕುಟೀರವೊಂದನ್ನು ಏರ್ಪಡಿಸುತ್ತಾರೆ. ನಿಮ್ಮ ಅನುಜ್ಞೆಯನ್ನು ಅಪೇಕ್ಷಿಸುವೆ.'

ಈ ಪತ್ರದೊಡನೆ ಸೇವಕನನ್ನು ಮರಳಿ ಕಳಿಸಿಬಿಟ್ಟಳು. ಮಾದಿರಾಜನಿಗೆ ಈ ವಿಚಾರವೂ ಸರಿಯೆನಿಸಿತು. ಎರಡು ಚಕ್ಕಡಿಗಳಲ್ಲಿ ಸಾಮಾನು ಸರಂಜಾಮು ಹಾಕಿ ಶಿವದೇವನನ್ನೂ ದಾಸಿಯೊಬ್ಬಳನ್ನೂ ಸಂಗಮಕ್ಕೆ ಕಳುಹಿದನು. ಶಿವದೇವನಿಗೆ ಬಹಳ ಸಂತೋಷ ! ತನ್ನ ಜ್ಞಾನಸಾಧನೆಗೆ ಪ್ರೋತ್ಸಾಹಕಳಾದ ಹೆಂಡತಿಯು ಹತ್ತಿರ ಇದ್ದಂತಾಯಿತು. ಅದೂ ಸಂಗಮದಂತಹ ಜ್ಞಾನವಾನಿಗಳ ಕ್ಷೇತ್ರದಲ್ಲಿ ! ಅವನು ಉತ್ಸುಕತೆಯಿಂದ ಪ್ರಯಾಣಕ್ಕೆ ಸಿದ್ಧನಾದನು.

ನಾಗಲಾಂಬೆಗೆ ಸಂಗಮವು ಸೋದರಮಾವನೂರು. ತಾಯಿ ಮಾದಲಾಂಬಿಕೆಯ ತವರೂರು. ಬಲದೇವನು ಮಾದಲಾಂಬಿಕೆಯ ಸೋದರನು. ಆದರೆ ಆ ಮನೆತನದವರಾರೂ ಆಗ ಅಲ್ಲಿರಲಿಲ್ಲ.

ತರ್ದೇವಾಡಿ ಭಾಗಕ್ಕೆ ಮಾಂಡಲಿಕನಾಗಿ ಮಂಗಳವಾಡದಲ್ಲಿ ಕ್ರಿ. ವ. ೧೧೧೮ ರಿಂದ ರಾಜ್ಯವಾಳುತ್ತಿದ್ದ ಪೆರ್ಮಾಡಿರಾಜನಲ್ಲಿ ಸಿದ್ದಣ್ಣನೆಂಬ ರಾಜಭಕ್ತನಾದ ಮಂತ್ರಿಯಿದ್ದನು. ಆತನು ಸಂಗಮದ ನೆರೆಯ ಕಿಸುವೊಳಲ (ಪಟ್ಟದಕಲ್ಲು) ಕಡೆಯವನು. ಬಲದೇವನ ಪರಿಚಯದವನು. ಬಲದೇವನು ಅವನ ಆಶ್ರಯದಲ್ಲಿ ಮಂಗಳವಾಡದಲ್ಲಿ ಉನ್ನತಾಧಿಕಾರದಲ್ಲಿ ಇದ್ದನು. ಹೀಗೆ ಬಲದೇವನು ಹಲವು ವರ್ಷಗಳಿಂದ ಸಂಗಮದಿಂದ ದೂರವಾಗಿದ್ದರೂ ಗುರುಕುಲದ ಬಗೆಗೆ ಅಭಿಮಾನವನ್ನೂ ಜಾತವೇದ ಮುನಿಗಳ ಬಗೆಗೆ ಆದರಭಾವವನ್ನೂ ಹೊಂದಿದ್ದನು. ನಾಗಲಾಂಬೆಯೂ ಬಸವಣ್ಣನೂ ಅಲ್ಲಿಗೆ ಬಂದುದನ್ನು ಕೇಳಿ ಅವರ ಯೋಗ ಕ್ಷೇಮವನ್ನು ವಿಚಾರಿಸಿಕೊಳ್ಳುತ್ತಿದ್ದನು.

೩. ಸಂಗಮದಲ್ಲಿ ಸಾಧನೆ

ಅಧ್ಯಯನ ಶಾಲೆಯ ಅಲಂಕಾರ

ಬಸವಣ್ಣನೂ ನಾಗಕ್ಕನೂ ಮೊದಮೊದಲು ತಮ್ಮ ತಂದೆ ಹಾಗು ಸೋದರಮಾವನ ಹೆಸರಿನ ಆಶ್ರಯದಲ್ಲಿ ಮಾತ್ರ ಆಶ್ರಮವಾಸಿಗಳಿಗೆ ಗಣನೀಯರಾಗಿ ಕಾಣುತ್ತಿದ್ದರು. ಮುಂದೆ ಅವರ ನಿಜವಾದ ದೊಡ್ಡತನ ಬೇಗನೆ ಬೆಳಕಿಗೆ ಬಂದಿತು. ಬಸವಣ್ಣನ ತೀಕ್ಷ್ಣ ಬುದ್ಧಿ, ವಿವೇಕದ ನಡತೆ, ಸತ್ಯ ಚಿಂತನೆ ಇವು, ಕುಲಪತಿ ಮೊದಲಾಗಿ ಅಧ್ಯಾಪಕರೆಲ್ಲರನ್ನೂ ಆಕರ್ಷಿಸಿದವು. ನಾಗಲಾಂಬೆ-ಶಿವಸ್ವಾಮಿಯವರ ಸಾತ್ವಿಕವಾದ ಸಾದಾಜೀವನವೂ, ಆಶ್ರಮವಾಸಿಗಳಿಗೆ ಅವರು ನೀಡುವ ಸಹಾಯ ಸಹಕಾರ ಸೇವೆಗಳೂ, ಅವರ ಆಧ್ಯಾತ್ಮಿಕಾಸಕ್ತಿಯೂ ಗುರುಕುಲದಲ್ಲೆಲ್ಲ ಪ್ರೀತಿ-ಗೌರವಗಳನ್ನು ಪಡೆದವು. ಒಟ್ಟಿನಲ್ಲಿ ಇವರದು ಪವಿತ್ರ ಜೀವನದ ಕುಟುಂಬವಾಯಿತು. ಶಿವಸ್ವಾಮಿಯು ಜ್ಞಾನಾನುಸಂಧಾನದಲ್ಲಿಯೂ ಅನುಭಾವಿಗಳ ಸಂದರ್ಶನದ ಸಂಚಾರದಲ್ಲಿಯೂ ಹೆಚ್ಚುಕಾಲ ಕಳೆಯುತ್ತಿದ್ದನು. ನಾಗಕ್ಕನು ದಾಸಿಯಿಂದ ಮನೆಯ ಕೆಲಸಗಳನ್ನು ಮಾಡಿಸಿ, ತನ್ನ ಶಿವಾರ್ಚನೆಯನ್ನು ಚ್ಯುತಿಯಿಲ್ಲದೆ ನಡೆಯಿಸಿ ಬಸವಣ್ಣನ ಪಾಲನೆ ಪೋಷಣೆಯನ್ನು ಸ್ವತಃ ನೋಡಿಕೊಂಡು ಆಶ್ರಮದ ಕೆಲಸಗಳಿಗೂ ನೆರವಾಗುತ್ತಿದ್ದಳು. ಸಂಧ್ಯಾಕಾಲದ ಬ್ರಹ್ಮಜ್ಞಾನದ ಸಭೆಗಳಿಗೆ ತಪ್ಪದೆ ಹೋಗುತ್ತಿದ್ದಳು. ಪಂಡಿತರ ಮನೆಗಳ ಕೆಲವು ಮಹಿಳೆಯರೂ ಆಕೆಗೆ ಅನುಯಾಯಿಗಳಾದರು. ಕುಲಪತಿ ಜಾತವೇದ ಮುನಿಗಳು ಅಕ್ಕನ ಶುದ್ಧ ಸಾತ್ವಿಕ ನಡತೆಯನ್ನೂ ದಕ್ಷತೆಯನ್ನೂ ಗಮನಿಸಿ ಆಶ್ರಮದ ಕಾರ್ಯಕಲಾಪಗಳ ಮೇಲ್ವಿಚಾರಣೆಯನ್ನು ಆಕೆಗೆ ಒಪ್ಪಿಸಹತ್ತಿದರು. ನಾಗಕ್ಕನು ಅವುಗಳನ್ನೂ ಆನಂದದಿಂದ ವಹಿಸಿಕೊಂಡು ಗುರುದೇವನಿಗೆ ತೃಪ್ತಿಯಾಗುವಂತೆ ಊಡೇರಿಸಹತ್ತಿದಳು. ಅದರಿಂದಾಕೆಯು ಕುಲಪತಿಗಳ ನಚ್ಚಿನ ಹಿರಿಯ ಮಗಳೇ ಆದಳು.

ಬಸವಣ್ಣನು ದೇವಭಾಷೆ ಸಂಸ್ಕೃತವನ್ನು ಬೇಗನೆ ವೈಗೂಡಿಸಿಕೊಂಡನು. ತೆಲಗು ತಮಿಳು ಲಿಪಿಗಳ ಪರಿಚಯ ಮಾಡಿಕೊಂಡನು. ಕನ್ನಡ ಸಂಸ್ಕೃತ ಗ್ರಂಥಗಳ ಅಭ್ಯಾಸದಿಂದ ಟೀಕೆ ಟಿಪ್ಪಣಿಗಳನ್ನು ಬರೆಯ ಹತ್ತಿದನು. ವ್ಯಾಕರಣ-ಛಂದಸ್ಸು-ಅಲಂಕಾರಗಳು ಅವನ ಭಾಷೆಯಲ್ಲಿ ತವ್ಮ್ಮಷ್ಟಕ್ಕೆ ಹುಟ್ಟಿ ತೇಲಿಬಂದವು. ಅವುಗಳನ್ನು ಆತನು ಕಲಿಯಬೇಕಾಗಿರಲಿಲ್ಲ. ಬಂದ ಮೂರು ವರ್ಷಗಳಲ್ಲಿ ಉಳಿದವರ ಇಮ್ಮಡಿ-ಮುಮ್ಮಡಿ ಪ್ರಗತಿಯನ್ನು ಸಾಧಿಸಿ ಮೇಲ್ತರಗತಿಯ ಪಾಠಕರ ಜತೆಗೆ ಶಾಸ್ತ್ರಾಭ್ಯಾಸಕ್ಕೆ ಅಣಿಯಾದನು. ಆತನು ಅಧ್ಯಯನ ಶಾಲೆಯ ಅಲಂಕಾರ ಎನಿಸಿಕೊಂಡನು.

ವಚನಗಳ ಉಗಮ

ಒಂದು ದಿನ ನದಿಯಲ್ಲಿ ನೀರ ನಡುವೆ, ತೀರಕ್ಕೆ ಸಮೀಪವಾಗಿರುವ ಒಂದು ಬಂಡೆಯ ಮೇಲೆ ಕುಳಿತು ಬಸವಣ್ಣನು ತನ್ನ ಮುಂದೆ ಅಖಂಡವಾಗಿ ಹರಿಯುವ ಪ್ರವಾಹವನ್ನು ನೆಟ್ಟ ದೃಷ್ಟಿಯಿಂದ ನೋಡುತ್ತಿದ್ದನು. ಆತನು ಹಾಗೆ ಕುಳಿತು ಬಹಳ ಹೊತ್ತಾಗಿತ್ತು. ಒಬ್ಬನೇ ಒಂದು ಕಡೆಗೆ ಬಂದು ಹೀಗೆ ವಿಚಾರಮಗ್ನನಾಗಿ ಧ್ಯಾನಾಸಕ್ತನಾಗಿ ಕುಳ್ಳಿರುವುದು ಇದೇ ಮೊದಲನೆಯ ಸಲವಲ್ಲ!

ಸಂಗಮಕ್ಕೆ ಬಂದ ಮೊದಲ ದಿನಗಳಲ್ಲಿ ಗುರುಕುಲವಾಸಿಗಳು ನಡೆಯಿಸುತ್ತಿದ್ದ ಸಂಗಮೇಶ್ವರನ ಪೂಜಾಧ್ಯಾನಾದಿಗಳು ಬಸವಣ್ಣನ ಮನಸ್ಸನ್ನು ಸೆಳೆದವು. ನಾಗಕ್ಕನ ಅನುಸರಣೆಯಲ್ಲಿ ವ್ಯಕ್ತವಾದ ಅವನ ಭಾಕ್ತಿಕ ಹಂಬಲಕ್ಕೆ ಸಂಗಮ ದೇವನ ಪೂಜೆಯು ತೃಪ್ತಿಯನ್ನು ತಂದಿತು. ಕೆಲವೇ ದಿನಗಳಲ್ಲಿ ಸಹಾಧ್ಯಾಯಿಗಳೊಡನೆ ಸಮರ್ಚಿಸುವದರಲ್ಲಿ ಮನವು ತಣಿಯದಂತಾಯಿತು. ಆದರಿಂದ ಎಲ್ಲರಿಗಿಂತ ಮೊದಲು ತನ್ನ ಉಪಾಸನೆಯನ್ನು ಮನದಣಿಯೆ ನೆರವೇರಿಸಿಕೊಳ್ಳಲು ತವಕಿಸಿದನು. ನಸುಕಿನಲ್ಲಿ ನದಿಯಲ್ಲಿ ಮಿಂದು ಪತ್ರ ಪುಷ್ಪಗಳೊಡನೆ ಬಂದು ಸಂಗಮೇಶ್ವರನನ್ನು ಪೂಜಿಸಿ ಅನನ್ಯ ಮನಸ್ಕನಾಗಿ ಧ್ಯಾನಿಸುತ್ತಿದ್ದನು. ಧ್ಯಾನಶಕ್ತಿಯು ಬಲಿತಂತೆ, ಬಾಹ್ಯದ ಅರಿವು ಮರವಾಗುತ್ತಿತ್ತು. ಮುಂದಿನ ಲಿಂಗವು ಕಾಣದಂತಾಗಿ ಅದು ಹೃದಯದಲ್ಲಿ ಕಂಗೊಳಿಸುತ್ತಿತ್ತು. ಆಗ ಒಂದು ಸುಖದ ಸಾಗರದಲ್ಲಿ

ಮುಳುಗಿದಂತಾಗುತ್ತಿತ್ತು. ಎಷ್ಟೋ ಸಲ ಆಕಸ್ಮಿಕವಾಗಿ ಉಂಟಾದ ಜನರ ಗಲಾಟೆ ಈ ಸುಖವನ್ನು ಭಂಗಿಸುತ್ತಿತ್ತು. ಅದರಿಂದ ಬಸವೇಶನಿಗೆ ಬಹಳ ಕಳವಳವಾಗುತ್ತಿತ್ತು. ಈ ಎಲ್ಲ ಪರಿಯನ್ನು ಜಾತವೇದಿ ಮುನಿಗಳು ಅರಿಯದಿರಲಿಲ್ಲ. ಅವರು ಬಸವಣ್ಣನ ದಿನಚರಿಯನ್ನು ಸೂಕ್ಷ್ಮವಾಗಿ ನಿರೀಕ್ಷಿಸುತ್ತಿದ್ದರು. ಬಸವಣ್ಣ ಜನಿಸಿದಾಗ ಆ ಶಿಸುವಿನ ಆಧ್ಯಾತ್ಮಿಕ ತೇಜಸ್ಸನ್ನು ಕಂಡು ಅವರೇ ಲಘುದೀಕ್ಷೆಯಿಂದ ಲಿಂಗಧಾರಣೆ ಮಾಡಿದ್ದರು. ಅದೊಂದು ಮಹಾತ್ಮರ ಉದಯಕ್ಕೆ ತಕ್ಕ ಆಕಸ್ಮಿಕ ಮಹಾಪ್ರಸಂಗವೇ ಆಗಿತ್ತು.

ವಿದ್ಯಾಪೀಠದ ಕ್ಷೇಮನಿಧಿಗಾಗಿ ಜಾತವೇದಿ ಮುನಿಗಳು ಮುಖ್ಯ ಮುಖ್ಯ ಸಾಮಂತ ಮನ್ನೆಯರಿರುವಲ್ಲಿ ಸಂಚರಿಸುವಂತೆ ಬಾಗೇವಾಡಿ ನಾಡಪ್ರಭು ಮಾದಿರಾಜನ ಕಡೆಗೂ ಬರುತ್ತಿದ್ದರು. ಮಾದಿರಾಜನು ವಿಶೇಷ ಪ್ರೀತಿಯ ಸ್ನೇಹಿತನೂ ಆಗಿದ್ದನು. ಗುರುತ್ವದ ಬಲದಿಂದ ಜಾತವೇದಿ ಶಿವಯೋಗಿಗಳು ಸಂಗಮದ ಅಧಿಪತಿಗಳೇ ಆಗಿದ್ದುದರಿಂದ, ನಾಡಿನಲ್ಲಿ ಅವರನ್ನು ಸಂಗಮನಾಥನೆಂದೇ ಗೌರವಿಸುತ್ತಿದ್ದರು; ಸಂಬೋಧಿಸುತ್ತಿದ್ದರು. ಅವರೊಮ್ಮೆ ಮಾದಿರಾಜನ ಮನೆಗೆ ಬರುವದಕ್ಕೂ ಬಸವಣ್ಣನ ಜನನಕ್ಕೂ ಸಮಯ ಸರಿಯಾಗಿ ಕೂಡಿತ್ತು. ಮಗುವಿನ ವಿಶೇಷ ಲಕ್ಷಣಗಳನ್ನು ನೋಡಿ, 'ಈ ಮಗು ತಮ್ಮ ಉದ್ದೇಶಿತ ಕಾರ್ಯಸಾಧನೆಗೆ ಅನುಕೂಲವಾದಾನೆ'ಂದು ಆ ಕೂಡಲೆ ಲಿಂಗಧಾರಣ ಮಾಡಿದ್ದರು. ಪಾಶುಪತ ವೀರಶೈವರಲ್ಲಿ ಆರಾಧ್ಯರು. ಸ್ವೇಚ್ಛೆಯಿಂದ ಯಜ್ಞೋಪವೀತ ಲಿಂಗಗಳೆರಡನ್ನೂ ಧರಿಸಬಹುದಾದ ರೂಢಿ ಇದ್ದುದರಿಂದ ಸಂಗಮನಾಥರ ಈ ಕ್ರಮಕ್ಕೆ ಬಳಗದ ಇಲ್ಲವೆ ಸಾಮಾಜಿಕರ ಆಕ್ಷೇಪವೇನೂ ಉಂಟಾಗಿರಲಿಲ್ಲ.

ಈಗ ಜಾತವೇದಿ ಮುನಿಗಳು ಬಸವಣ್ಣನನ್ನು ವೀರ ವ್ರತಿಯನ್ನಾಗಿಸಿ, ಬೆಳೆಯಲಿರುವ ಭಕ್ತಿಗೆ ತುಂಬ ಅವಕಾಶವೀಯಲು ಆಲೋಚಿಸಿದರು. ಈ ಆಲೋಚನೆ ಕಾರ್ಯಗತವಾಗಲು ಬಹಳದಿನ ಹಿಡಿಯಲಿಲ್ಲ. ಅವನ ಭಕ್ತಿ ಜೀವನವು ದಿನದಿನಕ್ಕೆ ಉಜ್ವಲವಾಗತೊಡಗಿತ್ತು.

ಗುರುಕುಲದಲ್ಲಿ ಶೈವಸಿದ್ಧಾಂತದ ಎಲ್ಲ ಭೇದಗಳಿಗೂ ಸಂಬಂಧಿಸಿ ಪಾಠ ಪ್ರವಚನಗಳು ನಡೆಯುತ್ತಿದ್ದವು. ಪಂಡಿತರು ತಮ್ಮ ವೈಯಕ್ತಿಕ ಆಚರಣೆಯಲ್ಲಿ

ತಮಗಿಷ್ಟವಾದ ಶೈವ ಪಂಥವನ್ನು ಅನುಸರಿಸಿಕೊಂಡಿರುತ್ತಿದ್ದರು. ವೀರವ್ರತದಲ್ಲಿ ಇಷ್ಟವುಳ್ಳವರು ಪರಿಷ್ಕೃತ ಶೈವಸಿದ್ಧಾಂತವೆನಿಸಿದ ಷಟ್‌ಸ್ಥಲ ಪಂಥವನ್ನು ಅನುಸರಿಸುತ್ತಿದ್ದರು. ಅವರು ಲಿಂಗವನ್ನು ಪ್ರಾಣಕ್ಕಿಂತ-ಹೆಚ್ಚಾಗಿ ಭಾವಿಸಿ ಅದನ್ನು ಅಗಲಿರಲಾರದೆ ಮೈಮೇಲೆಯೇ ಧರಿಸುವರು.

ಗುರುವು ಸಂಸ್ಕಾರದಿಂದ ಜೀವನವನ್ನು ಪರಿಶುದ್ಧಗೊಳಿಸಿ ಅವನ ಹೃದಯದಲ್ಲಿ ಗುಪ್ತವಾಗಿರುವ ಪರಮ ಚಿತ್ಕಲೆಯನ್ನು ತನ್ನ ಯೋಗಬಲದಿಂದ ಆಹ್ವಾನಿಸಿ ಇಷ್ಟಲಿಂಗವಾಗಿಸಿ ಕೊಡುವನು. ಅದನ್ನು ಧರಿಸಿದ ಆ ಶುದ್ಧ ಜೀವನು ತನ್ನ ಕ್ರಿಯೆಗಳನ್ನು ಲಿಂಗಕ್ಕಾಗಿ ಮಾಡುವನು. ಎಲ್ಲ ಭೋಗಗಳನ್ನು ಲಿಂಗಕ್ಕರ್ಪಿಸಿ ಪ್ರಸಾದವಾಗಿ ಭೋಗಿಸುವನು. ಲಿಂಗಾನುಭಾವಿಯಾಗಿ ಕೊನೆಗೆ ತಾನೂ ಲಿಂಗವೇ ಆಗುವನು. ಈ ಸಾಧನೆಯಲ್ಲಿ ಜಾತವೇದಿ ಮುನಿಗಳು ಸಿದ್ಧಿಪಡೆದ ಶಿವಯೋಗಿಯಾಗಿದ್ದರಲ್ಲದೆ, ಪರಮಭಕ್ತಿಸಂಪನ್ನರಿಗೆ ಸಂಸ್ಕಾರವಿತ್ತು ಇಷ್ಟಲಿಂಗೋಪಾಸಕರನ್ನಾಗಿಸುತ್ತಿದ್ದರು. ಬಸವಣ್ಣನಲ್ಲಿ ಅರಳಿದ ಭಕ್ತಿಯರಳಿನ ಸುವಿಮಲ ಸುವಾಸನೆಗೆ ಮೆಚ್ಚಿದ ಆ ಗುರುಗಳು ಬಸವಣ್ಣನ ಮನೆಯವರಿಗೆಲ್ಲ ದೀಕ್ಷಾಸಂಸ್ಕಾರದಿಂದ ಇಷ್ಟಲಿಂಗಧಾರಣಮಾಡಿಸಿ ಮಂತ್ರಜಪವನ್ನರುಹಿ ಜ್ಞಾನೋಪದೇಶ ಮಾಡಿದರು (ಕ್ರಿ. ವ. ೧೧೩೫). ಹೃದಯದಲ್ಲಿ ವಾಸವಾಗಿದ್ದ ಸಂಗಮನಾಥನೇ ಕರಕೆ ಬಂದುದನ್ನು ಕಂಡು ನೆನೆದು, ಭಾವಿಸಿ, ಬಸವಣ್ಣ ಆನಂದಿಸಿದನು. ಲಿಂಗಯ್ಯನನ್ನು ಏಕಾಂತದಲ್ಲಿ ಪೂಜಿಸಿ ಜಪಿಸಿ ಧ್ಯಾನಿಸಿ ಪದಾರ್ಥಗಳನ್ನು ಅರ್ಪಿಸಿ ಪ್ರಸಾದವನ್ನು ಸೇವಿಸಿ ಉಪಾಸಿಸಿದನು. ಗುರುವಿತ್ತ ಜ್ಞಾನವನ್ನು ತನ್ನ ಅರಿವಾಗಿಸಿಕೊಂಡನು. ವಿಶಾಲಾಕಾಶದಲ್ಲಿ ಬೆಳಗುವ ನಕ್ಷತ್ರಗಳಂತೆ, ಆ ಅರಿವಿನ ಬೆಳಗಿನಲ್ಲಿ ಅವನ ಅನುಭವದ ಸೂಕ್ತಿಗಳು ಗೀತಗಳಾಗಿ ಹೊಳೆಯ ಹತ್ತಿದವು. ಧ್ಯಾನಾಸಕ್ತನಾದಾಗ, ವಿಶ್ವದ ಅಗಾಧದಲ್ಲಿ ಲೀನವಾದಾಗ, ಪರಮಾತ್ಮ ಸ್ವರೂಪಚಿಂತನದಲ್ಲಿ ಮಗ್ನನಾದಾಗ ಆ ದಿವ್ಯಾನುಭವದ ಅಮರವಾಣಿಗಳು ಬಸವೇಶನ ವದನದಲ್ಲಿ ಉಗಮವಾಗುತ್ತಿದ್ದವು. ಅವು ಆದ್ಯರ ವಚನಗಳ ಪಡಿಯಚ್ಚಿನಲ್ಲಿ ಆಕಾರಗೊಂಡು ಕಮನೀಯವಾದ ಅರ್ಥವೂ ಪದಲಾಲಿತ್ಯವೂ ಉಳ್ಳ ವಚನಗೀತಗಳಾದವು. ಅದೇ ಕಾಲಕ್ಕೆ ಬಳ್ಳೇಗಾಂವಿಯ ಮಹಾವಿದ್ಯಾಲಯದಲ್ಲಿ ಪಂಡಿತರೂ, ಮಹಾಜ್ಞಾನಿಗಳೂ ಆಗಿ

ರುವ 'ಪ್ರಾಮಶಕ್ತಿ'ಗಳ ವಚನಗೀತಗಳ ಪ್ರತಿಗಳು ಸಂಗಮಕ್ಕೆ ಬರುತ್ತಿದ್ದವು. ಆ ವಚನಗಳನ್ನೂ ದೇವರದಾಸಿಮಾರ್ಯಾದಿ ಮೊದಲಿನವರ ವಚನಗಳನ್ನೂ ನೋಡುತ್ತಿದ್ದಾಗ ಬಸವಣ್ಣನಿಗೆ ಉಪನಿಷದಾಗಮಗಳಲ್ಲಿಯೂ ಅಗದಿರುವ ಅರ್ಥೋಪಪತ್ತಿಯು ಈ ವಚನಗಳಿಂದ ಸಾಧ್ಯವಾಯಿತು. ಸಿದ್ಧಾಂತಗಳ ಸಂದಿಗ್ಧತೆಯು ಮಾಯವಾಗಿ ಅಸಂದಿಗ್ಧ ಅರಿವಿನ ಬೆಳಗು ಹೊಳೆಯಿತು. ಆಗ 'ಇದುವರೆಗೆ ಇವುಗಳನ್ನು ಕಾಣದೆ ಹಲವು ಕಾಲ ಕಳೆದೆನಲ್ಲ!' ಎಂದು ಚಡಪಡಿಸಿದನು. ಬರಬರುತ್ತ ವಚನಗಳ ಮೆಚ್ಚುಗೆ ಮೇರೆವರಿಯಿತು. ಆ ಭಾವಪರವಶತೆಯಲ್ಲಿ ಹೊರಹೊಮ್ಮಿದ ವಾಣಿಯಿದು:

'ಹಾಲತೊರೆಗೆ ಬೆಲ್ಲದ ಕೆಸರು, ಸಕ್ಕರೆಯ ಮಳಲು,
ತವರಾಜದ ನೊರೆತೆರೆಯಂತೆ ಆದ್ಯರ ವಚನವಿರಲು,
ಕೆರೆ ಬಾವಿಯ ತೋಡಿ, ಉಪ್ಪುನೀರನುಂಬವನ ವಿಧಿಯಂತೆ
ಆಯಿತ್ತೆನ್ನ ಮತಿ ಕೂಡಲಸಂಗಮದೇವಾ.

(ವಚನಗಳಲ್ಲಿ ಮೆಚ್ಚುಗೆ ವ್ಯಕ್ತಪಡಿಸುವಾಗಲೆಲ್ಲ ಈ ವಚನ ಹೇಳಿದುದುಂಟು.)

ಆ ಮೇಲೆ ಅನುಭವದಲ್ಲಿ ಈ ರೀತಿ ಹೊರಹೊಮ್ಮಿದ ನುಡಿಮುತ್ತುಗಳು ತಾಡವೋಲೆಗಳಲ್ಲಿ ಉಳಿಯಹತ್ತಿದವು.

* * * *

ಆ ದಿನ ಹೊಳೆಯಲ್ಲಿ ತನ್ನ ಮುಂದೆ, ಕ್ಷಣಿಕವಾದರೂ ಅಖಂಡವಾಗಿ ಹರಿಯುತ್ತಿರುವ ನದಿಯ ನೀರ್ಪೂನಲ ನಿಟ್ಟಿಸುತ್ತಿರುವಾಗ 'ಇದಕ್ಕೆ ಅಂತ್ಯವಿಲ್ಲವೇ ? ಇದೆಲ್ಲಿಂದ ಬರುತ್ತಿರುವದು ? ಬರುವ ಮೊದಲು ಎಲ್ಲಿತ್ತು' ಈ ಮುಂತಾದ ವಿಚಾರಗಳು ಸುಳಿದು ಆ ಧ್ಯಾನವು ಸೃಷ್ಟಿಯ ಉತ್ಪತ್ತಿಗೂ ಆದಿಯಾದ ತತ್ವಕ್ಕೆ ಇಳಿಯಿತು. ಅದು ಆ ಭಾವದ ಭಾಷೆಯಲ್ಲಿ ಇಂತು ಬಯಲಿಗೆ ಬಂದಿತು:

'ಕಾಳಿಯ ಕಣ್ ಕಾಣದಿಂದ ಮುನ್ನ, ತ್ರಿಪುರ ಸಂಹಾರದಿಂದ ಮುನ್ನ
ಹರಿವಿರಂಚಿಗಳಿಂದ ಮುನ್ನ, ಉಮೆಯ ಕಲ್ಯಾಣದಿಂದ ಮುನ್ನ
ಮುನ್ನ ಮುನ್ನ ಮುನ್ನ,
ಅಂದಿಂಗೆಳೆಯ ನೀನು ! ಹಳೆಯ ನಾನು !
ಮಹಾದಾನಿ ಕೂಡಲಸಂಗಮದೇವಾ ! ಕೂ....ಸಂ...ದೇ....

ಎಂದೆನ್ನುತ್ತ ಎಚ್ಚತ್ತು ಕೈಮುಗಿದು, ಮಬ್ಬುಗತ್ತಲಾಗುತ್ತಿರುವದನ್ನು ಗಮನಿಸಿ, ಸಂಜೆಯ ಪ್ರವಚನ ಸಭೆಗೆ ಹೋಗಲು ಆಶ್ರಮದತ್ತ ನಡೆದನು.

ಚೆನ್ನಬಸವಣ್ಣನ ಜನ್ಮ

ಆಶ್ರಮದಲ್ಲಿ ಹತ್ತು ವರ್ಷಗಳು ಕಳೆದವು. ಬಸವಣ್ಣನ ವಿದ್ಯಾಬುದ್ಧಿಗಳ ಬೆಳಕು ಆಶ್ರಮವಾಸಿಗಳನ್ನು ಬೆರಗುಗೊಳಿಸಿತು. ಕುಲಪತಿಗಳೂ ಪ್ರಾಧ್ಯಾಪಕರೂ ಇವನು 'ಮಹಾಪುರುಷ'ನೆಂಬುದನ್ನು ಅರಿತುಕೊಂಡರು. ಹೊರಗೆ ಹೀಗೆ ಅವನ ಕೀರ್ತಿಯು ಬೆಳೆದಂತೆ ಒಳಗೊಳಗೆ ಭಕ್ತಿಯೂ ಉನ್ನತಾವಸ್ಥೆಗೇರುತ್ತ ನಡೆಯಿತು. ಮಾದಿರಾಜನ ಮನೋಗತದಂತೆ ಬಸವಣ್ಣನನ್ನು ಗಹಲೀಶ ಮಠದ ಪಟ್ಟಾಧ್ಯಕ್ಷನನ್ನು ಮಾಡಿ, ಸೀಮಿತವಾದ ಸಣ್ಣ ಕ್ಷೇತ್ರದ ಕಾರ್ಯಕರ್ತನನ್ನಾಗಿಸುವದು ಸರಿಯಲ್ಲವೆಂದು ಗುರುಗಳು ನಿರ್ಣಯಿಸಿಬಿಟ್ಟಿದ್ದರು.

ಶಕೆ ೧೦೬೩ (ಕ್ರಿ. ಶ. ೧೧೪೧) ಕಾರ್ತಿಕ ಮಾಸದಲ್ಲಿ ನಾಗಲಾಂಬೆಯು ಶಿವಪ್ರಸಾದದ ಮೂರ್ತಸ್ವರೂಪವೆನಿಸುವ ವೀರಶೈವಾಂಬುನಿಧಿಗೆ ಚಂದ್ರನಂತಿರುವ ಮಗನನ್ನು ಹೆತ್ತಳು. ಬಸವಣ್ಣನ ನಡೆಯಿಂದ ಬಸವನಾಮವು ಸಕಲರಿಗೆ ಸಂತೋಷಕರವಾದುದರ ಪರಿಣಾಮವಾಗಿ ಗುರುಗಳು ಮಗುವಿಗೆ 'ಚೆನ್ನಬಸವಣ್ಣ'ನೆಂದು ಹೆಸರಿಟ್ಟರು.

ಮಗು ಆರು ತಿಂಗಳದವನಾದಾಗ ನಾಗಲಾಂಬೆಯ ಇಚ್ಛೆಯಂತೆ ಮಾದಿರಾಜನು ಮೊಮ್ಮಗನನ್ನು ನೋಡಬಂದನು. ಆಗ ಜಾತವೇದಿ ಗುರುಗಳು ಬಸವಣ್ಣನ ಪಾಂಡಿತ್ಯವನ್ನೂ ಭಕ್ತಿಯುಕ್ತವಾದ ಸದ್ವರ್ತನೆಯನ್ನೂ ನಿರರ್ಗಳವಾಗಿ ವರ್ಣಿಸಿ ಮಾದಿರಾಜನೊಡನೆ ಮಾತನಾಡಿದರು. ಅವನ ಕಾರ್ಯಕ್ಷೇತ್ರವು ವಿಶಾಲವಾದುದಾಗುವದೆಂದು ಸೂಚ್ಯವಾಗಿ ನುಡಿದರು. ಆನಂದಚಿತ್ತನಾದ ಮಾದಿರಾಜನು ಮಕ್ಕಳಿಗೂ ಮೊಮ್ಮಗನಿಗೂ ಅವಶ್ಯವಿದ್ದ ಸೌಕರ್ಯಗಳ ಏರ್ಪಾಡು ಮಾಡಿದನು. ಒಂದೆರಡು ಸಲ ಬಾಗೇವಾಡಿಗೂ ಕರೆಯಿಸಿಕೊಂಡು ಪ್ರೇಮಾದರಗಳಿಂದ ಉಪಚರಿಸಿ ಕಳಿಸಿಕೊಟ್ಟನು.

* * * *

ಬಸವಣ್ಣನ ಕೀರ್ತಿಯನ್ನು ಕೇಳಿ ಬಲದೇವರಸನು ಸೋದರಸೊಸೆ ಸೋದರಳಿಯಂದಿರನ್ನು ನೋಡಲು ಸಂಗಮಕ್ಕೆ ಬಂದನು. ಬಸವಣ್ಣನನ್ನು

ನೋಡಿ ನಾಗಲಾಂಬೆಯು ಶ್ರಮಕ್ಕೂ ಪ್ರೀತಿಗೂ ತಕ್ಕವನಾದ ತಮ್ಮನೆಂದು ತಿಳಿದನು. ಅವನ ವಿನಯವನ್ನೂ ಶಾಂತಿ ಸಮತೆಗಳಿಂದ ತುಂಬಿದ ನಡೆಯನ್ನೂ ಶಿವಭಕ್ತಿಯನ್ನೂ ಮೆಚ್ಚಿದನು. ಅವನ ವಾಣಿಗೂ ತತ್ವಜ್ಞಾನ ವಿವೇಚನೆಗೂ ಮಾರುಹೋದನು. ಮಹಾತ್ಮನಾಗಲಿರುವ ಆ ಭಕ್ತಿಸಂಪನ್ನನಿಗೆ ತಾನು ಸೋದರಮಾವನೆನಿಸಿಕೊಳ್ಳುವದಕ್ಕೆ ಅದೆಷ್ಟು ಆನಂದ ಅವನಿಗೆ! ಅವನು ಕೂಡ ಲಿಂಗಭಕ್ತಿಯ ಸ್ಫೂರ್ತಿಗೊಂಡವನಾಗಿ, ತನ್ನ ಒಬ್ಬಳೇ ಚಿಕ್ಕ ಮಗಳು ಗಂಗಾಂಬಿಕೆ ಸಹಿತ ತನ್ನ ಬಳಗದೊಡನೆ ಜಾತವೇದಿಗುರುಗಳ ಕರುಣೆಗೆ ಪಾತ್ರನಾಗಿ ಷಟ್‌ಸ್ಥಲತತ್ವೋಪದೇಶವನ್ನು ಪಡೆದನು. ಲಿಂಗವಂತನಾಗಿ ಮಂಗಳವೇಢೆಗೆ ಮರಳಿದನು.

ಬಸವಣ್ಣನು ಇಪ್ಪತ್ತನೆಯ ವಯಸ್ಸಿಗೆ ಗುರುಕುಲದ ಅಧ್ಯಯನವನ್ನು ಅತ್ಯುತ್ತಮವಾದ ಕ್ರಮದಲ್ಲಿ ಪೂರೈಸಿದನು. ಆದರೂ ಕುಲಪತಿಗಳ ಆಸೆಯಂತೆ ಅವರ ಆಪ್ತಶಿಷ್ಯನೂ ವಿಶೇಷ ಸಾಧಕನೂ ಆಗಿ ಆಶ್ರಮದಲ್ಲಿಯೇ ಉಳಿದನು. ಮುಂದಿನ ನಾಲ್ಕಾರು ವರ್ಷಗಳಲ್ಲಿ ಆತನು ಶಾಸ್ತ್ರಗಳಲ್ಲಿ ಕಾಲ ಕಳೆಯುವದಕ್ಕಿಂತ, ಅವುಗಳನ್ನು ಅನುಭವದ ಒರೆಗೆ ಹಚ್ಚುವದಕ್ಕೂ, ಅನುಭವಕ್ಕೆ ಹೊಂದಿದವುಗಳನ್ನು ಅಳವಡಿಸಿಕೊಳ್ಳುವದಕ್ಕೂ, ಕೆಲವು ಸಲ ಕೆಲವು ಕಾಲ ಏಕಾಂತವಾಸವನ್ನೂ, ಕೆಲವು ಕಾಲ ಸಂಚಾರವನ್ನೂ ಕೈಕೊಂಡನು.

ಬಸವಣ್ಣನ ಮನೆಯಲ್ಲಿಯೂ ಕೆಲವು ಬದಲಾಣೆಗಳಾಗಿದ್ದವು. ಚೆನ್ನಬಸವಣ್ಣನು ಶೈಶವವನ್ನು ಕಳೆದು ಬಾಲ್ಯದ ಬೆಳವಣಿಗೆಯಲ್ಲಿದ್ದನು, ಬಸವಣ್ಣನಿಲ್ಲದಾಗ ಅಕ್ಕನಾಗಮ್ಮನು ತನ್ನ ಸಾಧನೆಯೊಡನೆ ಚೆನ್ನಬಸವಣ್ಣನ ಲಾಲನೆ ಪಾಲನೆಯಲ್ಲಿಯೂ, ಮುಂದಿನ ಅವನ ಧಾರ್ಮಿಕ ಜ್ಞಾನಮಂದಿರದ ತಳಹದಿಯನ್ನು ನಿರ್ಮಿಸುವದರಲ್ಲಿಯೂ ಕಾಲವನ್ನು ಕಳೆಯುತ್ತಿದ್ದಳು. ಶಿವಸ್ವಾಮಿಯು ಸಾಧಕರ, ಸಿದ್ಧರ, ಶಿವಯೋಗಿಗಳ ಸಂದರ್ಶನದ ಹಂಬಲದಿಂದ, ಅವರನ್ನು ಅರಸುತ್ತ ಕಾಶಿ–ಕೇದಾರಗಳ ಕಡೆಗೆ ಒಮ್ಮೆ ಹೋದವನು ತಿರುಗಿ ಬರಲಿಲ್ಲ. ಇದರಿಂದ ಅಕ್ಕನು ಅಸಮಾಧಾನಗೊಂಡರೂ, ಅದನ್ನು ಶಿವಭಕ್ತಿಯಿಂದ ಸಾಧಿಸಿದ ಸಂಯಮದ ನೆರವಿನಲ್ಲಿ ಮನಸ್ಸಿನಿಂದ ಮಾಣಿಸಿದಳು. ನಾಗಲಾಂಬೆಯ ಸಂಸಾರವೆಂಬುದೇ ಬೇರೆ ಇರಲಿಲ್ಲ. ಆಕೆಯ ಹಿತಾಸಕ್ತಿಯೆಲ್ಲ ಬಸವಣ್ಣನಲ್ಲಿಯೇ ಕೇಂದ್ರೀಕೃತವಾಗಿದ್ದಿತು. ಅವನ ಪ್ರತಿಯೊಂದು

ಚಟುವಟಿಕೆಯ ಸಾಧನೆಗೂ ಆಕೆಯು ಪೂರಕಳು, ಪೋಷಕಳು, ಮಾರ್ಗದರ್ಶಕಳು ಆಗಿದ್ದಳು. ಬಸವಣ್ಣನ ಸೋದರಳಿಯನಾಗಿರುವಾಗ ಚೆನ್ನಬಸವಣ್ಣನ ಭವಿಷತ್ತಿನ ಚಿಂತೆಯೇ ಆಕೆಗಿರಲಿಲ್ಲ. ಅಕ್ಕನ-ಬಸವನ ಅನ್ಯೋನ್ಯ ಗೌರವಾದರಗಳು ದೈವಿಕವಾಗಿದ್ದವು. ಅವರಿಬ್ಬರೂ ತಮ್ಮ ಜೀವನದುದ್ದಕ್ಕೂ ಅಕ್ಕ-ತಮ್ಮ ಆಗಿ, ತಾಯಿ-ಮಗ ಆಗಿ ಪರಸ್ಪರ ಗುರುಶಿಷ್ಯರಾಗಿ ನಡೆದುದು ಸಾಧಾರಣವಾದ ಸಂಗತಿಯಲ್ಲ!

ಏಕಾಂತ ನಿಷ್ಠೆ

ಬಸವಣ್ಣನು ನದೀತೀರದ ನಿಬಿಡಾರಣ್ಯಗಳ ಮಧ್ಯದಲ್ಲಿಯ ರಮ್ಯಸ್ಥಳಗಳಲ್ಲಿ ಹಲಕೆಲವು ದಿವಸಗಳನ್ನು ಏಕಾಂತವಾಸದಲ್ಲಿ ಕಳೆ-ಕಳೆದು ಮರಳಿ ಬರುತ್ತಿದ್ದನು. ಗಿರಿಕಂದರಗಳ ಜನರಹಿತವಾದ ಪ್ರಸ್ತರಭೂಮಿಗಳೂ ಅವನನ್ನು ಆಕರ್ಷಿಸದೆ ಇರಲಿಲ್ಲ. ಮನೋಹರವಾದ ಸೃಷ್ಟಿಯಲ್ಲೆಲ್ಲ ಶಿವನ ಮಹಿಮೆಯನ್ನೂ ಶಿವಜಗನ್ಮಯತ್ವವನ್ನೂ ಕಾಣುತ್ತಿದ್ದನು.

ಸಿರಿಯೂರ ಬೆಟ್ಟದಲ್ಲಿರುವಾಗ ಒಮ್ಮೆ ಸಾಯಂಕಾಲದ ಶಿವಪೂಜೆಗೆ ಸಿದ್ಧವಾಗುತ್ತಿದ್ದನು. ಗುಡ್ಡದ ಇಳಿಜಾರಿನ ಝರಿಯಲ್ಲಿ ಮಿಂದು ಪೂಜೆಗೆ ಅಗ್ಗವಣಿಯನ್ನೂ ಪತ್ರ-ಪುಷ್ಪಗಳನ್ನೂ ತೆಗೆದುಕೊಂಡು ಮೇಲೆ ಏರಿಬಂದು ಮೂಡಲ ಮಗ್ಗಲಿನ ವಿಶಾಲವಾದ ಹಾಸುಬಂಡೆಯ ಮೇಲೆ ಗದ್ದುಗೆ ಹಾಸಿ ಕುಳಿತನು. ಹಿಂದೆ ಸೂರ್ಯ ಮರೆಯಾಗುವದರಲ್ಲಿದ್ದನು. ಮುಂದಿನ ಮರಬಳ್ಳಿಗಳು ಅವನ ಹೊಂಗಿರಣಗಳಿಂದ ಹೊಳೆಯುತ್ತಿದ್ದವು, ಮೇಲೆ ನೀಲವಾದ ಆಕಾಶ! ಕೆಳಗೆ ದಿಗಂತವವರೆಗೆ ಪಸರಿಸಿದ ಹಸಿರು ಹಾಸಿದ ಭೂಮಿ! ಪ್ರಸನ್ನ ಮನಸ್ಸಿನಿಂದ ಪೂಜೆ, ಜಪ, ಧ್ಯಾನಗಳು ಕ್ರಮವಾಗಿ ನಡೆದವು. ಧ್ಯಾನಾಸಕ್ತ ಬಸವಣ್ಣನ ದೃಷ್ಟಿ ಲಿಂಗದಲ್ಲಿ ನಟ್ಟು ಅಚಲವಾಯಿತು. ಶ್ವಾಸ ನಿಂತಿತು. ಷಡಕ್ಷರವು ಒಳಗಾಯಿತು. ಕರದ ಲಿಂಗ ಕರಗಿದಂತಾಗಿ ಭ್ರೂಮಧ್ಯದಲ್ಲಿ ನೀಲಗೋಲಕವುಂಟಾಗಿ ಹೊಯ್ದಾಡಿತು. ಅದು ಮೇಲಕ್ಕೇರಿ ಶುಭ್ರವಾಯಿತು. ಅಂಚುಗಳನ್ನು ಅಳಿಯಿಸಿ ಎಲ್ಲೆಲ್ಲಿಯೂ ವ್ಯಾಪಿಸಿತು. ಬಿಸಿಯಿಲ್ಲದ ಶುಭ್ರ-ಪ್ರಕಾಶ! ಸೂರ್ಯ, ಚಂದ್ರ, ಧರೆ, ಗಿರಿ, ನದಿಗಳೆಲ್ಲ ಅದರಲ್ಲಿ ಮೂಡಿದವು. ಮೂಡಿದರೇನು? ಕೂಡಲೆ ಉರಿಯಲ್ಲಿ ಬಿದ್ದ ಕರ್ಪುರದುಂಡೆಗಳಂತೆ ಆ ಬೆಳಕಿನಲ್ಲಿ ಬೆರೆತುಹೋದವು. ಬಳಿಕ ಕಾಣಿಸಿತು ಲಿಂಗದಾಕೃತಿ! ಗೋಳಕದ

ಅಗ್ರ ಕಾಣದೆತ್ತರದಲ್ಲಿ! ವೃತ್ತದ ತಳವು ಕಾಣದ ತಳದಲ್ಲಿ. ಬಳಿಕ ಎಲ್ಲವೂ ನೀಲವರ್ಣಕ್ಕೆ ತಿರುಗಿತು. ಅದೂ ಆಕುಂಚಿತವಾಯಿತು ಅಂಗೈಯ ಲಿಂಗವು ದೃಷ್ಟಿಗ್ರಾಹ್ಯವಾಯಿತು! ಸುಯ್ಯಲರು ಸುಳಿಯಿತು. ಉಸಿರಿನಲ್ಲಿ ಓಂಕಾರ ಮೆಲ್ಲನೆ ನುಸುಳಿತು. ಬಸವಣ್ಣನ ಮೈಯು ಮಾರ್ದವಗೊಂಡಿತ್ತು. ಮುಖ ದಲ್ಲಿ ಮಂದಸ್ಮಿತ ಮೂಡಿತ್ತು. ಸಂಧ್ಯಾಪ್ರಕಾಶವು ಸರಿಯುತಲಿತ್ತು! ಆಕಾಶ ದಲ್ಲಿ ನಕ್ಷತ್ರಗಳು ನೆರೆನೆರೆದು ಬಸವನ ದರುಶನಕ್ಕೆ ತವಕಿಸುತ್ತಿದ್ದವು! ಉಪಾಸ ನೆಯು ಪಾದೋದಕ-ಪ್ರಸಾದಗಳನ್ನು ಪೂರೈಸಿಕೊಂಡು ಅನುಭವದ ಮಟ್ಟ ದಲ್ಲಿ ಮುಂದುವರೆಯಿತು. ಕೂಡಲಸಂಗನನ್ನು (ಅಣ್ಣನು ಲಿಂಗವನ್ನು ಸಂಬೋಧಿಸುವ ನಾಮ 'ಕೂಡಲಸಂಗ') ನೋಡಿ ಮಡಿಪಾವಡದಲ್ಲಿ ಮಡಗಿ, ಮುಟ್ಟಿಗೆಯುಸ್ಸಿರುವ ಸಜ್ಜೆಯಲ್ಲಿ ಇಡುವಾಗ ಅವನಿಗೆ ನಗೆ ಬಂದಿತು. ಆ ಮೃದು ಹಾಸ್ಯಭಾವ ಗೀತವಾಗಿ ಹೊರಬಂದಿತು :

'ಜಗದಗಲ ಮುಗಿಲಗಲ ಮಿಗೆಯಗಲ ನಿಮ್ಮಗಲ;
ಪಾತಾಳದಿಂದತ್ತತ್ತ ನಿಮ್ಮ ಶ್ರೀ ಚರಣ;
ಬ್ರಹ್ಮಾಂಡದಿಂದತ್ತತ್ತ ನಿಮ್ಮ ಮುಕುಟ!
ಅಗಮ್ಯ ಅಗೋಚರ ಅಪ್ರತಿಮ ಲಿಂಗವೆ,
ಕೂಡಲ ಸಂಗಮದೇವಯ್ಯ,
ಎನ್ನ ಕರಸ್ಥಳಕ್ಕೆ ಬಂದು ಚುಳುಕಾದಿರಯ್ಯ!!'

ಹಾಡಿ ತೊನೆದು ತಲೆದೂಗಿ ಸಜ್ಜೆಯ ಮುಚ್ಚಿ 'ಸಂಗಾ' ಎಂದು ಎದ್ದಿದ್ದನು.

ಒಂದು ಸಲ ಕೃಷ್ಣೆಯ ತೀರವಿಡಿದು ಪೂರ್ವಕ್ಕೆ ಸಾಗಿ ಛಾಯೆಯ ಬಳಿಯ ನದಿಯ ಒಡಲಲ್ಲಿ ಪ್ರಪಾತದ ಮಗ್ಗಲಿನ ಗವಿಯಲ್ಲಿ ಎರಡು ಮೂರು ತಿಂಗಳು ಅನುಷ್ಠಾನ ಗೈದಿದ್ದನು. ಇಂತಹ ಪ್ರಸಂಗಗಳಲ್ಲಿ ಗುರೂಪದಿಷ್ಟ ಮಾರ್ಗಗಳ ಸಾಧನೆ ಮಾಡುತ್ತ ಆತ್ಮಾನುಸಂಧಾನದಿಂದ ದಿವ್ಯವಾದ ಅನು ಭವಾನಂದಗಳನ್ನು ಹೊಂದುತ್ತಿದ್ದನು. ಶಿವಯೋಗದ ಹಂತವು ಉನ್ನತ ಮಟ್ಟಕ್ಕೇರುತ್ತಿತ್ತು.

ದೇಶಾಟನ

ಹೀಗೆ ಆತ್ಮೋನ್ನತಿಯ ಪ್ರಕಾಶದಲ್ಲಿ ತಾನೊಬ್ಬನೇ ಬೆರೆದಿರಬೇಕೆಂದು ಬಯಸಿದವನಲ್ಲ ಬಸವೇಶ! ಅವನ ಪರಿಶುದ್ಧವಾದ ಅಂತಃಕರಣಗಳು ಮಾನವ

ರಲ್ಲೆಲ್ಲ ಆ ಬೆಳಕನ್ನೇ ಕಾಣಲು ಎಳಸುತ್ತಿದ್ದವು. ಅವನು ಗುರುಕುಲದಲ್ಲಿದ್ದರೂ ಸಂದರ್ಭಾನುಸಾರವಾಗಿ ಒದಗಿ ಬಂದ ಸಾಮಾಜಿಕ ವ್ಯವಹಾರದ ರೀತಿ-ನೀತಿಗಳನ್ನೂ ಸಂಗವಾದವರ ಪರಿಸ್ಥಿತಿಗಳನ್ನೂ ಪರಿಶೀಲಿಸುತ್ತಿದ್ದನು. ಅಲ್ಲೆಲ್ಲ ಅವನ ಹೃದಯು ಸತ್ಯ, ನ್ಯಾಯು, ದಯೆ, ಭಕ್ತಿಗಳನ್ನೇ ಅರಸುತ್ತಿತ್ತು. ಆದರೆ ಅವನಿಗೆ ಕಾಣಸಿಗುತ್ತಿದ್ದುದೇನು ? ದುಃಖ-ದಾರಿದ್ರ್ಯ, ಕಷ್ಟ-ಕಾರ್ಪಣ್ಯ, ಮೂಢನಂಬಿಗೆ-ವಂಚನೆ ಇದರಿಂದ ಅವನ ಮನಸ್ಸು ಮರುಕಗೊಂಡಿತು, ಬೇಸರಗೊಳ್ಳಲಿಲ್ಲ ! ಸಮಾಜಜೀವನದ ಆಳವನ್ನು ಕಾಣುವದಕ್ಕೂ ಅದನ್ನು ಸುಧಾರಿಸುವದಕ್ಕೂ ಆತುರಗೊಂಡನು. ಇದರಿಂದಾಗಿ ಗ್ರಾಮಾಂತರಗಳ ಜನರನ್ನು ಕಾಣಲು ಇಚ್ಛಿಸಿದನು. ತನಗಿಂತ ಮೊದಲು ಆಶ್ರಮದಿಂದ ನಿರ್ಗಮಿಸಿ ಸ್ವಸ್ಥಳ ಸೇರಿದ ಸಹಾಧ್ಯಾಯಿಗಳ ಆಮಂತ್ರಣ ಸ್ವೀಕರಿಸುತ್ತಲೂ ಯಾತ್ರಾತಂಡಗಳನ್ನು ಅನುಸರಿಸುತ್ತಲೂ ಹಲವು ಪ್ರವಾಸಗಳನ್ನು ಮಾಡಿದನು. ಇದರಲ್ಲಿ ಅವನು ಅಗಣಿತವಾದ ಲೌಕಿಕಾನುಭವಗಳನ್ನು ಪಡೆದನು. ದಿಟ್ಟತನ-ಕಷ್ಟಸಹಿಷ್ಣುತೆಗಳ ಪಾಠ ಕಲಿತನು. ರಾಜಕೀಯದಲ್ಲಿಯ ನ್ಯಾಯಾನ್ಯಾಯಗಳನ್ನೂ ಅರಿತನು. ವಿದ್ಯೆಯು ಕೆಲವರ ಸೊತ್ತಾಗಿರುವದನ್ನೂ ಧರ್ಮದ ಹೆಸರಿನಲ್ಲಿ ವಿಶಿಷ್ಟವರ್ಗದವರು ಸಾಮಾನ್ಯರ ಶೋಷಣೆ ಮಾಡುವದನ್ನೂ ಕಂಡನು. ಕುಟುಂಬದಲ್ಲಿ ನೆಮ್ಮದಿ ಇಲ್ಲದಿರುವದಕ್ಕೆ ಸ್ತ್ರೀಯರನ್ನು ಅಜ್ಞಾನದಲ್ಲಿಟ್ಟುದೂ ಕಾರಣವೆಂಬುದನ್ನು ಮನವರಿಕೆ ಮಾಡಿಕೊಂಡನು. ಧಾರ್ಮಿಕ ಮೂಢತೆಯು ದುರ್ಲಾಭ ಪಡೆದು ಮೆರೆಯುವ ಪರೋಪಜೀವಿಗಳ ಅಧ್ಯತೆಯಿಂದ ಅಸಮ್ಮತನಾದನು. ವರ್ಣಧರ್ಮಗಳ ಆಚರಣೆಯಲ್ಲಿ ಉಚ್ಚವರ್ಣದವರು ಕೀಳುಕುಲದವರೆನಿಸಿಕೊಳ್ಳುವವರನ್ನು ಪಶುಗಳಂತೆ ನಡಿಸಿಕೊಳ್ಳುವದನ್ನು ಕಂಡು ಕನವರಿಸಿದನು. ಈ ತಿರಸ್ಕೃತ ಸಮಾಜದ ಜನರು ಪರಿಸ್ಥಿತಿಯ ಒತ್ತಡಕ್ಕೆ ಒಳಗಾಗಿ ಮಾಡಬಾರದ ಪಾಪಕೃತ್ಯಗಳನ್ನು ಮಾಡಿ, ದುಃಖಭಾಜನರಾಗುತ್ತಿರುವದನ್ನು ನೋಡಿ ಕಣ್ಣೀರಿಟ್ಟನು. ಈ ದೀನದಲಿತರ ಉದ್ಧಾರವೇ ಸಮಾಜಸೇವೆಯ ಸದವಕಾಶವೆಂದು ಅವನ ಅಂತರ್ವಾಣಿ ಸಾರಿ ನುಡಿಯಿತು.

ಪ್ರತಿಯೊಂದು ಸಂಚಾರದಿಂದ ಮರಳಿ ಬಂದಬಳಿಕ ನಾಗಲಾಂಬಿಯೊಡನೆ ಗುರುಸನ್ನಿಧಿಯ ಸೇರಿ, ಪ್ರವಾಸದ ವಿಸ್ತೃತ ವರದಿಯನ್ನು ಒಪ್ಪಿಸು

ವದು ರೂಢಿಯಾಗಿತ್ತು. ಆ ಪ್ರವಾಹದಿಂದ ಅವನ ಮನೋಭಾವನೆಗಳು ಆಗ ವ್ಯಕ್ತವಾಗುತ್ತಿದ್ದವು. ಒಮ್ಮೆ ಕುಲಪತಿಗಳು–

‟ಬಸವಣ್ಣ, ಲೋಕೋದ್ಧಾರವೇ ನಿನ್ನ ಮಣಿಹವಯ್ಯ! ಅದರ ಹೊಣೆಗೆ ನಿನ್ನ ಬುದ್ಧಿ–ಮನಸ್ಸುಗಳು ಸಿದ್ಧವಾಗುತ್ತಲಿವೆ."

ಎಂದು ಎದೆ ತುಂಬಿ ನುಡಿದರು. ಅದಕ್ಕೆ ಬಸವಣ್ಣನು:

‟ಗುರುದೇವಾ, ಅಂತಹ ಧುರೀಣನಾದೇನೆಯೇ? ಕೂಡಲ ಸಂಗನು ಮಾಡಿಸಿದಂತೆ ಮಾಡುವೆ; ಆಡಿಸಿದಂತೆ ಆಡುವೆ. ನಾನೇನ ಅರಿವೆನು? ಈ ಚರಣಗಳೇ ಸರ್ವಜ್ಞಾನ–ಸರ್ವಬಲ!" ಎಂದು ನಮಸ್ಕರಿಸಿದನು.

ಬಸವಣ್ಣನು ಎಲ್ಲೆಲ್ಲಿಯೂ ಅಜ್ಞಾನ–ದುಃಖಗಳನ್ನೇ ಕಂಡಿದ್ದರೂ ಅಲ್ಲಲ್ಲಿ ಜ್ಞಾನಜ್ಯೋತಿಯನ್ನು ಹೊತ್ತಿಸಿ, ಧರ್ಮಜಾಗ್ರತಿಯನ್ನು ಉಂಟು ಮಾಡುವವರನ್ನೂ ನೋಡಿದ್ದನು. ಅಂತಹ ಶೈವಮಠಗಳ ಅಧಿಪತಿಗಳನ್ನೂ ಪಂಡಿತರನ್ನೂ, ಸಾಮಾನ್ಯರ ಹಿತ ಚಿಂತಿಸುವ ಸಮಾಜಸೇವಕರನ್ನೂ, ಸಂದ ರ್ಶಿಸಿದ್ದನು. ಅವರ ಕಾರ್ಯಗಳ ಅಲ್ಪ ಸ್ವಲ್ಪ ಪರಿಣಾಮಗಳನ್ನು ಅರಿತು, ಅವರೆಲ್ಲರ ಅನುಭವಗಳನ್ನು ಸಂಗ್ರಹಿಸಿ ಆಲೋಚಿಸಿದನು. ಈ ಪ್ರಯತ್ನಗಳಲ್ಲಿ ಪರಸ್ಪರ ಹೊಂದಿಕೆಯೂ ಸಂಘಟನೆಯೂ ಇಲ್ಲದಿರುವದರಿಂದ ಅವರು ಕೃತ ಕೃತ್ಯರಾಗುತ್ತಿಲ್ಲವೆಂದು ತಿಳಿದುಕೊಂಡನು. ಇಂತಹ ಹಲವು ಸಮಸ್ಯೆಗಳಿಗೆ ಪರಿಹಾರದ ಬೇರೆ ಬೇರೆ ದಾರಿಗಳನ್ನು ಅರಿಯುವವದಕ್ಕೂ ಅಲ್ಲಲ್ಲಿಯ ಪ್ರಭುತ್ವ ಗಳ ಪ್ರಜಾಪಾಲನಧರ್ಮವನ್ನು ತಿಳಿದುಕೊಳ್ಳುವದಕ್ಕೂ ಕರ್ನಾಟಕದ ಹೊರಗೆ ನೆರೆಹೊರೆಯ ರಾಜ್ಯಗಳಲ್ಲಿಯೂ ಸಂಚರಿಸಿದನು. ಈ ಸಂಚಾರದಲ್ಲಿಯೂ ಆಕರ್ಷಕ ಪ್ರಶಾಂತ ವನಪ್ರದೇಶಗಳು ದೊರೆತಾಗ ಅಲ್ಲಿ ಕೆಲವು ದಿನ ನಿಂತು ಮನವಾರೆ ಧ್ಯಾನಾನುಸಂಧಾನದಲ್ಲಿ ತೊಡಗುತ್ತಿದ್ದನು. ಹೀಗೆ ಇಲ್ಲಿಯೂ ಅಲ್ಲಿಯೂ (ಇಹ-ಪರಗಳಲ್ಲಿ) ಸಲ್ಲುವ ಅವನ ಪರಿಪಕ್ವ ಜೀವನದ ತಳಹದಿಯು ಸಿದ್ಧವಾಗುತಲಿತ್ತು! ಅಧ್ಯಯನ ಕಾಲದ ಕೊನೆಯ ಹಂತದಲ್ಲಿ ಬಸವಣ್ಣನು ಕೈಕೊಂಡ ಒಂದು ದೀರ್ಘಸಂಚಾರದ ವಿವರವನ್ನು 'ಉದಯರವಿ'ಯು ವಿವ ರಣೆಗಳಿಂದ ಸಂಗ್ರಹಿಸಿ ಇಲ್ಲಿ ಕೊಟ್ಟಿದೆ:—

ಬನವಾಸಿ ನಾಡಿನಿಂದ ಯಾತ್ರಾ ತಂಡವೊಂದು ಸಂಗಮಕ್ಕೆ ಬಂದಿತು. ಅದು ಸೌರಾಷ್ಟ್ರದ ಸೋಮನಾಥಕ್ಷೇತ್ರವನ್ನು ಸಂದರ್ಶಿಸುವದಾಗಿತ್ತು. ಅದ ರಲ್ಲಿ ಗೋವೆಯ ಕದಂಬ ಅರಸು ಶಿವಚಿತ್ತ ಪೆರ್ಮಾಡಿಯು ಪರಿವಾರ ಸಹಿತ

ಹೊರಟಿದ್ದನು. ರಕ್ಷಕಭಟರು ಹೇರಿನವರು ಸೇರಿ ನೂರಿನ್ನೂರು ಜನರಿದ್ದರು. ಬಸವೇಶನು ಗುರುಗಳ ಅನುಜ್ಞೆಪಡೆದು ಅವರೊಡನೆ ದೇಶಾಟನಕ್ಕೆ ಹೊರಟನು. ಜಾತವೇದಿಮುನಿಗಳ ಪರಮಶಿಷ್ಯನೆಂದು, ಶಿವಚಿತ್ರರಾಜನು ಅವನನ್ನು ಆದರದಿಂದ ಸ್ವಾಗತಿಸಿದನು.

ಕ್ಷೇತ್ರಸ್ಥಾನಗಳಲ್ಲೆಲ್ಲ ಆರಾಮವಾಗಿ ಕಾಲಕಳೆಯುತ್ತ ಪ್ರಯಾಣವು ಸಾಗುತಲಿತ್ತು. ಕರ್ಹಾಡದ ಮೇಲಿಂದ ಸಹ್ಯಾದ್ರಿಯನ್ನು ದಾಟಿ, ಕೊಂಕಣವನ್ನು ಸೇರಿ ಗರಳಪುರಿಯನ್ನು ಕಂಡರು. ಅಲ್ಲಿಯ ಗುಹಾಂತರ್ದೇವಾಲಯಗಳನ್ನು ನೋಡಿ ಬಸವಣ್ಣನು ಬೆರಗಾದನು. ಮುಂದೆ ನಾಗಸಾರಿಕಾ (ನವಸಾರಿ), ಭೃಗುಕಚ್ಛ (ಭಡೋಚ)ಗಳ ಮೇಲಿಂದ ಸ್ತಂಭತೀರ್ಥದ ವರೆಗೆ ಬಂದಾಗ ಚಾಲುಕ್ಯರಾಜ್ಯದ ಸೀಮೆಯನ್ನು ದಾಟಿ ಗುಜರಾಥವನ್ನು ಪ್ರವೇಶಿಸಿದಂತಾಯಿತು. ಕರ್ಣೋಪಕರ್ಣವಾಗಿ ಕೇಳುತ್ತಿದ್ದ, ಉತ್ತರ ಹಿಂದುಸ್ತಾನದಲ್ಲಿಯ ಯವನರ ದಾಳಿಯ ಕತೆಯನ್ನು ಅಲ್ಲಿಗೆ ಬಂದಾಗ ಪ್ರತ್ಯಕ್ಷ ಕಾಣುವಂತಾಯಿತು. ಸೌರಾಷ್ಟ್ರದ ಬಹುಭಾಗವು ಮ್ಲೇಂಛರ ವಶವಾಗಿದ್ದಿತು. ಗುರ್ಜರ ರಾಜರಿಗೂ ಅವರಿಗೂ ಯುದ್ಧವು ನಡೆಯುತ್ತಲೇ ಇತ್ತು.

ಶಿವಚಿತ್ರರಾಜನು ತಂಡವನ್ನು ಸ್ತಂಭತೀರ್ಥದಲ್ಲಿ ಬಿಟ್ಟು ವಲ್ಲಭಿಯಲ್ಲಿರುವ ಗುರ್ಜರ ಸೇನಾಧಿಪತಿಯನ್ನು ಕಾಣಲು ಹೋದನು. ಅವನ ಸಂಗಡದ ಭಟರೊಡನೆ ಬಸವಣ್ಣನೂ ಹೋದನು. ಭೆಟ್ಟಿಯನಂತರ ಇವರ ಉದ್ದೇಶವನ್ನು ತಿಳಿದ ಸೇನಾನಾಯಕನು ತಿರಸ್ಕಾರದಿಂದ ನುಡಿದನು:

“ಒಂದು ನೂರು ವರ್ಷಗಳಿಂದ ನಾವು ಯವನರ ದಾಳಿಗಳನ್ನು ಎದುರಿಸಿ, ದೇಶ-ಧರ್ಮ-ದೇವಾಲಯಗಳ ರಕ್ಷಣೆಗೆ ಹೋರಾಡುತ್ತಿದ್ದೇವೆ. ನಿಮ್ಮಲ್ಲಿಯ ರಾಜರಾಗಲಿ ಜನರಾಗಲಿ ನಮ್ಮ ಸಹಾಯಕ್ಕೆ ಬಂದುದಿಲ್ಲ. ಕೇವಲ ಯಾತ್ರಾರ್ಥಿಗಳಾಗಿ ಮಾತ್ರ ಬರುತ್ತಿದ್ದೀರಿ. ಸೋಮನಾಥವನ್ನೇನು ನೋಡುತ್ತೀರಿ? ಅದು ಹಾಳಾಗಿದೆ. ಪ್ರಭಾಸನಗರವು ಯವನರ ವಶದಲ್ಲಿದೆ. ಅಲ್ಲಲ್ಲಿ ಯುದ್ಧವು ನಡೆಯುತ್ತಲಿದೆ. ಈ ಸಲ ನಾವು ಸೋತರೆ ಈ ದಾಳಿಗಳು ದಕ್ಷಿಣಕ್ಕೆ ಹಬ್ಬುವವೆಂಬುದು ನಿಮಗೆ ಗೊತ್ತೇ ಇಲ್ಲ.”

ಈ ಚುಚ್ಚುನುಡಿಗಳಿಂದ ಶಿವಚಿತ್ರನು ನಿರುತ್ತರನಾಗಿ ತಲೆಬಾಗಬೇಕಾಯಿತು. ಬಸವಣ್ಣನ ಅಂತರಂಗದಲ್ಲಿಯೂ ಕಳವಳದ ಹುಯಿಲೆದ್ದಿತು. ಇದಲ್ಲದೆ ರಾಷ್ಟ್ರೀಯ ರೂಪದ ಒಂದು ಮಹತ್ತರವಾದ ನ್ಯೂನತೆಯಿದೆಯೆಂದು

ಅವನ ಮನದಲ್ಲಿ ಮೂಡಿತು. ದಕ್ಷಿಣದ ರಾಜರಲ್ಲಿ ಐಕ್ಯ, ಶೌರ್ಯ-ಸಹಕಾರಗಳ ಅಗತ್ಯವೆಷ್ಟೆಂಬದರ ಅರಿವಾಯಿತು. ತನ್ನ ಜೀವನದಲ್ಲಿಯ ಕರ್ತವ್ಯಗಳಿಗೆ ಮತ್ತೊಂದು ಕವಲೊಡೆದಂತೆನಿಸಿತು. ಇತ್ತ ಶಿವಚಿತ್ತಪೆರ್ಮಾಡಿಯ ರಕ್ತದ ಬಿಸಿಯೇರಿತ್ತು. ಆತನು ವಿನಯದಿಂದ ಸೇನಾಪತಿಗೆ ಕೈ ಮುಗಿದು ಹೇಳಿದನು:

"ನನ್ನೊಡನೆ ಇರುವ ಮೂವತ್ತು ಜನ ರಾಹುತರೊಡನೆ ನಿಮ್ಮನ್ನು ಕೂಡಿ ಯವನರ ಸಂಗಡ ಹೋರಾಡಲು ಸಿದ್ಧನಿದ್ದೇನೆ. ಈಗ ನನ್ನಿಂದಾಗುವದು ಇಷ್ಟು ಮಾತ್ರ!"

ಸೇನಾನಿಯು ಮಂದಸ್ಮಿತನಾಗಿ ಹೀಗೆಂದನು:

"ನಿಮ್ಮ ಮಾತಿನಿಂದ ಸಂತೋಷವಾಯಿತು. ಈಗ ರಣರಂಗವಾಗಿರುವ ಪ್ರದೇಶವು ಕುದುರೆಗಳ ಓಡಾಟಕ್ಕೆ ಅನುಕೂಲವಾಗಿಲ್ಲ. ಒಂಟೆಗಳೇ ಬೇಕು. ನಮ್ಮಲ್ಲಿ ಐದು ಸಾವಿರ ಒಂಟೆಗಳೂ ಇಪ್ಪತ್ತು ಸಾವಿರ ಕಾಲಾಳುಗಳೂ ಇದ್ದಾರೆ. ಈ ಸಾರೆ ನಮಗೆ ಗೆಲುವಾಗುವಂತಿದೆ. ಈಗ ಪ್ರಭಾಸಕ್ಕೆ ಹೋಗುವ ನಮ್ಮ ಒಂದು ಸಣ್ಣ ದಳದೊಡನೆ ನಿಮ್ಮನ್ನು ಅಲ್ಲಿಗೆ ಕಳಿಸುತ್ತೇನೆ. ನೀವು ಅಲ್ಲಿಯ ಅವಸ್ಥೆಯನ್ನು ಕಣ್ಣಾರೆ ಕಾಣಿರಿ! ನಿಮ್ಮ ದೇಶಕ್ಕೆ ಹೋದಮೇಲೆ ನಿಮ್ಮ ಜನರಿಗೆ ದೇಶ-ಧರ್ಮಗಳ ರಕ್ಷಣೆಗೆ ನೆರವಾಗಲು ತಿಳಿಸಿ ಹೇಳಿರಿ."

ಬಸವೇಶ "ಅವಶ್ಯವಾಗಿ" ಎಂದು ತಲೆಯಾಡಿಸಿದನು.

ಅದೇ ದಿನ ರಾತ್ರಿ ಶಿವಚಿತ್ತಪೆರ್ಮಾಡಿಯೂ ಬಸವಣ್ಣನೂ ಸೇನಾನಾಯಕನ ಯೋಜನೆಯಂತೆ ಒಂಟೆಗಳ ಪಡೆಯೊಡನೆ ಪ್ರಭಾಸಕ್ಕೆ ಹೊರಟು ಮೂರನೆಯ ದಿನ ಅಲ್ಲಿಗೆ ಮುಟ್ಟಿದರು. ಅಷ್ಟರಲ್ಲಿ ಹಿಂದೂ ಸೈನ್ಯಗಳು ಸೋಮನಾಥಕ್ಷೇತ್ರವನ್ನು ಮೂರನೆಯ ಸಲ ಮರಳಿ ವಶಪಡಿಸಿಕೊಂಡಿದ್ದವು. ಈ ಗೆಲವಿನ ವಾರ್ತೆಯನ್ನು ಕೇಳಿ ನಮ್ಮ ಯಾತ್ರಿಕರಿಗೆ ಆನಂದವಾಯಿತು; ಅನುಕೂಲವೂ ಆಯಿತು.

ಸೋಮನಾಥ ಮಂದಿರದ ಭಗ್ನಾವಶೇಷಗಳನ್ನು ನೋಡಿ ಯಾತ್ರಿಕರು ವ್ಯಥೆಪಟ್ಟರು. ಜ್ಯೋತಿರ್ಲಿಂಗಕ್ಕೆ ಅರ್ಚನೆಯನ್ನೆಸಗಿ ಮರಳಿದರು. ಅಲ್ಲಿ ರಾಜಗುರು ಪಾಶುಪತಾಚಾರ್ಯ ಭವಬೃಹಸ್ಪತಿಯ ಪರಿಚಯವಾಯಿತು. ಅವರೊಡನಾದ ಮಾತುಕತೆಗಳಿಂದ ಬಸವಣ್ಣನು 'ಧಾರ್ಮಿಕೋನ್ನತಿಯ ಸಾಧನೆಯು ರಾಜಕೀಯ ಪರಿಸ್ಥಿತಿಯ ಒಳ್ಳೆಯತನವನ್ನು ಅವಲಂಬಿಸಿದೆ' ಎಂಬು

ದನ್ನು ಮನಗಂಡು ತನ್ನ ಜೀವನದಲ್ಲಿ ಕೆಲವೊಂದು ಕರ್ತವ್ಯಗಳನ್ನು ನಿರ್ದಿಷ್ಟ ಪಡಿಸಿಕೊಂಡನು. ಅವರ ಆದೇಶದಂತೆ ಇಳಾಪುರಿ-ಅಜಂತೆಗಳ ದರ್ಶನ ಮಾಡುವದನ್ನೂ ನಿಶ್ಚಯಿಸಿಕೊಂಡನು. ಪ್ರಭಾಸದಿಂದ ಮರಳಿ ವಲ್ಲಭಿಗೆ ಬಂದ ಬಳಿಕ ಶಿವಚಿತ್ತರ ಯಾತ್ರಾತಂಡವು ಮೇಧಾಪಥದಕಡೆಗೂ ಬಸವಣ್ಣನು ಇಳಾಪುರಿಗೂ ಅಗಲಿ ಹೊರಟರು. ಬಸವೇಶನಿಗೆ ಬೌದ್ಧಯಾತ್ರಾ ತಂಡವೊಂದು ಜತೆಯಾಯಿತು. ಅವರೊಡನೆ ಮೊದಲು ಅಜಂತೆಗೆ ಬಂದನು. ಅಲ್ಲಿಗೆ ಮರಳಿ ಚಾಲುಕ್ಯರ ರಾಜ್ಯವನ್ನು ಪ್ರವೇಶಿಸಿದಂತಾಯಿತು. ಬೆಟ್ಟಗಳಲ್ಲಿ ಗುಹಾ-ವಿಹಾರಗಳನ್ನು ಕೊರೆದ ಅದ್ಭುತ ಕಾರ್ಯವನ್ನು ಆಶ್ಚರ್ಯದಿಂದ ನೋಡಿದನು. ಅವುಗಳಲ್ಲಿ ಅಷ್ಟೇ ರಮ್ಯವಾದ ಚಿತ್ರಗಳನ್ನು ನೋಡಿ ಬೆರಗಾದನು. ಆಗ ಅಲ್ಲಿ ಶಿಲಾಖಂಡಗಳ ಪರಿಶೀಲನೆಗೆ ಕರೆಯಲ್ಪಟ್ಟಿದ್ದ ಸ್ಥಪತಿಗಳ ಮಂಡಲದಲ್ಲಿದ್ದ ಐಹೊಳೆಯ ವಿಶ್ವಕರ್ಮಾಚಾರ್ಯನ ಭೆಟ್ಟಿಯಾಯಿತು.

ವಿಶ್ವಕರ್ಮಾಚಾರ್ಯನು ಪ್ರತ್ಯಕ್ಷ ನಿದರ್ಶನಗಳಿಂದ ಶಿಲಾಹೃದಯಗಳ ರಹಸ್ಯವನ್ನೂ ಶಿಲ್ಪಶಾಸ್ತ್ರದಲ್ಲಿಯ ಅನೇಕ ಸಂಗತಿಗಳನ್ನೂ ಬಸವಣ್ಣನಿಗೆ ತಿಳಿಸಿಕೊಟ್ಟನು. ಅವನೊಡನೆ ಇಳಾಪುರಿಗೂ ಬಂದನು. ಅಲ್ಲಿ ರಾಷ್ಟ್ರಕೂಟರ ಕನ್ನರದೇವನು ಕೊರಿಸಿದ ಜಗದ್ವಿಖ್ಯಾತವಾದ ಕೈಲಾಸನಾಥನ ದೇವಾಲಯ-ಬೆಟ್ಟದ ಭಾಗವಾಗಿರುವ ಸಮಸಾಂದ್ರಹೃದಯದ ಒಂದು ಶಿಲಾಖಂಡವನ್ನು ಸುತ್ತಲಿನ ಗಿರಿಪ್ರದೇಶದಿಂದ ಪ್ರತ್ಯೇಕಿಸಿ ದೇವಾಲಯದ ಬಾಹ್ಯಸ್ವರೂಪಕ್ಕೆ ಕೊರೆದು, ಬಳಿಕ ಒಳಭಾಗದ ಗೋಡೆ, ಕಂಬ, ಬೋದುಗೆ, ಮಾಡ, ಮಂಟಪ, ಪೀಠ, ಗೊಂಬೆ, ಸುಳಿವು ಇವನ್ನೆಲ್ಲ ಕೊರೆದು ಬಿಡಿಸಿದ, ಶ್ರೇಷ್ಠ ಕಲಾಕೃತಿಯು ಅದ್ಭುತ ದೇವಾಲಯವನ್ನು ವಿಶ್ವಕರ್ಮಾಚಾರ್ಯನ ವಿವರಣೆಯೊಂದಿಗೆ ನಿರೀಕ್ಷಿಸುವದರಲ್ಲಿ ಬಸವೇಶನು ಮೈಮರೆತುಬಿಟ್ಟನು. ಮೂರು ನೂರು ವರ್ಷಗಳ ಹಿಂದೆ ೨೦ ವರ್ಷ ದುಡಿದ ಸಾವಿರಾರು ಶಿಲ್ಪಿಗಳು, ಭವ್ಯ ಮನೋಹರ ಕಲಾಯೋಗದಿಂದ ಅಮರರಾದುದನ್ನು ಕೊಂಡಾಡಿ ಆನಂದ ಭಾಷ್ಪಗಳನ್ನು ಕರೆದನು. ಆ ಪ್ರದೇಶಗಳಲ್ಲಿ ಆರು ವಾರ ವಿಹರಿಸಿ ಸಂಗಮಕ್ಕೆ ಬಂದನು.

ಈ ಸಂಚಾರದಲ್ಲಿಯ ಸರ್ವಸಂಗತಿಗಳನ್ನು ತನ್ನ ಮನಸ್ಸಿಗಾದ ಪರಿಣಾಮಗಳನ್ನು ಎಂಟು ದಿನಗಳ ವರೆಗೆ ಆಶ್ರಮದಲ್ಲಿ ವಿವರಿಸಿದನು.

೪. ಜೀವನದ ಧ್ಯೇಯ!

ದಿವ್ಯ ಜೀವನದ ಮುಂಬೆಳಗು

ಬಸವೇಶನು ಕೆಲವು ಸಾರೆ ಬಾಗೇವಾಡಿಗೂ ಹೋಗಿಬಂದನು ಆ ಪ್ರಯಾಣಗಳಿಗೆ ಮಾದಿರಾಜನ ಪ್ರೇಮದ ಕರೆಯು, ಇಲ್ಲವೆ ಯೋಗಕ್ಷೇಮವನ್ನರಿವ ಬಯಕೆಯು ಕಾರಣವಾಗುತ್ತಿತ್ತು. ದೀನದಯಾಳು ಚಂದಿರಾಜನು ಜಾಗ್ರತಗೊಳಿಸಿದ ಹಿಂದುಳಿದ ಸಮಾಜದಲ್ಲಿ ಮೊದಲು ಬಸವಣ್ಣನಿಗೆ ಬಾಲಸ್ನೇಹಿತರಾಗಿದ್ದವರು ಈಗ ಪ್ರೌಢರಾಗಿದ್ದರು; ಬಾಲ್ಯದಲ್ಲಿಯೇ ವಿಶಾಲವಾಗಿದ್ದ ಬಸವಣ್ಣನ ಹೃದಯವನ್ನು ಅವರು ಅರಿತವರಾಗಿದ್ದರು. ಬಸವೇಶನು ಬಂದಾಗಲೆಲ್ಲ ಆ ಮುಗ್ಧಭಕ್ತಿಯ ಜನರು ಅವನನ್ನು ಹೆಗಲೇರಿಸಿ ಕುಣಿಯುತ್ತಿದ್ದರು. ಬಸವೇಶನು ತನ್ನ ಒಳ್ಳೆಯ ನಡೆನುಡಿಗಳಿಂದ ಅವರ ಹೃದಯವನ್ನು ಸೇರಿ,ಅವರಿಗೆ ವಿನಯ ಉಪಕಾರಗಳ ಆಚಾರಣೆಯನ್ನು ಕಲಿಸಿ ಬುದ್ಧಿಗೆ ಬೆಳಕು ಕೊಟ್ಟನು; ಧರ್ಮಜ್ಞಾನದಲ್ಲಿ ಆಸಕ್ತಿಯನ್ನು ಕುದುರಿಸಿದನು. ಜನ್ಮಸ್ಥಾನದಲ್ಲಿ ಅವನನ್ನು ಪ್ರೀತಿಸುವ ಜನರು ಹೆಚ್ಚಾದರು. ಮುಂದೆ ಮುಂದೆ ಅವನು ಬಂದಾಗ ಸಾಮೂಹಿಕ ಉತ್ಸವದಿಂದ ಸ್ವಾಗತಿಸಿ ಅವನ ಮಾತುಗಳನ್ನು ಕೇಳಲು ಸಭೆಗಳನ್ನು ಏರ್ಪಡಿಸುತ್ತಿದ್ದರು. ಬಸವಣ್ಣನು ಈ ಸಂದರ್ಭಗಳನ್ನು ಸರಿಯಾಗಿ ಉಪಯೋಗಿಸಿಕೊಳ್ಳಲು ಮೊದಲು ಮಾಡಿದನು. ಗುರುವಿತ್ತರಿವ ಸ್ಮರಿಸಿ, ಲಿಂಗಧ್ಯಾನಗೈದು, ಜಂಗಮದ ಬೆಳಗ ಭಾವಿಸಿ ಎದೆ ತುಂಬಿ ಸಹೋದರರನ್ನು ಸಂಬೋಧಿಸಿ ಒಳ್ಳೆಯ ಮಾತುಗಳನ್ನು ಹೇಳುತ್ತಿದ್ದನು. ಅಲ್ಲಿಂದಲೇ ತನ್ನ ಸಾಮಾಜಿಕ ಸೇವೆಯನ್ನು ಗೆಲವಾಗಿ ಆರಂಭಿಸಿದನು.

ಆಗ ಸಮಾಜದಲ್ಲಿ ಮನೆಮಾಡಿ ಪೀಡಿಸುತ್ತಿದ್ದ ಭೂತಗಳೆಂದರೆ ವರ್ಣಧರ್ಮದ ಮೇಲು ಕೀಳು ಭಾವನೆ ! ಸ್ವರ್ಗದಾಸೆ! ನರಕದ ಭಯ ! ಇವುಗಳ ನೆರವಿನಲ್ಲಿ ಪರೋಪಜೀವಿಗಳು ಸಮಾಜಶೋಷಣೆ ನಡಿಸುತ್ತಿರುವದು ಅಸಹನೀಯವಾಗಿತ್ತು. ಇದರ ಉಚ್ಚಾಟನೆ ಅವಶ್ಯವಾಗಿ ಕಂಡಿತ್ತು ಬಸವೇಶ

ನಿಗೆ ! ಆದರೂ ಆತನು ಕೋಪ–ತಾಪ–ಆವೇಶಗಳಿಗೊಳಗಾಗಿ ಮಾತಾಡುತ್ತಿರಲಿಲ್ಲ. ಮೃದುವಾದ ಮಾತು ಯಾವಾಗಲೂ !

"ದೇವಲೋಕ ಮರ್ತ್ಯಲೋಕವೆಂಬುದು ಬೇರಿಲ್ಲ ಕಾಣಿ ಭೋ!
ಸತ್ಯವ ನುಡಿವುದೆ ದೇವಲೋಕ!
ಮಿಥ್ಯವ ನುಡಿವುದೆ ಮರ್ತ್ಯಲೋಕ;
ಆಚಾರವೆ ಸ್ವರ್ಗ, ಅನಾಚಾರವೇ ನರಕ.
ಕೂಡಲ ಸಂಗಮದೇವಾ ನೀವೇ ಪ್ರಮಾಣ!
ಪುಣ್ಯ ಪಾಪವೆಂಬುವು ತಮ್ಮಿಷ್ಟ ಕಂಡಿರೇ!
ಅಯ್ಯಾ ಎಂದಡೆ ಸ್ವರ್ಗ, ಎಲವೋ ಎಂದಡೆ ನರಕ.
ದೇವಾ, ಭಕ್ತ, ಜಯ, ಜೀಯಾ ಎಂಬ ನುಡಿಯೊಳಗೆ
ಕೈಲಾಸನೇ ಇದೆ ಕೂಡಲ ಸಂಗಮದೇವಾ !

ಹೀಗೆ ಬಗೆದುಂಬುವ ನಲ್ನುಡಿಗಳಿಂದ ಅಲ್ಲದುದನ್ನು ತೊಲಗಿಸುವ, ಹಿತವಾದುದನ್ನು ಬಿಂಬಿಸುವ ಯತ್ನಮಾಡುತ್ತಿದ್ದನು. ದುಃಖಿತರ ಬಗೆಗಿರುವ ಅಪಾರವಾದ ಕರುಣೆಯು ಸಮವಿನಯವನ್ನು ರೂಪಿಸಿತ್ತು. ಅದು ಮೃದುವಚನಗಳಲ್ಲಿ ಹೊಮ್ಮಿ ಎಂಥವರ ಹೃದಯವನ್ನಾದರೂ ಸೂರೆಗೊಳ್ಳುತ್ತಿತ್ತು. ಅವನ ನುಡಿಗಳಲ್ಲಿ ಮಹಾ ಮಂತ್ರಶಕ್ತಿಯಿತ್ತು.

'ಏನಿ ಬಂದಿರಿ ಹದುಳವಿದ್ದಿರೆ ?' ಎಂದರೆ
ನಿಮ್ಮ ಮೈಸಿರಿ ಹಾರಿಹೋಹುದೆ?
ಕುಳ್ಳಿರೆಂದರೆ ನೆಲ ಕುಳಿ ಬೀಳುವದೇ?
ಒಡನೆ ನುಡಿದೊಡೆ ಸಿರ ಹೊಟ್ಟೆಯೊಡೆವುದೇ?
ಕೊಡಲಿಲ್ಲದಿರ್ದಡೊಂದು ಗುಣವಿಲ್ಲದಿರ್ದಡೆ
ಕೆಡಹಿ ಮೂಗ ಕೊಯ್ಯದೆ ಮಾಣ್ಬನೇ ಕೂ. ಸಂ. ದೇವನು ?

ಶೀತಲಗಾಳಿ ಸುಳಿವಂತೆ ಬರುವ, ಸರಳವಾದ ಹಿತಕರವಾದ ನುಡಿಗಳು ದುರಹಂಕಾರದ ಉರಿಯನ್ನು ಆರಿಸದಿರುತ್ತಿರಲಿಲ್ಲ. ಗೀತೆಯಲ್ಲಿ ಹೇಳಿದ ವಾಙ್ಮಯತಪಸ್ಸೆಂಬುದೂ ಇದೇ ಆಗಿದೆ. ಬಸವಣ್ಣನವರ—

"ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ,
ಮುನಿಯಬೇಡ, ಅನ್ಯರಿಗೆ ಅಸಹ್ಯ ಪಡಬೇಡ,
ತನ್ನ ಬಣ್ಣಿಸಬೇಡ, ಇದಿರ ಹಳಿಯಲು ಬೇಡ.

ಇದೇ ಅಂತರಂಗ ಶುದ್ಧಿ! ಇದೇ ಬಹಿರಂಗ ಶುದ್ಧಿ!
ಇದೇ ನಮ್ಮ ಕೂಡಲ ಸಂಗಮ ದೇವರನೊಲಿಸುವ ಪರಿ."

ಈ ನೀತಿ ಬೋಧೆಯ ಸೆಲೆಯು, ಸಲಿಲದ ಲಲಿತ ಝರಿಯಂತೆ ಸಾಗಿದಾಗ ಶ್ರೋತೃಗಳು ಅದನ್ನು ಸೇರಿ, ತಮ್ಮ ಬಗೆಯ ಬೊಗಸೆಯ ತುಂಬ ಕುಡಿದು ತೃಪ್ತಿಯ ಹೊಂದುತ್ತಿದ್ದರಲ್ಲದೆ, ಆ ತೃಪ್ತಿಯ ಬೆಳಕಿನಲ್ಲಿ ತಮ್ಮ ತಪ್ಪೊಪ್ಪು ಗಳನ್ನು ಕಾಣುತ್ತಿದ್ದರು.

ಯಜ್ಞಾದಿಗಳಲ್ಲಿ ಹಿಂಸೆ ನಡೆಯುತ್ತಿರುವದನ್ನು ಖಂಡಿಸುವಾಗ, ಹಿಂಸ ಕರನ್ನು ಕಠೋರವಾಗಿ ತೆಗಳದೆ ಪರ್ಯಾಯದ ನಿಡುಮಾತುಗಳಿಂದ ಅವರ ಮರ್ಮವನ್ನು ಭೇದಿಸುವನು:

"ಮಾತಿನ ಮಾತಿಂಗೆ ನಿನ್ನ ಕೊಂದಹರೆಂದು
ಎಲೆ ಹೋತೇ ಅಳು ಕಂಡಾ!
ವೇದವನೋದಿದವನ ಮುಂದೆ ಅಳು ಕಂಡಾ!
ಶಾಸ್ತ್ರವ ಕೇಳಿದವರ ಮುಂದೆ ಅಳು ಕಂಡಾ!
ನೀನತ್ತುದಕ್ಕೆ ತಕ್ಕುದ ಮಾಡುವ ಕೂಡಲ ಸಂಗಮ ದೇವ!
"ದಯವಿಲ್ಲದ ಧರ್ಮವದೇವುದಯ್ಯ?
ದಯವೇ ಬೇಕು ಸಕಲ ಪ್ರಾಣಿಗಳೆಲ್ಲರಲ್ಲಿ.
ದಯವೇ ಧರ್ಮದ ಮೂಲವಯ್ಯ;
ಕೂಡಲಸಂಗಯ್ಯನಂತಲ್ಲದೊಲ್ಲನಯ್ಯ.

ದಯವಿಲ್ಲದ ಧರ್ಮವು ಏವುದು? (ಏನು ಮಾಡಬಲ್ಲುದು?) ಎಂಬ ನಿಶ್ಚಿತವಾದ ಪ್ರಶ್ನೆಯಿಂದ ಅಂತಹ ಧರ್ಮದ ನಿಷ್ಪ್ರಯೋಜನವನ್ನು ಸ್ಪಷ್ಟಮಾಡಿ ಬಿಡು ತ್ತಾನೆ.

ಸಮಾಜದ ನಡೆನುಡಿಗಳನ್ನು ತಿದ್ದುವದಲ್ಲದೆ ಮೂಢನಂಬಿಕೆಗಳನ್ನೂ ಮೂರ್ತಿಗಳ ಹಾಗು ಮಾರಿ ಮಸಣಿಗಳ ಪೂಜೆಯನ್ನೂ ದುರಾಚಾರ ಗಳನ್ನೂ ಮಾಣಿಸಿ, ಪರಿಶುದ್ಧವಾದ ಹೃದಯಗಳಲ್ಲಿ ಶಿವಭಕ್ತಿ-ಶಿವಜ್ಞಾನ ಗಳನ್ನು ಬಿತ್ತಿದನು. ಒಂದೊಂದು ಸಲ ಒಂದೊಂದು ಬಗೆಯ ವಿವೇಚನೆ ಗಳನ್ನು ಮುಂದಿಟ್ಟುಕೊಂಡು ಮನಮುಟ್ಟುವಂತೆ ನೀಡಿ ಜೀವನದ ಸರ್ವ ಮುಖಗಳಲ್ಲಿಯೂ ನೆಮ್ಮದಿಯ ಮಾರ್ಗವನ್ನು ತೋರಿದನು.

ಅಲ್ಲಲ್ಲಿ ತನ್ನ ಪ್ರಭಾವವನ್ನು ಬೀರಿ ಬಂದುದರ ವಾರ್ತೆಯು ಅವನಿಗಿಂತ ಮೊದಲೇ ಆಶ್ರಮವನ್ನು ತಲುಪುತ್ತಿದ್ದಿತು. ಕುಲಪತಿಗಳು "ನಾಗಮ್ಮ, ನಿನ್ನ ತಮ್ಮ ಸಣ್ಣ ವ್ಯಕ್ತಿಯಲ್ಲವಮ್ಮ; ಶಿವನ ಮಹಿಮೆ ಮೂರ್ತಿವೆತ್ತಂತಿದ್ದಾನೆ." ಎನ್ನುವರು.

ಸಾತ್ವಿಕವಾದ ಹಿಗ್ಗು—ಹೆಮ್ಮೆಗಳು ಉಂಟಾಹುತ್ತಿದ್ದರೂ ನಾಗಲಾಂಬೆ "ಗುರುವಿನ ಕೃಪೆ" ಎಂದು ವಿನಯವನ್ನೇ ಪ್ರಕಟಿಸುತ್ತಿದ್ದಳು.

ಸಂಗಮ-ಬಾಗೇವಾಡಿಗಳ ಸುತ್ತಲಿನ ಪ್ರದೇಶಗಳಲ್ಲಿ ಬಸವಣ್ಣನ ಹೆಸರು ಹರಡಿತು. ಬಲದೇವನ ಮೂಲಕವಾಗಿ ಕಲ್ಯಾಣದಲ್ಲಿ ಅವನ ಕೀರ್ತಿ ಕೇಳಿತು. ವಚನದ ಕಟ್ಟುಗಳ ವಿನಿಮಯದಿಂದ ಬಳ್ಳೀಗಾವಿ ಮುಂತಾದ ವಿಧ್ಯಾಪೀಠಗಳಲ್ಲಿಯೂ ಅವನ ಭಕ್ತಿ-ಜ್ಞಾನಗಳು ಪ್ರಚುರಗೊಂಡವು. ಹೀಗೆ ಬಸವಣ್ಣನ ದಿವ್ಯ ಜೀವನದ ಮುಂಬೆಳಗು ಮೂಡಿದಾಗ ಅಂದ ಶ್ರದ್ಧೆಯ ಸನಾತನಿಗಳ ಮುಚ್ಚುಗಣ್ಣುಗಳೂ ತೆರೆದವು. ಅವರಲ್ಲಿ ಹಲವರು ಒಲಿದರು; ಕೆಲವರು ಕರುಬಿದರು.

* * * * *

ಬಲದೇವನ ಬಯಕೆ

ಮಂಗಳವಾಡದ ಪೆರ್ಮಾಡಿರಾಜನ ಮಕ್ಕಳಾದ ಬಿಜ್ಜಳ ಮತ್ತು ಕರ್ಣದೇವರು ತೀರ ಚಿಕ್ಕವರಿರುವಾಗ ಅವರ ತಾಯಿ ಮಡಿದಳು. ರಾಜನ ಆಪ್ತನಂತಿರುವ ಸಿದ್ದಣ್ಣಮಂತ್ರಿಯ ಪತ್ನಿ ಪದ್ಮಗಂಧಿಯಮ್ಮನು ಆ ಮಕ್ಕಳನ್ನು ಮಮತೆಯಿಂದ ಪೋಷಿಸಿದಳು. ಕರ್ಣದೇವನು ಇನ್ನೂ ಶಿಶುವಾಗಿದ್ದನು. ಪೆರ್ಮಾಡಿ ರಾಜನು ಕಲಿಂಜರಪುರದಿಂದ ಬಂದ ಕ್ಷತ್ರೀಯರಾಜ ಮನೆಯವನಾದರೂ ತಾನು ಜೈನಮತಕ್ಕೆ ಒಲಿದವನಾಗಿದ್ದನು. ಅವನ ಪರಮ ವಿಶ್ವಾಸದ ಮಂತ್ರಿ ಸಿದ್ದಣ್ಣ ಜೈನನಾಗಿದ್ದನು. ಪ್ರಭಾವಿಗಳಾದ ಜಿನ ಮುನಿಗಳ ಆರಾಧನೆ ಆಗ ಅರಮನೆಯಲ್ಲಿ ನಡೆಯುತ್ತಿತ್ತು. ಅಲ್ಲಿ ಜಿನಮತಾಚರಣೆಯೂ ಬಳಕೆಯಲ್ಲಿತ್ತು. ಆ ಕಾಲವಲ್ಲಿ ಒಂದೇ ಕುಟುಂಬದ ಜನರು ಬೇರೆ ಬೇರೆ ಮತಾವಲಂಬಿಗಳಾಗಿಯೂ ಇರುತ್ತಿದ್ದರು. ಆದ್ದರಿಂದ ರಾಜಕುಮಾರರ ಪೋಷಣೆಯು ತಾಯಿ ಜೈನಳಾಗಿದ್ದುದಕ್ಕೆ ಧರ್ಮಾಚಾರದ ಆತಂಕವೇ

ಇರಲಿಲ್ಲ. ಪದ್ಮಗಂಧಿಯಮ್ಮನನ್ನೂ ಸಿದ್ದಣ್ಣನನ್ನೂ ರಾಜನು ಬಹಳವಾಗಿ ಗೌರವಿಸಿದನು. ಕೆಲವು ಕಾಲದ ಮೇಲೆ ಪೆರ್ಮಾಡಿರಾಜನಿಗೂ ಅವಸಾನ ಕಾಲ ಒದಗಿತು. ಆಗಲೂ ಬಿಜ್ಜಳನು ಅದೇ ನೂತನ ತರುಣನಾಗಿದ್ದನು. ದೊರೆಯು ಮಕ್ಕಳನ್ನೂ ರಾಜ್ಯವನ್ನೂ ಸಿದ್ದಣ್ಣಮಂತ್ರಿಯ ಉಡಿಯಲ್ಲಿ ಹಾಕಿ ಕಣ್ಣುಮುಚ್ಚಿದನು. (ಕ್ರಿ. ವ. ೧೧೩೮). ಸಿದ್ದಣ್ಣನು ಬಿಜ್ಜಳನಿಗೆ ಪಟ್ಟಗಟ್ಟಿ, ಚಾಲುಕ್ಯ ಚಕ್ರವರ್ತಿಗಳ ಅಧೀನದಲ್ಲಿ ಪ್ರಜಾಹಿತದಕ್ಷನಾಗಿ ಆಡಳಿತ ನಡೆಯಿಸಿದನು. ರಾಜನ ಅರಮನೆಯಲ್ಲಿಯೂ ಮಂತ್ರಿದಂಪತಿಗಳು ಮೇಲ್ವಿಚಾರಣೆಯನ್ನು ಕೈಕೊಂಡದ್ದರಿಂದ ಬಿಜ್ಜಳನ ಬದುಕಿನ ರಕ್ಷಣೆಯಾಗಿ ಅವನಿಗೆ ಬಹಳ ಹಿತವಾಯಿತು. ಬಹುಕಾಲ ಮಕ್ಕಳಿಲ್ಲದ ಸಿದ್ದಣ್ಣಮಂತ್ರಿಗೆ ಉತ್ತರವಯಸ್ಸಿನಲ್ಲಿ ಒಂದು ಹೆಣ್ಣುಮಗು ಹುಟ್ಟಿತ್ತು. ಆ ಮಗುವಿನ ಹೆಸರು ನೀಲಲೋಚನೆ. ತನ್ನ ಚಿಕ್ಕ ತಂಗಿಯೆಂದು ಬಿಜ್ಜಳನು ನೀಲಲೋಚನೆಯನ್ನು ಬಹಳವಾಗಿ ಪ್ರೀತಿಸಿ, ಉಡಿಸಿ, ತೊಡಿಸಿ, ಆಡಿಸಿ ನಲಿಯುತ್ತಿದ್ದನು.

ಬಿಜ್ಜಳನು ರಾಜ್ಯದಾಡಳಿತದಲ್ಲಿ ದಕ್ಷನಾಗುತ್ತಿರುವ ಹೊತ್ತಿಗೆ ಸಿದ್ದಣ್ಣನು ನಿರ್ವಾಣಹೊಂದಿದನು (ಕಿ. ವ. ೧೧೪೬). ಅವನಿಂದ ತನಗೂ ರಾಜ್ಯಕ್ಕೂ ಆದ ಅಪಾರವಾದ ಉಪಕಾರವನ್ನು ಸ್ಮರಿಸಿ, ಬಿಜ್ಜಳನು ತನ್ನ ತಾಯಿಯಂತಿದ್ದ ಪದ್ಮಗಂಧಿಯಮ್ಮನನ್ನು ಅರಮನೆಯಲ್ಲಿಯೇ ಇರಿಸಿಕೊಂಡು ರಾಜಮಾತೆಯ ಗೌರವವನ್ನು ಸಲ್ಲಿಸಿದನು; ತಂಗಿ ನೀಲಲೋಚನೆಯ ಉತ್ಕರ್ಷದ ಹೊಣೆಯನ್ನು ವಹಿಸಿಕೊಂಡನು. ಬಿಜ್ಜಳನ ರಾಣಿಯೂ ಈ ವಿಷಯದಲ್ಲಿ ವಿನಯಶೀಲಳಾಗಿ ವರ್ತಿಸಿದಳು. ಬಲು ಬುದ್ಧಿವಂತೆಯಾದ ನೀಲಲೋಚನೆಯನ್ನು ರಾಜಕನ್ಯೆಯಂತೆಯೇ ಕಾಣುತ್ತಿದ್ದಳು. ಮಗಳನ್ನು ಅರಮನೆಯಲ್ಲಿ ಬಿಟ್ಟು ಪದ್ಮಗಂಧಿಯಮ್ಮನೂ ಒಮ್ಮೆ ಕಣ್ಣುಮುಚ್ಚಿದಳು.

ಕೆಲವು ವರ್ಷಗಳ ಹಿಂದೆಯೇ ಜಾಣನೂ ಬಲಿಷ್ಠನೂ ಆದ ಬಲದೇವನು ಚಾಲುಕ್ಯ ಚಕ್ರವರ್ತಿ ಪೆರ್ಮಾಜಗದೇಕಮಲ್ಲನ ಅಪೇಕ್ಷೆಯಂತೆ ಸಾಮ್ರಾಜ್ಯ ಸೇವೆಗೆ ಸೇರಿ ಕಲ್ಯಾಣದ ಮಂತ್ರಿಮಂಡಲದ ಸದಸ್ಯನಾಗಿದ್ದನು. ಸಿದ್ದಣ್ಣನು ಗತಿಸಿದ ಬಳಿಕ ಬಿಜ್ಜಳನು ತನ್ನ ಮಂತ್ರಿಯಾಗಲು ಬಲದೇವನನ್ನು ಬಿಟ್ಟುಕೊಡಬೇಕೆಂದು ಚಕ್ರವರ್ತಿಯನ್ನು ಪ್ರಾರ್ಥಿಸಿಕೊಂಡನು. ಚಕ್ರವರ್ತಿ ಜಗದೇಕಮಲ್ಲನು ಅವನ ಬಿನ್ನಪವನ್ನು ಮನ್ನಿಸಿ, ಬಲದೇವನನ್ನು

ಮಂಗಳವಾಡಕ್ಕೆ ಕಳಿಸಿಕೊಟ್ಟರೂ ತನ್ನ ಮಂತ್ರಿಮಂಡಲದಲ್ಲಿಯ ಅವನ ಸ್ಥಾನವನ್ನು ಕಡಿಮೆ ಮಾಡಲಿಲ್ಲ. ವೃದ್ಧನಾಗಿದ್ದರೂ ಮೇಧಾವಿಯಾದ ಬಲದೇವನು ತನ್ನ ಶಕ್ತಿಮೀರಿ ಶ್ರಮಿಸಿ, ಸಾಮಂತ ಮಂಡಳೇಶ್ವರ ಬಿಜ್ಜಳನಿಗೂ, ಅತ್ತ ಸಾರ್ವಭೌಮನಿಗೂ ಆಡಳಿತದಲ್ಲಿ ತುಂಬ ನೆರವಾದನು. ಅದರಿಂದ ಅವನ ಕೀರ್ತಿ-ಗೌರವಗಳು ಹೆಚ್ಚಿದವು. ಅದಕ್ಕೆ ತಕ್ಕಂತೆ ವರಮಾನ-ಉಂಬಳಿಗಳೂ ವೃದ್ಧಿಗೊಂಡವು.

ಕುಶಾಗ್ರ ಬುದ್ಧಿಯಿಂದ ಪರಾಕ್ರಮದಿಂದ ಬಿಜ್ಜಳನು ಬೇಗನೆ ಸಾಮಂತ ಮಂಡಲೇಶ್ವರರಲ್ಲೆಲ್ಲ ಅಗ್ರಗಣ್ಯನಾದನು. ಬಲದೇವನ ಇಬ್ಬಗೆಯ ಸಂಬಧದ ಸಹಾಯದಿಂದ ಸಾರ್ವಭೌಮನ ಓಲಗದಲ್ಲಿ ಬಿಜ್ಜಳನ ಪ್ರತಿಷ್ಠೆ ಇನ್ನಿಷ್ಟು ಹೆಚ್ಚಿತು. ಸಾರ್ವಭೌಮನ ಬಲದೇವನ ಸಲಹೆಯಂತೆ ಶತ್ರುಗಳೊಡನೆ ಮಾಡಬೇಕಿದ್ದ ಒಂದೆರಡು ಯುದ್ಧಗಳನ್ನು ಸಾಹಸಿಯಾದ ಬಿಜ್ಜಳನಿಗೆ ಒಪ್ಪಿಸಿದನು. ಅವುಗಳಲ್ಲಿ ಬಿಜ್ಜಳನು ಜಯಶೀಲನಾಗಿ ಸಾಮ್ರಾಜ್ಯವನ್ನು ನಿಷ್ಕಂಟಕಗೊಳಿಸಿದನು. ಬಳ್ಳಿಗಾಂವಿಯು ಕೇಂದ್ರವಾಗಿರುವ ದಕ್ಷಿಣಭಾಗದಲ್ಲಿ ಕೆಲವು ದಿವಸನಿಂತು ಅಲ್ಲಿಯ ಆಡಳಿತವನ್ನು ಹಿಡಿತದಲ್ಲಿತಂದು ಚಕ್ರವರ್ತಿಗೆ ಉಪಕಾರ ಮಾಡಿದನು. ಸಂತುಷ್ಟನಾದ ಸಾರ್ವಭೌಮನು ಆತನಿಗೆ ಚಾಲುಕ್ಯಸಾಮ್ರಾಜ್ಯದ ಮಹಾದಂಡನಾಯಕ ಪದವಿಯನ್ನಿತ್ತು ಸನ್ಮಾನಿಸಿದನು (ಕಿ. ವ. ೧೧೪೮).

ಕ್ರಿ. ವ. ೧೧೫೦ ರಲ್ಲಿ ಪೆರ್ಮೆ ಜಗದೇಕಮಲ್ಲನು ಸ್ವರ್ಗಸ್ಥನಾಗಲು ಅವನ ಸಹೋದರ ನೂರ್ಮಡಿ ತೈಲಪದೇವನು ಸಿಂಹಾಸನವೇರಿದನು. ಅವನು ವಿಲಾಸಿ! ಆಡಳಿತದಲ್ಲಿ ಅಸಮರ್ಥ! ಒಂದು ವರ್ಷ ಹೋಗುವದರೊಳಗಾಗಿ ಬಲಶಾಲಿಯಾದ ಬಿಜ್ಜಳನಿಗೆ ಮಹಾಮಂಡಲೇಶ್ವರ ಪದವಿಯನ್ನಿತ್ತು ಆಡಳಿತದ ಅಧಿಕಾರವನ್ನೆಲ್ಲ ಅವನಿಗೆ ಒಪ್ಪಿಸಿದನು; ತಾನು ವಿಲಾಸಜೀವನದಲ್ಲಿ ಕಾಲ ಕಳೆಯಹತ್ತಿದನು. ಹಿರಿಯ ಅನುಭವವುಳ್ಳ ಬಲದೇವನು ಬಿಜ್ಜಳನಿಗೆ ಮಹಾಮಂತ್ರಿಯಾದನು. ಮಂಚಣ್ಣ, ಮಧುವರಸು, ಮಹಾದೇವರಸು, ಕೊಪ್ಪಣದ ಸಿದ್ಧರಸು ಇವರು ಇನ್ನುಳಿದ ಮಂತ್ರಿಗಳು. ತೈಲಪದೇವನ ಆಳ್ವಿಕೆ ಆರಂಭವಾದೊಡನೆ ಗೊಂದಲಹಾಕಲೆಳಸಿದ್ದ ಮಾಂಡಲಿಕರೆಲ್ಲ ಈ ಹೊಸ ವ್ಯವಸ್ಥೆಯ ಬಿಗುವಿನ ಆಳಿಕೆಯಿಂದ ತೆಪ್ಪಗಾದರು. ಬಿಜ್ಜಳನ ಸರ್ವಾಧಿಕಾರಿತ್ವ

ನಿರಾತಂಕವಾಯಿತು. ಕಲ್ಯಾಣದಲ್ಲಿಯ ಸಾಮಂತ ನಗರದ ಕಲಚೂರಿ ಅರ ಮನೆಯನ್ನು ವಿಸ್ತೃತಗೊಳಿಸಿ ಕಟ್ಟಿಸಿ, ಉದ್ಯಾನಗಳನ್ನು ರಚಿಸಿ ಅಲ್ಲಿ ನೆಲಿಸಿ ಬಿಟ್ಟನು.

ಬಲದೇವನು ಬುದ್ಧಿಗುಣಗಳಿಂದ ಮಾನ್ಯನು! ಅಧಿಕಾರ ಶ್ರೀ ಮಂತಿಕೆಗಳಿಂದ ಗೌರವಯುತನು. ಆದರೆ ಗಂಡುಮಕ್ಕಳಿರಲಿಲ್ಲ. ಗಂಗಾಬಿಕೆಯೊಬ್ಬಳೇ ಮಗಳು! ಗಂಗಾಬಿಕೆ ಸರಳ ಸ್ವಭಾವದ ಮುಗ್ಧೆ, ಚೆಲುವೆ; ಗುರು ದೇವರಲ್ಲಿ ಭಕ್ತಿ ಸಂಪನ್ನಳು! ಪ್ರಸನ್ನ ಚಿತ್ತಳು! ಆಕೆಯು ಬಿಜ್ಜಳ-ಬಲದೇವರ ಗಾಢವಿಶ್ವಾಸದ ಪರಿಣಾಮನಾಗಿ, ಬಿಜ್ಜಳನ ಸಾಕು ತಂಗಿಯಾದ ನೀಲಲೋಚನೆಯ ನೆಚ್ಚಿನ ಗೆಳತಿಯಾಗಿದ್ದಳು. ಇಬ್ಬರೂ ತುಸು ಹೆಚ್ಚು ಕಡಿಮೆ ಸಮವಯಸ್ಕರು.

ರೂಪಗುಣಗಳಲ್ಲಿ ನೀಲಲೋಚನೆಯೂ ಕಡಿಮೆಯಿರಲಿಲ್ಲ. ಅರಮನೆಗೆ ತಕ್ಕಂತೆ ಸಂಗೀತಾದಿ ಕಲಾವಂತೆಯೂ ವ್ಯವಹಾರ ನಿಪುಣೆಯೂ ಆಗಿದ್ದಳು. ಗಂಗಾಂಬಿಕೆಯ ಲಿಂಗವಂತಿಕೆಯ ಆಚರಣೆಯನ್ನು ಕುತೂಹಲದಿಂದ ನಿರೀಕ್ಷಿಸುತ್ತಿದ್ದಳು. ಆಕೆಯನ್ನು ಮದುವೆಯಾಗಲು ಶೌರ್ಯಗುಣ ಸಂಪನ್ನನಾದ ಸಾಮಂತಪುತ್ರನಾದರೂ ಬೇಕೆಂದು ಬಿಜ್ಜಳನು ಆಲೋಚಿಸುತ್ತಿದ್ದನು.

ಪ್ರೌಢಳಾದ ಗಂಗಾಂಬಿಕೆಯ ಮದುವೆಯ ವಿಚಾರ ಸುಳಿದಾಗ ಬಲದೇವನ ಒಳಗಣ್ಣು ಮುಂದೆ ಬಸವೇಶ ಬಂದು ನಿಲ್ಲುತ್ತಿದ್ದನು. ಹಿಂದೆ ಹೇಳಿದಂತೆ ತಾವು ಕೂಡ ಲಿಂಗಾಂಗಿಗಳಾದುದು ಒಂದು ಅನುಕೂಲವೇ ಆಗಿತ್ತು. ಆದರೆ ಸಂಸಾರಸಂಬಂಧದಲ್ಲಿ ಜೀವಜ್ಯೋತಿಯೂ ಮಹಾವಿಭೂತಿಯೂ ಆಗಲಿರುವ ಬಸವಣ್ಣನ ವಿಚಾರವೆಂತಿರುವದೋ ಎಂದು ಸಂದೇಹ ! ಗುಪ್ತವಾಗಿ ಮಾದಿರಾಜನಿಗೆ ಪತ್ರ ಬರೆದು ಕಳುಹಿದನು. ಮಾದಿರಾಜನು ಈ ವಿಷಯನ್ನು ನಾಗಲಾಂಬೆಗೂ ಬಸವಣ್ಣನಿಗೂ ಮೇಲೆ ಜಾತವೇದಿ ಮುನಿಗಳಿಗೂ ಬಿಟ್ಟು ಉತ್ತರ ಬರೆದನು. ವಿಚಾರಶೀಲಳಾದ ನಾಗಲಾಂಬೆಯೂ ಕರುಣಾಮಯರಾದ ಜಾತವೇದಿ ಶಿವಯೋಗಿಗಳೂ ತನಗೆ ನೆರವಾಗುವರೆಂದು ನಂಬಿ, ವಿಷಯವನ್ನು ಪ್ರಸ್ತಾಪಿಸಲು ತಾನೇ ಸಂಗಮಕ್ಕೆ ಹೋಗುವದನ್ನು ಗೊತ್ತುಮಾಡಿಕೊಂಡನು. ಈ ಉದ್ದೇಶವನ್ನು ಒಳಗಿಟ್ಟ

ಕೊಂಡು ಸ್ವಗ್ರಾಮಯಾತ್ರೆಯ ನೆವಮಾಡಿಕೊಂಡು ಸಂಗಮದ ಪ್ರಯಾಣ ವನ್ನು ಕೈಕೊಂಡನು. ಗಂಗಾಂಬಿಕೆಯ ಇಚ್ಛೆಯಂತೆ ಅವಳೊಡನೆ ನೀಲ ಲೋಚನೆಯನ್ನೂ ಕಳಿಸಬೇಕೆಂದು ಬಿಜ್ಜಳನನ್ನು ಬೇಡಿಕೊಂಡನು. ಬಿಜ್ಜ ಳನು ಒಪ್ಪಿ ಅವರಿಗೆ ಬೇಕಾದಷ್ಟು ಸರಂಜಾಮು ಸಹ ಕೊಟ್ಟನು.

ಗುರುವಚನದಂತೆ

ಬಲದೇವರಸು ತನ್ನ ಪರಿವಾರದೊಡನೆ ಗುರುಕುಲದ ಆವಾರದಲ್ಲಿ ಬೀಡಾರ ಮಾಡಿ ಮೂರು ದಿವಸವಾಗಿತ್ತು. ಕುಮಾರಿಯರೊಡನೆ ಅವನ ಪೂಜಾ-ಪ್ರಸಾದಗಳು ನಾಗಲಾಂಬೆಯ ಕುಟೀರದಲ್ಲಿಯೇ ನಡೆಯುತ್ತಿದ್ದವು. ಗಂಗಾಂಬಿಕೆಯೊಡನೆ ರಾಜಸಹೋದರಿ ನೀಲಲೋಚನೆಯೂ ಬಂದುದು ನಾಗಲಾಂಬೆಗೆ ಬಲು ಹಿಗ್ಗು! ಶ್ರೀಮಂತ ಪುತ್ರಿಯರಾದರೂ ಧನಮದರಹಿತ ರಾದ ಆ ಯುವತಿಯರು ಮನೆಯವರೇ ಆದುದರಿಂದ ಆ ಚಿಕ್ಕಮ್ಮನ ಸರಳ ವಾದ ಸಾದಾ ಉಪಚಾರದಿಂದ ಸಂತಸಗೊಂಡಿದ್ದರು. ಸರಸವಾಣಿಯ ಬಾಲಕ ಚೆನ್ನಬಸವಣ್ಣನು ಅಷ್ಟರಲ್ಲಿಯೇ ಅಕ್ಕಂದಿರೊಡನೆ ಸಲುಗೆ ಬೆಳಿಸಿ ಕೊಂಡಿದ್ದನು.

ಅವರು ಬಂದ ಮೊದಲುದಿನ ಮಾತ್ರ ಬಸವೇಶ ಬಲದೇವರಸನೊಡನೆ ಆದರೋಪಚಾರದ ಮಾತು ಆಡಿದ್ದನು. ಮತ್ತೆ ಕೂಡಿ ಮುಂದೆ ಕುಳಿತಿರ ಲಿಲ್ಲ. ಬಲದೇವನು ಗುರುಗಳ ಹತ್ತಿರ ತನ್ನ ಇಚ್ಛೆಯನ್ನು ಪ್ರಕಟಿಸಿದ್ದನು. ಅದನ್ನು ತಿಳಿದು ಬಸವಣ್ಣನು ವಿಚಾರಮಗ್ನನಾಗಿದ್ದನು. ಜಗದ ಜೀವಿ ಗಳನ್ನು ಬಂಧಿಸಿ ಕಾಡುವ ಮಾಯೆಯ ಆಟ ಸಂಸಾರ! ಅದು ತನಗೆ ಸಲ್ಲದೋ ಸಲ್ಲುವದೋ ಎಂದು ಮನಸ್ಸು ಇನ್ನೂ ಚಿಂತಿಸುತ್ತಿರುವಾಗ ಅದು ಕೊರಳಿಗೇ ಬೀಳಬರುತ್ತಿರುವದನ್ನು ಕಂಡು ಬೇಗುದಿಗೊಂಡನು.

'ಸಂಸಾರ ಸಾಗರದ ತೆರೆ ಕೊಬ್ಬಿ
ಮುಖದ ಮೇಲೆ ಅಲೆಯುತ್ತಿದೆ ನೋಡಾ !
ಸಂಸಾರ ಸಾಗರ ಉರದುದ್ದವೇ ಹೇಳಾ ?
ಸಂಸಾರ ಸಾಗರ ಕೊರಳುದ್ದವೇ ಹೇಳಾ ?
ಸಂಸಾರ ಸಾಗರ ಶಿರದುದ್ದವಾದ ಬಳಿಕ ಏನ ಹೇಳುವೆನಯ್ಯಾ ?

ಅಯ್ಯಾ, ಅಯ್ಯಾ, ಎನ್ನ ಹುಯ್ಯಲು ಕೇಳಯ್ಯಾ
ಕೂಡಲ ಸಂಗಯ್ಯಾ, ನಾನೇವನೇವೆನಯ್ಯಾ ?'

ಎಂದು ಚಿಂತಿಸುತ್ತ ದೂರ ದೂರ ಅಲೆಯಹತ್ತಿದನು.

ಜೀವನದ ಆದರ್ಶಕ್ಕೆ ಆಧ್ಯಾತ್ಮಿಕ ಸಾಧನಕ್ಕೆ ಗೃಹಸ್ಥ ಜೀವನವು ಸಾಧಕವೋ ಬಾಧಕವೋ ಎಂಬದಕ್ಕೆ ಒವ್ಮೆ ಶಾಸ್ತ್ರದ ಉಕ್ತಿಗಳನ್ನೆಲ್ಲ ಸ್ಮರಣೆಗೆ ತಂದು ಲೋಕಾನುಭವಗಳೊಡನೆ ತೂಗಿ ನೋಡುತ್ತ ವಿಚಾರ ಮಾಡುತ್ತ ನದಿ ತೀರದಲ್ಲಿ ನ್ಯೈವುರಿತು ತಿರುಗಾಡುತ್ತಿದ್ದನು. ಆಗ ಗುರುಗಳು ಕರೆವರೆಂದು ವಟುವೊಬ್ಬನು ಮುಂದೆ ಬಂದು ನಿಂತನು. ಬಸವಣ್ಣನ ಮನಸ್ಸು ಬಾಹ್ಯಲೋಕಕ್ಕೆ ಬಂದಿತು. "ಏನಿದೆನ್ನ ಮತಿಮಾಂದ್ಯ ? ಬೆಳಕಿನ ಬಳಿಯಿದ್ದು ಕತ್ತಲೆಯ ಭ್ರಾಂತಿಯೇ ? ತಂದೆ-ತಾಯಿ, ಅಕ್ಕ ಅಣ್ಣ ತಮ್ಮಂದಿರ ನಂಟುಸಂಬಂಧಕ್ಕಿಂತ ಹೆಚ್ಚಿನದಾದ 'ನಾನೇ ನೀನು, ನೀನೇ ನಾನು' ಎನ್ನುವ ನಂಟು ಸಂಬಂಧ ಗುರುವಿನದು ! ಗುರುಗಳು ಆತ್ಮೀಯರಾಗಿ ಕೈ ಹಿಡಿದು ನಡಿಸಲು ಮುಂದಿರುವಾಗ ದಾರಿಯಾವುದೆಂದು ಚಿಂತಿಸಲೇ ನಾನು ? ಗುರುವಚನ ಹೇಗೋ ಹಾಗೆ ನಡೆದರಾಯಿತು." ಭಾರವಿಳಿದಂತಾಗಿ ಬಸವಣ್ಣನ ತಲೆ ಹಗುರಾಯಿತು.

" ನಡಿಯಣ್ಣ " ಎಂದು ಮುಂದಾಗಿ ಬಂದು ಗುರುಮಂಟಪವನ್ನು ಸೇರಿದನು.

ಬಲದೇವ ಮಂತ್ರಿಯು ಮೂರು ನಾಲ್ಕುಸಲ ಗುರುಗಳನ್ನು ಕಂಡು ಮಾತಾಡಿದ್ದನು. ಗುರುಗಳು ನಾಗಲಾಂಬೆಯನ್ನೂ ಬರಮಾಡಿಕೊಂಡು ವಿಚಾರಿಸಿದ್ದರು. ಈಗ ಬಸವಣ್ಣನನ್ನು ಕರೆಯಿಸಿದ್ದರು. ಅವನ ಅನುಮತಿಯನ್ನು ಕೇಳಿದರು. ಮೊದಮೊದಲು ಬಲದೇವರಸನ ಬಯಕೆ ಕೈಗೂಡದೆನಿಸಿತ್ತು. ಕೊನೆಕೊನೆಗೆ ನೆರವೇರುವ ಆಸೆ ಮೂಡಿತು.

ಮಂಗಲಾಶೀರ್ವಾದ

ಕುಟೀರದ ಮೊಗಸಾಲೆಯ ತುಂಬ ಜಾಜೂಮು ಹಾಸಿ ಎಡಬಲದ ಗೋಡೆಗಳಿಗೆ ನಾಲ್ಕಾಲ್ಕು ದಿಂಬು ಇಟ್ಟಿದ್ದರು. ಎದುರಿಗಿನ ಗೋಡೆಯ ಹತ್ತಿರ ಇದ್ದ ಪೀಠದ ಮೇಲೆ ದಿಂಬವನ್ನಿಟ್ಟು ಚಿತ್ರಾಸನ ಹಾಕಿದ್ದರು. ಪೀಠದ

ಹತ್ತಿರ ಕುಳಿತು ನಾಗಲಾಂಬೆ ಫಲಪುಷ್ಪಗಳನ್ನು ಹೊಂದಿಸಿಟ್ಟು ಧೂಪದಾನಿ ಯಲ್ಲಿ ಊದುಬತ್ತಿಗಳನ್ನು ಸೇರಿಸುತ್ತಿದ್ದಳು.

"ಅವ್ವಾ, ಕಲ್ಯಾಣ ತಾತಯ್ಯ ಗುರುಗಳ ಹತ್ತಿರ ಮಾತಾಡುತ್ತ ಕುಳಿತು ಬಹಳ ಹೊತ್ತಾಯಿತು, ನಮ್ಮ ಮಾವನೂ ಅಲ್ಲಿಯೇ ಇದ್ದಾನೆ."

ಚೆನ್ನಬಸವಣ್ಣ ಓಡಿಬಂದು ತಾಯಿಯ ಮುಂದೆ ಮಂಡೆಯೂರಿ ಕುಳಿತು ನುಡಿದನು. ನಾಗಲಾಂಬೆಯ ಮೊಗದಲ್ಲಿ ಮಂದಹಾಸ ಮೂಡಿತು.

"ಹೌದಪ್ಪ, ಗುರುಗಳು ಈಗ ಇಲ್ಲಿಗೆ ಬರುವರೆಂದು ಸೋಮಣ್ಣನು ಹೇಳಿ ಹಾಸಿ-ಮಾಡಿ ಹೋದನು. ಅಕ್ಕಂದಿರೆಲ್ಲಿದ್ದಾರೆ? ನೀನು ನೋಡಿ ಕರೆದುಕೊಂಡು ಬಾ!"

ಚೆನ್ನಬಸವಣ್ಣ ಓಡಿದನು ಹೊರಗೆ.

ಹೂದೋಟದ ಲತಾಕುಂಜದಲ್ಲಿ ಗೆಳತಿಯರಿಬ್ಬರು ಹಾಸುಗಲ್ಲಿನ ಮೇಲೆ ಕುಳಿತಿದ್ದರು. ಇಂದು ಅವರ ಮಾತುಗಳು ಲೋಕಾಭಿರಾಮವಾಗಿ ಮಾತ್ರ ನಡೆದಿದ್ದವು; ಅವರ ಮನಸ್ಸುಗಳು ಬೇರೆ ಏನನ್ನೋ ಭಾವಿಸುತ್ತಿದ್ದವು. ಬಲ ದೇವನ ಈ ಪ್ರಯಾಣದ ಉದ್ದೇಶವು ಹೊರಬಿದ್ದಾಗಿನಿಂದ ಅವರ ಬಗೆಗಳಲ್ಲಿ ಬದಲಾವಣೆಯಾಗಿತ್ತು. ಗಂಗಾಂಬಿಕೆಯನ್ನು ಲಜ್ಜೆ ಮೌನಗಳು ಆವರಿಸಿ ದ್ದವು. ನೀಲಲೋಚನೆ ಹಾಸ್ಯದ ಅಣಕು ಮಾತುಗಳನ್ನಾಡುತ್ತಿದ್ದಳು. ಆವಳು ಮೇಲೆ ಮೇಲೆ ಹೀಗೆ ವಿನೋದದಲ್ಲಿ ತೊಡಗಿರುತ್ತಿದ್ದರೂ ಅವಳ ಒಳ ಬಗೆಯಲ್ಲಿ ಒಂದು ಅನಿರ್ವಚನೀಯ ಆಕಾಂಕ್ಷೆ ಮೊರೆಯಿಡುತ್ತಿತ್ತು. ಬಸವೇ ಶನ ದಿವ್ಯಮೂರ್ತಿ ಇಬ್ಬರ ಹೃದಯಗಳಲ್ಲಿಯೂ ವಿರಾಜಿಸುತ್ತಿತ್ತು. ಒಬ್ಬಳು ಗಾರೆಗಲ್ಲುಗಳ ಸ್ಥಿರವಾದ ಕಲ್ಪನಾ ಮಂದಿರವನ್ನು ಕಟ್ಟುವದರಲ್ಲಿ ನಲಿಯುತ್ತಿ ದ್ದರೆ, ಇನ್ನೊಬ್ಬಳು ನೆಲೆಯಿಲ್ಲದ ಗಾಳಿಗೋಪುರ ರಚಿಸುವದರಲ್ಲಿ ತಳಮಳಿ ಸುತ್ತಿದ್ದಳು.

ಹುಡುಕುತ್ತ ಬಂದ ಚೆನ್ನಬಸವಣ್ಣನು ಅವರ ಮುಂದೆ ನಿಂತು 'ಅಕ್ಕ, ಅಕ್ಕ! ಅಮ್ಮ ನಿಮ್ಮನ್ನು ಕರೆಯುತ್ತಾಳೆ' ಎಂದು ಕೂಗಿ ಹೇಳಿದನು. ನೀಲಾಂಬೆ ಏನೋ ಕೇಳಬೇಕೆಂದು ಅವನನ್ನು ಹಿಡಿಯಬರಲು ಅವನು ಕೈಗೆ ಸಿಕ್ಕದೆ ಓಡಿಹೋದನು. ಗೆಳತಿಯರಿಬ್ಬರೂ ಮೆಲ್ಲನೆ ಮನೆಯತ್ತ ನಡೆದರು.

ಅಷ್ಟರಲ್ಲಿ ಕುಲಪತಿಗಳು ಇತ್ತ ದಯಮಾಡಿಸುತ್ತಿದ್ದರು. ಅವರ ಎಡ ಬಲಗಳಲ್ಲಿ ಹಿರಿಯ ಪಂಡಿತರೊಬ್ಬರು, ಬಲದೇವರಸು ಬರುತ್ತಿದ್ದರು. ಅವರ ಮುಂದೆ ಮುಂದೆ ಬಸವಣ್ಣನಿದ್ದನು. ಕುಟೀರದ ಅಂಗಳದಲ್ಲಿ ನಾಗಲಾಂಬೆ ನಮಸ್ಕರಿಸಿ ಸ್ವಾಗತಿಸಿದಳು.

ಒಳಗೆ ಬಂದು ಗುರುಗಳು ಆಸನವನ್ನು ಅಲಂಕರಿಸಿದರು. ಎಲ್ಲರೂ ನಮಸ್ಕರಿಸಿ ಕುಳಿತರು. ಅಷ್ಟರಲ್ಲಿ ಮುಖದೊಳೆದು ಭಸಿತ–ಕುಂಕುಮ ಭೂಷಿತೆಯರಾದ ಗಂಗಾಂಬಿಕೆ–ನೀಲಲೋಚನೆಯರು ಬಂದು ಗುರುಗಳ ಪಾದಕ್ಕೆ ಎರಗಿದರು. ಆಗ ಗುರುಗಳು ಆನಂದಾಶ್ರು ತುಂಬಿದ ಕಣ್ಣುಗಳಿಂದ ನೋಡಿ, ನುಡಿದರು:

"ಪುಣ್ಯವಂತೆ ನೀನು ನಾಗಲಾಂಬೆ! ನಿನ್ನ ಮಮತೆಯ ತಮ್ಮನಿಗೆ ಸರಿಯಾದ ಸಂಬಂಧವಾಯಿತು."

"ಎಲ್ಲವೂ ನಿಮ್ಮ ಆಶೀರ್ವಾದ ಗುರುವೇ!"

"ಹೌದು ನಾಗಮ್ಮ, ಎಲ್ಲವೂ ಅವರ ಅಂತಃಕರಣದ ಪ್ರಭಾವ! ಅವರ ಸಹಾಯವಿಲ್ಲದಿದ್ದರೆ ನನ್ನ ಯೋಚನೆ ಕನಸಿನ ಮಾತಾಗುತ್ತಿತ್ತು" ಬಲದೇವನು ನುಡಿವಾಗ ಕಂಠ ಬಿಗಿದಿತ್ತು.

ಬಸವೇಶ ಮೌನವಾಗಿ ತಲೆತಗ್ಗಿಸಿ ಕುಳಿತಿದ್ದನು. ಗಂಗಾಂಬಿಕೆ ಮನದ ಹಿಗ್ಗು ಮೊಗದಲ್ಲಿ ನುಗ್ಗುವದನ್ನು ತಡೆದು, ತೆರೆಗಳಿಲ್ಲದ ತುಂಬುಗೊಳದಂತೆ ಗಂಭೀರವಾಗಿದ್ದಳು. ನೀಲಲೋಚನೆ ಪಾತಾಳಕ್ಕಿಳಿದಿದ್ದಳು.

ಸ್ವಲ್ಪಹೊತ್ತು ಸುಮ್ಮನಿದ್ದು ಮಹಾಮಂತ್ರಿ ಮತ್ತೆ ಹೀಗೆ ಎಂದನು: "ನೀವು ಒಪ್ಪುವದಾದಲ್ಲಿ ಇದೇ ಮಾಘಮಾಸದಲ್ಲಿ ಮಂಗಲಕಾರ್ಯಕ್ಕೆ ಏರ್ಪಡಿಸುವೆ!"

"ಮಾಘಮಾಸವೆಂದರೆ ಇನ್ನೆರಡೇ ತಿಂಗಳ ನಂತರ?"

"ಅವಸರವೆಂದು ನೀವೇನೂ ಚಿಂತಿಸುವ ಕಾರಣವಿಲ್ಲ ನಾಗಲದೇವಿ! ಮಹಾಮಂತ್ರಿಗಳು ಎಲ್ಲ ಕಾರ್ಯಭಾರವನ್ನೂ ತಾವೇ ನೋಡಿಕೊಳ್ಳುತ್ತಾರೆ" ಗುರುಗಳು ಉತ್ಸಾಹದಿಂದ ನುಡಿದರು.

"ತಂದೆಯವರ ವಿಚಾರ......" ಎಂದು ನಾಗಲಾಂಬೆ ಅರ್ಧೋಕ್ತಿಯಲ್ಲಿರುವಾಗ "ತಿಥಿಯ ಬಗೆಗೆ ನಾನವರ ಅನುಮತಿ ಪಡೆಯುತ್ತೇನೆ" ಎಂದು ಬಲದೇವರಸು ಉತ್ತರಿಸಿ, ಬಸವಣ್ಣನ ಕಡೆಗೆ ಹೊರಳಿ—

"ಗುರುಗಳು ತಮ್ಮ ವಯೋಮಾನಕ್ಕೆ ದೂರ ಪ್ರವಾಸ ತಡೆಯದೆನ್ನು ತ್ತಾರೆ ಬಸವೇಶಾ ನಿನ್ನ ವಧುವಿನೊಡನೆ ಜತೆಯಾಗಿ ನೀನು ಈಗಲೇ ಅವರ ಆಶೀರ್ವಾದ ಪಡೆಯುವದು ಒಳ್ಳೆಯದು" ಎಂದು ನುಡಿದು ಹೆಣ್ಣು ಮಕ್ಕಳತ್ತ ನೋಡುತ್ತ ಎದ್ದು ಮುಂದೆ ಬಂದನು. ಸಮಯೋಚಿತದಕ್ಷ ಳಾದ ನಾಗಲಾಂಬೆ ಗಂಗಾಂಬಿಕೆಯ ಕೈ ಹಿಡಿದು ಮುಂದೆ ಕರೆತಂದಳು. ಗುರುಗಳ ನಲುಮೆಯ ನೋಟ ಬಸವಣ್ಣನು ಎದ್ದು ಮುಂದೆ ಬರಬೇಕೆಂದು ಸೂಚಿಸುವಂತಿತ್ತು.

"ನನ್ನನ್ನು ಸಂಸಾರದಲ್ಲಿ ಸಿಲುಕಿಸಲು ನಿಮಗೆಲ್ಲ ಇಷ್ಟೇಕೆ ಆತುರ ಗುರುದೇವಾ ?" ಎನ್ನುತ್ತ ಮೆಲ್ಲನೆದ್ದು ಅವನು ಮುಂದುವರಿದನು. ಬಲ ದೇವರಸು ಗಂಗಾಂಬೆಯ ಹಸ್ತವನ್ನು ಬಸವೇಶನ ಹಸ್ತದಲ್ಲಿಟ್ಟನು. ಅವರಿ ಬ್ಬರು ಗುರುಪಾದಕ್ಕೆರಗಿದರು. ಗುರುಗಳು ಫಲಪುಷ್ಪಗಳನ್ನು ಅವರ ಉಡಿ ಯಲ್ಲಿ ಹಾಕಿ ಆಶೀರ್ವಾದ ಮಾಡಿದರು. ನೀಲಾಂಬೆ ನಿಂತಲ್ಲಿಯೇ ನಿಟ್ಟು ಸಿರೆಳೆದಳು. ಹತ್ತಿರಿದ್ದ ನಾಗಲಾಂಬೆ ಅದನ್ನು ಗಮನಿಸಿದಳು. ಆಕೆಯ ಕರುಳು ಮಿಡಿದರೂ ಆಗ ಮೌನವಾಗಿಯೇ ಇರಬೇಕಾಯಿತು.

ಜಾತವೇದಿ ಶಿವಯೋಗಿಗಳು ಎಲ್ಲರಿಗೆ ಕುಳ್ಳಿರಲು ಸೂಚಿಸಿ "ಸಂಗಮ ನಾಥನ ದಯೆಯಿಂದ ಸಕಲರಿಗೂ ಶುಭವಾಗಲಿ ! ನಾಗಲೆತಾಯಿ, ನಿಮ್ಮ ಮಾವಂದಿರು ನಾಳೆ ಬೆಳಗಿನಲ್ಲಿಯೇ ಮರುಪ್ರಯಾಣ ಹೊರಡಲು ಅನು ಮತಿ ಪಡೆದಿದ್ದಾರೆ. ಈಗೊಂದು ವಚನಗೀತ ಹೇಳಿ ಮಂಗಲ ಮಾಡಮ್ಮ!" ಎಂದರು.

ನಾಗಲಾಂಬೆ ಹಿಂದಿರುಗಿ ನೋಡಿದಳು. ಅದನ್ನು ಕಂಡ ದಾಸಿ ತಂಬೂರಿಯನ್ನು ತಂದು ಕೈಗಿತ್ತಳು. ಸ್ವಲ್ಪದರಲ್ಲಿ ಸ್ವರಗೂಡಿಸಿದಳು. ಮಧುರ ಕಂಠದಿಂದ ಹಾಡಿದಳು !

'ಜವನೀವ ಕಾಲಕ್ಕೆ ಸಿರಿಯು ಬೆನ್ನಲಿ ಬರ್ಕು,
ಪರಿವ ಜೆವ್ವೊರೆಯ ಕೆರೆತುಂಬಿದಂತಯ್ಯಾ !
ನೆರೆಯುವ ವಸ್ತು ನೆರೆವುದು ನೋಡಯ್ಯಾ,
ಅರಸು ಪರಿವಾರ ಕೈವಾರ ನೋಡಯ್ಯಾ !
ಪರಮ ನಿರಂಜನನೆ ಮರೆವ ಕಾಲಕ್ಕೆ
ತಾಂಬಿನ ಹರಿವಿಯ ಕಲ್ಲುಕೊಂಡಂತೆ ಕೂ. ಸಂ. ದೇವಾ ?

"ಮಾನವನ ಏರು ಇಳಿತಗಳ ಕಾರಣ ಶೋಧಿಸುವಲ್ಲಿ, ಇದನ್ನು ಹಿಂದೆ ಬಸವೇಶ ಹಾಡಿದನು" ಎಂದು ಉಲ್ಲಸಿತರಾಗಿ ನುಡಿದು ಗುರುಗಳು ಸರ್ವರಿಗೂ ಆಶೀರ್ವಾದವಿತ್ತು ತೆರಳಿದರು.

ಮರುದಿನ ಮುಂಜಾನೆ ಮಂಗಲದ್ರವ್ಯಗಳನಿತ್ತು ಗಂಗಾಂಬಿಕೆ ನೀಲಾಂಬಿಕೆಯರನ್ನು ನಾಗಲಾಂಬೆ ಬೀಳ್ಕೊಡುತ್ತಿದ್ದಳು. ನೀಲಾಂಬೆ ನಮಸ್ಕರಿಸಿದಾಗ 'ನೀನೂ ನಿನ್ನ ಭಾಗ್ಯದ ದೇವರನ್ನು ಬೇಗ ಪಡೆಯುವಮ್ಮಾ' ಎಂದು ಹರಸಿದಳು.

ಕಲ್ಯಾಣಗಮನ

ಮಾಘಮಾಸದ ಮೊದಲನೆಯ ವಾರದಲ್ಲಿ ಒಂದು ದಿನ ಕಲ್ಯಾಣದ ದೂತನು ಬಲದೇವ ಮಹಾಮಂತ್ರಿಯ ಪತ್ರದೊಡನೆ ಬಂದು ಜಾತವೇದಿ ಮುನಿಗಳನ್ನು ಕಂಡನು. 'ಮಾಘಬಹುಳ ತದಿಗೆ ಶುಭದಿನವಾಗಿದೆ. ಅಂದು ಬಸವೇಶ-ಗಂಗಾಂಬಿಕೆಯರ ವಿವಾಹ ನೆರವೇರಿಸಲು ನಿಶ್ಚಯಿಸಲಾಗಿದೆ, ವರನನ್ನೂ ನಾಗಲಾಂಬೆ-ಚೆನ್ನಬಸವಣ್ಣನವರನ್ನೂ ಆಶೀರ್ವದಿಸಿ ಕಳುಹಬೇಕು. ಇವರನ್ನು ಕರೆದುಕೊಂಡು ಬರಲು ಬೇಕಾದ ಸರಂಜಾಮು ಕಳಿಸಿದ್ದಾಗಿದೆ. ಮಾದಿರಾಜರು ನೇರವಾಗಿ ಕಲ್ಯಾಣಕ್ಕೆ ಬರುವದಾಗಿ ತಿಳಿಸಿದ್ದಾರೆ.' ಎಂಬುದು ಪತ್ರದ ಅಭಿಪ್ರಾಯವಾಗಿತ್ತು.

ಕುಲಪತಿಗಳು ನೋಡಿ ಸಂತೋಷಿಸಿ, ಬಸವೇಶ-ನಾಗಲಾಂಬೆಯರನ್ನು ಕರೆದು, ಪತ್ರದ ವಿಷಯ ವಿವರಿಸಿ, ನಾಡದು ಪ್ರಾತಃಕಾಲ ಹೊರಡಬೇಕೆಂದು ಅಪ್ಪಣೆಮಾಡಿದರು. ನಾಗಮ್ಮ ಅನುಮತಿಸಿ, ನಮಿಸಿ ಪ್ರಯಾಣದ ಸಿದ್ಧತೆಗೆಂದು ಕುಟೀರಕ್ಕೆ ಮರಳಿದಳು.

ಬಳಿಕ ಬಸವೇಶನು ಮೆಲ್ಲನೆ ಮೊಗವೆತ್ತಿ ಕೈಮುಗಿದು ನುಡಿದನು :

"ಗುರುದೇವಾ ನಿಮ್ಮಡಿಗಳನ್ನು ಅಗಲಿರುವದು ನನಗೆ ಅಸದಳವು ! ಸಂಗಮನಾಥನ ಇಚ್ಛೆಯು ಇದೆಯೇ ? ನನ್ನನ್ನು ಬಂಧನದಲ್ಲಿ ಹಾಕಿ ಕಲ್ಯಾಣಕ್ಕೆ ಕಳುಹಿಸುವದರಲ್ಲಿ ಗುರುಗಳ ಉದ್ದೇಶವಾದರೂ ಏನು ?"

ಮುನಿಗಳು ಹುಬ್ಬುಗಳನ್ನು ಕುಂಚಿತಗೊಳಿಸಿ ಕ್ಷಣಹೊತ್ತು ಆಲೋಚಿಸುವಂತೆ ಮೌನವಾಗಿದ್ದು ಬಳಿಕ ಹೀಗೆ ಹೇಳಿದರು :

"ಉದ್ದೇಶ ಮಹತ್ವದ್ದಾಗಿದೆ ಬಸವಣ್ಣ ! ನಿನ್ನ ತಂದೆ ಬಾಗೇವಾಡಿಯ ನಾಡಪ್ರಭು ಮಾದಿರಾಜರು, ತೇಜಸ್ವಿಯಾದ ನಿನ್ನನ್ನು ಗಹಲೀಶ ಮಠದ ಪಟ್ಟಾಧ್ಯಕ್ಷನನ್ನು ಮಾಡಲೆಳಸಿದ್ದರು. ಗಹಲೀಶಮಠವು ರಾಜಮನ್ನಣೆ ಪಡೆದಿದೆಯೆಂಬುದೂ ಅದಕ್ಕೆ ಹನ್ನೆರಡು ಗ್ರಾಮಗಳ ಒಡೆತನ ಸೇರಿದೆ ಯೆಂಬುದೂ ನಿಜ ! ಆದರೆ ಆ ಪೀಠವನ್ನು ಪಡೆದು, ಸಾಂಪ್ರದಾಯಿಕ ಕಾರ್ಯಭಾರದಲ್ಲಿ ಮಾತ್ರ ಕೊಳೆಯುತ್ತಾ, ನಿನ್ನ ವ್ಯಕ್ತಿತ್ವ, ಸಾಹಸ, ಆದರ್ಶ ಜೀವನ, ಅದರಿಂದ ಆಧ್ಯಾತ್ಮಿಕಸಾಧನದ ಮಾರ್ಗದರ್ಶನ ಇವನ್ನೆಲ್ಲ ಹಾಳು ಮಾಡಿಕೊಳ್ಳುವದು ನಮಗೆ ಇಷ್ಟವಾಗಿಲ್ಲ. ಆ ಮಠದ ಶೈವಸಿದ್ಧಾಂತವನ್ನು ಮೀರಿ ನಿನ್ನ ಆತ್ಮಶೋಧನೆ - ಆತ್ಮಸಾಧನೆ - ಮುಂದುವರಿಯಬೇಕಾಗಿದೆ. ಸಂಪತ್ತು-ಕೀರ್ತಿಗಳ ಮೋಹವನ್ನು ನೀನು ಸಹಜವಾಗಿ ತ್ಯಜಿಸಬಲ್ಲೆ ! ನಿನ್ನ ಕಾರ್ಯಕ್ಷೇತ್ರವನ್ನು ವಿಸ್ತೃತಗೊಳಿಸಲು ಬಾಗೇವಾಡಿಯ ಸಂಬಂಧ ವನ್ನು ತಪ್ಪಿಸಿ ಕಲ್ಯಾಣಕ್ಕೆ ಕಳಿಸುವದು ನಮ್ಮ ಎಣಿಕೆಯಾಗಿದೆ."

"ಮಾದಿರಾಜರ ನಾಲ್ಕುಪಟ್ಟು ಸಿರಿಸಂಪದುಗಳುಳ್ಳ ಬಲದೇವರಸರಿಗೆ ಗಂಡುಮಕ್ಕಳಿಲ್ಲ. ಅವರ ಮನೆಯಳಿಯನಾದ ನಾನು ಸಂಪತ್ತಿನ ಮೋಹ ದಲ್ಲಿ ಸಿಲುಕಲಿಕ್ಕಿಲ್ಲವೇ ?"

"ಸಿಲುಕಲಾರೆ ! ಕಲ್ಯಾಣದಲ್ಲಿ ಬಹು ಮುಖವಾದ ಲೋಕಸೇವೆ ನಿನ ಗಾಗಿ ಕಾದಿದೆ ! ದೇಶ-ಧರ್ಮ-ಸಮಾಜಗಳ ದೋಷನಿವಾರಣೆಗೆ ದುಡಿಯಲು ಹಂಬಲಿಸುವ ನಿನಗೆ ಅಲ್ಲಿ ಸಾಕಷ್ಟು ಕಾರ್ಯಾವಕಾಶವಿದೆ. ಅದರಲ್ಲಿ ತೊಡಗಿದ ನೀನು ಸಂಪತ್ತು-ಸುಖಗಳ ಮಾಯೆಗೆ ಒಳಗಾಗಲಾರೆ !"

"ಅಲ್ಲಿ ನಾನು ಮಾಡಬೇಕಾದ ಕಾರ್ಯವೇನು ?"

"ಸಮಾಜವು ಇಂದು ಜಡವಾಗಿದೆ. ಸಂಪ್ರದಾಯದ ಕುರುಡು ದಾರಿಯಲ್ಲಿ ಮಾನವರು ಪಶುಗಳಂತೆ ಜೀವಿಸುತ್ತಾರೆ. ರಾಜ–ಮಹಾರಾಜರ, ಅಧಿಕಾರಿಗಳ, ಡಂಭಾಚಾರದ ಧಾರ್ಮಿಕಪುರುಷರ, ಅನ್ಯಾಯ-ಅತ್ಯಾಚಾರ ಗಳಿಂದ ಸಾಮಾಜಿಕ ವಿವೇಕ ವಿಚಾರಗಳ ಚೇತನವು ಅಡಗಿ ಹೋಗಿದೆ. ವಿಷಯಾಭಿಲಾಷೆ ಹೆಚ್ಚಾಗಿ ಭಕ್ತಿ ಜ್ಞಾನಗಳು ಮಲಿನವಾಗಿವೆ. ಆದರಿಂದ ಶಾಂತಿ–ಸಮತೆಗಳು ತಲೆದೋರದೆ ಜೀವನದಲ್ಲಿ ನೆಮ್ಮದಿಯೇ ಹಾಳಾಗಿದೆ.

ನೀನು ರಾಜಿಕ ಸಹಿತವಾಗಿ ಸಮಾಜದ ಸರ್ವಾಂಗಗಳಲ್ಲಿಯೂ ನಿನ್ನ ನಿಷ್ಕಲ್ಮಷ ಆದರ್ಶವನ್ನು ನಿನ್ನ ಪ್ರತ್ಯಕ್ಷ ಜೀವನದಿಂದ ಪ್ರದರ್ಶಿಸಬೇಕು. **ಸತಿ-ಸುತರೊಡನಿದ್ದವರು ಬದ್ಧರೆಂಬ ವೇದಾಂತಿಗಳ ಅಳಿಮತವನ್ನು ಅಲ್ಲೆನಿಸಿ ತೋರಬೇಕು.** ಜ್ಞಾನಿಗಳ ನೆರವಿನಿಂದ ನೀತಿತತ್ವಗಳ ನಿಜಸ್ವರೂಪವನ್ನು ಸ್ಪಷ್ಟಗೊಳಿಸಬೇಕು ಮತ್ತು ಪ್ರಚಾರದಲ್ಲಿ ತರಬೇಕು. ಪ್ರಯತ್ನದಿಂದ ಭಕ್ತಿಯ ಬೀಜವನ್ನು ಬಿತ್ತಿ, ದುರ್ಗುಣ-ದುರಾಚಾರಗಳನ್ನು ಹಿಂಗಿಸಿ, ಪರಮಾತ್ಮಪ್ರಕಾಶ ಬೆಳಗುವಂತೆ ಮಾಡಬೇಕು. ಇದಕ್ಕಾಗಿ ಪ್ರಯತ್ನಿಸಲಾರೆಯಾ ?"

"ಅವಶ್ಯವಾಗಿ ಪ್ರಯತ್ನಿಸುವೆ ಗುರುದೇವ ! ಇದೇ ನನ್ನ ಜೀವನದ ಧ್ಯೇಯವಾಗಿರಲಿ ! ನೆರವೇರಿಸುವ ಭಾರ ಸಂಗಮನಾಥನಿಗಿರಲಿ ! ಈ ಪಾದಗಳಿಗಿರಲಿ !!"

"ನೆರವೇರುವದು. ಎಂದಿನಂತೆ ಸಂಗಮದೇವನು ನಿನಗೆ ಸ್ಫೂರ್ತಿಯನ್ನೂ ಬಲವನ್ನೂ ನೀಡುವನು; ಬೆಳಕ ತೋರುವನು. ಸಂಗಮನಾಥನ ಅಧಿಷ್ಠಾನದಲ್ಲಿಯೆ ನಿನ್ನ ವ್ಯಕ್ತಿತ್ವ ವಿಕಾಸಗೊಳ್ಳುವದು; ನಿನ್ನ ಕರ್ತೃತ್ವ ಕಾರ್ಯಮಾಡುವದು. ನಮ್ಮನ್ನಗಲಿದೆನೆಂದು ಚಿಂತಿಸಬೇಡ ! ನೀನೆಲ್ಲಿದ್ದರೂ ನಿನ್ನ ಯೋಗಕ್ಷೇಮವನ್ನು ಚಿಂತಿಸುತ್ತಾ ನಾವು ನಿನ್ನೊಡನೆಯೇ ಇರುವೆವು. !!

ಹೃದಯ ತುಂಬಿದಾನಂದದಿಂದ ಬಸವಣ್ಣ ಸಾಷ್ಟಾಂಗವಾಗಿ ಎರಗಿದನು. ಕೂಡಲೆ ಕುಲಪತಿಗಳು ಬಾಗಿ ಕೈವಿಡಿದೆಬ್ಬಿಸಿ, ಆಲಿಂಗಿಸಿ, ಮೈದಡವಿ, ಶಿರದ ಮೇಲೆ ಕರಕಮಲವನ್ನಿರಿಸಿ "ಜಯವಾಗಲಿ ಮಗು ನಿನಗೆ" ಎಂದು ಹರಸಿದರು. ಆಗಲೆ ಸಾಯಂಕಾಲ ಪೂಜೆಯ ಘಂಟಾನಾದವಾಯಿತು.

ಬಸವೇಶ ಕುಟೀರಕ್ಕೆ ಬಂದು ಅಕ್ಕನಿಗೆ ಎಲ್ಲವನ್ನೂ ತಿಳಿಸಿದನು. ಚೆನ್ನಬಸವಣ್ಣನ ವಿದ್ಯಾಭ್ಯಾಸವು ಕಲ್ಯಾಣದಲ್ಲಿಯೇ ಸಾಗಬೇಕೆಂದು ಗುರುಗಳು ಸೂಚಿಸಿದ್ದರು. ಅದನ್ನು ತಿಳಿದು ನಾಗಲಾಂಬೆ ಬಸವೇಶನಿಗೆ "ಶ್ರೀಮಂತ ಮಾವನ ಮನೆಯಳಿಯನಾಗಿ ನೀನಿರುವಾಗ ನಿನ್ನೊಡನೆ ನಾವಿರುವದು

ಸರಿಯೋ ? ಮದುವೆಯ ಮರುದಿನ ನಾನು ಚೆನ್ನಬಸವಣ್ಣನೊಡನೆ ಮರಳಿ ಬರಲೇಬೇಕು." ಎಂದಳು.

"ಸುಲಭವಾಗಿ ಸಿಕ್ಕುವ ಶ್ರೀಮಂತಿಕೆಯನ್ನು ಅನುಭವಿಸುತ್ತ ಕುಳ್ಳಿರುವದು ನನ್ನ ಧರ್ಮವಾದೀತೇ ಅಕ್ಕ ? ಕಾಯಕದಿಂದಲೇ ನನ್ನ ಜೀವನ ನಡೆಯುವದು. ನಾನು ಸ್ವತಂತ್ರವಾಗಿಯೇ ವಾಸಮಾಡಿಕೊಂಡಿರುವೆನು. ಆಗ ನನ್ನ ಬಳಿಯಲ್ಲಿ ನೀವಿರಲು ಅಭ್ಯಂತರವೇನು ?"

ಈಗಲೇ ಇದನ್ನು ನಿರ್ಣಯಿಸುವದು ಸಾಧ್ಯವಿಲ್ಲವೆಂದು ನಾಗಲಾಂಬೆ ಸುಮ್ಮನಾದಳು.

ಎರಡನೆಯ ದಿನ ಬೆಳಗಿನಲ್ಲಿ ಅಕ್ಕನನ್ನೂ ಅಳಿಯನನ್ನೂ ಒಡಗೊಂಡು ಗುರುಚರಣತೀರ್ಥ, ಪ್ರಸಾದಗಳನ್ನು ಪಡೆದು, ಕರೆಯಬಂದ ಪರಿವಾರದೊಡನೆ ಬಸವೇಶ ಕಲ್ಯಾಣಕ್ಕೆ ತೆರಳಿದನು.

೫. ಗೃಹಸ್ಥ ಜೀವನದ ಪವಿತ್ರರೂಪ

ಮದುವೆಯ ಮಂಟಪದಲ್ಲಿ

ಮಾದಿರಾಜನು ನಿಬ್ಬಣಿಗನಾಗಿ ಇಂಗಳೇಶ್ವರ ಬಾಗೇವಾಡಿಯಿಂದ ಪರಿವಾರದೊಡನೆ ನೇರವಾಗಿ ಕಲ್ಯಾಣಕ್ಕೆ ಬಂದು ಮಕ್ಕಳನ್ನು ಕೂಡಿಕೊಂಡನು. ಬಸವೇಶನ ಬಗೆಗೆ ಅಭಿಮಾನ ತಾಳಿದ್ದ ಬಾಗೇವಾಡಿಯ ಜನ ಅವನನ್ನು ಓಲೈಸಹತ್ತಿದರು. ಕಲ್ಯಾಣದ ಸಾಮಂತನಗರದಲ್ಲಿ ಅವರಿಗೆ ಬೀಡಾರ ಮಾಡಿದ್ದರು.

ಬಲದೇವರಸನ ಯೋಗ್ಯತೆಗೆ ತಕ್ಕ ವೈಭವದಿಂದ ಅವನ ಮಗಳ ಮದುವೆ ನಡೆಯಬೇಕೆಂದು ಸ್ವತಃ ಬಿಜ್ಜಳರಾಯನೇ ಮೇಲ್ವಿಚಾರಣೆ ನಡಿಸಿದನು. ಹಾಗೆ ಸಡಗರದಿಂದಲೇ ಆ ಮಂಗಲಕಾರ್ಯ ಜರುಗಿತು. (ಪ್ರಮೋದೂತ ಮಾಘ ಬ ೩ ಶ. ೧೦೭೨ ಕ್ರಿ. ವ. ೧೧೫೧) ನೀಲಲೋಚನೆಯು ಮದುಮಗಳಿಗೆ ಆಪ್ತಸಖಿಯಾಗಿ ನೆರವಿಗಿದ್ದಳು. ಅದರೊಡನೆ ಬಸವೇಶನ ಸುಮಧುರ ನುಡಿಗಳ ಸೊಗಸನ್ನೂ ಸವಿದು ಆಮೋದಿಸಿದ್ದಳು.

ಬಸವಣ್ಣನ ನಡೆ-ನುಡಿಗಳನ್ನು ಬಿಜ್ಜಳನು ಲಕ್ಷಪೂರ್ವಕವಾಗಿ ನೋಡುತ್ತಿದ್ದನು. ಅವನ ದೈವೀಗುಣಗಳನ್ನು-ವಿದ್ಯಾಬುದ್ಧಿ-ನೈಪುಣ್ಯಗಳ ಕೀರ್ತಿಯನ್ನು ಈ ಮೊದಲು ಅನೇಕ ಸಲ ಕೇಳಿದ್ದನು. ಇತ್ತೀಚೆಗೆ ನೀಲಲೋಚನೆ ಸಂದರ್ಭಾನುಸಾರವಾಗಿ ಅವನ ಉದಾತ್ತ ವರ್ತನೆಯ ನಿದರ್ಶನಗಳನ್ನು ವರ್ಣಿಸಿ ಹೇಳಿದ್ದಳು. ಅದರಿಂದ ಬಸವೇಶನ ಬೆಳೆಯುತ್ತಲಿರುವ ವ್ಯಕ್ತಿತ್ವವು ಬಿಜ್ಜಳನ ಕುತೂಹಲವನ್ನು ಹೆಚ್ಚಿಸಿತ್ತು. ಅದನ್ನು ಇನ್ನಿಷ್ಟು ಪರಾಮರ್ಶಿಸಿ ನೋಡಿ ಈ ಮಾನವ ಶ್ರೇಷ್ಠನನ್ನು ತನ್ನ ರಾಜ್ಯದ ಹಿತಕ್ಕಾಗಿ ಆಡಳಿತದಲ್ಲಿ ಉಪಯೋಗಿಸಿಕೊಳ್ಳಬಹುದೆಂದು, ಮುಂಧೋರಣೆಯುಳ್ಳ ಆತನು ಸ್ವಾಭಾವಿಕವಾಗಿಯೇ ಮನಸ್ಸು ಮಾಡಿದನು.

ಮದುವೆಯಾದ ಮಾರನೆಯ ದಿವಸ ಮಹಾಮಂತ್ರಿಯು ಚಕ್ರವರ್ತಿ ಹಾಗು ಸರ್ವಾಧಿಕಾರಿ ಮೊದಲುಮಾಡಿ ರಾಜಧಾನಿಯಲ್ಲಿಯ ಸಾಮಂತ

ಮನ್ನೆಯರಿಗೆಲ್ಲ ವಿಶೇಷ ಔತಣವನ್ನು ಏರ್ಪಡಿಸಿದನು. ವಿಲಾಸಿಯಾದ ತೈಲಪದೇವನು ಅಸ್ವಾಸ್ಥ್ಯದ ನೆವಮಾಡಿ, ತಾನು ಬಾರದೆ ಉಡುಗೊರೆಗಳನ್ನು ಮಾತ್ರ ಕಳಿಸಿದ್ದನು. ಅಂದಿನ ಸಮಾರಂಭದಲ್ಲಿ ಬಿಜ್ಜಳರಾಜನೇ ಮುಖ್ಯ ಅತಿಥಿ!

ಆಗಲೇ ಆಮಂತ್ರಿತರಲ್ಲಿ ಬಹುಜನರು ಬಂದಿದ್ದರು. ಬಲದೇವರಸು ಬಿಜ್ಜಳನನ್ನು ಸ್ವಾಗತಿಸಿ ಮಂಟಪದಲ್ಲಿ ಕರೆದುಕೊಂಡು ಬಂದನು. ಕುಳಿತವರೆಲ್ಲ ಎದ್ದು ನಿಂತು ಆದರವನ್ನು ತೋರಿಸಿದರು. ಬಿಜ್ಜಳನು ಅಗ್ರಾಸನವನ್ನು ಅಲಂಕರಿಸಿದ ಬಳಿಕ ಬಸವೇಶನು ಅಭಿವಂದಿಸಲು ಬಂದನು. ಬಿಜ್ಜಳನು ಅವನ ಕೈ ಹಿಡಿದು ತನ್ನ ಹತ್ತಿರದ ಆಸನದಲ್ಲಿ ಕುಳ್ಳಿರಿಸಿಕೊಂಡನು. ಪ್ರಭುಗಳ ಸಮ್ಮುಖದಲ್ಲಿ ನಿಂದಿರುವನೇ ಯೋಗ್ಯವೆಂದು ಹೇಳಿದರೂ ಅಳಿಯದೇವರೆಂದು ಗೌರವವನ್ನು ನೀಡಿದ ರಾಜನ ಇಚ್ಛೆಯನ್ನು ಮೀರಲಾರದೆ ಬಸವೇಶನು ಆಸನದ ಅಂಚಿನಲ್ಲಿ ನಮ್ರಭಾವದಿಂದ ಕುಳಿತನು. ತನ್ನ ಅಧ್ಯಯನದಿಂದ ಆರಂಭಿಸಿ ಹಲವು ಸಂಗತಿಗಳ ಬಗೆಗೆ ರಾಜನು ಕೇಳುವ ಪ್ರಶ್ನೆಗಳನ್ನು ಸ್ಪಷ್ಟವಾಗಿ ಶೀಘ್ರವಾಗಿ ವಿನಯದಿಂದ ಉತ್ತರಿಸುತ್ತಿದ್ದನು. ಸಾಹಿತ್ಯ, ವ್ಯಾಕರಣ, ವಿಶೇಷವಾಗಿ ರಾಜಿಕ, ಆರ್ಥಿಕ, ಸಮಾಜನೀತಿ ಇವೆಲ್ಲ ಚರ್ಚೆಯ ವಿಷಯಗಳಾಗಿದ್ದವು. ಬಿಜ್ಜಳನ ಸಂತೋಷ ಹೆಚ್ಚುತ್ತ ಹೋಯಿತು. ಉಳಿದ ಮನ್ನೆಯರೂ ಆತುರದಿಂದ ಲಾಲಿಸುತ್ತಿದ್ದರು. ಆ ಸಲ್ಲಾಪ ಸಾಕೆನಿಸುವ ಮೊದಲೇ ಮಾತು ನಿಲ್ಲಿಸಿ,ಪ್ರಕೃತೋಚಿತ ಕಾರ್ಯದಲ್ಲಿ ತೊಡಗಬೇಕಾಯಿತು.

ಕಾಯಕ ಸ್ವೀಕಾರ

ಅರ್ಥಶಾಖೆಯು ಮಂಚಣ್ಣಮಂತ್ರಿಯ ಕಡೆಗಿತ್ತು. ಆದರೆ ಕೋಶಾಗಾರದಲ್ಲಿ ಅವ್ಯವಸ್ಥೆ ಅಳತೆಮೀರಿ ಇದೇ ಹೊತ್ತಿಗೆ ಬೈಲಿಗೆ ಬಂದಿತ್ತು. ಕಾರಣವಿಲ್ಲದೆ ಸೈನಿಕ ಶಾಖೆಗೆ ಹೆಚ್ಚು ಹಣ ವೆಚ್ಚವಾಗಿ ರಾಜ್ಯಾದಾಯವು ಕ್ರಮೇಣ ಕಡಿಮೆಯಾಗಿತ್ತು. ನೂರ್ಮಡಿ ತೈಲಪದೇವನು ವಿಲಾಸದಲ್ಲಿ ಹೊನ್ನಿನ ಹೊಳೆ ಹರಿಯಿಸಿ, ಅರಮನೆಯ ಕೋಶಾಗಾರವನ್ನು ಬರಿದು ಮಾಡಿ, ರಾಜ್ಯ ಭಂಡಾರಕ್ಕೆ ಉಪದ್ರವ ಕೊಡುತ್ತಿದ್ದನು. ಅವನ ಹಣದ ಚೀಟಿಗಳು ಸಂದಾಯವಾಗದೆ ಮರಳಿಬಂದಾಗ, ಅದರ ದೂರು ಬಿಜ್ಜಳನ ಮುಂದೆ ಬಂದಿತು.

ಮಂಚಣ್ಣನ ಮೇಲೆ ನಂಬುಗೆ ಇದ್ದ ಬಿಜ್ಜಳರಾಯನು ಇದುವರೆಗೆ ಹಣಕಾಸಿನ ವಿಷಯವನ್ನು ಅಷ್ಟು ಗಮನಿಸಿರಲಿಲ್ಲ. ಈಗ ಭಂಡಾರದ ಮುಖ್ಯವಾದ ಲೆಕ್ಕಪತ್ರಗಳನ್ನು ತರಿಸಿ ನೋಡಬೇಕಾಯಿತು. ಸಾವಿರ ಕಂಬದ ಅರಮನೆಯ ಮಂತ್ರಾಗಾರದಲ್ಲಿ ಅವನು ಆ ಕೆಲಸದಲ್ಲಿ ತೊಡಗಿದ್ದನು. ಹಲವು ಕಡಿತದ ಹಾಳಿಗಳನ್ನು ತಿರುವಿಹಾಕಿದರೂ ದೋಷವೆಲ್ಲಿ ಎಂಬುದು ಅವನಿಗೆ ತಿಳಿಯಲಿಲ್ಲ. ಆಗ ಅವನಿಗೆ ಹೊಳೆಯಿತು, ಬಸವೇಶನ ಬುದ್ಧಿಯ ಪರೀಕ್ಷೆಗೆ ಇದು ಅನುಕೂಲ ಸಮಯವೆಂದು! ಅದರೊಡನೆ, ಬಸವೇಶನು ಸ್ವತಂತ್ರವಾಗಿ ಬೇರೆ ವಾಸಮಾಡಿಕೊಂಡಿರುವ ಇಚ್ಛೆಯುಳ್ಳವನಾಗಿರುವನೆಂದು ಬಲದೇವನು ತನ್ನ ಮುಂಚೆ ವಿಷಾದದಿಂದ ನುಡಿದಿದ್ದುದು ನೆನಪಾಯಿತು. ಹಾಗು ಅಂದು ಅಪೂರ್ಣವಾದ ಮಾತು ಕತೆಗಳನ್ನು ಅವನೊಡನೆ ಮುಂದುವರಿಸುವ ಇಚ್ಛೆಯೂ ಆಯಿತು. ಈ ಕಾರಣಗಳಿಂದ ಬಸವೇಶನನ್ನು ಕರೆಸಿ ಕಾಣುವ ವಿಚಾರ ಮಾಡಿದನು. ಕೂಡಲೆ ಪಸಾಯಿತನೊಬ್ಬನನ್ನು ಕರೆದು ಬಲದೇವ ಮಹಾಮಂತ್ರಿಯ ಮನೆಗೆ ಕಳುಹಿದನು.

ಅರಮನೆಯ ಮುಂದೆ ರಥವನ್ನಿಳಿದ ಬಸವೇಶನನ್ನು ಪಸಾಯಿತನು ಮಂತ್ರಾಗಾರಕ್ಕೆ ಕರೆದೊಯ್ದನು. ಈ ಅವಸರದ ಕರೆಯ ಕಾರಣವೇನಿರಬಹುದೆಂದು ಬಸವೇಶನ ಮನಸ್ಸು ಆಲೋಚಿಸುತ್ತಿತ್ತು. ಬರುವಾಗ 'ಮಹಾಮಂಡಲೇಶ್ವರರ ಕೃಪೆಯನ್ನು ಪಡೆ' ಎಂದು ಮಾವನಾಡಿದ ಮಾತುಗಳಿಂದ ಈ ಕರೆಯು ಇವರಿಬ್ಬರ ಪೂರ್ವಯೋಜನೆಯಿಂದ ಬಂದಿರಬಹುದೇ? ಕಲ್ಯಾಣದಲ್ಲಿ ನನ್ನ ಆದರ್ಶ ಜೀವನವನ್ನು ರೂಪಿಸಬೇಕೆಂದುದೇನು? ಅದಕ್ಕೆ ಅಡ್ಡಿಯಾಗುವಂತೆ ಈಗ ನಡೆಯುತ್ತಿರುವದೇನು? ಎಂದು ಚಿಂತಿಸುತ್ತಲೇ ಮಂತ್ರಾಗಾರವನ್ನು ಪ್ರವೇಶಿಸಿದನು. ಮತ್ತು ತಲೆಯೆತ್ತಿ ನೋಡಿದ ಬಿಜ್ಜಳರಾಜನಿಗೆ ತಲೆಬಾಗಿ ಕೈಮುಗಿದನು.

"ಬನ್ನಿ ಬಸವೇಶ, ಕೃಷ್ಣಾತೀರದಲ್ಲಿ ಗೀತಗಳನ್ನು ಹಾಡುತ್ತ ಗಗನಕ್ಕೇರಿ ಇಳಿಯುತ್ತಿದ್ದ ಹಕ್ಕಿಗೆ ಈ ನಿಲುವಂಗಿ ಮುಂಡಾಸಗಳು ಭಾರವಾಗಿವೆಯಲ್ಲವೇ?"

ವಿನೋದದೊಡನೆ ಸ್ವಾಗತಿಸಿ ಆಸನದ ಕಡೆಗೆ ಕೈಮಾಡಿ ಕೂಡ್ರಲು ಸೂಚಿಸಿದನು.

"ಹೌದು ಮಹಾಪ್ರಭು, ಮಹಾಮಂತ್ರಿಗಳು ಹಾಡುಹಕ್ಕಿಯ ರೆಕ್ಕೆಗಳನ್ನು ಕತ್ತರಿಸಿ ಸಂಸಾರಪಂಜರದಲ್ಲಿ ಬಂಧಿಸಿಬಿಟ್ಟಿದ್ದಾರೆ."

ನಿಂತಲ್ಲಿಯೇ ವಿದುನಗೆಯಿಂದ ಉತ್ತರ ಕೊಟ್ಟನು.

ಯಥಾಕಾಲದಲ್ಲಿ ಆ ರೆಕ್ಕೆಗಳು ಮತ್ತೆ ಚಿಗಿವವು; ಕುಳಿತುಕೊಳ್ಳಿ. ಮೊನ್ನೆ ಮದುವೆಯ ಮಂಟಪದಲ್ಲಿಯ ಚರ್ಚೆಯನ್ನು ಪೂರ್ತಿಗೊಳಿಸಲು ಕರೆಯಿಸಿದೆ. ಅದಕ್ಕೂ ಮೊದಲು ಬಲದೇವರಸರ ಯೋಜನೆಯೊಂದನ್ನು ನಿಮಗೆ ತಿಳಿಸಬೇಕಾಗಿದೆ."

"ಪ್ರಭುಗಳ ಅಪ್ಪಣೆಯೇನು ? ಮಾವನವರು ಮತ್ತಾವ ಸಂಕೋಲೆಯನ್ನು ಸಿದ್ಧಗೊಳಿಸಿದ್ದಾರೆ ?" ಎನ್ನುತ್ತ ಕುಳಿತನು.

"ಅದು ಸಂಕೋಲೆಯಾದರೂ ಚಿನ್ನದ್ದು ಬಸವಯ್ಯನವರೆ ! ಅವರು ತಮ್ಮ ಸಂಪತ್ತುಗಳಿಗೆಲ್ಲ ನಿಮ್ಮನ್ನು ಒಡೆಯರನ್ನಾಗಿ ಮಾಡಲೆಳಸಿದ್ದಾರೆ. ಆ ಶಾಸನ ಬರೆಯುವ ಮೊದಲು ನಿಮ್ಮ ಅಭಿಪ್ರಾಯ ತಿಳಿಯಬೇಕಾಗಿದೆ."

"ಮಹಾಪ್ರಭುಗಳು ಕ್ಷಮಿಸಬೇಕು. ಈ ಕೊಡುಗೆಯನ್ನು ನಾನು ಸ್ವೀಕರಿಸುವದಿಲ್ಲ; ನಿರಾಕರಿಸುತ್ತೇನೆ."

"ಅದೇಕೆ ?"

"ಸಮಾಜದಲ್ಲಿ ರೂಢಮೂಲವಾಗಿರುವ ದೋಷಗಳ ನಿವಾರಣೆಗೆ ಯತ್ನಿಸಲು ನಾನೊಂದು ಹೊಸ ಆದರ್ಶದಿಂದ ಜೀವಿಸಬೇಕೆಂದು ನಿರ್ಧರಿಸಿದ್ದೇನೆ."

"ಯಾವ ದೋಷ ನಿವಾರಣೆಗೆ ? ಏನು ನಿಮ್ಮ ಹೊಸ ಆದರ್ಶ ?"

ಬಿಜ್ಜಳನ ಪ್ರಶ್ನೆಯ ದನಿ, ಬಸವೇಶನ ಬುದ್ಧಿ-ವಿವೇಕಗಳನ್ನು ಕೆರಳಿಸುವಂತಿತ್ತು; ಆದರೆ ಅವನು ಧೃತಿಗೆಡಲಿಲ್ಲ. ಸಾವಧಾನದಿಂದ ಹೇಳಿದನು:

"ಪ್ರಭುಗಳು ಅರಿತಿರುವಂತೆ ಕಾಯಕದಿಂದ ಜೀವಿಸುವದು ಗೌರವವಲ್ಲವೆಂಬ ಕಲ್ಪನೆಯು ಜನರಲ್ಲಿ ಹರಡುತ್ತಿರುವದು. ಕಾಯಕದ ಆಧಾರದ ಮೇಲೆ ಜನರಲ್ಲಿ ಮೇಲು ಕೀಳು ವರ್ಗಗಳನ್ನು ರಚಿಸುವದು ಅಧರ್ಮವಾಗಿದೆ. ಈ ಅಸಮಾನತೆಯ ಕೆಟ್ಟಭಾವನೆಯ ಪರಿಹಾರವನ್ನು ಕೈಕೊಳ್ಳುವದು ನನ್ನ ಉದ್ದೇಶ ! ಇದನ್ನು ಸಾಧಿಸುವ ಕ್ರಮ ಕಂಡುಹಿಡಿಯುವದಕ್ಕೂ ಪ್ರಯತ್ನಿಸುವದಕ್ಕೂ ಸ್ವತಂತ್ರಜೀವನವೇ ಅಗತ್ಯವಾದುದು."

“ನಿಮ್ಮ ಉದ್ದೇಶ-ಆದರ್ಶಗಳು ಏನೇ ಇರಲಿ ! ನಿಮ್ಮ ಮಾವನ ಸಂಪತ್ತಿಗೆ ಒಡೆಯನಾಗುವದರಿಂದ ನಿಮ್ಮ ಸ್ವಾತಂತ್ರ್ಯಕ್ಕೇನು ಬಾಧೆ ? ಆ ಶ್ರೀಮಂತಿಕೆ ನಿಮ್ಮ ಕಾರ್ಯಸಾಧನೆಗೂ ಸಹಾಯಕವಾದೀತು.”

“ಪ್ರಭುಗಳು ಕ್ಷಮಿಸಬೇಕು. ನಾನು ಯಾರನ್ನೂ ಉಪಹಾಸ ಮಾಡುವದಿಲ್ಲ. ಶ್ರೀಮಂತಿಕೆಯು ಸ್ವತಂತ್ರ ವಿಚಾರಕ್ಕೆ ಪ್ರತಿಬಂಧಕವಾಗುವದು. ಸಿರಿವಂತನು ಹಲವು ಆಗತ್ಯಗಳ ದಾಸನಾಗಿ ತನ್ನ ಬುದ್ಧಿವಿವೇಕಗಳನ್ನು ಕಳೆದುಕೊಳ್ಳುವನು. ಭೌತಿಕ ಸುಖದ ಸಾಧನೆಯಲ್ಲಿಯೇ ಕಾಲಕಳೆಯುವನು. ಅಂದಿನ ಹೊಟ್ಟೆಗಾಗಿ ದಿನವೆಲ್ಲ ದುಡಿಯುವ ಲಕ್ಷಾವಧಿ ಕಾರ್ಮಿಕರು ತನ್ನಂತೆ ಮಾನವರೆಂಬುದನ್ನು ಧನಿಕನು ಮರೆಯುವನು. ಆತನು ಕರುಣೆ ಇಲ್ಲದ ಕಠಿಣ ಹೃದಯುದವನು; ಬಹಳವಾದರೆ ಕೀರ್ತಿಗಾಗಿ ದಾನಮಾಡುವನು. ಇದಕ್ಕೆ ವಿರುದ್ಧವಾಗಿ ಬಡತನದ ಬೇಗೆಯಲ್ಲಿ ಬೆಂದವನ ಅಂತಃಕರಣಗಳು ಶುದ್ಧವಾಗಿರುತ್ತವೆ. ದುಃಖಿತರ ಬಗೆಗೆ ಅನುಕಂಪೆ ಅವನಲ್ಲಿಯೇ ಕಾಣುವದು. ಅವನಿಗೆ ಮಾತ್ರ ದೀನರಾದವರ ಸೇವೆಯಲ್ಲಿ ಆನಂದವಾಗುವದು. ಆದರಿಂದ ನಾನು ಸ್ವಾತಂತ್ರ್ಯದೊಡನೆ ಬಡತನವನ್ನೇ ಬಯಸುತ್ತೇನೆ.”

ದೊರೆ ಬಿಜ್ಜಳನು ಕ್ಷಣಕಾಲ ಅಚ್ಚರಿಯಿಂದ ಸ್ತಂಭಿತನಾದನು. ‘ಎಂತಹ ಉನ್ನತ ವಿಚಾರ ಬಸವಣ್ಣನದು ? ಇವನ ಬಗೆಗೆ ಈ ನಾಲ್ಕಾರು ದಿನ ತಾನು ತಾಳಿದ ಗೌರವಭಾವನೆಯೂ, ಪ್ರಾಸಂಗಿಕವಾಗಿ ನೀಲಲೋಚನೆ ಹೇಳಿದ ಪ್ರಶಂಶಾಪರ ಮಾತುಗಳೂ ಸಾರ್ಥಕವಾಗಿವೆ. ಆಳವಾದ ಬುದ್ಧಿ-ವಿವೇಚನೆಗಳುಳ್ಳ ಈ ಮಹಾವ್ಯಕ್ತಿಯಿಂದ ಲೋಕಕಲ್ಯಾಣವಾಗುವದರಲ್ಲಿ ಸಂದೇಹವಿಲ್ಲ. ಆ ಪ್ರಯತ್ನವನ್ನು ನನ್ನ ರಾಜ್ಯನಿರ್ವಹಣೆಯ ಒಳ್ಳೆಯ ಸ್ವರೂಪಕ್ಕೆ ಉಪಯೋಗಿಸಬೇಕು; ಸರಿ. ಆದರೆ ಈಗ ವೃದ್ಧರಾದ ಬಲದೇವರಸರನ್ನು ದಿಕ್ಕಿಲ್ಲದವರನ್ನಾಗಿ ಮಾಡುವದು ಉಚಿತವಲ್ಲ’ ಎಂದು ಕೆಲ ಹೊತ್ತು ಚಿಂತಿಸಿ, ಬಳಿಕ ಒಂದು ಮಧ್ಯಮ ದಾರಿಯಿಂದ ಮಾತನಾಡಿದನು.

“ನಿಮ್ಮ ವಿಚಾರವು ಸರಿಯಾಗಿದೆ; ಅದನ್ನು ನಾನು ಮೆಚ್ಚುತ್ತೇನೆ. ಆದರೆ ಸಮಯವೆಂಥದು ನೋಡಿಕೊಳ್ಳಿರಿ. ಬಲದೇವರು ತಮ್ಮ ಮಮತೆಯ ಪುತ್ರಿಯನ್ನಿತ್ತಂತೆ ಆಸ್ತಿಯನ್ನೂ ನಿಮ್ಮ ಕೈಯಲ್ಲಿಟ್ಟು ನಿಶ್ಚಿಂತೆಯಿಂದ ಶಿವ

ಧ್ಯಾನದಲ್ಲಿ ಕಾಲಕಳೆಯಲು ಆಲೋಚಿಸಿದ್ದಾರೆ. ನೀವು ನಿರಾಕರಿಸಿದರೆ ಅಶಕ್ತರಾದ ಆ ವೃದ್ಧರು ಹೃದಯವೇದನೆಯಿಂದ ಬೇಗ ಗತಿಸುವಂತಾಗು ವದು. ನೀವು ನಿಮ್ಮ ಸತಿಯೊಡನೆ ಬೇರೆ ದೂರ ಹೋದರೆ ಅವರ ಪಾಲನೆಗೆ ದಿಕ್ಕಿಲ್ಲದಂತಾಗಿ ಜನರು ನಿಮಗೆ ಏನೆಂದಾರು ? ಇದನ್ನೂ ಸ್ವಲ್ಪ ಗಮನಿಸಿರಿ."

"ತಮ್ಮ ಮಾತು ನನ್ನನ್ನು ನಿರುತ್ತರಗೊಳಿಸುತ್ತದೆ. ಯಾವದಕ್ಕೆ ಹೆದರಿ ನಾನು ದೂರ ಇರಬೇಕೆನ್ನುವೆನೋ ಆ ಬಲೆಯಲ್ಲಿ ನಾನು ಬೀಳುತ್ತಲೇ ಇದ್ದೇನೆ. ಸಂಗಮನಾಥನ ಇಚ್ಛೆ ! ಈಗ ತಮ್ಮ ಆದೇಶವೇನು ?"

"ನಾನೊಂದು ಮಧ್ಯಮಮಾರ್ಗ ಸೂಚಿಸುತ್ತೇನೆ. ಸರಿ ಕಂಡರೆ ಸ್ವೀಕರಿ ಸಿರಿ. ಆರು ತಿಂಗಳ ಮಟ್ಟಿಗೆ ಈ ನಿಮ್ಮ ಆದರ್ಶಜೀವನ ಕ್ರಮವನ್ನು ಮುಂದೂಡಿ ಮನೆಯಲ್ಲಿರಿ. ಈ ಅವಧಿಯಲ್ಲಿ ಸಾವಧಾನವಾಗಿ ನಿಮ್ಮ ಹೊಸ ವಿಚಾರಗಳಿಗೆ ಅವರ ಮನಸ್ಸನ್ನು ತಿರುಗಿಸಬಹುದು. ಆಸ್ತಿಯ ವಿಷಯದಲ್ಲಿ ಬೇರೆ ವ್ಯವಸ್ಥೆಯ ನಿಷ್ಕರ್ಷವನ್ನು ಮಾಡಬಹುದು. ನಿಮಗೂ ನಿಮ್ಮ ಮಾರ್ಗ ನಿಚ್ಚಳವಾಗಿ ತೋರಬಹುದು."

"ಆಗಬಹುದು" ಕ್ಷಣಹೊತ್ತಿನ ಮೇಲೆ ಸಂದರ್ಶನ ಮುಗಿಯಿತೆಂದು ಎದ್ದು ಬೀಳ್ಕೊಳ್ಳಲು ಕೈಮುಗಿದನು.

"ಕುಳಿತುಕೊಳ್ಳಿ, ಇನ್ನೊಂದು ಮಾತು. ಮದುವೆಯ ಮಂಟಪದಲ್ಲಿ ಆರಂಭವಾದುದನ್ನು ಈಗ ಪೂರ್ಣ ಮಾಡಬೇಕಷ್ಟೇ ! ನಿಮಗೆ ಕಾವ್ಯ-ವ್ಯಾಕ ರಣಗಳಲ್ಲಿ ಮಾತ್ರವಲ್ಲದೆ ಅರ್ಥಶಾಸ್ತ್ರ ಗಣಿತಗಳಲ್ಲಿಯೂ ಆಸಕ್ತಿ ಇದೆ ಎಂದಿರಲ್ಲ; ಅದನ್ನೀಗ ನಾವು ತಿಳಿದು ಅದರ ಪ್ರಯೋಜನ ಪಡೆಯ ಬೇಕಾಗಿದೆ."

ಬಿಜ್ಜಳನು ಬಸವೇಶನನ್ನು ಪ್ರಶ್ನಾರ್ಥಕವಾಗಿ ನೋಡುತ್ತಿದ್ದನು.

"ಏನು ಅಪ್ಪಣೆಯಾಗಲಿ !"

ಮೊದಲೆ ತೆಗೆದಿಟ್ಟ ಕೆಲವು ಲೆಕ್ಕಪತ್ರಗಳನ್ನು ಬಸವೇಶನ ಮುಂದಕ್ಕೆ ಸರಿಸಿ "ಚಾಲುಕ್ಯ ಸಾಮ್ರಾಜ್ಯದ ಮಂಡಲಗಳಿಂದ ಸಂದಾಯವಾದ ರಾಜ್ಯಾ ದಾಯದ ಲೆಕ್ಕಗಳಿವು. ಅದರಂತೆ ರಾಜ್ಯರಕ್ಷಣೆಗೂ ಪ್ರಜೋಪಯೋಗಿ ಕಾರ್ಯಗಳಿಗೂ ಮಾಡಿದ ವೆಚ್ಚದ ಪಟ್ಟಿಗಳು ಇಲ್ಲಿವೆ. ಇವುಗಳನ್ನು ಪರಿ

ಶೀಲಿಸಿ ನಾವು ಶೀಘ್ರವಾಗಿ ತಿಳಿಯಬಹುದಾದ ಸಾಮಾನ್ಯ ಸಂಗತಿಗಳಾವವು? ಹೇಳಬಲ್ಲಿರಾ ?"

"ಸ್ವಲ್ಪ ಸಮಯ ಕೊಟ್ಟರೆ ನೋಡಿ ಹೇಳುವೆ !"

"ಆಗಲಿ ನೋಡಿರಿ; ಬೇಕಾದರೆ ಇಲ್ಲಿ ಹಲಗೆ ಬಳಪಗಳಿವೆ. ಈಗ ಒಂದು ಗಳಿಗೆ ಬಿಟ್ಟು ನಾನು ಪುನಃ ಬರುವೆನು. ಅಷ್ಟರಲ್ಲಿ ನಿಮ್ಮ ಉತ್ತರವು ಸಿದ್ಧವಾಗಿರುವದೇ ?"

"ಸಿದ್ಧವಾಗಿರುವದು."

ಮಂದಸ್ಮಿತನಾಗಿ ನುಡಿದು ಬಸವೇಶನು ಲೆಕ್ಕದ ಓಲೆಗಳನ್ನು ಮುಂದಕ್ಕೆ ತಕ್ಕೊಂಡನು. ಬಿಜ್ಜಳರಾಜನು ಹೊರಗೆ ಹೋದನು. ಅವನು ತಿರುಗಿ ಬಂದಾಗ ಕಡಿತದ ಓಲೆಗಳನ್ನು ಜೋಡಿಸಿ ಮುಚ್ಚಿಟ್ಟು ಹಲಗೆಯ ಮೇಲೆ ಕೆಲವೇ ಅಂಕಿಗಳನ್ನು ಬರೆದುಕೊಂಡು ಬಸವೇಶ ಕುಳಿತಿದ್ದನು. ಬಿಜ್ಜಳನು ಕುಳಿತುಕೊಂಡ ಬಳಿಕ ಸಮ್ಮುಖದಲ್ಲಿ ನಿಂತು ವಿವರಿಸಿದನು.

"ನಾಲ್ಕು ವರ್ಷಗಳ ಆದಾಯದ ಲೆಕ್ಕಗಳಿವೆ. ಸಂದಾಯವಾದ ಹಣವು ಪ್ರತಿವರ್ಷ ಕಡಿಮೆಯಾಗುತ್ತ ಬಂದಿದೆ. ಮೊದಲಿನ ವರ್ಷದ ಆದಾಯವನ್ನು ಪ್ರಮಾಣವಾಗಿ ಹಿಡಿದರೆ ಮುಂದಿನ ಮೂರು ವರ್ಷಗಳ ಸರಾಸರಿ ಹತ್ತು ಕೋಟಿಯಷ್ಟು ಕಡಿಮೆಯಾಗಿದೆ. ಅಂದರೆ ಈ ಮೂರು ವರ್ಷಗಳಲ್ಲಿ ಸಾಮ್ರಾಜ್ಯಕ್ಕೆ ಮೂವತ್ತುಕೋಟಿ ವರಹಗಳಷ್ಟು ಹಾನಿಯಾಗಿದೆ. ವೆಚ್ಚವು ಹೆಚ್ಚಾಗಿರುವದು ಈ ಹಾನಿಗೆ ಕಾರಣವು ! ವೆಚ್ಚದ ಪಟ್ಟಿಗಳು ಅಪೂರ್ಣವಾಗಿವೆ. ಆದರೂ ಸ್ಥೂಲವಾಗಿ ವೆಚ್ಚದ ಮೊತ್ತವನ್ನು ಗುರುತಿಸಬಹುದಾಗಿದೆ. ಹೆಚ್ಚುತ್ತ ಹೋದ ವೆಚ್ಚವು ನಾಲ್ಕನೆಯ ವರ್ಷದಲ್ಲಿ ಮೊದಲನೆಯ ವರ್ಷದ ಇಮ್ಮಡಿಯಾಗಿದೆ. ಪ್ರಜಾಹಿತದ ಕಾರ್ಯಗಳ ವೆಚ್ಚ ಇದ್ದಷ್ಟೇ ಇದೆ. ಆದರಲ್ಲಿ ಅಗ್ರಹಾರ-ಮಠ-ದೇವಸ್ಥಾನಗಳ ಸಂಭಾವನೆ ಸ್ವಲ್ಪ ಹೆಚ್ಚಿ ಸಾಮಾನ್ಯ ಜನಜೀವನಕ್ಕೆ ಕೊಟ್ಟ ಸಹಾಯವು ಆ ಮಟ್ಟಿಗೆ ಕಡಿಮೆಯಾಗಿದೆ. ಒಟ್ಟಿನಲ್ಲಿ ಪ್ರಜಾಹಿತದ ವೆಚ್ಚವು ತನ್ನ ಮಟ್ಟದಲ್ಲಿಯೇ ಇದೆ. ವೆಚ್ಚ ಹೆಚ್ಚಿದುದು ರಕ್ಷಣಾಶಾಖೆಯಲ್ಲಿಯೇ ! ಅದು ಮೂರನೆಯ ವರ್ಷದಲ್ಲಿಯೇ ಮೊದಲನೆಯ ವರ್ಷದ ಇಮ್ಮಡಿಗೆ ಮುಟ್ಟಿದೆ. ಯುದ್ಧಗಳು

ಕ್ಷಾಮಗಳು, ಉಂಟಾದಾಗ ಈ ವೆಚ್ಚ ಹೆಚ್ಚುವದು ಸ್ವಾಭಾವಿಕ ! ಈ ನಾಲ್ಕು ವರ್ಷಗಳ ಅವಧಿಯಲ್ಲಿ ಅಂತಹ ಘಟನೆಗಳು ಕಂಡು ಬರುವದಿಲ್ಲ. ಆದುದರಿಂದ ರಕ್ಷಣಾದಳದ ವೆಚ್ಚವು ಆಕ್ಷೇಪಣೀಯವಾಗಿದೆಯೆಂದೂ ಅದರಂತೆ ಸಾಮಾನ್ಯ ಜನಹಿತವು ಉದಾಸೀನಕ್ಕೊಳಗಾಗಿದೆಯೆಂದೂ ನನಗೆ ಕಂಡು ಬರುತ್ತದೆ. ನನ್ನ ಗ್ರಾಹ್ಯವು ತಪ್ಪಾಗಿರಬಹುದು; ಅವಧಾರಿಸಬೇಕು."

"ಸರಿಯಾಗಿದೆ ನೀವು ತಿಳಿದುಕೊಂಡುದು ! ನನಗೂ ಹಾಗೆಯೇ ಅನಿಸಿದೆ. ಅರ್ಥಮಂತ್ರಿಗಳು ಹಿರಿಯರಾದ ಮಂಚಣ್ಣನಾಯಕರು. ಅವರ ಆಡಳಿತದಲ್ಲಿ ಹೀಗೆ ಕೋಶಾಗಾರದ ಕೊರೆ ಹೆಚ್ಚಿದೆ. ಇತ್ತ ಚಕ್ರವರ್ತಿಗಳ ವಿಲಾಸ ಜೀವನದ, ವೆಚ್ಚ ಹೆಚ್ಚಿ ಅದರ ಶಕೆ ರಾಜ್ಯಭಾಂಡಾರಕ್ಕೂ ತಗಲ ಹತ್ತಿದೆ. ನಾಲ್ಕು ವಾರಗಳಿಂದ ಈ ವಿಷಯದಲ್ಲಿ ಚಿಂತಿಸುತ್ತಿದ್ದೇನೆ. ಇದಕ್ಕೆ ಪರಿಹಾರವನ್ನು ಕಂಡು ಹಿಡಿಯಲೇಬೇಕಾಗಿದೆ ಚಕ್ರವರ್ತಿಗಳ ಮನ ನೋಯದಂತೆ, ಅವರ ಗೌರವಕ್ಕೆ ಕುಂದುಬಾರದಂತೆ ಅವರ ವೆಚ್ಚಕ್ಕೆ ಮಿತಿ ಹಾಕಬೇಕಾಗಿದೆ. ಆರ್ಥಿಕದಲ್ಲಿ ತಕ್ಕ ಹೊಸ ಯೋಜನೆಯನ್ನು ರೂಪಿಸಿ ರಾಜ್ಯದಾದ್ಯಂತದಲ್ಲಿ ಬಳಕೆಯಲ್ಲಿ ತರಬೇಕಾಗಿದೆ. ಅದಕ್ಕೂ ಮೊದಲು ಈ ಅವ್ಯವಸ್ಥೆಯ ಆಳವನ್ನು ಅರಿಯಬೇಕಾಗಿದೆ. ಅದರಲ್ಲಿ ನಿಮ್ಮ ಸಹಾಯವು ಅವಶ್ಯವಾಗುವದು ನೀವು ಒಪ್ಪಿಕೊಳ್ಳುವಿರಾ ?"

"ಸಾಮ್ರಾಜ್ಯದ ಈ ಮಹಾಕಾರ್ಯದಲ್ಲಿ ರಾಜತಜ್ಞರಾದ ಪ್ರಭುಗಳಿಗೆ ನನ್ನಂತಹನಿಂದ ಏನು ಸಹಾಯವಾದೀತು ? ಒಡೆಯರ ವಿನೋದವೆಂದು ತಿಳಿಯುತ್ತೇನೆ."

"ವಿನೋದವಲ್ಲ ಬಸವೇಶಾ! ನಿಜವನ್ನೇ ಹೇಳುತ್ತೇನೆ. ನಿಮ್ಮ ಸಹಾಯ ಬೇಕಾಗಿದೆ. ರಾಜ್ಯಾಧ್ಯಕ್ಷ ಶಾಖೆಯ ಆರ್ಥಿಕ ವಿಭಾಗದಲ್ಲಿ ಕರಣಿಕರ ಸ್ಥಳವೊಂದು ತೆರವಾಗಿದೆ. ವರ್ಷಕ್ಕೆ ನೂರು ಗದ್ಯಾಣಗಳ ಸಂಬಳ ! ನೀವು ಒಪ್ಪುವದಾದರೆ ನಿಮ್ಮನ್ನು ಆ ಸ್ಥಳಕ್ಕೆ ನೇಮಿಸುತ್ತೇನೆ. ಕಾಯಕದಿಂದ ಜೀವಿಸುವದು ನಿಮ್ಮ ಬಯಕೆ ! ಇದೊಂದು ಕಾಯಕವೆಂದು ಸ್ವೀಕರಿಸಿರಿ."

ತನ್ನ ಉಪಜೀವನಕ್ಕೆ ಗೊತ್ತುಗುರಿಗಳು ಇಲ್ಲದಾಗ ದೊರೆಯು ಈ ಸಲಹೆ ಮಾರ್ಗಸೂಚಿಯಾಗಿ ತೋರಿತು ಬಸವಣ್ಣನಿಗೆ ! ಅಂತರಂಗದ ಸಂಗಮದೇವನ ಸಂದೇಶವೆಂದು ಭಾವಿಸಿ ತತ್‌ಕ್ಷಣ ನಿರ್ಧಾರಕ್ಕೆ ಬಂದನು.

"ಪ್ರಭುಗಳು ನಿರ್ದೇಶಿಸುವ ನನ್ನ ಕರ್ತವ್ಯವು ಸ್ಪಷ್ಟವಾಗಿದ್ದರೆ ನಾನ ದನ್ನು ಚ್ಯುತಿಯಿಲ್ಲದೆ ನೆರವೇರಿಸಲು ಪ್ರಯತ್ನಿಸುತ್ತೇನೆ."

"ನಮ್ಮ ಸಮ್ಮುಖದ ಪ್ರತಿನಿಧಿಯಾಗಿ ರಾಜ್ಯಭಂಡಾರದ ಲೆಕ್ಕಪತ್ರ ಗಳನ್ನು ಪರಿಶೀಲಿಸುತ್ತಿರುವದು, ಅದರಲ್ಲಿಯ ಲೋಪದೋಷಗಳನ್ನು ನಮಗೆ ವರದಿ ಮಾಡುವದು ನಿಮ್ಮ ಮುಖ್ಯ ಕೆಲಸ ! ಹಾಗೆಯೇ ಈಗಿನ ಅವ್ಯವಸ್ಥೆಗೆ ಕಾರಣಗಳನ್ನೂ ಮುಂದೆ ತಲೆದೋರಬಹುದಾದ ದೋಷಗಳನ್ನೂ ಕಂಡು ಹಿಡಿದು, ನಮಗೆ ತಿಳಿಸುತ್ತಿರಬೇಕು. ನಿಮಗೆ ನೋಡಬೇಕೆಂದೆನಿಸಿದ ರಾಜ್ಯ ಭಂಡಾರದ ಲೆಕ್ಕಪತ್ರಗಳನ್ನೆಲ್ಲ ನಿಮಗೆ ತೋರಿಸುವಂತೆ ಆಜ್ಞೆ ಮಾಡುತ್ತೇನೆ."

"ಆಗಬಹುದು ಮಹಾಪ್ರಭು."

"ಸಮ್ಮುಖದ ಕರಣಿಕನಾಗಿ ನಿಮ್ಮ ನೇಮಕದ ಆಜ್ಞೆಯು ಇನ್ನೆರಡು ದಿನಗಳಲ್ಲಿ ಹೊರಡುವದು. ಈಗ ನೀವು ಹೋಗಬಹುದು"

ಬಸವಣ್ಣನು ಕೈಮುಗಿದು ಹೊರಟನು. ಮೊದಲೇ ಅಪ್ಪಣೆಯಾಗಿ ದ್ದಂತೆ ಪಸಾಯಿತನು ಅವನನ್ನು ರಥದಲ್ಲಿ ಕುಳ್ಳಿರಿಸಿ ಬಲದೇವರಸರ ಮನೆಗೆ ಕಳಿಸಿಬಂದನು.

ಮಾದಿರಾಜನಿಗೆ ಸಂತೃಪ್ತಿ

ಬಸವೇಶನು ಮನೆಗೆ ಬಂದಾಗ ನಾಗಲಾಂಬೆ ತಂದೆಯೊಡನೆ ಮಾತಾ ಡುತ್ತ ಕುಳಿತಿದ್ದಳು. ಬಸವಣ್ಣ ಬಂದು ಹತ್ತಿರದಲ್ಲಿ ಕುಳಿತನು. ಮಹಾ ಮಂಡಲೇಶ್ವರರ ಸಂದರ್ಶನದಲ್ಲಿ ನಡೆದುದನ್ನು ವಿವರಿಸಿದನು.

"ನಿನ್ನ ಭಾಗ್ಯದ ಬಾಗಿಲು ತೆರೆಯಿತು ಬಸವಣ್ಣ ! ಚಕ್ರವರ್ತಿಯ ಅಧಿಕಾರವೆಲ್ಲ ಬಿಜ್ಜಳರಾಯರಿಗಿದೆ. ಅವರ ಕೃಪೆಯೆಂದರೆ ಅಷ್ಟಿಷ್ಟು ಮಹತ್ವ ವಲ್ಲ. ಮುಂದೆ ಮಂತ್ರಿಪದವಿಯೂ ನಿನಗೆ ಅಸಂಭವವಲ್ಲ"

ಮಾದಿರಾಜನ ಮಾತಿಗೆ ನಾಗಲಾಂಬೆ ನಕ್ಕಳು.

"ಇದೀಗ ಕರಣಿಕನಾಗಹೊರಟಿರುವಾಗ ಮಂತ್ರಿಯ ಮಾತನಾಡುತ್ತಿ ರುವಿರಪ್ಪಾ !"

"ಸುಳ್ಳಲ್ಲ ನಾಗಮ್ಮ ! ಹೆಸರಿಗೆ ಕರಣಿಕನಾದರೂ ಸಮ್ಮುಖದ ಕರಣಿಕ ತನಕ್ಕೂ ಮಂತ್ರಿತ್ವಕ್ಕೂ ಬಹಳ ಅಂತರವಿಲ್ಲ. ಅರಸನ ಅಧಿಕಾರ ಸೂತ್ರವು

ಸಮ್ಮುಖದ ಕರಣಿಕನ ಮುಖಾಂತರವೇ ಚಲಿಸುತ್ತದೆ. ಅವನಲ್ಲಿ ಅರಸನ ನಂಬಿಗೆ ಇರುವಷ್ಟು ಇನ್ನಾರಲ್ಲಿಯೂ ಇರುವದಿಲ್ಲ."

ಮಾದಿರಾಜನ ಮಾತಿನ ಉತ್ಸಾಹ ಇಮ್ಮಡಿಸುತ್ತಿತ್ತು. ಅಧಿಕಾರ ಲಾಲಸೆಯನ್ನು ಸೇರದ ಬಸವಣ್ಣ ಮೈಮೇಲಿನ ಬಟ್ಟೆಗಳನ್ನು ತೆಗೆಯುವ ನೆವದಿಂದ ಮೆಲ್ಲನೆ ಎದ್ದನು. ನಾಗಲಾಂಬೆ ತಂದೆಗೆ ನೆನಪು ಕೊಟ್ಟು ಹೇಳಿದಳು :

"ಚೆನ್ನಬಸವಣ್ಣನ ಬಗೆಗೆ ಮಾತಾಡಿದುದನ್ನು ಬಸವೇಶನಿಗೆ ತಿಳಿಸಿರಪ್ಪಾ !"

"ಹೌದು ಬಸವೇಶ ಸ್ವಲ್ಪ ಕುಳ್ಳಿರು. ಚೆನ್ನಬಸವಣ್ಣನನ್ನು ಅಧ್ಯಯನಕ್ಕಾಗಿ ಬಳ್ಳೀಗಾಂವಿಯ ವಿದ್ಯಾಪೀಠಕ್ಕೆ ಕಳಿಸಬೇಕೆಂದು ನಿಮ್ಮ ಮಾವನ ಅಭಿಪ್ರಾಯವಿದೆ."

"ಅಷ್ಟು ದೂರದಲ್ಲಿ ಚಿಕ್ಕವನು ಒಬ್ಬನೇ ಹೇಗಿರುವನು ?"

ಹೀಗೆ ಕೇಳುತ್ತ ಬಸವಣ್ಣ ಮತ್ತೆ ಕುಳಿತನು.

"ಏನೂ ತೊಂದರೆಯಾಗದಂತೆ ! ಬಳ್ಳೀಗಾಂವಿಯ ಕೋಡೀಮಠಕ್ಕೂ ಪಂಚಲಿಂಗೇಶ್ವರ ದೇವಸ್ಥಾನಕ್ಕೂ ವಿಶೇಷವಾಗಿ ರಾಜಧನ ಸಲ್ಲುತ್ತಿದೆ. ಆ ನಿಮಿತ್ತದಿಂದ ಅಲ್ಲಿಯ ಕುಲಪತಿ ವಿದ್ಯಾಭರಣ ಪಂಡಿತರು ಮಹಾಮಂತ್ರಿಗಳಿಗೆ ಬಹಳ ಬೇಕಾದವರು. ಅವರಿಗೆ ಓಲೆ ಬರೆಯುತ್ತಾರಂತೆ ! ಹೇಗೂ ಹತ್ತು ವರ್ಷದವನಾದ ನಿನ್ನ ಅಳಿಯನು ತನ್ನ ಸ್ನಾನ-ಪೂಜೆಗಳನ್ನು ತಾನೇ ಮಾಡಿಕೊಳ್ಳುತ್ತಾನೆ. ಉಳಿದುದಕ್ಕೆ ಯಾವ ಆತಂಕವೂ ಆಗದು. ಭಟರ ರಕ್ಷಣೆಯಲ್ಲಿ ಇವನನ್ನು ಬಾಗೇವಾಡಿಯಿಂದ ಕಳಿಸುತ್ತೇನೆ. ನಾಳೆ ಇಲ್ಲಿಂದ ಹೊರಡುತ್ತೇವೆ."

"ನಾಳೆಯೇ? ಇಷ್ಟು ಬೇಗ ಮಹಾಮಂತ್ರಿಗಳು ಅಪ್ಪಣೆ ಕೊಡಬೇಕಲ್ಲ!"

"ಅಪ್ಪಣೆ ದೊರೆಯುವದು; ನಾನಿಲ್ಲದಾಗ ಮಠದ ಕಾರ್ಯನಿರ್ವಹಣೆಯಲ್ಲಿ ಅವ್ಯವಸ್ಥೆಯಾದರೆ ಜನರು ಬೇಗನೆ ಹುಯ್ಯಲೆಬ್ಬಿಸುತ್ತಾರೆ."

"ಅದೂ ನಿಜ !"

"ನಾಗಲಾಂಬೆಯೂ ಈಗ ನಮ್ಮ ಕೂಡ ಬರುತ್ತಾಳೆ."

"ಅಕ್ಕ ? ಹೌದೇನಮ್ಮ ?"

"ಹೌದು ಚೆನ್ನಬಸವಣ್ಣನನ್ನು ಬಳ್ಳೇಗಾಂವಿಗೆ ಕಳಿಸಿದ ಬಳಿಕ ಮರಳಿ ಇಲ್ಲಿಗೆ ಬರುವೆ !"

"ನನಗೂ ಈಗ ನಿಮ್ಮೊಡನೆ ಬರುವ ಮನಸ್ಸು."

"ಆದರೆ ಹೇಗೆ ಸಾಧ್ಯ ? ಈಗ ಕರಣಿಕನಾಗಿ ಕೆಲಸ ಮುಂದುವರಿಸು. ಇಂಗಳೇಶ್ವರದಲ್ಲಿ ಕಟ್ಟಿಸುತ್ತಿರುವ ದೇವಸ್ಥಾನದ ಕೆಲಸ ಮುಗಿದೊಡನೆ ಅದರ ಪ್ರತಿಷ್ಠಾಮಹೋತ್ಸವಕ್ಕೆ ಮಹಾಮಂಡಲೇಶ್ವರರನ್ನು ಕರೆಯಿಸುವ ಯೋಚನೆ ಇದೆ. ಆಗ ನೀನು ಸ್ವಲ್ಪ ಮೊದಲೇ ಬರಬೇಕಾಗುವದು."

ಬಸವಣ್ಣನಿಗೆ ಸ್ನಾನದ ಕರೆ ಬರಲು ಎಲ್ಲರೂ ಎದ್ದರು.

ರಾತ್ರಿ ಭೋಜನಾನಂತರ ತಾಂಬೂಲ ಸವಿಯುತ್ತ ಆರಾಮವಾಗಿ ಬಲದೇವರಸು-ಮಾದಿರಾಜರು ಹಿಂದೆ ನಡೆದ ಘಟನೆಗಳನ್ನು ನೆನಿಸಿ ಮಾತ ನಾಡುತ್ತಿದ್ದರು. ಕೊನೆಗೆ ಮಾದಿರಾಜನು—

"ಇನ್ನು ಮೇಲೆ ಬಸವೇಶನ ಭವಿತವ್ಯ ನಿಮ್ಮ ಕೈಯ್ಯಲ್ಲಿಯೇ ಇದೆ" ಎಂದು ಉದ್ದೇಶಪೂರ್ವಕವಾಗಿಯೇ ನುಡಿದನು.

ಬಲದೇವ ಮಂತ್ರಿ ಮುಖವರಳಿಸಿ ಮರುಮಾತಾಡಿದನು:

"ಬಸವಣ್ಣನ ಅಭ್ಯುದಯವನ್ನು ನಾವು ಚಿಂತಿಸುವದು ನಿಮಿತ್ತ ಮಾತ್ರಕ್ಕೆ ! ಯಾವುದನ್ನು ಮಾಡಿದರೂ ಶ್ರದ್ಧೆಯಿಂದ, ಶ್ರಮವಹಿಸಿ ಗುರಿ ಮುಟ್ಟುವ ಗಟ್ಟಿತನವು ಅವನಲ್ಲಿದೆ. ಮೇಲಾಗಿ ಪರಮಾತ್ಮನಲ್ಲಿರುವ ಅಪಾರ ಭಕ್ತಿ ಅವನ ಕೈ ಹಿಡಿಯುತ್ತದೆ. ಅವನ ಲೌಕಿಕದಲ್ಲಿಯ ಏಳಿಗೆಯು ಈಗ ನಮ್ಮ ಕೈಯನ್ನು ದಾಟಿ ಮಹಾಮಂಡಲೇಶ್ವರರ ಕೈಯೊಳಗಾಗಿದೆ. ಅವರಾಗಿಯೇ ಅವನ ಯೋಗ್ಯತೆಯ ತಿಳಿದು ತಮ್ಮ ಸಮ್ಮುಖದ ಕರಣಿಕನ ಕೆಲಸಕ್ಕೆ ನೇಮಿಸಿಕೊಂಡಿದ್ದಾರೆ. ಉತ್ತರ ವಯಸ್ಸಿನಲ್ಲಿ ನಾವು ಪಡೆದ ಸ್ಥಾನವನ್ನು ಅವನು ಬೇಗನೆ ಪಡೆಯುವನೆಂಬದಕ್ಕೆ ಇದೇ ನಿದರ್ಶನವಾಗಿದೆ"

ಬಲದೇವರಸು ಹಿಂದಕ್ಕೆ ಸರಿದು ದಿಂಬಕ್ಕೆ ಕುಳಿತನು. ಮಾದಿ ರಾಜನು ಸಂತೃಪ್ತ ಮನಸ್ಸಿನಿಂದ ಬೇರೆ ವಿಷಯಕ್ಕೆ ಹೊರಳಿದನು. ಮರು ದಿನದ ತಮ್ಮ ಪ್ರಯಾಣಕ್ಕೆ ಒಪ್ಪಿಗೆ ಪಡೆದನು. ಬಳಿಕ ಪರಿವಾರಕ್ಕೆಲ್ಲ ಪೂರ್ವ ಸಿದ್ಧತೆಯ ಸೂಚನೆ ಕೊಟ್ಟು ಮಲಗಹೋದನು.

ಕರಣಶುದ್ಧಿ

ಅಂದು ಬಸವೇಶನ ಮನಸ್ಸು ತುಂಬಾ ವಿಚಾರಮಗ್ನವಾಗಿದ್ದಿತು. "ತನ್ನ ಜೀವನದ ದಾರಿ ತನಗೆ ತಿಳಿಯದೆ ತಿರುವಿನ ಒಂದು ಹೊಸಘಟ್ಟವನ್ನೇರ ಹತ್ತಿದ್ದಿತು. ಈ ದಾರಿ ಗುರುವಿನ ಆದೇಶ ಪಾಲನೆಯ ಗುರಿಗೆ ಒಯ್ಯುವದೇ? ಹೆಂಡತಿಯೊಬ್ಬಳು ಶಿವನ ಸೇವೆಗೆ, ಲೌಕಿಕದಲ್ಲಿಯ ಆದರ್ಶ ಜೀವನಕ್ಕೆ ಸಹಕಾರಿಯಾದಾಳೆಂದು ಸಮ್ಮತಿಸಿದರೆ, ಅವಳ ಮೂಲಕವಾಗಿ ಅಪಾರ ಸಂಪತ್ತು ನನ್ನನ್ನು ಆಕರ್ಷಿಸಲು ಯತ್ನಿಸುತ್ತಿದೆ. ಅದರ ಲೋಭದಿಂದ ದೂರವಿರಲು ಶಕ್ತನಾಗುವೆನೇ?" ಈ ಬಗೆಯ ಕಾತರಭಾವದಲ್ಲಿಯೇ ಸ್ನಾನಮಾಡಿ ಶಿವ ಪೂಜೆಗೆ ಕುಳಿತನು. ಅರ್ಚನೆಯ ಕೊನೆಯಲ್ಲಿ ಲಿಂಗಯ್ಯನಲ್ಲಿ ಮೊರೆಯಿಟ್ಟುದೂ ಅದನ್ನೇ!

"ವಿಷಯವೆಂಬ ಹಸುರನೆನ್ನ ಮುಂದೆ ತಂದು ಪಸರಿಸಿದೆಯಯ್ಯಾ!
ಪಶುವೇನ ಬಲ್ಲುದು ನಂಜಿದೆಂದು?
　　ಹಸುರೆಂದೆಳಸುವದಯ್ಯಾ!
ವಿಷಯರಹಿತನ ಮಾಡಿ, ಭಕ್ತಿರಸವ ದಣಿಯೆ ಮೇಯಿಸಿ,
　　ಸುಬುದ್ಧಿಯೆಂಬುದಕವನೆರೆದು
　　ನೋಡಿ ಸಲಹಯ್ಯಾ ಕೂಡಲಸಂಗಮದೇವಾ!

ಶ್ರೀಸಂಪದುಪಭೋಗಗಳ ನಂಜು ತಾಗದಂತೆ ನೀನೇ ನೋಡಬೇಕಲ್ಲದೆ, ನಾನೇನ ಮಾಡಬಲ್ಲೆ? ನಾನಂತೂ ಅವುಗಳ ಮಧ್ಯದಲ್ಲಿ ಸಿಲುಕಿರುವೆ.

ಬಡಪಶು ಪಂಕದಲ್ಲಿ ಬಿದ್ದಡೆ ಕಾಲಬಡಿವುದಲ್ಲದೆ,
　　ಬೇರೆ ಗತಿಯುಂಟೇ?
ಶಿವಶಿವಾ! ಹೋದಹೆ, ಹೇದಹೆನಯ್ಯಾ!!
　　ನಿಮ್ಮ ಮನದತ್ತಲೆನ್ನ ತೆಗೆಯಯ್ಯಾ.
ಪಶುವಾನು; ಪಶುಪತಿ ನೀನು.
ತುಡುಗುಣಿಯೆಂದು ಎನ್ನ ಹಿಡಿದು ಬಡಿಯದ ಮುನ್ನ
　　ಒಡೆಯ ನಿಮ್ಮ ಬಯ್ಯದಂತೆ ಮಾಡು ಕೂ. ಸಂ. ದೇವಾ."

ಇನ್ನೂ ಅಧಿಕಾರ ಸಂಪತ್ತುಗಳ ಛಾಯೆ ಬೀಳಬೀಳುತ್ತಿರುವಾಗಲೇ ಅವುಗಳ ಮೋಹದೊಳಗೆ ಬೀಳದಂತೆ ಜಾಗ್ರತನಾಗಿ ತನ್ನ ರಕ್ಷಣೆಗೆ ಪರಶಿವನನ್ನು ಪ್ರಾರ್ಥಿಸಿದನು. ಅರ್ಪಣ-ಪ್ರಸಾದಗಳನ್ನು ಸಂಕ್ಷೇಪವಾಗಿ ಪೂರೈಸಿ

ಸಜ್ಜೆವನೆಗೆ ಬಂದು ಕುಳಿತನು. ಮನಸ್ಸಿನಲ್ಲಿ ಇನ್ನೂ ಶಾಂತಿ ನೆಲಿಸಿಲ್ಲ. 'ಬಿಜ್ಜಳರಾಯನ ಹತ್ತಿರ ಒಪ್ಪಿಕೊಂಡು ಬಂದ ಕರಣಿಕನ ಕಾಯಕ ಒಳ್ಳೆಯದೇ? ದೊರೆಯು ವಿೀರಿದ ಒಲುಮೆಯೂ ಮನೆಯವರಲ್ಲಿ ಮೂಡಿದ ಆಕಾಂಕ್ಷೆಗಳೂ ನನ್ನನ್ನು ಅಧಿಕಾರಮದದಲ್ಲಿ ನೂಕದಂತೆ ಈಗ ಎಷ್ಟು ಎಚ್ಚರದಿಂದಿದ್ದರೂ ಕಡಿಮೆಯೇ! ನನ್ನ ವಿಶಿಷ್ಟ ಆಶೋತ್ತರಗಳಿಗೆ ಯಾವ ಕಾಯಕ ಸರಿಯಾದೀತೆಂಬದನ್ನು ನಾನಿನ್ನೂ ವಿಚಾರಿಸಿರಲೇ ಇಲ್ಲ. ಒಮ್ಮೆಲೇ ಒಪ್ಪಿಕೊಂಡೆನು........ ಅಥವಾ ಸಾಮಾಜಿಕ ಧರ್ಮದಲ್ಲಿ ಸುಧಾರಣೆ ಬಯಸಿದಾಗ ಅದಕ್ಕೆ ಆಸರವಾಗಿರುವ ರಾಜಕೀಯದಲ್ಲಿಯೂ ತಕ್ಕ ಮಾರ್ಪಾಡು ಬೇಕೆಂದು ಬಗೆದಿರಲಿಲ್ಲವೇ ನಾನು? ಕ್ರಿಯಾತ್ಮಕವಾಗಿ ರಾಜಕೀಯದ ಜ್ಞಾನಾನುಷ್ಠೇಯಗಳು ರಾಜಸೇವೆಯಿಂದ ಸಾಧಿಸಿದರೆ ತಪ್ಪೇನು? ಶಿವನ ಸೇವೆಗೆ, ಶಿವನ ಪ್ರಸಾದದ ನೆರವಿಗೆ ಯಾವ ಕಾಯಕವಾದರೇನು? ಯಾವುದನ್ನು ಮಾಡಿದರೂ ಎನ್ನ ಒಡಲಿಂಗೆ ದುಡಿಯೆನೆಂಬದು ದಿಡವಾಗಿರಲಿ!

'ನಾನು ಆರಂಭವ ಮಾಡುವೆನಯ್ಯಾ, ಗುರುಪೂಜೆಗೆಂದು;
ನಾನು ಬೆವಹಾರವ ಮಾಡುವೆನಯ್ಯಾ ಲಿಂಗಾರ್ಚನೆಗೆಂದು;
ನಾನು ಪರಸೇವೆಯ ಮಾಡುವೆನಯ್ಯಾ ಜಂಗಮದಾಸೋಹಕ್ಕೆಂದು.
ನಾನು ಆವಾವ ಕರ್ಮಂಗಳ ಮಾಡಿದರೆಯೂ
ಆ ಕರ್ಮಫಲಭೋಗವ ನೀ ಕೊಡುವೆಯೆಂಬುದ ನಾನು ಬಲ್ಲೆನು.
ನೀ ಕೊಟ್ಟ ದ್ರವ್ಯವ ನಿಮಗಲ್ಲದೆ ಮತ್ತೊಂದು ಕ್ರೀಯ ಮಾಡೆನು;
ನಿಮ್ಮ ಸೊಮ್ಮಿಂಗೆ ಸಲ್ಲಿಸುವೆನು; ನಿಮ್ಮಾಣೆ ಕೂ. ಸಂ. ದೇ.'

ಇಲ್ಲಿಗೆ ಮನವೊಂದು ನಿಲುಕಡೆಗೆ ನಿಂತಂತಾಯಿತು. ಭಾವದ ಭಾರ ಹಿಂಗಿತು. ಸಂಗಮದೇವನನ್ನು ಸ್ಮರಿಸಿ ಒರಗಿದನು.

ಕರಣಿಕನಾಗಿ

ಸಾಮ್ರಾಜ್ಯದಲ್ಲಿ ಆರ್ಥಿಕ ಮುಗ್ಗಟ್ಟು ತಲೆದೋರಿ, ಆ ಕಾರಣದಿಂದ ತನ್ನ ಆಳಿಕೆಯು ಅಯಶಸ್ವಿಯಾಗುವದನ್ನು, ದಕ್ಷ ಅಡಳಿತಗಾರನಾದ ಬಿಜ್ಜಳನು ಸಹಿಸುವದು ಶಕ್ಯವಾಗಿರಲಿಲ್ಲ. ದೋಷಗಳ ಮೂಲವನ್ನು ಕಂಡು ದುರವಸ್ಥೆಗಳ ಪರಿಹಾರಕ್ಕೆ ಹೊಸಯೋಜನೆ ಮಾಡುವದನ್ನು ನಿರ್ಧರಿಸಿಬಿಟ್ಟನು. ಇದರಲ್ಲಿ ತನಗೆ ನೆರವಾಗಬಹುದೆನಿಸಿದ ಸಮ್ಮುಖದ ಕರಣಿಕ

ಬಸವೇಶನ ಕಾರ್ಯನಿರ್ವಹಣೆಯನ್ನು ಸೂಕ್ಷ್ಮವಾಗಿ ನಿರೀಕ್ಷಿಸುತ್ತಿದ್ದನು. ಅವನ ಪ್ರಾಮಾಣಿಕವಿಚಾರ, ಗ್ರಹಣಶಕ್ತಿ, ತೀಕ್ಷ್ಣಬುದ್ಧಿಗಳ ಬಗೆಗೆ ಉಂಟಾಗಿದ್ದ ವಿಶ್ವಾಸವನ್ನು ಕೆಲವೇ ದಿನಗಳಲ್ಲಿ ಸ್ಥಿರಪಡಿಸಿಕೊಂಡನು. ಬಸವೇಶನು ಕರಣಿಕನಾಗಿ ಮೂರು ವಾರಗಳು ಉರುಳಿದ್ದವು. ನಾಲ್ಕನೆಯ ವಾರದಲ್ಲಿ ರಾಜ್ಯಭಂಡಾರದ ಆಯುವ್ಯಯಗಳ ಲೆಕ್ಕವನ್ನು ಪರಿಶೀಲಿಸಿ ಲೋಪದೋಷಗಳ ವರದಿಯನ್ನು ತಯಾರಿಸಲು ಆತನನ್ನು ನಿಯಮಿಸಿ, ಅವನಿಗೆ ಬೇಕಾಗುವ ಕಾಗದಪತ್ರಗಳನ್ನೆಲ್ಲ ತೋರಿಸಿ ವಿವರಣೆಗಳನ್ನು ಒದಗಿಸ ಬೇಕೆಂದು ಅರ್ಥಶಾಖೆಗೆ ಆಜ್ಞೆ ಮಾಡಿದನು. ಅಹಂಕಾರದ ವರ್ತನೆಯ ಮಂಚಣ್ಣಮಂತ್ರಿಯು ಆ ಅಪ್ಪಣೆಯ ಓಲೆಯನ್ನು ಎಂದಿನಂತೆ ಯಥೋ ಚಿತವಾಗಿ ಗಮನಿಸದೆ ಕಾರ್ಯಕರ್ತನಿಗೆ ಕಳುಹಿದ್ದನು. ಬಸವಣ್ಣನು ಅರ್ಥಶಾಖೆಯ ಕಾರ್ಯಕರ್ತನನ್ನು ಕಂಡು ತನ್ನ ಪರಿಶೀಲನೆಯನ್ನು ಆರಂಭಿಸಿದನು.

ಮುಂದಿನ ವಾರ ಒಂದು ದಿನ ಬಸವಣ್ಣನು ಅರ್ಥಶಾಖೆಯ ಚಾವ ಡಿಯ ಹಜಾರದಲ್ಲಿ ಒಂದು ಕಾಗದದ ವಿವರಣೆ ಪಡೆಯುತ್ತ ಕುಳಿತಿದ್ದನು. ಕಾರ್ಯಕರ್ತನು ಎದುರಿಗಿದ್ದನು. ನಾಲ್ಕೆಂಟು ಜನ ಕರಣಿಕರೂ ಸುತ್ತ ನಿಂತಿದ್ದರು. ಅಲ್ಲಿ ಹಾಯ್ದು ಹೋಗುತ್ತಿದ್ದ ಮಂಚಣ್ಣನಾಯಕನು ಈ ಗುಂಪನ್ನು ನೋಡಿ, "ಏನು ಮಾಡುತ್ತಿರುವಿರಿ ?" ಎಂದು ಕೇಳುತ್ತ ಅಲ್ಲಿಗೆ ಬಂದನು. ಕಾರ್ಯಕರ್ತನು ಎದ್ದು ಮುಂದೆ ಬಂದು ಹೇಳಿದನು :

"ಇವರು ರಾಜ್ಯಭಂಡಾರದ ಲೆಕ್ಕ ಪರಿಶೋಧಿಸುತ್ತಿದ್ದಾರೆ. ನಾವು ವಿವರಣೆ ಕೊಡುತ್ತಿದ್ದೇವೆ."

"ಯಾರು ಹೇಳಿದರು ಹೀಗೆ ಪರಿಶೋಧಿಸಬೇಕೆಂದು ?"

"ಮಹಾಮಂಡಲೇಶ್ವರರೇ ಹಾಗೆ ಆಜ್ಞೆ ಮಾಡಿದ್ದಾರಲ್ಲ !"

"ಅದನ್ನು ನನಗೇಕೆ ತಿಳಿಸಲಿಲ್ಲ ?"

"ಸಂಬಂಧಿಸಿದ ಆಜ್ಞೆಯ ಓಲೆಯನ್ನು ತಾವೇ ನೋಡಿ ಅಂಕಿತ ಹಾಕಿ ನನ್ನ ಕಡೆಗೆ ಕಳಿಸಿರುವಿರಿ. ತಮ್ಮ ಅನುಮತಿಯೆಂದೇ ನಾನು ಸಹಕರಿಸುತ್ತಿ ದ್ದೇನೆ."

"ಬಂದ ಕಾಗದಗಳನ್ನೆಲ್ಲ ನಾವೇ ಲಕ್ಷಿಸುವದಕ್ಕಾಗುವದೇ ? ಹಾಗೆಯೇ ಕಳಿಸಿರಬಹುದು. ಮಹತ್ವದ ಆಜ್ಞೆಗಳನ್ನು ನನಗೆ ಪುನಃ ತೋರಿಸುತ್ತಿರಬೇಕು. ನನಗೆ ತಿಳಿಯದಂತೆ ಏನೋ ಆಟ ನಡೆದಂತಿದೆ."

ಕಾರ್ಯಕರ್ತನು ನಿರುತ್ತರನಾದನು. ಮಂಚಣ್ಣಮಂತ್ರಿಯು ಮುಂದಕ್ಕೆ ಬಂದು ಕೇಳಿದನು ಬಸವೇಶನನ್ನು !

"ಯಾರಯ್ಯ ನೀನು ? ನಿನ್ನನ್ನು ಎಲ್ಲಿಯೋ ನೋಡಿದಂತಿದೆ."

ಹೀಗೆ ಕೇಳಿದ್ದರಲ್ಲಿ ಅಸಹನೆಯ ಭಾವವಿದ್ದರೂ, ಬಸವೇಶ ಎದ್ದು ನಿಂತು ವಿನಯದಿಂದಲೇ ಉತ್ತರಿಸಿದನು :

"ಮಂತ್ರಿಗಳು ಮರೆತಂತಿದೆ. ಮದುವೆಯ ಮಂಟಪದಲ್ಲಿ ನನ್ನನ್ನು ನೋಡಿ ಬಲ್ಲಿರಿ ! ನನ್ನ ಹೆಸರು ಬಸವೇಶ ! ಮಹಾಮಂಡಲೇಶ್ವರರ ಸಮ್ಮುಖದ ಕರಣಿಕನಾಗಿ ಸೇವೆ ಮಾಡುತ್ತಿದ್ದೇನೆ."

ಹೀಗೆಂದು ಕೈಮುಗಿದನು ಬಸವಣ್ಣ ! ಆ ವಿನಮ್ರಭಾವವನ್ನು ಸ್ವೀಕರಿಸಿ ಗೌರವ ತೋರುವ ಅವಧಾನ ಇರಲಿಲ್ಲ ಮಂಚಣ್ಣನಿಗೆ. ಕಾರ್ಯಕರ್ತನ ಕಡೆಗೆ ಹೊರಳಿ ಕೇಳಿದನು :

"ಈ ನೇಮಕದ ತಿಳುವಳಿಕೆ ನಮ್ಮ ಚಾವಡಿಗೆ ಬಂದಿದೆಯೇ ?"

"ಬಂದಿದೆ; ಮಹಾಮಂಡಲೇಶ್ವರರ ಆಜ್ಞೆಗಳ ಕಳೆದ ತಿಂಗಳ ಪಟ್ಟಿಯಲ್ಲಿ ಇದು ಇದೆ; ಪಟ್ಟಿಯನ್ನು ತಾವು ಅವಲೋಕಿಸೋಣವಾಗಿದೆ."

ಮಂಚಣ್ಣನಿಗೆ ಮತ್ತೆ ಮುಖಭಂಗವಾಯಿತು. ಒಳಗೆ ಸಿಡಿಮಿಡಿಗೊಂಡರೂ, ತನ್ನ ನಿರ್ಲಕ್ಷ್ಯವನ್ನು ಇನ್ನು ಹೆಚ್ಚಿಗೆ ಪ್ರದರ್ಶಿಸಬಾರದೆಂದು ಸಾವರಿಸಿಕೊಂಡು ನುಡಿದನು :

"ಇನ್ನು ಮುಂದೆ ಇವುಗಳನ್ನು ಕಾರ್ಯಾಚರಣೆಯಲ್ಲಿ ತರುವಾಗ ನನ್ನೊಡನೆ ಆಲೋಚಿಸಬೇಕು."

"ಆಗಬಹುದು."

ಮಂಚಣ್ಣ ಮತ್ತೆ ತಿರುಗಿ ಬಸವೇಶನನ್ನು ಪ್ರಶ್ನಿಸಿದನು :

"ಏನು ನೀವು ಪರಿಶೀಲಿಸುತ್ತಿರುವದು ?"

"ಕಳೆದ ನಾಲ್ಕು ವರ್ಷಗಳಲ್ಲಿ ರಾಜ್ಯಭಂಡಾರಕ್ಕೆ ಮಂಡಲಗಳಿಂದ ಸಂದಾಯುವಾದ ಹಣದ ಲೆಕ್ಕವನ್ನೂ ಹಾಗೆಯೇ ವಿವಿಧ ಶಾಖೆಗಳಿಗೆ ವೆಚ್ಚ ವಾದ ಹಣದ ಲೆಕ್ಕವನ್ನೂ ಪರಿಶೀಲಿಸಿ ನೋಡುತ್ತಿದ್ದೇನೆ."

"ನೋಡಿ ?"

"ಮಹಾಮಂಡಲೇಶ್ವರರಿಗೆ ಆರ್ಥಿಕಪರಿಸ್ಥಿತಿಯ ವರದಿಯನ್ನು ಒಪ್ಪಿ ಸುವದು."

"ಅದೆಲ್ಲಾ ನಿಮಗೇನು ತಿಳಿಯುತ್ತದೆ ?"

"ತಿಳಿದುಕೊಳ್ಳಲು ಪ್ರಯತ್ನಿಸುತ್ತಿದ್ದೇನೆ"

"ಈಗ ಎಲ್ಲಿಗೆ ಬಂದಿದೆ ನಿಮ್ಮ ಪ್ರಯತ್ನಪೂರ್ವಕ ತಿಳಿದುಕೊಳ್ಳುವ ಕಾರ್ಯ ?"

ಬಸವೇಶ ಅವನ ಮುಖ ನೋಡಿದನಷ್ಟೇ ! ವಿಕಾರಗೊಳ್ಳಲಿಲ್ಲ.

"ನಿಮ್ಮ ಕಾರ್ಯಕರ್ತರು ಈಗ ಕೆಲವು ಕಾಗದ ಪತ್ರ ತೋರಿಸಬೇಕಾ ಗಿದೆ. ಅವಿಲ್ಲದೆ ಕೆಲಸ ಮುಂದುವರಿಯುವಂತಿಲ್ಲ."

ಮಂಚಣ್ಣನು ಕಾರ್ಯಕರ್ತನ ಮುಖ ನೋಡಿದನು.

"ಆ ಮೇಲ್ಕಟ್ಟಿನ ರಹಸ್ಯಕಾಗದಪತ್ರಗಳನ್ನು ನಿಮ್ಮ ಅನುಮತಿ ಪಡೆದು ತೋರಿಸಬೇಕೆಂದಿರುವೆನು."

"ಅವುಗಳನ್ನೋ ? ಮಹಾಮಂಡಲೇಶ್ವರರಿಗಲ್ಲದೆ ಇನ್ನಾರಿಗೂ ಅವು ಗಳನ್ನು ತೋರಿಸಲಿಕ್ಕಾಗದು."

"ಹಾಗಾದರೆ ಪರಿಶೀಲನೆಯ ಕೆಲಸ ನಿಲ್ಲಿಸಬೇಕಾಗುತ್ತದೆ"

ಬಸವೇಶನ ಸ್ಪಷ್ಟಮಾತಿಗೆ 'ನಿಮ್ಮ ಇಷ್ಟ' ಎನ್ನುತ್ತ ಮಂಚಣ್ಣಮಂತ್ರಿ ಹೊರಟು ನಡೆದನು. ಕಾರ್ಯಕರ್ತನು ಹಿಂದಿನಿಂದ ಬಾಗಿಲ ಆಚೆಗೆ ಹೋಗಿ ಏನೋ ಹೇಳಿದನು. ನಿರ್ವಾಹವಿಲ್ಲದೆ ಮಂಚಣ್ಣ ಹೊರಳಿ ಬಂದು ಮತ್ತೆ ಹೇಳಿದನು :

"ಇಂದು ಪ್ರಭುಗಳಿಗೆ ಭೆಟ್ಟಿಯಾಗಿ ಕಾರ್ಯಕರ್ತನಿಗೆ ಹೇಳುವೆ ಬಸವ ಯ್ಯನವರೆ ! ನಾಳೆ ನಿಮಗೆ ಆ ಕಾಗದ ಪತ್ರಗಳನ್ನು ತೋರಿಸುವನು. ಅಷ್ಟ ಕ್ಕಾಗಿ ಪರಿಶೀಲನೆ ನಿಲ್ಲಿಸಬೇಕಾಗಿಲ್ಲ."

"ಆಗಬಹುದು. ಕರಣಿಕ ಕೆಲಸಕ್ಕೆ ಸಂಬಂಧಿಸಿ ನನ್ನನ್ನು 'ಬಸವಯ್ಯ' ಎಂದು ಮಾತ್ರ ತಾವು ಸಂಬೋಧಿಸಬೇಕು."

"ಅದು ಹೇಗಾದೀತು ? ವಿದ್ಯಾವಿಭೂಷಿತರು; ಮಹಾಮಂತ್ರಿಗಳ ಅಳಿಯದೇವರು; ಪ್ರಭುಗಳ ಸಮ್ಮುಖದ ಕರಣಿಕರು !"

ಎನ್ನುತ್ತ, ವಿಕಟ ಹಾಸ್ಯ ಪ್ರದರ್ಶಿಸುತ್ತ ಮಂಚಣ್ಣ ಹೊರಗೆ ಹೋದನು. ಈ ವ್ಯಂಗ್ಯೋಕ್ತಿಗಳಿಂದ ಬಸವೇಶನ ಮುಖದಲ್ಲಿ ಯಾವ ಭಾವನೆಯೂ ತುಳುಕಿ ತೋರಲಿಲ್ಲ. ಮನಸ್ಸು ಮುಂದಿನ ಕೆಲಸಕ್ಕೆ ಮರಳಿತು. ಈ ಘಟನೆಯಿಂದ ಅರ್ಥಶಾಖೆಯ ಚಾವಡಿಯಲ್ಲಿ ಬಸವಣ್ಣನ ಪ್ರತಿಷ್ಠೆ ಮಾತ್ರ ಚೆನ್ನಾಗಿ ಮೂಡಿನಿಂತಿತು. ಮರುದಿನದಿಂದ ಅವನಿಗೆ ಬೇಕಾದ ಲೆಕ್ಕಪತ್ರಗಳು ಸರಿಯಾಗಿ ದೊರೆಯಹತ್ತಿದವು.

ಮಂಚಣ್ಣನ ಅಹಂಕಾರಕ್ಕೆ ಆಘಾತವಾದಂತಾಯಿತು. 'ಸಾಮ್ರಾಜ್ಯದ ಸೇವೆಯಲ್ಲಿ ತಲೆನರೆತ ನಮ್ಮ ಕಾರ್ಯಗಳನ್ನು ನಿನ್ನೆ ಮೊನ್ನಿನ ಹುಡುಗ ಪರೀಕ್ಷೆ ಮಾಡುವದೇ ?' ಎಂದು ತಳಮಳಿಸಿದನು. ತನ್ನ ಕೈಕೆಳಗಿನ ಕರಣಿಕರ ಮಧ್ಯದಲ್ಲಿ ತನ್ನ ಅಜಾಗರೂಕತೆಯು ಪ್ರದರ್ಶನವಾದುದು ಬೇರೆ, ಮನಸ್ಸನ್ನು ಕೊರೆಯುತ್ತಿದ್ದಿತು. ಇವುಗಳ ನಡುವೆ ಅಂತರಾಳದಲ್ಲಿ ಅಸೂಯೆ ಅಂಕುರಿಸಿ ತಲೆಯೆತ್ತಿತು. ಮುಂದೆ ಕಾರ್ಯಕರ್ತನಿಗೆ ತಿಳಿಸಿ, ತಾನು ಪರಿಶೀಲನೆಗೆ ಗಮನಕೊಡುವದನ್ನೇ ಬಿಟ್ಟನು. ಕಾರ್ಯಕರ್ತನ ಅನುಕೂಲತೆಯಿಂದ ಬಸವಣ್ಣನ ಕೆಲಸ ಕೆಲವೇ ವಾರಗಳಲ್ಲಿ ಸರಾಗವಾಗಿ ಪೂರೈಸಿತು.

೬. ಆರ್ಥಿಕ ಯೋಜನೆಯ ಪುನರ್ಘಟನೆ

ಮಂಚಣ್ಣನ ಮನದಲ್ಲಿ ಮಾತ್ಸರ್ಯ

ವರದಿ ಬರೆಯುವ ಮೊದಲು ಕೆಲವು ರಹಸ್ಯ ಸಂಗತಿಗಳ ಬಗೆಗೆ ಅರ್ಥ ಮಂತ್ರಿಗಳಿಂದ ಸ್ಪಷ್ಟನೆ ಪಡೆಯುವದು ಅಗತ್ಯವಾಯಿತು. ಅದಕ್ಕಾಗಿ ಬಸವೇಶನು ಕಾರ್ಯಕರ್ತನಿಗೆ ಮಂತ್ರಿಗಳ ಸಂದರ್ಶನದ ವೇಳೆಯನ್ನು ತಿಳಿದು ತಿಳಿಸಬೇಕೆಂದು ಹೇಳಿದನು. ಕಾರ್ಯಕರ್ತನು ಮಂಚಣ್ಣನನ್ನು ಕಂಡಾಗ ಅವನು ಮನಸ್ಸಿಲ್ಲದಿದ್ದರೂ ಅನಿವಾರ್ಯವಾಗಿ 'ನಾಳೆ ಮಧ್ಯಾಹ್ನ ಬರಲು ತಿಳಿಸು; ಅದಕ್ಕೂ ಮೊದಲು ನೀ ಬಂದಿರು.' ಎಂದು ಹೇಳಿದನು.

ಮರುದಿವಸ ಬಸವೇಶ ಮಧ್ಯಾಹ್ನದಲ್ಲಿ ಕಾಗದಗಳ ಸಂಪುಟ ಕೈಯಲ್ಲಿ ಟ್ಟುಕೊಂಡು ಮಂಚಣ್ಣನ ಮಂತ್ರಾಗಾರವನ್ನು ಸೇರಿ ಕೈಮುಗಿದನು. ಮಂಚಣ್ಣನು ನೋಡಿಯೂ ನೋಡದಂತೆ ಉಪೇಕ್ಷಿಸಿ, ಮುಂದೆ ನಿಂತ ಕಾರ್ಯಕರ್ತನೊಡನೆ ಮಾತು ಬೆಳೆಸಿ ಕಾಲಹರಣ ಮಾಡಹತ್ತಿದನು. ಬಸವಣ್ಣನು ಸಮೀಪದ ಚಿಕ್ಕ ಆಸನದಲ್ಲಿ ಕುಳಿತು, ತೋರಿಸುವ ಹಾಳೆಗಳನ್ನು ಸರಿಗೊಳಿಸಹತ್ತಿದ್ದನು. ಕೊನೆಗೊಮ್ಮೆ ಕಾರ್ಯಕರ್ತನು ಹೊರಗೆ ಹೋದ ಬಳಿಕ—

"ಇನ್ನು ನನಗೆ ಸಮಯವಿದೆಯೇ ?" ನಮ್ರವಾಗಿ ಕೇಳಿದನು.

"ಆಗಲಿ, ಏನು ಬೇಕಾಗಿದೆ ನಿಮಗೆ ?"

"ಆರು ವಾರಗಳಿಂದ ನಡೆಯಿಸಿದ ರಾಜ್ಯಭಂಡಾರದ ಲೆಕ್ಕದ ಪರಿಶೋಧನೆಯ ಕೆಲಸ ಮುಗಿಯುತ್ತ ಬಂದಿದೆ. ಈಗ ವರದಿಯನ್ನು ಸಿದ್ಧಪಡಿಸಬೇಕಾಗಿದೆ. ಅದಕ್ಕೂ ಮೊದಲು, ಹಣದ ವ್ಯವಹಾರದಲ್ಲಿ ಕಂಡು ಬಂದ ಕೆಲವು ನ್ಯೂನತೆಗಳ ಬಗೆಗೆ ತಮ್ಮಿಂದ ವಿವರಣೆ ಬೇಕಾಗಿದೆ."

"ನ್ಯೂನತೆ ಕಂಡವೆ ನಿಮಗೆ ? ಅಬ್ಬಾ ? ಏನದು ಕಂಡದ್ದು ?"

'ಇವನೇನು ಅಂಥ ಮಹಾ ? ಇವನಿಗೇನು ತಿಳಿದೀತು ?' ಎಂಬ ಬಿಂಕದಿಂದಲೇ ಮಂಚಣ್ಣ ಮಂತ್ರಿ ಮಾತಾಡಿದ್ದರೂ ಬಸವೇಶ ವಿಚಲಿತನಾಗಲಿಲ್ಲ. ತನ್ನಲ್ಲಿದ್ದ ಟಿಪ್ಪಣಿಗಳನ್ನು ಅವನ ಮುಂದೆ ಪಸರಿಸಿದನು.

"ಈ ಪರಿಶೀಲನೆಗೆ ಸಂಬಂಧಿಸಿದ ನಾಲ್ಕು ವರ್ಷಗಳಲ್ಲಿ ಎಂಭತ್ತೆರಡು ಸಾವಿರ ಕುದುರೆಗಳ ಕ್ರಯವಾಗಿ ವಿದೇಶೀಯ ವರ್ತಕರಿಗೆ ೧೬ ಲಕ್ಷ ೪೦ ಸಾವಿರ ವರಹಗಳು ಭಂಡಾರದಿಂದ ಸಂದಾಯವಾಗಿವೆ. ಈ ಅವಧಿಯಲ್ಲಿ ಇಪ್ಪತ್ತೆಂಟು ಸಾವಿರ ಕುದುರೆಗಳು ಮಾತ್ರ ಸೈನ್ಯ ಶಾಖೆಗೆ ಕಳುಹಿಸಲ್ಪಟ್ಟಿವೆಯೆಂದು ಸೇನಾಧ್ಯಕ್ಷನಿಂದ ನಾನು ತರಿಸಿಕೊಂಡ ಲೆಕ್ಕದಿಂದ ತಿಳಿಯುತ್ತದೆ. ಸೈನ್ಯದಲ್ಲಿ ಒಟ್ಟು ಕುದುರೆಗಳ ಸಂಖ್ಯೆಯಲ್ಲಿ ಸಾಮಾನ್ಯ ಕಾಲದಲ್ಲಿ ಬಹಳವೆಂದರೆ ವರ್ಷಕ್ಕೆ ನೂರರಲ್ಲಿ ನಾಲ್ಕರಂತೆ ಮಾತ್ರ ಪ್ರಕೃತಿ ಸಹಜವಾದ ಮರಣಕ್ಕೆ ಒಳಪಡುವವೆಂದು ಅಶ್ವವೈದ್ಯರ-ಸೇನಾಧಿಕಾರಿಗಳ ಅಭಿಮತವಿದೆ. ಈ ಪ್ರಮಾಣದಂತೆ ಯುದ್ಧ ಮತ್ತು ಪಿಡಗುಗಳಿಲ್ಲದ ಈ ನಾಲ್ಕು ವರ್ಷಗಳ ಅವಧಿಯಲ್ಲಿ ೨೪ ಸಾವಿರ ಅಶ್ವಗಳು ಸತ್ತಿರಬಹುದು. ಮೊದಲಿನ ವರ್ಷದ ಸಂಖ್ಯೆಗಿಂತ ಕಡೆಯ ವರ್ಷದ ಒಟ್ಟು ಕುದುರೆಗಳ ಸಂಖ್ಯೆಯು ನಾಲ್ಕು ಸಾವಿರದಷ್ಟು ಮಾತ್ರ ಹೆಚ್ಚಿದೆ. ಇದರಿಂದ ಸೇನಾಧ್ಯಕ್ಷರ ಲೆಕ್ಕವು ಸತ್ಯವಾಗಿದೆಯೆಂಬುದು ದೃಢಪಡುತ್ತದೆ."

ಮಂಚಣ್ಣನು ಈಗ ಲಕ್ಷಗೊಟ್ಟು ಕೇಳಹತ್ತಿದನು.

"೮೨ ಸಾವಿರ ಅಶ್ವಗಳ ಬೆಲೆ ಭಂಡಾರದಿಂದ ಹೋಗಿ ೨೮ ಸಾವಿರ ಅಶ್ವಗಳು ಮಾತ್ರ ಸೈನ್ಯಕ್ಕೆ ಸೇರಿವೆ. ೫೪ ಸಾವಿರ ಅಶ್ವಗಳ ಬೆಲೆ ಕನಿಷ್ಠ ೧೦ ಲಕ್ಷ ವರಹ ಅಪವ್ಯಯವಾಗಿವೆ. ಅಪಹಾರವೂ ಆಗಿರಬಹುದು."

ಮಂಚಣ್ಣನು ಕಾತರಗೊಂಡು ನುಡಿದನು :

"ಅದು ಹೇಗೆ ? ತಪ್ಪು ಎಲ್ಲಿದೆ ?"

"ನನ್ನ ದೃಷ್ಟಿಯಲ್ಲಿ ತಪ್ಪಾದದ್ದು ಹೀಗೆ ಅದೆ ! ಕುದುರೆ ಕೊಳ್ಳುವ ವ್ಯವಹಾರದಲ್ಲಿ ಅಂತಿಮವಾದೊಡನೆ ವರ್ತಕರಿಂದ ಕ್ರಯಪತ್ರಗಳನ್ನೂ ಸೇನೆಯ ಅಶ್ವಾಧ್ಯಕ್ಷರಿಂದ ಕುದುರೆಗಳ ಸಂದಾಯಪತ್ರಗಳನ್ನೂ ತೆಗೆದುಕೊಂಡು ವೆಚ್ಚದ ಹಣ ಲೆಕ್ಕಕ್ಕೆ ಬರೆದು ಕೊಡುವದು ಸಹಜ ಸರಿಯಾದ

ಮತ್ತು ರೂಢವಾದ ಪದ್ಧತಿ ! ಕಳೆದ ಮೂರು ವರ್ಷಗಳಿಂದ ಅದನ್ನು ಬಿಟ್ಟು ಕೇವಲ ಕ್ರಯಪತ್ರಗಳ ಮೇಲೆ ಹಣ ಕೊಡಲಾಗಿದೆ. ಹೀಗೆ ಅಪವ್ಯಯ ಅಥವಾ ಅಪಹಾರ ಮೂರು ವರ್ಷ ಎಡೆಬಿಡದೆ ನಡೆದಿದೆ."

"ಇದಕ್ಕೆ ಯಾರು ಹೊಣೆ ಎಂದು ನಿಮ್ಮ ಅಭಿಪ್ರಾಯ ?"

"ವಸ್ತು ಕೈಸೇರದೆ ವಸ್ತುವಿನ ಬೆಲೆ ಕೊಟ್ಟವರೇ ಹೊಣೆ !"

"ಅಂದರೆ ?"

"ಯಾರ ಅಂತಿಮ ಆಜ್ಞೆಯಿಂದ ವೆಚ್ಚದ ಲೆಕ್ಕದಲ್ಲಿ ಭಂಡಾರದ ಹಣ ಹೊರಗೆ ಹೋಗುವದೋ ಅವರು !"

"ಕೊನೆಯದಾಗಿ ನನ್ನ ಆಜ್ಞೆಯಿಂದ ಹಣ ಸಂದಾಯವಾಗುತ್ತದೆ. ಈ ಅಪವ್ಯಯಕ್ಕೆ ನಾನೇ ಕಾರಣನೆನ್ನಿ ! ಅಥವಾ ನಾನೇ ಅಪಹಾರ ಮಾಡಿ ದೆನೆನ್ನಿ !"

ಬಸವೇಶ ಸುಮ್ಮನೆ ನಿಂತನು. ಮಂಚಣ್ಣನ ಹೊಟ್ಟೆಯಲ್ಲಿ ಉರಿ ಯಾಯಿತು. ಟಿಪ್ಪಣಿಯ ಓಲೆಗಳನ್ನು ಅತ್ತಿತ್ತ ಹೊರಳಿಸಿ ಕೆಂಗಣ್ಣಿನಿಂದ ನೋಡುತ್ತ "ನಿಮಗೆ ತಿಳಿದಂತೆ ವರದಿ ಬರೆಯಿರಿ; ನಮ್ಮ ರಕ್ಷಣೆಯು ನಮ್ಮ ಕೈಯಲ್ಲಿದೆ. ಮೂವತ್ತು ವರ್ಷಗಳಿಂದ ನಾನು ಹೇಗೆ ಸಾಮ್ರಾಜ್ಯದ ಸೇವೆ ಮಾಡಿದ್ದೇನೆಂಬುದು ಪ್ರಭುಗಳಿಗೆ ಗೊತ್ತಿದೆ."

ಬಸವೇಶ ಸುಮ್ಮನಿದ್ದನು. ಮಂಚಣ್ಣ ಟಿಪ್ಪಣಿ ಪತ್ರಗಳನ್ನೆಲ್ಲ ಅವ ನತ್ತ ಎಸೆದನು. ಬಸವೇಶ ಮುಂದಕ್ಕೆ ಬಾಗಿ ಮೆಲ್ಲನೆ

"ತಾವು ಸಮಾಧಾನದಿಂದ ಲಾಲಿಸುವದಾದರೆ ಇನ್ನೊಂದು ಮಾತು ತಮ್ಮ ಗಮನಕ್ಕೆ ತರಬೇಕಾಗಿದೆ" ಎಂದನು.

ಮಂಚಣ್ಣ ತುಸು ಗಾಬರಿಯಾದನು. "ಮತ್ತೇನಾಗಿದೆ ಅದೂ ಅಪಹಾರವೇ ?"

"ಮಹಾಪ್ರಭು ತೈಲಪದೇವರ ಒಂದು ಲಕ್ಷ ವರಹದ ಒಂದೇ ನಿರೂ ಪದ ಮೇಲೆ ೨ ಸಲ ಹಣವನ್ನು ವೆಚ್ಚದ ಲೆಕ್ಕಕ್ಕೆ ಹಿಡಿಯಲಾಗಿದೆ; ಹಣ ಹೋಗಿದೆ"

ಟಿಪ್ಪಣಿ ತೆಗೆದು ಸಮಯ, ನಿರೂಪದ ಕಾರಣ, ಶಿಲ್ಕು ಮುಂತಾದ ವನ್ನು ವಿವರಿಸಿದನು. ಮಂಚಣ್ಣನ ಅಂತರಂಗ ನಡುಗಿತು. ಇವನೇನು ಕರಣಿಕನೋ ಮಂತ್ರವಾದಿ ಯಕ್ಷನೋ ? ತನಗರಿಯದ ತನ್ನ ಆಡಳಿತದ ಯಾವ ಯಾವ ಡೊಗರುಗಳನ್ನು ಹೊರಗೆಡಹುವನೋ ಎಂದು ಬೆದರಿದನು. ದರ್ಪವಡಗಿತು.; ದನಿ ಮೆಲ್ಲಗಾಯಿತು.

"ಬಸವೇಶ, ಕಾರ್ಯಕರ್ತನ ಅಲಕ್ಷದಿಂದ ಹೀಗಾಗಿರಬಹುದು. ಸರಿಪಡಿಸುತ್ತೇವೆ. ಅದನ್ನು ನಿಮ್ಮ ವರದಿಯಲ್ಲಿ ಕಾಣಿಸದಿದ್ದರೆ ಆದೀತಲ್ಲ ?"

"ಚಿಂತಿಸಬೇಡಿ; ವರದಿಗೆ ಸಂಬಂಧಿಸಿದ ನಾಲ್ಕು ವರ್ಷಗಳ ಈಚೆಗೆ ಈ ತಪ್ಪು ಸಂಭವಿಸಿದೆ. ಹೊಂದಿಕೆ ನೋಡುವಾಗ ನನಗೆ ಸಿಕ್ಕಿತು."

ಕಾಗದ ಪತ್ರಗಳನ್ನು ಸರಿಪಡಿಸಿ ಸಂಪುಟದಲ್ಲಿಟ್ಟುಕೊಂಡು 'ನಾನಿನ್ನು ಬರುವೆ' ಎಂದು ವಿನಯವನ್ನು ಪ್ರಕಟಿಸಿ ಬಸವಣ್ಣ ಹೊರಟನು. ಮಂಚಣ್ಣ ಗರ ಬಡಿದವರಂತೆ ಕುಳಿತಿದ್ದನು. ಬಹಳ ಹೊತ್ತಿನ ಮೇಲೆ ರಥದಲ್ಲಿ ಕುಳಿತು ಮನೆಗೆ ಹೋದನು.

ರಾತ್ರಿಯೆಲ್ಲ ಮಂಚಣ್ಣನಾಯಕನ ಒಳಗುದಿ ಹೆಚ್ಚಾಯಿತು. ಬಸವಣ್ಣನೊಬ್ಬ ಕರಾಳ ಭೂತದಂತೆ ಕಾಣಹತ್ತಿದನು. ಈ ಹುಡುಗ ಹೀಗೆಯೇ ಬೆಳೆದರೆ ತನ್ನ ಅಧಿಕಾರ-ಕೀರ್ತಿಗಳೆರಡಕ್ಕೂ ಹಾನಿಯೆಂದು ಬಗೆದನು. ಮುಂದಿನ ಮಾತು ಏನಾದರಾಗಲಿ ! ಈಗ ಬರುವ ಅಪವಾದದ ಗತಿಯೇನು? ಆ ಅವಮಾನವನ್ನು ನಾನು ಸಹಿಸಬಹುದೇ ? ಎಂದು ನಿದ್ರೆ ಬಾರದೆ ಪರಿತಪಿಸಿದನು.

ಸಾಮಂತ ಮಂತ್ರಿ ಮಧುವರಸನು ಧರ್ಮಶಾಸ್ತ್ರಜ್ಞನೂ ವ್ಯವಹಾರ ನಿಪುಣನೂ ಮೇಧಾವಿಯೂ ಎಂದು ಹೆಸರಾಗಿದ್ದನು. ಅವನ ಸಹಾನುಭೂತಿಯನ್ನು ಪಡೆದು ತನ್ನ ಚಿಂತೆಗೆ ಪರಿಹಾರವನ್ನು ಕಾಣಬಹುದೆಂದು ನಂಬಿ, ಮಂಚಣ್ಣನು ಮರುದಿನ ತನ್ನ ನಿತ್ಯಾಚರಣೆಯ ನಂತರ ಮಧುವರಸನ ಮನೆಗೆ ಹೋದನು. ಕುಶಲೋಪಚಾರದ ಬಳಿಕ ಲೆಕ್ಕಪರಿಶೋಧನೆಯ ಮಾತು ಆರಂಭಿಸಿ, ನಡೆದುದೆಲ್ಲವನ್ನು ವಿವರಿಸಿದನು. ಹಾಗು ತಮ್ಮ ಸ್ಥಾನ ಗೌರವವನ್ನು ಲೆಕ್ಕಿಸದೆ ದೋಷಗಳನ್ನೆತ್ತಿದ ಬಸವಯ್ಯನು ಉದ್ಧಟನೆಂದು

ಆಕ್ಷೇಪಿಸಿ, ತಮ್ಮ ರಕ್ಷಣೆಗಾಗಿ ಪರಿಶೋಧನೆಯ ಅವನ ಅಧಿಕಾರವನ್ನೂ, ರೀತಿ ನೀತಿಯನ್ನೂ ಪ್ರತಿಭಟಿಸಬೇಕೆಂದು ಆಕ್ರೋಶಗೊಂಡು ಮಾತಾಡಿದನು. ಮಧುವರಸು ಒಂದು ಕ್ಷಣ ಆಲೋಚಿಸಿ ಶಾಂತಚಿತ್ತದಿಂದ ಹೇಳಿದನು :

"ಸರಳವಾದ ಕರ್ತವ್ಯನಿಷ್ಠನು ಯಾವದಕ್ಕೂ ಬೆದರಬೇಕಾಗಿಲ್ಲ. ಬಸವೇಶನು ಪ್ರಭುಗಳ ಆಜ್ಞೆಯಂತೆ ಬಂದ ಅಧಿಕಾರದಿಂದ ಪರಿಶೋಧನೆ ನಡಿಸಿದ್ದಾನೆ. ಅದನ್ನು ಪ್ರತಿಭಟಿಸಿದರೆ ಮಹಾಮಂಡಲೇಶ್ವರರನ್ನೇ ಎದುರಿಸಿದಂತಾಗುತ್ತದೆ. ಬಸವೇಶನನ್ನು ನಾನೂ ಸ್ವಲ್ಪ ಅರಿತಿದ್ದೇನೆ; ಶ್ರದ್ಧಾವಂತ ಕರ್ತವ್ಯಪರನೆಂದು ಕಾಣುತ್ತಾನೆ. ನಮ್ಮ ಅಧಿಕಾರಿಗಳಲ್ಲಿ ಇಂಥವರು ಅಪರೂಪ! ವ್ಯವಹಾರವೇನೇ ಇರಲಿ; ನಿಮ್ಮ ಸ್ಥಾನಮಾನಗಳಿಗೆ ಬಾಧೆ ಬಾರದಂತೆ ಪ್ರಭುಗಳ ಸನ್ನಿಧಿಯಲ್ಲಿ ನಾನು ನೋಡಿಕೊಳ್ಳುತ್ತೇನೆ. ಚಕ್ರವರ್ತಿಗಳ ಒಂದು ನಿರೂಪಕ್ಕೆ ೨ನೆಯ ಸಲ ಮತ್ತೆ ವೆಚ್ಚದ ಲೆಕ್ಕಕ್ಕೆ ಬರೆದು ಹಣ ಹೋದ ಒಂದು ಲಕ್ಷ ವರಹಗಳನ್ನು ಕಾರ್ಯಕರ್ತನಾಗಲಿ ನೀವಾಗಲಿ ಭಂಡಾರಕ್ಕೆ ತುಂಬಿಬಿಟ್ಟರೆ ಅದರ ಸುದ್ದಿಯೇ ಇಲ್ಲದಂತಾಗುವದು."

"ಕಾರ್ಯಕರ್ತನು ನಿರ್ಧನಿಕನು; ಮೇಲಾಗಿ ಆತನು ನಿರಪರಾಧಿಯೆಂದು ನಾನು ಬಲ್ಲೆನು."

"ಹಾಗಾದರೆ ನೀವೇ ತುಂಬಿರಿ; ಬೇಗ ಶಿಲಕು ಸರಿಗೊಳಿಸುವದು ಒಳ್ಳೆಯದು."

"ಒಂದು ಲಕ್ಷ ವರಹ ಈಗೆಲ್ಲಿಂದ ತರಲಿ ?"

"ಚಿಂತಿಸಬೇಡಿ ವೀರಬಣಂಜು ಸಂಘದಿಂದ ಸಾಲ ಕೊಡಿಸುತ್ತೇನೆ."

"ಸಾಲ ಮಾಡಿದರೆ ನಮ್ಮ ಪ್ರತಿಷ್ಠೆಯೇನಾಯಿತು ?"

"ಸಂಘದವರು ಸಾಲ ಕೊಟ್ಟುದನ್ನು ಗುಪ್ತವಾಗಿರಿಸುತ್ತಾರೆ. ವೃದ್ಧಿಯೊಡನೆ ಮೂಲಧನ ಸುಗಮವಾಗಿ ಸಂದಾಯವಾದರೆ ಸಾಕು ಎನ್ನುತ್ತಾರವರು."

"ಆಗಲಿ ಅಷ್ಟು ಮಾಡಿರಿ."

ಎನ್ನುತ್ತ ಎದ್ದು ಬೀಳ್ಕೊಂಡನು.

ಮಧುವರಸನ ಸಂದರ್ಶನದಿಂದ ಬಹಿರಂಗದಲ್ಲಿ ಅಪಮಾನವಾಗುವದು ತಪ್ಪಿತಾದರೂ, ಮನೋಭಂಗಕ್ಕೆ ಮದ್ದೇನೂ ದೊರೆಯಲಿಲ್ಲ. ಅರ್ಥ ಶಾಖೆಯ ಚಾವಡಿಯಲ್ಲಿ ತನ್ನ ಅಲಕ್ಷತನದ ಪ್ರದರ್ಶನವಾದುದು, ಆಡಳಿತದಲ್ಲಿಯ ಅಚಾತುರ್ಯ ಬಯಲಿಗೆ ಬಂದುದು, ಅಪವ್ಯಯ-ಅಪಹಾರಗಳ ಅಪವಾದದ ಸಂಭವವಾದುದು, ಸಾಲಿಗನಾಗಿ ಹಣ ತೆರುವುದು, ಏನಿದೆಲ್ಲ ಅನರ್ಥ ಪರಂಪರೆ! ಇಷ್ಟೆಲ್ಲಕ್ಕೆ ಆ ಬಸವಯ್ಯ ಬಿಜ್ಜಳರಾಯರ ಮುಂದೆ ಓಡಾಡಿ ಆಡಿದ ಆಟವೇ ಕಾರಣವು ! ಮತ್ತೆ ಇವನೇ 'ಶ್ರದ್ಧಾವಂತ ಕರ್ತವ್ಯಪರ'ನೆಂದು ಮಧುವರಸನ ಮೆಚ್ಚುಗೆ ಬೇರೆ ! ಇವನು ಹೀಗೆಯೇ ಬೆಳೆದರೆ ನಮಗೆ ಉಳಿವೇ ಇಲ್ಲ ಎಂದು ಇಮ್ಮಡಿಯಾಗಿ ಬೇಗುದಿಗೊಂಡು ಮನೆಗೆ ಬಂದನು. ಮನದಲ್ಲಿ ಬಸವಣ್ಣನ ಬಗೆಗೆ ಮಾತ್ಸರ್ಯ ಮೂಡಿ ನಿಂತಿತು.

ಆತ್ಮಶಕ್ತಿ

ವಾರ್ಧಿಕ್ಯದಿಂದಲೂ ಹೆಚ್ಚಿನ ಪರಿಶ್ರಮದಿಂದಲೂ ಮಗಳ ಮದುವೆಯ ಬಳಿಕ ಬಲದೇವರಸು ಅಸ್ವಸ್ಥನಾಗಿ ಹಾಸಿಗೆ ಹಿಡಿದಿದ್ದನು. ತನ್ನ ಸ್ಥಿರ-ಚರ ಸಂಪತ್ತನ್ನು ಸ್ವೀಕರಿಸಲು ಬಸವಣ್ಣನು ನಿರಾಕರಿಸುತ್ತಾನೆಂದು, ಬಿಜ್ಜಳರಾಯನು ಕಳಿಸಿದ ಹೆಗ್ಗಡೆಯ ಮುಖದಿಂದ ತಿಳಿದ ಬಳಿಕ ಅವನಲ್ಲಿ ಮಾನಸಿಕ ಅಸ್ವಸ್ಥತೆಯೂ ಉಂಟಾಯಿತು. ರಾಜಕೀಯ ಮತ್ತು ಧಾರ್ಮಿಕಗಳಲ್ಲಿ ಬಸವೇಶನ ಕ್ರಾಂತಿಕಾರಕ ವಿಚಾರಗಳನ್ನೂ ಭಾವನೆಯನ್ನೂ ಅರಿತ ಬಳಿಕ ಅವನ ಅಂತರಂಗದ ನೋವು ಇನ್ನೂ ಹೆಚ್ಚಾಯಿತು. ಚಾಲುಕ್ಯ ರಾಜ್ಯದಲ್ಲಿ ಶಾಂತಿಯು ಅಸ್ಥಿರವಾಗುತ್ತಿರುವಾಗ 'ತನ್ನ ನಂತರ ಬಸವೇಶ-ಗಂಗಾಂಬಿಕೆಯರ ಜೀವನ ನೌಕೆಯು ಎಲ್ಲಿ ಅಪಘಾತಕ್ಕೀಡಾಗುವದೋ' ಎಂದು ಉಮ್ಮಳಿಸಹತ್ತಿದ್ದನು. ತನ್ನ ಸಂಪತ್ತು, ಬಸವಣ್ಣನ ವ್ಯಕ್ತಿತ್ವ ಇವುಗಳಿಂದ ಒಡಗೂಡಿದ ಗಂಗಾಂಬಿಕೆಯ ಬಾಳುವೆಯ ಬಗೆಗೆ ತನ್ನ ಮನಸ್ಸಿನಲ್ಲಿಯ ಸುಂದರ ಚಿತ್ರ ಮಸಣಿಸಹತ್ತಿತ್ತು. ಪ್ರಬಲವಾದ ಈ ಲೌಕಿಕ ಮಾಯಾ ಜಾಲವು, ಮೂಲತಃ ಅವನಲ್ಲಿದ್ದ ಪರಮಾತ್ಮನ ವಿಷಯದಲ್ಲಿಯ ಸದ್ಭಾವ ಮತ್ತು ನಂಬಿಗೆಗಳನ್ನು ಕೂಡ ಮರೆಮಾಡಿದ್ದಿತು. ಈ ಕಳವಳವನ್ನು ತಿಳಿದ ನಾಗಲಾಂಬೆ ಅವನ ಮನಸ್ಸನ್ನು ಮಾಯೆಯ ಬಾಧೆಯಿಂದ ಬಿಡಿಸಿ, ಪರಾತತ್ವದ ಕಡೆಗೆ ತಿರುಗಿಸಲು ಪ್ರಯತ್ನಿಸಹತ್ತಿದಳು. ಬಾಗೇ

ನಾಡಿಯಿಂದ ತಾನು ಮರಳಿ ಬರುವದರೊಳಗಾಗಿ ಪೂಜ್ಯ-ಹಿರಿಯ-ಸೋದರ ಮಾವ ಬಲದೇವರಸು ಅಸ್ವಸ್ಥನಾಗಿರುವದನ್ನು ಕಂಡು ಅವಳು ವ್ಯಥೆಪಟ್ಟಿದ್ದಳು. ರೋಗಿಗಳ ಶುಶ್ರೂಷೆಯಲ್ಲಿ ಅನನುಭವಿಕಳಾದ ಗಂಗಾಂಬಿಕೆಯನ್ನು ಬಿಡಿಸಿ ತಾನೇ ಅವನ ಆರೈಕೆಯನ್ನು ಕೈಕೊಂಡಿದ್ದಳು. ಹಾಗೆಯೇ ನಿತ್ಯವೂ ಅವನೊಡನೆ ತತ್ವವಿಚಾರ ನಡೆಯಿಸಿ ವಚನ ಗೀತಗಳ ಪಠಣ ಮಾಡುತ್ತಿದ್ದಳು. ಅದರಿಂದ ಬಲದೇವರಸನ ಮನಸ್ಸಿಗೆ ಅಷ್ಟಷ್ಟು ಶಾಂತಿಯುಂಟಾಗುತ್ತಿತ್ತು. ಆತನು ನಾಗಲಾಂಬೆಯ ನಿಸ್ಪೃಹ ಸೇವೆಗೆ ಕೃತಜ್ಞನಾಗುತ್ತಿದ್ದನು.

ರಾಜ್ಯಭಂಡಾರದ ಲೆಕ್ಕ ಪರಿಶೋಧನೆಯಲ್ಲಿ ಹೊರಟಿದ್ದ ಅವಾಂತರಗಳ ಸುದ್ದಿಯು ಆ ಚಾವಡಿಯಲ್ಲಿಯೇ ಉಳಿಯದೆ ಹೊರಬಿದ್ದು ರಾಜಕೀಯ ವಲಯದಲ್ಲೆಲ್ಲ ಪಸರಿಸಿತು. ಅದು ಬಲದೇವ ಮಹಾಮಂತ್ರಿಯ ಹಾಸಿಗೆಯ ವರೆಗೂ ಬಂದಿತು. ಅಂದು ಸಾಯಂಕಾಲ ಆತನು ಬಸವೇಶನನ್ನು ಕರೆಯಕಳುಹಿದನು. ಪರದೆಯ ಹಿಂಬದಿಯಲ್ಲಿ ಗಂಗಾಂಬಿಕೆಯೊಡನೆ ಕುಳಿತಿದ್ದ ನಾಗಲಾಂಬೆ ಪ್ರಸಂಗವನ್ನು ತಿಳಿದಳು. ಸಮಯೋಚಿತ ಅವಧಾನದಿಂದ ವೀಣೆಯನ್ನು ಹಿಡಿದು ವಚನಗೀತವನ್ನು ಸುಶ್ರಾವ್ಯವಾಗಿ ಹಾಡಹತ್ತಿದಳು.

'ನಂಬರು ನೆಚ್ಚರು, ಬರಿದೆ ಕರೆವರು,
ನಂಬಲರಿಯರೀ ಲೋಕದ ಮನುಜರು.
ನಂಬಿ ಕರೆದೊಡೆ 'ಓ' ಎನ್ನನೆ ಶಿವನು ?
ನಂಬದೆ ನೆಚ್ಚದೆ ಬರಿದೆ ಕರೆವರ
ಕೊಂಬ ಮೆಟ್ಟಿ ಕೂಗೆಂಪ ನಮ್ಮ ಕೂಡಲಸಂಗಮದೇವಾ.

ಗೀತವಾರಂಭವಾದ ಸ್ವಲ್ಪದರಲ್ಲಿಯೇ ಬಸವಣ್ಣ ಬಂದು ಮಾವನ ಹಾಸಿಗೆಯ ಹತ್ತಿರ ಕುಳಿತಿದ್ದನು. 'ನಂಬಿ ಕರೆದೊಡೆ ಓ ಎನ್ನನೆ ಶಿವನು ?' ತಾರದಲ್ಲಿ ಈ ಚರಣ ಹೇಳುತ್ತಿರುವಾಗ 'ಎಂತಹ ಚೈತನ್ಯವಿದೆ ಈ ವಿಶ್ವಾಸದ ನುಡಿಯಲ್ಲಿ ?' ಎಂದು ಬಲದೇವರಸು ಎದ್ದು ಕುಳಿತನು. ಬಸವೇಶ ಧ್ಯಾನಮಗ್ನನಾಗಿದ್ದನು. ಗೀತವು ಬೈಲಲ್ಲಿ ಬೆರೆತಂತೆ ಮುಕ್ತಾಯವಾಗುತ್ತಿರುವಾಗ ಮನೆಯಲ್ಲೆಲ್ಲ ಮನದಲ್ಲೆಲ್ಲ ಗೀತೆಯ ಭಾವ ತುಂಬಿತ್ತು. ಬಲದೇವರಸನ ಅಂತಃಕರಣವನ್ನು ಮುಸ್ಕಿದ ಮಾಯೆಯ ಬಲೆ ಕತ್ತರಿಸಿ ಹೋಗಿತ್ತು. ದೇ........ವಾ.......ಕೊನೆಯ ಸ್ವರವು ಭಾವದಲ್ಲಿ ಲಯವಾದಾಗ ಭಾವಪರ

ವಶನಾದ ಬಲದೇವನು ಕೈಜೋಡಿಸಿ ಸಂಗಮದೇವನನ್ನು ವಂದಿಸಿದನು. ಬಸವೇಶನು ಅಂತರಂಗದಲ್ಲಿ ಸಂಗಯ್ಯನನ್ನು ಕಂಡು ಪುಳಕಿತನಾಗಿ ಕಣ್ದೆರೆದು ಪ್ರಕೃತಕ್ಕೆ ಬಂದನು. ಕ್ಷಣಹೊತ್ತು ಎಲ್ಲರೂ ಮೌನ! ಬಳಿಕ ಬಸವೇಶ ಮುಂದೆ ಬಾಗಿ ಎಂದನು:

"ನನ್ನನ್ನು ಕರೆದಿರಂತೆ."

"ಹೌದು ಬಸವೇಶ, ಶಿವನ ನಂಬಲರಿಯದ ಮರುಳನೇ ನಾನು! ಎಲ್ಲರ ಬಾಯಲ್ಲಿ ನಿನ್ನ ಮತ್ತು ಮಂಚಣ್ಣನ ಮಾತುಗಳೇ ಇವೆಯೆಂಬುದನ್ನು ಕೇಳಿ, ಅಂತಹ ಮಹಾವ್ಯಕ್ತಿಯನ್ನು ಎದುರುಹಾಕಿಕೊಳ್ಳುವದು ಯೋಗ್ಯವೋ ಎಂದು ಸಂದೇಹದಿಂದ ಭೀತಿಗೊಂಡಿದ್ದೆನು. ನಿನ್ನನ್ನು ಎಚ್ಚರಿಸಬೇಕೆಂದು ಕರೆದೆನು. ಅದು ಬಯಲು ಭ್ರಾಂತಿ! ಚಾಲುಕ್ಯಸಾಮ್ರಾಜ್ಯದ ಆಡಳಿತ ವನ್ನು ತೂಗಿಸಿದವನೆಂಬ ಅಹಂಕಾರದಿಂದ ಎರಡು ಜೀವಗಳ ಕ್ಷೇಮಕ್ಕೆ ವ್ಯರ್ಥವಾಗಿ ಚಿಂತಿಸುತ್ತಿದ್ದೆನು. ನಾವು ಒಳಗೆ ಮಾಯಾಬದ್ಧರಾಗಿ ತೋರಿ ಕೆಗೆ ಪರಮಾತ್ಮನ ಮೇಲೆ ಭಾರಹಾಕುತ್ತೇವೆ. ಶಿವನನ್ನು ದೃಢವಾಗಿ ನಂಬಿ ದ್ದರೆ ಚಿಂತಿಸುವದೇಕೆ? ನಿನ್ನ ಅಮರಗೀತವು ನಾಗಮ್ಮನ ಭಾವದಲ್ಲಿ ಬೆರೆದು ಬಂದು ನನ್ನ ಹೃದಯದಲ್ಲಿ ಬೆಳಕನ್ನು ಉಂಟುಮಾಡಿತು; ಕಣ್ಣು ತೆರೆಯಿ ಸಿತು. ಸಂಗಮನಾಥನೇ ನಿನ್ನ ಯೋಗಕ್ಷೇಮಕ್ಕೆ ಸಿದ್ಧನಿದ್ದಾನೆ. ನಾನೇನೂ ಹೇಳಬೇಕಾದುದಿಲ್ಲ"

"ಹೇಳಬೇಕು; ನಿಮ್ಮ ವಚನಗಳು ಸಂಗಮನಾಥನ ನುಡಿಗಳೆಂದೇ ಭಾವಿಸುತ್ತೇನೆ. ಅಷ್ಟೊಂದು ರಾಜಧನ ಅಪಹಾರವಾಗಿರುವದನ್ನು ತಿಳಿದು ವರದಿಯ ಪೂರ್ಣತೆಗಾಗಿ ಮಂಚಣ್ಣಮಂತ್ರಿಗಳಿಂದ ಕೆಲವು ಸ್ಪಷ್ಟನೆಗಳನ್ನು ಪಡೆಯಬೇಕಾಯಿತು. ಆ ಮಾತು ಅವರಿಗೇ ಸಂಬಂಧಿಸಿರುವದರಿಂದ ಅವ ರಿಗೆ ಅಪ್ರಿಯವಾಗಿರಬಹುದು. ಎಂಥವರಿಗೂ ವಿರಸವಾಗುವಂತೆ ಮಾತ ನಾಡುವದು ನನಗೆ ಇಷ್ಟವಾಗಿಲ್ಲ. ಅವರ ಸ್ಥಾನ-ಪ್ರತಿಷ್ಠೆಗಳಿಗೆ ಬೆದರಿ ಕರ್ತವ್ಯಚ್ಯುತನಾಗುವದು ಸರಿಯಾದೀತೇ?"

"ಸರಿಯಾಗದು; ಆದರಿಷ್ಟೇ! ಕರ್ತವ್ಯನಿಷ್ಠೆ ಕಠಿಣವಾದ ಕಾರ್ಯ! ಸ್ವಪರ ಹಿತಾಸಕ್ತಿಗಳೂ ಲೋಭ-ಮೋಹಗಳೂ ಕರ್ತವ್ಯದ ಮಾರ್ಗದಲ್ಲಿ

ದೊಡ್ಡ ಆತಂಕಗಳು. ನೀನು ಇವೆಲ್ಲವನ್ನು ಮೆಟ್ಟಿ ಕರ್ತವ್ಯನಿಷ್ಠನಾದ ರಾಜ ಕರ್ಮಚಾರಿಯಾಗಬೇಕೆಂದೇ ನನಗಿರುವ ಆಸೆ !"

"ನಾನು ಹಾಗೆ ಆಗುವದಕ್ಕೇ ಪ್ರಯತ್ನಿಸುತ್ತಿದ್ದೇನೆ. ರಾಜಧರ್ಮ-ಪ್ರಜಾಧರ್ಮಗಳ ನಡುವಿನ ಸಂಬಂಧವನ್ನು ಸುಗಮಗೊಳಿಸುವದೇ ರಾಜ ಕರ್ಮಚಾರಿಯ ಕರ್ತವ್ಯ ! ಅನ್ಯಾಯ ಅಧರ್ಮಗಳನ್ನು ಮುಚ್ಚಿಡುವದರಿಂದ ಅದು ಸಾಧಿಸುವದಿಲ್ಲ. ವಿನಯವುಳ್ಳ ನಿರ್ಭೀತಿಯನ್ನೇ ಕರುಣಿಸೆಂದು ಸಂಗಮನಾಥನನ್ನು ಪ್ರಾರ್ಥಿಸುತ್ತೇನೆ."

"ಅದು ಸರಿ; ಸಂಗಮದೇವನು ಮೆಚ್ಚುವಂತೆ, ಇನ್ನು ನಿನ್ನ ಭವಿಷ್ಯವನ್ನು ರೂಪಿಸಿಕೊಳ್ಳುವದು ಬೇರೆಯವರ ಹಿತವಚನಗಳಿಗಿಂತ ನಿನ್ನ ಆತ್ಮಶಕ್ತಿಯನ್ನೇ ಅವಲಂಬಿಸಿರುತ್ತದೆ. ನನ್ನ ದೇಹ ದುರ್ಬಲವಾಗುತ್ತಿದೆ; ಶಿವನ ಕರೆ ಸಮೀಪಿಸುತ್ತಿದೆ. ನನಗಿದೊಂದು ಆಶೆ; ನಿತ್ಯ ಸಾಧನೆಯಿಂದ ನಿನ್ನ ಆತ್ಮಶಕ್ತಿಯನ್ನು ಬೆಳೆಯಿಸಿಕೊಂಡು, ಲೋಕಹಿತಕ್ಕೆ ಅದನ್ನು ಉಪಯೋಗಿಸುವದು ನಿನ್ನ ಜೀವನದ ಆದರ್ಶವಾಗಲಿ !"

ಬಲದೇವನ ಅಮೃತವಾಣಿ ಬಸವಣ್ಣನ ಗೃಹಸ್ಥಜೀವನದ ದಾರಿದೀಪವಾಗಿದ್ದಿತು. ಅದೇ ಹೊತ್ತಿಗೆ ಸಂಜೆಯ ದೀಪವನ್ನು ಹೊತ್ತಿಸಿ ದಾಸನು ತಂದಿಟ್ಟನು. ಸಂಗಮನಾಥನಂತೆಯೇ ಕಂಡ ಮಾವನಿಗೆ ಬಸವೇಶ ತಲೆಬಾಗಿ ವಂದಿಸಿದನು.

ಸುಖದುಃಖಗಳ ಮಿಶ್ರಭಾವನೆಯಿಂದ ಹೃದಯದುಂಬಿದ ನಾಗಲಾಂಬೆ ಅಶ್ರುಪೂರಿತನೇತ್ರಳಾಗಿ ಎದುರಿಗಿದ್ದುದನ್ನು ಬಲದೇವರಸು ಕಂಡನು. ಅಂತಃಕರಣ ಉಕ್ಕಿ ನುಡಿದನು:

"ನಾಗಮ್ಮಾ, ಮಾಯಾಮೂಲವಾದ ಆಶಾ-ನಿರಾಸೆಗಳಿಂದ ಹುಚ್ಚನಾದ ನನ್ನನ್ನು ಉದ್ಧರಿಸಿ ಕಾಪಾಡಿದೆ ತಾಯಿ ! ಪ್ರಬುದ್ಧ ಹೆಣ್ಣು ಪರಾಶಕ್ತಿಯೆಂಬುದು ನಿಸ್ಸಂದೇಹ ! ದಿನದಲ್ಲಿ ಚಿಕ್ಕವಳಾದರೂ ನನಗಿಂದು ನೀನು ಗುರು ! ಅಳಿಯನಾದರೂ ನಿನ್ನ ತಮ್ಮ ಬಸವೇಶ ಗುರು ! ಗಂಗಾಬಿಕೆಯನ್ನು ನಿನ್ನ ಉಡಿಯಲ್ಲಿ ಹಾಕಿ ನಾನಿಂದು ನಿಶ್ಚಿಂತನಾಗುವೆನು. ಅವಳ ವೃದ್ಧಿಹಾನಿಗಳೆಲ್ಲ ನಿನ್ನನ್ನೇ ಕೂಡಿವೆ. ನೀನದನ್ನು ನಡಿಸಿಕೊಡಬೇಕು "

"ಆಗಲಿ ತಂದೆ, ಹೆಣ್ಣೊಂದು ಹಡೆಯದಿದ್ದ ನನಗೆ ಗಂಗಾಂಬೆಯೇ ಆ ಹೆಣ್ಣು !"

ಎನ್ನುವಾಗ ನಾಗಲಾಂಬೆಯ ಕಂಠ ಬಿಗಿದು ಬಂದಿತು. ಸಂತೋಷ ದಿಂದ ಪಾದವನ್ನು ಮುಟ್ಟಿ ನಮಿಸಿದಳು. ಗಂಗಾಂಬಿಕೆಯೂ ಮುಂದೆ ಬಂದು ಮೂವರಿಗೂ ನಮಸ್ಕಾರ ಮಾಡಿದಳು.

ವರದಿಯ ವಿವೇಚನೆ

ಅರಸುಚಾವಡಿಯ ಬಲಗಡೆಯ ತನ್ನ ಕೋಣೆಯಲ್ಲಿ ಬಸವಣ್ಣನು ತಾನು ಸಂಗ್ರಹಿಸಿದ ಅಂಕಿ ಸಂಖ್ಯೆಗಳು, ಉತ್ತರಿಸಿದ ಕಾಗದಗಳು, ಸಲ್ಲಿಕೆ ಪತ್ರಗಳು, ಹೇಳಿಕೆಗಳು, ಅಭಿಪ್ರಾಯಗಳು ಇವುಗಳನ್ನೆಲ್ಲ ಇಟ್ಟುಕೊಂಡು ಸಾಮ್ರಾಜ್ಯದ ಆರ್ಥಿಕ ಪರಿಸ್ಥಿತಿಯ ವರದಿಯನ್ನು ಬರೆಯುತ್ತಿದ್ದನು. ರಹಸ್ಯವಾಗಿ ನಡೆದು ಆ ಕಾರ್ಯವು ೨ವಾರಗಳಲ್ಲಿ ಪೂರೈಸಿತು. ಆರ್ಥಿಕ ಆಡಳಿತದಲ್ಲಿಯ ದೋಷಗಳು ಅಪವ್ಯಯ-ಅಪಹಾರಗಳು ಮೊದಲನೆಯ ಭಾಗದಲ್ಲಿ ತೋರಿಸಲ್ಪಟ್ಟಿದ್ದವು. ಪ್ರಜಾಹಿತದ ಹಣದಲ್ಲಿ ಹೆಚ್ಚಾದ ಭಾಗವು ವಿಶಿಷ್ಟ ವರ್ಗದವರ-ಪರೋಪಜೀವಿಗಳ ವಿದ್ಯಾದಿ ಸೌಕರ್ಯಗಳಿಗೆ ಮಾತ್ರ ಅಗ್ರಹಾರ ಮಠಗಳ ಮುಖಾಂತರ ಸಲ್ಲುವದನ್ನೂ ಭಂಡಾರಕ್ಕೆ ಹಣತುಂಬುವವರ-ಶ್ರಮಜೀವಿಗಳ ಹಿತವು ಅಲಕ್ಷಿಸಲ್ಪಟ್ಟಿರುವದನ್ನೂ ೨ನೆಯ ಭಾಗದಲ್ಲಿ ವಿವರಿಸಿದ್ದನು. ೩ನೆಯ ಭಾಗದಲ್ಲಿ ಆರ್ಥಿಕ ಆಡಳಿತಕ್ಕಾಗಿ ಹೊಸ ಯೋಜನೆಯನ್ನು ರೂಪಿಸಿದ್ದನು. ೪ನೆಯ ಭಾಗದಲ್ಲಿ ಸರಿಯಾದ ವಿನಿಯೋಗವಾಗುವದಕ್ಕಾಗಿ ಸೂಚನೆಗಳನ್ನು ಕೊಟ್ಟಿದ್ದನು. ರಕ್ಷಣೆಯ ವಿಭಾಗದ ವೆಚ್ಚದಲ್ಲಿ ಬದಲಾವಣೆಯನ್ನು ಸೂಚಿಸಿರಲಿಲ್ಲ.

ಬಿಜ್ಜಳರಾಯನಿಗೆ ವರದಿಯನ್ನು ಸಾದರಪಡಿಸಿದ ಹತ್ತು ದಿವಸಗಳ ನಂತರ ಆತನು ಬಸವೇಶನನ್ನು ಮಂತ್ರಾಗಾರದಲ್ಲಿ ಕರೆದು ವರದಿಯ ವಿವೇಚನೆ ನಡಿಸಿದನು. ಈ ಮಧ್ಯಂತರದ ಅವಧಿಯಲ್ಲಿ ಸಾಮಂತ ಮಂತ್ರಿ ಮಧುವರಸನು ಬಿಜ್ಜಳರಾಜನನ್ನು ಕಂಡು ಬಂದಿದ್ದನು. ಬಳಿಕ ರಾಜನು ಮಂಚಣ್ಣನನ್ನು ಕರೆಯಿಸಿ ವಿಚಾರಿಸಿದ್ದನು. 'ಇವರಿಬ್ಬರು ರಾಜಕಾರಣ ಧುರೀಣರು; ಮಂತ್ರಿ ಮಂಡಲದಲ್ಲಿ ಪ್ರತಿಷ್ಠಿತರು. ಮಧುವರಸನಂತಹ

ನ್ಯಾಯ ನಿಷ್ಠುರ-ವಿಚಾರಪರನೇ ಮಂಚಣ್ಣನ ವಯೋಮಾನಕ್ಕೆ, ಬಹು ದಿವಸಗಳ ಸೇವೆಗೆ ಮನ್ನಣೆ ಕೊಟ್ಟು ಸಹಾನುಭೂತಿಯನ್ನು ವ್ಯಕ್ತಪಡಿಸುತ್ತಿರುವಾಗ ಅದನ್ನು ಮೀರುವದು ಸರಿಯಾಗದು. ಈ ಇಬ್ಬರನ್ನು ದಾಕ್ಷಿಣ್ಯದಲ್ಲಿ ಹಿಡಿದು ತನ್ನ ಧ್ಯೇಯ ಸಾಧನೆಗೆ ಉಪಯೋಗಿಸಿಕೊಳ್ಳಲು ಈ ವರದಿಯ ಸಂದರ್ಭವು ಅನುಕೂಲವಾಗಿದೆ' ಎಂದು ಬಗೆದುಕೊಂಡಿದ್ದನು. ಅರ್ಥ ಶಾಖೆಯಲ್ಲಿಯ ಅವ್ಯವಸ್ಥೆಯ ಪರಿಹಾರದ ಮಾರ್ಗವನ್ನು ತಾನೊಂದು ಬಗೆಯಿಂದ ನಿರ್ಧರಿಸಿಕೊಂಡೇ ಬಿಟ್ಟಿದ್ದನು. ತನ್ನ ಮತಕ್ಕೆ ಬಸವೇಶನನ್ನು ಹೊಂದಿಸಿಕೊಳ್ಳುವದಕ್ಕೇ ಇಂದು ಬಸವೇಶನನ್ನು ಕರೆಸಿದ್ದನು.

"ಬಸವೇಶಾ, ಆರ್ಥಿಕ ವರದಿಯನ್ನು ಪೂರ್ಣವಾಗಿ ನೋಡುವದಾಯಿತು. ವ್ಯವಹಾರಗಳಲ್ಲಿ-ಮುಖ್ಯವಾಗಿ ಅಶ್ವ ವ್ಯವಹಾರದಲ್ಲಿ ರಾಜ್ಯಧನದ ಅಪಹಾರವಾಗಿರುವ ಪ್ರಸಂಗವನ್ನು ಬಹಳ ಜಾಣ್ಮೆಯಿಂದ ಸಾಧಾರವಾಗಿ ಕಂಡು ಹಿಡಿದಿರುವಿರಿ. ಅಪರಾಧಿಗಳು ಯಾರೆಂದು ನಿಮ್ಮ ಮತ ?"

"ನ್ಯಾಯಾಧೀಶರಂತೆ ಅದನ್ನು ತಾವು ನಿರ್ಣಯಿಸಬೇಕು, ನಾಮ ನಿರ್ದೇಶ ಮಾಡುವದು ನನ್ನ ಅಧಿಕಾರಕ್ಕೆ ಮೀರಿದ ಸಂಗತಿ !"

"ಅಪರಾಧಿಗಳು ಯಾರೇ ಇದ್ದರೂ ಅಂತಿಮವಾದ ಹೊಣೆ ಮಂತ್ರಿಗಳದೇ ಆಗಿದೆ."

"ಇನ್ನೊಂದು ಮಾತು ಪ್ರಭು ! ನನ್ನ ಪರಿಶೀಲನೆಯ ಸೀಮೆಯ ಹೊರಗಿನದಾದರೂ ಆಡಳಿತಕ್ಕೆ ಕುಂದುಕವಾಗಿರುವ ಸಂಗತಿ ! ಅದು ಎಲ್ಲಿಯೇ ಇದ್ದು ಕಂಡು ಬಂದರೆ, ಪ್ರಭುವಿನ ಲಕ್ಷಕ್ಕೆ ತರುವದು ರಾಜ ಕರ್ಮಚಾರಿಯ ಕರ್ತವ್ಯ !"

"ನಿಜವಾದ ಕರ್ತವ್ಯ ! ಯಾವ ಸಂಗತಿ ಅದು ?"

ಬಿಜ್ಜಳನ ಮೊಗದಲ್ಲಿ ನಸುನಗೆ ಮೂಡಿತ್ತು.

"ಚಕ್ರವರ್ತಿಗಳ ಒಂದು ನಿರೂಪ......"

"ತಿಳಿಯಿತು ನಮಗೂ ಗೊತ್ತಾಗಿದೆ. ಒಂದು ಲಕ್ಷ ವರಹಗಳ ಅಪಹಾರದ ವಿಷಯ ! ಅಪ್ರಾಸಂಗಿಕವೆಂದು ವರದಿಯಲ್ಲಿ ಕಾಣಿಸದಿದ್ದುದೂ ಈಗ ಪ್ರತ್ಯೇಕವಾಗಿ ನಮಗೆ ತಿಳಿಸುತ್ತಿರುವದೂ ನಿಮ್ಮ ಜಾಣ್ಮೆ-ನಿಷ್ಠೆಗ

ಳನ್ನು ತೋರಿಸುತ್ತಿವೆ. ಈಗ ಅಪರಾಧಗಳ ವಿಚಾರ ನಡೆಯಿಸಿ ಅಪ ರಾಧಿಗಳನ್ನು ದಂಡಿಸುವದಕ್ಕೆ ಸಮಯ ಅನುಕೂಲವಾಗಿರುವದಿಲ್ಲ. ವರ ದಿಯ ಪೂರ್ವಭಾಗದ ಬಗೆಗೆ ಕ್ರಮ ತೆಗೆದುಕೊಳ್ಳುವದನ್ನು ಕೈಬಿಟ್ಟು, ಅದರಲ್ಲಿ ತೋರಿಸಿದ ಅಕ್ರಮಗಳು ಪುನಃ ನಡೆಯಲು ಆಸ್ಪದವಾಗದಂತಹ, ಆದಾಯದ ಧನ ಸರಿಯಾಗಿ ವಿನಿಯೋಗವಾಗುವಂತಹ ಆರ್ಥಿಕ ವ್ಯವ ಹಾರದ ಹೊಸಯೋಜನೆ ರೂಪಿಸಿದರಾಯಿತು. ಈ ವಿಷಯದಲ್ಲಿ ವರದಿಯ ಉತ್ತರಭಾಗವು ಬಹಳ ಉಪಯುಕ್ತವಾಗಿದೆ. ಇದರಲ್ಲಿ ನೀವು ಬಹಳ ಬುದ್ಧಿ ವಂತಿಕೆ ತೋರಿಸಿದ್ದೀರಿ."

"ಅನುಭವಿಕನಲ್ಲ ನಾನು. ಪ್ರಭುಗಳ ಆಜ್ಞೆಯೆಂದು ತಿಳಿದಷ್ಟು ಮಾಡಿದೆ. ಸರಿಯೆನಿಸಿದ್ದರೆ ತಮ್ಮ ಮನಸ್ಸಿನ ದೊಡ್ಡತನ ! ಸಂಗಮನಾಥನ ಕರುಣೆ !"

"ನಿಮ್ಮ ಸದ್ಭಾವ-ನಿರಹಂಕಾರಗಳಿಂದಲೇ ನಿಮ್ಮ ಬುದ್ಧಿ ತೀಕ್ಷ್ಣ ವಾಗಿದೆ. ಅದು ಇಲ್ಲಿ ತೋರುತ್ತಿದೆ. ಅನುಭವಿಕರು ಅಷ್ಟಿಷ್ಟು ಹೆಚ್ಚುಕಡಿಮೆ ಮಾಡಿಕೊಳ್ಳಬಹುದು; ಆ ಮಾತು ಬೇರೆ."

ಬಸವೇಶ ಸುಮ್ಮನಿದ್ದನು. ರಾಜನು ವರದಿಯ ಆ ಭಾಗವನ್ನು ಕೈಗೆತ್ತಿಕೊಂಡು ಪುನಃ ನೋಡಿ ಸಂದಿಗ್ಧವೆನಿಸಿದೆಡೆಗಳಲ್ಲಿ ಬಸವೇಶನಿಂದ ವಿವರಣೆ ಪಡೆದನು. ಅಸಮಂಜಸವೆನಿಸಿದವುಗಳನ್ನು ಅವನೊಡನೆ ಚರ್ಚಿಸಿ ಸರಿಪಡಿಸಿಕೊಂಡನು. ಬಳಿಕ ಮೊಗವರಳಿಸಿ ಹೇಳಿದನು:

"ನೀವು ಸೂಚಿಸಿದ ಹೊಸ ಯೋಜನೆಯು ಭದ್ರವೂ ಪ್ರಯೋಜನ ಕರವೂ ಆದೀತು. ಆಡಳಿತದಲ್ಲಿ ಬದಲಾವಣೆಯನ್ನು ಮಂತ್ರಿಮಂಡಲದ ಸಭೆಯಲ್ಲಿ ಮಂಡಿಸಿ ನಿರ್ಣಯಿಸಿ ಮಾಡಿಕೊಳ್ಳಬೇಕಾಗುತ್ತದೆ. ಇದಕ್ಕೆ ಸಾಮಂತಮನ್ನೆಯರನ್ನೂ ಕರೆಯಬೇಕಾದೀತು! ಮಹಾಮಂತ್ರಿಗಳು ಬಂದರೆ ಒಳ್ಳೆಯದು. ಅವರ ಆರೋಗ್ಯ ಸುಧಾರಿಸುತ್ತಿರುವದಷ್ಟೇ !"

"ಹೌದು ಪ್ರಭುಗಳೆ, ಈಗೀಗ ಚೇತರಿಸಿಕೊಳ್ಳಹತ್ತಿದ್ದಾರೆ."

"ಅವರು ಸಭೆಗೆ ಬರುವಂತಾಗಲಿ; ನೋಡಿಕೊಂಡೇ ಸಭೆಯ ದಿನ ನಿಶ್ಚಯಿಸೋಣ ! ಆಗ ನೀವು ಇವರ ಮೇಲೆ ಚೆನ್ನಾಗಿ ವಿವರಣೆ ಕೊಡಬೇಕಾ

ಗುತ್ತದೆ. ಸಿದ್ಧವಾಗಿರಬೇಕು. ವರದಿಯ ಪೂರ್ವಭಾಗವನ್ನು ಮಾತ್ರ ಎತ್ತಕೂಡದು. ಅದನ್ನು ಇಲ್ಲಿಂದಲೇ ಬಿಟ್ಟುಕೊಡಬೇಕು.”

“ಆಗಬಹುದು” ಎಂದು ಬಸವಣ್ಣ ಬೀಳ್ಕೊಂಡನು.

ಬಲದೇವ ಮಂತ್ರಿಯ ಶಾಶ್ವತ ವಿಶ್ರಾಂತಿ

ಬಲದೇವರಸನ ಸಲುವಾಗಿಯೇ ‘ಮಂತ್ರಿಮಂಡಲದ ಸಭೆಯನ್ನು ಮುಂದೂಡಿದ್ದರೂ ಆತನು ಸಭೆಗೆ ಬರುವದು ಶಿವನ ಇಚ್ಛೆಯಾಗಿರಲಿಲ್ಲ. ಆಪ್ತ ಕಾರ್ಯದರ್ಶಿಯು ಅವನ ಆರೋಗ್ಯದ ಬಗೆಗೆ ಮಹಾಮಂಡಲೇಶ್ವರರಿಗೆ ವರದಿ ಮಾಡುತ್ತಿದ್ದನು. ಮಾನಸಿಕ ಸ್ವಾಸ್ಥ್ಯದಿಂದ ಉಲ್ಲಸಿತನಾಗಿದ್ದರೂ ದೇಹದ ಬಳಲಿಕೆ ಹೆಚ್ಚುತ್ತಲೇ ಹೋಯಿತು. ಬಿಜ್ಜಳರಾಜನು ಸೂಚಿಸಿದಂತೆ ತನ್ನ ಸ್ಥಿರಚರ ಆಸ್ತಿಯನ್ನು ಗಂಗಾಂಬಿಕೆಯ ಹೆಸರಿಗೆ ಬರೆಯಿಸಿದನು. ಇತ್ತೀಚೆಗೆ ತಾನು ಕಟ್ಟಿಸಿದ ವಿಶಾಲವೂ ಭವ್ಯವೂ ಆಗಿದ್ದ ‘ಮಹಮನೆ’ ಎಂಬ ಅರಮನೆಯನ್ನು ‘ಬಸವೇಶನು ಪತ್ನಿಯೊಡನೆ ತನ್ನ ವಾಸಕ್ಕೆ ಉಪಯೋಗಿಸದಿದ್ದರೆ ಅದು ಧಾರ್ಮಿಕ ಚಟುವಟಿಕೆಗಳ ಕೇಂದ್ರನಿಲಯವಾಗಬೇಕು.’ ಎಂಬ ಮಾತನ್ನು ಲಕ್ಷಪೂರ್ವಕವಾಗಿ ಅದರಲ್ಲಿ ಹಾಕಿಸಿದ್ದನು. ಬಿಜ್ಜಳರಾಯನು ಈ ಇಚ್ಛಾಪತ್ರಕ್ಕೆ ಅಂಕಿತವನ್ನೂ ರಾಜಮುದ್ರೆಯನ್ನೂ ಹಾಕಿ ಶಾಸನ ಮಾಡಿಕೊಟ್ಟನು. ಮಹಮನೆಯ ಮಾತನ್ನು ಅಷ್ಟು ಗಮನಿಸಲಿಲ್ಲ.

ಈ ಶಾಸನದ ಅನಂತರ ಬಲದೇವನಿಗೆ ಇಹಲೋಕದ ತಂತುಗಳೆಲ್ಲ ಹರಿದವು. ಅವನ ತನು-ಮನ-ಭಾವಗಳು ಪರಮಾತ್ಮನನ್ನು ಅರಸಿ-ಕಂಡು-ಕೂಡುವದರಲ್ಲಿಯೇ ತೊಡಗಿದವು. ಕುಳಿತು ತನು ದಣಿಯುವ ವರೆಗೆ ಶಿವಾರ್ಚನೆಯನ್ನೇ ಮಾಡುತ್ತಿದ್ದನು. ಸ್ತೋತ್ರ-ವಚನಗೀತೆಗಳನ್ನು ಕೇಳುತ್ತಲೇ ವೇಳೆಗಳೆಯುತ್ತಿದ್ದನು. ಅವನಿಗೆ ಸಂತೋಷವಾಗುವದಕ್ಕಾಗಿ ನಾಗಲಾಂಬೆ ಬೇಸರಿಯದೆ ಅವುಗಳ ಶ್ರವಣ ಮಾಡಿಸುತ್ತಿದ್ದಳು. ಬರಬರುತ್ತ ಅವಯವಗಳ ಚಲನೆ ಕುಂದಿತು. ಪ್ರಸಾದ ಸೇವನೆ ಸಂಕ್ಷಿಪ್ತವಾಗಿ ಶೂನ್ಯಕ್ಕೆ ಬಂದಿತು.

ಶ್ರಾವಣಮಾಸದ ಮೊದಲನೆಯ ಸೋಮವಾರ ಪ್ರಜೋತ್ಪತ್ತಿ ಸಂವತ್ಸರ ಶಕೆ ೧೦೭೩. (ಕ್ರಿ. ವ. ೧೧೫೧); ಪೂಜೆಯ ಸಿದ್ಧತೆಯೂ ವಿಶೇಷವಾಗಿದ್ದಿತು. ಬಲದೇವರಸನ ಆರೋಗ್ಯವಿಚಾರಣೆಗೆ ಬಂದ ನೀಲಲೋಚನೆಯೂ ಮರಳಿ ಅರಮನೆಗೆ ಹೋಗಿರಲಿಲ್ಲ. ಅವನ ಸ್ನಾನ ಮಾಡಿಸಿ ಶಿವಪೂಜಾಗೃಹಕ್ಕೆ ಕರ ತಂದರು. ಶರೀರಕ್ಕೆ ಆಸರ ಮಾಡಿಕೊಂಡು ಕುಳಿತು ಲಿಂಗಾರ್ಚನೆಗೆ ತೊಡ ಗಿದನು. ಆದರೆ ನರನಾಡಿಗಳ ಬಲ ಕುಗ್ಗಿತ್ತು. ಪ್ರಜ್ಞೆ ಅಂತರ್ಮುಖವಾಗಿತ್ತು. ಗಂಗಾಂಬಿಕೆ ಪೂಜಾಸಾಹಿತ್ಯಗಳನ್ನು ಕೈಗೊದಗಿಸುತ್ತಿದ್ದರೂ, ಜಲಪಾತ್ರೆ ಯನ್ನು ತಕ್ಕೊಳ್ಳದೆ ಲಿಂಗಯ್ಯನಿಗೆ ಮಜ್ಜನಮಾಡಿಸಿದಂತೆ, ಪತ್ರ-ಪುಷ್ಪ ಗಳನ್ನು ಹಿಡಿಯದೆಯೇ ಅವುಗಳನ್ನು ಧರಿಸಿದಂತೆ ಕೈ ಚಲಿಸುತ್ತಿತ್ತು. ಹಾಗೆ ಹೀಗೆ ಬಹಿರಂಗಪೂಜೆ ಗಂಗಾಂಬೆಯ ನೆರವಿನಿಂದ ಪೂರ್ಣವಾದರೆ, ಅಂತರಂಗದಲ್ಲಿ ಪೂಜಾ-ಜಪ-ಧ್ಯಾನಗಳು ಯಥಾರೀತಿ ಪೂರೈಸುತ್ತಿದ್ದವು. ನಾಗಲಾಂಬೆ ಎಂದಿನಂತೆ ಶತರುದ್ರೀಯ, ಮಹಿಮ್ನ ಸ್ತೋತ್ರಗಳನ್ನು ಪಠಿಸಿ, ಮಾವನ ಪ್ರೀತಿಯ 'ನಂಬರು-ನೆಚ್ಚರು, ಬರಿದೆ ಕರೆವರು' ಈ ವಚನಗೀತೆ ಯನ್ನು ಹಾಡುತ್ತಿದ್ದಳು. ಆಕೆಯ ಮಗ್ಗಲಿಗೆ ನೀಲಾಂಬೆಯೂ ಇಹಪರಗಳ ಸಂಯೋಗ ಸಮಯದ ಭಾವಾವಿಷ್ಟಳಾಗಿ ವಿನಮ್ರತೆಯಿಂದ ಕುಳಿತಿದ್ದಳು.

ಅರೆದೆರೆದ ದೃಷ್ಟಿಯನ್ನು ಲಿಂಗದಲ್ಲಿಟ್ಟ ಧ್ಯಾನಸ್ಥನಾದ ಬಲದೇವನ ಮುಖದಲ್ಲಿ ಮಂದಸ್ಮಿತದ ಪ್ರಕಾಶ ಮೂಡಿತು. ಕೆನ್ನೆಗಳು ವಿಶಾಲವಾದವು. ತುಟಿಗಳು ಅದಿರಿ ಸಡಿಲಾದವು. ಕಣ್ಣುಗಳ ಕಾಂತಿ ರೆಪ್ಪೆಗಳ ಸಂದಿನಿಂದ ಹೊರಸೂಸಿ ಬಂದಿತು. ಎದುರಿಗೆ ಕುಳಿತು ನೋಡುತ್ತಿದ್ದ ಗಂಗಾಂಬಿಕೆಯ ಉಸಿರು ಅವಸರವಾಯಿತು. ಮಾವನ ಪ್ರಸಾದಸೇವನೆಯ ವಿಚಾರಣೆಗೆ ಬಂದಿದ್ದ ಬಸವೇಶನು ಅವನ ಧ್ಯಾನಸ್ಥ ಸ್ಥಿತಿಯನ್ನು ಕಂಡು ಬಾಗಿಲಲ್ಲಿಯೇ ನಿಂತು ಕೈಮುಗಿಯುತ್ತಿದ್ದನು. ಆಗಲೇ ಬಲದೇವನ ತಲೆ ಬಲಗಡೆಗೆ ಬಿದ್ದಿತು. ಬಸವಣ್ಣ ಓಡಿಬಂದು ಶರೀರವು ಕುಸಿಯದಂತೆ ಹಿಡಿದನು. ಮಾವನ ಪ್ರಾಣವಾಯುವು ಪರಮಾತ್ಮನಲ್ಲಿ ಲೀನವಾಗಿದ್ದಿತು.

* * * *

ಸುದ್ದಿ ಗಳಿಗೆಯೊಳಗೆ ನಗರದಲ್ಲೆಲ್ಲ ಹರಡಿತು. ಬಿಜ್ಜಳನು ಮಹ ಮನೆಗೆ ಧಾವಿಸಿ ಬಂದು ಬಲದೇವರಸನ ಗುಣ-ಗಾಂಭೀರ್ಯ ರಾಜಕೀಯ

ಚಾತುರ್ಯಗಳನ್ನೂ ರಾಜ್ಯಕ್ಕೆ ಅವನಿಂದಾದ ಉಪಕಾರವನ್ನೂ ಸ್ಮರಿಸಿ ಕಣ್ಣೀರು ಕರೆದನು. ಸಾಮ್ರಾಜ್ಯದ ಮಹಾಮಂತ್ರಿಗೆ ತಕ್ಕ ರಾಜಗೌರವ ವೆಲ್ಲ ಅಂತ್ಯವಿಧಿಗೆ ಸಲ್ಲುವಂತೆ ಏರ್ಪಾಡು ಮಾಡಿದನು. ಭೌತಿಕ ಶರೀರದ ಅಂತ್ಯಯಾತ್ರೆಯು ಚಾಲುಕ್ಯ ಅರಮನೆಯ ಮುಂದೆ ಬಂದಾಗ ಚಕ್ರವರ್ತಿ ನೂರ್ಮಡಿ ತೈಲಪದೇವನು ರಾಜಮಾರ್ಗದಲ್ಲಿ ಬಂದು ಪುಷ್ಪಹಾರವನ್ನು ಅರ್ಪಿಸಿ ಕೈಮುಗಿದನು. ಬಸವೇಶನು ತಾತ್ವಿಕ ಮತ್ತು ಧಾರ್ಮಿಕ ವಿಧಿ ವತ್ತಾಗಿ ಸಮಾಧಿಕ್ರಿಯೆಯನ್ನು ನೆರವೇರಿಸಿದನು.

ಕಲ್ಯಾಣನಗರವು ಕೆಲವೊಂದು ದಿವಸ ಮಹಾಮಂತ್ರಿಯ ಅಗಲುವಿಕೆ ಯಿಂದ ನಿಸ್ತೇಜವಾದಂತಾಗಿತ್ತು. ಮಹತ್ವದ ರಾಜಕಾರ್ಯಗಳು ಮುಂದೂ ಡಲ್ಪಟ್ಟಿದ್ದವು. ವ್ಯವಹಾರಗಳು ಅಸ್ತವ್ಯಸ್ತವಾಗಿದ್ದವು. ಬಸವೇಶನು ಪ್ರಪಂಚವನ್ನು ಮಥಿಸಿ ಆತ್ಮಶೋಧನೆ ಮಾಡುವದರಲ್ಲಿ ತೊಡಗಿದಂತಾಗಿತ್ತು. ಎಲ್ಲೆಡೆಗೆ ಮೊದಲಿನಂತೆ ಚಟವಟಿಕೆ ಕಾಣುವದಕ್ಕೆ ಎರಡು ವಾರ ಹತ್ತಿದವು.

ಬುದ್ಧಿಬಲ

ಮಹಾಮಂತ್ರಿಯ ಕಾರ್ಯಭಾರವನ್ನು ಈ ಆರು ತಿಂಗಳು ತಾನೇ ವಹಿಸಿಕೊಂಡದ್ದರಿಂದ ಬಿಜ್ಜಳನಿಗೆ ಬಹಳ ಶ್ರಮವಾಗಿತ್ತು. ಬಲದೇವರಸನ ಸ್ಥಾನಕ್ಕೆ ಬಸವೇಶನೇ ಯೋಗ್ಯನೆಂದು ಅವನ ಮನೋದೇವತೆಯ ನಿರ್ಣಯ ವಾಗಿತ್ತು. ಆದರೆ ಪ್ರಮುಖರ ಅನುಮತಿ ಪಡೆಯದೆ ದುಡುಕುವದು ಅವನ ಸ್ವಭಾವವಾಗಿರಲಿಲ್ಲ. ತಾತ್ಕಾಲಿಕವಾಗಿ ಬಸವೇಶನನ್ನು ಕರಣಿಕನ ಬದ ಲಾಗಿ ಸಮ್ಮುಖದ ಕಾರ್ಯದರ್ಶಿಯೆಂಬ ಹೊಸ ಹೆಚ್ಚಿನ ಪದಾಧಿಕಾರಕ್ಕೆ ನೇಮಿಸಿದ ಆಜ್ಞೆಯನ್ನು ಪ್ರಕಟಿಸಿ ಕೆಲವು ಹೊಣೆಗಳನ್ನು ಅವನಿಗೆ ವಹಿಸಿ ಕೊಟ್ಟನು. ಇದರಿಂದ, ಹಿರಿಯನಾದ ತನಗೇ ಮಹಾಮಂತ್ರಿಪದವು ದೊರೆ ಯುವದೆಂದು ಕಾದಿದ್ದ ಮಂಚಣ್ಣನಿಗೆ ಅಸಮಾಧಾನವಾಯಿತು. ಆದರೆ ರಾಜ್ಯಭಂಡಾರದ ಆಡಳಿತದೋಷವು ಮುಚ್ಚಿಕೊಳ್ಳುವದು ಅವನಿಗೆ ಮೊದಲು ಬೇಕಾಗಿತ್ತಾದ್ದರಿಂದ ಬಹಿರಂಗವಾಗಿ ಪ್ರತಿಭಟಿಸುವಂತಿರಲಿಲ್ಲ. ತನ್ನ ಕರ್ತವ್ಯಶಿಥಿಲತೆಯ ಅರಿವಿನಿಂದ ಅವನ ಆತ್ಮಬಲವೂ ಕುಗ್ಗಿದಂತಾಗಿತ್ತು.

ಮುಂದಿನ ತಿಂಗಳಲ್ಲಿ ಮಹಾಮಂಡಲೇಶ್ವರರ ಅಧ್ಯಕ್ಷತೆಯಲ್ಲಿ ಆರ್ಥಿಕ ಯೋಜನಾ ಪರಿಷತ್ತು ಕರೆಯಲ್ಪಟ್ಟಿತು. ಮಂತ್ರಿಗಳಲ್ಲದೆ ಎಲ್ಲ ಭಾಗಗಳ

ಮಂಡಲಾಧಿಪತಿಗಳೂ ಸಾಮಂತರೂ ಬರಮಾಡಿಕೊಳ್ಳಲ್ಪಟ್ಟಿದ್ದರು. ಬಸವಣ್ಣನು ತಾನು ಮಂಡಿಸಲಿರುವ ಆರ್ಥಿಕ ಯೋಜನೆಯ ರೂಪರೇಷೆಗಳನ್ನು ತಯಾರಿಸಿಕೊಂಡು ತಾತ್ಕಾಲದಲ್ಲಿ ತನ್ನ ಸಹಜವಾಣಿಯಿಂದ ಅಗತ್ಯದ ವಿವರಣೆಗಳನ್ನು ಒದಗಿಸಲು ಸಿದ್ಧನಾದನು.

ಆತನು ಸಭೆಯಲ್ಲಿ ಅರ್ಥಶಾಸ್ತ್ರದ ನಿಯಮಗಳು ಪೌರಾಣಿಕ ಕಾಲದಲ್ಲಿ ಉಗಮವಾಗಿ ಐತಿಹಾಸಿಕ ಕಾಲದಲ್ಲಿ ಹೇಗೆ ವೃದ್ಧಿಯಾಗುತ್ತ ಬಂದವೆಂಬದನ್ನು ಆರಂಭಮಾಡಿ, ಆಯಾಕಾಲದಲ್ಲಿ ರಾಜ್ಯದ ಅರ್ಥವ್ಯವಸ್ಥೆಗೆ ಆಧರಿಸಿದ ಮೂಲತತ್ವಗಳನ್ನು ಹೇಳಿದನು. ನಾನೂರು ವರ್ಷಗಳ ಹಿಂದಿನ ಬಾದಾಮಿಯ ಚಾಲುಕ್ಯರು, ಪಲ್ಲವರು, ಆ ಬಳಿಕ ರಾಷ್ಟ್ರಕೂಟರು, ಚೋಳರು, ಹೊಯ್ಸಳರು ಆ ವ್ಯವಸ್ಥೆಯಲ್ಲಿ ಗುಣದೋಷಗಳನ್ನು ಅನುಸರಿಸಿ ಮಾರ್ಪಾಡು ಮಾಡುತ್ತ ಬಂದುದನ್ನೂ ಅದರ ಅವಶ್ಯಕತೆಯನ್ನೂ ವಿವರಿಸಿದನು. ಬಳಿಕ ಇವೆಲ್ಲವುಗಳ ಮೇಲಿಂದ 'ಈಗಿರಬೇಕಾದ ಆರ್ಥಿಕ ವ್ಯವಸ್ಥೆಯು ಆದಷ್ಟು ಮಟ್ಟಿಗೆ ದೋಷಮುಕ್ತವಾಗಿರುವಂತೆ ಹೀಗೆ ಇರಬೇಕು' ಎಂದು ಬಿಜ್ಜಳರಾಯನ ಸಲಹೆಯಂತೆ ಸಂಪಡಿಸಿದ ತನ್ನ ಹೊಸಯೋಜನೆಯನ್ನು ಸಭೆಯಲ್ಲಿ ಓದಿ ಮಂಡಿಸಿದನು.

'ಬಸವಣ್ಣನೆಂದರೆ ಗುರುಕುಲದ ನಿನ್ನೆ ಮೊನ್ನಿನ ಒಬ್ಬ ವಿದ್ಯಾರ್ಥಿ, ಚಪಲತೆಯಿಂದ ಸರ್ವಾಧಿಕಾರಿಗಳ ಮನಸ್ಸನ್ನು ಸೆಳೆದಿದ್ದಾನು ! ಇವನೇನು ಮಹಾ ಅರ್ಥಶಾಸ್ತ್ರಜ್ಞ ?' ಎಂದು ಹಲವು ಹಿರಿಯ ಅಧಿಕಾರಿಗಳು ಉದಾಸೀನತೆಯಿಂದ ಸಭೆಯಲ್ಲಿ ಭಾಗವಹಿಸಿದ್ದರು. ಆದರೆ ಬಸವಣ್ಣನ ಜ್ಞಾನಶಕ್ತಿ, ವಿಷಯ ನಿರೂಪಣೆಯ ವ್ಯವಸ್ಥಿತ ಕ್ರಮ, ವಾಕ್ ಪ್ರೌಢಿಮೆಗಳನ್ನು ಪ್ರತ್ಯಕ್ಷವಾಗಿ ಕಂಡು ಕೇಳಿ ಚಕಿತರಾಗಿ ಅವರು ಮೂಗಿನ ಮೇಲೆ ಬೆರಳಿಟ್ಟು ಮೌನವಾಗಿ ಬಿಟ್ಟರು. ಇವನೇನು ಬೃಹಸ್ಪತಿಯೋ ಆರ್ಯಚಾಣಕ್ಯನೋ ಎನಿಸಿಬಿಟ್ಟಿತವರಿಗೆ ! ಉದಾಸೀನರು ಉತ್ಸಾಹಿಗಳಾದರು, ಮತ್ಸರಿಸುವವರು ಮೂಕರಾದರು. ಹಲವರು ಹೊಸ ಯೋಜನೆಯನ್ನು ಪುರಸ್ಕರಿಸಿದರು. ಬನವಾಸಿ ಸಿಂಧನಾಡುಗಳ ಅರ್ಥಶಾಸ್ತ್ರಪಂಡಿತರು ಮೆಚ್ಚಿ ಮನವಾರೆ ಮಾತನಾಡಿದರು. ಪ್ರತಿಸೂಚನೆಯಿಲ್ಲದೆ ಕೆಲವು ಪೂರಕ ಸೂಚನೆಗಳೊಡನೆ ಯೋಜನೆಯು ಸಂತೋಷದ ಮಧ್ಯದಲ್ಲಿ ಸಭೆಯ ಒಪ್ಪಿಗೆ ಪಡೆಯಿತು.

ಹೊಸ ಅರ್ಥಯೋಜನೆಯ ಮುಖ್ಯಾಂಶಗಳು: ಮಂಡಲದಲ್ಲಿಯ ರಾಜ್ಯಾದಾಯದ ಹಾಗು ವಿನಿಯೋಗದ ವ್ಯವಹಾರವು ಅದರ ಮುಖ್ಯ ಸ್ಥಳದಿಂದಲೆ, 'ಆರ್ಥಿಕ ಕರಣಾಧಿಕಾರಿ' ಎಂಬ ಅಧಿಕಾರಿಯಿಂದ ನಡಿಸಲ್ಪಡಬೇಕು. ಗೊತ್ತುಪಡಿಸಿದ ಆದಾಯ-ವೆಚ್ಚಗಳ ತೂಕವು ತಪ್ಪದಂತೆ ಆತನು ಮಂಡಲದಲ್ಲಿಯ ವಿವಿಧ ಶಾಖೆಗಳ ಆಡಳಿತದಲ್ಲಿ ಸಮನ್ವಯ ಕಾಯ್ದುಕೊಂಡು ಹೋಗಬೇಕು. ಮಂಡಲದ ಆದಾಯದಲ್ಲಿ ಎರಡರಲ್ಲೊಂದು ಪಾಲು ಕೇಂದ್ರಕ್ಕೆ ಸಲ್ಲಬೇಕು. ಕೇಂದ್ರದಲ್ಲಿ ಮಹಾಮಂಡಲೇಶ್ವರರ ಅಧ್ಯಕ್ಷತೆಯಲ್ಲಿ ಒಂದು ಆರ್ಥಿಕ ತಜ್ಞಸಮಿತಿಯಿರಬೇಕು. ಮಂಡಲದ ಕರಣಾಧಿಕಾರಿಗಳು ಅಧ್ಯಕ್ಷ ಬಿಜ್ಜಳರಾಜನಿಗೆ ಅಧೀನರಾಗಿರಬೇಕು. ಸಾಮ್ರಾಜ್ಯದ ರಕ್ಷಣೆಯ ವೆಚ್ಚವು ಕೇಂದ್ರದಿಂದಲೇ ನಡೆಯಬೇಕು.

"ಕೃಷಿಕರು ವರಹಗಳಿಂದ ಇಲ್ಲವೆ ಧಾನ್ಯಗಳ ರೂಪದಿಂದ ತೆರಿಗೆಯನ್ನು ಸಲ್ಲಿಸಬೇಕು. ಕುಶಲ ಕಸಬುದಾರರು ತಮ್ಮ ಉತ್ಪಾದನೆಯ ಒಡವೆಗಳನ್ನೇ ಪ್ರಮಾಣಕ್ಕನುಸರಿಸಿ ಕರವಾಗಿ ಕೊಡಬಹುದು. ವ್ಯವಹಾರಸ್ಥರು ಮಾತ್ರ ವರಹಗಳಲ್ಲಿಯೇ ಕರ ಕೊಡಬೇಕು. ದೇವಸ್ಥಾನ-ಮಠ-ವಿದ್ಯಾಸಂಸ್ಥೆಗಳಿಗೂ, ಚಾವಡಿಗಳಿಗೂ, ಶ್ರಮಜೀವನದ ರಾಜ್ಯದ ಕೆಲಸಗಾರರಿಗೂ ಆದಾಯವಾದ ವಸ್ತುಗಳ ಇಲ್ಲವೆ ಧಾನ್ಯಗಳ ರೂಪದಲ್ಲಿ ಧನ ದೊರೆಯಬೇಕು. ಆ ವಸ್ತುಗಳು ತೆರುವವರಿಂದ ಪಡೆಯುವವರಿಗೆ ಗ್ರಾಮಗಳಲ್ಲಿ ಕೋಠಿಗಳ ಮುಖಾಂತರವೇ ದೊರೆತು ಸಲ್ಲಿಕೆಪತ್ರಗಳು ಲೆಕ್ಕದ ವಿವರಗಳು ಮಾತ್ರ ಕರಣಾಧಿಕಾರಿಗೆ ಬರಬೇಕು. ಗ್ರಾಮ ಪ್ರಮುಖರಿಂದ ಅಲ್ಲಲ್ಲಿಯ ವ್ಯವಸ್ಥೆ ನಡೆಯಬೇಕು. ಕೇಂದ್ರಕ್ಕೆ ಸಂದಾಯವಾಗುವ ಹಣವು ಮಂಡಲದಿಂದ ಭಟರ ರಕ್ಷಣೆಯಲ್ಲಿ ಹೋಗಬೇಕು ಅಥವಾ ಆಯಾಭಾಗದಲ್ಲಿ ಸೈನ್ಯವಿದ್ದರೆ ಕೇಂದ್ರಾಧ್ಯಕ್ಷರ ಅಪ್ಪಣೆಯಂತೆ ತಕ್ಕಷ್ಟು ಹಣವು ಅಲ್ಲಿಯೇ ಸೈನ್ಯಶಾಖೆಗೆ ಮುಟ್ಟಬೇಕು. ಪ್ರತ್ಯಕ್ಷ ಹಣದ ಸ್ಥಾನಾಂತರವಾಗುವ ಪ್ರಸಂಗ ಕಡಿಮೆಯಾಗಿ ಅಪಹಾರದ ಭೀತಿ ಬದಿಗಾಗಬೇಕು. ಕರಣಾಧಿಕಾರಿಗಳು ವಾರ್ಷಿಕ ಯೋಜನೆಯನ್ನೂ, ವರ್ಷಾಂತ್ಯದಲ್ಲಿ ಲೆಕ್ಕಪತ್ರಗಳನ್ನೂ ಅರ್ಥಾಧ್ಯಕ್ಷರ ಕಡೆಗೆ ಕಳುಹಿ ಆರ್ಥಿಕ ತಜ್ಞಸಮಿತಿಯ ಒಪ್ಪಿಗೆಯನ್ನು ಪಡೆಯಬೇಕು.

ಶ್ರೀಮಂತರ ಧನಸಂಗ್ರಹವನ್ನು ನಿಯಂತ್ರಿಸುವದಕ್ಕಾಗಿ ಅವರಿಂದ 'ಅಂಕೆಯ ಸಲ್ಲಿಕೆ' ಎಂಬ ತೆರಿಗೆಯನ್ನೂ ವಿಲಾಸೋಪಭೋಗದ ವಸ್ತುಗಳ 'ಉಂಡಿಗೆ' ಎಂಬ ತೆರಿಗೆಯನ್ನೂ ಪಡೆದು ಆ ಹಣವನ್ನು ದೀನದಲಿತರ ಉನ್ನತಿಯ ಕಾರ್ಯಗಳಿಗೆ, ಬಡವರಲ್ಲಿ ಕುಶಲರಿದ್ದರೆ ಕೈಗಾರಿಕೆ ನಡಿಸುವ ಮೂಲಧನದ ಸಹಾಯಕ್ಕೆ, ಕುಶಲರಲ್ಲದ ಶ್ರಮಜೀವಿಗಳು ಬಂಜರು ಭೂಮಿಯನ್ನು ಸಾಗುಮಾಡುವದರ ಸಹಾಯಕ್ಕೆ ಉಪಯೋಗಿಸಬೇಕು. ದೇವಸ್ಥಾನಗಳಿಗೆ ಬಂದ ಕಾಣಿಕೆಯನ್ನು ಪ್ರತ್ಯೇಕವಾಗಿಟ್ಟು ಪ್ರವಾಸಿಕರ ಅನುಕೂಲತೆಗೆ ವೆಚ್ಚಮಾಡಬೇಕು. ವರಮಾನ ಪಡೆಯುವ ಮಠಗಳು ಅಗ್ರಹಾರಗಳು ವಿದ್ಯಾಪೀಠಗಳು 'ಕಾರ್ಮಿಕ ವರ್ಗದ ಬಡವರಿಗೆ ವೈದ್ಯಕೀಯ ನೆರವನ್ನೂ ವಿದ್ಯೆಕಲಿಯುವ ಅವರ ಮಕ್ಕಳಿಗೆ ಉಚಿತ ಭೋಜನದೊಡನೆ ಶಿಕ್ಷಣವನ್ನೂ ಕೊಡಲೇಬೇಕು' ಎಂಬ ನಿರ್ಬಂಧವನ್ನು ಹೊಂದಿರಬೇಕು. ಈ ಮುಂತಾದ ಕಾರ್ಯಗಳು ಪ್ರಾಮಾಣಿಕವಾಗಿ, ಪ್ರಯೋಜನಕರವಾಗಿ ಪಕ್ಷಪಾತರಹಿತವಾಗಿ ನೆರವೇರುತ್ತಿರುವೆಂಬದನ್ನು ಅರ್ಥಾಧ್ಯಕ್ಷರು ಬೇಹುಗಾರರ ಮೂಲಕವಾಗಿ, ಬೇರೆ ರಹಸ್ಯವರದಿಗಳಿಂದ ಮನಗಾಣುತ್ತಿರಬೇಕು.

ತಜ್ಞಮಂಡಲ ಮತ್ತು ಕರಣಾಧಿಕಾರಿಗಳನ್ನು ನೇಮಿಸುವದಕ್ಕೆ ಮತ್ತು ಇಡಿಯಾಗಿ ಯೋಜನೆಯನ್ನು ಕಾರ್ಯಗತಗೊಳಿಸುವದಕ್ಕೆ ಬಿಜ್ಜಳರಾಜರನ್ನು ಕೇಳಿಕೊಳ್ಳುವ ಮಧುವರಸರ ಸೂಚನೆಯನ್ನು ಸಭೆಯು ಕರತಾಡನದೊಡನೆ ಸ್ವೀಕರಿಸಿತು. ಬಿಜ್ಜಳನು ಕಾರ್ಯಗತಗೊಳಿಸುವ ವಿಶ್ವಾಸವನ್ನಿತ್ತು ಹೇಳಿದ ಮುಕ್ತಾಯದ ಮಾತುಗಳೊಂದಿಗೆ ಸಭೆಯು ಕಾರ್ಯ ಮುಗಿಯಿತು.

ಮಂಚಣ್ಣನಾಯಕನು ಒಂದೆರಡು ಸಲ ಸಂದೇಹಗಳನ್ನು ಎತ್ತಿದಾಗ ಸಭಿಕರಿಂದ ಅವು ಉಪೇಕ್ಷಿಸಲ್ಪಟ್ಟಿದ್ದವಾದ್ದರಿಂದ ಮುಂದೆ ಮೌನವಾಗಿ ಕುಳಿತು ಮೌನವಾಗಿಯೇ ಮನೆಗೆ ಹೋದನು. ಪ್ರಭು ಬಿಜ್ಜಳನೂ ಮಧುವರಸನೂ ಬಸವೇಶನ ಬುದ್ಧಿಯ ಬೆಳಕಿಗೆ ಸಂತೋಷಿಸಿ ಮಾತನಾಡುತ್ತ ಸಭಾಮಂದಿರದಿಂದ ಹೊರಗೆ ಬಂದರು.

ಹೊಸಯೋಜನೆಯನ್ನು ಬಳಕೆಯಲ್ಲಿ ತಂದು ನೆಲೆಗೊಳಿಸುವ ಭಾರವು ಸಮ್ಮುಖದ ಕಾರ್ಯದರ್ಶಿ ಬಸವೇಶನ ಮೇಲೆಯೇ ಬಿದ್ದಿತು. ಮಂತ್ರಿಗಿಂತ

ಹೆಚ್ಚಿನ ಹೊಣೆ, ಮತ್ತು ಕಾರ್ಯಬಾಹುಲ್ಯ ! ಆದರೂ ಆತನು ತನ್ನ ಮನೆದೆಣಿಕೆಯ ಸಮಾಜಹಿತದ ಸಾಧನೆಯ ಉದ್ದೇಶದಿಂದ ಅದರಲ್ಲಿ ಶಕ್ತಿಮೀರಿ ಶ್ರಮಿಸಿದನು. ಎರಡು ವರ್ಷ ಕಳೆಯುವದರೊಳಗಾಗಿ ರಾಜ್ಯದಲ್ಲೆಲ್ಲ ಹೊಸ ವ್ಯವಸ್ಥೆ ನೆಲೆಗೊಂಡಿತು. ಪೋತರಸ, ಚಟ್ಟಿಮರಸ, ಸಾವರಸ, ಪದ್ಮರಸ ಮುಂತಾದ ಕರಣಾಧಿಕಾರಿಗಳು ಪ್ರಾಮಾಣಿಕ ಕರ್ತವ್ಯದಿಂದ ಬಸವೇಶನಿಗೆ ನೆರವಾಗಿ ಹೆಸರಿಗೆ ಬಂದರು. ಬಸವೇಶನ ದಕ್ಷತೆ–ನೈಪುಣ್ಯಗಳಿಗೆ ಬಿಜ್ಜಳನು ಪರಮಹರ್ಷಿತನಾಗಿದ್ದನು. ಅವನ ಕೀರ್ತಿಗೌರವಗಳು ಸುತ್ತು ಪಸರಿಸಿದವು. ಮಂತ್ರಿಯಲ್ಲದಿದ್ದರೂ ಮಂತ್ರಿಯ ಮಾನಮರ್ಯಾದೆಗಳು ಬೇಡವೆಂದರೂ ಬೆನ್ನಟ್ಟಿ ಬಂದವು.

---

೭. ವಿಕಾಸ ಮತ್ತು ಉನ್ನತಿ

ಪ್ರೇಮಾರ್ಪಣೆ

'ಉದಯಾಸ್ತಮಾನವೆನ್ನ ಬೆಂದ ಬಸುರಿಂಗೆ ಕುದಿಯಲಲ್ಲದೆ
ನಿಮ್ಮ ನೆನೆಯಲು ತೆರಹಿಲ್ಲವಯ್ಯಾ !
ಎಂತೊ ಲಿಂಗ ತಂದೆ ? ಎಂತಯ್ಯ ಎನ್ನ ಪೂರ್ವ ಲಿಖಿತ ?
ಬೆರಣೆಯನಾಯಲಲ್ಲದೆ ಅಟ್ಟುಣ್ಣಲು ತೆರಹಿಲ್ಲವಯ್ಯಾ !
ನೀ ಕರುಣಿಸು ಕೂಡಲಸಂಗಮದೇವಾ.

ಬೆಳಗಿನಿಂದ ಸ್ನಾನ ಶಿವಾರ್ಚನೆಗಳಿಲ್ಲದೆ ಹದಿನೈದು ಗಾವುದ ಪ್ರಯಾಣ ಮಾಡಿ ಬಂದ ಬಸವೇಶ ತನ್ನ ವಿಶ್ರಾಂತಿಗೃಹದಲ್ಲಿ ಮೈಮೇಲಿನ ಬಟ್ಟೆಗಳನ್ನು ಬಿಚ್ಚುತ್ತ ಹೀಗೆ ಚಿಂತಿಸುತ್ತಿದ್ದನು. ಹಗಲಿನ ಮೂರನೆಯ ಪ್ರಹರ ಮುಗಿಯುತ್ತ ಬಂದಿದೆ. ನಿನ್ನೆಯೂ ಲಿಂಗಯ್ಯನನ್ನು ಪೂಜಿಸಿದಾಗ ಕಣ್ಣಾರೆ ನಿಟ್ಟಿಸಿ, ಮನವಾರೆ ಧ್ಯಾನಿಸಿ ನಲಿದಾಡಲು ಸಾಕಷ್ಟು ಸಮಯವಿರಲಿಲ್ಲ. ರಾಜಧಾನಿಗೆ ಅವಸರದಿಂದ ಮರಳಿ ಬರಬೇಕಾದ ರಾಜಕಾರಣ ಉಂಟಾಗಿ ಇನ್ನೆರಡು ದಿವಸಕ್ಕೆ ಬರಬೇಕಾದವನು ಇಂದೇ ಬಂದಿದ್ದನು. ಲಿಂಗಯ್ಯನ ಪೂಜೆಯ, ಸಂಗಯ್ಯನ ಸಂಗದ ಹಂಬಲ ಹಿರಿದಾಗಿ ನಿಂತಿದೆ. ಈಗಲೂ ಅವಸರವೇ ಇರುವದನ್ನು ನೆನಿಸಿ

'ಹೊತ್ತಾರೆ ಎದ್ದು ಶಿವಲಿಂಗದೇವನ
ದೃಷ್ಟಿಯಾರೆ ನೋಡದವನ ಸಂಸಾರವೇನವನ ?
ಬಾಳುವೆಣನ ಬೀಳುವೆಣನ ಸಂಸಾರವೇನವನ ?
ನಡೆವೆಣನ ನುಡಿವೆಣನ ಸಂಸಾರವೇನವನ ?
ಕರ್ತೃ ಕೂಡಲ ಸಂಗಮದೇವಾ'
ನಿಮ್ಮ ತೊತ್ತುಗೆಲಸವ ಮಾಡದವನ ಸಂಸಾರವೇನವನ?

ಎಂದು ವಿಷಾದಿಸುತ್ತಿರುವಾಗ ಪರಿಚಾರಕ ಸೋಮಣ್ಣಾ ಬಾಗಿಲಿಗೆ ಬಂದು 'ಶರಣು' ಮಾಡಿದನು.

ಬಸವೇಶ ಪಯಣಮಾಡಿ ಬಂದು ಮಹಾದ್ವಾರದಲ್ಲಿ ಕುದುರೆ ಇಳಿಯು ವಾಗ ಗಂಗಾಬಿಕೆ ಉಪ್ಪರಿಗೆಯಿಂದಲೇ ನೋಡಿ, ಆತನು ವಾಸಗೃಹಕ್ಕೆ ಬರಲು ಪಾದಕ್ಕೆ ಆಗ್ಗವಣಿಯನಿತ್ತು ಸ್ವಾಗತಿಸುವದು ರೂಢಿಯಾಗಿತ್ತು. ಇಂದು ಹಾಗೆ ಬಂದಿರಲಿಲ್ಲ. ಒಳಗೆ ಬಂದಮೇಲೆ ಸೋಮಣ್ಣನೇ ಮೊದಲು ಕಾಣಿಸಿಕೊಂಡವನು. ಅವನಿಗೆ ಪ್ರತಿಯಾಗಿ ಶರಣೆಂದು ಕೈಮುಗಿದ ಬಸವಣ್ಣ ಕುತೂಹಲದಿಂದ ಆವನ ಮುಖ ನೋಡಿದನು. ಸೋಮಣ್ಣ ಹೇಳಿದನು:

"ಅಯ್ಯನವರು ಇಂದು ಬರುವರೆಂದು ನಾವು ತಿಳಿದಿರಲಿಲ್ಲ. ಮೂರು ದಿನಗಳ ಹಿಂದೆ ಮಹಾರಾಣಿಯವರು ದಯಮಾಡಿಸಿದ್ದರು. ಅಮ್ಮನವರಿಗೂ ಅಕ್ಕನಿಗೂ ತಮ್ಮಲ್ಲಿಗೆ ಬರಲು ಆಗ್ರಹದ ಆಮಂತ್ರಣವಿತ್ತಿದ್ದರು. ಇಂದು ಮೇಣೆ ಕಳಿಸಿ ಕರೆಯಿಸಿಕೊಂಡಿದ್ದಾರೆ, ತಾವು ಬಂದುದನ್ನು ಅಲ್ಲಿಗೆ ಹೇಳಿ ಕಳಿಸುವೆ.

"ಬೇಡಯ್ಯ, ಅವರು ಬರುವಂತೆ ಬರಲಿ; ನಾನೀಗ ಸ್ನಾನ ಮಾಡು ತ್ತೇನೆ."

ಸೋಮಣ್ಣ ಅವಸರದಿಂದ ಒಳಗೆ ಹೋದನು. ಬಸವೇಶನು ಒಡ ನುಡಿದ ಎರಡು ವಚನಗಳನ್ನು ಓಲೆಯಲ್ಲಿ ಬರೆದಿಟ್ಟು ಎದ್ದು ಹೊರಟನು. ಮನಸ್ಸಿಗೆ ಹೇಳುವ ಮತ್ತೊಂದು ನುಡಿಮುತ್ತು ಬಗೆಯಿಂದ ಬೈಲಿಗೆ ಬರಲು ಹಾಡುತ್ತಲೇ ಸ್ನಾನಮಂದಿರಕ್ಕೆ ತೆರಳಿದನು.

'ಸಂಸಾರವೆಂಬುದು ಗಾಳಿಯ ಸೊಡರು;
ಸಿರಿಯೆಂಬುದೊಂದು ಸಂತೆಯ ಮಂದಿ ಕಂಡಯ್ಯಾ!
ಇದ ನೆಚ್ಚಿ ಕೆಡಬೇಡ ಸಿರಿಯೆಂಬುದ.
ಮರೆಯದೆ ಪೂಜಿಸು ನಮ್ಮ ಕೂಡಲಸಂಗಮದೇವನ.

ಲಿಂಗಾರ್ಚನೆಯನೆಸಗಿ ಹಾಲು-ಹಣ್ಣುಗಳ ಪ್ರಸಾದ ಸೇವಿಸಿ ರಾಜಾಧ್ಯಕ್ಷ ಚಾವಡಿಗೆ ಹೊರಟನು.

* * * * *

ಪ್ರೌಢೆಯಾದ ನೀಲಲೋಚನೆಯ ಮದುವೆಯನ್ನು ಬಿಜ್ಜಳನು ತನ್ನ ಆಕಾಂಕ್ಷೆಯಂತೆ ಒಬ್ಬ ಸಾಮಂತಪುತ್ರನೊಡನೆ ಮಾಡಬೇಕಾಗಿತ್ತು. ಆದರೆ ಆತನು ಹಾಗೆ ಸೂಚಿಸಿದ ಎರಡು ವರಗಳನ್ನು ನೀಲಾಂಬೆಯು ಅಸಮ್ಮತಿ

ಸಿದಳು. ಇದರಿಂದಾತನು ವಿವಂಚನೆಗೊಳಗಾಗಿದ್ದನು. ನೀಲಾಂಬೆಯು ನೆನಹು ಬೇರೆಯೇ ಆಗಿತ್ತು. ಹಲವು ಸಂದರ್ಭಗಳಲ್ಲಿ ತಾನು ಕಂಡ ಬಸವೇಶನ ಆದರ್ಶವರ್ತನೆಗಳನ್ನು ನೀಲಾಂಬೆ ಅರಮನೆಯಲ್ಲಿ ಅಭಿಮಾನಿಯಂತೆ ವರ್ಣಿಸಿ ಹೇಳುತ್ತಿದ್ದಳು. ರಾಜ-ರಾಣಿಯರ ಮಾತುಗಳಲ್ಲಿ ಬಸವೇಶನ ಮಾತು ಬಂದರೆ ತಾನೂ ಸೇರಿ ಮಾತನಾಡುತ್ತಿದ್ದಳು. ಇತ್ತೀಚೆಗೆ ಅದನ್ನು ಕಡಿಮೆಮಾಡಿ ಕೋಣೆಯಲ್ಲಿ ಕುಳಿತು ಬಸವಣ್ಣನ ವಚನಗಳ ಕಟ್ಟನ್ನು ಮುಂದಿಟ್ಟುಕೊಂಡು ಓದುವದರಲ್ಲಿಯೂ ಬಸವಣ್ಣನ ಮೂರ್ತಿಯನ್ನು ಮೌನವಾಗಿ ಧ್ಯಾನಿಸುವದರಲ್ಲಿಯೂ ಕಾಲಕಳೆಯುತ್ತಿದ್ದಳು. ತನ್ನ ಮಾನಸ ಸಮುದ್ರದ ತಳದಲ್ಲಿರುವ ಆಲೋಲಕಲ್ಲೋಲವನ್ನು ಬಾಯಿಬಿಚ್ಚಿ ಹೇಳಲು ಅಸಮರ್ಥಳಾಗಿದ್ದಳು. ಅವಳ ಆಗಿನ ಈಗಿನ ವರ್ತನೆಯು ಹಿಂದಿರುವ ಭಾವನೆಯನ್ನು ರಾಣಿ ಅರಿಯದಿರಲಿಲ್ಲ. ಹೆಣ್ಣಿನ ದುಃಖ ಹೆಣ್ಣಿಗೇ ಗೊತ್ತು! ಸಮಯೋಚಿತವಾಗಿ ತನ್ನ ಅನುಮಾನವನ್ನು ರಾಜನಿಗೆ ತಿಳಿಸಿದಳು. ಆದರೆ 'ಅದು ಹೇಗೆ ಸಾಧ್ಯ?' ಎಂದು ಬಿಜ್ಜಳನು ಚಿಂತಿಸಿದನು.

'ಬಾಹ್ಯಾಂತರಂಗಗಳಲ್ಲಿ ಭರದಿಂದ ಬೆಳೆಯುತ್ತಿರುವ ವ್ಯಕ್ತಿತ್ವದ ಬಸವೇಶನು ಯೋಗ್ಯತೆಯಲ್ಲಿ ಸಾಮಂತರಾಜಪುತ್ರರಿಗಿಂತ ಕಡಿಮೆಯವನಲ್ಲ; ನಿಜ. ಆದರೆ ಆತನು ವೀರವ್ರತಿ! ಆದರ್ಶಜೀವಿ! ಇನ್ನು ಗಂಗಾಂಬಿಕೆ ಬೇರೆಯೇ? ಅಪ್ತಮಂತ್ರಿ ಬಲದೇವನ ಮಗಳು. ಅರಮನೆಯಲ್ಲಿ ಬೆಳೆದುದನ್ನು ಬಿಟ್ಟರೆ ನನಗೆ ನೀಲಾಂಬೆಯೂ ಅವಳೂ ಸಮಾನರು!........"

ಬಿಜ್ಜಳನ ಅಧಿಕಾರವೂ ಬುದ್ಧಿ ಸಾಮರ್ಥ್ಯಗಳೂ ಈ ಸಮಸ್ಯೆಯ ಪರಿಹಾರದಲ್ಲಿ ಅಸಮರ್ಥವಾದವು.

ಮಹಾರಾಣಿ ತನಗೆ ಹೊಳೆದಂತೆ ಪ್ರಬುದ್ಧಳಾದ ಅಕ್ಕನಾಗಮ್ಮನೊಡನೆ ಆಲೋಚಿಸುವದರಿಂದ ಮಾರ್ಗವೇನಾದರೂ ದೊರೆತೀತೆಂಬ ಆಸೆಯಿಂದ ಮಹಮನೆಗೆ ಬಂದು ನಾಗಲಾಂಬೆಯನ್ನು ಕಂಡಿದ್ದಳು. ನೀಲಲೋಚನೆಯನ್ನು ಕಂಡು ಮಾತನಾಡುವದಕ್ಕಾಗಿ ನಾಗಲಾಂಬೆಯನ್ನೂ ಗಂಗಾಂಬಿಕೆಯನ್ನೂ ಅರಮನೆಗೆ ಬರಮಾಡಿಕೊಂಡಿದ್ದಳು.

ರಾಣಿಯು ಅವರಿಬ್ಬರನ್ನು ನೀಲಲೋಚನೆಯ ಕೋಣೆಗೆ ಕರೆದುಕೊಂಡು ಹೋದಾಗ ನೀಲಲೋಚನೆಯು—

'ತನು ನಿಮ್ಮದೆಂದ ಬಳಿಕ ಎನಗೆ ಬೇರೆ ತನುವಿಲ್ಲ;
ಮನ ನಿಮ್ಮದೆಂದ ಬಳಿಕ ಎನಗೆ ಬೇರೆ ಮನವಿಲ್ಲ;
ಧನ ನಿಮ್ಮದೆಂದ ಬಳಿಕ ಎನಗೆ ಬೇರೆ ಧನವಿಲ್ಲ.
ಇಂತೀ ತ್ರಿವಿಧವೂ ನಿಮ್ಮದೆಂದರಿದ ಬಳಿಕ,
ಎನಗೆ ಬೇರೆ ವಿಚಾರವುಂಟೇ ? ಕೂಡಲಸಂಗಮದೇವಾ.

ಎಂದು ಕ್ಷೀಣಸ್ವರದಲ್ಲಿ ಸುಂದರವಾಗಿ ಹಾಡುತ್ತಿದ್ದಳು. ಅದನ್ನು ಕೇಳಿ ಈ ಮೂವರು ಬಾಗಿಲಲ್ಲಿ ಮರೆಯಲ್ಲಿ ನಿಂತು, ಹಾಡು ಮುಗಿದ ಮೇಲೆ ಒಳಗೆ ಹೋದರು. ನೀಲಾಂಬೆ ಎದ್ದು ಮೂವರಿಗೂ ನಮಿಸಿದಳು. ನಾಗಲಾಂಬೆ ಅವಳ ಕೈಹಿಡಿದು ಅವಳ ಹಾಸಿಗೆಯ ಮೇಲೆಯೇ ಕುಳಿತಳು. ರಾಣಿ, ಗಂಗಾಂಬಿಕೆಯನ್ನು ಕೂಡ್ರಿಸಿ ತಾನೂ ಕುಳಿತಳು. ಲೋಕಾಭಿರಾಮವಾಗಿ ಸ್ವಲ್ಪ ಹೊತ್ತು ಮಾತಾಡಿದ ಮೇಲೆ ಗಂಗಾಂಬಿಕೆಯೊಡನೆ ರಾಣಿ ಹೊರಗೆ ಹೋದಳು. ನಾಗಲಾಂಬೆ ಬಹಳ ಹೊತ್ತು ಮಾತನಾಡಿ ನೀಲಲೋಚನೆಯ ಮನದ ಆಸೆಯನ್ನೂ ಅಳಲನ್ನೂ ತಿಳಿದಳು. ಆದರೆ ಅದನ್ನು ಬಿಡಿಸಿ ಬೇರೆ ಮಾರ್ಗದಲ್ಲಿ ಸುಖ ಕಾಣುವ ಆಸೆಯನ್ನು ಹುಟ್ಟಿಸಲು ಅಸಮರ್ಥಳಾದಳು.

ಪಂಡಿತ ವಾಮಶಕ್ತಿ-ಸದ್ಭಕ್ತ ಹರಳಯ್ಯ

ನಾಗಲಾಂಬೆ-ಗಂಗಾಂಬಿಕೆಯರು ಅರಮನೆಯಿಂದ ಮರಳಿ ಬಂದಮೇಲೆ ಬಸವೇಶ ಬಂದುದನ್ನು ತಿಳಿದು ಆತುರದಿಂದ ಸಂಜೆಯ ಶಿವಾರ್ಚನೆ-ಪ್ರಸಾದಗಳ ಸಿದ್ಧತೆ ನಡಿಸಿದರು. ಸಂಜೆಯ ಹೊತ್ತಿಗೆ ಓಲಗದ ಚಾವಡಿಯಿಂದ ಬಸವೇಶ ಬಂದೊಡನೆ, ಅವನ ದಾರಿಯನ್ನೇ ನೋಡುತ್ತ ನಿಂತಿದ್ದ ನಾಗಮ್ಮ ಮೊದಲು ಅವನ ಪ್ರಯಾಣದಲ್ಲಿಯ ಕ್ಷೇಮವನ್ನು ವಿಚಾರಿಸಿದಳು. ಅಷ್ಟರಲ್ಲಿ ದೀಪ ಹತ್ತಿದ ಸಂಜ್ಞೆ ತಿಳಿದು ಕೂಡಲೆ ಶಿವಾನುಭವಗೋಷ್ಠಿಮಂಟಪಕ್ಕೆ ನಡೆದರು. ಪ್ರಾರ್ಥನೆ ಪ್ರವಚನ ಮುಗಿದು ಮುಂದೆ ಸ್ನಾನ-ಶಿವಾರ್ಚನೆ ಜರುಗಿ ಪ್ರಸಾದ ಸೇವಿಸಿ ನಡುಮನೆಯಲ್ಲಿ ಮೂವರೂ ಮಾತನಾಡುತ್ತ ಕುಳಿತರು. ಬಸವೇಶ ಪ್ರಯಾಣದಲ್ಲಿಯ ವಿಶೇಷಗಳನ್ನು ವರ್ಣಿಸುತ್ತಿದ್ದನು.

"ಚೆನ್ನಬಸವಣ್ಣನನ್ನು ನೋಡುವದಕ್ಕೆಂದೇ ಬಳ್ಳೀಗಾಂವಿಗೆ ಹೋಗಲಿಲ್ಲ ; ರಾಜಕಿಕಕಾರ್ಯಾವಶ್ಯಕತೆಯೂ ಇತ್ತು. ಬನವಾಸಿಗೆ ಹೋಗಿದ್ದ ಮೇಲೆ ಬಳ್ಳೀಗಾಂವಿ ಒಂದೇ ದಿನದ ದಾರಿ !"

"ಏನೇ ಆಗಲಿ ನಿನ್ನ ಅಳಿಯ ಪುಣ್ಯವಂತನಪ್ಪ "

"ನಿಜವಾಗಿಯೂ ಹೌದು ! ಶಾಸ್ತ್ರಾರ್ಥ ಮಾಡುವದರಲ್ಲಿ ಆತನು ಈಗಲೇ ಮುಂದುವರಿದಿದ್ದಾನೆ. ಟೀಕೆ-ಟಿಪ್ಪಣಿ-ಪ್ರಬಂಧಗಳನ್ನು ಬರೆಯುತ್ತಿದ್ದಾನೆ. ವಿದ್ಯಾಭರಣ ಪಂಡಿತರು ಬಹಳ ಪ್ರಶಂಸಿಸಿದರು ಅವನನ್ನು !"

"ಅಲ್ಲಿ ಪಾಠ ಪ್ರವಚನ ಬಹಳ ಚೆನ್ನಾಗಿ ನಡೆಯುತ್ತಿರಬಹುದು."

"ಹೌದು. ಆದರೆ ಹತ್ತು ವರುಷಗಳ ಹಿಂದೆ ವಾಮಶಕ್ತಿ ಪಂಡಿತರಿದ್ದಾಗ ವಿದ್ಯಾಪೀಠದ ಸ್ಥಿತಿಯು ಇನ್ನೂ ಬಹಳ ಚೆನ್ನಾಗಿತ್ತಂತೆ ! ಈಗ ಅಂತಹ ವಿದ್ವಾಂಸರೇ ಇಲ್ಲವೆಂದು ವಿದ್ಯಾಭರಣರೇ ಹೇಳುತ್ತಾರೆ. ಅವರು ಸ್ವತಃ ತೀರ ವೃದ್ಧರಾಗಿದ್ದಾರೆ "

"ವಾಮಶಕ್ತಿಗಳ ವಚನಗಳೆಂದು ಸಂಗಮಕ್ಕೆ ಬರುತ್ತಿದ್ದವು. ಆ ವಾಮಶಕ್ತಿಗಳೇನು ?"

"ಹೌದು ಅವರೇ ! ಆ ಪಂಡಿತರು ಉಪನಿಷದಾಗಮಗಳಿಗೆ, ಬ್ರಹ್ಮಸೂತ್ರಗಳಿಗೆ ವ್ಯಾಖ್ಯಾನಗಳನ್ನೂ ಟಿಪ್ಪಣಿಗಳನ್ನೂ ಬರೆದಿದ್ದಾರೆ ಆ ಮೇಲೆ ಅವುಗಳನ್ನು ಮೀರಿದ ಪರಮಾನುಭಾವ-ಸ್ವರೂಪ ದರ್ಶನಗಳ-ವಚನಗಳನ್ನು ಅಗಣಿತವಾಗಿ ಬರೆದಿದ್ದಾರೆ. ಅವರು ರಚಿಸಿದ ತಾಡವೋಲೇ ಗ್ರಂಥಗಳು ಒಂದು ಅಟ್ಟಣಿಯ ತುಂಬಿವೆ ನಿನ್ನ ಮಗನು ಅವಕ್ಕೂ ಕೈ ಹಚ್ಚಿದ್ದಾನಮ್ಮ!"

"ಅದೂ ನೀವೇ ತೋರಿದ ದಾರಿಯಪ್ಪ !"

ಮೂವರ ಮೊಗದಲ್ಲಿ ಮಿದುನಗೆ ಮೂಡಿತು. ನಾಗಮ್ಮ ತಡೆದು ಮಾತನಾಡಿದಳು :

"ವಾಮಶಕ್ತಿ ಪಂಡಿತರು ಅಲ್ಲಿಂದ ಎಲ್ಲಿಗೆ ಹೋದರು ? ಈಗ ಎಲ್ಲಿ ಇದ್ದಾರಂತೆ ?"

"ಅವರು ಒಮ್ಮಿಂದೊಮ್ಮೆ ಮಾಯವಾಗಿ ಬಿಟ್ಟರಂತೆ ! ಮುಂದೆ ಏನೂ ತಿಳಿಯದಂತಾಗಿದೆ. ಆದರೆ ಆರು ವರ್ಷಗಳನಂತರ ಬನವಾಸಿಯಲ್ಲಿ ಅಲ್ಲಮನೆಂಬ ಹೆಸರಿನಿಂದ ಕಾಣಿಸಿಕೊಂಡು, ಮೃದಂಗವಾದನಕಾರನಾಗಿ ಕದಂಬ ರಾಜಕನ್ಯೆಯನ್ನು ಆಕರ್ಷಿಸಿ, ಕೆಲವು ದಿವಸ ಆಕೆಗೆ ನೃತ್ಯಶಿಕ್ಷಕ

ನಾಗಿದ್ದವನು ವಾಮಶಕ್ತಿಗಳೇ ಎಂದು ಅಲ್ಲಿ ನೋಡಿದ ಕೆಲವರು ಹೇಳುತ್ತಾರೆಂದೂ ವಿದ್ಯಾಭರಣರೇ ಹೇಳಿದರು. ರಾಜಕನ್ಯೆಯು ಪ್ರೇಮಿಸಿದುದನ್ನು ನಿರಾಕರಿಸಿ ಅಲ್ಲಿಂದಲೂ ಹೊರಟು ಹೋದರಂತೆ ! ನಾವು ತಿರುಗಿ ಬನವಾಸಿಗೆ ಹೋಗಿದ್ದರೆ ಆ ಸಂಗತಿಗಳನ್ನು ವಿಚಾರಿಸಬಹುದಾಗಿದ್ದಿತು."

"ಆ ಮೇಲೆ ನೀವು ಎಲ್ಲಿಗೆ ಹೋದಿರಿ."

"ಅಲ್ಲಿಂದ ಸಿಂಧನೂರಿಗೆ ಹೋಗಿ ಸುರಪುರಕ್ಕೆ ಬಂದೆವು. ಇಂದು ಬಂದುದು ಸುರಪುರದಿಂದಲೇ ! ಉಳಿದ ಕಡೆಗಿಂತ ಸುರಪುರದಲ್ಲಿ ದಲಿತವರ್ಗದ ಉನ್ನತಿ ನಡೆದುದು ಎದ್ದು ಕಾಣುತ್ತದೆ. ನನ್ನ ಕಾರ್ಯಕ್ರಮದಂತೆ ಹೊಲಗೇರಿ ಎನಿಸಿ ಊರಹೊರಗಿರುವ ಕೇರಿಯನ್ನು ನೋಡಹೋಗಿದ್ದೆನು. ಅಲ್ಲಿ ಸಂಗಯ್ಯನೇ ಎದುರಿಗೆ ಬಂದನಮ್ಮ ! ಮೊಗದಲ್ಲಿ ಭಸ್ಮತ್ರಿಪುಂಢ್ರ, ಕೊರಳಲ್ಲಿ ರುದ್ರಾಕ್ಷಿಮಾಲೆ, ಹಸನಾದ ಮೈ, ಮಡಿಬಟ್ಟೆ, ಶಿವನ ಕಳೆ, ನಗೆಮುಖ, ನಮ್ರಭಾವ ! ಮುಚ್ಚಿಗ ಕಾಯಕದ ಕರ್ಮಶಾಲೆಯಿಂದ 'ಶರಣು' ಎನ್ನುತ್ತ ಎದ್ದು ಬಂದನು. ನಾನು ಶರಣೆಂದು ಅವನ ಹೆಗಲ ಮೇಲೆ ಕೈಯಿಟ್ಟೆನು. 'ಸ್ವಾಮೀ ನಾನು ಕೀಳು ! ಹೊಲೆಗುಲದವನು' ಎನ್ನುತ್ತಾ ಹಿಂದೆ ಸರಿಯುತ್ತಿದ್ದನು.

> 'ಶ್ರೀ ವಿಭೂತಿ ರುದ್ರಾಕ್ಷಿ ಇದ್ದವರ ಲಿಂಗವೆಂಬೆ, ಇಲ್ಲದವರ ಭವಿಯೆಂಬೆ
> ಕೂಡಲಸಂಗಮದೇವಾ ಸದ್ಭಕ್ತರ ನೀನೆಂಬೆ'

ಎಂದು ನಾನು ನೆನಿಸಿ

> 'ಹೊಲೆಯ ಹೊಲಬಿಗನಾದೊಡೆ
> ಅವನ ಹೊರೆಯಲ್ಲಿಪ್ಪುದು ಲೇಸು ಕಂಡಯ್ಯಾ !'

ಎಂದು ಹೇಳಿ ಅವನ ಎರಡೂ ಕೈ ಹಿಡಿದು ನಿಲ್ಲಿಸಿದೆ. ಅಷ್ಟರಲ್ಲಿ ನನಗೆ 'ಶರಣು' ಎನ್ನುತ್ತ, ಅವನ ಮಗ ಬಾಲಕ ತಂದೆಯ ಹತ್ತಿರ ಬಂದು ನಿಂತನು. ಮುದ್ದು ಮೊಗ ! ಹಾಗೆಯೇ ಭಸ್ಮಭೂಷಿತ ! ಒಂದು ಕೈಯಿಂದ ಬಾಲಕನ ಗದ್ದವನ್ನು ಹಿಡಿದು 'ನಿನ್ನ ಹೆಸರೇನು ?' ಎಂದೆ.

'ಶೀಲವಂತ' ಎಂದ.

'ತಂದೆಯ ಹೆಸರು ?' ಕೇಳಿದೆ.

'ಹರಳಯ್ಯ, ಒಡೆಯರೇ!' ಎಂದು ಮುಖವೆತ್ತಿ ಹೇಳಿದನು. ನನ್ನ ಕೈ ಬಿಡಿಸಿಕೊಂಡು ಕಾಲಿಗೆ ಬೀಳಲು ಯತ್ನಿಸುತ್ತಿದ್ದನು ಹರಳಯ್ಯ! ಗಟ್ಟಿಯಾಗಿ ಹಿಡಿದು ನಿಲ್ಲಿಸಿ ಕುಟುಂಬದ ಹಾಗು ಕಾಯಕದ ವಿವರ ಕೇಳಹತ್ತಿದೆ. ಆವರ ಹಿಂದೆ ಛಪ್ಪರದ ಅಂಚಿನಲ್ಲಿಯೇ ಕೈಮುಗಿದು ನಿಂತಿದ್ದಳು ತಾಯಿ, ಹರಳಯ್ಯನ ಪತ್ನಿ! ಅಲ್ಲಿಯೂ ಶಿವಲಾಂಛನಾಲಂಕಾರ. ಆನಂದ ಮುದ್ರೆ! ಮುಂದೆ ಸಾಗಿ 'ಶರಣು ತಾಯಿ' ಎಂದೆ. ತಟ್ಟನೆ ಆಕೆ ಮಹಿಗೆ ವೃಯಿಕ್ಕಿ ನಮಿಸಿದಳು. ಹರಳಯ್ಯನ ಕಣ್ಣೀರು ಧಾರಾವಾಹಿಯಾಗಿದ್ದವು. ಪಾದರಕ್ಷೆಯು ಮಾಡುವದು ಹರಳಯ್ಯನ ಕಾಯಕ! ಅದರಲ್ಲಿಯೇ ದಾಸೋಹಭಕ್ತಿಯನ್ನು ನಡಿಸುತ್ತಿದ್ದಾನೆ. ಅವನು ತನ್ನ ಕಾಯಕಕ್ಕೆ ಪ್ರಾಕೃತಿಕವಾಗಿ ಸತ್ತ ದನದ ತೊವಲಲ್ಲದೆ ಹಿಂಸೆಗೆಡೆಯಾದ ಚರ್ಮವನ್ನು ಉಪಯೋಗಿಸುತ್ತಿಲ್ಲ. ಇನ್ನು ಇದನ್ನೂ ಬಿಟ್ಟು ಮರದ ಪುಡಿಯಲ್ಲಿ ಒಂದು ಬಗೆಯ ಅರಣ್ಯದ ಅಂಟು ಬೆರಿಸಿ ಅದರಿಂದ ಮಾಡಿದ ಮಿದುವಾದ ಹಲಗೆಗಳಿಂದ ಅಟ್ಟೆಗಳನ್ನು ಮಾಡಿ, ನೂಲಿನ ನವಾರು ಪಟ್ಟಿಗಳನ್ನು ಹಚ್ಚಿ ಮೆಟ್ಟು ಮಾಡುವ ಹೊಸ ಪ್ರಯೋಗ ನಡಿಸಿದ್ದಾನೆ. ಅದನ್ನು ತೋರಿಸಿ ವಿವರಿಸಿದನು. 'ಈ ಹೊಸ ತರದ ಉದ್ದಿಮೆಯನ್ನು ದೊಡ್ಡ ನಗರದಲ್ಲಿ ನಡೆಯಿಸಿದರೆ ಹೆಚ್ಚು ಉತ್ತೇಜನ ಸಿಕ್ಕೀತೆಂ'ದು ಹೇಳಿದೆ. 'ಆಗಲಿ ಬುದ್ಧಿ, ಶಿವನಪ್ಪಣೆ!' ಎಂದು ಹೇಳಿದನು. ನಾವು ಮುಂದೆ ಹೋಗುವಾಗ ಅಲ್ಲಿಯ ನಮ್ಮ ಅಧಿಕಾರಿಗಳು 'ಇವನು ದಿನಾಲು ಸತ್ಯಾನಂದ ಸ್ವಾಮಿಗಳ ಹತ್ತಿರಹೋಗಿ ಅವರ ಬೋಧೆಗಳನ್ನು ಕೇಳುತ್ತಿರುತ್ತಾನೆ' ಎಂದು ಹೇಳಿದರು. ಅವನು ಭಕ್ತಿಪಥವನ್ನು ಹಿಡಿದು ತ್ರಿವಿಧಲಿಂಗಾನುಸಂಧಾನದಿಂದ ಶರಣನಾಗಬಹುದು."

"ಆಗಬಹುದು; ಪೂರ್ವದ ಪುಣ್ಯ, ಅವನಲ್ಲಿ ಸತ್ಸಹವಾಸದ ಆಸಕ್ತಿಯನ್ನು ಹೆಚ್ಚಿಸಿದೆ. ನೀವು ಸುರಪುರದಿಂದ ಒಮ್ಮೆಲೇ ಇಲ್ಲಿಗೇ ಬಂದಿರಾ?"

"ಹೌದು ಮಹಾಮಂಡಲೇಶ್ವರರ ಅವಸರದ ಕರೆ ನಿನ್ನೆಯೇ ನಮಗೆ ತಲುಪಿತು. ಸಂಜೆಗೇ ಹೊರಟು, ರಾತ್ರಿ ನಾಲ್ಕುತಾಸು ಮಾತ್ರ ವಿಶ್ರಾಂತಿ ಪಡೆದು ಮತ್ತೆ ಒಂದೇ ಸವನೆ ಪ್ರಯಾಣಮಾಡಿ ಬಂದೆವು. ನೀವು ಅರಮನೆಗೆ ಹೋಗಿದ್ದಿರಿ. ಏಕೆ ಕರಿಸಿದ್ದರು ರಾಣಿಯವರು?

"ಅದು ನೀಲಲೋಚನೆಯ ವಿಷಯ! ಮದುವೆಗಾಗಿ ಅವಳ ಮನಸ್ಸನ್ನು ತಿಳಿಯಲಾಗವೆ ರಾಜರಾಣಿಯರು ತೊಳಲುತ್ತಿದ್ದಾರೆ. ನೀಲಲೋ

ಚನೆಯಾದರೋ ಕೊರಗಿ ಸೊರಗುತ್ತಿದ್ದಾಳೆ. ಅವಳಿಗೆ ಸಮಾಧಾನವಾಗಲೆಂದು ನಮ್ಮನ್ನು ಬರಮಾಡಿಕೊಂಡಿದ್ದರು ರಾಣಿ !"

"ನೀಲಾಂಬೆಯ ಇಚ್ಛೆಯನ್ನು ನೀನು ಕೇಳಿ ತಿಳಿಯಬಹುದಾಗಿತ್ತಲ್ಲ!"

"ಕೇಳಿದೆ, 'ಲೌಕಿಕದಲ್ಲಿ ಸಿದ್ಧಿಸಲು ಅಸಾಧ್ಯವಾಗಿರುವ ನನ್ನಿಷ್ಟವನ್ನು ನಿಮ್ಮಲ್ಲಿ ತಿಳಿಸಿ ಪ್ರಯೋಜನವೇನು ತಾಯಿ ? ಅದನ್ನು ನೆನಹಾಗಿ ಮನದಲ್ಲಿರಿಸಿಕೊಂಡು, ಅದರಲ್ಲಿಯೇ ಅಂತ್ಯವಾದರೆ ಸಾಕು" ಎಂದು ಸ್ಪಷ್ಟವಾಗಿ ಹೇಳಿಬಿಟ್ಟಳು. ಅವಳ ಅಂತರ್ಯದ ವಿಷಯವೊಂದು ಒಡೆಯಲಾಗದ ಒಗಟಾಗಿದೆ; ಬಿಡಿಸಲಾಗದ ಸಮಸ್ಯೆಯಾಗಿದೆ. ಹಲವು ಮಾತುಗಳ ನಂತರ ನಾನು ಹೊರಡಲು ಎದ್ದಾಗ 'ಅಮ್ಮ, ಒಂದೆರಡು ವಚನಗಳ ವಿವರಣೆಯನ್ನು ಬಸವೇಶ ಮಾವಯ್ಯನಿಂದಲೇ ಪಡೆಯಬೇಕಾಗಿದೆ' ಎಂದು ಪ್ರಶ್ನಾರ್ಥಕವಾಗಿ ಕಣ್ದುಂಬಿ ನನ್ನನ್ನು ನೋಡಿದಳು. 'ಆಗಬಹುದಮ್ಮ ತಿಳಿಸುತ್ತೇನೆ' ಎಂದೆ."

"ನೀನೆ ಅರ್ಥವಿವರಣೆ ಮಾಡಿ ಬರಬಹುದಾಗಿತ್ತಲ್ಲ !"

"ನನಗೆ ಅದು ನೀಗದಿದ್ದರೆ ? ಅವಳ ಅಪೇಕ್ಷೆಯೂ ಹಾಗಿರಲಿಕ್ಕಿಲ್ಲ."

"ಹೌದು ಸ್ವಾಮೀ. ನೀವೇ ನೀಲಾಂಬೆಗೆ ಭೆಟ್ಟಿಯಾಗಿ ಅವಳ ಮನಸ್ಸಿನ ದುಗುಡವನ್ನು ಕಳೆಯಬೇಕು. ನೀವೇ ಆಕೆಯ ಅಳಲಿನ ನೆಲೆಯನ್ನು ತಿಳಿಯಬಲ್ಲಿರಿ."

—ಗಂಗಾಂಬಿಕೆ ನುಡಿದಳು. ಬಸವೇಶ ಆಕೆಯ ಮುಖವನ್ನು ನೋಡಿದನು. ಮುಗ್ಧಲಲನೆಯ ಮಾತಿನಲ್ಲಿ ಸರಳಶುದ್ಧ ಭಾವವಲ್ಲದೆ ಮತ್ತೇನೂ ಅಲ್ಲಿ ಕಾಣಲಿಲ್ಲ.

ಬಸವಣ್ಣನ ಮೊಗದಲ್ಲಿಯೂ ಆ ಸೂಚನೆಯನ್ನು ಸಮ್ಮತಿಸುವ ಯಾವ ಲಕ್ಷಣವೂ ನಾಗಲಾಂಬೆಗೆ ಕಾಣಲಿಲ್ಲ.

ಅಪರಿಚಿತ ಲಿಪಿಯಿಂದ, ಅಪರಿಮಿತ ನಿಧಿ ಪ್ರಾಪ್ತಿ

ತ್ರಿಭುವನಮಲ್ಲ ಒನೆಯ ವಿಕ್ರಮಾದಿತ್ಯ ಮಹಾರಾಜನ ನಾಲ್ಕನೆಯ ರಾಣಿ ಚಂದಲದೇವಿಯು ಕರ್ಹಾಡ ಶಿಲಾಹಾರರಾಜಪುತ್ರಿಯು. ಭಾರತದ ರಾಜರೆಲ್ಲ ನೆರೆದ ಸ್ವಯಂವರ ಮಂಟಪದಲ್ಲಿ ಆಕೆಯು ಈ ಚಾಲುಕ್ಯ ಚಕ್ರವರ್ತಿಯನ್ನು ವರಿಸಿದ್ದಳು. ಆಕೆಯು ಕ್ರಿ. ಶ. ೧೧೧೪ ರಲ್ಲಿ ಕಲ್ಯಾಣದಿಂದ ಒಂದು

ಗಾವುದ (ನಾಲ್ಕುಹರದಾರಿ) ದೂರದಲ್ಲಿ ಚಂದಲಾಪುರವೆಂಬ ಅಗ್ರಹಾರವನ್ನು ಸ್ಥಾಪಿಸಿ, ಅಲ್ಲಿ ವಿಜಯೇಶ್ವರ (ಬಿಜ್ಜೇಶ್ವರ) ದೇವಾಲಯವನ್ನು ಕಟ್ಟಿಸಿದಳು. ಮುಂದೆ ಮೂವತ್ತು ವರ್ಷಗಳ ಬಳಿಕ ಬಿಜ್ಜಳನ ಆಡಳಿತದ ಕಾಲದಲ್ಲಿ, ಅಗ್ರಹಾರದವರು ದೇವಾಲಯದ ಅಂಗಣದಲ್ಲಿ ಮತ್ತೊಂದು ದೀಪಮಾಲೆಯ ಸ್ತಂಭವನ್ನು ನಿರ್ಮಿಸುವದಕ್ಕಾಗಿ ಹಳ್ಳ ತೋಡುತ್ತಿರುವಾಗ ಹಾರಿ,ಗುದ್ದಲಿಗಳಿಗೆ ಹತ್ತಿದ ಒಂದು ಚಪ್ಪಡಿಕಲ್ಲನ್ನು ಎಬ್ಬಲು ಅಲ್ಲಿ ಡೊಗರುಬಿದ್ದು ಒಂದು ನೆಲಮಾಳಿಗೆ ಹತ್ತಿತು. ಅಗ್ರಹಾರದ ಅಧಿಪತಿಯು ಆದನ್ನು ರಾಜಧಾನಿಗೆ ತಿಳಿಸಲು, ಕಲ್ಯಾಣದಿಂದ ರಾಜಸ್ಥಪತಿಯು ಭಟರೊಡನೆ ಬಂದು ಒಳಗೆ ಇಳಿದು ಪರಿಶೋಧಿಸಿದನು. ಅಲ್ಲಿ ಸುಂದರವಾದ ಕಲಾಪೂರ್ಣವಾದ ನೂರಾರು ಶಿಲಾಪ್ರತಿಮೆಗಳೂ ಕಂಚಿನ ಮೂರ್ತಿಗಳೂ ಇದ್ದವು. ಅವುಗಳ ಮಧ್ಯದಲ್ಲಿ ಕರಿಯ ಶಿಲಾಸಂಪುಟವೊಂದು ನೆಲದಲ್ಲಿ ಅರ್ಧ ಹೂತಿಡಲ್ಪಟ್ಟಿದ್ದಿತು. ಅದರಲ್ಲೊಂದು ಸುವರ್ಣಶಾಸನವಿದ್ದಿತು. ಅವೆಲ್ಲವನ್ನು ರಾಜಧಾನಿಗೆ ಸಾಗಿಸಲಾಯಿತು. ಬಿಜ್ಜಳನು ನೋಡಿ ಅಚ್ಚರಿಪಟ್ಟು ನೂರು ಕಂಭದ ಅರಮನೆಯ ಭಾಗದಲ್ಲಿ ಅವುಗಳ ಪ್ರದರ್ಶನವನ್ನು ಏರ್ಪಡಿಸಿದನು.

ಎರಡು ವಾರಗಳ ವರೆಗೆ ಜನಸ್ತೋಮವು ಬಂದು ಬಂದು ಆ ಪ್ರತಿಮಾ ಪ್ರದರ್ಶನವನ್ನು ನೋಡಿ ಕಣ್ಮನಗಳ ತೃಪ್ತಿಯನ್ನು ಪಡೆಯಿತು. ಅವೆಲ್ಲವು ಹಿರಿಯ ವಿಕ್ರಮಾದಿತ್ಯನು ತನ್ನ ದಿಗ್ವಿಜಯ ಕಾಲದಲ್ಲಿ ನಾಡಿನ ನಾನಾ ಭಾಗಗಳಿಂದ ಸಂಗ್ರಹಿಸಿದ ಕಲಾಕೃತಿಗಳಾಗಿದ್ದವು. ಇಬ್ಬರು ರೂವಾರಿಗಳು ಆಯಾದೇಶಗಳ ಮಾದರಿಗಳನ್ನೂ ಅವುಗಳ ಮುಖ್ಯವಾದ ರಸಭಾವಗಳನ್ನೂ ವಿವರಿಸುತ್ತಿದ್ದರು. ನುಣುಪಾದ ಆ ಕರಿಯ ಕಲ್ಲಿನ ಸಂಪುಟದ ಮುಚ್ಚಳದ ಮೇಲೆ ಚಾಲುಕ್ಯ ಲಾಂಛನಗಳನ್ನೂ ವಿಕ್ರಮಾದಿತ್ಯನ ಹೆಸರನ್ನೂ ಕೆತ್ತಲಾಗಿತ್ತು. ಅದರಲ್ಲಿ ಇರಿಸಲ್ಪಟ್ಟಿದ್ದ ಸುವರ್ಣಶಾಸನವನ್ನು ಅರಮನೆಯಲ್ಲಿ ತೆಗೆದಿಡಲಾಗಿತ್ತು. ಅದರಲ್ಲಿ ಬರೆದುದನ್ನು ತಿಳಿಯಲು ಬಿಜ್ಜಳನು ಆತುರನಾಗಿದ್ದನು.

ಒಂದು ದಿನ ಬಿಜ್ಜಳರಾಜನು ನಗರದ ಪಂಡಿತರನ್ನೆಲ್ಲ ಪ್ರತಿಮಾಲಯಕ್ಕೆ ಆಮಂತ್ರಿಸಿ ಸಭೆಗೂಡಿಸಿದನು. ಅಗ್ರಾಸನದ ಮುಂದಿನ ಪೀಠದ ಮೇಲೆ ಬೆಳ್ಳಿಯ ತಟ್ಟೆಯಲ್ಲಿ ಸುವರ್ಣ ಶಾಸನವನ್ನು ಇಟ್ಟಿದ್ದರು. ಬಿಜ್ಜಳನು ಪಂಡಿತರನ್ನು ಉದ್ದೇಶಿಸಿ—

“ಪ್ರತಿಮಾಲಯದಲ್ಲಿ ನೀವು ನೋಡಿದ ಶಿಲಾಸಂಪುಟದಲ್ಲಿಡಲ್ಪಟ್ಟಿದ್ದ ಸುವರ್ಣ ಶಾಸನವಿದು: ಲಿಪಿಜ್ಞರು, ಪಂಡಿತರು, ಕವಿಗಳು ಇದನ್ನು ಪರಿಶೀಲಿಸಿ ಇದರ ಅಭಿಪ್ರಾಯವನ್ನು ತಿಳಿಸಬೇಕು.”

ಎಂದು ನುಡಿದನು. ತಾವಾಗಿಯೇ ಯಾರೂ ಮುಂದೆ ಬರಲಿಲ್ಲ. ಮಧುವರಸನು ಎದ್ದು ಶಾಸನವನ್ನು ನಾರಣಕ್ರಮಿತನ ಕೈಗೆ ಕೊಟ್ಟು—

“ವಿದ್ವತ್ ಸಭೆಯ ಅಧ್ಯಕ್ಷರು ನೀವು. ನೀವೇ ಮೊದಲು ನೋಡಿರಿ” ಎಂದನು. ನಾರಣಕ್ರಮಿತನು ಅತ್ತಿತ್ತ ಹೊರಳಿಸಿ ನೋಡಿ ಓದುವದಾಗದೆ ಮತ್ತೊಬ್ಬರಿಗೆ ಕೊಟ್ಟನು. ಹೀಗೆ ಅದು ಕೈಯಿಂದ ಕೈಗೆ ಸಾಗುತ್ತ—

‘ನಾನೆಲ್ಲಿಯೂ ಕಾಣದ ವಿಚಿತ್ರ ಲಿಪಿಯಲ್ಲಿದೆ ಈ ಶಾಸನವು.’

‘ಸಂಸ್ಕೃತ ದ್ರಾವಿಡ ವರ್ಗಗಳ ಯಾವ ಭಾಷೆಯ ಲಿಪಿಗೂ ಇದು ಸರಿ ಹೋಗುವದಿಲ್ಲ’

‘ನನಗೆ ಗೊತ್ತಿದ್ದ ಹತ್ತೊಂಭತ್ತು ಲಿಪಿಗಳಲ್ಲಿ ಯಾವದೂ ಅಲ್ಲ ಇದು.’

‘ಇದು ಭೂಲೋಕದ ಲಿಪಿಯೇ ಆಗಿರುವಂತಿಲ್ಲ; ದೇವಭಾಷೆ-ದೇವಲಿಪಿಯಾಗಿರಬೇಕು.’

‘ನಿಜ! ಇದು ಸ್ವರ್ಗದಿಂದಲೇ ಬಂದ ಶಾಸನವೆಂಬಂತೆ ತೋರುತ್ತದೆ.’

ಈ ನಿರುಪಾಯದ ನುಡಿಗಳೊಡನೆ ಕೊನೆಗೆ ಮಂಚಣ್ಣನ ಕೈಗೆ ಬಂದಿತು. ಆತನು—

“ಇದು ಪೈಶಾಚಿಕ ಭಾಷೆಯಲ್ಲಿ ಪಿಶಾಚಿಗಳ ಲಿಪಿಯಲ್ಲಿ ಬರೆದಂತೆ ಇದೆ. ಇದನ್ನು ಪಿಶಾಚಿಗಳೇ ಓದಬೇಕು.”

ಎನ್ನುತ್ತ ಶಾಸನದ ಐದು ಹಾಳೆಗಳನ್ನೂ ಕೈಯಲ್ಲಿ ಒಟ್ಟಾಗಿ ತೂಗಿ—

“ಇದಕ್ಕೆ ಇಷ್ಟೊಂದು ಸುವರ್ಣವನ್ನು ಉಪಯೋಗಿಸಿ, ವಿಕ್ರಮಾದಿತ್ಯ ಮಹಾರಾಜರು ಧನದ ಅಪವ್ಯಯವನ್ನೆಸಗಿದ್ದಾರೆ”

ಎಂದನು. ಈ ಮಾತು ಬಿಜ್ಜಳನಿಗೆ ಸರಿಬರಲಿಲ್ಲ:

"ಮಂಚಣ್ಣ ಮಂತ್ರಿಗಳು ಶಾಸನವನ್ನು ಅರ್ಥಯಿಸುವದಕ್ಕಿಂತ ಬಂಗಾರವೆಷ್ಟೆಂಬದರಲ್ಲಿ ಹೆಚ್ಚು ಗಮನ ಕೊಟ್ಟಿದ್ದಾರೆ. ಯಾಕೆಂದರೆ ಧನದ ಸದ್ವಿನಿಯೋಗದಲ್ಲಿ ಆಸಕ್ತಿ ಬಹಳ ಅವರಿಗೆ!"

ಎನ್ನುತ್ತ ಚುಚ್ಚುನೋಟದಿಂದ ನೋಡಿದನು. ಮಂಚಣ್ಣನ ಮುಖ ಸಪ್ಪಗಾಯಿತು. ಶಾಸನವನ್ನು ಮಧುವರಸನ ಕೈಗಿತ್ತು ಕುಳಿತುಕೊಂಡನು. ಮಧುವರಸನು ಸೂಚಿಸಿದ ಒಂದು ವ್ಯವಸ್ಥೆಗೆ ಬಿಜ್ಜಳನು ಒಪ್ಪಿ ಅದನ್ನು ಪ್ರಕಟಿಸಿದ ಬಳಿಕ ಸಭೆ ಮುಕ್ತಾಯವಾಯಿತು.

ಶಾಸನವನ್ನು ಪ್ರತಿಮಾಲಯದಲ್ಲಿಯೇ ಕಾವಲಿನಲ್ಲಿರಿಸಿ, ನಿಯಮಿತ ಕಾಲದಲ್ಲಿ ಬೇಕಾದವರು ಬಂದು ಓದುವ ಪ್ರಯತ್ನ ನಡಿಸಲು ಅವಕಾಶ ಕೊಡಲಾಯಿತು. ರಾಜ್ಯದಲ್ಲಿಯ ಹೆಸರಾದ ವಿದ್ಯಾಪೀಠಗಳಿಗೂ ಆಹ್ವಾನ ಕಳಿಸಲಾಯಿತು. ನಗರದಲ್ಲಿಯ ಹಾಗು ಹೊರಗಿನ ಹಲವು ಜನ ವಿದ್ವಾಂಸರು ಬಂದು ನೋಡಿದರು. ಯಾರಿಗೂ ಅದರ ಗೂಢವನ್ನು ಭೇದಿಸುವದು ಸಾಧ್ಯವಾಗಲಿಲ್ಲ.

ಅವಕಾಶ ದೊರೆತಾಗ ಬಸವಣ್ಣನೂ ಒಂದೆರಡು ಸಲ ಬಂದು ನೋಡಿದ್ದನು. ಮೂರನೆಯ ಸಲ ನೋಡಿದ ಬಳಿಕ, ರಾಜನ ಅಪ್ಪಣೆ ಪಡೆದು ಅದರ ಪ್ರತಿ ಮಾಡಿಕೊಂಡು ಎರಡು ದಿವಸ ಮನೆಯಲ್ಲಿ ಕುಳಿತು ತನಗೆ ಹೊಳೆದ ರೀತಿಯಲ್ಲಿ ಅಭ್ಯಾಸ ಮಾಡಿದನು. ಮರುದಿನ ಬಿಜ್ಜಳನನ್ನು ಕಂಡು ಲಿಪಿಯ ರಹಸ್ಯವನ್ನು ಭೇದಿಸಲಾಯಿತೆಂದು ಅರಿಕೆ ಮಾಡಿಕೊಂಡನು. ಬಿಜ್ಜಳನು ಆತುರದಿಂದ ಕೇಳಿದನು.

"ಅದು ಹೇಗೆ?"

"ಶಾಸನವಿರಿಸಿದ್ದ ಶಿಲಾಸಂಪುಟದ ಮೇಲೆ ಘನವಂತರಾದ ವಿಕ್ರಮಾದಿತ್ಯರ ಹೆಸರು ಇರುವದರಿಂದ ಶಾಸನವು ಅವರದೇ ಎಂಬದು ನಿಸ್ಸಂದೇಹ! ವಿಕ್ರಮಾದಿತ್ಯರ ಶಾಸನಗಳೆಲ್ಲ 'ನಮಸ್ತುಂಗ ಶಿರಸ್ಚುಂಬಿ ಚಂದ್ರಚಾಮರ ಚಾರವೇ' ಎಂಬ ಮಂಗಳಪದ್ಯದ ನಂತರ 'ಸ್ವಸ್ತಿ ಸಮಸ್ತ ಭುವನಾಶ್ರಯ ಶ್ರೀ ಪೃಥವೀ ವಲ್ಲಭಂ' ಇತ್ಯಾದಿ ಬಿರುದಾವಳಿಗಳಿಂದ ಆರಂಭವಾಗುವದನ್ನು ತಾವು ಬಲ್ಲಿರಿ. ಈ ಶ್ಲೋಕದ ಮತ್ತು ಬಿರುದಾವಳಿಗಳ ವರ್ಣೋಚ್ಚಾರ

ಗಳನ್ನೇ ಶಾಸನದ ಅಪರಿಚಿತ ವರ್ಣಗಳಿಗೆ ಆರೋಪಿಸುತ್ತಿರಲು ಮರಳಿ ಮರಳಿ ಬರುವ ಅಕ್ಷರಗಳಿಗೆ ಅದೇ ಒಂದೇತರದ ಗುರುತುಗಳ ಹೊಂದಿಕೆಯಾಗುತ್ತ ಪದ್ಯದ ನಾಲ್ಕು ಚರಣಗಳಿಗೂ ಸಮಗ್ರ ಬಿರುದಾವಳಿಗೂ ಈ ಹೊಂದಿಕೆ ಅನ್ವಯಿಸಿತು. ಈ ಆಧಾರದಿಂದ ಶಾಸನದಲ್ಲಿ ಬಳಸಿದ ಲಿಪಿಮಾಲೆಯನ್ನು ರಚಿಸಿಕೊಂಡು ಪೂರ್ಣಶಾಸನವನ್ನು ಓದುವದು ಶಕ್ಯವಾಯಿತು.

ಬಿಜ್ಜಳನು ಅತ್ಯಾತುರನಾದನು.

"ನಿಮ್ಮ ಬುದ್ಧಿಯಲ್ಲಿ ದೈವಿಕ ಶಕ್ತಿಯಿದೆ ಬಸವೇಶ! ಶಾಸನದ ವಿಷಯ ವೇನು?"

"ಶಾಸನದ ವಿಷಯವು ನಿಮ್ಮ ಆಡಳಿತದ ಭದ್ರ ತಳಹದಿ ಹಾಕುವಂತಿದೆ; ನಾಡಿನ ಜನರ ಕಲ್ಯಾಣಸಾಧನೆ ಮಾಡುವಂತಿದೆ; ತ್ರಿಭುವನಮಲ್ಲವಿಕ್ರಮಾದಿತ್ಯ ಚಕ್ರವರ್ತಿಗಳ ಕೀರ್ತಿಯನ್ನು ಆ ಚಂದ್ರಾರ್ಕ ಉಳಿಸುವಂತಹದಿದೆ. ಅದರಲ್ಲಿ ಆ ಮಹಾರಾಜರು ತಮ್ಮ ಆಳಿಕೆಯ ಆಲನೆಯ ವರ್ಷದಲ್ಲಿ ನಿಕ್ಷೇಪ ಗೊಳಿಸಿದ ಅಪಾರವಾದ ನಿಧಿಯ ವಿಷಯವಿದೆ. ಸಮೃದ್ಧವಾದ ತಮ್ಮ ಕಾಲದಲ್ಲಿ ಹೆಚ್ಚಾದ ಈ ಧನವು ಮುಂದೊಂದು ಕಾಲದಲ್ಲಿ ಪ್ರಜಾಹಿತಕ್ಕೆ ಉಪಯೋಗವಾಗಲೆಂದು ಶಾಸನಗೊಳಿಸಿ ಮಡಗಿದ್ದಾರೆ. ಆ ನಿಧಿಯು ತಮ್ಮ ಹತ್ತಿರದಲ್ಲಿಯೇ ಇರುವಂತೆ ತೋರುತ್ತದೆ."

"ನಿಜವೇ ಬಸವಣ್ಣನವರೇ? ಸರಿಯಾಗಿ ಅರ್ಥವಾಗುವದೇ?"

"ಶಾಸನದ ಭಾಷೆ ಕನ್ನಡವೇ ಆಗಿದೆ ಪ್ರಭುಗಳೇ! ಬಹುಭಾಗವು ಸ್ಪಷ್ಟವಾಗಿದೆ. ಕೆಲವು ಭಾಗದ ಒಕ್ಕಣಿಕೆ ಒಗಟಿನ ರೀತಿಯಲ್ಲಿದೆ."

"ಇನ್ನಿಷ್ಟು ಪರಿಶೀಲಿಸಿ ಅರ್ಥಮಾಡಿರಿ; ನಾಳೆ ಆಪ್ತಮಂತ್ರಿಗಳ ರಹಸ್ಯ ಸಭೆಯಲ್ಲಿ ಇದನ್ನು ಪಠಿಸುವಿರಾ?"

"ಆಗಬಹುದು ಅಪ್ಪಣೆಯಾದಂತೆ."

ಮರುದಿನ ಮಂತ್ರಿಮಂಡಲದ ರಹಸ್ಯಸಭೆಯಲ್ಲಿ ಕನ್ನಡದ ಸರಿಯಾದ ಲಿಪಿಯಲ್ಲಿ ಬರೆದು ತಂದ ಶಾಸನವನ್ನು ಪಠಿಸಿ ವಿವರಿಸಿದನು ಬಸವೇಶ! 'ಆಹವಮಲ್ಲ ತೈಲಪದೇವ, ತ್ರೈಲೋಕಮಲ್ಲ, ಸೋಮೇಶ್ವರ, ತ್ರಿಭುವನಮಲ್ಲ ವಿಕ್ರಮಾದಿತ್ಯರ ನಾಮಾಂಕಿತವಾದ ನಾಲ್ವತ್ತು ಕೋಟಿ ಸುವರ್ಣನಾಣ್ಯಗಳು

ತುಂಬಿದ ನೂರಾರು ಪೆಟ್ಟಿಗೆಗಳು, ಬಂಗಾರದ ಗಟ್ಟಿಗಳು, ವಜ್ರವೈಢೂರ್ಯ ಗಳು ಮಣಿಗಳು ತುಂಬಿದ ಏಳು ಪೆಠಾರಿಗಳು ನಿಕ್ಷೇಪಗೊಳಿಸಲ್ಪಟ್ಟದ್ದನ್ನು ಇದರಲ್ಲಿ ಹೇಳಲಾಗಿದೆ. ಕೊನೆಗೆ ವಿಕ್ರಮಾಂಕದೇವರ ಸ್ತುತಿಪಾಠವಿದೆ....' ಎಂದು ವಿವರಿಸುತ್ತಿರುವಾಗ ಮಂತ್ರಿಗಳೆಲ್ಲ ಚಕಿತರೂ ಕುತೂಹಲಿಗಳೂ ಆದರು. ಮಂಚಣ್ಣನೆಂದನು :

"ನಿಧಿಯು ದೊರೆತರೆ ಮಾತ್ರ ಶಾಸನದ ಪಠಣ ಸರಿಯೆಂಬುದು !"

"ನಿಧಿಯಿರುವ ಸ್ಥಳವು ಸೂಚಿಸಲ್ಪಟ್ಟಿಲ್ಲವೇ ?"

—ಬಿಜ್ಜಳರಾಜ ಕೇಳಿದನು. ಬಸವೇಶ ಉತ್ತರಿಸಿದನು :

"ಸ್ಪಷ್ಟವಾದ ಸೂಚನೆ ಇಲ್ಲ ಪ್ರಭುಗಳೆ ! ಸಾಂಕೇತಿಕವಾದ ಸಂಗತಿ ಗಳಿಂದ ಕೆಲವು ಗುರುತುಗಳು ಸೂಚಿತವಾಗುತ್ತಿವೆ. ಆ ಗುರುತುಗಳನ್ನು ಕಂಡು ನಿರ್ಧರಿಸಬೇಕು."

"ಅದಿರಲಿ, ಧನದ ವಿನಿಯೋಗದ ಬಗೆಗೆ ಹೇಳಿದ್ದೇನು ?"

"ಆ ಬಗೆಗೆ ಒಂದು ಪದ್ಯದಲ್ಲಿ ಹೀಗಿದೆ : ಈ ಮಹಾನಿಧಿಯು ಪ್ರಜೆಗಳ ಅಭ್ಯುದಯಕ್ಕಾಗಿ ವಿನಿಯೋಗಿಸಲ್ಪಡಬೇಕು. ನಾಡಿನ ಪ್ರಜೆಗಳೇ ನಿಧಿ ಗೊಡೆಯರು. ಇದನ್ನು ಪಡೆದುಕೊಂಡ ರಾಜನು ಕ್ರಮಯುಕ್ತವಾದ ವಿದ್ಯಾ ದಾನ-ಅನ್ನದಾನಗಳಿಗೆ ಅದನ್ನು ಕೊಡಬೇಕು."

"ಸರಿ, ಬಸವಣ್ಣನವರೆ ಶಾಸನೋಕ್ತವಾದ ಗುರುತುಗಳಿಂದ ಸ್ಥಳವಾವು ದೆಂಬದನ್ನು ಪರಿಶೀಲಿಸಿ, ನಿಮಗೆ ಗೊತ್ತಾದುದನ್ನು ನಮಗೆ ತಿಳಿಸಿರಿ" ಎನ್ನುತ್ತ ಬಿಜ್ಜಳನು ಎದ್ದನು. ಸಭೆ ಮುಂದುವರಿಯಿತು.

ಬಸವಣ್ಣನು ಶಾಸನದಲ್ಲಿ ಸಾಂಕೇತಿಕ ಶಬ್ದಗಳಿಂದ ಸಾವಿರ ಕಂಬದ ಅರಮನೆಯ ನೆಲಮಾಳಿಗೆಯಲ್ಲಿ, ನಿಧಿಯಿರುವ ಅದರ ಕೆಳಗಿನ ನೆಲಮಾಳಿಗಗೆ ಹೋಗುವ ದ್ವಾರದ ಸ್ಥಳವನ್ನು ಊಹಿಸಿಕೊಂಡು ಬಿಜ್ಜಳರಾಜನಿಗೆ ತಿಳಿ ಸಿದನು. ಬಿಜ್ಜಳನು ಮಂಚಣ್ಣನನ್ನೂ ಹತ್ತುಜನ ಭಟರನ್ನೂ ಕರೆದು ಕೊಂಡು ಬಸವಣ್ಣನನ್ನು ಮುಂದೆ ಮಾಡಿಕೊಂಡು ನೆಲಮಾಳಿಗೆಗೆ ಇಳಿದನು. ಪಂಜುಗಳ ಬೆಳಕಿನಲ್ಲಿ ಅದರ ಕೆಳಗಿನ ಗುಪ್ತಗೃಹದ ಬಾಗಿಲವನ್ನು ಶೋಧಿ ಸಿದರು. ಬಹಳ ಹೊತ್ತಾದ ಬಳಿಕ ಮಂಚಣ್ಣನೆಂದನು :

"ಈ ಹುಚ್ಚಾಟದಲ್ಲಿ ವ್ಯರ್ಥವಾಗಿ ದಣಿಯುತ್ತಿದ್ದೇವೆ."

ಬಿಜ್ಜಳನು ಮೌನವಾಗಿದ್ದನು; ಅವನ ಮನದಲ್ಲಿ ನಿರಾಶೆ ತಲೆದೋರಿತ್ತು. ಬಸವೇಶ ನಿರಾಶನಾಗಿರಲಿಲ್ಲ. ಒಂದು ಕಂಬದ ಮೇಲೆ ತನಗೆ ಬೇಕಾದ ಸೂಚಿತ ಗುರುತನ್ನು ಕಂಡಕೂಡಲೆ ಅದರ ಹಿಂದಿನ ಗೋಡೆಯ ಮುಂದೆ ನಿಂತನು. ಅದು ಕಟ್ಟಿದ ಗೋಡೆಯಾಗಿರದೆ ಪೃಥವಿಯ ಒಡಲಿನ ಬಂಡೆಯಲ್ಲಿ ಕೊರೆದು ಮಾಡಿದುದಾಗಿತ್ತು. 'ಅಖಂಡವಾಗಿರುವ ಹುಟ್ಟುಬಂಡೆ ಕಾಣುವದಿಲ್ಲವೇ ? ಅದರಲ್ಲಿ ಬಾಗಿಲು ಹೇಗಿದ್ದೀತು ?' ಎಂದು ಮಂಚಣ್ಣನೆಂದಾಗ ಬಿಜ್ಜಳನೂ ನಕ್ಕನು. ಬಸವೇಶನು ಅದನ್ನು ಗಮನಿಸದೆ ನೆಲದಿಂದ ಎರಡು ಮೊಳದ ಮೇಲೆ ಹಾರಿಯಿಂದ ಹೊಡೆಯ ಹೇಳಿದನು.

"ಭೂಗರ್ಭದ ಬಂಡೆಯಲ್ಲಿ ಹೊಸ ಹೋರು ತೆಗೆಯುವಿರಾ ?" ಎಂದನು ಮಂಚಣ್ಣ; ಬಿಜ್ಜಳ ಗಂಭೀರವಾಗಿ ನೋಡುತ್ತಿದ್ದನು.

ಬಸವಣ್ಣನು ಕೊರೆದ ಗೆರೆಗುಂಟ ಭಟರು ಹಾರಿಯಿಂದ ಹೊಡೆಯಲು ೨ ಮೊಳ ಭುಜದ ಚಚ್ಚೌಕು ಬಂಡೆಯು ಬೇರೆಯಾಯಿತು. ಅದನ್ನು ಹೊರಳಿಸಿ ತೆಗೆದರು. ಒಳಗೆ ಕಾಣಿಸಿತು ಗುಹಾಮಾರ್ಗ ! ಬಸವಣ್ಣನ ಶೋಧದಲ್ಲಿ ಅರ್ಥವಿಲ್ಲದೆ ಇಲ್ಲ, ಎಂದು ಬಾಯಿಮುಚ್ಚಿದರಾಗ ಎಲ್ಲರೂ ! ಅದರಲ್ಲಿ ತಲೆಹಾಕಿ ನೋಡಿದಾಗ ಬಲಗಡೆಗೆ ಪಾವಟಿಗೆಗಳು ಇಳಿಯುತ್ತಹೋಗಿ, ಮತ್ತೆ ಬಲಗಡೆಗೆ ತಿರುಗಿ ತಾವು ನಿಂತಿರುವ ಸ್ಥಳದ ಕೆಳಗೆ ಹೋದಂತೆ ಕಂಡವು. ಒಳಗಿನಿಂದ ಸ್ವಚ್ಛವಾದ ಹವೆ ಸುಳಿದು ಬರುವಂತೆಯೂ ಕಂಡಿತು. ಎಲ್ಲರೂ ಆಶ್ಚರ್ಯಮಗ್ನರಾದರು. ಬೆಳಕು ಮುಂದೆಮಾಡಿಕೊಂಡು ಕೆಳಗಿನ ಮನೆಗೆ ಬಂದು ನೋಡುತ್ತಾರೆ, ಎದುರಿನ ಗೋಡೆಗೆ ಒಟ್ಟಿದ ಪೆಟ್ಟಿಗೆಗಳ ಒಟ್ಟಿಲು ! ಒಂದರಮುಂದೊಂದು ಸಾಲು ! ಮಂಚಣ್ಣನೇ ಮುಂದಾಗಿ ಮುಂದಿನ ಸಾಲಿನ ಪೆಟ್ಟಿಗೆಗಳ ಬಾಯಿ ತೆಗೆತೆಗೆದು ನೋಡಿದನು. ಹೊಳೆಯುವ ಸುವರ್ಣ ನಾಣ್ಯಗಳು ! ಬೊಗಸೆಯಿಂದ ಎತ್ತಿಸುರಿಯುತ್ತಿದ್ದನು; 'ಪ್ರಭು ಇದೇನು ಕನಸಿನ ಲೋಕವೆ ?' ಎನ್ನುತ್ತಿದ್ದನು. ಬಸವೇಶ ಟೊಂಕದಲ್ಲಿ ಕೈಯಿಟ್ಟು ನೋಡುತ್ತಿದ್ದನು. ಹರ್ಷವಾಯು ಬಿರಿಸಾಗಿ ಬೀಸಿದ ಬಿಜ್ಜಳನು ಪರವಶತೆಯಿಂದ ಬಂದು ಬಸವೇಶನನ್ನು ಗಾಢವಾಗಿ ಆಲಿಂಗಿಸಿ—

"ನಿಮ್ಮ ಮಹಿಮೆ ಬಸವೇಶಾ !" ಎಂದನು.

"ಪ್ರಭುಗಳೆ ಪರವಶರಾಗದಿರಿ. ಪ್ರಕೃತಕ್ಕೆ ಬನ್ನಿರಿ; ಶಾಸನದಲ್ಲಿ ಇದರ ಬಗೆಗೆ ಪವಿತ್ರವಾದ ನುಡಿಗಳಿವೆ."

"ಅದನ್ನು ಗಮನಿಸುವೆ ಬಸವೇಶ : ನನಗೆ ಧನಲೋಭವಿಲ್ಲ; ನಿಮ್ಮ ಅನುಮತಿಯಂತೆ ಪ್ರಜೆಗಳ ಹಿತಕ್ಕೇ ವಿನಿಯೋಗ. ನಮ್ಮ ಪ್ರಜೆಗಳ ಬಾಳು ಸಮೃದ್ಧವಾದರೆ ಸಾಕು ! ನಮ್ಮ ಆಡಳಿತದ ಕೀರ್ತಿ ಹೆಚ್ಚಿದರೆ ಸಾಕು !!"

ಮೂವರು ಸಾವಧಾನವಾಗಿ ನೋಡಿದರು. ಬೇರೆ ಬೇರೆ ರಾಜರ ಹಾಗು ಲಾಂಛನಗಳ ವಿವಿಧಾಕಾರದ ಸುವರ್ಣ ಮುದ್ರೆಗಳು ಆ ಎಲ್ಲ ಪೆಟ್ಟಿಗೆಗಳಲ್ಲಿದ್ದವು. ಹೊರಳಿ ನೋಡಿದರೆ ಬಲಮಗ್ಗಲಿನ ಏಳು ಪೆಠಾರಿಗಳಲ್ಲಿ ಮುತ್ತು ರತ್ನಾಭರಣಗಳು ! ಇನ್ನೆರಡು ದೊಡ್ಡ ಪೆಟ್ಟಿಗೆಗಳಲ್ಲಿ ಬಂಗಾರದ ಗಟ್ಟಿಗಳು ! ಒಂದು ಮೂಲೆಯ ಚಿಕ್ಕ ಬೆಳಕಿಲ್ಲದ ಸೂರಿನಿಂದ ಸುಳಿಗಾಳಿ ಬರುತ್ತಿರುವದನ್ನು ತಿಳಿದು ಮಂಚಣ್ಣ ನೆನಪು ಮಾಡಿಕೊಂಡು ಹೇಳಿದನು :

"ಪ್ರಭುಗಳೆ, ನಾವೀಗ ಇರುವದು ಅರಮನೆಯ ಪಶ್ಚಿಮಭಾಗದ ಕೆಳಗಡೆಗೆ ! ಆ ಭಾಗಕ್ಕೆ ಹೊಂದಿ ಹಿಮ್ಮಗ್ಗಲು, ಬಹಳ ಕೆಳಗೆ ನೀರಿರುವ ಸೇದುವ ಭಾವಿಯೊಂದಿದೆಯಷ್ಟೆ ! ನೀರ ಮೇಲ್ಗಡೆಗೆ ಬಾವಿಯ ಗೋಡೆಯಲ್ಲಿ ಕಿಂಡಿಯನ್ನು ಮಾಡಿ ಈ ಸೂರಿಗೆ ಹವೆ ಬರುವಂತೆ ಮಾಡಿರಬೇಕು."

ಎಲ್ಲರೂ ನಿಧಾನವಾಗಿ ಮೇಲೆ ಬಂದರು. ಬಾಗಿಲ ಬಂಡೆಯನ್ನು ಮತ್ತೆ ಸೇರಿಸಿದರು. ಈಗ ಅದು ಮೊದಲಿನಂತೆ ಅಖಂಡವಾಗಿ ಕಾಣಲಿಲ್ಲ".

"ಇದನ್ನು ಹೇಗೆ ಗುರ್ತಿಸಿದಿರಿ ಬಸವೇಶಾ ?"

—ಬಿಜ್ಜಳನು ಕೇಳಿದನು. ಬಸವೇಶ ಉತ್ತರಿಸಿದನು.

"ಸಂದು ಬಹು ಸೂಕ್ಷ್ಮವಾಗುವಂತೆ ಬಾಗಿಲ ಬಂಡೆಯನ್ನು ಜೋಡಿಸಿದ್ದಾರೆ ಅದನ್ನು ಕೂಡ ಶಿಕ್ಕಿ ಏಕರೂಪಗೊಳಿಸಿದ್ದಾರೆ. ಭೂಗರ್ಭದಿಂದ ಬೇರೆಯಾಗದ ಬಂಡೆಯ, ಹಾಗು ಬಂಡೆಯ ಬೇರೆಯಾದ ಭಾಗದ ಅಣು ಸಾಂದ್ರತೆಯಲ್ಲಿ ಭೇದ ತೋರುತ್ತದೆ. ಅಜಂತೆಯಲ್ಲಿ ವಿಶ್ವಕರ್ಮಾಚಾರ್ಯರು, ಶಿಲಾಹೃದಯದ ಈ ರಹಸ್ಯವನ್ನು ನನಗೆ ತೋರಿಸಿ ತಿಳಿಸಿದ್ದರು. ಅದರ ಸಹಾಯದಿಂದ ಇದನ್ನು ಕಂಡು ಹಿಡಿಯಲು ಶಕ್ಯವಾಯಿತು.

ದಂಡನಾಯಕ ಬಸವರಾಜ

ಮತ್ತೆ ಮಂತ್ರಿಗಳ ರಹಸ್ಯ ಸಭೆ ನಡೆದು, ನಿಧಿಯನ್ನು ಪ್ರಕಟಿಸುವ ಮತ್ತು ಮಹಾನಾಡು ಕರೆದು ಪ್ರಜಾಪ್ರತಿನಿಧಿಗಳ ಅಭಿಪ್ರಾಯ ಪಡೆದು ವಿನಿಯೋಗ ಗೊತ್ತುಪಡಿಸುವ, ಬಸವೇಶನ ಸೂಚನೆ ಒಪ್ಪಿತವಾಯಿತು. ಈ ಬಗೆಗೆ ಒಬ್ಬಿಬ್ಬರ ಮತಭೇದವಿದ್ದರೂ ಬಿಜ್ಜಳರಾಜನ ಒಲುಮೆಯನ್ನು ವಿರೋಧಿಸುವದಾಗದೆ ಸುಮ್ಮನಾದರು.

ವಿಧಿವಿಧಾನಗಳಂತೆ ಉತ್ಸವದಿಂದ ನಿಧಿಯನ್ನು ರಾಜ್ಯಭಂಡಾರದ ಭದ್ರವಾದ ಒಂದು ಪ್ರತ್ಯೇಕ ಸ್ಥಳಕ್ಕೆ ಸಾಗಿಸಲಾಯಿತು. ಸ್ವರ್ಣನಾಣ್ಯಗಳ ಎಣಿಕೆ ಮತ್ತು ವರ್ಗೀಕರಣ ಮಾಡುವ, ಹಾಗು ಆಭರಣಗಳ ಪಟ್ಟಿ ಮಾಡುವ ಕೆಲಸವು ಒಬ್ಬ ವಿಶೇಷಾಧಿಕಾರಿಯ ಕೆಳಗೆ ಇಪ್ಪತ್ತು ಜನ ಕರಣಕರು ಮೂರು ವಾರಗಳ ವರೆಗೆ ಮಾಡಿದರು. ಆದ್ಯಂತವಾಗಿ ಬಿಜ್ಜಳನ ಕಣ್ಣಿರಿಕೆಯಿದ್ದಿತು.

ರಾಜ್ಯದ ಎಲ್ಲ ಭಾಗಗಳಿಗೆ ಆಜ್ಞೆ ಮುಟ್ಟಿ ಪ್ರಜಾಪ್ರತಿನಿಧಿಗಳ ಆಯ್ಕೆಯಾಗಿ ರಾಜಧಾನಿಗೆ ಬರುವದಕ್ಕೆ ಸಾಕಷ್ಟು ಅವಕಾಶವಿಟ್ಟು, ಮಹಾನಾಡು ಸೇರುವ ದಿನವನ್ನು ಗೊತ್ತುಮಾಡಿದ್ದರು. ಗೊತ್ತಾದ ದಿನ ಸಾವಿರಕಂಬದ ಅರಮನೆಯ ಸಭಾಂಗಣದಲ್ಲಿ ಬಿಜ್ಜಳರಾಯನ ಅಧ್ಯಕ್ಷತೆಯಲ್ಲಿ ಪ್ರಜಾಪ್ರತಿನಿಧಿ ಸಭೆ ಸೇರಿತು.

ಸಾಮಂತಮಂತ್ರಿ ಮಧುವರಸನು ಪ್ರತಿನಿಧಿಗಳನ್ನು ಸ್ವಾಗತಿಸಿ, ಸುವರ್ಣಶಾಸನದ ವಿಷಯ ಪ್ರಸ್ತಾಪಿಸಿ, ಸಭೆಯ ಉದ್ದೇಶವನ್ನು ಸಾಮಾನ್ಯವಾಗಿ ಹೇಳಿದನು. ಮತ್ತು ಶಾಸನವನ್ನು ಪಠಿಸಿ ವಿವರಿಸಲು ಸಮ್ಮುಖದ ಕಾರ್ಯದರ್ಶಿ ಬಸವಯ್ಯನನ್ನು ಕೇಳಿಕೊಂಡನು.

ಬಸವಣ್ಣನು ಶಾಸನವನ್ನು ಒಳ್ಳೇ ಗಮಕಿಯಂತೆ ಪಠಿಸಿ ಅರ್ಥವನ್ನು ವಿವರಿಸಿದನು. ನಿಧಿ ದೊರೆತುದನ್ನು ಅರಿಕೆ ಮಾಡಿದನು. 'ನಿಧಿಯನ್ನು ಬೇರೆ ಬೇರೆ ಪ್ರದೇಶಗಳಿಗೆ ಹಂಚುವ ಪ್ರಮಾಣವನ್ನು ವಿನಿಯೋಗದ ರೀತಿಯನ್ನು, ಆ ಕಾರ್ಯ ನಡಿಸುವ ವಿಧಾನವನ್ನು ಈಗ ತಾವೆಲ್ಲ ನಿರ್ಣಯಿಸಬೇಕಾಗಿದೆ' ಎಂದು ಕೈಮುಗಿದು ಕುಳಿತುಕೊಳ್ಳುವಾಗ ಸುತ್ತಲೂ ಹರ್ಷಧ್ವನಿ ಕೇಳಬಂದಿತು.

ಪ್ರತಿನಿಧಿಗಳು ತಮ್ಮ ಅಭಿಪ್ರಾಯ ತಿಳಿಸಬೇಕೆಂದು ಅಧ್ಯಕ್ಷರು ಸೂಚಿಸಿದರು.

ಕಲ್ಯಾಣದ ಅಗ್ರಹಾರಗಳ ಪ್ರತಿನಿಧಿ-ವಿದ್ವತ್ ಸಭೆಯ ಅಧ್ಯಕ್ಷ-ನಾರಣಕ್ರಮಿತನು ಎದ್ದು ಹೀಗೆ ಸೂಚಿಸಿದನು :

"ಪೂರ್ವಕಾಲದಿಂದಲೂ ವಿದ್ಯಾದಾನ, ಅನ್ನದಾನ ಮಾಡುತ್ತಿರುವ ಅಗ್ರಹಾರ-ಮಠ-ದೇವಮಂದಿರಗಳಿಗೆ ಅವುಗಳ ಕಾರ್ಯವ್ಯಾಪಕತೆಯ ಪ್ರಮಾಣದಿಂದ ನಿಧಿಯನ್ನು ಹಂಚಿಕೊಡಬೇಕು."

ಮಂಚಣ್ಣ ಅದಕ್ಕೆ ಬೆಂಬಲಕೊಟ್ಟು ಮಾತನಾಡಿದನು.

ಬಸವಣ್ಣನು ಅದನ್ನು ವಿರೋಧಿಸಿ ಹೇಳಿದನು :

"ಮಾನ್ಯ ಕ್ರಮಿತರು ಹೇಳಿದ ಸಂಸ್ಥೆಗಳು ಅಗ್ರವರ್ಣಗಳೆನಿಸಿದವರ ಹಿತಕ್ಕೇ ಮೀಸಲಾಗಿವೆ ಬಹುಜನ ಪ್ರಜಾವರ್ಗಗಳಿಗೆ ಅವು ವಿದ್ಯೆಯನ್ನು ನಿರಾಕರಿಸುತ್ತವೆ. ಈ ಕೆಲವು ಸಂಸ್ಥೆಗಳಲ್ಲಿ ಅನ್ನದಾನ ನಡೆಯುತ್ತಿದ್ದರೂ ಅದರ ಕ್ರಮವು ಮೇಲು ಕೀಳು ಭಾವನೆಗಳಿಂದ ಕಲುಷಿತವಾಗಿದೆ. ನಿಜವಾದ ದೀನ-ದರಿದ್ರ-ರೋಗಿಗಳಿಗೆ ಸಹಾಯ ಸಿಗುತ್ತಿಲ್ಲ. ಇಂಥ ಸಂಸ್ಥೆಗಳಿಗೆ ನಿಧಿಯ ಧನ ಕೊಡುವದರಿಂದ, ದಯಾನಿಧಿ ವಿಕ್ರಮಾದಿತ್ಯಪೆರ್ಮಾಡಿ ಮಹಾರಾಜರ ಘನೋದ್ದೇಶ ನೆರವೇರಿದಂತಾಗುವದಿಲ್ಲ.........."

ನಾರಣಕ್ರಮಿತನು ನಡುವೆ ಬಾಯಿ ಹಾಕಿ ಕೇಳಿದನು :

"ಬಸವಯ್ಯನವರು ಯಾವ ಅಧಿಕಾರದಿಂದ ಅಥವಾ ಯಾರ ಪ್ರತಿನಿಧಿಯಾಗಿ ಮಾತನಾಡುತ್ತಿದ್ದಾರೆ ?"

ಸಭೆಯಲ್ಲಿ ಉತ್ಸಾಹ ಉಕ್ಕುತ್ತಿದ್ದಾಗ ಕ್ರಮಿತನು ಅಡ್ಡಬಂದುದಕ್ಕೆ ಕುಪಿತರಾಗಿ ನಾಲ್ಕೈದು ಜನ ಪ್ರತಿನಿಧಿಗಳು ಎದ್ದುನಿಂತು "ಅವರು ನಮ್ಮ ಪ್ರತಿನಿಧಿಗಳಾಗಿ ಮಾತನಾಡುತ್ತಾರೆ: ಬಸವಣ್ಣನವರನ್ನು ನಮ್ಮ ಪ್ರತಿನಿಧಿಯನ್ನಾಗಿ ಆರಿಸಿದ್ದೇವೆ" ಎಂದು ಕೂಗಿದರು.

ಬಿಜ್ಜಳರಾಜನು ನಕ್ಕು 'ಬಸವೇಶ್ವರರನ್ನು ನಿಮ್ಮ ಮಹಾಪ್ರತಿನಿಧಿಯಾಗಿ ಒಪ್ಪಿಕೊಳ್ಳುವವರು ಕೈಯೆತ್ತಿರಿ' ಎನಲು ಮುಕ್ಕಾಲುಪಾಲು ಕೈಗಳು ಮೇಲೆದ್ದವು. ಬಿಜ್ಜಳನು ಕ್ರಮಿತನ ಕಡೆಗೆ ತಿರುಗಿ—

"ಬಸವಣ್ಣನವರ ಜಾಣ್ಮೆ-ಪರಿಶ್ರಮಗಳಿಂದ ನಿಧಿಯು ಪ್ರಾಪ್ತಿಯಾಗಿದೆ. ಶಾಸನದ ಅಭ್ಯಾಸಮಾಡಿ ನಿರೂಪಿಸುತ್ತಿರುವವರು ಅವರು! ಅವರ ಅಧಿಕಾರ ಪ್ರಶ್ನಿಸುವ ನಿಮಗೆ ಸಭೆ ತಕ್ಕ ಉತ್ತರ ಕೊಟ್ಟಿತು."

ಎಂದು ತಿರಸ್ಕಾರದಿಂದ ನೋಡಿ ನುಡಿದು, ಬಸವೇಶನಿಗೆ ಮಾತು ಮುಂದುವರಿಸಲು ಸೂಚಿಸಿದನು.

ಬಸವೇಶ, ಸಭೆಗೆ ಕೃತಜ್ಞತೆಯ ಅಭಿವಂದನೆ ಸಲ್ಲಿಸಿ, ರಾಜಾಡಳಿತ ದಿಂದ ನಿಧಿಯನ್ನು ಸಕಲರಿಗಾಗಿ ವಿನಿಯೋಗಿಸುವ ತನ್ನ ಅಭಿಪ್ರಾಯವನ್ನು ಪೂರ್ಣವಾಗಿ ನಿವೇದಿಸಿದನು.

ಮಧುವರಸು ಬಸವೇಶ ಕೂಡಿ ಲಿಖಿಸಿದ ನಿರ್ಣಯದ ಕರಡನ್ನು ಮಧುವರಸನು ಸಭೆಯಲ್ಲಿ ಓದಿ ಮಂಡಿಸಿದನು. ಆದರ ಮುಖ್ಯಾಂಶ:

೧. ರಾಜಾಧ್ಯಕ್ಷರ ಮೇಲ್ವಿಚಾರಣೆಯಲ್ಲಿ ಇದಕ್ಕೆ ನಿಯಮಿತನಾದ ಮಂತ್ರಿಯು ನಿಧಿಯ ವಿನಿಯೋಗದ ಆಡಳಿತೆ ನಡಿಸಬೇಕು.

೨. ಗ್ರಾಮಗಳ ಸಂಖ್ಯೆಯ ಪ್ರಮಾಣದಿಂದ ಮಂಡಲಗಳಿಗೆ ನಿಧಿ ಯನ್ನು ಹಂಚಿಕೊಡಬೇಕು.

೩. ಜಾತಿವರ್ಣಗಳ ಭೇದವಿಲ್ಲದೆ ಸಮಾಜದ ಎಲ್ಲ ವರ್ಗಗಳ ಮಕ್ಕಳ ವಿದ್ಯಾಭಿವೃದ್ಧಿಗೆ, ನಿರ್ಗತಿಕರಿಗೆ ಅನ್ನ-ಬಟ್ಟೆ ನೀಡುವದಕ್ಕೆ ನಿಧಿಯು ಉಪ ಯೋಗವಾಗಬೇಕು.

ಸರ್ವರ ಸಮ್ಮತಿಯಿಂದ ಅದು ನಿರ್ಣಯವಾಯಿತು.

ಸಮಾರೋಪ ಮಾಡುತ್ತ ಬಿಜ್ಜಳರಾಜನು ಕೊನೆಗೆ ಹೇಳಿದನು:

"ನೀವು ಸ್ವೀಕರಿಸಿದ ನಿರ್ಣಯದಂತೆ ನಿಧಿಯ ಸಮಗ್ರ ಆಡಳಿತದ ಮಂತ್ರಿಪದಕ್ಕೆ ನಮ್ಮ ಸಮ್ಮುಖದ ಕಾರ್ಯದರ್ಶಿಯಾಗಿದ್ದ ಬಸವೇಶ್ವರರನ್ನು ನೇಮಿಸುತ್ತೇವೆ. ಇದಲ್ಲದೆ ಅವರನ್ನು 'ಬಸವರಾಜ ದಂಡನಾಯಕ' ಎಂಬ ಅಭಿದಾನದಿಂದ ಮಹಾಮಂತ್ರಿ ಪದವಿಗೇರಿಸಿ ಇದುವರೆಗೆ ನಾವೇ ವಹಿಸಿಕೊಂಡಿದ್ದ ಬಲದೇವ ಮಂತ್ರಿಯ ಅಧಿಕಾರ ಮತ್ತು ಹೊಣೆಯನ್ನು ಬಸವರಾಜ ದಂಡನಾಯಕರಿಗೆ ವಹಿಸಿಕೊಡುತ್ತೇವೆ. ಈ ಘೋಷಣೆ ಈ ಕ್ಷಣ ಕಾರ್ಯಗತವಾಯಿತು."

ಸಭಿಕರ ಹರ್ಷೋದ್ಗಾರ ಕರತಾಡನಗಳಿಂದ ಕಿವಿ ಗಡಚಿಕ್ಕುವಂತಾಯಿತು.

ಮಧುವರಸನ ಸಂಜ್ಞೆಯಿಂದ ಸಭಾಕಾರ್ಯನಿರ್ವಾಹಕನು ಮಂತ್ರಿಯ ಉಡುಗೊರೆಯನ್ನು ಖಡ್ಗವನ್ನು ತಂದು ಪೀಠದ ಮೇಲಿಟ್ಟನು. ಬಿಜ್ಜಳನು ತಾನೇ ಎದ್ದು ಅವುಗಳನ್ನು ಬಸವೇಶ್ವರರಿಗೆ ಅರ್ಪಿಸಿದಾಗ ಸಭೆಯಲ್ಲಿ ಮತ್ತೆ ಜಯಘೋಷವಾಯಿತು. ಬಸವರಾಜರು ನಮ್ರರಾಗಿ ಸ್ವೀಕರಿಸಿ ಸ್ವಲ್ಪ ಮಾತುಗಳಲ್ಲಿಯೇ ದೊರೆಗೆ ಅಭಿವಂದಿಸಿ, ಸಂಗಮದೇವನಿಂದ ತಮ್ಮ ಕರ್ತವ್ಯದಲ್ಲಿ ಸಾಮರ್ಥ್ಯವನ್ನೂ ಸಹೋದ್ಯೋಗಿಗಳಿಂದ ಸಹಕಾರವನ್ನೂ ಕೋರಿದರು.

ಸಭೆಯನ್ನು ಮುಕ್ತಾಯಗೊಳಿಸಿ ಬಿಜ್ಜಳನು ಅರಮನೆಗೆ ತೆರಳಿದನು. ಬಸವೇಶ್ವರ ದಂಡನಾಯಕರಿಗೆ ನೇಮಕವಾದ ಪರಿವಾರ ಅವರನ್ನು ಕಂಡು ಓಲೈಸಿತು. ಹೆಬ್ಬಾಗಿಲಲ್ಲಿ ಅವರಿಗಾಗಿ ರಥವು ಸಿದ್ಧವಾಗಿತ್ತು. ಮಧುವರಸು ಬಸವಣ್ಣನವರನ್ನು ಆದರದಿಂದ ಕೈಹಿಡಿದು ರಥವೇರಿಸಿ ತನ್ನ ರಥವನ್ನೇರಿದನು.

ಆಗಲೇ ಪಹರೆಯ ಭಟರು, ಸೇವಕರು ಮಹಮನೆಗೆ ಬಂದು ಕಾರ್ಯನಿರತರಾಗಿದ್ದರು. ಅವರಿಂದ ಸಂಗತಿ ತಿಳಿದು ಗಂಗಾಂಬಿಕೆ- ನಾಗಲಾಂಬೆಯರು ಹೆಬ್ಬಾಗಿಲಲ್ಲಿ ಸ್ವಾಗತಕ್ಕೆ ಸಿದ್ಧವಾಗಿದ್ದರು. ಬಸವಣ್ಣನವರು ರಥದಿಂದಿಳಿದು ಬಾಗಿಲಿಗೆ ಬರಲು, ಗಂಗಾಂಬಿಕೆ ಅವರ ಪಾದ ತೊಳೆದು ಆರತಿ ಮಾಡಿದಳು. ಬಸವಣ್ಣನವರು 'ಇಂದು ನಿಮಗೆ ವಿಶೇಷವೇನೆನಿಸಿತು?' ಎನ್ನುತ್ತ ಅಕ್ಕನಿಗೆ ವಂದಿಸಿದರು.

ನೀಲಲೋಚನೆಯ ಮದುವೆ

ಮುಂದೆ ಎರಡುವಾರಗಳ ಬಳಿಕೊಂದು ದಿನ ಬೇಗಿನ ಹೊತ್ತಿನಲ್ಲಿ ಅರಮನೆಯಿಂದ ಬಂದ ಗಂಗಾಂಬಿಕೆ ಒಳಗೆ ಬರುವಾಗ ದುಃಖಿಸುತ್ತಿರುವದನ್ನು ಮೊಗಸಾಲೆಯಲ್ಲಿ ಕಂಡ ನಾಗಮ್ಮ 'ಏನಾಯಿತು ಗಂಗಾ ?' ಎಂದು ಕೇಳುತ್ತ ಅವಳೊಡನೆ ಒಳಗೆ ಹೋದಳು.

"ನೀಲಲೋಚನೆ ಮೃತ್ಯು ಮುಖದಲ್ಲಿದ್ದಾಳೆ" ದನಿ ತೆಗೆದು ಅಳಹತ್ತಿದಳು ಗಂಗಾಂಬೆ ! ನಾಗಲಾಂಬೆ ಅವಳ ಕೈಹಿಡಿದು ತಡೆದು ಕೇಳಿದಳು:

"ಅದು ಹೇಗೆ ? ಏನು ವಿಚಾರ ಶಾಂತವಾಗಿ ಹೇಳು."

"ಪ್ರಜಾಪ್ರತಿನಿಧಿ ಸಭೆ ನಡೆದ ದಿನ 'ಇವರ' ಶ್ರೇಯೋಭಿವೃದ್ಧಿಯಾದುದನ್ನು ಕೇಳಿದಾಗಿನಿಂದ ತನ್ನ ಮನದ ನೆನಹಿನಲ್ಲಿಯೇ ಮಗ್ನಳಾಗಿ ನಿದ್ರಾಹಾರಗಳನ್ನು ತೊರೆದು ಬಿಟ್ಟಿದ್ದಾಳಂತೆ ! ಕೈಕಾಲು ವಿಚಲಿತವಾಗಿವೆ. ಇಂದು ಆರಂಭವಾದ ಬಿಕ್ಕಳಿಕೆ ಶ್ವಾಸವನ್ನು ಯಾವಾಗ ನಿಲ್ಲಿಸುವದೋ ತಿಳಿಯದಾಗಿದೆ.' ಮನೋರೋಗ, ಯಾರೇನು ಮಾಡುವದು ?' ಎಂದು ರಾಜವೈದ್ಯರು ನಿರಾಶರಾಗಿದ್ದಾರೆ.

"ಬಿಜ್ಜಳರಾಜರ ವಿಚಾರವೇನು ?"

"ಇವರು ಒಪ್ಪುವದಾದರೆ ಇವರೊಡನೆ ಮದುವೆ ಮಾಡಿಕೊಡಲು ರಾಜರಾಣಿಯರು ಎಂದೋ ಸಿದ್ಧವಾಗಿದ್ದಾರೆ."

"ಈ ಮದುವೆಯಿಂದ ನಿನಗೆ ಅಸಮಾಧಾನವಾಗುವದಿಲ್ಲವೇ ?"

"ಅಸಮಾಧಾನವೇಕೆ ? ಸಮಾಧಾನವೇ ಆಗುವದು. ನಾನು ಮಾಡುವ ಸೇವೆಗೆ ನೀಲಾ ಅಡ್ಡ ಬರುವಳೇ ? ಅವಳೂ ನನ್ನ ಜತೆಗಾರ್ತಿಯಾಗುವಳು."

"ಹಾಗಾದರೆ ಬಸವೇಶನನ್ನು ಕೇಳಿನೋಡುತ್ತೇನೆ."

"ಅಷ್ಟು ಮಾಡು ತಾಯಿ ! ಇವರು ಒಪ್ಪಿದರೆ ಮಾತ್ರ ನೀಲಲೋಚನೆಯ ಪ್ರಾಣ ಉಳಿಯುತ್ತದೆ."

ಅಷ್ಟರಲ್ಲಿ ಹೊರಗಿನಿಂದ ಬಸವೇಶ್ವರರು ಬರುತ್ತಿರುವದನ್ನು ನೋಡಿ ನಾಗಲಾಂಬೆ ಮುಂದೆ ಹೋಗಿ ಅವರನ್ನು ಗಂಗಾಂಬಿಕೆಯ ಕೋಣೆಗೇ ಕರೆದು ತಂದಳು. ಏನೋ ವಿಶೇಷವೆಂದು ಅವರು ಅಕ್ಕನ ಹಾಗು ಮಡದಿಯ ಮುಖನೋಡುತ್ತ ಆಸನದಲ್ಲಿ ಕುಳಿತರು. ನಾಗಲಾಂಬೆ ಮಾತಿಗೆ ಆರಂಭ ಮಾಡಿದಳು.

"ಬಸವೇಶಾ, ನೀಲಾಂಬಿಕೆ ನಿನ್ನಲ್ಲಿ ಪ್ರೇಮಾನುರಕ್ತಳಾಗಿದ್ದಾಳೆ. ಸಂಗಮದಲ್ಲಿ ನಿನ್ನನ್ನು ನೋಡಿದಾಗಿನಿಂದ ಅವಳ ಮನದ ಆರಾಧ್ಯಮೂರ್ತಿಯಾಗಿರುವೆ ನೀನು ! ನಿನ್ನನ್ನೇ ಮನಸಾ ವರಿಸಿ ನಿನ್ನ ಧ್ಯಾನದಲ್ಲಿ ಕೊರಗುತ್ತಿದ್ದಾಳೆ. ನಮಗೆಲ್ಲ ಇದು ತಿಳಿದರೂ ನಿನ್ನ ಆದರ್ಶ ವಿಚಾರಗಳನ್ನು ಕೇದ

ಕುವ ಧೈರ್ಯ ಯಾರಿಗೆ ? ಈಗವಳು ಮರಣಾಂತಿಕ ಅವಸ್ಥೆಯಲ್ಲಿದ್ದಾಳೆ. ನಿನ್ನ ನೆನಹನ್ನೇ ಮನದಲ್ಲಿ ನಿಲ್ಲಿಸಿ ಸಾವಿನ ಸ್ವಾಗತ ನಡಿಸಿದ್ದಾಳೆ. ನೀನು ಮನಸ್ಸು ಮಾಡಿದರೆ ಅವಳನ್ನು ಬದುಕಿಸಬಲ್ಲೆ !"

"ಇದೇನು ಅಕ್ಕ ? ನೀನು ಹೇಳುವದು ಸುಸಂಬದ್ಧವೇ ?"

"ಅಲ್ಲವೆಂದೇ ಇಲ್ಲಿಯವರೆಗೆ ಸುಮ್ಮನಿದ್ದೆವು. ಈಗ ಸುಸಂಬದ್ಧವೆಂದೇ ಭಾವಿಸಬೇಕಾಗಿದೆ. ಈಗಿರುವ ಸಂಪತ್ತು, ಸತಿ, ಸೇವಕರು ನಿನ್ನನ್ನು ಲಂಪಟದಲ್ಲಿ ಸಿಕ್ಕಿಸಿವೆಯೇ ? ನಿನ್ನ ಪಾಲಿಗೆ ಸಂಸಾರ ಸಮುದ್ರವು ಉರದುದ್ದವಿದ್ದರೇನು, ಮರದುದ್ದವಿದ್ದರೇನು ? ಈಸಬಲ್ಲವರು ನೀರಿನ ಆಳವನ್ನೇಕೆ ಲಕ್ಷಿಸಬೇಕು ?"

"ಹೌದು ಸ್ವಾಮೀ, ತಮಗೇನೂ ಬಾಧೆಯಾಗದು; ಸಹೋದರಿಯ ಪ್ರಾಣವನ್ನು ಉಳಿಸಿಕೊಡಿ." ಗಂಗಾಂಬಿಕೆ ಪಾದಕ್ಕೆರಗಿ ನುಡಿದಳು.

"ಭವಿಷತ್ತಿನಲ್ಲಿ ನಿನಗೆ ತೊಡಕಾಗುವದನ್ನು ಗಮನಿಸಲಾರೆಯಾ ಗಂಗಾ ?"

"ಇಲ್ಲ ಸ್ವಾಮಿ, ನಾನು ನನ್ನದು ಎಂಬುದೇ ನನಗಿಲ್ಲದಿರುವಾಗ ನನಗಾವ ತೊಡಕು ? ನನಗೆ ಸಂತೋಷವೇ ಆದೀತು !"

ಬಸವರಸನು ಅಚ್ಚರಿಯಿಂದ ಅವರಿಬ್ಬರ ಮುಖನೋಡಿ ನುಡಿದರು :

"ಅವಳು ಅರಮನೆಯಲ್ಲಿ ಬೆಳೆದು ಪ್ರಭುಗಳ ತಂಗಿಯಾಗಿದ್ದಾಳೆ "

"ಸ್ವತಃ ಬಿಜ್ಜಳರಾಯರೇ ಇದು ವರೆಗೆ ತಡೆದರೂ ಈಗ ಪರಿಸ್ಥಿತಿ ಕೈಮೀರುತ್ತಿರುವದರಿಂದ ತಾವೇ ನಿನ್ನನ್ನು ಕೇಳಬಹುದಾಗಿದೆ·……"

ಸೋಮಣ್ಣ ಓಡುತ್ತ ಬಂದು ಹೇಳಿದನು : ಅಯ್ಯನವರೆ, ಅರಮನೆಯಿಂದ ಕುದುರೆ ಸವಾರ ಬಂದು, ಪ್ರಭುಗಳು ಮಹಾರಾಣಿಯವರೊಡನೆ ಇಲ್ಲಿಗೆ ದಯಮಾಡಿಸುತ್ತಿದ್ದಾರೆಂದು ತಿಳಿಸಿದನಂತೆ, ದ್ವಾರಪಾಲಕನು ಹೇಳಿದನು.

ಮೂವರೂ ಹೆಬ್ಬಾಗಿಲಿಗೆ ಬಂದು, ಬಿಜ್ಜಳರಾಜನನ್ನೂ ರಾಣಿ ಮಲ್ಲಿಕಾಮೋದಿನೀದೇವಿಯನ್ನೂ ಆದರದಿಂದ ಕೈಮುಗಿದು ಸ್ವಾಗತಿಸಿ ಒಳಗೆ ಕರೆದು

ಕೊಂಡು ಹೋದರು. ಸಂದರ್ಶನ ಮಂದಿರದಲ್ಲಿ ಬಂದ ಬಳಿಕ ರಾಣಿಯು ನಾಗಮ್ಮ–ಗಂಗಾಂಬೆಯರೊಡನೆ ಪಕ್ಕದ ಕೋಣೆಗೆ ಸರಿದಳು. ಬಿಜ್ಜಳನು ಆಸನವನ್ನು ಸ್ವೀಕರಿಸಿ ಬಸವಣ್ಣನವರಿಗೂ ಕುಳಿತುಕೊಳ್ಳಲು ಹೇಳುವಾಗ ಅವನ ಮೊಗದಲ್ಲಿ ಮಂದಸ್ಮಿತ ಮೂಡಿತ್ತು.

"ದಂಡನಾಯಕರೆ, ನಿಮಗೊಂದು ಬಿನ್ನಪವನ್ನು ಸಲ್ಲಿಸಲು ನಾವಿಲ್ಲಿಗೆ ಬಂದಿದ್ದೇವೆ. ನೀಲಾಂಬೆ ನಿಮ್ಮನ್ನೇ ಮದುವೆಯಾಗುವ ಆಸೆಯನ್ನಿಟ್ಟು ಕೊಂಡು ಬಹುದಿನಗಳಿಂದ ನವೆಯುತ್ತಿದ್ದಾಳೆ. ಈಗವಳ ಆಸೆ ಪೂರೈಸ ದಿದ್ದರೆ ಅವಳ ಅಂತ್ಯ ನಿಶ್ಚಯವಾಗಿದೆ. ನೀವು ಮನಸ್ಸು ಮಾಡಬೇಕು."

"ಯುಕ್ತವಾದುದನ್ನೇ ಹೇಳುತ್ತಿರುವಿರಾ ಪ್ರಭುಗಳೆ?"

ಬಾಗಿಲಲ್ಲಿ ನಿಂತು ನೋಡುತ್ತಿದ್ದ ರಾಣಿ, ಇದೇ ಸಮಯವೆಂದು ಬಸವಣ್ಣನವರ ಮುಂದೆ ಬಂದರು. "ಅಣ್ಣಾ, ಯುಕ್ತಾಯುಕ್ತವಾದ ವಿಚಾ ರಕ್ಕೆ ಅವಕಾಶವಿಲ್ಲವೀಗ! ಅಯೋಗ್ಯವಾದುದೇನಿದೆ ಇದರಲ್ಲಿ? ನಿಮ್ಮಂತಹ ಆದರ್ಶ ವರ್ತನದವರು ತಮ್ಮನ್ನೇ ತ್ರಿಕರಣಪೂರ್ವಕವಾಗಿ ನಂಬಿದ ಬಾಲೆಯ ಕಷ್ಟಗಳನ್ನು ಗಮನಿಸದಿರುವರೇ? ನೀವು ಈಗ ನೀಲಾಂಬೆಯ ಪ್ರಾಣವನ್ನು ರಕ್ಷಿಸಬೇಕೆಂದು ನಾನು ಕೈಮುಗಿದು ಕೇಳಿಕೊಳ್ಳುತ್ತೇನೆ."

"ಮಹಾರಾಜ್ಞಿಯವರಿಗೆ ಉತ್ತರಕೊಡಲು ನಾನು ಅಸಮರ್ಥನು" ಎನ್ನುತ್ತ ಬಸವಣ್ಣನವರು ಎದ್ದು ಪ್ರತಿಯಾಗಿ ಕೈಮುಗಿದರು ಪುನಃ ಬಿಜ್ಜಳ ರಾಜನೆಂದನು:

"ನಮ್ಮ ಒಂದು ಮಾತನ್ನಾದರೂ ನಡಿಸಿರಿ ಬಸವರಸರೆ! ಅರಮನೆಗೆ ಬಂದು ನೀಲಲೋಚನೆಗೆ ದರ್ಶನ ಕೊಡಿರಿ. ಪ್ರಾಣೋತ್ಕ್ರಮಣದ ಕಾಲಕ್ಕೆ ಪ್ರೇಮಾತುರದ ಜೀವಕ್ಕೆ ಸ್ವಲ್ಪಾದರೂ ಸಮಾಧಾನವಾಗಬಹುದು. ಅಥವಾ ನಿಮಗೆ ಸರಿದೋರಿದರೆ ನಮ್ಮ ಇಚ್ಛೆಯನ್ನಾದರೂ ನಡಿಸಿಕೊಡಬಹುದು."

"ಬರುತ್ತೇನೆ ಪ್ರಭು."

ಒಪ್ಪಿಗೆ ಕೊಟ್ಟರು ಬಸವಣ್ಣನವರು. ಅಷ್ಟರಲ್ಲಿ ಗಂಗಾಂಬೆ, ಪಾನೀಯ, ಪುಷ್ಪಗುಚ್ಛ, ತಾಂಬೂಲಗಳನ್ನೂ ಕುಂಕುಮವನ್ನೂ ತಲೆಯಲ್ಲಿಟ್ಟುಕೊಂಡು ಬಂದಳು.

"ಗಂಗಾಂಬಿಕೆ, ನಿನಗೊಂದು ಭಿಕ್ಷೆ ಕೇಳಲೇನಮ್ಮ ?

"ಆಜ್ಞೆ ಮಾಡಿರಿ ಪ್ರಭುಗಳೇ ! ಭಿಕ್ಷೆಯೇಕೆ ?"

"ನಿಮಗೆಲ್ಲ ಪ್ರಭುವಲ್ಲ ನಾನು ! ಎಂದಿನಂತೆ ನೀಲಲೋಚನೆಯ ಹಾಗೆ ನೀನೂ ನನಗೆ ಸಹೋದರಿ ! ನಿನ್ನ ಸಹೋದರಿಗಾಗಿ ನೀನು ನನಗೆ ತ್ಯಾಗದ ಭಿಕ್ಷೆ ನೀಡಬೇಕಮ್ಮ !"

"ಆಗಲಿ ಅಣ್ಣಾಜಿ, ಅದಕ್ಕೆ ನಾನು ಸಂತೋಷದಿಂದಲೇ ಸಿದ್ಧಳಿದ್ದೇನೆ."

"ನೀವು ನಿಮ್ಮ ದಾರಿಯನ್ನು ಸರಳ ಮಾಡಿಕೊಳ್ಳುತ್ತಿದ್ದೀರಿ ಪ್ರಭುಗಳೇ !" ಬಸವರಾಜರೆಂದರು. ಬಿಜ್ಜಳನು ನಸುನಗೆಯಿಂದ ರಾಣಿಯ ಮುಖ ನೋಡಿದನು. ಆಸೆಯ ಸುಳಿಗಾಳಿ ಸುಳಿದಿತ್ತೆಲ್ಲರ ನಡುವೆ ಆಗಲೇ !


ವೇಳೆಗಳೆಯುವಂತಿಲ್ಲವೆಂದು ಹೊರಟು ನಿಂತ ದೊರೆಗೆ ಅವಸರದಿಂದ ಉಪಚಾರದ ವಿಧಾನ ನೆರವೇರಿಸಿದಂತಾಯಿತು. ಎಲ್ಲರೂ ಎರಡು ರಥಗಳಲ್ಲಿ ಅರಮನೆಗೆ ಬಂದರು. ಅಕ್ಕನಾಗಮ್ಮ – ಗಂಗಾಂಬೆಯರು ನೇರವಾಗಿ ನೀಲಾಂಬೆಯ ಕೋಣೆಗೆ ನಡೆದರು. ಸ್ವಲ್ಪ ಹೊತ್ತಿನ ಬಳಿಕ ಮಹಾರಾಣಿ ಬಸವೇಶ್ವರರನ್ನು ಹಿಂದುಗೊಂಡು ಅಲ್ಲಿಗೆ ಬಂದು ನೀಲಲೋಚನೆಗೆ—"ನೀಲಾ ನಿನ್ನ ದೇವರನ್ನು ಕರೆದುತಂದಿದ್ದೇವೆ; ನೋಡು" ಎಂದಳು.

ಕಣ್ಣರಳಿಸಿ ಹೊರಳಿ ನೋಡಿದಳು ನೀಲಾಂಬೆ ! ಅವಳ ಕಣ್ಣುಗಳ ಕಾಂತಿಯ ಹೊರತು ಶರೀರವೆಲ್ಲ ಸುಕ್ಕುಗೊಂಡಿತ್ತು. ನೋಡಿ ಬಸವಣ್ಣನವರ ಅಂತಃಕರಣ ಕರಗಿ ನೀರಾಯಿತು. ಗಂಗಾಂಬೆ ಕೈನೀಡಿದ್ದರಿಂದ ನೀಲಲೋಚನೆ ಎದ್ದು ಅವಳ ಆಸರದಿಂದ ಮೆಲ್ಲನೆ ತಲ್ಪದಿಂದ ಕೆಳಗಿಳಿದು ಬಸವೇಶ್ವರರ ಪಾದದ ಮೇಲೆ ತಲೆಯಿಟ್ಟು ಪಾದಧೂಳಿಯನ್ನು ಮುಡಿಯಲ್ಲಿ ತಳೆದಳು. ಬಸವಣ್ಣನವರು ಅವಳ ತೋಳುಗಳನ್ನು ಹಿಡಿದು ಎಬ್ಬಿಸಿ ಮೆಲ್ಲಗೆ ಹಾಸಿಗೆಯ ಮೇಲೆ ಮಲಗಿಸಿದರು. ಅವರ ಕೈಗಳನ್ನು ಹಿಡಿದುಕೊಂಡು ಕ್ಷಣಹೊತ್ತು ಅವರ ಮುಖವನ್ನೇ ನೋಡಿದಳು ನೀಲಾಂಬೆ ! ಆಕೆಯ ಮೊಗದಲ್ಲಿ ಬೆಳಗು ಮೂಡಿ ಅರಳಿದ್ದಿತು. ಬಾಗಿಲಲ್ಲಿ ನಿಂತುನೋಡುತ್ತಿದ್ದ ರಾಜರಾಣಿಯರು ಸಮಾಧಾನದ ಉಸಿರುಬಿಟ್ಟರು.

ದಂಡನಾಯಕರ ಮನಸ್ಸು ಒಳಗೆ ಮೊರೆಯಿಡುತ್ತಿತ್ತು ದೇವನಲ್ಲಿ:

ಸಂಸಾರವೆಂಬ ಬಲೆಯಲ್ಲಿ ಸಿಲುಕಿದೆನಯ್ಯಾ !
ಎನ್ನುವನು ಕಾಯಯ್ಯಾ ಕಾಯಯ್ಯಾ !
ಹುರುಳಿಲ್ಲ ಹುರುಳಿಲ್ಲ !
ಕೂಡಲಸಂಗಮದೇವಾ ಶಿವಧೋ ಶಿವಧೋ ! ಎಂದು.

ಅಂದಿನಿಂದ ನೀಲಾಂಬೆಯ ಆರೋಗ್ಯ ಉತ್ತಮಗೊಳ್ಳುತ್ತ ನಡೆದು ಕೆಲವು ವಾರಗಳಲ್ಲಿ ಅಡ್ಡಾಡುವಂತಾದಳು. ಬಳಿಕ ಅವಳಿಗೆ ರುದ್ರಮುನಿ ದೇವರಿಂದ ಲಿಂಗಧಾರಣವಾಗಿ ಚಂದಲಾಪುರ ಬಿಜ್ಜೇಶ್ವರ ದೇವಾಲಯದಲ್ಲಿ ನಿರಾಡಂಬರದ ರೀತಿಯಿಂದ ಬಸವರಸರೊಡನೆ ಆಕೆಯ ಮದುವೆಯಾಯಿತು. (ಕ್ರಿ. ವ. ೧೧೫೪).



ಬಸವಯುಗದ
ಐತಿಹಾಸಿಕ ಸ್ಥಳಗಳು
ಗುರ್ಜರ
ಕರ್ಹಾಡ
ಮಂಗಳವಾಡ
ಬಾಗೇವಾಡಿ
ಸಂಗಮ
ಕೃಷ್ಣಾನದಿ
ವರಂಗಲ್ಲು

೮. ರಾಜಕಾರಣ ರಂಗ

ತೈಲಪನ ತಲೆಯಲ್ಲಿ ಗೊಂದಲ

ಚಕ್ರವರ್ತಿ ನೂರ್ಮಡಿ ತೈಲಪದೇವನು ದೇಶ ವಿದೇಶಗಳಿಂದ ಗಣಿಕೆಯರನ್ನು ಸಂಗ್ರಹಿಸುವದರಲ್ಲಿ ಹೊಯ್ಸಳ ನರಸಿಂಹರಾಜನೊಡನೆ ಸ್ಪರ್ಧೆಗಿಳಿದಿದ್ದನು. ಅವನ ವಿಲಾಸಭೋಗದ ಅತಿಲಾಲಸೆಗೆ ಬಿಜ್ಜಳನು ಅನುಕೂಲತೆಗಳನ್ನು ಕಲ್ಪಿಸುತ್ತಿದ್ದನು; ವಿರೋಧಿಸುತ್ತಿರಲಿಲ್ಲ. ಚಕ್ರವರ್ತಿಯು ವಿಷಯವ್ಯಾಮೋಹಾತಿರೇಕವು ಪ್ರಚುರಗೊಂಡು ಪ್ರಜೆಗಳಲ್ಲಿ ಜಿಗುಪ್ಸೆಯುಂಟಾದರೆ, ತನ್ನ ಸರ್ವಾಧಿಕಾರತ್ವವು ಸಮರ್ಥವಾಗುವದೆಂದು ಬಿಜ್ಜಳನ ಎಣಿಕೆ! ರಾಜ್ಯಾದಾಯದಲ್ಲಿಯ ರಾಜಾಂಶವನ್ನು ಚ್ಯುತಿಯಿಲ್ಲದೆ ಅರಮನೆಯ ಕೋಶಾಗಾರಕ್ಕೆ ಕಳುಹಿಬಿಡುತ್ತಿದ್ದನು. ತೈಲಪನು ಅದನ್ನೆಲ್ಲ ತೂರಿ ಹೆಚ್ಚಿಗೆ ಬೇಡಿದರೆ ಮುಂದಿನ ವರ್ಷದ ಮುಂಗಡವೆಂದು ರಾಜ್ಯಭಂಡಾರದಿಂದ ಹಣ ಪೂರೈಸುತ್ತಿದ್ದನು. ತನ್ನ ಕೈ ಬಲಿಯುವ ವರೆಗೆ ಚಕ್ರವರ್ತಿಯ ವಿಲಾಸಕ್ಕೆ ಹಣದ ಕೊರತೆಯಾಗದಂತೆ ನೋಡುತ್ತಿದ್ದನು.

ಚಕ್ರವರ್ತಿಯು ಹೊಲಸು ಬಾಳುವೆಗೆ ಹೇಸಿದ ಮೇಲೆ ಅವನ ರಾಣಿ ಮಾಹೇಶ್ವರೀದೇವಿ ತನ್ನ ಮಗನೊಡನೆ ಸಹೋದರನಾದ ವಿಜಯಾರ್ಕದೇವನ ಹತ್ತಿರ ಕರ್ಹಾಡದಲ್ಲಿರುತ್ತಿದ್ದಳು. ಮತ್ತು ಬಿಜ್ಜಳನ ವಿರೋಧಿಗಳನ್ನು ಸಂಘಟಿಸಿ ಬಿಜ್ಜಳನನ್ನು ಎದುರಿಸಲು ಅಣ್ಣನನ್ನು ಹುರಿದುಂಬಿಸುತ್ತಿದ್ದಳು.

ಧೂರ್ತನಾದ ಬಿಜ್ಜಳನ ಸರ್ವಾಧಿಕಾರತ್ವವು ರಾಜ್ಯಾಪಹಾರದಲ್ಲಿ ಪರಿವರ್ತನೆ ಹೊಂದುವದೆಂದು ಚಾಣಾಕ್ಷರಾದ ಮಾಂಡಲಿಕರಾಜರು ಊಹಿಸಿದ್ದರು. ಸಾಮ್ರಾಜ್ಯದ ದಕ್ಷಿಣಭಾಗದ ಹಲವು ಮಾಂಡಲಿಕರು ಬಿಜ್ಜಳನನ್ನು ಎದುರಿಸಲು ಸಜ್ಜಾಗುತ್ತಿದ್ದರು. ನೊಳಂಬವಾಡಿಯ ಸಾಮಂತರು ಬಿಜ್ಜಳನ ಆಡಳಿತವನ್ನು ಸಮ್ಮತಿಸಿರಲಿಲ್ಲ. ಹೊಯ್ಸಳರು ಈಗ ಚಾಲುಕ್ಯರ ಸಾರ್ವಭೌಮತ್ವದಿಂದ ಸ್ವತಂತ್ರರಾಗಿದ್ದರು. ಇವರಿಬ್ಬರನ್ನು ಕೂಡಿಕೊಂಡು

ಹೊಯ್ಸಳರ ಸಾಮಂತನಾದ ಉಚ್ಚಂಗಿಯ ವೀರಪಾಂಡ್ಯನು, ತೈಲಪನನ್ನು ಪುನಃ ಅಧಿಕಾರಕ್ಕೆ ತರುವ ನೆವದಿಂದ ಚಾಲುಕ್ಯರಾಜ್ಯದ ಮೇಲೆ ಏರಿ ಬರಲು ಬನವಾಸಿಯ ಗಡಿಯಲ್ಲಿ ಸೈನ್ಯವನ್ನು ಸಂಗ್ರಹಿಸುತ್ತಿದ್ದನು. ಬನವಾಸಿಯಲ್ಲಿ ಮಂಡಲೇಶ್ವರನಾದ ಮಹಾದೇವರಸು ಮೊದಲು ಚಕ್ರವರ್ತಿಗೆ ದಂಡನಾಯಕ ನಾಗಿದ್ದವನು ! ಮತ್ತು ಅಂತರಂಗದಲ್ಲಿ ತೈಲಪದೇವನಿಗೆ ಸ್ನೇಹಿತನಾದವನು. ಅವನು ಒಳಗೊಳಗೆ ಬಿಜ್ಜಳನ ವಿರೋಧಿಗಳಿಗೆ ಅನುಕೂಲವಾಗಿ ಚಕ್ರವರ್ತಿ ಯನ್ನು ಕಲ್ಯಾಣದಿಂದ ಹೊರಡಿಸಿ ಅವರ ಕಡೆಗೆ ಕರೆದು ತರುವದನ್ನು ಒಪ್ಪಿ ಕೊಂಡಿದ್ದನು. ಅದರಂತೆ ಅವನು (ಕ್ರಿ. ಶ ೧೧೫೪) ಗಡಿನಾಡಿನಲ್ಲಿ ಅಶಾಂತಿಯುಂಟಾದುದರ ಬಗೆಗೆ ಆಲೋಚನೆ ನಡೆಸಲು ಮಹಾಮಂಡಲೇಶ್ವರ ರನ್ನು ಕಾಣುವ ಕಾರಣವನ್ನು ಮುಂದಿಟ್ಟು ಕಲ್ಯಾಣಕ್ಕೆ ಬಂದನು. ತನ್ನ ಈ ಕರ್ತವ್ಯದ ನಟನೆಯನ್ನು ಮುಗಿಸಿದ ಬಳಿಕ ತೈಲಪದೇವನನ್ನು ಕಂಡನು. ಚಂಚಲ ಮನದ ಮಹಾರಾಜನ ತಲೆಯಲ್ಲಿ ಪುನರಧಿಕಾರದ ಹುಚ್ಚು ಹೊಗಿಸಿ ಗೋಕರ್ಣಯಾತ್ರೆ ನೆವದಿಂದ ಕಲ್ಯಾಣ ಬಿಡುವದಕ್ಕೆ ಒಪ್ಪಿಸಿ ಹೋದನು.

ತೈಲಪನು ಬಿಜ್ಜಳರಾಯನನ್ನು ಬರಮಾಡಿಕೊಂಡು ತನ್ನ ಗೋಕರ್ಣ ಯಾತ್ರೆಯ ಆಸೆಯನ್ನು ತಿಳಿಸಿ ತಕ್ಕ ಏರ್ಪಾಡು ಮಾಡಲು ಕೇಳಿಕೊಂಡನು. ಯಾತ್ರೆಯ ಉದ್ದೇಶದ ಬಗೆಗೆ ಸಂದೇಹಪಟ್ಟರೂ, ಬಿಜ್ಜಳನು ಚಕ್ರವರ್ತಿಯ ಅವಿವೇಕ ಅವಿಚಾರಗಳ ಮರೆಯಲ್ಲಿ ಅವನನ್ನು ಹತ್ತಿಕ್ಕುವ ತಂತ್ರವನ್ನು ಯೋಚಿಸಿದ್ದನಾದ್ದರಿಂದ ತತ್‌ಕ್ಷಣ ತನ್ನ ಸಮ್ಮತಿಯನ್ನು ವ್ಯಕ್ತಪಡಿಸಿದನು. ತಾನಾಗಿಯೇ ವಿಕ್ರಮಾದಿತ್ಯರ ನಿಧಿಯಿಂದ ಚಕ್ರವರ್ತಿಗೆ ದೊರೆಯಬೇಕಾ ಗಿದ್ದ ರಾಜಾಂಶದ ಪ್ರಸ್ತಾಪಮಾಡಿ, ತಾತ್ಕಾಲಿಕವಾಗಿ ೨ ಲಕ್ಷ ಸುವರ್ಣ ನಾಣ್ಯಗಳನ್ನು ಕೊಟ್ಟು ಲೆಕ್ಕಾಚಾರ ಬರಬೇಕಾದ ಮಿಕ್ಕ ಧನವನ್ನು ಹಿಂದಿ ನಿಂದ ಸಲ್ಲಿಸಲಾಗುವದೆಂದು ಹೇಳಿಬಿಟ್ಟನು. ಇಷ್ಟೊಂದು ತನಗೆ ಹಿತಚಿಂತ ಕನಾಗಿ-ಸರಳವಾಗಿ-ವರ್ತಿಸುವ ಬಿಜ್ಜಳನಲ್ಲಿ ಸಂದೇಹವನ್ನು ತಾಳುವದು ಸರಿಯೇ ? ಎಂದು ತೈಲಪನು ಅನುಮಾನಿಸಿದನು. ಪರಸ್ಪರ ಗೌರವಾರ್ಪಣ ದಲ್ಲಿ ಸಂದರ್ಶನ ಮುಗಿಯಿತು.

ಗೊತ್ತಾದ ದಿನ ತೈಲಪನು, ತನ್ನ ಇನ್ನೂರಾ ಐವತ್ತು ಜನ ಗಣಿಕೆಯ ರಲ್ಲಿ ಆರಿಸಿದ ಐವತ್ತು ಜನ ಚತುರ ಗಣಿಕೆಯರು, ಎರಡುನೂರು ಜನ ರಕ್ಷ

ಣಾಭಟರು, ಕರಣಿಕರು, ಸೇವಕರು, ಹೇರಿನವರು, ಹೆಗ್ಗಡೆಯಾದಿ ಅಧಿಕಾರಿಗಳು ಇವರೆಲ್ಲರೊಡನೆ ಅಣ್ಣಿಗೇರಿಗೆ ಬಂದನು. ಅಲ್ಲಿ ಕೆಲವು ತಿಂಗಳು ನಿಂತು, ಗೋಕರ್ಣಕ್ಕೆ ತೆರಳಿದನು. ಬಿಜ್ಜಳನ ಅಪ್ಪಣೆಯಂತೆ ಮಹದೇವರಸು ಅಲ್ಲಿ ಅವರ ಬೀಡಾರದ ವ್ಯವಸ್ಥೆ ಮಾಡಿ ಕಾದಿದ್ದನು.

ಗೋವೆ ಹೈವೆಗಳ ಸಾಮಂತರಾಜನಾದ ಶಿವಚಿತ್ತಪೆರ್ಮಾಡಿಯು ಕಲ್ಯಾಣದ ಆಡಳಿತಕ್ಕೆ ನಿಷ್ಠನಾಗಿದ್ದನು. ಬಸವಣ್ಣನವರ ಪೂರ್ವ ಪರಿಚಿತನಾದ ಆತನು ಅವರ ಆರ್ಥಿಕ ವ್ಯವಸ್ಥೆಯಲ್ಲಿ ಸಹಕರಿಸಿದ್ದನು. ಆದರೆ ಅವನ ಸಹೋದರ ವಿಷ್ಣುಚಿತ್ತನು ರಾಜ್ಯದ ಹಕ್ಕಿಗಾಗಿ ಕಲಹ ಮಾಡುತ್ತಿದ್ದು ತನ್ನ ಕಾರ್ಯಸಾಧನೆಗೆ ತೈಲಪನನ್ನು ಆಶ್ರಯಿಸುವ ಯೋಚನೆ ಮಾಡಿದನು. ಮಹದೇವರಸನ ಮಧ್ಯಸ್ಥಿಯಿಂದ ತೈಲಪದೇವನ ವಿಶ್ವಾಸವನ್ನು ಗಳಿಸಿದನು. ಈ ಬಗೆಯ ಜನಸಂಗ್ರಹದಿಂದ ತನ್ನ ಅಧಿಕಾರವನ್ನು ಪುನಃ ಪ್ರತಿಷ್ಠಿಸುವ ಆಸೆ ತೈಲಪದೇವನಲ್ಲಿ ಬಲವಾಯಿತು. ತನ್ನ ಅಸಾಮರ್ಥ್ಯದ ಅರಿವು ಕೆಲವುಕಾಲ ಮರೆಯಾಯಿತು. ಶಿವಚಿತ್ತನು ತನ್ನ ವಿಶ್ವಾಸಕ್ಕೆ ಬಾರನೆಂದು ಭಾವಿಸಿ ಕೆಲವು ವಾರಗಳಲ್ಲಿ ಗೋವೆಯಿಂದ ಮರಳಿ ಅಣ್ಣಿಗೇರಿಯಲ್ಲಿ ಬಂದು ನಿಂತನು. ಹೊಯ್ಸಳರೂ ಅವರ ಸಾಮಂತರೂ ನೀಡುವ ಸೈನಿಕ ಸಹಾಯವನ್ನು ಸ್ವೀಕರಿಸಲು ಸಿದ್ಧನಾದನು. ಅದಕ್ಕೆ ಕಡಿಮೆಯಾಗದಂತೆ ತನ್ನ ಸ್ವಂತ ಸೈನ್ಯವನ್ನು ಸಂಗ್ರಹಿಸಲು ಹಣ ಬೇಕಾಯಿತು. ಅದೇ ಕಾಲಕ್ಕೆ ಗೋವೆ, ಹೈವೆ, ಕದಂಬಾಳಿಗೆ, ಸಂತಳಿಗೆಗಳಿಗೆ ಆ ವರ್ಷಕ್ಕೆ ವಿಕ್ರಮಾದಿತ್ಯರ ನಿಧಿಯಿಂದ ಸಲ್ಲಬೇಕಾಗಿದ್ದ ಹಣವು ೬೦ ಲಕ್ಷ ವರಹಗಳು ಭಟರ ರಕ್ಷಣೆಯಲ್ಲಿ ಕಲ್ಯಾಣದಿಂದ ಹೊರಟಿರುವದು ಗೊತ್ತಾಯಿತು. ಆ ಧನವನ್ನು ಅಪಹರಿಸಿ ತರಲು ವಿಷ್ಣುಚಿತ್ತನಿಗೆ ಆಜ್ಞೆಮಾಡಿ ತಾನು ಬನವಾಸಿಗೆ ಹೊರಟು ಬಂದು ಅಲ್ಲಿ ನೆಲೆಯೂರಿದನು.

ವಿಷ್ಣುಚಿತ್ತನು ಇನ್ನೂರು ಜನರೊಡನೆ ಹೊರಟು, ತರ್ದೆವಾಡಿ ಮಂಡಲದಲ್ಲಿ ಧನವು ಬರುವ ಮಾರ್ಗದಲ್ಲಿ ಅವಿತುಕೊಂಡಿದ್ದು ಒಂದು ರಾತ್ರಿ ರಕ್ಷಕಪಡೆಯನ್ನು ನಾಶಗೊಳಿಸಿ ಧನದ ಪೆಟ್ಟಿಗೆಗಳನ್ನು ಅಪಹರಿಸಿಕೊಂಡು ಹೋದನು. ತರ್ದೆವಾಡಿಯ ಮಂಡಲಾಧಿಪತಿ ಮೈಲಾರದೇವನು ಶೋಧನೆ-ವಿಚಾರಣೆ ನಡೆಯಿಸಿ, 'ತೈಲಪದೇವರ ಪ್ರೇರಣೆಯಿಂದ ಈ ಕಾರ್ಯ ನಡೆದುದು'

ಎಂಬ ವರದಿಯನ್ನು ಕಲ್ಯಾಣಕ್ಕೆ ಕಳುಹಿದನು. ದರೋಡೆಯಾದ ೬೦ ಲಕ್ಷ ವರಹಗಳಲ್ಲಿ ೨೦ ಲಕ್ಷ ವರಹಗಳು ಮಾತ್ರ ನಗದು ನಾಣ್ಯಗಳಿದ್ದವು. ಬಸವರಾಜರ ಜಾಣತನದಿಂದ ಉಳಿದ ೪೦ ಲಕ್ಷ ವರಹಗಳಿಗೆ ಆಯಾ ಮಂಡಲಗಳಿಂದ ಕೇಂದ್ರಕ್ಕೆ ಸಲ್ಲಬೇಕಾಗಿದ್ದ ರಾಜ್ಯಾದಾಯದ ಹಣಕ್ಕೆ ಎದುರಾಗಿ, ಲೆಕ್ಕ ಬದಲಾಯಿಸಿಕೊಳ್ಳಬೇಕಾಗಿದ್ದ ಸಳ್ಳಿಕೆ ಪತ್ರಗಳು ಮಾತ್ರ ಕಳಿಸಲ್ಪಟ್ಟಿದ್ದವು. ದಸ್ಯುವಿನಂತೆ ಧನಾಪಹಾರ ಮಾಡಿಸಿದ ದೊಡ್ಡ ಅಪಕೀರ್ತಿ ಮಾತ್ರ ತೈಲಪನಿಗೆ ಬಂದದ್ದಾಯಿತು, ನಿರೀಕ್ಷಿಸಿದ ಧನ ದೊರೆಯಲಿಲ್ಲ.

ಬನವಾಸಿಯನ್ನು ನೆಲೆವೀಡು ಮಾಡಿಕೊಂಡು ಸುತ್ತಲಿನ ನಾಲ್ಕು ಮಂಡಲಗಳ ಆಡಳಿತವನ್ನು ತಾನೇ ವಹಿಸಿಕೊಂಡುದನ್ನು ತೈಲಪದೇವನು ಪ್ರಕಟಿಸಿದನು. ಸಾಮಂತ ಮನ್ನೆಯರ ಸಭೆ ಕರೆದು ರಾಜನಿಷ್ಠೆಯ ಪ್ರತಿಜ್ಞೆ ಮಾಡಿಸಿಕೊಂಡನು. ಮೊದಲಿನ ಆಡಳಿತದ ಮಂಡಲೇಶ್ವರ ಮಹದೇವರಸನನ್ನು ಪದಚ್ಯುತಗೊಳಿಸುವ ನಾಟಕ ನಡಿಸಿದನು. ಅವನನ್ನು ತನ್ನ ಹೊಸ ಆಡಳಿತದಲ್ಲಿ ಮಂತ್ರಿಯಾಗಿ ಮಾಡತಕ್ಕವನಿದ್ದನು. ಚಟ್ಟಿಮರಸ ಮುಂತಾದ ನಿಷ್ಠ ಕರಣಾಧಿಕಾರಿಗಳನ್ನು ಬಂಧನದಲ್ಲಿಟ್ಟನು. ವಿಷ್ಣುಚಿತ್ತನನ್ನು ತನ್ನ ರಕ್ಷಕ ದಳದ ನಾಯಕನನ್ನಾಗಿಸಿದನು ಮಹದೇವರಸನು ತನ್ನ ಪದಚ್ಯುತಿಯ ಹಾಗು ಅಸಹಾಯಕತೆಯ ಅಳುಬುರುಕತನದ ಕೃತ್ರಿಮ ವರದಿಯನ್ನು ಕಲ್ಯಾಣಕ್ಕೆ ಕಳುಹಿದನು. ಬಂಧಿತನಾದ ಚಟ್ಟಿಮರಸನು ಮಾತ್ರ ನಿಜ ಸಂಗತಿಯನ್ನು ವಿವರಿಸಿದ ಪತ್ರವನ್ನು ಬಹಳ ಸಾಹಸದಿಂದ ಗುಪ್ತವಾಗಿ ಬಿಜ್ಜಳರಾಜನಿಗೆ ಕಳುಹಿದ್ದನು.

ಬಸವರಾಜರ ರಾಯಭಾರ

ವೈಲಾರದೇವನ, ಮಹದೇವರಸನ, ಚಟ್ಟಿಮರಸನ ಅನಿರೀಕ್ಷಿತ ಪತ್ರಗಳಿಂದ ಬಿಜ್ಜಳನು ಚಿಂತಾಕ್ರಾಂತನಾದನು. ಆದರೂ ಈ ಘಟನೆಗಳಿಂದುಂಟಾದ ಕೋಲಾಹಲವನ್ನು ಅಡಗಿಸಲು ತಾನು ಶಕ್ತನಾದರೆ, ಚಾಲುಕ್ಯ ರಾಜ್ಯವನ್ನು ಅಳಿಯಿಸಿ ಕಲಚೂರ್ಯ ಸಾಮ್ರಾಜ್ಯವನ್ನು ಸ್ಥಾಪಿಸಲು ಇದು ಅನುಕೂಲವಾದ ಕಾರಣವೇ ಆಗುವದೆಂದು ಭಾವಿಸಿದನು.

ಮಂತ್ರಿ ಮಂಡಲದ ಸಭೆ ಕರೆದು ಈ ಮೂರು ಪತ್ರಗಳನ್ನಿಟ್ಟು ಪರಿಸ್ಥಿತಿಯ ವಿವೇಚನೆ ನಡೆಯಿಸಿದನು. ಪ್ರಜೆಗಳ ಸುಖೀಜೀವನದ ಸಂಘಟನೆ ನಡೆ

ದಿರುವಾಗ ಚಕ್ರವರ್ತಿ ತೈಲಪನು ರಾಜ್ಯದಲ್ಲಿ ಒಡಕು ಹುಟ್ಟಿಸುವದು, ದರೋಡೆಯಂತಹ ಹೀನಕೃತ್ಯ ಕೈಕೊಂಡುದು, ಪರರಾಜರ ದೊಡ್ಡ ಸೈನ್ಯವನ್ನು ರಾಜ್ಯದಲ್ಲಿ ಬರಮಾಡಿಕೊಳ್ಳುತ್ತಿರುವದು ಆತ್ಮಘಾತಕ-ದೇಶದ್ರೋಹದ ಕಾರ್ಯಗಳೆಂದು ಮಂಚಣ್ಣ-ಮಧುವರಸು-ಬಸವರಾಜರು ನಿಷೇಧಿಸಿ ಮಾತಾಡಿದರು. ನಿಧಿಯು ಹಂಚಿಕೆಯಲ್ಲಿ ಪರಾಭವಗೊಂಡ ಕುನುಸಿನಿಂದ ನಾರಣಕ್ರಮಿತನು ಮಧುವರಸು-ಬಸವರಸರನ್ನು ವಿರೋಧಿಸಿ ಮಾತನಾಡ ಹೋಗಿ ಮತ್ತೆ ಮುಖಭಂಗವನ್ನೇ ಮಾಡಿಕೊಂಡನು. ಬಿಜ್ಜಳನು ಮಂತ್ರಿಗಳ ಸಲಹೆಯಂತೆ, ಬನವಾಸಿಮಂಡಲದ ಗಡಿಗೆ ದೊಡ್ಡ ಸೈನ್ಯ ಕಳುಹಿ, ಹೊಯ್ಸಳರ ಆಕ್ರಮಣವನ್ನೂ ತೈಲಪನ ಕಾರಸ್ಥಾನವನ್ನೂ ತಡೆಯಬೇಕೆಂದು ನಿರ್ಣಯಿಸಿ ಕೂಡಲೇ ಆ ಏರ್ಪಾಡು ಮಾಡುವದಾಗಿ ಹೇಳಿದನು.

ದೇಶದಲ್ಲಿಯ ಅಂತರ್ಯುದ್ಧಗಳನ್ನು ತಡೆಯುವದಕ್ಕಾಗಿ ತೈಲಪದೇವರ ಮನವೊಲಿಸಿ ಅವರನ್ನು ಕಲ್ಯಾಣಕ್ಕೆ ಕರೆತರಬೇಕೆಂದೂ ಇಲ್ಲದಿದ್ದರೆ ಅವರು ತಮ್ಮ ಸಿಂಹಾಸನವನ್ನು ತಮ್ಮ ಪುತ್ರ ಕೀರ್ತಿವರ್ಮನಿಗೆ ಬಿಟ್ಟುಕೊಡುವಂತೆ ಮಾಡಬೇಕೆಂದೂ ಇದಕ್ಕಾಗಿ ಒಬ್ಬ ಮಂತ್ರಿಯು ಅವರ ಹತ್ತಿರ ಹೋಗಿ ಸಂಧಾನ ನಡೆಯಿಸಬೇಕೆಂದೂ ಬಸವರಾಜರು ಸಲಹೆ ಮಾಡಿದರು. ಉಳಿದ ಮಂತ್ರಿಗಳೂ ಇದನ್ನು ಅನುಮೋದಿಸಿದರು ಆದರೆ ಈ ಕಾರ್ಯ ನಿರ್ವಹಿಸುವ ಮಂತ್ರಿ ಯಾರು? 'ಬಸವರಾಜ ದಂಡನಾಯಕರೇ ತಕ್ಕವರೆ'ಂದು ಎಲ್ಲರ ಮತವಿತ್ತು. ವಿವೇಕವಿಲ್ಲದ ಸಮ್ರಾಟನ ಹತ್ತಿರ ಹೋಗುವದು ಗಂಡಾಂತರಕಾರಿಯಾಗಿತ್ತು ಬಸವಣ್ಣನವರನ್ನು ಆ ಆಪತ್ತಿನಲ್ಲಿ ಶಿಲುಕಿಸಲು ಬಿಜ್ಜಳನಿಗೆ ಮನಸ್ಸಾಗದು. ಆದರೆ ಕರ್ತವ್ಯ ಮುಂದಿರುವಾಗ ಹೆದರಿ ಹಿಂಜರಿಯುವ ಸ್ವಭಾವದವರಲ್ಲ ಬಸವರಾಜರು ! ಸಿದ್ಧರಾದರು !! ಕಲಹದ ನಿವಾರಣೆಗೆ ಪ್ರಯತ್ನಿಸುತ್ತಿರುವಾಗ ಸೈನಿಕರು ಸಂಗಡಿರುವದು ಒಳಿತಲ್ಲವೆಂದು, ತಮ್ಮ ಸಂಗಡ ದಾರಿಯ ಜೊತೆಗಾರರೆಂದು ಕೇವಲ ಹತ್ತು ಜನ ಸವಾರರನ್ನು ಕರಕೊಂಡು ಬನವಾಸಿಗೆ ಹೋದರು.

ನಗರದ ಹೊರಗೆ ವರದಾ ನದಿಯ ತೀರದ ಮಠದಲ್ಲಿ ಬೀಡಾರಮಾಡಿ, ಎರಡು ದಿವಸ ತಮ್ಮ ಪೂರ್ವ ಪರಿಚಯದ ಸೂರಣಸೆಟ್ಟರಿಂದ ನಗರದ ವಿದ್ಯಮಾನಗಳನ್ನು ಅರಿತುಕೊಂಡರು. ಚಕ್ರವರ್ತಿಯು ಉತ್ಸವಾಚರಣೆಯ

ಸಿದ್ಧನೆಂದೂ ಅವನಿಂದ ಸುವರ್ಣಯಾಗ ಮಾಡಿಸಿ ದೇವಿಯಿಂದ 'ರಣವಿಜಯ' ಕಂಡೆಯ ಪಡೆದರೆ ಯಾರಿಂದಲೂ ಭಯವಿಲ್ಲ'ವೆಂದೂ ಹೇಳಿದ್ದನು. ಭಯ ಗ್ರಸ್ತನಾದ ತೈಲಪನು ಈ ಹುಚ್ಚು ಆಸೆಯ ಹಿಡಿದು ಹಂಪಿಯಕಡೆಗೆ ಹೋಗಿದ್ದನು. ವಿಷ್ಣುಚಿತ್ತನು ಪೂರ್ವಯೋಜನೆಯಂತೆ ಅಲ್ಲಿ ತನ್ನ ಹಸ್ತಕನೊಬ್ಬನನ್ನು ಸಿದ್ಧನನ್ನಾಗಿಸಿ ಹೋಮದ ನಾಟಕ ಮಾಡಿಸಿ ೧ ಲಕ್ಷ ಸುವರ್ಣ ನಾಣ್ಯಗಳನ್ನು ಅಪಹರಿಸಿದನು.

ಈ ಸಮಯದಲ್ಲಿ ಮತ್ತೊಂದು ಅವಾಂತರ ಉಂಟಾಗಿತ್ತು. ತ್ರಿಭುವನ ಮಲ್ಲ ವಿಕ್ರಮಾದಿತ್ಯರ ಕಾಲದಲ್ಲಿ ಅವರ ಹಿರಿತನದಲ್ಲಿ ಎಲ್ಲ ಸಾಮಂತರಾಜರೂ ಹೊಯ್ಸಳ ಹಾಗು ಪ್ರೋಲ್ಲರಾಜರೂ ಸೇರಿ ಪಂಪಾಪತಿ ವಿರೂಪಾಕ್ಷದೇವರು ಸಕಲ ರಾಜ್ಯಗಳ ಅಧಿದೇವತೆ ಎಂದು ಮಾನ್ಯ ಮಾಡಿದ್ದರು. ಸುತ್ತಲೂ ಒಂದು ಗಾವುದ ಅಳತೆಯ ಪ್ರದೇಶವನ್ನು ಪ್ರತ್ಯೇಕಿಸಿ ದೇವಸ್ಥಾನದ ಒಂದು ಚಿಕ್ಕ ಸಂಸ್ಥಾನವನ್ನು ಏರ್ಪಡಿಸಿದ್ದರು. ಅದರ ಆಡಳಿತಗಾರನು ಆನೆಗೊಂದಿಯಲ್ಲಿ ಇರಬೇಕೆಂದು ಗೊತ್ತುಮಾಡಿದರು. 'ಈ ಸಂಸ್ಥಾನದಲ್ಲಿ ಯಾವ ರಾಜರೂ ಸೈನ್ಯದ ಶಿಬಿರ ಹಾಕಕೂಡದು. ಈ ಭಾಗದ ತುಂಗಭದ್ರೆಯ ದಾಟುದಾರಿಯನ್ನು ಸೈನ್ಯಕ್ಕಾಗಿ ಉಪಯೋಗಿಸಕೂಡದು' ಎಂದು ಕಟ್ಟಳೆ ಮಾಡಿ ಎಲ್ಲ ರಾಜರೂ ಅಂಕಿತ ಹಾಕಿದ್ದರು. ಸಮ್ರಾಟ ವಿಕ್ರಮಾದಿತ್ಯರೂ ತಪ್ಪದೆ ಆ ಕಟ್ಟಳೆ ಪಾಲಿಸುತ್ತ ಬಂದಿದ್ದರು. ವರಂಗಲ್ಲಿನ ಗಜಪತಿ ಪ್ರೋಲ್ಲ ರಾಜನು ಚಾಲುಕ್ಯರ ಮಿತ್ರರಾಜನು. ಆತನು ಸಿಂಧನೂರ ರಾಚಮಲ್ಲರಸನ ರಾಜ್ಯದ ಗಂಗಾವತಿಯಲ್ಲಿ ಸೈನ್ಯ ಶಿಬಿರವನ್ನಿಟ್ಟು ಪಂಪಾಪತಿಯ ದರ್ಶನಕ್ಕೆ ಹೋಗಿ ಬರುತ್ತಿದ್ದನು.

ತೈಲಪನು ಹಂಪಿಗೆ ಬಂದು ವಿರೂಪಾಕ್ಷ ಸಂಸ್ಥಾನದ ಸೀಮೆಯಲ್ಲಿ ಸೈನ್ಯದ ಶಿಬಿರ ಹಾಕಿದ್ದನು. ಇದು ಅಂತರರಾಜ್ಯ ನಿಬಂಧನೆಯ ಉಲ್ಲಂಘನೆಯೆಂದು ಆನೆಗೊಂದಿಯ ಅಧಿಪತಿ ಬವಣಯ್ಯನು ವಿನಯದಿಂದ ಪತ್ರ ಬರೆದು ತಿಳಿಸಿದನು. ತೈಲಪನು ಪತ್ರ ತಂದವನನ್ನು ಥಳಿಸಿ ಕಳುಹಿದನು. ಬವಣಯ್ಯನು ಹೆದರಿ ಅದೇ ಕಾಲಕ್ಕೆ ಗಂಗಾವತಿಯಲ್ಲಿ ಬೀಡಾರಮಾಡಿದ್ದ ಗಜಪತಿರಾಜರಿಗೆ ದೂರು ಕಳಿಸಿದನು. ಗಜಪತಿರಾಜನು—'ಅರವತ್ತು ವರ್ಷಗಳಿಂದ ಸರ್ವರೂ ಗೌರವದಿಂದ ಪಾಲಿಸಿದ ನಿಯಮವನ್ನು ಚಕ್ರವರ್ತಿಗಳು

ಮುರಿಯಬಾರದು' ಎಂದು ಬರೆದು ಒಬ್ಬ ಅಧಿಕಾರಿಯನ್ನು ಕಳುಹಿದನು. ತೈಲಪನು 'ನಮ್ಮ ಸಾಮ್ರಾಜ್ಯದಲ್ಲಿ ಇವರದೇಕೆ ಅಧಿಕಾರ ?' ಎಂದು ಸಿಟ್ಟಾದನು. ವಿಷ್ಣುಚಿತ್ತನ ಸಲಹೆಯಿಂದ ಗಜಪತಿಯು ಶಿಬಿರದ ಮೇಲೆ ದಾಳೀ ಮಾಡಿದನು. ಗಜಪತಿಯ ಅಶ್ವಾರೋಹಿಗಳು ತೈಲಪನ ಕೈವಾಳಿಯ ದಳವನ್ನು ಹೊಡೆದೋಡಿಸಿ ಅವನನ್ನು ಸೆರೆಹಿಡಿದೊಯ್ದರು. ವಿಷ್ಣುಚಿತ್ರನು ಪಾಟಲಿಕೆ ಪ್ರೇಮಾವತಿಯರೆಂಬ ತೈಲಪನ ಶ್ರೇಷ್ಠ ದಾಸಿಯರನ್ನು ಉಳಿದ ಭಂಡಾರವನ್ನೂ ಅಪಹರಿಸಿಕೊಂಡು ಶಿಬಿರವನ್ನು ಎತ್ತಿ ಪಶ್ಚಿಮಕ್ಕೆ ಓಡಿ ಹೊರಟನು. ಮುಂದಿನ ರಾತ್ರಿ ಪಾಟಲಿಕೆಯು ವಿಷ್ಣುಚಿತ್ತನನ್ನು ವಂಚಿಸಿ ಪ್ರೇಮಾವತಿಯೊಡನೆ ಶಿಬಿರದಿಂದ ಪಾರಾಗಿ ಹಂಪಿಗೆ ಹೊರಟಳು. ಮರುದಿನ ಹಗಲು ಬೆನ್ನಟ್ಟಿ ಬಂದ ವಿಷ್ಣುಚಿತ್ತನ ಜನರು ಅವರನ್ನು ಹಿಡಿದು ಹಿಂಸಿಸುತ್ತಿರುವಾಗ, ಇತ್ತ ಪ್ರಯಾಣಿಸುತ್ತಿದ್ದ ಬಸವಣ್ಣನವರು ಅವರನ್ನು ಕಂಡರು; ಆಪತ್ತಿನಲ್ಲಿರುವ ಸ್ತ್ರೀಯರ ರಕ್ಷಣೆಗೆ ಸಿದ್ಧವಾದರು. ಸ್ವಲ್ಪದರಲ್ಲಿ ವಿಷ್ಣುಚಿತ್ರನ ಜನರು ಓಡಿಹೋದರು. ಬಸವರಾಜರನ್ನು ಬಲ್ಲ ಆ ನಾಯಿಕೆಯರು ಅವರ ಕಾಲಿಗೆ ಬಿದ್ದು ಕಣ್ಣೀರಿಟ್ಟರು. ವಿಷ್ಣುಚಿತ್ರನ ಕಪಟನಾಟಕವನ್ನು ತೈಲಪದೇವನ ದುರವಸ್ಥೆಯನ್ನು ಅವರಿಂದ ಕೇಳಿ ಬಸವರಾಜರು ಮರುಗಿದರು. ಸೆರೆಯಲ್ಲಿಯಾದರೂ ತೈಲಪದೇವನೊಡನಿರಲು ಆ ದಾಸಿಯರು ಬಯಸಿದರು. ತಾವೂ ತೈಲಪದೇವನನ್ನು ಕಾಣಬೇಕಾಗಿತ್ತು. ಆದರಿಂದ ಎಲ್ಲರೂ ಗಂಗಾವತಿಯ ಕಡೆಗೆ ಹೊರಟು ಅವಸರದಿಂದ ಪ್ರಯಾಣ ಮಾಡಿದರು.

ಹಂಪೆಯ ಕಡೆಗೆ ನಡೆದ ಈ ಗೊಂದಲದ ಸುದ್ದಿ ಹತ್ತಿ ರಾಜಮಲ್ಲರಸನೂ ಗಂಗಾವತಿಗೆ ಗಜಪತಿಯ ಶಿಬಿರಕ್ಕೆ ಬಂದಿದ್ದನು.

ಉತ್ತರ ಭಾರತವನ್ನು ಆಕ್ರಮಿಸಿದ ವಿದೇಶೀಯರು ದಕ್ಷಿಣಕ್ಕೆ ಬಾರದಂತೆ ತಡೆಯಲು ದಕ್ಷಿಣದ ರಾಜರೆಲ್ಲ ಒಂದಾಗಬೇಕೆಂದು ಸರ್ವಾಧಿಕಾರಿಯ ಅಂಕಿತದಿಂದ ಈ ಮೊದಲು ಹೊರಡಿಸಿದ ಮನವಿಯ ಪ್ರತಿಯೊಂದು ಅದೇ ಆಗ ಶಿಬಿರಕ್ಕೆ ಬಂದಿದ್ದಿತು.

ಆದರ ಒಕ್ಕಣಿಕೆಯಲ್ಲಿ ಉದಾಸೀನರನ್ನೂ ಹೊಡೆದೆಬ್ಬಿಸುವ ಅದ್ಭುತ ಶಕ್ತಿಯಿರುವದನ್ನು ಅರಿಯುತ್ತ ಆ ರಾಜ-ಮಹಾರಾಜರೆಲ್ಲರೂ ಆಶ್ಚರ್ಯದಿಂದ ಅದನ್ನು ನೋಡುತ್ತಿದ್ದರು.

ಕಲ್ಯಾಣದಲ್ಲಿ ಪ್ರಜಾಪ್ರತಿನಿಧಿಸಭೆಯಲ್ಲಿ ಬಸವಣ್ಣನವರ ವಿಚಾರಗಳನ್ನೂ ವಾಕ್‌ಶಕ್ತಿಯನ್ನೂ ಕಂಡು ಮೆಚ್ಚಿದ್ದ ರಾಚಮಲ್ಲರಸನು 'ಈ ಮನವಿಯ ರಚನೆ ಮಹಾಮಂತ್ರಿಬಸವರಾಜರದೇ' ಎಂದು ಆ ಗಜಪತಿರಾಜನಿಗೆ ವರ್ಣಿಸಿ ಹೇಳುತ್ತಿದ್ದನು. ಅಷ್ಟರಲ್ಲಿ ಬಸವರಾಜರ ಗುಂಪು ಶಿಬಿರಕ್ಕೆ ಬಂದಿತು. ರಾಚಮಲ್ಲರಸನು ಬಸವರಾಜರನ್ನು ಗುರ್ತಿಸಿದನು. ಅವರನ್ನು ಸನ್ಮಾನಿಸಿ ಕರೆತಂದು ಗಜಪತಿರಾಜರಿಗೆ ಪರಿಚಯ ಮಾಡಿಕೊಟ್ಟನು. ಬಸವರಸರು ಮರ್ಯಾದೆಯಿಂದ ಕೈಮುಗಿಯಲು, ಗಜಪತಿಮಹಾರಾಜನು ಪ್ರತಿವಂದನೆ ಮಾಡಿ ಆಸನದಿಂದೆದ್ದು ಅವರ ಕೈಹಿಡಿದು ಒತ್ತಾಯದಿಂದ ತನ್ನ ಹತ್ತಿರವೇ ಕುಳ್ಳಿರಿಸಿಕೊಳ್ಳತೊಡಗಿದರು.

ಬಸವರಾಜರು ಕೈಬಿಡಿಸಿಕೊಳ್ಳುತ್ತಾ ಎಂದರು :

"ನೀವು ಮಹಾಪ್ರಭುಗಳು, ನಾನು ರಾಜದೂತನು."

ಗಟ್ಟಿಯಾಗಿ ಕೈಹಿಡಿದು ಗಜಪತಿರಾಜನೆಂದನು:

"ನಾನು ಪ್ರೊಲ್ಲರಾಜನೆಂಬದನ್ನು, ನೀವು ನಮ್ಮ ಮಿತ್ರರಾಜರ ದೂತರೆಂಬದನ್ನು ಈಗ ಮರೆಯೋಣ. ಈ ಮನವಿಯಲ್ಲಿಯ ನಿಮ್ಮ ವಾಕ್‌ಶಕ್ತಿಯನ್ನು ನಾವು ಗಮನಿಸುತ್ತಿದ್ದೆವು. ನಿಮ್ಮ ತತ್ವಾನುಭವ ವಿದ್ಯೆಗಳ ಕೀರ್ತಿಯನ್ನು ಮೊದಲೇ ಕೇಳಿದ್ದೇನೆ. ರಾಚಮಲ್ಲರಸರು ನಿಮ್ಮ ವ್ಯಕ್ತಿತ್ವವನ್ನು ಇದೀಗ ವರ್ಣಿಸುತ್ತಿದ್ದರು. ಇಷ್ಟರಲ್ಲಿ ನಿಮ್ಮ ದರ್ಶನ; ನಮ್ಮ ಪುಣ್ಯ ! ಸ್ವಾರ್ಥಿಗಳ ವಂಚಕರ ಮಧ್ಯದಲ್ಲಿ ಶಿಲುಕಿದ ಹಾಗು ವಿಚಾರದ ನೆಲೆಯಿಲ್ಲದ ಚಕ್ರವರ್ತಿಯನ್ನು ಕಾಣಲು ಹೀಗೆ ರಕ್ಷಕರಿಲ್ಲದೆ ಹೊರಟಿರುವದು ನಿಮ್ಮ ಆತ್ಮಬಲವನ್ನು ಸೂಚಿಸುತ್ತದೆ. ನಿಮ್ಮ ಕಾರ್ಯ ರಾಜದೌತ್ಯವಾದರೂ ನೀವು ಮಾನವಲೋಕದ ಪ್ರಭಾವಶಾಲಿಯಾದ ಪ್ರಭುಗಳು! ನಿಮ್ಮನ್ನು ಕಡೆಗಣಿಸಿ ತೈಲಪದೇವನು ಎಂಥವರ ಬೆನ್ನುಹತ್ತಿದ್ದಾನೆ ! ಏನು ಕತೆ ! ದುರ್ದೈವ ಆತನದು !!

ಉಪಾಯವಿಲ್ಲದೆ ಬಸವರಾಜರು ಅವರ ಹತ್ತಿರವೇ ತಲೆವಾಗಿ ಕುಳಿತರು. ಕುಶಲೋಪಚಾರದ ಬಳಿಕ ಅವರ ವಿನಂತಿಯಂತೆ ದಾಸಿಯರನ್ನು

ತುಂಗಭದ್ರೆಯ ಗಡ್ಡೆಯ ಮಂದಿರದಲ್ಲಿ ಕಾವಲಿನಲ್ಲಿದ್ದ ತೈಲಪನ ಬಳಿಗೆ ಆಗಲೇ ಗಜಪತಿರಾಜರು ಕಳಿಸಿಕೊಟ್ಟರು.

ಒಂದು ದಿನ ವಿಶ್ರಾಂತಿ ಪಡೆದು ಬಸವರಾಜರು ತೈಲಪದೇವನನ್ನು ಕಾಣುವದೆಂದು ಗೊತ್ತಾಗಿ ಮೂವರೂ ಅಂದು ವಿರಾಮವಾಗಿ ದೇಶದ ರಾಜಕೀಯ ಚರ್ಚೆಯಲ್ಲಿ ಕಾಲಕಳೆದರು.

ಮರುದಿನ ಬಸವರಾಜರು ತುಂಗಭದ್ರೆಯ ತಡಿಗೆ ಬಂದು ಡೋಣಿಯನ್ನು ಹತ್ತಿ ತೈಲಪನಿರುವ ಗಡ್ಡೆಯ ಮಂದಿರಕ್ಕೆ ಬಂದರು. ಅವರನ್ನು ಕಂಡಕೂಡಲೆ ತೈಲಪದೇವನು ಓಡಿ ಬಂದು ಅಪ್ಪಿಕೊಂಡು ಅತ್ತುಬಿಟ್ಟನು. ಪಾಟಲಿಕೆಯು ವಿಷ್ಣುಚಿತ್ರನ ವಿಶ್ವಾಸ ಘಾತಕತನವನ್ನೂ, ಬಸವರಾಜರು ಅವನ ಅತ್ಯಾಚಾರದಿಂದ ತಮ್ಮನ್ನು ಪಾರುಮಾಡಿ ರಕ್ಷಿಸಿದುದನ್ನೂ ಈ ಮೊದಲೇ ತೈಲಪನಿಗೆ ಹೇಳಿದ್ದಳು. ಬಸವರಸರು ಹೆಚ್ಚಿಗೆ ಮನನೋಯಿಸಬಾರದೆಂದು ಹಿಂದಿನದಾವುದನ್ನೂ ತೆಗೆಯದೆ ಸಾಮಾನ್ಯ ನುಡಿಗಳಿಂದ ಚಕ್ರವರ್ತಿಯನ್ನು ಸಂತೈಸಿ ಕೂಡ್ರಿಸಿದರು. 'ಬನವಾಸಿಯಲ್ಲಿ ಅರ್ಥಕ್ಕೆ ನಿಂತ ಒಪ್ಪಿಗೆಯ ನಿರೂಪ ಪಡೆಯಲು ಬರಬೇಕಾಯಿತು' ಎಂದು ವಿನಯದಿಂದ ಹೇಳಿದರು.

"ಬಸವರಸರೆ, ಆ ನಿರೂಪವನ್ನೇನು ಮಾಡುವಿರಿ? ನನಗೀಗ ನನ್ನ ದೌರ್ಬಲ್ಯದ ಅರಿವಾಗಿದೆ. ನಾನು ಸಿಂಹಾಸನ ತ್ಯಾಗಮಾಡಿ ಹಂಪೆಯ ಸಮೀಪದಲ್ಲಿ ವಾಸಿಸಲು ಇಚ್ಛಿಸಿದ್ದೇನೆ, ಕಂಪಲಿಯಲ್ಲಿ ನನ್ನ ವಾಸಕ್ಕೆ ಏರ್ಪಡಿಸಲು ರಾಜಮಲ್ಲನು ಒಪ್ಪಬಹುದು. ಕುಮಾರ ಕೀರ್ತಿವರ್ಮನನ್ನು ಉತ್ತರಾಧಿಕಾರಿಯನ್ನಾಗಿ ಸ್ವೀಕರಿಸಿ ಅವನು ಪ್ರಬುದ್ಧನಾಗುವ ವರೆಗೆ ಬಿಜ್ಜಳರಾಜರು ರಾಜ್ಯವಾಳಲಿ; ನೀವು ನನ್ನ ಜೀವನಾಂಶಕ್ಕೆ ವ್ಯವಸ್ಥೆ ಮಾಡಿರಿ."

ಚಕ್ರವರ್ತಿಯ ಕಣ್ಣುಗಳಿಂದ ಹಾಗೆಯೇ ನೀರಿಳಿಯುತ್ತಿದ್ದವು. ಬಸವರಾಜರಿಗೆ ವಿಷಾದವೆನಿಸಿತಾದರೂ ಆಗಿನ ಪರಿಸ್ಥಿತಿಗೆ ತೈಲಪನ ನಿರ್ಧಾರವು ಶಾಂತಿಗೆ ಸಾಧನವಾದುದರಿಂದ ಅದಕ್ಕೆ ಸಮ್ಮತಿಸಿ, ಚಕ್ರವರ್ತಿಯ ಶೇಷ ಆಯುಷ್ಯವು ಸುಖಮಯವಾಗುವಂತೆ ಗೌರವಯುತವಾದ ತಕ್ಕ ಏರ್ಪಾಡು ಮಾಡುವಂತೆ ಬಿಜ್ಜಳರಾಜರ ಪರವಾಗಿ ಹಾಗು ಮಂತ್ರಿಮಂಡಲದ ಪರವಾಗಿ ಆಶ್ವಾಸನ ಕೊಟ್ಟರು.

ಚಾಲುಕ್ಯ ಚಕ್ರವರ್ತಿ ನೂರ್ಮಡಿ ತೈಲಪದೇವನು ಕ್ರಿ. ವ. ೧೧೫೫ರಲ್ಲಿ ವಿರೂಪಾಕ್ಷದೇವರು ಸಾಕ್ಷಿಯಾದ 'ಸಿಂಹಾಸನ ತ್ಯಾಗ' ಪತ್ರವನ್ನು ಸ್ವಹಸ್ತ ದಿಂದ ಬರೆದು ಬೆರಳಿನುಂಗುರದ ರಾಜಮುದ್ರೆ ಹಾಕಿ ಬಸವರಾಜರಿಗೆ ಕೊಟ್ಟರು.

ಸಹವರ್ತನೆಯ ಕೊನೆಯ ಘಟ್ಟ

ಬಸವರಾಜರು ಗಂಗಾವತಿಗೆ ಮರಳಿ ಬಂದ ಬಳಿಕ ರಾಚಮಲ್ಲನು ಸೂಚಿಸಿದಂತೆ 'ನಾಳೆ ಮೂವರೂ ಮಾತಂಗಶೃಂಗದಲ್ಲಿರುವ ಶಿವಯೋಗಿಗಳ ದರ್ಶನಕ್ಕೆ ಹೋಗಿ ಬರುವದು; ನಾಡದು ವಿಶ್ರಾಂತಿ ಪಡೆದು, ಆಚೆಯ ನಾಡದು ತಮ್ಮ ತಮ್ಮ ಸ್ಥಳಗಳಿಗೆ ನಿಷ್ಕ್ರಮಿಸುವದು' ಎಂದು ಗೊತ್ತಾ ಯಿತು.

ಯಾವ ಕಾಲದಲ್ಲಿಯೋ ಬಂಡೆಗಳನ್ನು ಕೊರೆದು ಕಲ್ಲು ಒಟ್ಟಿ ಮಾತಂಗ ಗಿರಿಗೆ ಮೆಟ್ಟಿಲುಗಳನ್ನು ಮಾಡಿದ್ದರು. ಮೂವರೂ ಅವುಗಳನ್ನು ಹತ್ತಿ ಮೇಲೇರಿ ಬರುತ್ತಿರುವಾಗ, ಮೇಲಿನ ಮಹಾಶಿವಯೋಗಿ ಗುಹೆಯಿಂದ ಹೊರಗೆ ಬಂದು ಅವರಿಗೆ ಕಾಣುವಂತೆ ಕೋಡುಗಲ್ಲಿನ ಮೇಲೆ ಕುಳಿತರು. 'ಜಗದ ಜಂಜಡದ ಜಾಲವ ತೊಲಗಿಸಿ, ಬೆಳಕು ಬೀರಬಲ್ಲವರೆಂದರೆ ಇವರೇ' ಎಂದು ರಾಚಮಲ್ಲನು ಕೈಮಾಡಿ ತೋರಿಸಿದನು. ಅವರನ್ನು ನೋಡಿ ಬಸವರಸರ ಮನದಲ್ಲೊಂದು ಅನುಮಾನ ಮೂಡಿ ಬರಹತ್ತಿತು. ಅವರು ಅವಸರವಸರವಾಗಿ ಹತ್ತಿ ಏದುತ್ತ ಹೋಗಿ ಸಾಷ್ಟಾಂಗವಾಗಿ ಎರಗಿದರು.

ಶಿವಯೋಗಿಯು ಬಸವರಸನ್ನು ದಿಟ್ಟಿಸಿ ನೋಡುತ್ತಿರುವಾಗ ಆ ಕಣ್ಣು ಗಳ ಕಿರಣಗಳಿಂದ ಬಸವರಸರ ಮನದಲ್ಲಿ ವಿದ್ಯುತ್ ಸಂಚಾರವಾದಂತಾಗಿ ಯಾವದೋ ಪ್ರೇರಣೆಯಿಂದ ಕೇಳಿಬಿಟ್ಟರು:

"ತಾವು ಬಳ್ಳೇಗಾಂವಿಯ ವಾಮಶಕ್ತಿಪಂಡಿತರಲ್ಲವೇ ?"

"ಆ ವಾಮಶಕ್ತಿ ಹತ್ತುವರ್ಷಗಳ ಹಿಂದೆ ಬನವಾಸಿಯಲ್ಲಿ ಮುಡುಪಿ ದರು. ಆ ಕತೆಯೀಗ ನಿಷ್ಪ್ರಯೋಜಕ !"

ರಾಚಮಲ್ಲನು ಗಜಪತಿರಾಜರ, ಬಸವರಾಜರ ಪರಿಚಯವನ್ನು ಶಿವ ಯೋಗಿಗೆ ಅರಿಕೆ ಮಾಡಿದನು.

"ಬಸವಣ್ಣಾ, ಸಂಗಮದಲ್ಲಿ ನೀನು ಪಡೆದ ಚೈತನ್ಯದ ಪ್ರಯೋಜನವು ಇನ್ನೂ ಮುಂದಾಗಲಿದೆ; ನಿನ್ನ ಕಾರ್ಯಭಾರ ದೊಡ್ಡದಿದೆ. ಗಜಪತಿರಾಜರ ಪೂರ್ವಜರು ಧರ್ಮ-ಜ್ಞಾನಗಳ ಆಧಾರವಾದುದನ್ನು ನಾವು ಬಲ್ಲೆವು."

ಎನ್ನುತ್ತ ಆ ಯೋಗೀಂದ್ರ ಎದ್ದು ಹೊರಡಲು, ಮೂವರೂ ಮತ್ತೆ ನಮಸ್ಕರಿಸಿ ಮರಳಿ ಬೆಟ್ಟವನ್ನು ಇಳಿದರು.

ಗಂಗಾವತಿಗೆ ಬರುವದರೊಳಗಾಗಿ ಅಲ್ಲಿ ಬಿಜ್ಜಳನಿಂದ ಕಳಿಸಲ್ಪಟ್ಟ ರಾಜದೂತರು ಬಸವರಾಜರ ದಾರೀಕಾಯುತ್ತಿದ್ದರು. ಬನವಾಸಿಯಿಂದ ಕಳಿಸಲ್ಪಟ್ಟ ಬಸವಣ್ಣನವರ ವರದಿಯನ್ನು ನೋಡಿ, ಬಿಜ್ಜಳನು ದಕ್ಷಿಣದಲ್ಲಿ ಶಾಂತಿಸುವ್ಯವಸ್ಥೆಗಳನ್ನು ಕಾಪಾಡಲು ತಾನೇ ಬನವಾಸಿಗೆ ಬಂದನು. ಕೈಕೊಂಡ ಕಾರ್ಯ ಪೂರೈಸುವ ಆತುರದಲ್ಲಿ ಬಸವರಾಜರು ರಕ್ಷಕರಿಲ್ಲದೆ ತೈಲಪನನ್ನು ಹುಡುಕಿಕೊಂಡು ಹೋದುದು ಕ್ಷೇಮಕರವಲ್ಲವೆಂದು ಭಾವಿಸಿ, ಮರಳಿ ಬನವಾಸಿಗೆ ಬರುವಂತೆ ಆಜ್ಞೆಮಾಡಿ ರಾಜದೂತರನ್ನು ಕಲ್ಯಾಣ ದಿಂದಲೇ ಕಳುಹಿದ್ದನು. ಅದರಂತೆ ಮರುದಿನವೇ ಬಸವರಾಜರು ರಾಜಮಲ್ಲ ನಿಂದ ಬೀಳ್ಕೊಂಡು ಬನವಾಸಿಗೆ ಪ್ರಯಾಣ ಮಾಡಿದರು.

ತೈಲಪನ ರಾಜತ್ಯಾಗ ಪತ್ರದೊಡನೆ ಬಸವರಾಜರು ಬಂದು ತನ್ನನ್ನು ಕಂಡಾಗ ಬಿಜ್ಜಳನು ಅತಿ ಆನಂದದಿಂದ ಅವರನ್ನು ಕೊಂಡಾಡಿದನು. ಸಾಮ್ರಾಜ್ಯದಲ್ಲಿಯ ಅಂತರ್ಯುದ್ಧದ ಮೂಲವೇ ಬಸವರಾಜರಿಂದ ಕಡಿದು ಹೋದುದು ಅವನ ಹೊರಗಿನ ಸಂತೋಷಕ್ಕೆ ಕಾರಣವಾಗಿದ್ದಿತು. ರಾಜ್ಯಾಪ ಹಾರದ ತನ್ನ ಒಳಗಿನ ಯತ್ನವು ಚಿಗುರಿ ಪಲ್ಲವಿಸುತ್ತಿರುವದು ಅಂತರಂಗದ ಸಂತೋಷಕ್ಕೆ ಕಾರಣವಾಗಿದ್ದಿತು. ಆತನು ಅಸಂತುಷ್ಟ ಸಾಮಂತರನ್ನು ಪ್ರತ್ಯೇಕವಾಗಿ ಕರೆಯಿಸಿ ಸಾಮಭೇದಗಳಿಂದ ಪುನಃ ತನ್ನ ಅಂಕಿತಕ್ಕೆ ತಕ್ಕೊಂಡನು. ಆ ಮೇಲೆ ಆ ಭಾಗದ ಸಾಮಂತ ಮನ್ನೆಯರ ಮುಂದ ಲಾಧೀಶರ ಓಲಗ ನಡೆಯಿಸಿ, ತೈಲಪದೇವರ ರಾಜ್ಯತ್ಯಾಗವನ್ನು ಪ್ರಕಟಿಸಿ, ಕುಮಾರ ಕೀರ್ತಿವರ್ಮರ ಪರವಾಗಿ ತನ್ನ ಸರ್ವಾಧಿಕಾರತ್ವವನ್ನು ಘೋಷಿ ಸಿದನು. 'ತ್ರಿಭುವನಮಲ್ಲ' 'ಭುಜಬಲ ಚಕ್ರವರ್ತಿ' 'ಶನಿವಾರ ಸಿದ್ಧಿ' ಮುಂತಾದ ತನ್ನ ಬಿರುದುಗಳನ್ನು ಪ್ರಕಟಪಡಿಸಿದನು. ಈ ರೀತಿಯಾಗಿ ತನ್ನ ದರ್ಪವನ್ನು ಬೀರಿದ ಬಳಿಕ ಸಾಮಂತರೆಲ್ಲರಿಂದ ತನ್ನ ಆಡಳಿತದಲ್ಲಿ ನಿಷ್ಠೆ

ಯನ್ನು ಕೇಳಿದನು. ಎಲ್ಲರೂ ಪ್ರತಿಯಾಗಿ ಮಾತಾಡದೆ ಜಯಕಾರ ನೀಡಿದರು.

ಆ ಮೇಲೆ 'ಗೋವೆ, ಹೈವೆ, ಕದಂಬಾಳಿಗೆ, ನೊಳಂಬವಾಡಿ, ಬಳ್ಳೀಗಾಂವಿ, ಬಾಗಡೆ, ಸಿಂಧನೂರು ಒಡಗೊಂಡ ದಕ್ಷಿಣಭಾಗಕ್ಕೆ ಬನವಾಸಿಯನ್ನು ಉಪರಾಜಧಾನಿಯಾಗಿಸಿ ಬಸವರಾಜರನ್ನು ಮಹಾಮಂಡಲೇಶ್ವರರೆಂದು ಕೆಲವು ಕಾಲ ನೇಮಿಸುತ್ತೇವೆ. ಸಾಮ್ರಾಜ್ಯದ ಅರ್ಥಶಾಖೆಯ ಯೋಜನಾ ಕಾರ್ಯವೂ ಮೊದಲಿನಂತೆ ಅವರ ಕಡೆಗಿರುವದು ಎಂದು ಘೋಷಿಸಿದನು. ಮುಂದೆ ಬಸವರಾಜರನ್ನು ಕೂಡಿಕೊಂಡು ಆ ಪ್ರದೇಶದಲ್ಲಿ ನಾಲ್ಕು ವಾರ ಸಂಚರಿಸಿ ವಿರೋಧವನ್ನೆಲ್ಲ ಅಡಗಿಸಿಬಿಟ್ಟನು. ಬಳ್ಳೀಗಾಂವಿಯಲ್ಲಿ ಎರಡುವಾರ ನಿಂತು ಮಠ ಮಂದಿರಗಳಿಗೆ ಹೊಸ ಉಂಬಳಿ ಹಾಕಿಕೊಟ್ಟನು. ಅದೇ ಕಾಲದಲ್ಲಿ ಅಲ್ಲಿಯ ಕೋಡೀಮಠದಲ್ಲಿ ಅವನ ಮಗನಾದ ಸೋವಿದೇವನು ಚೆನ್ನಬಸವಣ್ಣನೊಡನೆ ಅಧ್ಯಯನದಲ್ಲಿದ್ದನು. ಇಲ್ಲಿಗೆ ಬಿಜ್ಜಳ ಬಸವೇಶ್ವರರ ಪರಸ್ಪರ ಪ್ರೇಮಾಭಿವೃದ್ಧಿಯು ಅಂತಿಮ ಘಟ್ಟವನ್ನು ಮುಟ್ಟಿತು.

ಅನಿರೀಕ್ಷಿತವಾಗಿ ಬಂದ ಕಾರ್ಯಾಂತರದಿಂದ ಬಸವಣ್ಣನವರು ಅಚ್ಚರಿಪಟ್ಟರು; ಆದರೆ ಅಸಂತುಷ್ಟರಾಗಲಿಲ್ಲ. 'ಸಂಗಮನಾಥನ ಸೊಲ್ಲು ಇಂತಾದರೆ ನಾವೇನು ?' ಎಂದುಕೊಂಡರು.

ಇತ್ತಿತ್ತಲಾಗಿ ಬೆಳೆಯುತ್ತಿದ್ದ ಮಹಮನೆಯ ಕಾರ್ಯಕಲಾಪಗಳಿರುವಾಗ ಮೇಲೆ ಮೇಲೆ ಬನವಾಸಿಗೆ ಹೋಗಿ ಅಲ್ಲಿ ಉಳಿಯುವದು ಹೇಗೆಂಬ ಆಲೋಚನೆ ದಂಡನಾಯಕರಿಗೆ ಬಾರದೆ ಹೋಗಲಿಲ್ಲ. ಕರಣಿಕನ ಕಾರ್ಯ ಕೈಕೊಂಡಾಗಲೇ ತಮ್ಮ ಸಂಬಳದ ಹಣವನ್ನು ನಿತ್ಯ ನಿತ್ಯ ಜಂಗಮದಾಸೋಹಕ್ಕೆ ವೆಚ್ಚ ಮಾಡುತ್ತಿದ್ದರು. ವರಮಾನವು ಹೆಚ್ಚಾದಂತೆ ಜಂಗಮಾತಿಥ್ಯವೂ ಬೆಳೆದಿದ್ದಿತು. ಮನೆಯ ಮಟ್ಟಿಗಿನ ಸಂಜೆಯ ಶಿವಾನುಭವ ಗೋಷ್ಠಿಯು, ಷಟ್ ಸ್ಥಲ ಮಾರ್ಗಾನುಯಾಯಿಗಳ ಅನುಭಾವ ವಿಚಾರದ ನಿತ್ಯದ ಸಭೆಯಾಗಿ ಪರಿಣಮಿಸಿತ್ತು. ಕಲ್ಯಾಣದಲ್ಲಿರುವ ೧೦೮ ಶೈವಮಠಗಳಲ್ಲಿಯ ಪಂಡಿತರಾದ ಮಠಾಧಿಪತಿಗಳು ಮೊದಲು ಬಸವಣ್ಣನವರ ಕ್ರಿಯಾ

ತ್ಮಕ ಜ್ಞಾನಬೋಧೆಯಿಂದ ಆಕರ್ಷಿತರಾಗಿ ಶರಣಧರ್ಮವನ್ನು ಅಂಗೀಕರಿಸಿ, ಮಹಮನೆಯ ದಾಸೋಹದ ಹಾಗು ಅನುಭವ ಮಂಟಪದ ಕಾರ್ಯಕಲಾಪ ಗಳಿಗೆ ನೆರವಾಗಿ ನಿಂತರು. ಬಸವಣ್ಣನವರು ಊರಲ್ಲಿಲ್ಲದಾಗ ಈ ಕೆಲಸ ಯಥಾರೀತಿ ನಡೆಯುತ್ತಿತ್ತು. ನಾಲ್ಕು, ಹತ್ತು, ಇಪ್ಪತ್ತು, ನೂರರಂತೆ ಜನರು ನಿತ್ಯದಲ್ಲಿ ಲಿಂಗಧಾರಣೆ ಮಾಡಿಕೊಂಡು ಲಿಂಗಾರಾಧನೆಯನ್ನು ಕೈಕೊಳ್ಳಹತ್ತಿದರು. ನಗರದಲ್ಲಿಯ ಇನ್ನುಳಿದ ಮಠಾಧೀಶರೂ ಲಿಂಗಧಾರಿ ಗಳಾಗಿ ತಮ್ಮಲ್ಲಿಯೂ ಧರ್ಮೋಪದೇಶ ಜಂಗಮದಾಸೋಹ ನಡಿಸಿದರು. ಬಸವರಾಜರು ಮಂತ್ರಿಗಳಾದಾಗಿನಿಂದ ಅವರ ಹೆಚ್ಚಿನ ಸಂಬಳದ ಸಹಾಯ ದಿಂದ ಈ ಕಾರ್ಯಪರಿಮಿತಿ ಇನ್ನೂ ಹೆಚ್ಚಿತು. ಮಹಮನೆಯಲ್ಲಿ ನೂರಾರು ಜನರಿಗೆ ನಿತ್ಯದಲ್ಲಿ ಶಿವಾರ್ಚನೆ-ಪ್ರಸಾದಗಳ ವ್ಯವಸ್ಥೆಯಾಗುತ್ತಿತ್ತು. ಅನು ಭವ ಮಂಟಪದ ಚರ್ಚೆಯ ನುಡಿಗಳನ್ನು ಸಂಗ್ರಹಿಸುವ ಕೆಲಸವೂ ನಡೆ ಯುತಲಿತ್ತು. ಬಸವಣ್ಣನವರು ಹೀಗೆ ಹೆಚ್ಚಾದ ಭಾರವನ್ನು ಅಕ್ಕನಾಗಮ್ಮ ನವರ ಮೇಲೆ, ಹಿರಿಯ ಶರಣರ ಮೇಲೆ ಬಿಟ್ಟುಕೊಟ್ಟು, ಬನವಾಸಿಯ ಹೆಚ್ಚಿನ ರಾಜಕಾರ್ಯಭಾರವನ್ನು ನಿರ್ವಹಿಸಿದರು. ಕೆಲವು ದಿವಸ ನೀಲಾಂಬೆ-ಗಂಗಾಂಬೆಯರನ್ನು ಬನವಾಸಿಯಲ್ಲಿಯೇ ಇರಿಸಿದ್ದರು. ಆಗ ಗಂಗಾಂಬೆ ಆರು ತಿಂಗಳ ಮಗುವಿನ ಮಾತೆಯಾಗಿದ್ದಳು. ಮಗುವಿನ ಹೆಸರು ಸಂಗಯ್ಯ.

ಕಲ್ಯಾಣದಲ್ಲಿ ಒಂದು ಬಗೆಯಿಂದ ವೀರವ್ರತದ ಶರಣಧರ್ಮದ ಪ್ರಸಾ ರವಾಗುತ್ತಿದ್ದರೆ ಹೊರನಾಡಿನಲ್ಲಿ ಬೇರೊಂದು ಬಗೆಯಿಂದ ಬಸವಣ್ಣನವರಿಗೂ ತಿಳಿಯದಂತೆ ಆ ಲಿಂಗವಂತಿಕೆ ಹಬ್ಬಹತ್ತಿದ್ದಿತು. ಆರ್ಥಿಕ ಯೋಜನೆಯ ಹೊಸ ರೀತಿಯಿಂದ-ವಿಕ್ರಮಾದಿತ್ಯರ ನಿಧಿಯಿಂದ ಧನಸಹಾಯ ಸಿಕ್ಕು, ಬಹು ಕಾಲದಿಂದ ಹಿಂದೂಡಲ್ಪಟ್ಟ ಬಹುಜನ ಸಮಾಜದವರು ವಿದ್ಯಾ-ಬುದ್ಧಿಗಳನ್ನು ಹೊಂದುವಂತಾಯಿತು. ದೀನ ದರಿದ್ರರು ಮಾನವರಂತೆ ಜೀವಿಸುವ ಹಾಗಾ ಯಿತು. ಇದೆಲ್ಲ ಬಸವಣ್ಣನವರ ಪುಣ್ಯದಿಂದಾದುದೆಂದು ಜನಮೆಚ್ಚಿ ಕೊಂಡಾ ಡುವಂತಾಯಿತು. ಬಸವಣ್ಣನವರ ಮಾತುಗಳೆಂದು ಪ್ರಚುರಗೊಂಡ ಧಾರ್ಮಿಕ ನುಡಿಗಳಲ್ಲಿ ಸಹಜವಾಗಿ ಜನರ ಶ್ರದ್ಧೆ ಹೆಚ್ಚುವಂತಾಯಿತು. ಈ ಓಘದಲ್ಲಿ ವಿದ್ಯಾವಂತರಾದ ಜಿಜ್ಞಾಸುಗಳು, ಶೈವ ಮತಗಳಲ್ಲಿ ಪರಿಷ್ಕೃತ ಮತವಾಗಿರುವ ಷಟ್‌ಸ್ಥಲ ಶಿವಯೋಗಮತವನ್ನು ಮೊದಲು ತಾವು ಅಂಗೀಕರಿಸಿ ಉಳಿದವ

ರಿಗೆ ಉಪದೇಶ ಮಾಡಹತ್ತಿದ್ದರು. ಬಸವಣ್ಣನವರ ಬನವಾಸಿ ರಾಜ್ಯಭಾರದಿಂದ ಅವರ ಕೀರ್ತಿಯೊಡನೆ ಅವರ ಮತವಿಚಾರ-ಪ್ರಚಾರ ಇನ್ನೂ ದಕ್ಷಿಣಕ್ಕೆ ಹಬ್ಬಿತು.

ಬಿಜ್ಜಳನ ರಾಜ್ಯದಾಹದಲ್ಲಿ ತೈಲಪನ ಅಂತ್ಯ

ಕ್ರಿ. ವ. ೧೧೫೭ರ ಹೊತ್ತಿಗೆ ಬಿಜ್ಜಳನ ವಿರೋಧವಾಗಿ ಎದ್ದ ಬಿರುಗಾಳಿ ಕೆಲಕಾಲ ಅಡಗಿತು. ಇದರಲ್ಲಿ ಬಸವರಾಜರ ರಾಜಕಾರಣವು ಬಿಜ್ಜಳನಿಗೆ ತುಂಬಾ ನೆರವಾಯಿತು. ಆದರೆ ಇದುವರೆಗೆ ಬಿಜ್ಜಳನಲ್ಲಿ ಅಳುಕಿ ಅಳುಕಿ ಮೊಳೆಯುತ್ತಿದ್ದ ರಾಜ್ಯಾಪಹಾರದ ಆಕಾಂಕ್ಷೆಯ ಅಂಕುರವು ಈಗ ಬೆಳೆದು ತಲೆಯೆತ್ತಿ ನಿಂತಿತು ಬನವಾಸಿಯ ಓಲಗದಲ್ಲಿ ಅದರ ಸಾಧನೆಯ ನಾಂದಿಯಾಯಿತು. ಪ್ರಬಲ ಬಿರುದುಗಳೊಡನೆ ತನ್ನ ಸಾರ್ವಭೌಮ-ಸರ್ವಾಧಿಕಾರವನ್ನು ಆರಂಭಿಸಿದನು.

ಕಲ್ಯಾಣಕ್ಕೆ ಮರಳಿದ ಬಳಿಕ ಬಿಜ್ಜಳನಲ್ಲಿ ಬಹಳ ಬದಲಾವಣೆಯಾಯಿತು. ಕಲಚೂರ್ಯ ಸಾಮ್ರಾಜ್ಯ ಸ್ಥಾಪನೆಯ ಎಣಿಕೆಯು ಅವನ ನೆನಹಾಯಿತು. ತ್ಯಾಗ-ಸೇವೆ-ಕುಶಲತೆಗಳಿಂದ ಬಲ್ಲಿದರೆನಿಸಿದ ಬಸವರಾಜ ಸಚಿವರು ಕೇವಲ ಪ್ರಜಾಹಿತಾಪೇಕ್ಷೆಯಿಂದ ತನ್ನ ಆಡಳಿತಕ್ಕೆ ನೆರವಾಗಿದ್ದರು. ಇನ್ನು ತನ್ನ ಈ ಮಹತ್ವಾಕಾಂಕ್ಷೆಯ ಧೋರಣಕ್ಕೆ ಅವರು ಅನೂಕೂಲರಾಗರೆಂಬದನ್ನು ಅವನು ತಿಳಿದುಕೊಂಡಿದ್ದನು. ಸ್ವಾರ್ಥಿಗಳೂ-ಅಧಿಕಾರಲಾಲಸೆಯವರೂ ಆದವರೇ ಆಪ್ತರೆನಿಸಿಕೊಳ್ಳಗಾಗಿ ತನಗೆ ಸಹಾಯ ಮಾಡುವರೆಂದು ನೆನಿಸಿದರು. ಅಂತಹರನ್ನು ಮೇಲಕ್ಕೇರಿಸಿದನು. ಅಧಿಕಾರ ತ್ಯಾಗ ಮಾಡಿದ ಮಾಚಯ್ಯನ ಸ್ಥಳದಲ್ಲಿ ಮಾಧವನಾಯಕನು ಸೇನಾಧಿಕಾರಿಯಾದನು. ಸಹೋದರ ಕರ್ಣದೇವನು ನಗರ ರಕ್ಷಕದಳದ ನಾಯಕನಾದನು. ನಾರಣಕ್ರಮಿತನು ರಾಜಪುರೋಹಿತನಾದುದಲ್ಲದೆ ಮಂತ್ರಾಲೋಚನೆಯ ಸದಸ್ಯನೂ ಆದನು.

ಬಸವರಾಜರ ಸಂಧಾನದಂತೆ ಕಂಬಲಿಯಲ್ಲಿ ಕೋಟೆ ಅರಮನೆಗಳ ರಚನೆಯಾಗಿ ತೈಲಪದೇವರ ಸುಖವಾಸಕ್ಕೆ ಅವಶ್ಯವಾದ ಸಾಧನ ಸಾಮಗ್ರಿಗಳು ಕಲ್ಯಾಣದ ರಾಜ್ಯಭಂಡಾರದಿಂದ ಪೂರೈಸಲ್ಪಟ್ಟವು. ತೈಲಪದೇವನು ವಿರೂಪಾಕ್ಷದೇವರ ಪಾದ-ಪ್ರಾಂತದಲ್ಲಿ ನಾಲ್ಕುವರ್ಷ ಸುಖವಾಗಿ ಕಾಲಕಳೆದನು.

ಅವನ ರಾಜ್ಯತ್ಯಾಗವು ಬಿಜ್ಜಳನಿಗೆ ಒಂದು ರೀತಿಯಿಂದ ಸಂತೋಷಕಾರಣವಾಗಿದ್ದರೆ, ಪ್ರಜೆಗಳಿಗೆ ದೇಶದಲ್ಲಿ ಯುದ್ಧಪ್ರಸಂಗಗಳು ತಪ್ಪಿ ನೆಮ್ಮದಿಯುಂಟಾದುದಕ್ಕೆ ಸಂತೋಷವಾಗಿತ್ತು. ಆದರೆ ಚಾಲುಕ್ಯರಾಜವಂಶೀಯರಿಗೆ ಇದರಿಂದ ಸಮಾಧಾನವಿರಲಿಲ್ಲ. ಬಿಜ್ಜಳನು ಚಾಲುಕ್ಯವಂಶದಿಂದ ರಾಜ್ಯವನ್ನೇ ಸೆಳೆದುಕೊಳ್ಳುತ್ತಿರುವನಾದ್ದರಿಂದ ಅವನನ್ನು ನಿಗ್ರಹಿಸುವದು ಅವಶ್ಯವೆಂದು ಅವರು ಸಂಚುಗಳನ್ನು ರಚಿಸಲು ಯತ್ನಿಸುತ್ತಿದ್ದರು. ಅವರಲ್ಲಿ ಇಬ್ಬರು ಮುಖ್ಯರು. ಕರ್ಹಾಡದಲ್ಲಿ ಅಣ್ಣನ ಹತ್ತಿರ ಮಗನೊಡನೆ ಇದ್ದ ತೈಲಪನ ರಾಣಿಯೊಬ್ಬಳು; ತೈಲಪನ ತಮ್ಮ ಜಗದೇಕ ಮಲ್ಲನೊಬ್ಬನು.

ನಿಡುಗಲ್ಲ ಕಂಪಣದ ದುರ್ಗಾಧಿಪತಿ ಮಲ್ಲರಸನ ಮಗ ಬೊಮ್ಮರಸನು ಜಗದೇಕಮಲ್ಲನ ಗೆಳೆಯನಾಗಿದ್ದನು. ಅವರಿಬ್ಬರು ಕೆಲವು ವರುಷ ದಕ್ಷಿಣದಲ್ಲಿ ಯಾತ್ರಾರ್ಥಿಗಳಾಗಿ ಸಂಚರಿಸುತ್ತಿದ್ದರು. ತೈಲಪದೇವನು ಕಂಪಲಿಯಲ್ಲಿದ್ದುದನ್ನು ಕೇಳಿ ಅಲ್ಲಿಗೆ ಬಂದರು. ಅದೇ ಕಾಲಕ್ಕೆ ಮಾಹೇಶ್ವರಿ ರಾಣಿಯೂ ಮಗನೊಡನೆ ಅಲ್ಲಿಗೆ ಬಂದಿದ್ದಳು. ತನ್ನನ್ನು ಉಪೇಕ್ಷಿಸಿದವಳೆಂದು ರಾಣಿಯನ್ನು ತೈಲಪನು ಪರಾಮರ್ಶಿಸಲಿಲ್ಲ; ಕುಮಾರನನ್ನು ಅವಳಿಂದ ಅಗಲಿಸುವ ಯೋಚನೆ ಮಾಡಿದನು. ತಮ್ಮನೊಡನೆ ಆಲೋಚಿಸಿದನು; ಬಳಿಕ ಬಿಜ್ಜಳನಿಗೆ ಒಂದು ನಿರೂಪವನ್ನು ಬರೆದನು. ಅದು ಹೀಗಿತ್ತು:

'ಜಗದೇಕ ಮಲ್ಲನು ಕಲ್ಯಾಣದಲ್ಲಿ ಚಾಲುಕ್ಯ ಅರಮನೆಯಲ್ಲಿ ನೆಲಸುವನು. ಅವನ ಪರಾಮರಿಕೆಯಲ್ಲಿ ಕೀರ್ತಿವರ್ಮನು ನಿಮ್ಮಿಂದ ರಾಜ್ಯಕಾರ್ಯಾನುಭವ ಪಡೆಯುವನು.'

ಈ ನಿರೂಪದೊಡನೆ ತಮ್ಮನನ್ನೂ ಮಗನನ್ನೂ ಕಲ್ಯಾಣಕ್ಕೆ ಕಳುಹಿದನು. ರಾಣಿ ಕರ್ಹಾಡಕ್ಕೆ ಹೋದಳು.

ತಂತ್ರಗಾರನೂ ಸಾಹಸಿಯೂ ಆಗಿದ್ದ ಬೊಮ್ಮರಸನು ದಾರಿಯಲ್ಲಿ ಜಗದೇಕಮಲ್ಲನ ತಲೆ ಕೆಡಿಸಿದನು. 'ಇದರಿಂದ ನಿನಗೇನು ಪುರುಷಾರ್ಥ! ರಾಜ್ಯವೇ? ಕೀರ್ತಿಯೋ? ವಿಲಾಸವೇ?' ಎಂದು ಅವನ ಸ್ವಾರ್ಥವನ್ನು ಉತ್ತೇಜನಗೊಳಿಸಿ 'ಅದನ್ನು ಬದಲು ಮಾಡೋಣ' ಎಂದು ಹೇಳಿದನು. ಜಗದೇಕಮಲ್ಲನು ಆ ನಿರೂಪದ ರಾಯಸವನ್ನು ಹರಿದು ಹಾಕಿದನು. ಬೊಮ್ಮ

ರಸನು ಸರಿಯಾದ ಮುದ್ರೆ ಮೊಹರುಗಳೊಡನೆ ಕುಶಲತೆಯಿಂದ ಹೊಸ ರಾಯಸವನ್ನು ರಚಿಸಿಕೊಟ್ಟನು.

'ರಾಣಿಯ ಸ್ವೈರವೃತ್ತಿಯು ತಿಳಿದು ಬಂದು ಕೀರ್ತಿವರ್ಮನು ನನ್ನ ಔರಸಪುತ್ರನಲ್ಲವೆಂದು ಖಚಿತವಾಗಿದೆ. ಆದ್ದರಿಂದ ಈ ಮೊದಲು ಅವನಿಗೆ ಗೊತ್ತುಮಾಡಿದ ರಾಜ್ಯದ ಉತ್ತರಾಧಿಕಾರವನ್ನು ಈಗ ತೆಗೆದುಹಾಕಿದ್ದೇನೆ. ಜಗದೇಕಮಲ್ಲರನ್ನು ಸಿಂಹಾಸನದಲ್ಲಿ ಕುಳ್ಳಿರಿಸಿ ಅವರ ಪರವಾಗಿ ನೀವು ಆಡಳಿತ ನಡಿಸಬೇಕು' ಎಂದು ತೈಲಪನು ಬಿಜ್ಜಳನಿಗೆ ಬರೆದಂತೆ ಆ ಕೃತ್ರಿಮ ರಾಯಸದ ಸಾರಾಂಶವಾಗಿತ್ತು.

ಅವರು ಬಿಜ್ಜಳನನ್ನು ಕಂಡರು. ಬಿಜ್ಜಳನು ರಾಯಸವನ್ನು ನೋಡಿ ಅದರ ಕೃತ್ರಿಮತೆಯನ್ನು ತಿಳಿದುಕೊಂಡನು. ಅದನ್ನೂ ತನಗೇ ಅನುಕೂಲ ಮಾಡಿಕೊಂಡನು. ಅದು ನಿಜವಾದುದೆನ್ನುವಂತೆ ನಟಿಸಿ, ಅದೇ ರಾಯಸದ ಆಧಾರದಿಂದ ಕೀರ್ತಿವರ್ಮನ ಉತ್ತರಾಧಿಕಾರದ ನಿರಾಕರಣೆಯನ್ನು ಸಾರಿ ಅವನನ್ನು ಕರ್ಹಾಡಕ್ಕೆ ಅಟ್ಟಿದನು. ಬೊಮ್ಮರಸನನ್ನು ರಹಸ್ಯವಾಗಿ ಕರೆಯಿಸಿ 'ನೀನು ಕೃತ್ರಿಮ ರಾಯಸವನ್ನು ನಿರ್ಮಿಸಿದೆ' ಎಂದು ಹೇಳಿ ಸೆರೆಮನೆಯಲ್ಲಿಟ್ಟನು. ಜಗದೇಕಮಲ್ಲನನ್ನು ಪಟ್ಟಗಟ್ಟುವದಾಗಿ ಹೇಳಿ ಚಾಲುಕ್ಯ ಅರಮನೆಯಲ್ಲಿರಿಸಿ ಅವನ ಸುರಕ್ಷಿತತೆಗೆಂದು ಸೈನ್ಯದ ಕಾವಲು (ಬಂಧನದಲ್ಲಿ) ಇಟ್ಟನು.

ತೈಲಪನಿಗೆ 'ನಿಮ್ಮ ಅಭಿಲಾಷೆಯಂತೆ ಜಾರಜನಾದ ಕೀರ್ತಿವರ್ಮನನ್ನು ಕರ್ಹಾಡಕ್ಕೆ ಕಳುಹಿ, ಜಗದೇಕಮಲ್ಲರನ್ನು ಪಟ್ಟಗಟ್ಟುವದಕ್ಕಾಗಿ ಅವರನ್ನು ರಕ್ಷಣೆಯಲ್ಲಿಡಲಾಗಿದೆ' ಎಂಬ ಅಭಿಪ್ರಾಯದ ಉತ್ತರ ಬರೆದು ಕಂಪಲಿಗೆ ಕಳಿಸಿದನು.

ಅದನ್ನು ಕಂಡು ತೈಲಪನು ತಾನು ಕಳಿಸಿದ ನಿರೂಪವೇನು? ಬಿಜ್ಜಳನು ಮಾಡಿದುದೇನು? ಎಂದು ಹೊಟ್ಟೆಬೇನೆ ಹಚ್ಚಿಕೊಂಡು ಹುಚ್ಚನಾಗಿ ಬಡಬಡಿಸಹತ್ತಿದನು. ಜ್ವರ ಏರಿ ಹಾಸಿಗೆ ಹಿಡಿದನು. ಪಾಟಲಿಕೆಯು ದಂಡನಾಯಕ ಬಸವರಾಜರಿಗೆ ಒಂದು ಪತ್ರ ಬರೆದು ನಡೆದುದೆಲ್ಲವನ್ನು ವಿವರಿಸಿ ದಯವಿಟ್ಟು ಬಂದುಹೋಗಬೇಕೆಂದು ದೈನ್ಯದ ಬಿನ್ನಪವನ್ನು ಕಳುಹಿದಳು.

ವೆಂಗಿನಾಡಿನಲ್ಲಿದ್ದ ತೈಲಪನ ಕಿರಿಯ ತಮ್ಮ ಸೋಮೇಶ್ವರನನ್ನೂ ಕರೆಯ ಕಳುಹಿದಳು. ಬಸವಣ್ಣನವರು ಬಂದ ಮರುದಿನ ತೈಲಪದೇವನು ಶಿವೈಕ್ಯ ನಾದನು. ಅದೇ ದಿನ ಬಂದ ಸಹೋದರ ಸೋಮೇಶ್ವರನಿಂದ ಅಂತ್ಯಕ್ರಿಯೆ ನಡೆಯಿತು. (ಕ್ರಿ. ವ. ೧೧೬೭).

ಕೀರ್ತಿವರ್ಮನ ಬಗೆಗೆ ತೈಲಪನು ಬರೆದ ನಿಜವಾದ ರಾಯಸದ ಕರಡು ಪ್ರತಿಯನ್ನು ಪಾಟಲಿಕೆ ಬಸವರಾಜರಿಗೆ ತೋರಿಸಿದಳು. ಅದನ್ನೂ, ಬಿಜ್ಜಳ ನಿಂದ ಬಂದ ಉತ್ತರವನ್ನೂ ಅವರು ನೋಡಿ ಬಹಳ ವ್ಯಥೆಪಟ್ಟರು.

ದಿಟವ ನುಡಿವುದು; ನುಡಿದಂತೆ ನಡೆವುದು.
ಹುಸಿಯ ನುಡಿದು ತಪ್ಪುವ ಪ್ರಪಂಚಿಯನೊಲ್ಲ
ಕೂಡಲಸಂಗಮದೇವ !

ಎಂದು ನೆನಿಸಿ ಮರುಗಿದರು. ಬಿಜ್ಜಳನಲ್ಲಿ ರಾಜ್ಯಾಪಹಾರದ ದುರಾಶೆ ಯುಂಟಾದುದಕ್ಕೆ ಬಸವರಸರು ಜಿಗುಪ್ಸೆಗೊಂಡರು. ಅದೇ ಕಾಲಕ್ಕೆ ಇನ್ನು ಮುಂದಿನ ತನ್ನ ರಾಜಿಕದ ಹೊಸತಂತ್ರವನ್ನು ಎಷ್ಟುಮಾತ್ರವೂ ಬಸವ ರಾಜರು ಅನುಮೋದಿಸುವದಿಲ್ಲವೆಂದು ಅಲ್ಲಿ ಬಿಜ್ಜಳನೂ ಭಾವಿಸಿಕೊಂಡಿ ದ್ದನು.

ತಮ್ಮ ರಾಜಮನೆತದ ದುರವಸ್ಥೆಯನ್ನು ನೆನಿಸಿ ಅಸಮಾಧಾನಗೊಂಡು ಸೋಮೇಶ್ವರನು ವೆಂಗಿಮಂಡಲಕ್ಕೆ ಮರಳಿದನು. ಪಾಟಲಿಕೆ, ಪ್ರೇಮಾವತಿ ಯರು ಬಸವಣ್ಣನವರ ಮಹಾನುಭಾವತೆಗೆ ಮಾರುಹೋಗಿದ್ದರು. 'ನಮ್ಮನ್ನು ಸನ್ಮಾರ್ಗದಲ್ಲಿ ನೆಲೆಗೊಳಿಸು ತಂದೆ' ಎಂದು ಅವರ ಅಡಿಗಳಿಗೆ ಮೊರೆಬಿದ್ದರು. ಸಾಮಾನ್ಯರಂತೆ ಕಲ್ಯಾಣದಲ್ಲಿ ವಾಸಿಸಲು ಬಯಸಿದರು. ಬಸವರಾಜರು ಶಿವಭಕ್ತಿಯ ಮಾರ್ಗವೇ ಸನ್ಮಾರ್ಗವೆಂದು ಅವರಿಗೆ ನಿರೂಪಿಸಿದರು. ಅವ ರನ್ನು ಕಲ್ಯಾಣಕ್ಕೆ ಮುಟ್ಟಿಸುವ ಏರ್ಪಾಡುಮಾಡಿ, ತೈಲಪದೇವನ ಮರಣದ ಅಧಿಕೃತ ವರದಿಯನ್ನು ಬಿಜ್ಜಳನಿಗೆ ಕಳುಹಿ, ಕಂಪಲಿಯಲ್ಲಿ ಒಬ್ಬ ದುರ್ಗಾಧಿ ಕಾರಿಯನ್ನಿಟ್ಟು ಬನವಾಸಿಗೆ ಹೋದರು.

೯. ಸಂಕ್ರಾಂತಿಸಮಯ

ನಿವೃತ್ತಿಪತ್ರ

ಬಸವಣ್ಣನವರು ಬನವಾಸಿಗೆ ಮರಳಿ ಬರುವದರೊಳಗಾಗಿ ಚೆನ್ನಬಸವಣ್ಣನು ಇಬ್ಬರು ಸಹಪಾಠಿಗಳೊಡನೆ ಬಳ್ಳೀಗಾಂವಿಯಿಂದ ಅಲ್ಲಿಗೆ ಬಂದಿದ್ದನು. ಆತನು ಉಪನಿಷದಾಗಮಗಳ ಅಭ್ಯಾಸ ಮುಗಿಸಿ ವೇದಾಂತ ಹಾಗು ಶೈವ-ಸಿದ್ಧಾಂತಗಳ ರಹಸ್ಯವನ್ನು ಮನನ ಮಾಡಿಕೊಂಡಿದ್ದನು. ವಾಮಶಕ್ತಿ ಪಂಡಿತರ ಅನೇಕ ಗ್ರಂಥಗಳ ಪ್ರತಿ ಮಾಡಿಕೊಂಡಿದ್ದನು. ಷಟ್‌ಸ್ಥಲಜ್ಞಾನ ಪ್ರತಿಪಾದನೆಯಲ್ಲಿ ವಿದ್ಯಾಪೀಠದಿಂದ ಅಗ್ರಪ್ರಾಶಸ್ತ್ಯವನ್ನು ಪಡೆದಿದ್ದನು. ಮೂಲಸ್ಥಲಸ್ವರೂಪ, ಆ ಪರಶಿವನ ಕೇವಲ ಲೀಲಾವಸ್ಥಾವಿಶೇಷಪರಿಜ್ಞಾನ, ಶಿವಶಕ್ತಿಸ್ವರೂಪ, ಜೀವಾತ್ಮ-ಪರಮಾತ್ಮ, ಸೃಷ್ಟಿಕ್ರಮ, ಮಾಯಾಪಾಶ, ಮಲಾವರಣ ಇವುಗಳ ಜ್ಞಾನ ಮತ್ತು ಸಾಧನೆಗಳಿಂದ ಬಗೆಬಗೆಯ ಬಂಧನ ಬಯಲಾಗಿ ಶಿವತ್ವಾಭಿವ್ಯಕ್ತವಾಗುವಿಕೆ ಮುಂತಾದ ವಿಷಯಗಳಲ್ಲಿ ಅದ್ವಿತೀಯ ಪಂಡಿತನಾಗಿದ್ದನು.

ಅಕಸ್ಮಾತ್ತಾಗಿ ಬಂದ ಅಳಿಯನನ್ನು ಕಂಡು ದಂಡನಾಯಕರಿಗೆ ಸಂತೋಷವಾಯಿತು ಅಂದಿನ ರಾತ್ರಿ ಅವನ ಯೋಗಕ್ಷೇಮ, ಜ್ಞಾನಸಾಧನೆ ಮುಂತಾದವುಗಳ ವಿಚಾರದಲ್ಲಿ ಕಳೆಯಿತು. ಬಳ್ಳೀಗಾಂವಿಯಲ್ಲಿ ಪಂಚಲಿಂಗೇಶ್ವರ-ತ್ರಿಪುರಾಂತಕೇಶ್ವರ ಯಾತ್ರಾಕಾಲದಲ್ಲಿಯೇ ಕೋಡೀಮಠದ ವಿದ್ಯಾಪೀಠದ ವಾರ್ಷಿಕೋತ್ಸವ ಜರುಗುತ್ತಿತ್ತು. ಈ ಸಲದ ವಾರ್ಷಿಕೋತ್ಸವಕ್ಕೆ ದಂಡನಾಯಕ ಬಸವರಾಜರನ್ನು ಬರಮಾಡಿಕೊಳ್ಳುವ ನಿರ್ಣಯವಾಗಿತ್ತು. ಈ ಬಗೆಗೆ ಅಲ್ಲಿಯ ಕುಲಪತಿಗಳ ಹಾಗು ಸಾಮಂತರ ಅಧಿಕೃತ ಆಮಂತ್ರಣವು ಚೆನ್ನಬಸವಣ್ಣನ ಹಿಂದಿನಿಂದ ಬರತಕ್ಕದಾಗಿತ್ತು. ತನ್ನ ಅಭ್ಯಾಸದ ಕಡೆಯ ವರ್ಷದ ಈ ಉತ್ಸವದಲ್ಲಿ ಬಳ್ಳೀಗಾಂವಿಯನ್ನು ನೋಡದಿರುವ ಅಕ್ಕಂದಿರನ್ನು ಕರೆದುಕೊಂಡು ಹೋಗಲು ಬಯಸಿ ಚೆನ್ನಬಸವಣ್ಣನು ಬಂದಿದ್ದನು. ಮಾವ ಬರುವ ಮೊದಲೇ ತನ್ನ ಬಯಕೆಯನ್ನು ಗಂಗಾಂಬಿಕೆ-

ನೀಲಾಂಬಿಕೆಯರಿಗೆ ತಿಳಿಸಿ, ಸಂಗಯ್ಯನನ್ನು ಕುಣಿದಾಡಿಸಿದ್ದನು. ಆ ಎಲ್ಲ ವಿಚಾರಗಳನ್ನೂ ಮಾವನಿಗೆ ತಿಳಿಸಿದನು.

ಬಸವರಾಜರ ಮನದಲ್ಲಿಯು ಕಾರ್ಯಾವಸರ ಬೇರೆಯೇ ಆಗಿತ್ತು. ಕಲ್ಯಾಣದಲ್ಲಿ ನಡೆದ ಅವಾಂತರಗಳಿಂದ ಅವರು ನೊಂದುಕೊಂಡಿದ್ದರು. ಅದನ್ನು ಸರಿಪಡಿಸಲು ಅವಕಾಶವಿದ್ದರೆ ಅದಕ್ಕಾಗಿ ಯತ್ನಿಸಬೇಕೆಂದು ಯೋಚಿಸಿದ್ದರು. ಅದು ಬಿಜ್ಜಳನ ಆಶಾಪೂರ್ತಿ, ಇಲ್ಲವೆ ಚಾಲುಕ್ಯವಂಶದ ಪತನದ ಮಟ್ಟಿಗಿನ ಪ್ರಶ್ನೆಯಾಗಿರದೆ, ಇದುವರೆಗೆ ನಾಡಿನಲ್ಲಿ ಪ್ರಜಾಹಿತಕ್ಕಾಗಿ ಸಮಾನತೆಯ ತಳಹದಿಯಮೇಲೆ ಕಟ್ಟಿದ ಸಮಾಜರಚನೆಯಿಂದ ಸಾಧಿಸಲಾಗುತ್ತಿರುವ ಸುಖ-ಶಾಂತಿ-ಧರ್ಮಗಳ, ಅಳಿವು-ಉಳಿವುಗಳ ಪ್ರಶ್ನೆಯಾಗಿತ್ತು. ಯಾಕಂದರೆ, ಅಂತಃಕಲಹಗಳು-ಯಾದವೀಯುದ್ಧಗಳು ನಡೆದರೆ-ಸಂಸ್ಕೃತಿಯು ನಾಶವಲ್ಲದೆ ಉನ್ನತಿಯೆಂಬುದು ಅಸಾಧ್ಯವಾಗುವದು. ಈ ವಿಚಾರದಿಂದ ಬಸವರಾಜರು ತಮ್ಮಲ್ಲಿ ಬಿಜ್ಜಳನು ತೋರಿಸುತ್ತಿದ್ದ ಗೌರವಾಭಿಮಾನಗಳು ಸತ್ಯವಾಗಿದ್ದರೆ, ಅವುಗಳ ಪ್ರಯೋಜನದಿಂದ ಮುಂದಿನ ಅನರ್ಥವನ್ನು ತಪ್ಪಿಸುವದಕ್ಕಾಗಿ ಕಲ್ಯಾಣಕ್ಕೆ ಹೋಗಲು ನಿಶ್ಚಯಿಸಿದ್ದರು. ತಾವು ಬೇಗನೆ ಭೆಟ್ಟಿಗೆ ಬರಬಹುದೆಂಬದನ್ನು ಕಂಪಲಿಯಿಂದ ಬಿಜ್ಜಳನಿಗೆ ಕಳಿಸಿದ ವರದಿಯಲ್ಲಿ ತಿಳಿಸಿದ್ದರು.

ಬಳ್ಳೀಗಾಂವಿಯಿಂದ ಬಂದ ಆಮಂತ್ರಣಕ್ಕೆ ತಮ್ಮ ಸಕಾರಣ ನಿರಾಕರಣೆಯ ನಿವೇದನೆಯನ್ನು ಕಳಿಸಿದರು. ಭಟರ ರಕ್ಷಣೆಯಲ್ಲಿ ತಕ್ಕ ವ್ಯವಸ್ಥೆಯಿಂದ ಮನೆಯವರು ಚೆನ್ನಬಸವಣ್ಣನೊಡನೆ ಬಳ್ಳೀಗಾಂವಿಗೆ ಹೋಗಿ ಬರುವ ಏರ್ಪಾಡು ಮಾಡಿ, ಆಡಳಿತದ ವ್ಯವಸ್ಥೆಯನ್ನು ತಮ್ಮ ಹಿಂದಿನ ಅಧಿಕಾರಿಗಳಿಗೆ ತಿಳಿಸಿ ಕಲ್ಯಾಣಕ್ಕೆ ಹೋದರು. ಅಷ್ಟರಲ್ಲಿ ಬಿಜ್ಜಳನು ಜಗದೇಕಮಲ್ಲನ ಉತ್ತರಾಧಿಕಾರದ ಘೋಷಣೆ ಮಾಡಿ, ಸೈನ್ಯದ ಕಾವಲಿನಲ್ಲಿ ಒಂದು ದಿನ ಪಟ್ಟಾಭಿಷೇಕೋತ್ಸವ ನಡೆಯಿಸಿ, ಸ್ಥಾನಿಕ ಪ್ರಜಾದರ್ಶನ ಮಾಡಿಸಿ ಮತ್ತೆ ಎಂದಿನಂತೆ ಬಂಧನದಲ್ಲಿ ಇಟ್ಟಿದ್ದನು. ಇದನ್ನು ಕೇಳಿದ ಬಸವರಾಜರು ತಮ್ಮ ಪ್ರಯತ್ನದ ಫಲದಲ್ಲಿ ಮೊದಲೇ ನಿರಾಶೆಯನ್ನು ಕಂಡರು. ಇನ್ನು ತಾವು ಅಧಿಕಾರವನ್ನು ತ್ಯಜಿಸುವದೇ ಯೋಗ್ಯವೆಂದು ಅಧಿಕಾರ ತ್ಯಾಗಪತ್ರವನ್ನು ಬರೆದಿಟ್ಟುಕೊಂಡೇ ಅರಮನೆಗೆ ಹೋದರು.

ಈಗ ತಾನು ಎದುರಿಸಬೇಕಾಗಿದ್ದ ಪ್ರಸಂಗದ ಯೋಚನೆ ಮಾಡಿ, ಬಿಜ್ಜಳನು ಸಿದ್ಧನಾಗಿಯೇ ಕಾದಿದ್ದನು. ತೈಲಪದೇವನ ಇಚ್ಛೆಯ ಹೆಸರಿನಲ್ಲಿ ಅವನ ಇಚ್ಛೆಯ ವಿರುದ್ಧವಾಗಿ ನಡೆದುದನ್ನು ಬಸವರಾಜರು ಬಿಜ್ಜಳರಾಜನಿಗೆ ಅರುಹಿ ತಕ್ಕ ಪ್ರಮಾಣಪತ್ರಗಳನ್ನು ತೋರಿಸಿದರು. ಕೀರ್ತಿವರ್ಮನನ್ನು ಅಟ್ಟಿಬಿಟ್ಟಿದ್ದರಿಂದ ಸಂಧಾನಕಾಲದಲ್ಲಿ ಮಂತ್ರಿ ಮಂಡಲದ ನಿರ್ಣಯದಂತೆ ಹೊರಡಿಸಿದ ಘೋಷಣೆಯ ಉಲ್ಲಂಘನೆಯಾಗುತ್ತಿರುವದನ್ನು ಗಮನಕ್ಕೆ ತಂದರು. ತನ್ನ ತಂತ್ರದ ವಿರುದ್ಧವಾಗಿ ಈ ವಿವೇಚನೆ ನಡೆಯುವದು ಬಿಜ್ಜಳನಿಗೆ ಹೇಗೆ ಇಷ್ಟವಾದೀತು ? ಬಸವರಾಜರ ಮಾತುಗಳೆಲ್ಲ ಅವನಿಗೆ ಅಪ್ರಿಯವಾದವು. ಆತನು—"ಮುಗಿದು ಹೋದ ಮಾತು ! ಇನ್ನೇನೂ ಮಾಡಲಿಕ್ಕಾಗುವದಿಲ್ಲ" ಎಂದು ಪ್ರಮಾಣ ಪತ್ರಗಳನ್ನು ಬದಿಗಿಟ್ಟುಬಿಟ್ಟನು. ಬಸವಣ್ಣನವರು ನೊಂದು ನುಡಿದರು :

"ನಿಮ್ಮ ಈ ಮುಗಿಸುವಿಕೆಯಿಂದಲೇ ನೀವು ರಾಜ್ಯಾಪಹಾರವನ್ನು ಮಾಡುತ್ತಿದ್ದೀರೆಂದು ಅಪವಾದವನ್ನು ಹೊರುತ್ತಿದ್ದೀರಿ. ಅದರ ಪ್ರಚಾರ ದಿಂದ ವಿರೋಧಿಗಳು ತಲೆಯೆತ್ತುವಂತಾಗುತ್ತಿದೆ."

"ಆಗಲಿ, ವಿರೋಧಿಗಳು ಯುದ್ಧಕ್ಕೆ ಬಂದರೆ,ಅವರನ್ನು ನಾಶಮಾಡುವ ಸಾಮರ್ಥ್ಯ ನನಗಿದೆ ಚಾಲುಕ್ಯವಂಶದ ಉದ್ಧಾರಕ್ಕಾಗಿ ಬೇಕಾದರೆ ನೀವೂ ಅವರಿಗೆ ಸಹಾಯ ಮಾಡಬಹುದು."

"ಪ್ರಭುಗಳ ಮುಖದಿಂದ ಇಂಥ ಮಾತು ಬರುವದೆಂದು ನಾನು ಭಾವಿಸಿರಲಿಲ್ಲ. ಹಿಂದೆ ನಾನು ಪ್ರಾಣವನ್ನು ಪಣಕ್ಕಿಟ್ಟು ಯುದ್ಧನಿವಾರಣೆಯ ಪ್ರಯತ್ನ ಮಾಡಿದುದನ್ನು ನೀವು ಮರೆತಿರಲಿಕ್ಕಿಲ್ಲ. ಮುಂದೆಯೂ ಯುದ್ಧ ಭೀತಿಯುಂಟಾದರೆ, ಸಂಗಮನಾಥನು ಕರುಣಿಸಿದ ಬುದ್ಧಿಬಲಗಳನ್ನು ಅಂತಹ ಯುದ್ಧನಿವಾರಣೆಗೇ ಉಪಯೋಗಿಸುವೆನು.... ಈಗ ನನಗಿನ್ನು ಅಧಿಕಾರದಲ್ಲಿ ಉಳಿಯುವ ಇಚ್ಛೆಯಿಲ್ಲ. ನನ್ನನ್ನು ಆ ಹೊಣೆಯಿಂದ ಮುಕ್ತಮಾಡಬೇಕು."

ನಿವೃತ್ತಿಪತ್ರವನ್ನು ಬಿಜ್ಜಳನ ಮುಂದಿಟ್ಟು ಕೈಮುಗಿದರು ಬಿಜ್ಜಳನು ನೋಡಿ ಚಕಿತನಾದನು.

"ಏನು ಇದು ! ನೀವು ವಿಚಾರಮಾಡಿ ನಿರ್ಧರಿಸಿದ್ದೀರಾ ?"

"ಸಾವಧಾನವಾಗಿ ವಿಚಾರಿಸಿಯೇ ಈ ನಿರ್ಧಾರಕ್ಕೆ ಬಂದಿದ್ದೇನೆ."

"ನಿಮ್ಮ ಬಿಡುಗಡೆಗೆ ಮಂತ್ರಿಮಂಡಲದ ನಿರ್ಣಯ ಬೇಕಾಗುತ್ತದೆ."

"ಆಗತ್ಯವಿಲ್ಲ! ನನ್ನನ್ನು ನಿಯಮಿಸಿದ ಪ್ರಭುಗಳಿಗೆ, ಬಿಡುಗಡೆ ಮಾಡುವ ಅಧಿಕಾರ ಇದ್ದೇ ಇದೆ."

"ವಿಚಾರ ಮಾಡುವದಕ್ಕಾದರೂ ಅವಕಾಶ ಬೇಡವೇ ಬಸವರಾಜರೆ? ಬೇಕಾದರೆ ನೀವು ಎರಡು ವಾರ ವಿರಾಮಹೊಂದಿ ಬನವಾಸಿಗೆ ಮರಳ ಬಹುದು."

"ವಿರಾಮಕ್ಕಾಗಿ ಕರುಣಿಸಿದ ಎರಡು ವಾರಗಳಲ್ಲಿ ಪ್ರಭುಗಳು ಈ ಎರಡ ರಲ್ಲಿ ಒಂದರ ನಿರ್ಣಯ ಮಾಡಬೇಕು. ನನ್ನ ನಿವೃತ್ತಿಯನ್ನು ಒಪ್ಪಬಹುದು; ಇಲ್ಲವೆ ನನ್ನನ್ನು ದಂಡಿಸಬಹುದು; ಮರಳಿ ಅಧಿಕಾರಕ್ಕೆ ಬರಲು ನಾನು ಅಸಮ್ಮತನು. ತತ್ವವಿಚಾರ-ಧರ್ಮಾಚಾರಗಳಲ್ಲಿ ಕಾಲಕ್ಷೇಪ ಮಾಡುವದು ನನ್ನ ಶೇಷಜೀವನದ ಉದ್ದೇಶ!"

"ನಿಮ್ಮ ಇಷ್ಟ!"

"ಬಹಳ ಸಂತೋಷ ನಾನಿನ್ನು ಬರುತ್ತೇನೆ."

ಟೊಂಕದ ಖಡ್ಗವನ್ನು ತೆಗೆದು ಪೀಠದ ಮೇಲಿಟ್ಟು ಪುನಃ ಅಭಿವಂದಿಸಿ ಬಸವರಾಜರು ಹೊರಗೆ ಬಂದರು. ತಮಗಾಗಿ ಸಿದ್ಧವಾಗಿ ಕಾದಿದ್ದ ತಮ್ಮ ಅಧಿಕರಣದ ರಥವನ್ನು ಹತ್ತದೆ, ನಡೆದುಕೊಂಡೇ ಮಹಮನೆಗೆ ಬಂದು ಬಿಟ್ಟರು.

ಪವಿತ್ರಾತ್ಮರು

ಬಸವಣ್ಣನವರು ವಾಸಗೃಹದಲ್ಲಿ ಕ್ಷಣಹೊತ್ತು ವಿರಮಿಸುವದರೊಳ ಗಾಗಿ ಸೊಡ್ಡಳ ಬಾಚರಸರು, ಮಾಚಯ್ಯನವರು ಬಂದು 'ಶರಣು' ಎಂದರು. ಬಸವರಸರು ಎದ್ದುನಿಂತು ಪ್ರೀತಿಯಾಗಿ ಶರಣು ಮಾಡಿದ ಬಳಿಕ ಸೊಡ್ಡಳರು ನುಡಿದರು:

"ದಣ್ಣಾಯಕರಿಗೆ ಶ್ರಮವಾದಂತಿದೆ; ಆದರೂ ಅನುಭವಗೋಷ್ಠಿಯ ವೇಳೆ ಸಮೀಪಿಸಿದೆ. ಶರಣರೆಲ್ಲ ಶಿವಾನುಭವ ಮಂಟಪದಲ್ಲಿ ತಮ್ಮ ಬರವ ಹಾರೈಸಿ ಕಾದಿದ್ದಾರೆ. ಅಪ್ಪಣೆಯಾಗಬೇಕು."

"ಶ್ರಮವೆಲ್ಲಿಯದು ಬಾಚರಸರೆ ? ಬರುವೆ ನಾನು !"
ಎಂದು ಅಣ್ಣನವರು ಪೈಯಲ್ಲಿ ಬಟ್ಟೆ ಧರಿಸುತ್ತ -

"ಕುಲದೈವ ಮನೆದೈವ ನಿಮ್ಮವರಯ್ಯಾ !
ತನುಮೀಸಲು, ಮನಮೀಸಲು, ನಯನಮೀಸಲು ದೇವ !
ಕೂಡಲಸಂಗಮದೇವಾ ನಿಮ್ಮ ಶರಣರಿಗೆನ್ನ.

ನಡೆಯಿರಿ ಮಾಚಯ್ಯನವರೆ" ಎನ್ನುತ್ತ ಅವನ ಕೈಯಲ್ಲಿ ಕೈಯಿಕ್ಕಿ ಮುಂದೆ ನಡೆದರು. ವೃದ್ಧಶರಣ ಸೊಡ್ಡಳರು ಹಿಂದೆ ನಡೆದರು.

ಶರಣರೆಲ್ಲರಿಗೆ ಶರಣು ಮಾಡುತ್ತ ಅನುಭವಮಂಟಪವನ್ನು ಪ್ರವೇಶಿಸಿದರು ಬಸವಣ್ಣನವರು ! ಬಹುದಿವಸಕ್ಕೆ ಬಂದ ಆನಂದಕ್ಕೆ ಉಘೇ ಉಘೇ ಎಂದಿತು ಭಕ್ತಜನಸಂದೋಹ ! ಅಪ್ಪಣ್ಣನು ಶಾಂತಿಸೂಚನೆ ಕೊಟ್ಟ ಮೇಲೆ ಅಂದಿನ ನಿಯಾಮಕ ಅಧಿಪತಿಗಳಾದ ಸೊಡ್ಡಳ ಬಾಚರಸರ ನೇತೃತ್ವದಲ್ಲಿ ಪ್ರಾರ್ಥನೆ ನಡೆದು ಗೋಷ್ಠಿ ಆರಂಭವಾಯಿತು. ಶರಣರು ಸಂಗನಬಸವಣ್ಣನವರ ಅನುಭವ ಕೇಳಲು ಆತುರರಾಗಿದ್ದಾರೆಂದು ಸಭಾಪತಿಗಳು ಸೂಚಿಸಿದರು. ಬಸವಣ್ಣನವರ ಅಂದಿನ ಮನೋವಿಶ್ಲೇಷಣೆಯೇ ಆಗಿನ ಅವರ ವಾಣಿಯಲ್ಲಿ ಹರಿದು ಬಂದಿತು:

"ಸಕಲ ಚರಾಚರಕ್ಕೂ ಸರ್ವ ಕ್ರಿಯಾಜ್ಞಾನಗಳಿಗೂ ಕಾರಣನೂ, ಆಶ್ರಯನೂ ಆದ ಸಂಗಮನಾಥನ ಶರಣರ ಅಡಿಗಳಿಗೆ ಪೊಡಮಡುವೆ.

ಬಲೆಗೆ ಸಿಕ್ಕಿದ ಮೃಗದಂತೆ ನಾನಯ್ಯ !
ಮುರಿದಪ್ಪಿದ ಹುಲ್ಲೆಯಂತೆ
ದೆಸೆದೆಸೆಗೆ ಬಾಯ ಬಿಡುತಿರುವೆನಯ್ಯ.
ನಾನಾರ ಸಾರುವೆನಯ್ಯ ?
ತಾಯಾಗಿ ತಂದೆಯಾಗಿ ನೀನೆ, ಸಕಲ ಬಂಧುಬಳಗವು ನೀನೆ,
ಕೂಡಲಸಂಗಮದೇವಾ !

ಶರಣಾಗು, ಶರಣಾಗು !

ಈ ಕೈಯಿಲೆ ಸುಖವು, ಈ ಕೈಯಿಲೆ ದುಃಖವು,
ಏಕಯ್ಯ ನೀ ನಮ್ಮ ಬರಿದೆ ಬಳಲಿಸುವೆ ?

ನಾನಾರ ಸೇರುವೆನಯ್ಯ ? ಆರು ಇಲ್ಲದ ದೇಸಿಗ ನಾನು ಕಾಣಾ
ಕೂಡಲಸಂಗಮದೇವಾ.

ಶರಣಾಗು, ಶರಣಾಗು !

ಭವಬಂಧನ ಭವಪಾಶವಾದ ಕಾರಣವೇನಯ್ಯ ?
ಹಿಂದಣ ಜನ್ಮದಲ್ಲಿ ಲಿಂಗವ ಮರೆದೆನಾಗಿ,
ಹಿಂದಣ ಸಿರಿಯಲ್ಲಿ ಜಂಗಮವ ಮರೆದೆನಾಗಿ,
ಅರಿದಡೀ ಸಂಸಾರವ ಹೊದ್ದಲೀವೆನೆ
ಕೂಡಲಸಂಗಮದೇವಾ ?

ಹೊದ್ದಿದರೆ ಹೊದ್ದಲಿ; ನಿನ್ನ ಶರಣರ ಪಾದಸೇವೆಯೇ ರಕ್ಷೆಯೆಂಬ ಅರಿವು ಮರೆಯಾಗದಿರಲಿ ! ಆ ಭವಬಂಧನವೆನ್ನನೇನ ಮಾಡುವದು ?

“ಒಡೆಯರೆ, ಬಿಜ್ಜಳ ಭೂಪಾಲನ ಊಳಿಗದ ಬವಣೆ ಬದಿಗಾಯಿತು; ನಿಮ್ಮಡಿಗಳ ಸೇವೆಗೆ ಅವಸರ ಸಿಕ್ಕಿತು. ನಿಮ್ಮ ಕರುಣೆಯ ಕಂದ ನಾನು. ನಿಮ್ಮನು ಓಲೈಸಲು ಎಡೆಗೊಟ್ಟು ನಿಮ್ಮ ಒಕ್ಕುಮಿಕ್ಕುದನು ಇಕ್ಕಿ ಕಾಪಾಡಬೇಕು. ಮರ್ತ್ಯಲೋಕವೆಂಬುದು ಕರ್ತಾರನ ಕಮ್ಮಟ ! ಆ ಕಮ್ಮಟಿಗನ ಕೈಯ ಲೋಹದ ತುಂಡು ನಾವು ! ಅವನು ತನ್ನ ಇಚ್ಛೆಯಂತೆ ಮಾಡಿದ ಒಡವೆಯಾಗಬೇಕಷ್ಟೇ ?”

ಬಸವಣ್ಣನವರು ಕ್ಷಣಹೊತ್ತು ಕಣ್ಣುಮುಚ್ಚಿ ಸುಮ್ಮನೆ ಕುಳಿತರು. ಅವರ ಕಾಯಕಕ್ಕೆ ಸಂಬಂಧಿಸಿ ವಿಶೇಷ ಪ್ರಸಂಗವೇನೋ ನಡೆದಿದೆಯೆಂದು ಊಹಿಸುತ್ತಿದ್ದರು ಶರಣರು. ಬಸವರಸರು ಮತ್ತೆ ಮುಂದುವರಿದರು :

“ನೀ ಹುಟ್ಟಿಸಿದಲ್ಲಿ ಹುಟ್ಟದೆ ಕೊಂದಲ್ಲಿ ಸಾಯದೆ
ಎನ್ನ ವಶವೇ ಅಯ್ಯಾ ?
ನೀವಿರಿಸಿದಲ್ಲಿ ಇರದೆ ಎನ್ನ ವಶವೇ ಅಯ್ಯಾ ?
ಅಕಟಕಟಾ, ಎನ್ನವನೆನ್ನವನೆನ್ನಯ್ಯಾ !
ಕೂಡಲಸಂಗಮದೇವಯ್ಯಾ !
ತಂದೆ ನೀನು ತಾಯಿ ನೀನು;
ಬಂಧು ನೀನು ಬಳಗ ನೀನು;
ನೀನಲ್ಲದೆ ಮತ್ತಾರೂ ಇಲ್ಲವಯ್ಯಾ.
ಕೂಡಲಸಂಗಮದೇವಾ ಹಾಲಲದ್ದು ನೀರಲದ್ದು !

ನಂಬಿದವರನು ಇಂಬಿಟ್ಟು ಕಾಪಾಡದಿರುವನೇ ಕೂಡಲಸಂಗಯ್ಯನು ?

ಹಾವ, ಕಿಚ್ಚ ಮುಟ್ಟೇಹ (ತು) ಶಿಶುವೆಂದು
ಹೆತ್ತತಾಯಿ ಮಗನ ಬೆಂಬತ್ತಿ ಬಪ್ಪಂತೆ
ಎನ್ನೊಡನೊಡನೆ ಕೂಡಲಸಂಗಮದೇವ
ಕಾಯ್ದುಕೊಂಡಿಪ್ಪನಯ್ಯಾ.

ಶರಣು; ಸಂಗಮದೇವನ ಶರಣರಿಗೆ ಶರಣು; ಶರಣರ ಹೃದಯದಲ್ಲಿ ತೊಳಗಿ ಬೆಳಗುವ ಸಂಗಮದೇವನಿಗೆ ಶರಣು.''

ಸಭಾಪತಿಗಳು ಉಪಸಂಹಾರದ ವಚನ ಹೇಳಿದರು:

"ನಿನ್ನಿಂದಲಾನಾದೆನು.
ಎನಗೆ ದೇಹೇಂದ್ರಿಯ ಮನಃಪ್ರಾಣಾದಿಗಳಿಗೆ ಕರ್ತೃ ನೀನೆ;
ಅವರಾಗು ಚೇಗು ಸುಖದುಃಖವೆಲ್ಲವು ನೀನೆ;
ಒಳಗು ನೀನೆ; ಹೊರಗೂ ನೀನೆ;
ನಾನೆಂಬುದು ನಡುವಣ ಭ್ರಾಂತಿ,
ನಿನ್ನ ವಿನೋದ ನೀನೇ ಬಲ್ಲೆ ದೇವರಾಯ ಸೊಡ್ಡಳಾ"

ಗೋಷ್ಠಿ ಮುಕ್ತಾಯವಾಯಿತು. ಕಲಿಕೇತಯ್ಯ ಹಿಡಿದ ಪಂಜಿನ ಬೆಳಕಿನಲ್ಲಿ ಎಲ್ಲರೂ ಮಂಟಪದ ಮುಂದಿನ ಸಭಾಂಗಣಕ್ಕೆ ಬಂದರು. ಅಲ್ಲಿ ನಿಂತು ಬಸವರಾಜರು ನಾಲ್ಕು ಮಾತುಗಳಲ್ಲಿ ತಮ್ಮ ನಿವೃತ್ತಿಯನ್ನೂ ಅದರ ಕಾರಣಗಳನ್ನೂ ಅರಿಕೆ ಮಾಡಿದರು. ಶರಣರು ಸ್ವಲ್ಪ ಹೊತ್ತು ಕಾತರಗೊಂಡರೂ ಶಿವನಿಚ್ಛೆಯೆಂದು ಸಮಾಧಾನದಿಂದ ಬೀಳ್ಕೊಂಡು ನಡೆದರು. ಬಸವರಸರು ಮರಳಿ ವಾಸಗೃಹಕ್ಕೆ ಬರುವಷ್ಟರಲ್ಲಿ ನಾಗಲಾಂಬೆಯರು ಅವರ ವಿರಾಮಗೃಹದ ಬಾಗಿಲಲ್ಲಿ ಕಾದಿದ್ದರು.

"ಯಾವಾಗ ಬಂದೆ ಬಸವೇಶಾ ? ನಾವು ಮನೆಯ ಮುಟ್ಟುವದಕ್ಕೆ ವೇಳೆಯಾದ್ದರಿಂದ ನೇರವಾಗಿ ಅನುಭವ ಮಂಟಪಕ್ಕೇ ಬಂದೆವು. ಅಲ್ಲಿಯೇ ನಿನ್ನನ್ನು ನೋಡಿದ್ದು !''

"ಮೂರನೆಯ ಪ್ರಹರದಲ್ಲಿ ನಗರಕ್ಕೆ ಬಂದೆನು. ಹಾಗೆಯೇ ಮಹಾಮಂಡಲೇಶ್ವರರನ್ನು ಕಾಣಹೋದೆನು. ಅಲ್ಲಿಂದ ಮನೆಗೆ ಬಂದಾಗ ನೀನು ಕಾಣಲಿಲ್ಲ. ಅಷ್ಟರಲ್ಲಿ ಅನುಭವಗೋಷ್ಠಿಯ ವೇಳೆಯಾಗಿತ್ತು."

"ಬೇಲೀಬೀಡು ಹಳ್ಳಿಯ ಗೌಡರ ಆಳು ಮಹಮನೆಗೆ ಸೊಪ್ಪುಕೊಡ ಲಿಕ್ಕೆ ಬಂದಾಗ ತಮ್ಮ ಹಳ್ಳಿಯಲ್ಲಿ ಮಾರೀಬೇನೆ ಹಬ್ಬಿದುದನ್ನು ಹೇಳಿದ್ದನು. ರಿಮ್ಮವ್ವೆ, ಲಕ್ಕಮ್ಮ, ರಾಯಮ್ಮ ಶರಣೆಯರೂ, ನಾನೂ ಅಲ್ಲಿಗೆ ಹೋಗಿ ಕಷಾಯ ಮಾಡಿಸಿ, ಔಷಧ ಕೊಡುವದನ್ನು ತೋರಿಸಿ ಉಪಚಾರವನ್ನು ಸಂ ಗೊಳಿಸಿ ಬಂದೆವು. ಬಹುಜನ ರೋಗಗ್ರಸ್ತರು ಬಡವರೇ ಆಗಿದ್ದಾರೆ."

"ಒಳ್ಳೆಯದನ್ನು ಮಾಡಿದಿರಮ್ಮಾ ನೀವು ! ಇದೇ ಆದರ್ಶ ಕರ್ತವ್ಯ! ಇದೇ ಈಶಸೇವೆ, ದೇಶಸೇವೆ ! ಹಲವು ಕಡೆಗೆ ನಿನ್ನ ವಿಶಾಲಹೃದಯದ ಪ್ರಶಂಸೆ ಕೇಳಬರುತ್ತಿದೆಯಮ್ಮಾ !''

"ಪ್ರಶಂಸೆ ಏಕಾಗಬೇಕು ? ದೀನ ಜನರ ದುಃಖ ನಿವಾರಣೆಯಿಂದ ಆನಂದ ಪಡುವವರೇ ನಾವು ! ನಮ್ಮ ಸಮಾಧಾನಕ್ಕೇ ನಾವು ಮಾಡು ವದು. ಅರಮನೆಯಲ್ಲಿ ನಡೆದದ್ದೇನು ? ನಿನ್ನ ಮನಸ್ಸು ಕಳವಳ ಗೊಂಡಂತಿದೆ."

"ಕಳವಳಕ್ಕೆ ಪರಿಹಾರವನ್ನೂ ಪಡೆದಿದ್ದೇನೆ. ತೈಲಪದೇವನ ಮರಣದ ನಂತರ ರಾಜಕೀಯವು ಸರ್ಪನವೇಗದಿಂದ ವಕ್ರಗತಿಯನ್ನು ಅನುಸರಿಸಿದೆ. ಬಿಜ್ಜಳರಾಯರು ರಾಜ್ಯದಾಹದಲ್ಲಿ ಬೇಯುತ್ತಿದ್ದಾರೆ. ಸ್ವಾರ್ಥ, ದ್ವೇಷ, ಮತ್ಸರ, ವಂಚನೆಗಳು ತಲೆಯೆತ್ತಿವೆ. ಈಗ ಅಧಿಕಾರದ ಹೊಣೆಯನ್ನು ನ್ಯಾಯವಾಗಿ ನಿರ್ವಹಿಸುವದು ಸಾಧ್ಯವಿಲ್ಲ ! ನಿವೃತ್ತಿಪತ್ರವನ್ನು ಕೊಟ್ಟು ಬಂದೆನು"

"ಮುಂದೆ ?"

"ಅದನ್ನವರು ಒಪ್ಪಲಿ ಬಿಡಲಿ, ನಾನು ಅಧಿಕಾರದಲ್ಲಿ ಉಳಿಯುವದು ಸಾಧ್ಯವಿಲ್ಲವೆಂದು ಸ್ಪಷ್ಟಪಡಿಸಿದ್ದೇನೆ. ಚೆನ್ನಬಸವಣ್ಣನ ಅಲ್ಲಿಯ ಅಧ್ಯಯನ ಮುಗಿದಿದೆ. ಹೇಳಿಕಳಿಸಿದರೆ ಬನವಾಸಿಯಿಂದ ಮನೆಯವರನ್ನು ಕರೆದು ಕೊಂಡು ಬರುವನು. ಬೇಕಾದರೆ ಇಲ್ಲಿಂದಲೇ ಎರಡು ಬಂಡಿಗಳನ್ನೂ ಹತ್ತು ಜನ ಭಟರನ್ನೂ ಕಳಿಸಿಕೊಡೋಣ !"

"ಇನ್ನು ಉದ್ದೇಶಿಸಿದ ಕಾಯಕವೇನು ?"

"ಏನಾದರೂ ಮಾಡುವೆ. ಅಂದಿಂದಿಗೂ ಅಕ್ಕನೂ ತಾಯಿಯೂ ಆದ ನೀನೇ ನನಗೆ ಮಾರ್ಗದರ್ಶಿನಿ ! ಇಂದು ನೀನು ತೋರಿದ ಆದರ್ಶವೇ

ನನ್ನ ಕಾಯಕ್ರೀಗೆ ಬೆಳಕಾಗಿರಲಿ ! ಕೈಗೂಲಿಯ ಮಾಡಿಯಾದರೂ ಗುರು ಲಿಂಗಜಂಗಮಾರಾಧನೆಯ ನಡಿಸುವೆ. ಇದು ನನ್ನ ಪ್ರತಿಜ್ಞೆ !"

ಬಸವರಾಜರು ಅಕ್ಕನ ಪಾದಕ್ಕೆರಗಿದರು. ನಾಗಲಾಂಬೆ ಕೈ ಹಿಡಿದು ಎತ್ತಿ ತಲೆಯನ್ನಪ್ಪಿದಳು. ಹೃದಯ ತುಂಬಿ ಬಂದಿತ್ತು. ಮೂವತ್ತೈದು ವರ್ಷಗಳ ಹಿಂದಿನ ಮಾತೃವಾತ್ಸಲ್ಯ ಮರಳಿ ಮೂಡಿತ್ತು. ಆ ಭಾವದಲ್ಲಿ ಬೆರೆತು ಸಣ್ಣಾಗಿ ಹಾಡಿದಳು.

"ಬಸವನೇ ಮುಖಸೆಜ್ಜೆ, ಬಸವನೇ ಅವಲೋಕ್ಯ, ಬಸವನ ನಾನೆತ್ತಿ ಮುದ್ದಾಡಿಸುವೆ.
ಬಸವಾ, ಸಂಗನಬಸವಾ ಜಯತು. ಬಸವಾ ಸಂಗನಬಸವಲಿಂಗಾ ಜಯತು !
ಬಸವಗೂ ಎನಗೂ ಭಾವಭೇದವಿಲ್ಲ; ಬಸವಣ್ಣ ಪ್ರಿಯ ಚೆನ್ನಸಂಗಯ್ಯನಲ್ಲಿ
ಬಸವನ ಬೆಸಲಾದ ಬಾಣತಿ ನಾನಯ್ಯ, ಬಸವಾ ಬಸವಾ ಬಸವಾ."

ನವಚೇತನ–ನೂತನಸ್ಫೂರ್ತಿ

ಮರುದಿನ ಬನವಾಸಿಗೆ ಭಟರನ್ನೂ ಬಂಡಿಗಳನ್ನೂ ಕಳಿಸಿ ಬಸವ ರಾಜರು ಎರಡು ಕದುರೆಗಳನ್ನು ತಕ್ಕೊಂಡು ಪಶುಪತಿಯೊಂದಿಗೆ ಸಂಗಮಕ್ಕೆ ಹೊರಟರು. ಜೀವನದ ಸಂಕ್ರಾಂತಿಯ ಸಮಯದಲ್ಲಿ ಗುರುದೇವರ ದರ್ಶ ನದ ಹಂಬಲ ಉಂಟಾಗುವದು ಸ್ವಾಭಾವಿಕ. ಎರಡನೆಯ ದಿನ ಸಾಯಂಕಾಲ ಸಂಗಮವನ್ನು ತಲುಪಿದರು. ಸ್ನಾನದಿಂದ ಧೂಳುದೂಸರ ಕಳೆದುಕೊಂಡು ಮಡಿಬಟ್ಟೆ ಧರಿಸಿ ವಟುಗಳಿಂದ ಗುರುಗಳವಸರವನ್ನು ತಿಳಿದುಕೊಂಡು ಅವರ ಪಾದವನ್ನು ಕಂಡು ಎರಗಿದರು.

"ಬಸವೇಶಾ, ನೀನು ಬನವಾಸಿಯಿಂದ್ತ ಕಲ್ಯಾಣಕ್ಕೆ ಹೋದುದು ಗೊತ್ತಾಗಿತ್ತು. ಮರಳಿ ಬನವಾಸಿಗೆ ಹೋಗುವಾಗ ದರ್ಶನಕ್ಕೆ ಬರಬಹು ದೆಂದು ನಮಗೂ ಅನಿಸಿತ್ತು."

"ಬನವಾಸಿಗೆ ಇನ್ನು ಹೋಗುವದಿಲ್ಲ ಗುರುದೇವಾ ! ಬಿಜ್ಜಳರಾಜರಿಗೆ ನನ್ನ ಅಧಿಕಾರ ನಿವೃತ್ತಿಪತ್ರವನ್ನು ಒಪ್ಪಿಸಿ ಬಂದಿದ್ದೇನೆ."

"ಕಾರಣ ?"

"ಬಿಜ್ಜಳರಾಜನ ರಾಜ್ಯದಾಹ ! ತೈಲಪದೇವನೊಡನೆ ಆದ ಸಂಧಾನದ ಉಲ್ಲಂಘನೆ ಮಾಡಿ, ಅವರ ಮರಣಕ್ಕೆ ಕಾರಣನಾಗಿ ರಾಜ್ಯಾಪಹಾರವನ್ನು

ಸಾಧಿಸುವವರಲ್ಲಿದ್ದಾನೆ ಬಿಜ್ಜಳ ದೊರೆ! ರಾಜ್ಯದಲ್ಲಿ ಪುನಃ ಅಶಾಂತಿ, ಅಂತ ರ್ಯುದ್ಧಗಳ ಸಂಭವವುಂಟಾಗಿದೆ. ಹಿಂದಿನಂತೆ ಅದನ್ನು ನಿವಾರಿಸುವದು ಸುಲಭವಲ್ಲ! ಸ್ವಾರ್ಥ, ಭೋಗಪ್ರೀತಿ, ಅಧಿಕಾರಲಾಲಸೆ, ಮೋಸ, ವಂಚನೆ ಗಳಿಗೆ ಕ್ಷೇತ್ರವಾಗಿರುವ ರಾಜಕದಿಂದ ಹೊರಬೀಳಲು ನಿಶ್ಚಯಿಸಿ ಹಾಗೆ ಮಾಡಿದೆನು. ಮುಂದಿನ ಮಾರ್ಗವನ್ನು ಗುರುಗಳೇ ನಿರ್ದೇಶಿಸಬೇಕು."

"ಬಸವೇಶಾ, ರಾಜಕೀಯವೊಂದು ಮಹಾನದಿಯ ಪ್ರಬಲಪ್ರವಾಹ! ಅದರಲ್ಲಿ ಸತ್ತವರು ಇದ್ದವರು ಎಷ್ಟೋ! ಹಲವರು ತೇಲುವರು; ಮುಳುಗು ವರು; ಬರುವರು; ಕೊಚ್ಚಿ ಹೋಗುವರು; ಅದರ ಆಳವಿನಲ್ಲಿ ಇದ್ದುದು ಅಳಿ ಯುವದು; ಇಲ್ಲದ ಸಂಪತ್ತು ಉಂಟಾಗುವದು. ಲೋಕವ್ಯವಹಾರದಲ್ಲಿ ಇದು ಅನಿವಾರ್ಯ! ಮಹಾನುಭಾವರು ಅದನ್ನು ಅಷ್ಟು ಗಮನಿಸದೆ ಶಾಶ್ವತ ಶಾಂತಿಯ ಸಾಧನೆ ಮಾಡಿ, ಅದನ್ನು ಪರರಿಗೂ ಒದಗಿಸುವರು. ಈ ಹಾದಿಯಲ್ಲಿ ನೀನು ಜಯಶೀಲನಾಗುತ್ತಿರುವೆ. ಅಷ್ಟು ಕೇಳಿಲ್ಲ ನೀನು; ಪ್ರಾಂತ ಪ್ರಾಂತಗಳಲ್ಲಿ ನಿನ್ನ ಉಪದೇಶ ವಚನಗಳ ಧ್ವನಿ ಮೊಳಗುತ್ತಿದೆ. ಮೊದಲಿನ ಶೈವ ಮಠಾಧೀಶರೆಲ್ಲ ವೀರವ್ರತಿಗಳಾಗಿ ನಿನ್ನ ವಚನಗಳ ಮೂಲಕ ವಾಗಿಯೇ ಷಟ್‌ಸ್ಥಲಮಾರ್ಗೋಪದೇಶ ಮಾಡುತ್ತಿದ್ದಾರೆ. ಅವರ ಅನು ಯಾಯಿಗಳು ಮಠಗಳಿಲ್ಲದ ಊರುಗಳಲ್ಲಿ ಮಠಗಳನ್ನು ಸ್ಥಾಪಿಸಿ ಈ ಶರಣ ಮಾರ್ಗವನ್ನು ಬೋಧಿಸುತ್ತಿದ್ದಾರೆ. ಅಲ್ಲಿ ಅಭ್ಯಾಸಿಗಳು ಸೇರುತ್ತಿದ್ದಾರೆ. ಜಾತಿವರ್ಣಗಳ ಭೇದವಿಲ್ಲದೆ ಗುರುಕರುಣೆ ಸರ್ವರಿಗೂ ಸ್ವೀಕಾರಾರ್ಹವಾದ್ದ ರಿಂದ ಅದು ಭರದಿಂದ ಪಸರಿಸಹತ್ತಿದೆ."

"ಇದರಲ್ಲಿ ನನ್ನದೇನಿದೆ ಗುರುದೇವ? ಇದೆಲ್ಲ ಗುರುಕರುಣಾವಿಲಾಸ! ನೀವಿತ್ತ ಅರಿವಿನ ಸ್ಮರಣೆಯ ಸೊಲ್ಲು ಆ ವಚನಗಳು, ಆ ಗೀತೆಗಳು."

"ಆದರೇನು? ಹೃದಯದಲ್ಲಿ ಪ್ರಕಾಶಿಸುವ ಶಿವನ ಸನ್ನಿಧಿಯಿಂದ ಪೊರ ಮಟ್ಟ ಆ ಮಹಾಪ್ರಕಾಶದ ಕಿರಣಗಳವು! ಊರಿಗೆ ಹೋಗುವ ಇಚ್ಛೆ ಇದ್ದವ ರಿಗೆ-ಕಾಲಲ್ಲಿ ನಡೆಯುವ ಶಕ್ತಿ ಇದ್ದವರಿಗೆ, 'ದಾರೀ ತೋರುವದಷ್ಟೇ ಬೇಕು! ನಮ್ಮ ನಾಡಿನಲ್ಲಿ ಆಧ್ಯಾತ್ಮಿಕ ಕ್ಷುಧೆ ಆದಿಯಿಂದಲೂ ಇದೆ. ಅಂತಹ ವಿಚಾರ ಪರರಿಗೆ ಷಟ್‌ಸ್ಥಲ-ಶಿವಯೋಗವು ಸುಲಭವೂ ಸಯುಕ್ತಿಕವೂ ಆಗಿದೆ. ಆ

ಮಾರ್ಗದಲ್ಲಿ ಎದುರಾಗುವ ತೊಡರುಗಳನ್ನೂ ವಚನಗೀತಗಳೇ ಪರಿಹರಿಸು ತ್ತವೆ. ಅಂತಹ ಪರಿಹಾರ ಉಪನಿಷತ್ತುಗಳಿಂದಲೂ ಸಾಧ್ಯವಾಗಿರಲಿಲ್ಲ"

ಬಸವರಸರು ಆ ಪ್ರಶಂಸೆಯಿಂದ ಹೋಳಾಗಲು ಬೇರೆ ಮಾತು ಆಡಿ ದರು :

"ಗುರುವೆ ನನಗೆ ಅನುಮಾನವಾಗುತ್ತದೆ; ವಿಚಾರವಂತರ ಮಾತು ಹಾಗಿರಲಿ! ಈ ಧುಮ್ಮಿಕ್ಕುವ ಜನಜಂಗುಳಿಯೆಲ್ಲ ಭಕ್ತರಾದಾರೇ?"

"ಆಗಲಿಕ್ಕಿಲ್ಲ; ನದಿಗೆ ನೆರೆ ಬಂದಂತಾಗಿದೆ ಈಗ! ತತ್ವಚಿಂತನೆಯಲ್ಲಿ ಅಸಂದಿಗ್ಧ ನಿಲುಕಡೆಗೆ ನಿಂತವರು ಸ್ಥಿರವಾಗಿ ಉಳಿಯುವರು. ಅವರಿಂದಲೇ ಸಮಾಜ ವ್ಯವಸ್ಥೆ ಉಂಟಾಗುವದು; ಐಕ್ಯವು ನೆಲೆಗೊಳ್ಳುವದು. ಪರರ ಕಂಡು ಪರಸಿಯಲ್ಲಿ ಸೇರಿದವರು ಬೇಕಾದಾಗ ದಾರಿಯನ್ನು ಬದಲಿಸಬಹುದು. ಇದ ಲ್ಲದೆ ಇನ್ನೊಂದು ಸಂಕಟ: ಹಿಂದುಳಿಸಲ್ಪಟ್ಟ ಸಮಾಜದವರ ಹಾಗು ಕಷ್ಟ ಜೀವಿಗಳ ಉದ್ಧಾರಕ್ಕೆ ರಾಜ್ಯಭಾಂಡಾರದಿಂದ-ವಿಕ್ರಮಾದಿತ್ಯರ ನಿಧಿಯಿಂದ ಸಲ್ಲುತ್ತಿರುವ ಸಹಾಯ ಧನವು 'ಲಿಂಗವಂತಿಕೆಯ ಪ್ರೋತ್ಸಾಹನಕ್ಕಾಗಿದೆ' ಎಂದು ವರ್ಣಧರ್ಮೀಯರು-ಸನಾತನಿಗಳು ಅಸತ್ಯವನ್ನು ನುಡಿಯುತ್ತಿರುವ ರೆಂಬುದನ್ನು ಕೇಳಿದ್ದೇವೆ. ಅವರ ಪ್ರೇರಣೆಯಿಂದ ಅಪಕ್ವವಿಚಾರದ ಹೊಸ ಲಿಂಗವಂತರು ಧರ್ಮಕಂಟಕರಾಗಬಹುದು. ಈ ಉಭಯ ಸಂಕಟಗಳ ಪರಿ ಹಾರಕ್ಕೆ ಜ್ಞಾನಿಗಳ ಸಮಾಲೋಚನೆಯಿಂದ ಷಟ್‌ಸ್ಥಲ ಸಂಪ್ರದಾಯದಲ್ಲಿಯ ಸಿದ್ಧಾಂತ ವಾಕ್ಯಗಳನ್ನೂ ವಿವರಣೆಗಳನ್ನೂ ನಿರ್ದಿಷ್ಟಪಡಿಸಿ ಪ್ರಚುರಗೊಳಿಸು ವದು ಮುಖ್ಯ ಉಪಾಯವಾದೀತು! ಕಲ್ಯಾಣದಲ್ಲಿ ನಿಮ್ಮ ಅನುಭವಗೋ ಷ್ಠಿಯು ಅನುಭವ ಮಂಟಪವಾಗಿ ಈ ಕಾರ್ಯ ಕೈಕೊಂಡಿದೆಯೆಂದು ಕೇಳಿ ದ್ದೇವೆ. ನೀನು ರಾಜಕೀಯವನ್ನು ತ್ಯಜಿಸಿರು, ಅಥವಾ ಅದರಲ್ಲಿಯೇ ಶ್ರಮಿ ಸುತ್ತಿರು, ಜೀವನ ರಂಗದ ವಿವಿಧ ಮುಖಗಳಲ್ಲೆಲ್ಲ ನಿನ್ನ ಜೀವನವು ಆದರ್ಶವೇ ಆಗಿದೆ. ನಿನ್ನ ಕಾಯಕದ ವಿಚಾರದಲ್ಲಿ ನಾವೇನೂ ಹೇಳಬೇಕಾಗಿಲ್ಲ; ಅನುಭವ ಮಂಟಪದ ಕಾರ್ಯಶಕ್ತಿಯನ್ನು ಮಾತ್ರ ಹೆಚ್ಚಿಸಬೇಕು. ಅದು ಷಟ್‌ಸ್ಥಲ ಬ್ರಹ್ಮಿಗಳನ್ನು ಸಿದ್ಧಗೊಳಿಸುವ ಮಹಾ ವಿದ್ಯಾಲಯವಾಗಬೇಕು. ಪಂಡಿತರನ್ನು ನಿರ್ಮಿಸುವದು ಬೇಡ! ಅದು ಶಿವಯೋಗಿಗಳನ್ನೂ ಮಹಾ

ವಿಭೂತಿಗಳನ್ನು ಆಕರ್ಷಿಸಿ ಅನುಗ್ರಹ ಪಡೆದು ಅನುಭಾವದ ಅಮೃತವನ್ನು ಸುರಿಸಬೇಕು. ಅದುವೇ ನೀನು ನೆಲೆಗೊಳಿಸ ಬಯಸಿದ ತತ್ವನಿಷ್ಠೆ, ಧರ್ಮಾಚಾರ, ಸಮಾಜ ಸುಖಗಳಿಗೆ ಅಮರಚೇತನವಾಗುವದು."

"ಗುರುದೇವಾ ಸಂಗಮನಾಥನು ನನ್ನ ಜೀವನದ ಬೆಳಕು. ನೀವೇ ಆ ಮಹಾಘನದ ಪ್ರತೀಕ! ಅಸತ್ತಿನಿಂದ ಸತ್ತಿಗೆ, ತಮಸ್ಸಿನಿಂದ ಬೆಳಕಿಗೆ ನಡೆಯಲು ಆಶೀರ್ವದಿಸು ತಂದೆ!"

ಕುಲಪತಿಗಳ ಚರಣಗಳನ್ನು ಮುಟ್ಟಿ ನಮಸ್ಕರಿಸಿದರು ಬಸವರಸರು.

"ನಾಲ್ಕು ದಿವಸ ಆಶ್ರಮದಲ್ಲಿದ್ದು ಕದಡಿದ ಮನವನ್ನು ಸಂತೈಸಿಕೊಳ್ಳು ಬಸವಣ್ಣ! ಆಗ ನಿನ್ನ ಕರ್ತವ್ಯದ ದಾರಿ ಕಣ್ಣಿಗೆ ನಿಚ್ಚಳವಾಗುವದು.."

ಕುಲಪತಿಗಳಿಂದ ಆಜ್ಞಾಪಿಸಲ್ಪಟ್ಟ ವಟುಗಳು ಬಸವರಾಜರನ್ನು ಉಪಚರಿಸುವದಕ್ಕಾಗಿ ಕರೆದುಕೊಂಡು ಹೋದರು.

ಮರುದಿನ ನಸುಕಿನಲ್ಲಿ ಬಸವರಾಜ ದಣ್ಣಾಯಕರು ಅಲ್ಲಿಯ ಒಬ್ಬ ವಟುವನ್ನು ಕರೆದು 'ನಾನು ಪ್ರಪಾತದ ಗವಿಗೆ ಹೋಗಿ ಸಂಜೆಗೆ ಬರುವೆ. ಗುರುಗಳಿಗೆ ತಿಳಿಸು' ಎಂದು ಹೇಳಿ ಕೃಷ್ಣೆಯ ದಕ್ಷಿಣದಂಡೆಗುಂಟ ಕಾಲುದಾರಿಯನ್ನು ಹಿಡಿದು ಪೂರ್ವಕ್ಕೆ ನಡೆದರು. ಕಾಲು ನಡೆಯುತ್ತಿದ್ದವು; ಮನಸ್ಸು ಸಂಗಮನಾಥನೊಡನೆ ಮಾತಾಡುತ್ತಿತ್ತು; ಬುದ್ಧಿ ಕೇಳುತ್ತಿತ್ತು; ಚಿತ್ತ ಸಂಗ್ರಹಿಸುತ್ತಿತ್ತು; ಭಾವ ಒಂದಾಗಿತ್ತು.

'ನಚ್ಚಿದೆನೆಂದರೆ, ಮೆಚ್ಚಿದೆನೆಂದರೆ, ಸಲೆಮಾರುವೋದೆನೆಂದರೆ,
ತನುವನಲ್ಲಾಡಿಸಿ ನೋಡುವೆ ನೀನು;
ಮನವನಲ್ಲಾಡಿಸಿ ನೋಡುವೆ ನೀನು;
ಧನವನಲ್ಲಾಡಿಸಿ ನೋಡುವೆ ನೀನು.
ಇವೆಲ್ಲಕ್ಕಂಜದಿದ್ದರೆ ಭಕ್ತಿಕಂಪಿತ
ನಮ್ಮ ಕೂಡಲಸಂಗಮದೇವ:
ಅಚ್ಚ ಶರಣರು ನಿಮ್ಮ ನಿಚ್ಚ ನಿಚ್ಚ ನೆನೆವರು;
ಬಚ್ಚ ಬರಿಯ ಮಾತಾಡುವೆನು.
ಒಪ್ಪಚ್ಚಿ ಅರೆಭಕ್ತಿ ನೆನೆಯಲೀಯದು ನಿಮ್ಮ:
ಮೆಚ್ಚರು ನಿಮ್ಮ ಶರಣರು ಎನ್ನ; ಕೂ.ಸಂ.ದೇವಾ.

ಒಂದುವನರಿಯದ ಸಂದೇಹಿ ನಾನಯ್ಯ,
ನಂಬುಗೆಯಿಲ್ಲದ ಢಂಬಕ ನಾನಯ್ಯ !
ನಿಮ್ಮ ನಂಬಿದ ಶರಣರ ಡಿಂಗರಿಗ ನಾನಯ್ಯ ಕೂ.ಸಂ.ದೇವಾ.

ದಡದ ಏರಿಗೆ ಬಂದು ದಾರಿ ಎಡಗಡೆಗೆ ಹೊರಳಿದಾಗ ನಿಂತು ನೋಡಿದರು. ವಸಂತಕಾಲದ ಸುರಮ್ಯವಾದ ಸೃಷ್ಟಿ ಪ್ರಸನ್ನಭಾವದಿಂದಿತ್ತು. ವಿಶಾಲ ವಾದ ಒಡಲಲ್ಲಿ ಬಂಡೆಗಳ ಅಡೆತಡೆಯಲ್ಲಿ ನೀರು ಪಸರಿಸಿ ಹರಿಯುತ್ತಿತ್ತು. "ಎದ್ದರೇನು ? ಬಿದ್ದರೇನು ? ಎದುರು ಏನು ಬಂದರೇನು ? ವಾರಿಧಿಯ ಸೇರುವದೊಂದೇ ಗುರಿ ನೀರಿಗೆ ! ಇನ್ನೊಂದ ನೆನೆಯದು, ತಲೆಯೆತ್ತಿ ನೋಡದು; ಲೀಯವಾಗಿದೆ ತನ್ನ ಧ್ಯೇಯದಲ್ಲಿ ! ಧನ್ಯೆ ಗಂಗೆ ! ಇದನ್ನೇಕೆ ಕರುಣಿಸಲೊಲ್ಲೆ ಸಂಗಮದೇವಾ ಎನಗೆ ?

ಅತ್ತಲಿತ್ತಲು ಹೋಗದಂತೆ ಹೆಳವನ ಮಾಡಯ್ಯಾ ತಂದೆ !
ಸುತ್ತಿಸುಳಿದು ನೋಡದಂತೆ ಅಂಧಕನ ಮಾಡಯ್ಯಾ ತಂದೆ !
ಮತ್ತೊಂದು ಕೇಳದಂತೆ ಕಿವುಡನ ಮಾಡಯ್ಯಾ ತಂದೆ.
ನಿಮ್ಮ ಶರಣರ ಪಾದವಲ್ಲದೆ
ಅನ್ಯವಿಷಯಕ್ಕೆಳಸದಂತೆ ಇರಿಸು ಕೂಡಲಸಂಗಮದೇವಾ''

"ಎಂದರು. ಅಡವಿಯ ಫಲಗಳ ಕೆಲವನ್ನು ಪಡೆದು,ಏರಿಯನ್ನು ಇಳಿದು ಸ್ನಾನ ಮಾಡಿ ಹಿಂಬೆ ಅನುಷ್ಠಾನಗೈದ ಗವಿಯನ್ನು ಸೇರಿದರು. ಬಹಳ ಹೊತ್ತು ಮೌನ ಧ್ಯಾನವನ್ನು ಅನುಭವಿಸಿದರು. ಗುರುಸಂದೇಶವನ್ನು ನೆನೆದರು. ನವಚೇತನ ನೂತನಸ್ಫೂರ್ತಿಯನ್ನು ಪಡೆದರು. ಸಾಯಂಕಾಲ ವೇಳೆ ಬಂದರು. ಹಿಂದಿನಿಂದ ಅನುಸರಿಸಿ ಬಂದ ಪಶುಪತಿಯು ಕುದುರೆಗಳನ್ನು ಕಟ್ಟಿಕೊಂಡು ಕಾದಿದ್ದನು. ಇಬ್ಬರೂ ಆ ತೇಜಿಗಳನ್ನು ಹತ್ತಿ ಕಡಿವಾಣ ಸಡಿಲು ಬಿಡಲು, ಅವು ರಭಸದಿಂದ ಓಡಿದವು ಸಂಗಮಕ್ಕೆ !

ಸುತ್ತಲಿನ ಗ್ರಾಮಗಳ ಜನರು ಬಸವರಾಜರ ದರ್ಶನಕ್ಕೆಂದು ಆಗಲೇ ಸಂಗಮಕ್ಕೆ ಬಂದಿದ್ದರು. ದೂರಿನವರು ಮರುದಿನವೂ ಬಂದರು. ಅವರೆ ಲ್ಲರು ದರ್ಶನೋತ್ಸುಕರು ಮಾತ್ರವಲ್ಲದೆ ಸಂಭಾಷಿಸುವದಕ್ಕೂ ಅಣ್ಣನವರ ಅಮರವಾಣಿಯಲ್ಲಿ ಭಕ್ತಿಯ ಬೆಳಕು ಕಾಣುವದಕ್ಕೂ ಉತ್ಸುಕರಾಗಿದ್ದರು. ನಾಲ್ಕು ದಿವಸ ಗುರುಕುಲದಲ್ಲಿ ಶಿವಾನುಭವ ಸತ್ರವೇ ನಡೆಯಿತು. ವೃದ್ಧ

ರಾದ ಜಾತವೇದಿಶಿವಯೋಗಿಗಳು ತಾವು ನೆಟ್ಟ ಸಸಿಯ ಫಲವನ್ನು ಕಣ್ಣಾರೆ ಕಂಡು ಧನ್ಯರಾದರು. ಐದನೆಯ ದಿವಸ ಅಣ್ಣನವರು ಕಲ್ಯಾಣಕ್ಕೆ ಹೊರಟರು. ಗುರುಗಳು ನೋಡಿ ಕಣ್ದುಂಬಿ ಹರಸಿ ಕಳಿಸಿದರು. ಅವರ ಸಶರೀರ ದರ್ಶನವು ಬಸವಣ್ಣನವರಿಗೆ ಅದೇ ಕೊನೆಯದಾಯಿತು.

ಸಹಜ ಪ್ರಚಾರ

ಬಸವರಾಜರ ಮಾರ್ಗಕ್ರಮಣದಲ್ಲಿ ಎಡಬಲದ ಗ್ರಾಮದವರೆಲ್ಲ ಅವರನ್ನು ಕಂಡು ಬಿನ್ನವಿಸಿ, ತಮ್ಮಲ್ಲಿಗೆ ಬರಮಾಡಿಕೊಂಡು ಅವರ ಉಪದೇಶವನ್ನು ಪಡೆಯುಹತ್ತಿದರು. ಪ್ರಯಾಣವು ತಡೆ ತಡೆದು ಮೆಲ್ಲಗೆ ನಡೆಯಿತು; ವಾಡಿಕೆಯ ಮಾರ್ಗಬಿಟ್ಟು ಸುತ್ತುಸುತ್ತಾಗಿ ಸಾಗಿತು. ಜನರ ಆಗ್ರಹವನ್ನು ಮೀರುವದು ಅವರಿಗೆ ಆಗುತ್ತಿರಲಿಲ್ಲ. ಅವಸರದ ರಾಜಕಾರ್ಯದ ಎಳೆತನವೂ ಆಗ ಅವರಿಗಿರಲಿಲ್ಲ.

ಅಣ್ಣನವರ ನೀತಿ ಸದಾಚಾರಗಳ ಬೋಧೆಯು ಇನ್ನುಳಿದ ಮತಸ್ಥಾಪಕರಂತೆ-ಪ್ರಚಾರಕರಂತೆಯೇ ಇದ್ದರೂ ಇವರು ಬೋಧಿಸುವ ಕ್ರಮವೇ ಬೇರೆ. 'ಇವರು ಕೀಳರು, ಇವರು ಪಾಪಿಗಳು, ಇವರು ದುರ್ಮಾರ್ಗಿಗಳು' ಎಂದು ಹೀಯಾಳಿಸಿ ಯಾರನ್ನೂ ಹಿಂದೆ ಬಿಡುತ್ತಿರಲಿಲ್ಲ. ಅವರನ್ನು ಮೊದಲು ಮುಂದೆ ಕರೆಯುತ್ತಿದ್ದರು; ಅಯ್ಯಾ, ಅಣ್ಣಾ ಎಂದು ಮೃದುವಚನಗಳಿಂದ ಮನವೊಲಿಸುತ್ತಿದ್ದರು. ಬಸವಣ್ಣನವರ ಮಾತಿನಲ್ಲಿ ನೈಷ್ಠುರ್ಯವಿಲ್ಲ, ಅವರ ಕೋಮಲ ಹೃದಯ ದುರ್ಮಾರ್ಗಿಗಳ ಹೃದಯವನ್ನು ಮಿದುವು ಮಾಡುತ್ತಿತ್ತು. ಒಳಗಿನ ಮಾಯೆ ತನ್ನ ಹತಿಸುವದನ್ನು ಅರಿಯದೆ ಈ ಶರೀರದಲ್ಲಿ ತಾನು ಸುರಕ್ಷಿತವಾಗಿದ್ದೇನೆಂದು ಪರಮಾತ್ಮನನ್ನು ಮರೆತವರಿಗಾಗಿ ಅಣ್ಣನವರು ವ್ಯಥೆಪಟ್ಟರೂ, ಅದನ್ನು ತಿಳಿಸುವ ಮಾತಿನಲ್ಲಿ ಕ್ರೌರ್ಯವಿಲ್ಲ, ಕಠೋರತೆಯಿಲ್ಲ, ವಿನಯವಾಗಿ ಹೇಳುತ್ತಾರೆ!

" ಹಂಜರ ಬಲ್ಲಿತ್ತೆಂದು ಅಂಜದೆ ಓದುವ ಗಿಳಿಯೇ
ಎಂದೆಂದೂ ಅಳಿಯೆನೆಂದು ಗುಡಿಗಟ್ಟಿದೆಯಲ್ಲಾ ನಿನ್ನ ಮನದಲ್ಲಿ!
ಮಾಯಾಮಂಜರ ಕೊಲುವರೆ
ನಿನ್ನ ಹಂಜರ ಕಾವುದೆ ಕೂಡಲಸಂಗಮದೇವನಲ್ಲದೆ ? "

ಕಠೋರ ಸತ್ಯವನ್ನು ಸೌಮ್ಯವಾಗಿ ಎರೆಯುತ್ತಾರೆ, ಅಣ್ಣನವರು ಜನರ ಹೃದಯಕ್ಕೆ :

" ಉಂಬಾಗಳಿಲ್ಲೆನ್ನ, ಉಡುವಾಗಳಿಲ್ಲೆನ್ನ, ಬಂಧುಗಳು ಬಂದಾಗಳಿಲ್ಲೆನ್ನ !
ಲಿಂಗಕ್ಕೆ ಇಲ್ಲೆಂಬ, ಜಂಗಮಕ್ಕೆ ಇಲ್ಲೆಂಬ ಬಂದ ಪುರಾತರಿಗೆ ಇಲ್ಲೆಂಬ
ಸಾವಾಗ ದೇಹವ ದೇಗುಲಕ್ಕೆ ಒಯ್ಯೆಂಬ !!
ದೇವರಿಗೆ ಹೆಣ ಬಿಟ್ಟೀ ಹೇಳಿತ್ತೆ ? ಕೂಡಲ ಸಂಗಮದೇವಾ ! "

ಬಸವರಾಜರ ಪಾದತಲದಲ್ಲಿ ಕುಳಿತು ಅವರ ನುಡಿಗಳನ್ನು ನಿರಂತರ ಕೇಳ ಬೇಕೆನಿಸುತ್ತಿತ್ತು ಜನರಿಗೆ !

ಷಟ್‌ಸ್ಥಲಶಾಸ್ತ್ರದ ಸ್ಥೂಲ-ಸೂಕ್ಷ್ಮಗಳನ್ನು ಪಂಡಿತರಲ್ಲದವರು ಅರಿದು ಆಚರಿಸುವದು ಸುಲಭವಲ್ಲವೆಂದು ಬಗೆದು, ಅಣ್ಣನವರು ಆ ಬಾಲ ವೃದ್ಧರಿಗೆಲ್ಲ ಆರಂಭದಲ್ಲಿ ಭಕ್ತಿಯನ್ನೇ ಬೋಧಿಸಿ, ಭಕ್ತಿಯ ಉನ್ನತಿಯಲ್ಲಿ ಷಟ್‌ಸ್ಥಲ ಸಾಧನೆಯನ್ನು ಕ್ರಿಯಾತ್ಮಕವಾಗಿ ಹೊಂದಿಸಿಕೊಳ್ಳುವ ಕ್ರಮ ವನ್ನು ಅನುಸರಿಸಿದ್ದರು.

" ಹೊಲಬುಗೊಂಡರಸಬೇಡ; ಬಿಲಿಕು ತರಬೇಡ ;
ಒಲಿದೊನ್ಮೆ ಶಿವಶರಣೆನ್ನಿರಯ್ಯಾ !
ಒಂದು ಸೊಲ್ಲಿಂಗೆ ಮುಕ್ತಿ ಸಿದ್ಧಿ
ಕೂಡಲಸಂಗಮದೇವ ಭಕ್ತಿಲಂಪಟನಾಗಿ.

ಶುದ್ಧವಾದ ಮನದಲ್ಲಿ ಭಕ್ತಿ ನೆಲೆಗೊಳ್ಳುವದು. ದುರಾಶೆ-ದುರ್ಗುಣತೆಗಳಿದ್ದ ವರ ಮನದಲ್ಲಿ ಭಕ್ತಿ ಬೇರೂರದು. ಅವರು ಪರಮಾತ್ಮನನ್ನು ಅರಿಯರು. ಅವರು ಡಾಂಭಿಕಭಕ್ತರಾಗಿ ನಿಷ್ಪ್ರಯೋಜಕವಾದ ತೀರ್ಥಯಾತ್ರೆಗಳನ್ನು ಮಾಡುವರು. ಈ ಮಾರ್ಗ ಸಲ್ಲದಣ್ಣಾ !

ತೊರೆಯ ಮೀವಣ್ಣಗಳಿರಾ, ತೊರೆಯ ಮೀವಸ್ವಾಮಿಗಳಿರಾ,
ತೊರೆಯಿಂ ಭೋ, ತೊರೆಯಿಂ ಭೋ ,
ಪರನಾರಿಯ ಸಂಗವ ತೊರೆಯಿಂ ಭೋ !
ಪರಧನದಾಮಿಷವ ತೊರೆಯಿಂ ಭೋ !
ಇವ ತೊರೆಯದೆ ಹೋಗಿ ತೊರೆಯ ಮಿಂದರೆ
ಬರುದೊರೆ ಹೋಹುದು ಕೂಡಲಸಂಗಮದೇವಾ."

ಹಲವು ಭಾರತೀಯ ಮತಗಳಲ್ಲಿ, ಒಮ್ಮೆ ತಪ್ಪು ಮಾಡಿದವನು ಪಶ್ಚಾ ತ್ತಾಪ ಪಟ್ಟರೆ ತಿರುಗಿ ತನ್ನ ಸಾಮಾಜಿಕ ಸ್ಥಾನಕ್ಕೆ ಬರಲು ಅವಕಾಶವೇ ಇರುವದಿಲ್ಲ. ನರಕವನ್ನೇ ತೋರಿಸಿ ಅಂಥವನ ಕೈ ಬಿಡುತ್ತವೆ ಆ ಮತಗಳು! ಆದರೆ ಅಣ್ಣನವರು ಉಸರುವ—

'ಎಲವೊ ಎಲವೊ ಪಾಪಕರ್ಮವ ಮಾಡಿದವನೇ,
ಎಲವೊ ಎಲವೊ ಬ್ರಹ್ಮಹತ್ಯವ ಮಾಡಿದವನೆ,
ಒಮ್ಮೆ ಶರಣೆನ್ನೆಲವೋ !
ಒಮ್ಮೆ ಶರಣೆಂದರೆ ಪಾಪಕರ್ಮ ಓಡುವವು.
ಸರ್ವ ಪ್ರಾಯಶ್ಚಿತ್ತಕ್ಕೆ ಹೊನ್ನ ಪರ್ವತಂಗಳೈದವು !
ಒರ್ವಂಗೆ ಶರಣೆನ್ನು ನಮ್ಮ ಕೂಡಲಸಂಗಮದೇವರಿಗೆ '

ಈ ನುಡಿಗಳಿಂದ ಜೀವನದಲ್ಲಿ ನಿರಾಶೆಗೊಂಡವರು ಉತ್ಸಾಹಿತರಾಗಿ ಆನಂದ ವನ್ನು ಅನುಭವಿಸಲು ಮಾರ್ಗವಾಯಿತು.

ಹೀಗೆ ಬಗೆ ಬಗೆಯಾಗಿ ಬೋಧಿಸುತ್ತ ಬರುತ್ತಿದ್ದರು. ಹಿಪ್ಪರಗಿಯಲ್ಲಿ ಮಾಚಯ್ಯನವರ ಗುರುಗಳು ಮಲ್ಲಿಕಾರ್ಜುನದೇವರು ಇದ್ದರು. ಅವರು ರೇವಣಸಿದ್ಧರಿಂದ ಅನುಗ್ರಹ ಹೊಂದಿದವರಾಗಿದ್ದು ಪರಿಣತ ಭಕ್ತರಾದವರಿಗೆ ಶಿವಯೋಗ ತತ್ವೋಪದೇಶ ಮಾಡುತ್ತಿದ್ದರು. ಬಸವರಾಜರ ತತ್ವಬೋಧೆ ಪ್ರಚುರಗೊಂಡಾಗ, ಸ್ಫೂರ್ತಿಗೊಂಡವರಾಗಿ ಹಲವು ಮಠಾಧೀಶರಂತೆ ತಾವು ಕೂಡ ಷಟ್‌ಸ್ಥಲ ಶಿವಯೋಗದ ಪ್ರಸಾರಕ್ಕೆ ಯತ್ನಿಸಹತ್ತಿದ್ದರು. ಬಸವಣ್ಣ ನವರು ತಮ್ಮ ಪ್ರಾಂತದಲ್ಲಿ ಬಂದದ್ದರಿಂದ, ತಮ್ಮಲ್ಲಿ ಮೂರು ದಿನಗಳ ಶಿವಾನುಭವಗೋಷ್ಠಿಯ ಏರ್ಪಾಡುಮಾಡಿ, ಪ್ರಧಾನಬೋಧಕರಾಗಿ ಬರಲು ಬಸವರಸರನ್ನು ಬೇಡಿಕೊಂಡರು. ಬಸವರಸರು ಒಪ್ಪಿಕೊಂಡು ಹೋದರು. ಹೊಸದಾಗಿ ವೀರವ್ರತದ ಶರಣಧರ್ಮ ಸ್ವೀಕರಿಸಿದ ಭಕ್ತ–ಮಾಹೇಶ್ವರರು, ಜಿಜ್ಞಾಸುಗಳು, ಕುತೂಹಲಿಗಳು, ಸಂದೇಹಿತರು, ದರ್ಶನೋತ್ಸುಕರು ಮುಂತಾದ ಅಗಣಿತ ಜನರು ಸೇರಿ ದೊಡ್ಡ ಪರ್ವವೇ ಹಿಪ್ಪರಗಿಯಲ್ಲಿ ಸಂಭವಿ ಸಿತು. ವಿರೋಧಿಗಳು, ವಿಡಂಬಿಸಿ ಮಾತಾಡುವವರು ಕೂಡ ಅಲ್ಲಿಗೆ ಬಂದಿ ದ್ದರು. ಈ ಸಂದರ್ಭವನ್ನು ವ್ಯರ್ಥ ಹೋಗಗೊಡಲಿಲ್ಲ ಬಸವರಾಜರು !

ಸ್ವಮತ ಬೋಧೆ

ಮೊದಲನೆಯ ದಿನ ಅವರ ಪ್ರವಚನದ ಸಾರ ಹೀಗಿತ್ತು :

"ಮಾನವನು ಪರಮಾತ್ಮನ ಅಂಶನೇ ಆಗಿದ್ದಾನೆ. ಪರಮಾತ್ಮನ ಚೈತನ್ಯವು ಅವನ ಹೃದಯದಲ್ಲಿ ಜ್ಯೋತಿಯಾಗಿ ಪ್ರಕಾಶಿಸುತ್ತಿದೆ. ಅದನ್ನರಿ ಯದೆ ಜೀವನು ದುಃಖಕ್ಕೀಡಾಗಿದ್ದಾನೆ. ತಮ್ಮಲ್ಲಿರುವ ಆ ಮಹಾ ಪ್ರಕಾಶ

ವನ್ನು ಕಂಡು, ಸರ್ವತ್ರ ಅಭಿವ್ಯಕ್ತಗೊಳಿಸಿ ಅನುಭವಿಸಿದರೆ-ಅದರಲ್ಲಿ ಸಮರಸವಾದರೆ—ಸಕಲ ದುಃಖಗಳು ಪರಿಹಾರಗೊಳ್ಳುವವು. ಇದನ್ನು ಸಾಧನೆಯಿಂದ ಸಾಧಿಸಬೇಕು. ಅದಕ್ಕಾಗಿ ಪರಮಾತ್ಮನಿಗೆ ಶರಣುಹೋಗಿ ಭಕ್ತಿಯಿಂದ ಆರಾಧಿಸಬೇಕು. ಪರಮಾತ್ಮನು ಸಾಕಾರನೂ ನಿರಾಕಾರನೂ ಆಗಿದ್ದಾನೆ. ತನ್ನ ಅವ್ಯಕ್ತ ನಿರಾಕಾರಸ್ವರೂಪದ ಪರಿಚಯ ಮಾಡಿಸುವದಕ್ಕಾಗಿ ಪರಮಾತ್ಮನೇ ಗುರು-ಜಂಗಮ ಎಂಬ ಸಾಕಾರರೂಪ ಧರಿಸಿದ್ದಾನೆ. ಗುರುವು ಭಕ್ತನ ಹೃದಯದಲ್ಲಿದ್ದ ಶಿವಕಳೆಯನ್ನು ಕರದ ಲಿಂಗದಲ್ಲಿ ತಂದಿರಿಸಿ, ಅದನ್ನು ಉಪಾಸಿಸಿ ಅದರ ಮೂಲಕ ನಿರಾಕಾರ ನಿಷ್ಕಲ ದೇವನನ್ನು ಸಾಧಿಸುವದನ್ನು ಉಪದೇಶಿಸುವನು. ಜಂಗಮನು ಲೋಕದ ಭಕ್ತರಿಗೆ ಹಾಗೆ ನಡೆದು ತೋರಿಸಿ, ಶಿವಸ್ವರೂಪನೇ ಆದ ತನ್ನ ಲೀಲೆಯಿಂದ ಜ್ಞಾನವನ್ನು ನೀಡಿ ಮಾರ್ಗದರ್ಶನ ಮಾಡುತ್ತಿರುವನು. ಪರಮಾತ್ಮಸ್ವರೂಪವೇ ಈ ಗುರುಲಿಂಗಜಂಗಮವೆಂದು ಅವರನ್ನು ಭಕ್ತಿಯಿಂದ ಪೂಜಿಸಬೇಕು. ಅಂತರಂಗವು ಶುದ್ಧವಾಗಿದ್ದರೆ ಮಾತ್ರ ಭಕ್ತಿಯು ಫಲಿಸುವದು; ಅಲ್ಲಿ ಶಿವನು ಅಭಿವ್ಯಕ್ತವಾಗುವನು. ಅದು ಅಶುದ್ಧವಾಗಿದ್ದರೆ—

ಮನೆಯೊಳಗೆ ಮನೆಯೊಡೆಯನಿದ್ದಾನೋ ಇಲ್ಲವೋ ?
ಹೊಸ್ತಿಲಲ್ಲಿ ಹುಲ್ಲು ಹುಟ್ಟಿ, ಮನೆಯೊಳಗೆ ರಜ ತುಂಬಿ
ಮನೆಯೊಳಗೆ ಮನೆಯೊಡೆಯನಿದ್ದಾನೋ ಇಲ್ಲವೋ !
ತನುವಿನೊಳಗೆ ಹುಸಿತುಂಬಿ, ಮನದೊಳಗೆ ವಿಷಯ ತುಂಬಿ,
ಮನೆಯೊಳಗೆ ಮನೆಯೊಡೆಯನಿಲ್ಲ; ಕೂ. ಸಂ. ದೇವಾ.

ಅಂತರಂಗಶುದ್ಧಿಯೆಂದರೇನೆಂಬದನ್ನು ಎಲ್ಲರೂ ಬಲ್ಲಿರಿ, ಆದರೂ ಕೇಳಿರಿ :

ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ;
ಮುನಿಯಬೇಡ, ಅನ್ಯರಿಗೆ ಅಸಹ್ಯಪಡಬೇಡ;
ತನ್ನ ಬಣ್ಣಿಸಬೇಡ, ಇದಿರ ಹಳಿಯಲು ಬೇಡ
ಇದೆ ಅಂತರಂಗ ಶುದ್ಧಿ, ಇದೆ ಬಹಿರಂಗ ಶುದ್ಧಿ !
ಇದೇ ನಮ್ಮ ಕೂಡಲಸಂಗಮ ದೇವ ನೊಲಿಸುವ ಪರಿ !

ಹೀಗಿದ್ದರೇ ಪರಮಾತ್ಮನ ಮೆಚ್ಚುಗೆ ! ಪರಮಾತ್ಮನನ್ನು ಗುರುಲಿಂಗ ಜಂಗಮ ರೂಪದಲ್ಲಿಯೇ ಅರ್ಚಿಸಿ, ತನು ಮನ-ಧನಗಳನ್ನು ಈ ತ್ರಿವರ್ಗಕ್ಕೆ ಅರ್ಪಿಸಿ,

ಪ್ರಸಾದ ಭೋಗದಿಂದ ಪ್ರಸಾದ ಸ್ವರೂಪನಾಗಿ ಪ್ರಸಾದ ರೂಪನಾದ ಪರಶಿವನ ಸಾಕ್ಷಾತ್ಕಾರ, ಸಮಾಗಮ, ಐಕ್ಯಗಳಲ್ಲಿ ಪರಿಣಮಿಸಬೇಕು. ಅದಕ್ಕಾಗಿ,

ತನುವ ಕೊಟ್ಟು ಗುರುವನೊಲಿಸಬೇಕು,
ಮನವ ಕೊಟ್ಟು ಲಿಂಗವನೊಲಿಸಬೇಕು,
ಧನವ ಕೊಟ್ಟು ಜಂಗಮವನೊಲಿಸಬೇಕು.
ಈ ತ್ರಿವಿಧವ ಹೊರಗು ಮಾಡಿ, ಹರೆಯ ಹೊಯ್ದು
ಕುರುಹ ಪೂಜಿಸುವವರ ಮೆಚ್ಚ ಕೂಡಲ ಸಂಗಮದೇವ.
ಆಡಿದರೇನೊ ಹಾಡಿದರೇನೊ ಓದಿದರೇನೊ
ತ್ರಿವಿಧ ದಾಸೋಹವಿಲ್ಲದನ್ನಕ್ಕ ?
ಆಡದೆ ನವಿಲು? ಹಾಡದೆ ತಂತಿ? ಓದದೆ ಗಿಳಿ?
ಭಕ್ತಿಯಿಲ್ಲದವರನೊಲ್ಲ ಕೂಡಲಸಂಗಮದೇವ!

ಡಂಭಾಚಾರದ ಪೂಜೆಯು ಭಕ್ತಿಯಲ್ಲ! ತಾಸು ತಾಸು ಮಜ್ಜನಕ್ಕೆರೆದು ಬುಟ್ಟಿ ಬುಟ್ಟಿ ಪತ್ರ ಪುಷ್ಪಗಳಿಂದ ಪೂಜಿಸುವದು ಲೋಕರಂಜನೆಗೆ! ತಾವು ಸಿರಿವಂತರೆಂದು ಸೇವಕರನ್ನಿಟ್ಟು ಶಿವನ ಪೂಜಿಸುವದು ನಿರರ್ಥಕ! ಅದು ಸಿರಿಯ ಮೆರವಣಿಗೆ!! ಶಿವಭಕ್ತನ ಉಪಾಸನೆಯೆಂದರೆ ಸ್ವಾನುಭವ ಸಂಪಾದನೆ!

ತನ್ನಾಶ್ರಯದ ರತಿಸುಖವನು, ತಾನುಂಬ ಊಟವನು
ಬೇರೆ ಮತ್ತೊಬ್ಬರ ಕೈಯಲ್ಲಿ ಮಾಡಿಸಬಹುದೆ?
ತನ್ನ ಲಿಂಗಕ್ಕೆ ಮಾಡುವ ನಿತ್ಯ ನೇಮವನು ತಾ ಮಾಡಬೇಕಲ್ಲದೆ
ಬೇರೆ ಮತ್ತೊಬ್ಬರ ಕೈಯಲ್ಲಿ ಮಾಡಿಸಬಹುದೆ?
ಕೆಮ್ಮನೆ ಉಪಚಾರಕ್ಕೆ ಮಾಡುವರಲ್ಲದೆ ನಿಮ್ಮನೆತ್ತಬಲ್ಲರು ಕೂ. ಸಂ. ದೇವ

ಹೀಗೆ ಗುರುಲಿಂಗಜಂಗಮ ಸ್ವರೂಪದಲ್ಲಿ ಪರಶಿವನನ್ನು ಪೂಜಿಸಬೇಕಲ್ಲದೆ ಅನ್ಯ ದೈವಂಗಳ-ಮೂರ್ತಿಗಳ ಪೂಜಿಸಬಾರದು.

ಅರಗು ತಿಂದು ಕರಗುವ ದೈವವ,
ಉರಿಯ ಕಂಡರೆ ಮುರುಟುವ ದೈವವನೆಂತು ಸರಿಯೆಂಬೆನಯ್ಯಾ ?
ಅವಸರ ಬಂದರೆ ಮಾರುವ ದೈವವನೆಂತು ಸರಿಯೆಂಬೆನಯ್ಯಾ?
ಅಂಜಿಕೆಯಾದರೆ ಹೂಳುವ ದೈವವನೆಂತು ಸರಿಯೆಂಬೆನಯ್ಯಾ?
ಸಹಜಭಾವ ನಿಜೈಕ್ಯ ಕೂಡಸಂಗಮದೇವನೊಬ್ಬನೇ ದೈವ.

ಲಿಂಗಕ್ಕೆ ಜಂಗಮವು ಮುಖವು ! ಲಿಂಗ ಜಂಗಮವು ಒಂದೇ ಎಂದು ಭಾವಿಸಿ ಲಿಂಗವ ಪೂಜಿಸಿ ಜಂಗಮಕ್ಕೆ ಅರ್ಪಿಸಿ ಪ್ರಸಾದಭೋಗ ಮಾಡಬೇಕು.

ಮರಕ್ಕೆ ಬಾಯಿ ಬೇರೆಂದು ತಳಕ್ಕೆ ನೀರೆರೆದರೆ
    ಮೇಲೆ ಪಲ್ಲವಿಸಿತ್ತು ನೋಡಾ !
ಲಿಂಗದ ಬಾಯಿ ಜಂಗಮವೆಂದು ಪಡಿಪದಾರ್ಥವ ನೀಡಿದರೆ
    ಮುಂದೆ ಸಕಲ ಪದಾರ್ಥವನೀವನು.
ಆ ಜಂಗಮವ ಹರನೆಂದು ಕಂಡು ನರನೆಂದು ಭಾವಿಸಿದರೆ
    ನರಕ ತಪ್ಪದು ಕಾಣಾ ಕೂಡಲಸಂಗಮದೇವಾ.
ಜಂಗಮನಿಂದೆಯ ಮಾಡಿ, ಲಿಂಗವ ಪೂಜಿಸುವ ಭಕ್ತನ
    ಅಂಗವಣಿಯೆಂತೊ ? ಶಿವಶಿವಾ !
    ನಿಂದಿಸುವ ಪೂಜಿಸುವ ಪಾತಕವ ಕೇಳಲಾಗದು !
'ಗುರುವಿನ ಗುರು ಜಂಗಮ' ಇಂತೆಂದುದು ಕೂ. ಸಂಗಯ್ಯನ ವಚನ

ಎರಡನೆಯ ದಿನ: ತನುತ್ರಯದಲ್ಲಿ ತ್ರಿವಿಧ ಲಿಂಗಗಳ, ಮನಸ್ಸು ಸಹಿತ ಷಡಿಂದ್ರಿಯಗಳಲ್ಲಿ ಷಡ್ಲಿಂಗಗಳ ಉಪಾಸನೆಯನ್ನೂ, ತನ್ನ ಸಕಲಾರ್ಪಣ ಪ್ರಸಾದಸೇವನಗಳ ಕ್ರಮವನ್ನೂ ವಿವರಿಸಿದರು. ಮುಕ್ತಾಯದಲ್ಲಿ ಈ ವಚನ ಹೇಳಿದರು.

ಮೌನದಲುಂಬುದು ಆಚಾರವಲ್ಲ;
ಲಿಂಗಾರ್ಪಿತವ ಮಾಡಿದ ಬಳಿಕ
ತುತ್ತಿಗೊಮ್ಮೆ ಶಿವಶರಣು ಎನ್ನುತ್ತಿರಬೇಕು.
ಕರಣವೃತ್ತಿಗಳಡಗುವವು ಕೂಡಲಸಂಗಮದೇವನ ನೆನವುತ್ತ ಉಂಡರೆ !

ನಿನ್ನೆಯಂತೆ ಇಂದು ಕೂಡ ಪ್ರಶ್ನೋತ್ತರಗಳಿಗೆ ಅವಕಾಶವಿತ್ತು. ಸಂದೇಹಿಗಳ ಸಂದೇಹ ದೂರ ಮಾಡಿದರು. ಶರಣ ಧರ್ಮದ ಬಗೆಗೆ ವಿಡಂಬನದ ಮಾತುಗಳನ್ನಾಡುತ್ತಿದ್ದ ಪರವಾದಿಗಳು ಈ ಎರಡು ದಿನಗಳಲ್ಲಿ ಅಣ್ಣನವರ ಸದ್ಭಾವದ ಬುದ್ಧಿ-ಜಾಣ್ಮೆಗಳ ವಾಕ್‌ಪ್ರವಾಹದಲ್ಲಿ ಬಲಕುಗ್ಗಿದವರಾದರು. ಅವರಲ್ಲಿ ಕೆಲವರು ಮನಮುಟ್ಟಿ ಮೆಚ್ಚಿದರು; ಕೆಲವರು ದುರಹಂಕಾರಿಗಳು ಒಪ್ಪದಿದ್ದರೂ ಮುಖಭಂಗಿತರಾಗಲು ಒಲ್ಲದೆ ತೆಪ್ಪಗಾದರು. ಇನ್ನು ಕೆಲವರು ಸತ್ಯಾನ್ವೇಷಿಗಳು ಮುಂದೆ ಬಂದು ನಾಳೆಯ ದಿನ ತಮ್ಮ ವಿಚಾರ ಮಂಡಿಸಲು ಕೇಳಿಕೊಂಡರು. ಅಣ್ಣನವರು ಆನಂದದಿಂದ ಒಪ್ಪಿಕೊಂಡರು.

ಮೂರನೆಯ ದಿನ: ಭಕ್ತನು ಸಾಧನೆಯಲ್ಲಿ ಶರಣಸ್ಥಲಕ್ಕೇರಿದಾಗ ಉಂಟಾಗುವ ಅವನ ಜ್ಞಾನದ ಮಟ್ಟವನ್ನೂ ಆನಂದಮಯ ಸ್ವರೂಪವನ್ನೂ ವಿವರಿಸಿ ಸಭಿಕರನ್ನು ಆನಂದಗೊಳಿಸಿದರು. ಕೊನೆಯದಾಗಿ ಪರಶಿವ ಸ್ವಾಯುತ್ತವಾದ ಅವನ ಇರವನ್ನು ಕೆಳಗಿನ ವಚನದಿಂದ ಸ್ಪಷ್ಟಗೊಳಿಸಿದರು:

'ಜಗವ ಸುತ್ತಿಪ್ಪುದು ನಿನ್ನ ಮಾಯೆಯಯ್ಯಾ!
ನಿನ್ನ ಸುತ್ತಿಪ್ಪುದು ಎನ್ನ ಮನ ನೋಡಯ್ಯಾ!!
ನೀನು ಜಗಕೆ ಬಲ್ಲಿದನು, ಆನು ನಿನಗೆ ಬಲ್ಲಿದನು ಕಂಡಯ್ಯಾ!
ಕರಿಯು ಕನ್ನಡಿಯೊಳಗಡಗಿದಂತೆಯ್ಯಾ,
ಎನ್ನೊಳಗೆ ನೀನಡಗಿದೆ ಕೂಡಲಸಂಗಮದೇವಾ.'

ಆ ಮೇಲೆ ಅನ್ಯಮತದವರು ವೇದ ಶಾಸ್ತ್ರಗಳಲ್ಲಿಯ ಉಕ್ತಿಗಳನ್ನು ಉದಾಹರಿಸಿ ವರ್ಣಭೇದ-ಜಾತಿಭೇದ ನ್ಯಾಯವಾದವುಗಳೆಂದು ಪ್ರತಿಪಾದಿಸಿದರು. ಅಣ್ಣನವರು ಉಪನಿಷತ್ತು-ಆಗಮಗಳ ಆಧಾರದಿಂದ ಮುಖ್ಯವಾಗಿ ಅನುಭವದ ಒರೆಗಲ್ಲಿನಿಂದ ಅವುಗಳನ್ನು ಸಹಜವಾಗಿ ನಿರಾಕರಿಸಿದರು. ಜೀವ-ಪರಮರ ಸ್ವರೂಪನ್ನು ಸ್ವಲ್ಪದರಲ್ಲಿ ವಿವರಿಸಿ ದೇಹೋಪಾದಿಯಿಂದ ಜೀವರಲ್ಲಿ ಭಿನ್ನತ್ವವಿದ್ದರೂ ಎಲ್ಲರಲ್ಲಿ ಪ್ರಕಾಶಿಸುವ ಪ್ರಾಣಲಿಂಗವು ಒಂದೇ ಆದುದರಿಂದ ವಾಸ್ತವಿಕವಾಗಿ ಭೇದವಿಲ್ಲೆಂದು ನಿರೂಪಿಸಿದರು. ಶಾಸ್ತ್ರಾರ್ಥವಾಗದ ಬಹುಜನರಿಗೆ ಅವುಗಳ ಸಾರವಾದ ತಮ್ಮ ವಚನಗಳಿಂದ ಮನಗಾಣಿಸಿದರು. ಮತ್ತು ಮೊಂಡ ವಾದ ಹೂಡಿದವರಿಗೆ ಬೇರೆ ಮಾತುಗಳಿಂದಲೂ ಹೇಳಬೇಕಾಯಿತು.

"ಉಚ್ಚವರ್ಣದವರೆನಿಸುವವರ ಗೋತ್ರ (ಮೂಲ) ಪುರುಷರು ಯಾವ ವರ್ಣದವರು ಬಲ್ಲಿರಾ?

ವ್ಯಾಸ ಬೋಯಿತಿಯ ಮಗ, ಮಾರ್ಕಂಡೇಯ ಮಾತಂಗಿಯ ಮಗ
ಮಂಡೋದರಿ ಕಪ್ಪೆಯ ಮಗಳು!
ಕುಲವನರಸದಿರಿಂಭೋ, ಕುಲದಿಂದ ಮುನ್ನೇನಾದರಿಂಭೋ?
ಸಾಕ್ಷಾತ್ ಅಗಸ್ತ್ಯ ಕಬ್ಬಿಲ, ದುರ್ವಾಸ ಮುಚ್ಚಿಗ. ಕಶ್ಯಪ ಕಮ್ಮಾರ,
ಕೌಂಡಿಣ್ಯ ಋಷಿ ಮೂರು ಭುವನವರಿಯೆ ನಾವಿದ ಕಾಣಿಂಭೋ!

ನಮ್ಮ ಕೂಡಲಸಂಗನ ವಚನವಿಂತೆಂದುದು,
ಶ್ವಪಚೋಪಿಯಾದರೇನು, ಶಿವಭಕ್ತನೇ ಕುಲಜನುಃ

ಉಚ್ಚ ನೀಚರೆಂಬವರ ಶರೀರರಚನೆಯಲ್ಲೇನಾದರೂ ಭೇದವಿದೆಯೇ ?

ಹೊಲೆಗಂಡಲ್ಲದೆ ಪಿಂಡದ ನೆಲೆಗಾಶ್ರಯವಿಲ್ಲ,
ಜಲಬಿಂದುವಿನ ವ್ಯವಹಾರವೊಂದೇ !
ಆಶೆಯಾಮಿಷ ರೋಷಹರುಷವಿಷಯಾದಿಗಳೆಲ್ಲಾ ಒಂದೇ !
ಏನನೋದಿ ಏನಕೇಳಿ ಏನುಫಲ ? ಕುಲಜನೆಂಬುದಕ್ಕಾವುದು ದೃಷ್ಟ ?
'ಸಪ್ತಧಾತು ಸಮಂ ಪಿಂಡಂ । ಸಮಯೋನಿ ಸಮುದ್ಭವಂ॥
ಆತ್ಮ ಜೀವ ಸಮಾಯುಕ್ತಂ । ವರ್ಣಾನಾಂ ಕಿಂ ಪ್ರಯೋಜನಂ ॥
ಕಾಸಿ ಕಮ್ಮಾರನಾದ. ಬೀಸಿ ಮಡಿವಾಳನಾದ,
ಹಾಸನಿಕ್ಕಿ ಸಾಲಿಗನಾದ, ವೇದವನೋದಿ ಹಾರುವನಾದ !
ಕರ್ಣದಲ್ಲಿ ಜನಿಸಿದವರುಂಟೆ ಜಗದೊಳಗೆ ?
ಇದು ಕಾರಣ ಕೂಡಲಸಂಗಮದೇವಾ
ಲಿಂಗಸ್ಥಲವನರಿದವನೇ ಕುಲಜನು.

ಮೇಲು-ಕೀಳುಗಳು ನಿಜವಾಗಿ ವ್ಯಕ್ತಿಯ ಗುಣಸ್ವಭಾವಗಳನ್ನವಲಂಬಿಸಿವೆ. ದುರ್ಗುಣಿ-ದುರಾಚಾರಿ, ಬ್ರಾಹ್ಮಣರಲ್ಲಿ ಹುಟ್ಟಿದ್ದರೂ ಕುಲಜನಲ್ಲ. ಸದ್ಗುಣಿ-ಸದಾಚಾರಿ, ಶ್ವಪಚರಲ್ಲಿ ಹುಟ್ಟಿದ್ದರೂ ಸತ್ಕುಲಜನು.

ಕೊಲುವನೇ ಮಾದಿಗ, ಹೊಲಸ ತಿಂಬವನೇ ಹೊಲೆಯ !
ಕುಲವೇನೋ ಆವಂದಿರ ಕುಲವೇನೋ ?
ಸಕಲ ಜೀವಾತ್ಮರಿಗೆ ಲೇಸನೆ ಬಯಸುವ
ನಮ್ಮ ಕೂಡಲ ಸಂಗನ ಶರಣರೇ ಕುಲಜರು !

ಬ್ರಾಹ್ಮಣರ ಕರ್ಮಮೂಲಾರಾಧನೆಯು ಬೆಟ್ಟಕ್ಕೆ ಕಲ್ಲನಿಕ್ಕಿದಂತೆ ! ಇಹದಲ್ಲಿ ಕಷ್ಟವೆ ಕಷ್ಟ ! ಪರದಲ್ಲಿ ಫಲಕಾರಿಯಲ್ಲ ! ಸಾಲೋಕ್ಯ, ಸಾಮೀಪ್ಯ, ಸಾರೂಪ್ಯ, ಸಾಯುಜ್ಯಗಳೆಂಬಿವು ಸ್ಥಿರವಾದವಲ್ಲ.

ಹಾರುವನ ಭಕ್ತಿ ಓಡಿನೊಳಗಗೆಯ ಹೊಯಿದಂತೆ
ಕೆಳಯಿಂಕೆ ಬೇರೂರದು, ಮೇಲೆ ಫಲವಾಗದು !
ಪ್ರಾಣಲಿಂಗದ ಪ್ರಸಾದವ ಮುಂದಿಟ್ಟುಕೊಂಡು
ಪ್ರಾಣಾಯ ಸ್ವಾಹಾ, ಅಪಾನಾಯ ಸ್ವಾಹಾ, ವ್ಯಾನಾಯ ಸ್ವಾಹಾ

ಉದಾನಾಯ ಸ್ವಾಹಾ, ಸಮಾನಾಯ ಸ್ವಾಹಾ
ಎಂಬ ಕರ್ಮಿಗಳ ನೇನೆಂಬೆ ಕೂಡಲಸಂಗಮದೇವಾ ?

ಆದ್ದರಿಂದ ನಿಶ್ಚಿತವಾಗಿ ಹೇಳುತ್ತೇನೆ :

ನೀವು ಹಿರಿಯರೆಂಬಿರಿ, ಕರ್ಮಿಗಳು ನೀವು ಕೇಳಿರಿ;
ನಿಮ್ಮ ವೇದಶಾಸ್ತ್ರಗಳು ಆರ ಹೊಗಳುತ್ತಿದ್ದಾವು ?
ಓಂ "ದ್ಯಾವಾ ಭೂಮೀ ಜನಯಂ ದೇವ ಏಕೋ ದೇವ."
ಎಂದು ಶ್ರುತಿಸ್ಮೃತಿಗಳು ಸಾರುತ್ತಲಿದ್ದಾವು.
'ವರ್ಣಾನಾಂ ಬ್ರಾಹ್ಮಣೋ ಗುರು' ಎಂಬುದು ಹುಸಿ,
ವರ್ಣಾನಾಂ ಗುರು ನಮ್ಮ ಕೂಡಲಸಂಗನ ಶರಣರು,"

ಉಘೇ ಉಘೇ ಎಂದು ಉಗ್ಗಡಿಸಿತು ಸಭೆಗೆ ಸಭೆಯೇ ! ಪರವಾದಿಗಳು ತಲೆ ಕೆಳಗು ಮಾಡಿದರು. ಅವರಲ್ಲಿ ಹಲವರು ತಣಿದು ಒಲಿದು ನಲಿದರು.

೧೦. ಅನುಭವ ಮಂಟಪ

ರಾಜಮನ್ನಣೆ

ತನ್ನ ಸಮ್ಮುಖದಲ್ಲಿಯೇ ಬಸವಣ್ಣನವರು ನಿಷ್ಠುರವಾಗಿ ನಿರ್ಗಮಿಸಿ ದಂದಿನಿಂದ ಬಿಜ್ಜಳನು ಚಿಂತಾಕ್ರಾಂತನಾಗಿದ್ದನು. ಮರುದಿನವೇ ಅವರು ಕಲ್ಯಾಣದಿಂದ ಹೋದುದನ್ನು ತಿಳಿದು ಅವರ ಸಂಚಾರದ ವರದಿಗಳನ್ನು ರಹಸ್ಯವಾಗಿ ಪಡೆದು ವಿಚಾರಿಸುತ್ತಲೂ ಇದ್ದನು. ರಾಜ್ಯಾಪಹಾರದ ತನ್ನ ದುರಾಕಾಂಕ್ಷೆಗೆ ಬಸವರಾಜರ ಅನುಮೋದನೆಯೂ ಸಹಕಾರವೂ ಖಚಿತವಾಗಿ ದೊರೆಯುವಾದ್ದರಿಂದ ಅವರನ್ನು ಬಿಟ್ಟುಕೊಡುವದೇ ಒಳಿತೆಂದು ಒಮ್ಮೆ ನೆನಿಸಿದರೂ, ತನ್ನ ಆಡಳಿತದ ಭದ್ರತಳಹದಿಯನ್ನು ಹಾಕಿಸಿದ ಆ ಮಹಾಪ್ರತಿಭಾಶಾಲಿ-ರಾಜಕಾರಣಿಯನ್ನು ಮರೆಯುವದೂ ಸಾಧ್ಯವಿರಲಿಲ್ಲ; ಅವರನ್ನು ದೂರೀಕರಿಸಿದರೆ ಅವರಿಗಿರುವ ಅಗಣಿತ ಜನಬೆಂಬಲವನ್ನು ತಾನು ಎದುರು ಹಾಕಿಕೊಂಡಂತೆಯೇ ಎಂಬ ಕಲ್ಪನೆಯೂ ಬಾರದಿರಲಿಲ್ಲ. ತನ್ನ ಕಾರ್ಯಸಾಧನೆಯಲ್ಲಿ ಬಸವರಾಜರು ಕೈಹಾಕದಂತೆಯೂ ಜನಕ್ಷೋಭವು ಸಂಭವಿಸದಂತೆಯೂ ಅವರೊಡನೆ ಅಷ್ಟರಮಟ್ಟಿಗಿನ ಸಂಬಂಧವನ್ನು ಇಟ್ಟುಕೊಳ್ಳುವದು ಒಳ್ಳೆಯದೆಂಬದನ್ನು ಕೊನೆಗೊಮ್ಮೆ ನಿರ್ಣಯಿಸಿದ್ದನು. ಅಗತ್ಯಬಿದ್ದಾಗ ಆ ಮಹಾನುಭಾವರ ಸಹಾಯ ಪಡೆಯಬಹುದೆಂದೂ ಭಾವಿಸಿದ್ದನು. ಬಸವರಾಜರ ನೈತಿಕ ತೇಜಸ್ಸಿಗೆ ಹೆದರಿದ್ದರೂ, ತನಗೆ ವಿರೋಧವಾದ ಶಕ್ತಿಗಳನ್ನು ಮೃದುಗೊಳಿಸಲಿಕ್ಕೆ ಆ ತೇಜಸ್ಸನ್ನೇ ಉಪಯೋಗಿಸುವ ಆಸೆಯನ್ನು ಇಟ್ಟುಕೊಂಡಿದ್ದನು. ಧೂರ್ತನಾದ ಬಿಜ್ಜಳನಲ್ಲಿ ಈ ವಿಚಾರವು ಸಹಜವಾಗಿ ಉಂಟಾಗಿದ್ದಿತು.

ಬಸವಣ್ಣನವರು ಹಿಪ್ಪರಿಗಿಯಿಂದ ನೆಟ್ಟಗೆ ಕಲ್ಯಾಣಕ್ಕೇ ಬಂದರು. ಎರಡು ವಾರಗಳ ವಿರಾಮದವಧಿ ಮುಗಿಯುತ್ತ ಬಂದಿತ್ತು. ಅವರ ದರ್ಶನಕ್ಕೆ ಕಾದಿದ್ದ ದಾರಿಯ ಎಡಬಲದ ಗ್ರಾಮಗಳ ಧರ್ಮಾಸಕ್ತರು ಕೂಡ ಕಲ್ಯಾಣದ ಹಾದಿಯನ್ನೇ ಹಿಡಿದರು. ನೆರೆಯ ಪ್ರಾಂತಗಳಿಂದಲೂ ಶಿವಭಕ್ತಿ-ಸಂಪನ್ನರು

ಬಂದು ಕಲ್ಯಾಣದಲ್ಲಿ ತುಂಬಹತ್ತಿದ್ದರು. ಶಿವಾನುಭವ ಮಂಟಪದ ಅನುಭಾವ ಗೋಷ್ಠಿಗೆ ಬಂದು ಹೋಗುವವರದೆಷ್ಟೋ ಜನರು! ಅಲ್ಲಿಯೇ ಶಿವಾರ್ಚನೆ ಪ್ರಸಾದಗಳನ್ನು ಪೂರೈಸಿಕೊಳ್ಳುವವರೂ ಬಹು ಜನರು!!

ಬಸವರಸರು ಬಂದ ದಿನವೇ ಮಂತ್ರಿ ಮಧುವರಸನು ಬಂದು ಅವರನ್ನು ಕಂಡನು. ನಿವೃತ್ತಿಪತ್ರವನ್ನಿತ್ತ ಮರುದಿನವೇ ಬಸವರಾಜರು ಸಂಗಮಕ್ಕೆ ತೆರಳಿದ್ದರಿಂದ, ಮಧುವರಸನಿಗೆ ಆಗ ಅವರನ್ನು ಕಂಡು ಆ ಬಗೆಗೆ ಮಾತಾಡಲು ಅವಕಾಶವಾಗಿರಲಿಲ್ಲ. ಅವರು ಬರುವದನ್ನೇ ಕಾಯುತ್ತ ಕೊಂಡಿದ್ದನು. ಮಧುವರಸನೂ ಅವಕಾಶ ದೊರೆತಾಗಲೆಲ್ಲ ತತ್ವ ಚಿಂತನೆಯಲ್ಲಿ ನಿಮಗ್ನನಾಗಿರುತ್ತಿದ್ದನು. ಧರ್ಮದ ವಿಶಾಲಭಾವನೆಯು ಅವನಿಗೆ ಸಂಪ್ರದಾಯದ ಮೂಢರೂಢಿಗಳು ಸೇರುತ್ತಿರಲಿಲ್ಲ. ಇತ್ತೀಚಿಗೆ ಅನುಭವ ಮಂಟಪದೊಡನೆಯೂ ಸಂಬಂಧವನ್ನು ಇಟ್ಟುಕೊಂಡಿದ್ದನು. ಬಸವರಾಜರ ಘನವಾದ ವ್ಯಕ್ತಿತ್ವವಂತೂ ಮೊದಲೇ ಅವನನ್ನು ಆಕರ್ಷಿಸಿದ್ದಿತು. ಹೀಗೆ ಹಲವು ಕಾರಣಗಳಿಂದ ಬಸವಣ್ಣನವರಲ್ಲಿ ಭಕ್ತಿಯೂ ಸ್ನೇಹವೂ ಉಳ್ಳವನಾಗಿದ್ದನು. ಕುಶಲವನ್ನಾಡಿದ ಬಳಿಕ ಆತನು ಬಸವರಾಜರ ನಿವೃತ್ತಿಯ ಬಗೆಗೆ ಬಿಜ್ಜಳನ ನಿರ್ಣಯವನ್ನು, ಆ ನಿರ್ಣಯಕ್ಕೆ ಮಂತ್ರಿಮಂಡಲದ ಒಪ್ಪಿಗೆ ಪಡೆದುದನ್ನು ತಿಳಿಸಿದನು ಬಳಿಕ "ಆ ನಿರ್ಣಯದಂತೆ ನೀವು ಈಗ 'ಗೌರವ ಧನ ಸ್ವೀಕರಿಸಿ, ಆಸ್ಥಾನ ಭೂಷಣರೂ ಗೌರವ ಪದವಿಗಳೂ ಆಗಿರಬೇಕು' ಎಂಬ ಬಿಜ್ಜಳನ ಬಿನ್ನಹವನ್ನು ನಿರಾಕರಿಸುವದು ಸರಿಯಾಗದು" ಎಂದು ತನ್ನ ಅಭಿಮತವನ್ನು ತಿಳಿಸಿದನು.

ಮಧುವರಸನು ಹೋದ ಬಳಿಕ ಬಸವರಾಜರು ಅಕ್ಕನಾಗಮ್ಮನನ್ನು, ಸಕಲೇಶಮಾದರಸ-ಮಡಿವಾಳ ಮಾಚಿದೇವರನ್ನು ಕೂಡಿಕೊಂಡು ಮಧುವರಸನಿಂದ ತಿಳಿದು ಬಂದ, ಬಿಜ್ಜಳನ ಧೋರಣೆಯ ವಿಷಯದಲ್ಲಿ ಆಲೋಚಿಸಿದನು. ಚರ್ಚೆ ಬಹಳ ಹೊತ್ತು ನಡೆಯಿತು. ಕೊನೆಗೊಮ್ಮೆ ಮಾಚಯ್ಯನು ಬಸವರಾಜರಿಗೆ ಖಂಡಿತವಾಗಿ ಹೇಳಿಬಿಟ್ಟನು.

"ಬಿಜ್ಜಳನ ಒಲುಮೆ ಇರುವವರೆಗೆ ವೀರಶೈವೋದ್ಧರಣಕ್ಕೆ ವಿಘ್ನಗಳು ಕಡಿಮೆ! ಈಗಲೂ ನೀವು ಕಾಯಕದಿಂದ ಪಡೆದುದನ್ನು ನಿಮ್ಮ ಸಿರಿಸಂಪತ್ತುಗಳನ್ನು ನಿಮ್ಮ ಒಡಲ ಕ್ಷುಧೆಗೆ ಉಪಯೋಗಿಸದೆ, ಜಂಗಮದಾಸೋಹಕ್ಕೆ

ವಿನಿಯೋಗಿಸುತ್ತಿದ್ದೀರಿ. ಬಿಜ್ಜಳನೀವ ಗೌರವಧನವೂ ಜಂಗಮಾರಾಧನೆಯ ನಿಧಿಗೆ ಸಲ್ಲುವದು. ಅದನ್ನು ನಿಷ್ಠುರವಾಗಿ ನಿರಾಕರಿಸುವದು ಸರಿಯಲ್ಲ. ಕಲಿದೇವರ ದೇವನ ದಾನವನ್ನು ನಿರಾಕರಿಸದೆ ಅವನ ಶರಣರಿಗೆ ವಿನಿಯೋಗಿಸುವದು ನ್ಯಾಯವು."

ಉಳಿದವರೂ ಅದನ್ನು ಅನುಮೋದಿಸಿದರು. ನಾಗಕ್ಕನೂ ತಲೆದೂಗಿದಳು. ವಿದ್ಯಾಲೋಕದಿಂದ ಪ್ರಪಂಚಾವಲೋಕನೆಗಿಳಿದಿದ್ದ ಚೆನ್ನಬಸವಣ್ಣನು ಸುಮ್ಮನೆ ಕುಳಿತು ಕೇಳುತ್ತಿದ್ದನು. ಆತನು ಸಂಗಯ್ಯ, ಗಂಗಾಂಬಿಕೆ, ನೀಲಾಂಬಿಕೆ ಇವರನ್ನು ಕರಕೊಂಡು ಬನವಾಸಿಯಿಂದ ಬಂದು ಎರಡು ದಿವಸವಾಗಿತ್ತು.

ಬಸವಣ್ಣನವರು ಸಮಾಜಸೇವೆ ಧರ್ಮೋದ್ಧಾರಗಳಿಗಾಗಿಯೇ ರಾಜಸೇವೆಯನ್ನು ಸ್ವೀಕರಿಸಿದ್ದರು. ಈಗಲೂ ಅದೇ ಉದ್ದೇಶವೇ ಅದರ ಸಂಬಂಧವನ್ನು ಉಳಿಸಿಕೊಳ್ಳುವಂತೆ ಮಾಡಿತು. ನಿರಾಕರಿಸುವದು ನಿಷ್ಠುರವಾಗುವಂತೆ ಆದರೆ, ಸ್ವೀಕರಿಸುವದು ಅನಿವಾರ್ಯವೆಂದು ನಿರ್ಣಯಿಸಿಕೊಂಡರು.

ಮರುದಿನ ಮಧ್ಯಾಹ್ನದಲ್ಲಿ ಅರಮನೆಪಸಾಯಿತನೊಬ್ಬನು ಬಂದು 'ತಮ್ಮ ಸಹೋದರಿಯರನ್ನು ಕಾಣಲು ಪ್ರಭುಗಳು ದಯಮಾಡಿಸುವರು' ಎಂದು ಹೇಳಿಹೋದನು. ನಾಲ್ಕನೆಯ ಪ್ರಹರದ ಆರಂಭಕ್ಕೆ ಮಹಮನೆಯ ಹೆಬ್ಬಾಗಿಲಲ್ಲಿ ಬಿಜ್ಜಳರಾಜನೂ ಮಧುವರಸನೂ ರಥದಿಂದಿಳಿದರು. ಬಸವರಸರೂ, ಚೆನ್ನಬಸವನೂ, ಮಾಚಯ್ಯನೂ ಅವರನ್ನು ಸ್ವಾಗತಿಸಿ ಕರೆದು ತಂದರು. ಅಂಗಳಕ್ಕೆ ಬಂದ ಬಳಿಕ ನಿಂತುಕೊಂಡು ಬಿಜ್ಜಳನು ಕೇಳಿದನು:

"ಚೆನ್ನಬಸವೇಶಾ, ಸೋವಿದೇವನ ಅಧ್ಯಯನ ಕ್ರಮ ಹೇಗಿತ್ತು ?"

"ಚೆನ್ನಾಗಿತ್ತು ಪ್ರಭುಗಳೇ, ಅವರು ಒಳ್ಳೆಯ ಅವಧಾನಿಗಳು ! ಧಾರ್ಮಿಕ ಸಾಹಿತ್ಯದಲ್ಲಿ ಅವರಿಗೆ ಆಸಕ್ತಿ ಬಹಳ ! ಆದರೆ ರಾಜಕುಮಾರರು ಧರ್ಮೋಪದೇಶಕರಾಗಲಾರರಷ್ಟೇ ! ಅವರನ್ನು ಶಸ್ತ್ರಾಭ್ಯಾಸಕ್ಕಾಗಿ ಗೋಮಾಂತ ವಿದ್ಯಾಲಯಕ್ಕೆ ಕಳಿಸಿದ್ದು ಒಳ್ಳೆಯದೇ ಆಯಿತು."

"ಹಾಗೆಂದು ಕಳಿಸಿದ್ದಾಯಿತು. ಅಲ್ಲಿ ಅವನೇನು ಕಲಿಯುತ್ತಾನೋ ದೇವರಿಗೇ ಗೊತ್ತು! ನಿಮ್ಮಂತಹ ಒಳ್ಳೆಯ ಸಂಗಡಿಗರು ಅಲ್ಲಿ ಅವನಿಗೆ ಎಲ್ಲಿಂದ ಬರಬೇಕು ?"

ಹೀಗೆಂದು ರಾಜನು ಬಸವರಾಜರ ವಾಸಗೃಹದ ಕಡೆಗೆ ಹೊರಳಿದನು. ಮಧುವರಸನು ಮಾಚಯ್ಯನೊಡನೆ ಸಂದರ್ಶನ ಮಂದಿರಕ್ಕೆ ನಡೆದನು. ವಾಸಗೃಹದ ಬಾಗಿಲಲ್ಲಿ ನಾಗಲಾಂಬೆ ಕೈಮುಗಿದು ಬಿಜ್ಜಳನನ್ನು ಸ್ವಾಗತಿಸಿದಳು. ನೀಲಲೋಚನೆ ಬಂದು ವಂದಿಸಿದಳು. ಗಂಗಾಂಬೆಯೂ ಸಂಗಯ್ಯನನ್ನಿಳಿಸಿ ನಮಿಸಿದಳು. ಬಾಲಸಂಗಯ್ಯನು 'ಜಯವಾಗಲಿ ದೊರೆಗಳಿಗೆ' ಎಂದು ಕೈಜೋಡಿಸಿದನು. ರಾಜನು ಆತನನ್ನು ಎತ್ತಿ ಮುದ್ದಾಡಿ ಇಳಿಸಿದನು. ಕ್ಷಣಹೊತ್ತು ಕುಳಿತು ಸೋದರಿಯರ ಕುಶಲವನ್ನು ಕೇಳಿ, ಎದ್ದು ಹೊರಬಂದು ಬಸವಣ್ಣನವರೊಡನೆ ಅನುಭವ ಮಂಟಪದ ಕಡೆಗೆ ನಡೆದನು. ದಾರಿಯಲ್ಲಿದ್ದ ಗ್ರಂಥಭಾಂಡಾರದಲ್ಲಿ ಓಲೆಯ ಶಾಂತಯ್ಯನವರ ನೇತೃತ್ವದಲ್ಲಿ ಎಂಟು ಜನ ಲಿಪಿಕಾರರು ವಚನಗಳ ಪ್ರತಿಮಾಡುತ್ತಿರುವದನ್ನು ನಿಂತು ನೋಡಿದನು. ಅನುಭವ ಮಂಟಪದ ಮುಂದೆ ಬಂದಾಗ ಅಲ್ಲಿ ಜಟಾಧಾರಿಗಳೂ, ಭಸ್ಮ ರುದ್ರಾಕ್ಷಿಧಾರಕರೂ ಕಾವಿಯ ಕಫನಿಯವರೂ ನೂರಾರು ಜನರು, ಓರಣವಾಗಿ ಕುಳಿತು, ಓದುವದರಲ್ಲಿ, ಮೆಲ್ಲಗೆ ಚರ್ಚಿಸುವದರಲ್ಲಿ ನಿರತರಾಗಿದ್ದರು. ಅದನ್ನು ನೋಡಿ ಬಿಜ್ಜಳನು ಬಸವರಾಜರತ್ತ ಹೊರಳಿ ಪಕ್ಕನೆ ನಕ್ಕು ಮುಂದೆ ನಡೆದನು. ಬಸವರಾಜರಿಗೆ ಆ ನಗೆಯ ಅರ್ಥವಾಗಲಿಲ್ಲ. ಬಿಜ್ಜಳನ ಹೃದಯದ ಬಣ್ಣ ಬೇಕಾದಾಗ ಬದಲಾಗುತ್ತಿರುವದಕ್ಕೆ ಅವರು ಚಕಿತರಾಗಿದ್ದರು. ಮುಂದಾಗಿದ್ದ ಚೆನ್ನಬಸವಣ್ಣನು ರಾಜನನ್ನು ಸಂದರ್ಶನ ಮಂದಿರಕ್ಕೆ ಕರೆದೊಯ್ದನು. ಅಲ್ಲಿ ಸಕಲೇಶ ಮಾದರಸರು ದೊರೆಯನ್ನು ಸ್ವಾಗತಿಸಿ ಅಗ್ರಾಸನದಲ್ಲಿ ಕುಳ್ಳಿರಿಸಿದರು. ಎಲ್ಲರೂ ಕುಳಿತ ಬಳಿಕ ಬಿಜ್ಜಳನೇ ಮಾತಿಗಾರಂಭಿಸಿದನು :

"ಬಸವರಾಜರೆ, ನೀವು ನಗರಕ್ಕೆ ಹಿಂದಿರುಗುವವರೆಗೆ ನಿಮ್ಮ ನಿವೃತ್ತಿ ಪತ್ರಕ್ಕೆ ಉತ್ತರ ಕೊಡುವದು ಸಾಧ್ಯವಾಗಿರುವದಿಲ್ಲ. ನೀವು ಸಾಮ್ರಾಜ್ಯವನ್ನು ಮರೆತರೂ ಸಾಮ್ರಾಜ್ಯವು ನಿಮ್ಮನ್ನು ಮರೆಯುವದಿಲ್ಲ. ನೀವು ರಾಜ್ಯಕ್ಕೆ ಮಾಡಿರುವ ಉಪಕಾರವನ್ನು ಸ್ಮರಿಸಿ ಪ್ರಭುತ್ವವು ನಿಮಗೆ ವಿರಾಮ ವೇತನ ನೀಡುವದು. ದಂಡನಾಯಕ ಪದವಿಯು ನಿಮಗೆ ನಿರಂತರ ನಡೆಯುವದು. ಮಂತ್ರಿಮಂಡಲದಲ್ಲಿ ಗೌರವ ಸದಸ್ಯರಾಗಿ ಉಳಿಯುವಿರಿ."

"ಪ್ರಭುಗಳ ಕರುಣೆಯ ಕೊಡುಗೆ ಸಂಗಮನಾಥನ ಭೃತ್ಯರಿಗೆ ಸಲ್ಲದು. ಅವರು ಕಾಯಕದಿಂದಲೇ ಜೀವಿಸಬೇಕು."

"ನಿಮ್ಮ ಕಾಯಕದ ಈ ನಿತ್ಯಮತವನ್ನು ಗಮನಿಸಿಯೇ ಪ್ರಭುತ್ವವು ನಿಮ್ಮಿಂದ, ನಿಮಗೆ ಹೊರೆಯಾಗದಷ್ಟು ರಾಜಸೇವೆಯನ್ನು ಅಪೇಕ್ಷಿಸಿದೆ. ಮಹತ್ವದ ಸಮಸ್ಯೆಗಳ ಕಾಗದಪತ್ರಗಳನ್ನು ನಿಮ್ಮ ಅವಲೋಕನೆಗೆ ಕಳಿಸಲಾಗುವದು. ಅವಕಾಶವಿದ್ದರೆ ಅವುಗಳಿಗೆ ನಿಮ್ಮ ಅಭಿಪ್ರಾಯಗಳನ್ನು ಬರೆದು ಕಳಿಸಬೇಕು ಅಗತ್ಯವಾದರೆ ಮಂತ್ರಿಮಂಡಲದ ಸಭೆಗೂ, ಮಹಾಸಭೆಗೂ ಅನಿರ್ಬಂಧವಾಗಿ ನಿಮ್ಮನ್ನು ಬರಮಾಡಿಕೊಳ್ಳುವೆವು. ಆಗ ನೀವು ನಿಮ್ಮ ರಾಜಕೀಯ ಅನುಭವದ-ಸಾರಾಸಾರ ವಿಚಾರದ-ನೆರವು ನೀಡಬೇಕು. ನಾವು ಅವುಗಳನ್ನು ಗ್ರಹಿಸಲಿ, ಬಿಡಲಿ; ಆ ಯಾವ ನಿಮ್ಮ ಅಭಿಪ್ರಾಯಕ್ಕೂ ನಿಮ್ಮನ್ನು ಹೊಣೆಗಾರರೆಂದು ತಿಳಿಯುವದಿಲ್ಲ. ಇದೂ ಒಂದು ನಿಮ್ಮ ಕಾಯಕವೇ ಆಗಿರಲಿ. ಅದರ ಸಂಪಾದನೆಯೇ ಪ್ರಭುತ್ವದ ಗೌರವಧನ ! ಯೋಗ್ಯರಾದವರನ್ನು ಸನ್ಮಾನಿಸುವದಕ್ಕೆ ರಾಜನು ಸ್ವತಂತ್ರನಾಗಿರುವನು. ಅದಕ್ಕೆ ಧರ್ಮಾಧಿಕರಣದ ನಿರ್ಣಯಬೇಕಾಗಿಲ್ಲ. ಅದನ್ನು ನಿರಾಕರಿಸುವದು ಪ್ರಭುತ್ವವನ್ನೇ ವಿರೋಧಿಸಿದಂತೆ !"

"ತಮ್ಮ ಮಾತಿನಿಂದ ನಾನು ಬಂಧಿತನಾಗುತ್ತಿದ್ದೇನೆ."

"ಬಂಧನವಲ್ಲ ದಂಡನಾಯಕರೆ, ರಾಜಕೀಯದ ಶಿಷ್ಟತೆಯಿದು ! "

"ತಮ್ಮ ಇಷ್ಟ! "

"ಹಾಗೆ ಹೇಳಿರಿ; ಆಜ್ಞೆಮಾಡಿ ನಾಲ್ಕು ದಿನವಾಯಿತು. ನಾಳೆ ಅಧಿಕರಣದಿಂದ ಈ ನಿರೂಪ ನಿಮಗೆ ಸಲ್ಲಿಸಲ್ಪಡುತ್ತದೆ,....ಇನ್ನೊಂದು ಸಂಗತಿ! ಸಕಲೇಶ ಮಾದರಸರೆ, ನಿಮ್ಮ ಅಧ್ಯಕ್ಷತೆಯಲ್ಲಿ ಶರಣರು ನಿರ್ಣಯಿಸಿ ನಮಗೆ ಬರೆದು ಕಳಿಸಿದ ಮನವಿಯನ್ನು ನೋಡಿದೆವು. ಮಾಚಯ್ಯನವರು ಅದನ್ನು ನಮಗೆ ಸಲ್ಲಿಸಿದ್ದರು. ಮಂತ್ರಿ ಮಧುವರಸರಿಂದ ಆ ಬಗೆಗೆ ವಿವರಣೆ ಪಡೆದು ಪರಿಶೀಲಿಸಿ ನಾವು ಅದನ್ನು ಅನುಮೋದಿಸಿದ್ದೇವೆ. ಈ 'ಅನುಭವ ಮಂಟಪ-ಧರ್ಮಪ್ರತಿಷ್ಠಾನ'ವು ಕ್ರಮಬದ್ಧವೆಂದು ಒಪ್ಪಲಾಗಿದೆ. ರಾಜಮುದ್ರಾಂಕಿತ ಶಾಸನಪತ್ರವು ನಾಳೆಯೇ ನಿಮ್ಮ ಕೈ ಸೇರುವದು."

ಶರಣರು 'ಉಘೇ ಉಘೇ' ಎಂದರು. ಸಕಲೇಶ ಮಾದರಸರು ಎದ್ದು ನಿಂತು ಕೈಮುಗಿದು ಕೃತಜ್ಞತೆಯನ್ನು ಸೂಚಿಸಿದರು. ರೂಢಿಯ ಸತ್ಕಾರ ಸಲ್ಲಿಸಿಕೊಂಡು ರಾಜನು ಎದ್ದನು.

"ನಡೆಯಿರಿ ಮಧುವರಸರೆ, ಅನುಭವ ಮಂಟಪ ನಿಮ್ಮನ್ನು ಹಿಡಿದು ಕೊಳ್ಳುವದೇನೋ ?"

"ಇಲ್ಲ; ಪ್ರಭುಗಳೇ ನಾನೇ ಅದನ್ನು ಹಿಡಿದುಕೊಳ್ಳಬಹುದು. ಆದರೆ ಅದೇನೂ ರಾಜ್ಯಸೇವೆಗೆ ಅಡ್ಡ ಬಾರದು"

ಎನ್ನುತ್ತ ಮಧುವರಸು ಮುಂದಾದನು. ಹೆಬ್ಬಾಗಿಲ ಹೊರಗೆ ಹೋಗಿ ಕಳಿಸಿ ಬಂದರು ಬಸವರಾಜರಾದಿ ಪ್ರಮುಖರು.

ಅನುಭವ ಮಂಟಪದ ವ್ಯಾಪಕತೆ

ಶೈವಧರ್ಮದ ಉಪಸಿದ್ಧಾಂತಗಳು ಬೇರೆ ಬೇರೆ ಪ್ರದೇಶದಲ್ಲಿ ಬೇರೆ ಬೇರೆಯಾಗಿದ್ದವು. ಅವೆಲ್ಲವುಗಳನ್ನು ಪರಿಷ್ಕರಿಸಿ ಸಮನ್ವಯಗೊಳಿಸಿದ ಸರ್ವ ಮಾನ್ಯ ಸಿದ್ಧಾಂತವನ್ನೂ ರೂಪಿಸುವ ಕಾರ್ಯವು ಕಲ್ಯಾಣದಲ್ಲಿ–ಬಸವಣ್ಣ ನವರ ಮುಂದಾಳುತನದಲ್ಲಿ ಜ್ಞಾನಿಗಳಿಂದ, ಅನುಭವಿಗಳಿಂದ ನಡೆದಿದೆಯೆಂಬ ಖ್ಯಾತಿಯು ಬೇಗನೆ ಭಾರತದಲ್ಲೆಲ್ಲ ಕೇಳಬಂದಿತು. ಮಾನವಜೀವನದ ನೆಲೆ ಬೆಲೆಯು ನಿರ್ಣಯವಾಗಲಿರುವ ಶಿವಾನುಭವಮಂಟಪದ ಕಾರ್ಯದ ಪರಿಣಾಮವೇ ಇದಾಗಿತ್ತು. ಇದರಿಂದ ಆಕರ್ಷಿಸಲ್ಪಟ್ಟ ತತ್ವನಿಷ್ಠರು ಧರ್ಮ ಜಿಜ್ಞಾಸುಗಳು ಪಂಡಿತರು ವೈರಾಗ್ಯಶೀಲರು ದೆಸೆದೆಸೆಗಳಿಂದ ಕಲ್ಯಾಣದ ಕಡೆಗೆ ನಡೆದರು. ಅವರಲ್ಲಿ ಅರಸುತನವನ್ನು ಬಿಟ್ಟು ವೈರಾಗ್ಯದಿಂದ ಬಂದವರು ಕೂಡ ಇದ್ದರು. ಆಡಳಿತದಲ್ಲಿ ಅಧಿಕಾರಿಗಳಾಗಿದ್ದವರು ಅದನ್ನು ತ್ಯಜಿಸಿ ಬಂದವರಿದ್ದರು. ಅವರೆಲ್ಲರು ಕಲ್ಯಾಣದಲ್ಲಿ ಒಂದು ಕಾಯಕವನ್ನು ಕೈಕೊಂಡು ಶಿವಾನುಭವಸಾಧನೆಯು ನಡಿಸಿದರು. ಕಲ್ಯಾಣದಲ್ಲಿಯೇ ಇರುವ ಹಲವು ಭಕ್ತಿಸಂಪನ್ನರು ಅಲ್ಲಿಯ ತಮ್ಮ ಕಾರ್ಯ ಮಾಡುತ್ತಲೇ ಅನುಭವಗೋಷ್ಠಿಯಲ್ಲಿ ಸಮಾವೇಶಗೊಂಡರು. ಅಲ್ಲಿಯ ನೂರೆಂಟು ಪಾಶುಪತ ಶೈವ ಮಠಾಧೀಶರು ಮೊದಲೇ ಶರಣಧರ್ಮ ಸ್ವೀಕರಿಸಿ ಸಾಧನೆ ಮಾಡಿ ಅದರ ಉನ್ನತ ನಿಲವಿನಲ್ಲಿ ನೆಲೆಯಾದರು. ಹೀಗೆ ಶಾಂತಿ ಸುಖಾ ಪೇಕ್ಷಿಗಳೆಲ್ಲ ಬಸವಣ್ಣನವರ ಭಕ್ತಿಯ ಬೆಳಕಿನಲ್ಲಿ ಬೆರೆಯಲು ಧಾವಿಸಿದರು. ಇಲ್ಲಿ ಕೂಡಿದ ಪ್ರಮುಖರಾದ ಶರಣ–ಶರಣೆಯರ ಹೆಸರುಗಳನ್ನೂ ಅವರು ಕೈಕೊಂಡ ಕಾರ್ಯಗಳನ್ನೂ ಅವರ ಪೂರ್ವಾಶ್ರಮವನ್ನೂ ಸಾಧ್ಯವಾದ ಮಟ್ಟಿಗೆ ಕೆಳಗೆ ಕೊಡಲಾಗಿದೆ.

ಶರಣರ ಹೆಸರು	ಪೂರ್ವಾಶ್ರಯದ ವಿವರ	ಕಲ್ಯಾಣದಲ್ಲಿ ಕೈಕೊಂಡ ಕಾಯಕ
ಶಿವಲೆಂಕ ಮಂಚಣ್ಣ	ಕಾಶಿಯ ವಿದ್ವಾಂಸ ಶಿವಸಿದ್ಧಾಂತ ಪ್ರವೀಣ. (ಮೂಲಸ್ಥಳ ಮಹಾರಾಷ್ಟ್ರ)	ತಮ್ಮ ವೃದ್ಧಾಪ್ಯದಲ್ಲಿ ಕಲ್ಯಾಣಕ್ಕೆ ಬಂದು ಬಸವಣ್ಣನವರನ್ನೂ ಅನುಭವ ಮಂಟಪವನ್ನೂ ಕಂಡರು.
ಡೋಹರ ಕಕ್ಕಯ್ಯ	ಮಾಳವ ಪ್ರಾಂತ.	ಚರ್ಮದ ವ್ಯವಹಾರ
ಅಲ್ಲಮಪ್ರಭು	ಬಳ್ಳಿಗಾಂವಿಯ ವಿದ್ಯಾಪೀಠದ ವಾಮ ಶಕ್ತಿಪಂಡಿತ. ಉಗ್ರಸಾಧನೆಯಿಂದ ಶಿವಯೋಗ ಸಿದ್ಧನಾದವನು.	ಅನುಭವಮಂಟಪದ ಅಧ್ಯಕ್ಷ ನಿರಂಜನ ಪೀಠಾಧಿಕಾರಿ.
ಸಿದ್ಧರಾಮ	ಸೊನ್ನಲಾಪುರದ ಕರ್ಮಯೋಗಿ.	ಕಲ್ಯಾಣದಲ್ಲಿ ಚೆನ್ನಬಸವಣ್ಣನಿಂದ ಲಿಂಗಧಾರಣ ಮಾಡಿಕೊಂಡು, ಷಟ್‌ಸ್ಥಲ ಜ್ಞಾನದಿಂದ ಶಿವಯೋಗಿಯಾದನು.
ಅಕ್ಕಮಹಾದೇವಿ	ಉಡುತಡಿಯ ವೈರಾಗ್ಯ ಮೂರ್ತಿ.	ಮಹಿಳೆಯರಲ್ಲಿ ಮಹಾಶರಣೆ, ಶಿವಯೋಗಸಿದ್ಧಳು.
ಸೊಡ್ಡಳ ಬಾಚರಸ	ಸೌರಾಷ್ಟ್ರದ ಧನಿಕ ಭಕ್ತ	ಬಿಜ್ಜಳನ ಭಂಡಾರದ ಕಣಜದ ಧಾನ್ಯಗಳನ್ನು ಅಳೆಯುವದು.

ಸಕಲೇಶ ಮಾದರಸ	ತಮಿಳು ನಾಡಿನ ಕಲ್ಲುಕುರಿಕೆಯ ಅರಸು.	ಮಹಮನೆಯ ವ್ಯವಸ್ಥಾಪಕ, ವಸ್ತ್ರ ವಿಸ್ತರಣಾಧಿಪತಿ, ಸ್ತೋತ್ರಪಾಠಕ.
ಮಾದಯ್ಯ (ಹೂಗಾರ ಮಾದಣ್ಣ)	ಸಕಲೇಶ ಮಾದರಸರ ಶಿಷ್ಯನಾಗಿ ಬಂದವನು.	ಶರಣರಿಗೆ ಪುಷ್ಪ-ಪತ್ರಗಳನ್ನು ಒದಗಿಸುವದು.
ಮಡಿವಳ ಮಾಚಿದೇವ	ಮೂಲಸ್ಥಳ ಹಿಪ್ಪರಗಿ. ಚಾಲುಕ್ಯ ರಾಜ್ಯದ ಸೇನಾಧಿಕಾರಿ. ತ್ಯಜಿಸಿ ಬಂದವ.	ಶರಣರ ಬಟ್ಟೆಗಳನ್ನು ಮಡಿಮಾಡುವದು.
ಕಿನ್ನರಿ ಬ್ರಹ್ಮಯ್ಯ	ಆಂಧ್ರ ದೇಶದ ಪೂಡೂರು ಗ್ರಾಮದ ಅಕ್ಕಸಾಲೆ.	ಕಿನ್ನರಿ ನುಡಿಸುವದು, ಅತಿಥಿ ಸತ್ಕಾರ, ಶರಣರ ರಕ್ಷಣೆ.
ಮಧುರಯ್ಯ	ಕಿನ್ನರಿ ಬ್ರಹ್ಮಯ್ಯನ ಶಿಷ್ಯ	ವೈದ್ಯೋಪಚಾರ.
ಕಲಕೇತ ಬೊಮ್ಮಯ್ಯ	?	ಕುರಿಯ ಮೊಗವಾಡ ಧರಿಸಿ (ದಕ್ಷ ಬ್ರಹ್ಮನ ಅಣಕ) ನರ್ತಿಸುವದು. ಪಂಜು ಹಿಡಿಯುವದು, ದೀಪ ಹೊತ್ತಿಸುವದು.
ಮೇದಾರ ಕೇತಯ್ಯ	ಪಶ್ಚಿಮದ ಮಲೆನಾಡಿನ ಬೇಲೂರು	ಬಿದಿರುಬುಟ್ಟಿ, ಮೊರ, ಕರಡಿಗೆಗಳನ್ನು ಮಾಡುವದು.
ಚರಳಯ್ಯ	ಸುರಪುರದ ಮುಚ್ಚಿಗ	ಶರಣರ ಪಾದರಕ್ಷೆ ಮಾಡುವದು.

ಶರಣರ ಹೆಸರು	ಪೂರ್ವಾಶ್ರಮದ ವಿವರ	ಕಲ್ಯಾಣದಲ್ಲಿ ಕೈಕೊಂಡ ಕಾಯಕ
ಮಧುವರಸು	ಮಂಗಳವೇಡೆ ಪ್ರಾಂತ. ಬಿಜ್ಜಳನೊಡನೆ ಕಲ್ಯಾಣಕ್ಕೆ ಬಂದವನು.	ಬಿಜ್ಜಳನ ಮಂತ್ರಿ.
ಅಮುಗಯ್ಯ (ಅಮುಗಿದೇವ)	ಪೂರ್ಣಜಾ (ಪುಳೂಜ) ಗ್ರಾಮ. ಸೊನ್ನಲಾಪುರದಲ್ಲಿ ನೇಕಾರಿಕೆ ಮಾಡುತ್ತಿದ್ದವ.	ನೆಯ್ಗೆಯ ಕಾಯಕ
ಸುಜ್ಞಾನಿದೇವ	ಓಡಿಸಾದಲ್ಲಿಯ ಕರ್ಣಿಕಾಪುರದವನು. ಶಿವಯತಿ.	ಶಿವಾನುಭವಿಯಾದ ಶಿವಯೋಗಿ, ದುರಾಚಾರಿಗಳ ಮನಸ್ಸು ತಿರುಗಿಸುವ ಕಲಾಲೀಲೆ.
ನನ್ನಯ್ಯ	ಮಾತಂಗದಡವಿಯಲ್ಲಿ ಹಾದಿಕಾರರನ್ನು ಸುಲಿಯುವ ಕಳ್ಳ–ಸುಜ್ಞಾನಿದೇವನನ್ನು ಸುಲಿಯಲು ಹೋಗಿ, ಅವನ ಉಪದೇಶದಿಂದ ಶರಣನಾದವ.	ಮಹಮನೆಯ ದ್ವಾರರಕ್ಷಕ.
ಮರುಳ ಶಂಕರದೇವ	ಬರ್ಬರ ದೇಶದ ಕಣ್ಣುತ್ತೂರ ಕಡೆಯವನು.	ಪ್ರಸಾದ ಕುಂಡದ ಶುಚಿತ್ವ.
ಹಡಪದ ಅಪ್ಪಣ್ಣ	?	ಶರಣರ ಕ್ಷೌರ, ಬಸವರಸರ ಕೈಯಾಳು ಸಲಹೆಗಾರ.

ಲಿಂಗಮ್ಮ (ಅಪ್ಪಣ್ಣನ ಪತ್ನಿ)	?	ಮಹಮನೆಯಲ್ಲಿ ಅಡಿಗೆಯ ಕಾಯಕ.
ಘಟ್ಟಿವಾಳಯ್ಯ	?	ಮದ್ದಲಿಗ
ಮೋಳಿಗೆ ಮಾರಯ್ಯ	ಕಾಶ್ಮೀರದ, ಸಪಾದ ಲಕ್ಷದ ದೊರೆ. ರಾಜಧಾನಿ ಮಾಂಡವ್ಯಪುರ. ಮಹಾದೇವ ಭೂಪಾಲ.	ಕಟ್ಟಿಗೆ ಕಡಿದು ತಂದು ಮಾರುವದು.
ಗಂಗಮ್ಮ (ಮಾರಯ್ಯನ ಪತ್ನಿ)	ಮಹಾದೇವ ಭೂಪಾಲನ ಪತ್ನಿ, ಮಾಂಡವ್ಯಪುರದ ರಾಣಿ.	ಪತಿಯ ಕಾಯಕದಲ್ಲಿ ಸಹಭಾಗಿನಿ. ಜಂಗಮ ದಾಸೋಹಿ.
ಬೊಂತಾದೇವಿ	ಕಾಶ್ಮೀರದಲ್ಲಿಯ ಒಬ್ಬ ರಾಜಪುತ್ರಿ.	ಕಸಗೂಡಿಸುವದು. ಗೋಡೆಗಳ ಆಸರ ದಲ್ಲಿ ವಸತಿ. ವೈರಾಗ್ಯಶೀಲಳು.
ಆಯ್ದಕ್ಕಿ ಮಾರಯ್ಯ	ರಾಯಚೂರ ಜಿಲ್ಲೆಯ ಅಮರೇಶ್ವರ.	ಪೇಟೆಯ ಬೀದಿಯಲ್ಲಿ ಅಕ್ಕಿಕಾಳು ಆರಿಸುವದು.
ಲಕ್ಕಮ್ಮ (ಆ. ಮಾರಯ್ಯನ ಪತ್ನಿ)	,,	ಕೊಟ್ಟಣದಲ್ಲಿ ಭತ್ತ ಕುಟ್ಟುವದು.
ಮಲಿಯ ಚಂದಯ್ಯ	ವಿಜಾಪುರದ ಹತ್ತಿರದ ಶಿವಣಗಿ	ಹಗ್ಗಹೊಸೆಯುವದು ನುಲಿಯ ಕಣ್ಣಿಗಳನ್ನು ಮಾಡುವದು.

ಶರಣರ ಹೆಸರು	ಪೂರ್ವಾಶ್ರಯದ ವಿವರ	ಕಲ್ಯಾಣದಲ್ಲಿ ಕೈಕೊಂಡ ಕಾಯಕ
ಗಜೇಶ ಮಸಣಯ್ಯ	ಅಕ್ಕಲಕೋಟೆಯ ಹತ್ತಿರದ ಕರಜಿಗೆ ಗ್ರಾಮ.	?
ತುರುಗಾಹಿ ರಾಮಣ್ಣ	?	ದನಕಾಯುವದು.
ದಶರಯ್ಯ	ರಾಮುಗೊಂಡೆ	ಸಾಮಾನ್ಯ
ವೀರಮ್ಮ (ದಶರಯ್ಯನ ಪತ್ನಿ)	,,	,,
ಬಹುರೂಪಿ ಚೌಡಯ್ಯ	ನೀಲಗಿರಿ ಪ್ರದೇಶದ ಕೊಟ್ಟಗಿರಿ ಗ್ರಾಮ ಆಂಧ್ರ-ತಮಿಳು ನಾಡುಗಳಲ್ಲಿ ವಿಜಯಿಯಾದ ಆಟಗಾರ.	ಶಿವಲೀಲೆಗಳನ್ನು ಶರಣರ ಜೀವನವನ್ನು ನಾಟ್ಯಮಾಡಿ ನಿರೂಪಿಸುವದು. ವೇಷಧಾರಣ — ನರ್ತನಗಳಿಂದ ವಿನೋದಪಡಿಸುವದು.
ರಾಯಸದ ಮಂಚಣ್ಣ	?	ಅನುಭವ ಮಂಟಪದ ಪತ್ರವ್ಯವಹಾರಿಕ. ಆದೇಶ ಪ್ರಕಟಿಸುವವ. ಅಣ್ಣನವರ ಓಲೆಗಳನ್ನು ಒಯ್ದು ಉತ್ತರ ಪಡೆದು ಒಪ್ಪಿಸುವದು.

ರಾಯಮ್ಮ (ರಾ. ಮಂಚಣ್ಣನ ಪತ್ನಿ)	?	ಮಹಿಳೆಯರಲ್ಲಿ ಸಂದೇಶವಾಹಕಳಾಗಿದ್ದುದು.
ಅಂಬಿಗರ ಚೌಡಯ್ಯ	?	ದೋಣಿ ನಡಿಸುವದು.
ವೈದ್ಯ ಸಂಗಣ್ಣ	ಸಗರ (ಸಾಗರ)	ಶಿವಭಕ್ತರ ವೈದ್ಯ.
ನಗಿ ಮಾರಿ ತಂದೆ	?	ವಿನೋದಗೊಳಿಸುವದು,
ಕೂಗಿನ ಮಾರಿ ತಂದೆ	?	ಸಭೆಯಲ್ಲಿ ಕೂಗಿ ಆದೇಶ ಪ್ರಕಟಿಸುವದು.
ಉರಿಲಿಂಗ ಪೆದ್ದಿ	ಮಹಾರಾಷ್ಟ್ರ, ನಾಂದೇಡ ಜಿಲ್ಲೆಯ ಕಂಧರ ನಗರದ ಕಳ್ಳ. ಶಿವಲೆಂಕನ ಸುತ. ಉರಿಲಿಂಗ ಶಿವಯೋಗಿಯ ಶಿಷ್ಯ.	ಸಾಮಾನ್ಯ ಶ್ರಮಜೀವನ
ಕಾಳವ್ವೆ (ಉ. ಪೆದ್ದಿಯ ಪತ್ನಿ)	ಕಂಧರ	,,
ಆದಯ್ಯ	ಗುಜರಾಥದಲ್ಲಿಯ ನಿಷ್ಠಭಕ್ತ. ಪುಲಿಗೆರೆಯಲ್ಲಿ ಶಿವಭಕ್ತಿಯನ್ನು ನೆಲೆಗೊಳಿಸಿದವ	ಬಸವಣ್ಣನವರ ಅನುಭವ ಮಂಟಪದ ಅಭಿಮಾನಿ ಕಲ್ಯಾಣವನ್ನು ಸಂದರ್ಶಿಸಿದವ
ಕದಿರೆ ರೆಮ್ಮವ್ವೆ	ಆಂಧ್ರದಲ್ಲಿ ಶರಣೆಯಾಗಿದ್ದವಳು.	ನೂಲುವ ಕಾಯಕ

ಶರಣರ ಹೆಸರು	ಪೂರ್ವಾಶ್ರಯದ ವಿವರ	ಕಲ್ಯಾಣದಲ್ಲಿ ಕೈಕೊಂಡ ಕಾಯಕ
ನಿಜಲಿಂಗ ಚಿಕ್ಕಯ್ಯ	ಕಾಶ್ಮೀರದಲ್ಲಿ ಮಹಾದೇವರಾಜನ ಸೇನಾಧಿಕಾರಿ.	ಅರಣ್ಯಗಳಿಂದ ತಾಡಗರಿಗಳನ್ನು ತಂದು ಕತ್ತರಿಸಿ ಬರವಣಿಗೆಗೆ ಓಲೆಗಳನ್ನು ಮಾಡಿ ಮಾರುವದು.
ದಾಸೋಹದ ಸಂಗಣ್ಣ	?	ಮಹಮನೆಯಲ್ಲಿ ಪ್ರಸಾದ ಎಡೆಮಾಡುವದು.
ಬೊಕ್ಕಸದ ಚಿಕ್ಕಣ್ಣ	?	ಕೊಠಡಿಯ ವ್ಯವಸ್ಥೆ
ಒಕ್ಕಲು ಮುದ್ದಯ್ಯ	?	ಮಹಮನೆಗೆ ಸೊಪ್ಪು, ತರಕಾರಿ ಬೆಳೆಯುವದು.
ಅಗ್ಗವಣಿ ಬೊಮ್ಮಯ್ಯ	?	ನೀರು ತುಂಬುವದು.
ಓಲೆಯ ಶಾಂತಯ್ಯ	?	ವಚನಗಳ ಪ್ರತಿಮಾಡುವದು.
ಉತ್ತಣ್ಣ	?	ಬಸವಣ್ಣನವರ ನೆಚ್ಚಿನ ಕೈಯಾಳು
ಶೀಲವಂತ	ಸುರಪುರ ಹರಳಯ್ಯನ ಮಗ	ಚಿತ್ರಗಾರ.

ಬಿಬ್ಬ ಬಾಚಯ್ಯ, ಕೋಲ ಶಾಂತಯ್ಯ, ವೀರಗೊಲ್ಲಾಳ, ಢಕ್ಕೆಯ ಬೊಮ್ಮಯ್ಯ, ಮಾರಯ್ಯ ಮುಂತಾದ ಹೆಸರು ಅಸಂಖ್ಯಾತರೆನಿಸುವವರಲ್ಲಿ ದೊರೆಯುತ್ತವೆ.



ಭಾರತೀಯರನ್ನು ಆಕರ್ಷಿಸಿದ ಬಸವಣ್ಣನವರ ಧರ್ಮಧ್ವಜ



ಬಸವಣ್ಣನವರ ಸಾಹಿತ್ಯ ಸೇವೆ

ಅಂತರ್ವ್ಯವಸ್ಥೆ

ಇದಲ್ಲದೆ ಹಲವರು ಶರಣೆಯರು ಅಡಿಗೆಯ ಕಾಯಕವನ್ನು ಕೈಕೊಂಡವರಾಗಿದ್ದರು. ಮಹಮನೆಯ ನಿತ್ಯದ ಜಂಗಮದಾಸೋಹಕ್ಕೆ ಎಷ್ಟು ಜನ ಸೋದರ-ಸೋದರಿಯರು ದುಡಿಯಬೇಕಾಗುತ್ತಿತ್ತೆಂಬುದನ್ನು ಇಲ್ಲಿ ಊಹಿಸಿಕೊಳ್ಳಬೇಕು.

ಶರಣರಲ್ಲಿ ಕೆಲವರು ಕಲ್ಯಾಣದಲ್ಲಿ ಮನೆಮಾಡಿಕೊಂಡು ಕಾಯಕದಿಂದ ದಾಸೋಹ ನಡಿಸಿ ಶಿವಾನುಭವ ಗೋಷ್ಠಿಗೆ ಬರುತ್ತಿದ್ದರು. ಕೆಲವರು ಮಹಮನೆಯಲ್ಲಿಯೇ ಕಾಯಕವಾಗಿ ಒಂದೊಂದು ಕಾರ್ಯ ನಿರ್ವಹಿಸಿಕೊಂಡು ಅಲ್ಲಿಯೇ ಶಿವಾರ್ಚನೆ ಪ್ರಸಾದ ನೆರವೇರಿಸಿಕೊಳ್ಳುತ್ತಿದ್ದರು. ಮಹಮನೆಯಲ್ಲಿ ದಿನಾಲು ಮಹಾಪ್ರಸ್ತ! ಹೊರಗಿನಿಂದ ನೂರಾರು, ಒಮ್ಮೊಮ್ಮೆ ಸಾವಿರಾರು ಜನರು ತೆರಪಿಲ್ಲದೆ ಬರುತ್ತಿದ್ದರು. ಅವರೆಲ್ಲರ ಭೋಜನ ಅಲ್ಲಿ ನಡೆಯುತ್ತಿತ್ತು. ಇದಲ್ಲದೆ ನಗರದಲ್ಲಿಯ ಎಲ್ಲ ಮಠಾಧೀಶರೂ ಇದರಲ್ಲಿ ಸಹಕರಿಸಿ ಬಂದವರಾಗಿ, ತಮ್ಮಲ್ಲಿ ಅನ್ನಸಂತರ್ಪಣೆ ಮಾಡುತ್ತಿದ್ದರು. ಮಹಮನೆಗೂ ಪ್ರಸಾದಬುಟ್ಟಿಗಳನ್ನು ತುಂಬಿ ಗಾಡಿಗಳಲ್ಲಿ ಕಳಿಸುತ್ತಿದ್ದರು. ಪಂಚಗಣಾಧೀಶ್ವರರೆಂಬ ಪ್ರಮುಖ ಮಠಾಧೀಶರು ನಗರದಲ್ಲಿಯ ಎಲ್ಲ ಮಠಾಧಿಪತಿಗಳಲ್ಲಿ ಸಂಘಟನೆ ಮಾಡಿ ಬಸವಣ್ಣನವರ ಕಾರ್ಯಕ್ಕೆ ನೆರವಾಗಿ ನಿಲ್ಲಲು ಮುಂದಾಳಾಗಿದ್ದರು. ಒಟ್ಟಿನಲ್ಲಿ ಬಸವರಾಜರ ದರ್ಶನಕ್ಕೂ ಶಿವಾನುಭವ ಗೋಷ್ಠಿಗೂ ಬರುವ ಸಾವಿರಗಟ್ಟಲೆ ಜನರಿಗೆ ನಿತ್ಯಪ್ರಸಾದ ಸಲ್ಲುತ್ತಿತ್ತು.

ತಂದೆಯಿಂದ ಬಂದ ಸಿರಿಸಂಪತ್ತನ್ನೆಲ್ಲ ಮಹಮನೆಯ ಜಂಗಮಾರಾಧನೆಯ ನಿಧಿಗೆ ಧಾರೆ ಎರೆದಳು ಗಂಗಾಂಬಿಕೆ! ಸುವರ್ಣರತ್ನಾಭರಣಗಳು ಬೆಳ್ಳಿಯ-ಪಾತ್ರೆ ಉಪಕರಣಗಳು ಆಗಾಗ್ಗೆ ವಿಕ್ರಮವಾಗಿ ಧಾನ್ಯದ ಕಣಜಗಳು ತುಂಬುತ್ತಿದ್ದವುಬಸವರಾಜರ ಸಂಬಳವೂ ಬಾಗೇವಾಡಿಯ ಅವರ ಉಂಬಳಿಯ ಗ್ರಾಮಗಳ ಆದಾಯವೂ ಅದಕ್ಕೆಮೀಸಲಾದವು. ಮಾಚಯ್ಯನವರು ಸೇನಾಧಿಕಾರಿಗಳಾಗಿದ್ದ ಕಾಲದಲ್ಲಿ ಸಂಪಾದಿಸಿದ ಧನಕನಕವಸ್ತುಗಳನ್ನೆಲ್ಲ ಅದೇ ನಿಧಿಗೆ ನೀಡಿದ್ದರು. ಧನಿಕಭಕ್ತರು ಕಾಣಿಕೆ ಸಲ್ಲಿಸುತ್ತಿದ್ದರು. ಬಣಂಜು ಸಂಘಗಳು ಸಹಾಯಮಾಡುತ್ತಿದ್ದವು. ಅನುಭವಮಂಟಪದ ಕಾರ್ಯಮಹತಿಯು ಧರ್ಮಜಿಜ್ಞಾಸುಗಳನ್ನು ಪಂಡಿತರನ್ನು ಅಷ್ಟೇ ಅಲ್ಲದೆ ಧನಿಕರನ್ನೂ ಆಕರ್ಷಿಸಿತು.

ಮಹಮನೆಯಲ್ಲಿ ಬ್ರಹ್ಮಕಾಲದಲ್ಲಿ ಪ್ರಾರ್ಥನಾಸಭೆ ನಡೆಯುತ್ತಿತ್ತು. ಪ್ರಾರ್ಥನೆಯ ನಂತರ ಶರಣರೆಲ್ಲರು ಹಿಂದಿನ ದಿನ ತಾವು ರಚಿಸಿದ ವಚನಗಳನ್ನು ಓದಿ ಒಪ್ಪಿಸುವರು. ಬಸವೇಶ, ಚೆನ್ನಬಸವೇಶ, ಸಕಲೇಶಮಾದರಸು, ಅಕ್ಕನಾಗಮ್ಮ ಈ ನಾಲ್ವರ ಸಾಹಿತ್ಯಸಮಿತಿಯಲ್ಲಿ ಅವುಗಳ ಪರಿಷ್ಕಾರ ನಡೆದು ಸ್ಥಲಕ್ಕೆ ಹೊಂದಿಸಿ ಓಲೆಯ ಶಾಂತಯ್ಯನವರಿಗೆ ಒಪ್ಪಿಸಲ್ಪಡುವವು. ಶಾಂತಯ್ಯನವರು ಅವುಗಳ ಪ್ರತಿಮಾಡಿಸುವರು. ಒಂದೊಂದು ವಿಷಯದ ವಚನಗಳ ಪೂರ್ಣಕಟ್ಟು ಆದೊಡನೆ ಅದರ ಪ್ರತಿಗಳನ್ನು ಪ್ರಚಾರಕಾರ್ಯದಲ್ಲಿ ಆಸಕ್ತಿಯುಳ್ಳ ನಾಡಿನ ಮಠಗಳಿಗೆ ಕಳಿಸುವರು. ಪ್ರಚಾರಕ್ಕಾಗಿ ನೇಮಿಸಲ್ಪಟ್ಟ ಜಂಗಮರು ಗ್ರಾಮಾಂತರಗಳಲ್ಲಿ ಅವುಗಳನ್ನು ಹಿಡಿದು ಓದುವರು, ಹಾಡುವರು; ಅರ್ಥವಿವರಿಸಿ ಪ್ರವಚನ ಮಾಡುವರು ಈ ಕ್ರಮದಿಂದ ಧರ್ಮತತ್ವಗಳು ಸಾಮಾನ್ಯ ಜನರಿಗೆ ಪರಿಣಾಮಕರವಾಗಿ ತಿಳಿಯಹತ್ತಿದವು. ಓದುಬಲ್ಲವರು ಪ್ರೇರಿತರಾಗಿ ತಾವಾಗಿಯೇ ಓದಿ ಮನನ ಮಾಡಿಕೊಳ್ಳಹತ್ತಿದರು. ಈ ಮೊದಲು ವೇದಾಗಮ ಧರ್ಮಶಾಸ್ತ್ರಗಳು ಸಂಸ್ಕೃತದಲ್ಲಿದ್ದುದರಿಂದ ಪಂಡಿತರಲ್ಲದವರಿಗೆ ಕನ್ನಡಿಯೊಳಗಿನ ಗಂಟಾಗಿದ್ದವು. ಅದರಿಂದ ಬಸವಣ್ಣನವರು ತತ್ವರಹಸ್ಯಗಳನ್ನು ಪ್ರತಿಪಾದಿಸುವ ಪೂರ್ವಿಕರ ಕನ್ನಡ ವಚನಗಳನ್ನು ಬೆಳಕಿಗೆ ತಂದರಲ್ಲದೆ ತಾವೂ ಅಸಂಖ್ಯ ವಚನಗಳನ್ನು ಬರೆದರು. ಉಳಿದ ಶರಣರಿಂದಲೂ ಬರಿಸಿದರು. ಅವರೆಲ್ಲರೂ ತಮ್ಮ ಅನುಭವಗಳನ್ನು ವಚನಗಳಲ್ಲಿ ಪ್ರಕಟಿಸುವಂತೆ ಮಾಡಿದರು.

ಅನುಭವ ಮಂಟಪದ ಪ್ರವಚನ ಸಮಿತಿಯ ಸದಸ್ಯರು ದಿನಕ್ಕೊಬ್ಬರಂತೆ ಸಾಯಂಕಾಲದ ಸಭೆಯಲ್ಲಿ ಪ್ರವಚನ ನಡಿಸುತ್ತಿದ್ದರು. ಅಕ್ಕನಾಗಲದೇವಿಯು ಅದರ ಸ್ತ್ರೀ ಸದಸ್ಯೆಯಾಗಿದ್ದಳು. ಚೆನ್ನಬಸವಣ್ಣನು ಕಾರ್ಯದರ್ಶಿಯಾಗಿದ್ದನು.

ಹಿರಿಯರಾದ ಐವರು ಸದಸ್ಯರುಳ್ಳ ವಿಚಾರ ಸಮಿತಿಯು ಮಹಮನೆಯ ಕಾರ್ಯಕಲಾಪಗಳನ್ನೂ ಧೋರಣೆಯನ್ನೂ ಗೊತ್ತು ಮಾಡುತ್ತಿತ್ತು. ಇದರಲ್ಲಿ ಮಾಚಯ್ಯನವರು ಸಕಲೇಶಮಾದರಸರು ಪ್ರಮುಖ ಸದಸ್ಯರು ನಿಯಮಿತ ರಾಜಸೇವೆಯಿಂದ ನಿವೃತ್ತರಾದ ಬಳಿಕ ಬಸವರಾಜರೇ ಈ ಸಮಿತಿಯ ಕಾರ್ಯಗಳ ಆಡಳಿತೆಗಾರ (ಕಾರ್ಯದರ್ಶಿ) ಆದರು. ಮಹಮನೆಯಲ್ಲಿಯ ಎಲ್ಲ

ಕಾರ್ಯಕ್ರಮಗಳು ಕ್ರಿಯಾತ್ಮಕಜ್ಞಾನದ ಉಪದೇಶಪರವಾಗಿಯೇ ನಡೆದಿದ್ದವು.

ಪ್ರಭು ತೋರಿದ ಶಿವನ ಪ್ರಕಾಶ

ಈ ಪ್ರಕಾರ ಶರಣಧರ್ಮದ ಅತ್ಯಂತ ಅಭ್ಯುದಯದ ಕಾಲವಾಗಿ ಬಂದು ಒಂದೂವರೆ ವರ್ಷ ಗತಿಸಿತ್ತು. ಡಣ್ಣಾಯಕ (ದಂಡನಾಯಕ) ಬಸವರಾಜರ ಭಕ್ತಿಯ ಕಾಳಿ ನಾಡಿನಲ್ಲೆಲ್ಲ ಕೇಳಿತು. ಅವರ ಅಂತರಂಗವು ಶರಣಸ್ಥಲದ ಶಿಖರದಲ್ಲಿ ಪರಮ ಆನಂದವನ್ನು ಅನುಭವಿಸುತ್ತಿದ್ದರೂ, ಆದರ್ಶಭಕ್ತಿಯ ಕ್ರಿಯಾಚಾರವನ್ನು ಅಲಕ್ಷಿಸಿರಲಿಲ್ಲ. ಜಂಗಮಾರಾಧನೆಯ-ಜಂಗಮತೃಪ್ತಿಯ-ಭರವು ಉಕ್ಕುತ್ತಿತ್ತು:

“ಅಡಿ ಕಾಲು ದಣಿಯವು; ನೋಡಿ ಕಣ್ಣು ದಣಿಯವು;
ಹಾಡಿ ನಾಲಿಗೆ ದಣಿಯದು. ಇನ್ನೇವೆನಿನ್ನೇವೆ ?
ನಿಮ್ಮ ಕೈಯಾರೆ ಪೂಜಿಸಿ ಮನದಣಿಯಲೊಲ್ಲದಿನ್ನೇವೆನಿನ್ನೇವೆ ?
ಕೂಡಲ ಸಂಗಮದೇವ ಕೇಳಯ್ಯ !
ನಿಮ್ಮುದರವ ಬಗೆದಾನು ಹೊಗುವ ಭರವೆನಗೆ !

ಬೇಡಿವವರಿಗೆ ಬೇಡಿದುದನ್ನು ಕೊಡುವದರಲ್ಲಿ ಮನಸ್ಸು ತಣಿಯದು. ಕೊಡುವೆನೆಂದರೆ ಬೇಡುವವರಿಲ್ಲ” ಎಂಬ ಅಹಂಕಾರದ ಗಾಳಿಯೂ ಸುಳಿಯಿತವರಲ್ಲಿ ! ಜನವೆಲ್ಲ ಹೊಗಳಿ ಹೊಗಳಿ ಅಭಿಮಾನದ ಕಿಡಿ ಕೆದರುವಂತಾಯಿತವರಲ್ಲಿ !!

‘ಕಂದಿದೆನಯ್ಯಾ ಎನ್ನ ನೋಡುವರಿಲ್ಲದೆ;
ಕುಂದಿದೆನಯ್ಯ ಎನ್ನ ನುಡಿಸುವರಿಲ್ಲದೆ;
ಬಡವಾದೆನಯ್ಯಾ ಎನ್ನ ತನು-ಮನ-ಧನವ ಬೇಡುವರಿಲ್ಲದೆ.
ಕಾಡುವ ಬೇಡುವ ಶರಣರ ತಂದು
ಕಾಡಿಸು ಬೇಡಿಸು ಕೂಡಲಸಂಗಮದೇವಾ.’

ಎನ್ನುವಂತಾಯಿತು ಅವರ ಒಳಬಗೆ ! ಆದರೆ ಅವರ ಅರಿವಿನ ಈ ಮಸುಕು ಬಹಳ ವೇಳೆ ಉಳಿಯಲಿಲ್ಲ. ಅದು ಹರಿಯುವ ಸಮಯ ಬೇಗನೆ ಬಂದಿತು.

* * * *

ಬೆಳಗಿನ ಪ್ರಾರ್ಥನೆಯ ನಂತರ ವಿಚಾರಸಮಿತಿ ಕೂಡಿತ್ತು. ಇದುವರೆಗೆ ಶಿವಾನುಭವದ ಸಭೆಗೆ ಅಂದಂದಿನ ಪ್ರವಚನಕಾರರೇ ಅಧ್ಯಕ್ಷರೆನಿಸಿ, ಶ್ರೋತೃಗಳ ಪ್ರಶ್ನೆಗಳನ್ನು ಉತ್ತರಿಸಿ ಸಮಾರೋಪಮಾಡುತ್ತಿದ್ದರು. ಚರ್ಚಾತ್ಮಕ ಪ್ರಸಂಗವಿದ್ದರೆ ಅಂದಿನವುಟ್ಟಿಗೆ ಇದ್ದವರಲ್ಲಿ ಹಿರಿಯಜ್ಞಾನಿಗಳೊಬ್ಬರನ್ನು ಸಭಾಧಿಪತಿಗಳೆಂದು ಆರಿಸುತ್ತಿದ್ದರು. ಆದರೆ ಅನುಭವ ಮಂಟಪದ ಕಾರ್ಯ ವ್ಯಾಪ್ತಿಯೂ ನಿಸ್ಸಂದಿಗ್ಧ ನಿರ್ಣಯ ಕೊಡುವ ಹೊಣೆಯೂ ಹೆಚ್ಚಿದಂತೆ ಸ್ಥಾಯೀ ಅಧ್ಯಕ್ಷರೊಬ್ಬರು ಇರುವದು ಅಗತ್ಯವಾಯಿತು. ಇಂದು ವಿಚಾರ ಸಮಿತಿ ಇದನ್ನೇ ವಿಚಾರಿಸಬೇಕಾಗಿತ್ತು. ತತ್ವವಿಚಾರ-ಧರ್ಮಾಚಾರಗಳ ಸೂಕ್ಷ್ಮ ಸ್ವರೂಪವೇ ಮೂರ್ತಿವೆತ್ತಂತೆ ಇರುವ ಮಹಾಜ್ಞಾನಿ, ಜಗದ ಹಂಗಿಲ್ಲದ ವಿರಾಗಿ, ಪರಮ ತೇಜಸ್ವಿ ಬೇಕಾಗಿತ್ತು ಆ ಸ್ಥಲಕ್ಕೆ! ಇದ್ದವರಲ್ಲಿಯೇ ಕೆಲವು ಹೆಸರುಗಳು ವಿಚಾರ ಸಮಿತಿಯಲ್ಲಿ ಮುಂದೆ ಬಂದವು. ಆದರೆ ಆ ಹೆಸರಿನವರೆಲ್ಲರು ಆ ಸ್ಥಾನಕ್ಕೆ ತಾವು ಅನರ್ಹರೆಂದು ನಿರಾಕರಿಸಿದರು. ಕೊನೆಗೆ ಅಧ್ಯಕ್ಷರ ಆಯ್ಕೆ ಮಾಡುವದನ್ನು ಬಸವಣ್ಣನವರ ಪಾಲಿಗೆ ಬಿಟ್ಟು ಸಮಿತಿ ಸಮಾರೋಪಗೊಂಡಿತು. ದಣ್ಣಾಯಕರು ಆಲೋಚನಾಮಗ್ನರಾಗಿ ನಿತ್ಯದ ಪೂಜಾದಿ ಕ್ರಿಯೆಗಳಲ್ಲಿ ತೊಡಗಿದ್ದರು. ಪಡಗರದಲ್ಲಿ ಗಣಾರಾಧನೆ ಸಾಗಿತ್ತು.

ಹಡಪದಪ್ಪಣ್ಣನು ಧಾವಿಸಿ ಒಳಗೆ ಬಂದು 'ಪರಶಿವನ ದೃಶ್ಯಾದೃಶ್ಯ ರೂಪಗಳೆನ್ನುವಂತೆ ಇಬ್ಬರು ಜಂಗಮ ಮಹಾತ್ಮರು ಬಾಗಿಲಿಗೆ ಬಂದು ನಿಂತಿದ್ದಾರೆ' ಎಂದು ಅರಿಕೆ ಮಾಡಿದನು. 'ಜಂಗಮದೇವರನ್ನು ಗೌರವಿಸಿ ಕರತನ್ನಿರಿ' ಎಂದು ಹೇಳಿ, ಲಿಂಗಜಂಗಮವನೊಂದೇ ಎಂದು ಭಾವಿಸಿದ ಬಸವಣ್ಣನವರು ಮತ್ತೆ ಲಿಂಗಪೂಜಾಭರದಲ್ಲಿ ಮುಳುಗಿ ಇದ್ದರು. ಅಪ್ಪಣ್ಣನು ಬಾಗಿಲಿಗೆ ಬಂದು ಬಿನ್ನವಿಸಿದನು.

"ಒಳಗೆ ದಯಮಾಡಿಸಬೇಕು ಸ್ವಾಮೀ, ತಮ್ಮನ್ನು ಒಳಗೆ ಬಿಜಯಂಗೈಸುವಂತೆ ನಿರೂಪಿಸಿದ್ದಾರೆ ಬಸವಣ್ಣನವರು; ಅವರ ಲಿಂಗಾರ್ಚನೆ ಇಷ್ಟರಲ್ಲಿ ಪೂರೈಸಲಿದೆ !"

"ಜಂಗಮ ಬಂದು ಬಾಗಿಲಿಗೆ ನಿಂದಿರುವಾಗ ಲಿಂಗಾರ್ಚನೆ ಮಾಡುವ ದೇತರ ಭಕ್ತಿ ? ಬಂದ ಜಂಗಮದ ಇಂಗಿತಾಕಾರವನರಿದು, ಇದಿರೆದ್ದು ವಂದಿಸಿ

ಕಿಂಕರನಾಗಿ ಭೀತಿಯಿಂದ ಭೃತ್ಯನಾಗಿರಬಲ್ಲಡೆ ಅದು ಭಕ್ತಿ! ಅದು ದಾಸ ಭಾವ!! ಬಂದವರಾರೆಂದರಿಯದೆ, ನಿಂದ ನಿಲವನರಿಯದೆ, ಕೆಮ್ಮಗೆ ಅಹಂಕಾರವ ಹೊತ್ತು ಇದ್ದವರ ಬಳಿಗೆ ಗುಹೇಶ್ವರ ಅಡಿ ಇಡುವವನಲ್ಲ"

ಎಂದು ಮುಂದೆ ನಿಂತ ಜಂಗಮದೇವ ಹೊರಳಿ ನಿಂತನು. ಅಪ್ಪಣ್ಣ ನಡನಡಗುತ್ತ ಹೋಗಿ ಆದರಂತೆ ಅರಿಕೆ ಮಾಡಿದನು. ಬಸವರಾಜರು ಅವಸರ ಮಾಡುತ್ತ–

"ಈ ಮನೆ ಜಂಗಮರ ಮನೆ! ತನ್ನ ಮನೆಗೆ ತಾ ಬರುವದಕ್ಕೆ ಮುನಿಸೇಕೆ? ಇದೋ ಬಂದೆ; ನಡಿಯಿರಿ ಮುಂದೆ" ಎಂದರು.

ಅಪ್ಪಣ್ಣನೊಡನೆ ಚೆನ್ನಬಸವಣ್ಣನೂ ಬಂದು ಆ ಯತಿಗಳಿಗೆರಗಿ ಬಿನ್ನವಿಸಿದನು:

"ಒಳಗೆ ಬಿಜಯಂಗೈವುದು ದೇವರು! ಡಣ್ಣಾಯಕರು ಇಷ್ಟರಲ್ಲಿಯೇ ಬರುವರು."

"ಆನಾಗದ ಮುನ್ನ ತಾನಾದೆನೆಂಬವರಲ್ಲಿ ಗುಹೇಶ್ವರನು ಸುಳಿಯನು."

ಅಷ್ಟರಲ್ಲಿ ಬಸವಣ್ಣನವರು ಅಹಂಕಾರದಿಂದಾದ ಮರವೆಗಾಗಿ ಪಶ್ಚಾತ್ತಾಪ ಪಡುತ್ತ ಧಾವಿಸಿ ಬಾಗಿಲಿಗೆ ಬಂದರು. ಜಂಗಮ ಪ್ರಭುವಿನ ಪಾದದ ಮೇಲೆ ಉರುಳಿದರು. ಶರಣರ ಸಮೂಹವು ಅವರನ್ನು ಹಿಂಬಾಲಿಸಿತ್ತು.

"ನನ್ನ ಅಂಧಃಕಾರದಲ್ಲಿ ನಾನು ಕೆಟ್ಟೆನು; ನನ್ನ ಅಪರಾಧವ ಕ್ಷಮಿಸಬೇಕು" ಎಂದು ಬೇಡಿಕೊಂಡರು. ಬಸವಣ್ಣನ ಭಕ್ತಿಯಲ್ಲಿಯ ಅಷ್ಟಿಷ್ಟು ದೋಷಗಳನ್ನು ತಿಳಿಸಿ ದೂರೀಕರಿಸದಿದ್ದರೆ, ಅಖಂಡವಾದ ಅವನ ತ್ಯಾಗ, ಲೋಕಸೇವೆ, ಸಾಧನೆಗಳೆಲ್ಲ ವ್ಯರ್ಥವಾದಾವೆಂದು ಪ್ರಭುವಿಗೆ ಚಿಂತೆ! ಆದ್ದರಿಂದ ಅವರು ಅಣ್ಣನವರ ಹಮ್ಮಭಿಮಾನಗಳನ್ನು ಕೆದಕಿ ನುಡಿದರು :

"ಲಿಂಗದ ಪ್ರಾಣವು ಜಂಗಮವೆಂದು ತಿಳಿದವನು, ಬಾಗಿಲಲ್ಲಿ ಜಂಗಮ ಬಂದಾಗ ಒಳಗೆ ಹಮ್ಮಿನಿಂದ ಕುಳ್ಳಿರುವುದೇ ಬಸವಣ್ಣ? ಇಂತಹ ಆಡಂಬರದ ಭಕ್ತರ ಮನೆಗೆ ಹೋಗುವ ಜಂಗಮ ಅಜ್ಞಾನಿ."

"ಎನ್ನ ತಪ್ಪು ಅನಂತಕೋಟಿ! ನಿಮ್ಮ ಸೈರಣೆಗೆ ಲೆಕ್ಕವಿಲ್ಲ. ಎನ್ನ ತಪ್ಪ ಒಪ್ಪ ಮಾಡಿಕೊಳ್ಳಬೇಕು ಪ್ರಭುವೇ!"

ಪುನಃ ಪಾದಕ್ಕೆರಗಿ ಅಂಗಲಾಚಿದರು ಅಣ್ಣನವರು!

“ತನು-ಮನ-ಧನವ ನೀಡುವೆನೆಂಬ ನಿನ್ನ ನುಡಿ ದೂರ ಕೇಳುತ್ತಿದೆ ಬಸವಣ್ಣ ! ತನು-ಮನ-ಧನಗಳು ಯಾರ ಒಡವೆಗಳು ? ನಿಜವಾದ ಭಕ್ತನಿಗೆ ಇವುಗಳ ಅಭಿಮಾನ ಇರಬಾರದು. ಗುರು-ಲಿಂಗ ಜಂಗಮಾರಾಧನೆಗೆ ತನು-ಮನ-ಧನಗಳು ಮೀಸಲೆಂದಿರಬೇಕು ಭಕ್ತಿನಿರತನು ! ಅವುಗಳನ್ನು ತಾನು ಅರ್ಪಿಸುವೆನೆಂದರೇನು ? ಇವು ತನ್ನವೆಂದು ಭಾವಿಸಿ ತಾನೊಬ್ಬರಿಗೆ ಕೊಡುವೆನೆಂದು ಹೇಳುವದು ಅಜ್ಞಾನ, ಮತ್ತು ವ್ಯಾಮೋಹ ! ಗುಹೇಶ್ವರ ಲಿಂಗಕ್ಕೆ ಏನನರ್ಪಿಸಿ ಭಕ್ತನಾದೆ ? ಹೇಳು ಬಸವಣ್ಣ !”

ಅಣ್ಣನವರ ಕಣ್ಣು ತೆರೆಯಿತು; ಮೈ ಬೆವರಿತು. ಬೇಡಿದವರಿಗೆ ಬೇಡಿದ್ದನ್ನಿತ್ತು ಕೃತಾರ್ಥನಾಗುವೆನೆಂಬ ಹೆಬ್ಬಯಕೆ ಲಯವಾಯಿತು. ಶರಣರೆಲ್ಲರು ಅಣ್ಣನವರ ಅವಸ್ಥೆಗೆ ಮರುಕಗೊಂಡರು.

“ಆತಿಥ್ಯಕ್ಕೆ ಬಂದವರಲ್ಲ ಪ್ರಭುಗಳು ! ಭಕ್ತಿಪಥವ ತಿದ್ದಲು ಬಂದವರು. ಅವರನ್ನು ಆತ್ಮಾರ್ಪಣದಿಂದ ಒಲಿಸಬೇಕು”

ಎಂದು ಚೆನ್ನಬಸವಣ್ಣನು ಎಚ್ಚರಿಸಿದನು. ಅಣ್ಣನವರು ಪ್ರಭುವಿಗೆ :
“ಹೌದು ತಂದೆ !

ತನುವ ಕೊಟ್ಟೆನೆಂದು ನುಡಿದು ಗುರುವಚನಕ್ಕೆ ದೂರವಾದೆ;
ಮನವಕೊಟ್ಟೆನೆಂದು ನುಡಿದು ಲಿಂಗಮುಖಕ್ಕೆ ದೂರವಾದೆ;
ಧನವ ಕೊಟ್ಟೆನೆಂದು ನುಡಿದು ಜಂಗಮ ಮುಖಕ್ಕೆ ದೂರವಾದೆ.
ಕೂಡಲಸಂಗಮದೇವಯ್ಯ, ನಿಮಗೆ ಮಾಡಿದೆನೆಂದು ನುಡಿದು
ಕೆಟ್ಟ ಕೇಡಿಂಗೆ ಕಡೆಯಿಲ್ಲ.”

ಎಂದು ಹೇಳುವಾಗ ಅವರ ಕಣ್ಣೀರು ಧಾರೆಯಾಗಿದ್ದವು; ಕಂಠ ಬಿಗಿದಿತ್ತು. ಮತ್ತೆ

“ಮಾಡುವಾತ ನಾನಲ್ಲವಯ್ಯ, ನೀಡುವಾತ ನಾನಲ್ಲವಯ್ಯ;
ಬೇಡುವಾತ ನಾನಲ್ಲವಯ್ಯ, ನಿಮ್ಮ ಕಾರುಣ್ಯವಲ್ಲದೆ,
ಎಲೆ ದೇವಾ,
ಮನೆಯ ತೊತ್ತಲಸಿದರೆ, ಮನೆಯೊಡತಿ ಮಾಡಿಕೊಂಬಂತೆ
ನಿನಗೆ ನೀ ಮಾಡಿಕೋ”

ಎಂದು ಬೇಡಿಕೊಂಡರು. ಕ್ಷಮಿಸಬೇಕೆಂದು ಶರಣರೆಲ್ಲರೂ ಅಂಗಲಾಚಿದರು.

"ನೋಡಿದೆಯಾ ಸಿದ್ಧರಾಮಣ್ಣಾ, 'ನಡೆವಳಿಯುಲೇನಾದಡಾಗಲಿ, ನುಡಿವಳಿಯುಲತಿಜಾಣರಾದರು' ಇವರು; ಸರಿಯಾಯ್ತು. ನಡೆಯಿರಿ ಬಸವಣ್ಣನವರೇ !"

ಪ್ರಭುದೇವರು ಒಳಗೆ ನಡೆದರು. ಎಲ್ಲವನ್ನು ಕೌತುಕದಿಂದ ನೋಡುತ್ತ ಅನುಸರಿಸಿದ್ದನು ಸಿದ್ಧರಾಮಯ್ಯನು. ಒಳ ಅಂಗಳಕ್ಕೆ ಬಂದಾಗ, ಅಲ್ಲಿ, ಜಂಗಮಾರಾಧನೆಯ ನಂತರ ಮಿಕ್ಕುದ ಕೂಡಿಸಿ ಹಾಕಿದ ಪ್ರಸಾದಕುಂಡದ ಹತ್ತಿರ ಬಿದ್ದ ಅಗುಳುಗಳನ್ನು ಸೇವಿಸಿ ನಲಿಯುತ್ತಿದ್ದ ಮರುಳ ಶಂಕರನನ್ನು ನೋಡಿದರು. ಇದೇ ತನು-ಮನೋಭಾವಗಳು ಲೀಯವಾದ ಸ್ಥಿತಿಯೆಂದು ಪ್ರಭು ವಿವರಿಸಿ ಹೇಳಿದರು. ಬಳಿಕ ಪೂಜಾ ಸತ್ಕಾರ-ಸಕಲೋಪಚಾರಗಳೊಡನೆ ಆರೋಗಣೆಗೈದು ಅನುಭವಾಮೃತವಾಣಿಯಿಂದ ಶರಣರನ್ನು ತಣಿಸುತ್ತ ವಿರಮಿಸಿದರು.

'ಅನುಭವಮಂಟಪದ ಸ್ಥಾಯೀ ಅಧ್ಯಕ್ಷರು ದೊರೆತರಲ್ಲವೇ ದಂಡನಾಥರೇ ?' ಎಂದು ಮಾಚಯ್ಯನು ಕೇಳಿದಾಗ ಬಸವಣ್ಣನವರು 'ಹೌದು' ಎಂದರು. ಅವರ ಆ ಚಿಂತೆ ಪರಿಹಾರಗೊಂಡಿತ್ತು. 'ಬನವಾಸಿಯ ರಮ್ಯವನ ಪ್ರದೇಶಗಳಲ್ಲಿ, ಬಳ್ಳೀಗಾಂವಿಯ ಗುರುಮನೆಯಲ್ಲಿ ಯಾರನ್ನು ಹುಡುಕಿ ಕಾಣದಾದೆನೋ, ಹಂಪೆಯ ಗಿರಿಶಿಖರದಲ್ಲಿ ಯಾರನ್ನು ಕಂಡು ಗುರುತಿಸಲು ಅಸಮರ್ಥನಾದೆನೋ ಆ ಗುರುರಾಯರು ತಾವಾಗಿ ಕೃಪೆಗೈಯ್ಯಲು ಬಂದರು' ಎಂದು ಆನಂದಪರವಶರಾಗಿದ್ದರು ಬಸವಣ್ಣನವರು. ಕೂಡಲೇ ಹಿರಿಯ ಶರಣರನ್ನು ಕಂಡು ಅನುಭವ ಮಂಟಪದ ಅಧ್ಯಕ್ಷರ ಬಗೆಗೆ ನಿರ್ಣಯಮಾಡಿಕೊಂಡು ಬಿಟ್ಟರು.

ಸಿದ್ಧರಾಮಯ್ಯನು ವಾಸ್ತುಶಿಲ್ಪಪ್ರಿಯನು ! ಕರ್ಮಯೋಗಿಯು ! ಅವನು ಮಹಮನೆಯ ಭವ್ಯತೆಯನ್ನೂ ಅದರ ರಚನಾಕ್ರಮದಲ್ಲಿಯ ಜಾಣ್ಮೆಯನ್ನೂ ಲಕ್ಷಪೂರ್ವಕವಾಗಿ ನೋಡಿದನು. ವಾಸಗೃಹ ಒತ್ತಟ್ಟಿಗೆ, ಅಲ್ಲದೆ ಬೇರೆ ಭೋಜನಶಾಲೆ, ಪಾಕಶಾಲೆಗಳು ಸಭಾಮಂದಿರ-ಸಭಾಂಗಣಗಳು, ಪ್ರಾಕಾರಗಳು, ಏಕಾಂತ ವಾಸಗಳು, ಪ್ರವಚನ ಮಂದಿರಗಳು, ಅತಿಥಿ ಶಾಲೆ

ಗಳು, ಉಗ್ರಾಣಗಳು ಮಂತ್ರಾಗಾರಗಳು ಎಲ್ಲವನ್ನೂ ಒಳಕೊಂಡಿತ್ತು ಆ ಮಹಾಮನೆ. ಅವನು ಭೋಜನೋತ್ತರದಲ್ಲಿ ಇದೆಲ್ಲವನ್ನೂ ಪ್ರಭುದೇವನ ಲಕ್ಷಕ್ಕೆ ತಂದಿದ್ದನು.

ಅಲ್ಲಮಪ್ರಭುದೇವರು ಅಂದಿನ ಶಿವಾನುಭವಗೋಷ್ಠಿಯಲ್ಲಿ ಪ್ರವಚನ ಮಾಡಲು ಒಪ್ಪಿದರು. ಸಂಜೆಯ ಹೊತ್ತಿನಲ್ಲಿ ಸಾವಿರಾರು ಜನರು ಸೇರಿ, ಸ್ತ್ರೀಯರು ಪುರುಷರು ಓರಣದಿಂದ ಕುಳಿತಿರುವ ಸಭ್ಯತೆ-ಶಿಸ್ತುಗಳನ್ನೂ ಅವರ ಶ್ರವಣಾಸಕ್ತಿಯನ್ನೂ ಪ್ರಭು ಮೆಚ್ಚಿದರು. ಬಸವರಾಜರು ಪರಮ ನಿರಂಜನ ದಿವ್ಯಮೂರ್ತಿ ಅಲ್ಲಮ ಪ್ರಭುಗಳ ಸಿದ್ಧರಾಮಯ್ಯನವರ ಪರಿಚಯ ಮಾಡಿ ಕೊಟ್ಟರು ಸಭೆಗೆ! ಜಯಘೋಷ ಮಾಡಿ ಕೈ ಮುಗಿದರು ಭಕ್ತರು. ಬಳಿಕ ಪ್ರಭುದೇವರು ಇಷ್ಟಲಿಂಗದಿಂದ, ಪ್ರಾಣಲಿಂಗ-ಭಾವಲಿಂಗಗಳನ್ನು ಸಾಧಿಸುವ ಕ್ರಮವನ್ನು ಕುರಿತು ಐದು ಗಳಿಗೆ ಅಸ್ಖಲಿತವಾಗಿ ಲಲಿತವಾಗಿ ಪ್ರವಚನ ಮಾಡಿದರು. ಅದೆಂತಹ ಪರಮಾನುಭವದ ವಾಣಿಯದು! ತಾವು ಪ್ರಪಂಚ ದಲ್ಲಿದ್ದೇವೆಂಬುದನ್ನೇ ಮರೆತಿದ್ದರು ಶ್ರೋತೃಗಳು! ಶಾಂತಿಪಾಠದಿಂದ ಮುಕ್ತಾ ಯವನ್ನು ಸೂಚಿಸಿ, ಕ್ಷಣಹೊತ್ತು ಸುಮ್ಮನಿದ್ದು, ಕಣ್ಣರಳಿಸಿ ಸುತ್ತು ನೋಡಿ ಹೇಳಿದರು ಪ್ರಭುದೇವರು.

"ಕಲ್ಯಾಣವೆಂಬ ಪ್ರಣತೆಯಲ್ಲಿ ಭಕ್ತಿರಸವೆಂಬ ತೈಲವನೆರೆದು,
ಆಚಾರವೆಂಬ ಬತ್ತಿಯಲ್ಲಿ ಬಸವಣ್ಣನೆಂಬ ಜ್ಯೋತಿಯ ಮುಟ್ಟಿಸಲು
ತೊಳಗಿ ಬೆಳಗುತ್ತಿದ್ದುದಯ್ಯಾ ಶಿವನ ಪ್ರಕಾಶ!!
ಆ ಪ್ರಕಾಶದೊಳಗೊಪ್ಪುತ್ತಿದ್ದರಯ್ಯಾ ಅಸಂಖ್ಯಾತ ಮಹಾಗಣಂಗಳು
ಶಿವಭಕ್ತರಿದ್ದ ಕ್ಷೇತ್ರ, ಅವಿಮುಕ್ತ ಕ್ಷೇತ್ರವೆಂಬುದು ಪುಸಿಯೇ?
ಶಿವಭಕ್ತರಿದ್ದ ಕ್ಷೇತ್ರ ಪಾವನವೆಂಬುದು ಪುಸಿಯೇ?
ಈ ಅಸಮಾನ ಭಕ್ತರ ಕಂಡು ಬದುಕಿದೆ ಗುಹೇಶ್ವರಾ."

'ಉಘೇ ಉಘೇ' ಎಂದು ಉದ್ಗರಿಸಿದರು ಸಭಿಕರು! ಸಭೆ ಮುಗಿಯಲು ಸಕಲ ಶರಣರೂ ಪರಮ ನಿರಂಜನ ದೇವನಿಗೆ ನಮಿಸಿದರು. ಚೆನ್ನಬಸವಣ್ಣನ ಕೈಹಿಡಿದು ಪ್ರಭುಪೀಠದಿಂದ ಇಳಿದು ಶರಣರ ಗುಂಪಿನೊಡನೆ ಬರುತ್ತ ಕೇಳಿ ದರು:

"ಅರಮನೆಗಿಂತ ಬೇರೆಯಾದ ಈ ವಿಶಿಷ್ಟರೂಪದಲ್ಲಿ ಮಹಮನೆಯನ್ನು ಕಟ್ಟಿಸುವದರಲ್ಲಿ ಬಲದೇವ ಮಹಾಮಂತ್ರಿಗಳ ಉದ್ದೇಶವೇನಿತ್ತು?"

ತತ್‌ಕ್ಷಣ ಮಧುವಯ್ಯ ಮುಂದೆ ಬಂದು ಹೇಳಿದನು.

“ಇಲ್ಲಿ ಈ ಕಾರ್ಯ ನಡೆಯಬೇಕೆಂದು ಬಲದೇವರಸರ ಅಂತರಾತ್ಮನ ಇಚ್ಛೆಯಿತ್ತೇನೋ ಗುರುದೇವಾ ! ಅವರ ಅಂತ್ಯೇಚ್ಛೆಯ ಪತ್ರದಲ್ಲಿ ಈ ಸೂಚನೆಯಿದೆ. ಬಸವೇಶ್ವರರು ಇಲ್ಲಿ ವಾಸಿಸದಿದ್ದರೆ ಈ ಮಹಮನೆಯು ಧಾರ್ಮಿಕ ಕಾರ್ಯಗಳ ಕೇಂದ್ರವಾಗಬೇಕೆಂದು ಬಯಸಿ ಬರೆದಿದ್ದಾರೆ. ಬಸವರಾಜರು ತಮ್ಮ ಮಟ್ಟಿಗೆ ಆವಾರದಲ್ಲಿ ಬೇರೆಯಾಗಿ ವಾಸಗೃಹ ಮಾಡಿಕೊಂಡಿದ್ದಾರೆ.”

ಹೀಗೆಂದು ಅನುಭವ ಮಂಟಪ ಧರ್ಮಪ್ರತಿಷ್ಠಾನದ ವಿಷಯವನ್ನೂ ವಿವರಿಸಿದರು. ಪ್ರಭುದೇವರು ತಮ್ಮ ಮುಂದೆ ತಲೆಬಾಗಿ ನಿಂತಿದ್ದ ಬಸವಣ್ಣನವರನ್ನು ಬಿಗಿದಪ್ಪಿ ನುಡಿದರು :

‘ಬಸವಣ್ಣ ಈ ಅನುಭವಮಂಟಪ, ಭಾರತ ಸಂಸ್ಕೃತಿಗೆ ನೀನಿತ್ತ ಅನರ್ಘ್ಯ ಕಾಣಿಕೆಯಾಗುವದು ಕಂಡಯ್ಯಾ !

ಸಿದ್ಧರಾಮಯ್ಯನಿಗೆ ಲಿಂಗಧಾರಣೆ

ಮರುದಿನ ಮುಂಜಾನೆ ಚೆನ್ನಬಸವಣ್ಣನು ವಿಚಾರ ಸಮಿತಿಯ ಸದಸ್ಯರನ್ನು ಕೂಡಿಸಿ ‘ಸಿದ್ಧರಾಮಣ್ಣನಿಗೆ ಇಷ್ಟಲಿಂಗವಿಲ್ಲದುದರಿಂದ ಅವರನ್ನು ಅನುಭವಗೋಷ್ಠಿಯಲ್ಲಿ ಸೇರಿಸಿಕೊಳ್ಳುವದು ಸರಿಯಲ್ಲ’ ಎಂದು ಸೂಚಿಸಿದನು. ಅಲ್ಲಮ ಪ್ರಭುಗಳ ಸನ್ನಿಧಿಯಲ್ಲಿ ಇದನ್ನು ಪ್ರಸ್ತಾಪಿಸಿ ಸಮಸ್ಯೆಗೆ ಪರಿಹಾರ ಪಡೆಯಬೇಕೆಂದು ಅವರೆಲ್ಲರು ನಿರ್ಣಯಿಸಿದರು. ಪ್ರಭುವಿನ ಸನ್ನಿಧಿಗೆ ಬಂದು ವಂದಿಸಿದರು. ಸಿದ್ಧರಾಮಣ್ಣನು ಅಲ್ಲಿ ಇದ್ದನು. ಚೆನ್ನಬಸವಣ್ಣನೆಂದನು:

“ಪ್ರಭುವೇ, ಇಷ್ಟಲಿಂಗವಿಲ್ಲದ ಸಿದ್ಧರಾಮಯ್ಯನವರು ಅದೆಂತು ಶಿವಶರಣರ ಗುಂಪಿನಲ್ಲಿ ಸೇರುವರು ?”

ಪ್ರಭುದೇವರು ನಕ್ಕು ನುಡಿದರು :

“ನೋಡಯ್ಯಾ ಸಿದ್ಧರಾಮಯ್ಯಾ, ಏನು ಹೇಳುವೆ ಈಗ ?

ಸಿದ್ಧರಾಮ ಉತ್ತರಿಸಿದನು : “ಒಳಗೆ ಚಿತ್ಕಲೆಯನ್ನು ಕಂಡ ಸಿದ್ಧನಿಗೆ ಹೊರಗೆ ಲಿಂಗವನ್ನು ಧರಿಸುವ ಹಂಗೇಕೆ ?”

“ಕೇಳು ಚೆನ್ನಬಸವಣ್ಣ ! ನಿನ್ನ ಜ್ಞಾನದ ಗಂಟು ಬಿಚ್ಚಲಿ ! ನಾವೇನು ಹೇಳೋಣ ?”

ಪ್ರಭುದೇವರು ಹೀಗೆ ಸ್ವಲ್ಪ ಬದಿಗಾದರು. ಬಸವಣ್ಣ ಮುಂತಾದವರು ಸುಮ್ಮನೆ ಕುಳಿತರು. ಚೆನ್ನಬಸವಣ್ಣ ಮಾತನಾಡಲೇ ಬೇಕಾಯಿತು.

"ಅಂಗದಲ್ಲಿ ಲಿಂಗವಿಲ್ಲದನ್ನಕ್ಕರ
ಪ್ರಾಣದಲ್ಲಿ ಲಿಂಗದ ಪರಿಣಾಮವೆಂತಪ್ಪುದಯ್ಯಾ ?
ಅಂಗತ್ರಯವುಳ್ಳವರು ಲಿಂಗತ್ರಯ ಸಂಪನ್ನರಾಗಬೇಕು;
ಒಂದೊಂದಂಗ ವಿರಹಿತರಾಗಿಪ್ಪರುಂಟೆ ?
ಕಂಗಳ ನೋಟಕ್ಕೆ ಇಂಬಾವುದು ಹೇಳಾ
ಒಂದು ಬಿಟ್ಟು ಒಂದು ತೋರದು ಸಂದುಭೇದವಿಲ್ಲದಿಪ್ಪ ನಿಲವು
ಕೂಡಲ ಚನ್ನ ಸಂಗಯ್ಯನಲ್ಲಿ ನಿನಗೆಂತು ಸಾಧ್ಯವಾಯಿತ್ತು ಹೇಳಾ
—ಸಿದ್ಧರಾಮಯ್ಯಾ!"

ಸಿದ್ಧರಾಮಯ್ಯ ಉತ್ತರಿಸಿದನು!

"ತನುವುಂಟೆಂಬ ಭಾವ ಮನದಲ್ಲಿ ಇಲ್ಲವಯ್ಯಾ.
ಮನವುಂಟೆಂಬ ಭಾವ ಭಾವದಲ್ಲಿ ಇಲ್ಲವಯ್ಯಾ.
ಅರಿವುಂಟೆಂಬ ಭಾವ ನುಡಿಯೊಳಗಿಲ್ಲವಯ್ಯಾ.
ಇಂತು ತನು-ಮನ-ಭಾವವೆಂಬ ತ್ರಿವಿಧವೂ ಏಕಾರ್ಥವಾದ ಬಳಿಕ;
ಆವ ತನುವಿನ ಮೇಲೆ ಸ್ವಾಯತ ಮಾಡುವೆ ?
ಎನ್ನ ಕಾಯವೇ ಬಸವಣ್ಣ ! ಎನ್ನ ಪ್ರಾಣಲಿಂಗವೇ ಪ್ರಭುದೇವರು !
ಕಪಿಲಸಿದ್ಧ ಮಲ್ಲಿಕಾರ್ಜುನನಲ್ಲಿ ಒಳಹೊರಗೆಂಬುದಿಲ್ಲ ಕಾಣಾ
ಚೆನಬಸವಣ್ಣಾ !

ಮಿಂಚಿನಂತೆ ಮೂಡಿ ಬಂದಿತು ಚೆನ್ನಬಸವಣ್ಣನ ಉತ್ತರ:

"ಆಕಾಶದೊಳಗಾಡುವ ಪಟಕ್ಕಾದರೂ ಮೂಲಸೂತ್ರವಿರಬೇಕು;
ಕಲಿಯಾದಡು ಕಜ್ಜವಿಲ್ಲದೆಯಾಗದು ! ಭೂಮಿ ಇಲ್ಲದೆ ಬಂಡಿ ನಡಿವುದೆ ?
ಅಂಗಕ್ಕೆ ಲಿಂಗಸಂಗವಿಲ್ಲದೆ ನಿಸ್ಸಂಗವಾಗಬಾರದು.
— ... ... —
ಕಣ್ಣು ಕಾಣುತ್ತದೆಂದರೆ ದೀಪವಿಲ್ಲದೆ ಕತ್ತಲೆಯಲ್ಲಿ ಅದು ಕಾಣಬಹುದೇ?
ಸೂರ್ಯಪ್ರಕಾಶದಿಂದ ಪದಾರ್ಥವು ಕಾಣುವದಲ್ಲದೆ
ನನ್ನಿಂದಲೇ ಕಾಣುತ್ತದೆಂದು ಕಣ್ಣು ಹೇಳಬಹುದೇ ?
ಸ್ಥೂಲ-ಸೂಕ್ಷ್ಮ-ಕಾರಣಗಳೆಂಬ ತನುತ್ರಯವಿರಲು
ಇಷ್ಟ-ಪ್ರಾಣ-ಭಾವಗಳೆಂಬ ಲಿಂಗತ್ರಯಂಗಳು ಬೇಡವೆಂದಡೆ
ಅಸಂಖ್ಯಾತ ಪ್ರಮಥರೊಪ್ಪುವರೇ ?

ಅಂಗಲಿಂಗ ಸಂಗವುವಿಲ್ಲದ ನಿಸ್ಸಂಗಿಯುನ್ನು
ಕೂಡಲಸಂಗಮದೇವನು ಮೆಚ್ಚುವದಿಲ್ಲ."

ಹೀಗೆ ಹಲವು ಬಗೆಯಾಗಿ ಚೆನ್ನಬಸವಣ್ಣನು ಸಿದ್ಧರಾಮನ ಅಭಿಮತವದಲ್ಲೆನಿಸಿ, ಶಂದೇಹಗಳನ್ನು ನಿವಾರಿಸಿದನು. ಉಳಿದ ಪ್ರಮಥರೂ ಚೆನ್ನಬಸವಣ್ಣನಿಗೆ ಬೆಂಬಲವಾಗಿ ಮಾತನಾಡಿದರು. ಪ್ರಭುದೇವರು 'ದೇಹದಲ್ಲಿ ಇಷ್ಟಲಿಂಗ ಸ್ಥಾಪಿಸಿದಲ್ಲದೆ ಪ್ರಾಣಲಿಂಗ ಸಂಬಂಧವಾಗದು' ಎಂದು ಸ್ಪಷ್ಟಪಡಿಸಿದರು. ಅವರ ಅಪ್ಪಣೆಯಂತೆ ಸಿದ್ಧರಾಮನು ಚೆನ್ನಬಸವಣ್ಣನಿಗೆ ಶರಣುಹೋದನು. ಬಳಿಕ ಅತಿಥಿಸಾಲೆಯ ಪೂಜಾಗೃಹದಲ್ಲಿ ಚೆನ್ನಬಸವಣ್ಣನು ಸಿದ್ಧರಾಮೇಶ್ವರನಿಗೆ ತ್ರಿವಿಧ ದೀಕ್ಷೆಯ ಮಾಡಿ ಇಷ್ಟಲಿಂಗಧಾರಣ ಮಾಡಿಸಿದನು. ಸಿದ್ಧರಾಮನು ಕರದ ದೇವರ ಕಂಡೆಂದನು :

"ಭೇದಿಸಬಾರದೆ ಇದ್ದ ಅಭೇದ್ಯ ಶಿವನೇ,
ನಿನ್ನ ಭೇದಿಸಿ ತಂದು ಕೊಟ್ಟನೆನ್ನಯ ಗುರು.
ಇನ್ನು ನಾ ನಿನ್ನ ಬಿಡುವೆನೇ ? ಬಿಡೆ, ಬಿಡೆ.
ಮೆಚ್ಚಿದೆ ಪಾದೋದಕವ, ನಚ್ಚಿದೆ ಪ್ರಸಾದವ, ಗುರುವೆ ಕ. ಸಿ. ಮಲ್ಲಿಕಾರ್ಜುನಾ·

"ಎನ್ನ ತನ್ನಂತೆ ಮಾಡಿದ ಗುರು ಚೆನ್ನಬಸವಣ್ಣ !
ಆನು ಬಸವಣ್ಣನ ಕರುಣದಿಂದ ಅಭ್ಯಾಸಯೋಗವನತಿಗಳೆದು,
ಶಿವಯೋಗದಲ್ಲಿ ನಿತ್ಯನಾಗಿ,
ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ ಎಂಬ
ಷಟ್‌ಸ್ಥಲಕ್ಕೆ ಅಧಿಕಾರಿಯಾದೆ; ನಿನ್ನವರ ಸಲುಗೆಗೆ ಸಂದೆ.
ಚೆನ್ನಬಸವಣ್ಣನ ಕೃಪೆ ಎನ್ನ ನಿಂತುಮಾಡಿತ್ತು ಕಾಣಾ ಕ. ಸಿ. ಮ.

ತನ್ನ ಇದುವರೆಗಿನ ಕರ್ಮದ ನಿಸ್ಸಾರತೆಯುನ್ನು ಅರಿದು ಜರಿದರು :

"ಶರಣರ ಸದಾಚರಣೆಗೆ ನದಿಕೂಪಗಳಿಲ್ಲವೋ !
ಹಳ್ಳಹೊಂಡಗಳಿಲ್ಲವೋ ! ಕೆರೆ ಒರತೆಗಳಿಲ್ಲವೋ !
ನಾ ಮಾಡಿದೆನೆಂಬುದು ಮನದ ತಾಮಸ !
ಇಂತಪ್ಪ ತಾಮಸವ, ಕಪಿಲಸಿದ್ಧಮಲ್ಲಿಕಾರ್ಜುನಾ
ಚೆನ್ನಬಸಣ್ಣನಿಂದಲೇ ಕಳೆದೆನು ಕೇಳಾ !"

* * * *

ಮುಂದೆ ಮೂರು ದಿವಸಗಳ ವರೆಗೆ ಪ್ರಮಥಗಣದ ಒಲವನ್ನೂ ಭಕ್ತಿಯನ್ನೂ ಅವಲೋಕಿಸಿ-ಅನುಲಕ್ಷಿಸಿ-ಅಲ್ಲಮದೇವರು ಬಸವಣ್ಣನವರ ಬಿನ್ನಪವನ್ನು ನಿರಾಕರಿಸಲಾಗದೆ ಅನುಭವ ಮಂಟಪದ ನಿರಂತರದ ಅಧ್ಯಕ್ಷರಾಗಲು ಸಮ್ಮತಿಸಿದರು. ಅದರಿಂದ ಆ ಪರಶಿವನ ಎಡೆಯಲ್ಲಿ ಪ್ರಮಥರು ಮಾಡಿದ ತತ್ತ್ವಾರ್ಥಮಥನದ ನವನೀತವು ಸದ್ಭಕ್ತರಿಗೆ ಸುಲಭವಾಗಿ ಸಿಗುವಂತಾಯಿತು. ದಣ್ಣಾಯಕ ಬಸವರಾಜರು ಆ ಮಾರ್ಗದಲ್ಲಿಯ ಅಡ್ಡಿ ಆತಂಕಗಳನ್ನು ಸಮಸ್ಯೆಗಳನ್ನು ನಿತ್ಯನಿತ್ಯ ಚರ್ಚೆಗಿಟ್ಟು ಪರಿಹಾರ ಪಡೆದರು; ಸಿದ್ಧಾಂತಗಳನ್ನು ರೂಪಿಸಿಕೊಂಡರು.

---

೧೧. ಶೂನ್ಯಸಿಂಹಾಸನಾಧೀಶ್ವರ ಅಲ್ಲಮಪ್ರಭು

ಮಹಮನೆಗೆ ಮಹದೇವಿಯಕ್ಕ

ಉಡುತಡಿಯ ಮಹದೇವಿಯಕ್ಕನು ಬಾಲ್ಯದಲ್ಲಿಯೇ ಲಿಂಗಾನುಭವಿಯಾಗಿದ್ದಳು. ಶ್ರೀಶೈಲದ ಚೆನ್ನಮಲ್ಲಿಕಾರ್ಜುನನ ಹೆಸರಿನಲ್ಲಿ ಉಂಟಾದ ಅವಳ ಭಕ್ತಿಯು ಉನ್ನತಿಗೊಂಡು ತನ್ನ ತನು-ಮನ-ಭಾವಗಳಲ್ಲಿ ಚೆನ್ನಮಲ್ಲಿಕಾರ್ಜುನ ಲಿಂಗವನ್ನು ಕಂಡು ಅವನಿಗೆ ಆತ್ಮಾರ್ಪಣೆ ಮಾಡಿ, ಅವನಲ್ಲಿ ಬೆರೆಯಲು ಹವಣಿಸಿದ್ದಳು. ಆಕೆಯ ಗುರು ಗುರುಲಿಂಗದೇವರು, ಕಲ್ಯಾಣದಲ್ಲಿ ಬಸವಣ್ಣದಂಡನಾಯಕರು ಲಿಂಗಾಂಗಸಾಮರಸ್ಯವಿಜ್ಞಾನಶೋಧನೆಯನ್ನು ಕೈಕೊಂಡಿದ್ದಾರೆಂದು ಹಲವು ಸಲ ಹೇಳಿದ್ದರು. ಬಳಿಕೊಮ್ಮೆ ಅವರು ಕಲ್ಯಾಣಕ್ಕೆ ಹೋಗಿ ಬಂದು, ತಾವು ಕಣ್ಣಾರೆ ಕಂಡ, ಮಹಮನೆಯ ಜ್ಞಾನದೀಪಗಳು ಮಹಾಪ್ರಕಾಶದಲ್ಲಿ ಬೆರೆವ ಭರವನ್ನು ಪರವಶರಾಗಿ ವರ್ಣಿಸಿದ್ದರು. ಅದನ್ನು ಕಾಣುವ ಅವಳ ಆಧ್ಯಾತ್ಮಿಕ ತೃಷೆ ಹೆಚ್ಚಾಯಿತು. ಆಗ ತನ್ನ ಮೇಲೆ ಬಂದ ಪ್ರಪಂಚದ ಒತ್ತಾಯವನ್ನು ವಿಡಂಬಿಸಿ, ತನ್ನನ್ನು ಮದುವೆಯಾಗಲೆಳಸಿದ ಕೌಶಿಕನನ್ನು ನಿರಾಕರಿಸಿ, ಸಂಸಾರಕ್ಕೆ ಕಾರಣವಾದ ದೇಹಾಭಿಮಾನವನ್ನು ಆಮೂಲಾಗ್ರವಾಗಿ ಧಿಕ್ಕರಿಸಿ, ದಿಗಂಬರೆಯಾಗಿ ಕಲ್ಯಾಣಕ್ಕೆ ಹೊರಟುಬಿಟ್ಟಳು.

ನವಯೌವನದ ಬಾಲೆ, ಏಕಾಕಿ, ಅಡವಿ ಅರಣ್ಯಗಳನ್ನು ದಾಟುವ ನೂರು ಗಾವುದ ದಾರಿ, ಅಶನ-ವಸತಿಗಳಿಗಾಶ್ರಯವಿಲ್ಲ; ಕುತೂಹಲಿಗಳ, ಕುಹಕರ, ದುಷ್ಟರ ಕೀಟಲೆಗಳಿಂದ ಪಾರಾಗುತ್ತಾ ಹೇಗೆ ಕಷ್ಟದಿಂದ ಪ್ರಯಾಣ ಮಾಡಿರಬೇಕೆಂಬುದನ್ನು ವಾಚಕರೇ ಊಹಿಸಬೇಕು. ಅವಳ ಆತ್ಮಶಕ್ತಿಯೇ ಅವಳನ್ನು ಕಾಪಾಡಿತು. ಸಂಚಾರದ ಜಂಗಮರ ಮುಖದಿಂದ ಮುಂದಾಗಿಯೇ ಅವಳ ವೈರಾಗ್ಯದ ಕೀರ್ತಿ ಕಲ್ಯಾಣವನ್ನು ಕಂಡಿತ್ತು; ಹಾಡುಗಳಾಗಿ ಹಾಡಲ್ಪಡುತ್ತಿತ್ತು. ಇಂತಹ ಅಲೌಕಿಕ ಮೂರ್ತಿ ಕಲ್ಯಾಣದ ನೆರೆಯಲ್ಲಿ ಬರುತ್ತಿರುವ ಸುದ್ದಿ ಮಹಮನೆಗೆ ಮುಟ್ಟಿತು.

ಬಸವರಾಜರು ಪ್ರಭುದೇವರಿಗೆ ತಿಳಿಸಿ, ಕಿನ್ನರಿ ಬೊಮ್ಮಯ್ಯನನ್ನು ಕರೆದು ಮಹದೇವಿಯಕ್ಕನ ನಿಲವನರಿತುಕೊಂಡು ಕರೆದುಕೊಂಡು ಬರಬೇಕೆಂದು ಹೇಳಿಕಳುಹಿದರು. ಟೊಂಕದಲ್ಲಿ ಸುತ್ತಿದ ನಾರಬಟ್ಟೆಯ ತುಂಡು, ಇಳಿಬಿಟ್ಟ ತಲೆಗೂದಲು ಹೊರತಾಗಿ ಮೈಮೇಲೆ ಮತ್ತೆ ಆವರಣವಿಲ್ಲದೆ, ಸಾತ್ವಿಕಭಾವದ-ದಣಿದು ಬಾಡಿದ ಸುಂದರ ದೇಹದ-ಅಕ್ಕನು ಅಲ್ಲಲ್ಲಿಗೆ ನಿಂತು ಕಲ್ಯಾಣಕ್ಕೆ ಕೈಮುಗಿಯುತ್ತ ಬರುತ್ತಿದ್ದಳು. ಆಗ ದಾರಿಯ ಒಂದೆಡೆಯಿಂದ ವಿಶಾಲವಾದ ಕಲ್ಯಾಣನಗರದ ಸುಂದರವಾದ ನೋಟವು ಅಕ್ಕನನ್ನು ಆಕರ್ಷಿಸಿತು. ಅಣ್ಣನ ಕೀರ್ತಿಯ ಕಣಜವೆಂಬಂತೆ ಭಾವಿಸಿ ಬೆರಗು-ನಿಬ್ಬೆರಗಾಗಿ ನಿಂತಳು. ಹಾದಿಯ ಬದಿಯ ಆರಾಮದೆಡೆಯ ಗದ್ದುಗೆಯ ಮೇಲೆ ಕುಳಿತು ಬಗೆದುಂಬಿ ನೋಡಿದಳು. ಕೆಲವು ಕ್ಷಣ ತನ್ನನ್ನೇ ಮರೆತಿದ್ದಳು. ಆ ಹೊತ್ತಿಗೆ ಬಂದ ಕಿನ್ನರಿ ಬೊಮ್ಮಯ್ಯನು ಅಕ್ಕನ ಅಂತರಂಗದ ನಿಲವ ನಿಟ್ಟಿಸಲು ಅನತಿದೂರದಲ್ಲಿ ಎದುರಿನ ಕಲ್ಲುಹಾಸಿನ ಮೇಲೆ ಪದ್ಮಾಸನ ಹಾಕಿ ಕುಳಿತನು. ದೃಷ್ಟಿಯನ್ನು ನಿಲ್ಲಿಸಿ ವಾಯು ಸಂಚಾರವ ತಡೆದು ಅಂತರಾತ್ಮನ ಪ್ರಕಾಶದಲ್ಲಿ ಬಂದು ಅಕ್ಕನ ಅಂತರಂಗವ ನೋಡಿದನು. ಅಲ್ಲಿ 'ಲಿಂಗಭಾವ'ವಲ್ಲದೆ ಮತ್ತೇನೂ ಕಾಣಲಿಲ್ಲ. ಬಳಿಕವನು ಮೆಲ್ಲನೆ ಮರಳಿದನು ವಿಶ್ವಜೀವಕ್ಕೆ! ಆ ಮೊದಲೇ ಅಕ್ಕನು ಬಾಹ್ಯಪ್ರಜ್ಞೆಗೆ ಬಂದಿದ್ದಳು. ಎದುರಿನಲ್ಲಿ ತನ್ನನ್ನೇ ದಿಟ್ಟಿಸಿ ನೋಡುವ ಪುರುಷನೊಬ್ಬನನ್ನು ಕಂಡು, ಹಿಂದೆ ದಾರಿಯಲ್ಲಿ ಕೆಲವು ಸಲ ಬಂದ ಅನುಭವದಿಂದ ಇವನೊಬ್ಬ ಕಾಮಿಯೆಂದು ಬಗೆದಿರಬಹುದು.

"ಬಟ್ಟಹ ಮೊಲೆಯ ಭರದ ಜವ್ವನದ ಚಲುವ ಕಂಡು ಬಂದಿರಣ್ಣಾ !
ನಾನು ಹೆಂಗೂಸಲ್ಲ, ನಾನು ಸೂಳೆಯಲ್ಲ !
ಅಣ್ಣ, ನನ್ನನ್ನು ಕಂಡು ಕಂಡು ಏನೆಂದು ಬಂದಿರಣ್ಣಾ ?
ಚೆನ್ನಮಲ್ಲಿಕಾರ್ಜುನನಲ್ಲದೆ ಮಿಕ್ಕಿನ ಪರಪುರುಷರು
ಎನಗಾಗದ ಮೊರ ನೋಡಿರಣ್ಣ !"

ಎಂದು ಬೀಳುಗಳೆದು ನುಡಿಯುತ್ತಿರುವಾಗ ಬೊಮ್ಮಯ್ಯ ಎದ್ದು ಬಂದು 'ವೈರಾಗ್ಯನಿಧಿಯ ಅಡಿಗಳಿಗೆ ನಮೋ ನಮೋ' ಎಂದು ಎರಗಿದನು. ಅಕ್ಕನು ಆಗ ಕಂಡಳು ಅವನ ಶುದ್ಧಾಂತಃಕರಣವನ್ನು ! 'ಸೋದರನಂತಪ್ಪ ಕಿನ್ನರ' ನಿಗೆ ವಂದಿಸಿದಳು. ಕಿನ್ನರಿಬೊಮ್ಮಯ್ಯನು ಅಕ್ಕನನ್ನು ಪೂಜ್ಯಭಾವದಿಂದ

ಕಂಡು ಮುಂದಾಗಿ ಕರೆದುಕೊಂಡು ಬಂದು, ಅವಳ ಇಚ್ಛೆಯಂತೆ ತ್ರಿಪುರಾಂತಕೇಶ್ವರ ದೇವಾಲಯದಲ್ಲಿ ಕೂಡ್ರಿಸಿ ಮಹಮನೆಗೆ ಬಂದು ಆಕೆಯ ಜ್ಞಾನ-ವೈರಾಗ್ಯಗಳ ನಿಲವನ್ನು ಅರುಹಿದನು. ಪ್ರಭುದೇವರ ಆದೇಶದಂತೆ ಅಕ್ಕನಾಗಮ್ಮನು ಮಹದೇವಿಯಕ್ಕನನ್ನು ಮಹಮನೆಗೆ ಕರೆತಂದು ಉಪಚರಿಸಿದಳು.

ಅಂದು ಶಿವಾನುಭವಗೋಷ್ಠಿಯಲ್ಲಿ ಮಹದೇವಿಯಕ್ಕನಿಗೆ ಸ್ವಾಗತ ! ಆ ವೈರಾಗ್ಯನಿಧಿಯನ್ನು ಕಾಣುವ ಆಕಾಂಕ್ಷೆ ಎಲ್ಲರಿಗೆ ! ಬಾಗಿಲಲ್ಲಿಯೇ ಬಸವ ದಂಡನಾಥರನ್ನು ಕಂಡು ಮಹದೇವಿಯಕ್ಕನು–

"ಅರಸಿ ತೊಳಲಿದರಿಲ್ಲ; ಬಯಸಿ ಹೊಕ್ಕರಿಲ್ಲ; ತಪಸ್ಸು ಮಾಡಿದರಿಲ್ಲ.
ಅದು ತನ್ನ ಮಹಾಕಾಲಕ್ಕಲ್ಲದೆ ಸಾಧ್ಯವಾಗದು !
ಶಿವನೊಲಿದಲ್ಲದೆ ಕೈಗೂಡದು.
ಚೆನ್ನಮಲ್ಲಿಕಾರ್ಜುನನೆನಗೊಲಿದನಾಗಿ
ನಾನು ಸಂಗನ ಬಸವಣ್ಣನ ಶ್ರೀ ಪಾದವ ಕಂಡು ಬದುಕಿದೆನು."

ಎಂದು ಸ್ತುತಿಸಿ ಅವರ ಪಾದಕ್ಕೆರಗಿ ಕೈಮುಗಿದಳು. ಬಸವಣ್ಣನವರು ಮುಂದಕ್ಕೆ ಕರೆದೊಯ್ದು ಪ್ರಭುವಿಗೆ ತೋರಿದರು. ಪ್ರಭುದೇವರು ಸಾಮಾನ್ಯ ಶಿವಯೋಗಿಯಲ್ಲ. ಆಳದಲ್ಲಿ ಅರಸಿನೋಡದೆ ಮೆಚ್ಚುವವರಲ್ಲ !

"ಉದಮದದ ಯೌವನವನೊಳಕೊಂಡು, ಸತಿ ಇತ್ತಲೇತಕ್ಕೆ ಬಂದೆಯವ್ವ?
ಸತಿಯೆಂದರೆ ಮುನಿವರು ಎಮ್ಮ ಶರಣರು !
ನಿನ್ನ ಪತಿಯ ಕುರುಹು ಹೇಳಿದರೆ ಬಂದು ಕುಳ್ಳಿರು;
ಅಲ್ಲದಿರೆ ತೊಲಗು ತಾಯಿ !
ನಮ್ಮ ಗುಹೇಶ್ವರನ ಶರಣರಲ್ಲಿ ಸಂಗಸುಖಸನ್ನಿಹಿತವ ಬಯಸುವರೆ
ನಿನ್ನ ಪತಿ ಯಾರೆಂಬುದ ಹೇಳಾ ಎಲೆ ಅವ್ವ!"

ಎಂದು ಕೇಳಿದರು. ತನಗೆ ಉಗ್ರ ಪರೀಕ್ಷೆ ಕಾದಿದೆಯೆಂದು ತಿಳಿದಳು ಅಕ್ಕ.

"ದೇಹಧರ್ಮವಾದ ಯೌವನದ ಭ್ರಾಂತಿಯಲ್ಲಿ ಸಿಲುಕಿಲ್ಲ ನಾನು, ಅದನ್ನು ಮೀರಿದ್ದೇನೆ ದೇವ! ಲೋಕದ ಪತಿಯ ಬಯಸದೆ ಹರನೇ ಗಂಡನಾಗಬೇಕೆಂದು ಅನಂತಕಾಲ ತಪಿಸುತ್ತಿರುವೆ."

"ಈ ಮಾತು ಹೇಳಲು ಸುಲಭ ! ಆಚರಣೆಗೆ ನಿಲುಕದು! ನೀನು ಕೌಶಿಕನ ಮದುವೆಯಾಗಿ ಹರನೇ ಪತಿಯೆಂದರೆ ಶರಣರು ಮೆಚ್ಚರು."

"ಕೌಶಿಕನನ್ನು ನಾನು ಕನಸುಮನಸಿನಲ್ಲಿಯೂ ಪ್ರೀತಿಸಿಲ್ಲ. ಸಾವಿಲ್ಲದ ಕೇಡಿಲ್ಲದ ಚೆಲುವ ಮಲ್ಲಿಕಾರ್ಜನನಿಗೆ ನನ್ನ ಸೌಂದರ್ಯ ಮೀಸಲಾಗಿದೆ. ತಾಯಿ-ತಂದೆಗಳ ತೊಂದರೆ ತಪ್ಪಿಸಲು ಕೌಶಿಕನ ಮನೆಗೆ ಹೋದೆನು. ಅವನ ಕಾಮುಕ ದೃಷ್ಟಿಯನ್ನು ಬದಲಿಸಲು ಅವನನ್ನು ಭಕ್ತನಾಗುವಂತೆ ಕೇಳಿದೆನು. ಅವನು ಒಪ್ಪಲಿಲ್ಲ. ಆದರಿಂದ ಮೈ-ಮನಗಳನ್ನು ಅವನಿಗೊಪ್ಪಿಸದೆ ಚೆನ್ನಮಲ್ಲಿ ಕಾರ್ಜುನನಿಗೆ ಒಪ್ಪಿಸಲು ಹೊರಟಿರುವೆನು. ಈ ದೇಹವನ್ನು ಕೌಶಿಕ ಮುಟ್ಟಿಲ್ಲ; ಹರಗೆ ಮೀಸಲಾಗಿದೆ."

"ನಿನ್ನ ದೇಹದ ಮೋಹವೇ ನಿನಗಿನ್ನೂ ಬಿಟ್ಟಿಲ್ಲ. ನಿನ್ನ ಸೌಂದರ್ಯದ ಹಮ್ಮು ನಿನ್ನನ್ನು ಆವರಿಸಿದೆ."

"ಸೌಂದರ್ಯದ ಹಮ್ಮು ಕಿಂಚಿತ್ತಾದರೂ ಇಲ್ಲ ಪ್ರಭುವೇ.

ಅಂತರಂಗ ಶುದ್ಧವಾದ ಬಳಿಕ
ದೇಹ, ಕಪ್ಪಗೆ ಕಂದಿದರೇನು? ಮಿಶ್ರನೇ ಮಿಂಚಿದರೇನು?
ಚೆನ್ನಮಲ್ಲಿಕಾರ್ಜುನ ಲಿಂಗವು ಒಲಿದ ದೇಹ ಹೇಗಿದ್ದರೇನು?"

"ಇದು ಬರಿಯ ಬಾಯ ಮಾತು; ನುಡಿಯಂತೆ ನಡೆಯಿಲ್ಲದವರ ಗುಹೇಶ್ವರನ ಶರಣರು ಒಪ್ಪರು"

ದೇವನೊಲಿಯದೆ ನೀನೊಲಿಸಿದೆನೆಂಬುದು ಅದಾವುದಕ್ಕೆ?
ಭಾವ ಶುದ್ಧವಾದಲ್ಲಿ ಸೀರೆಯನುಳಿದು ಕೂದಲಮರೆಯ ಮಾಡಲೇತಕ್ಕೆ?
ಅದು ಅಂತರಂಗದ ನಾಚಿಕೆ ಬಾಹ್ಯದಲ್ಲಿ ತೋರಿತ್ತು!
ಅದು ಗುಹೇಶ್ವರ ಲಿಂಗಕ್ಕೆ ಒಲವರವಲ್ಲ."

ಇದನ್ನು ಕೇಳಿ ಅಕ್ಕನು ಅಂಜದೆ ನುಡಿದಳು.

"ಫಲ ಪಕ್ವವಾದಲ್ಲದೆ ಹೊರಗಣ ಸಿಪ್ಪೆ ಒಪ್ಪಗೆಡದು.
ಕಾಮನ ಮುದ್ರೆಯ ಕಂಡು ನಿಮಗೆ ನೋವಾದಿತ್ತೆಂದು,
ಆ ಭಾವದಿಂದ ಮುಚ್ಚಿದೆ ಇದಕ್ಕೆ ನೋವೇಕೆ??
ಕಾಡದಿರಣ್ಣ ಚೆನ್ನಮಲ್ಲಿಕಾರ್ಜುನ ದೇವರ ದೇವನ ಒಳಗಾದವಳ!"

ಈ ಉತ್ತರದಿಂದ ಶರಣರ ಮನ ಅರಳಿದರೂ ಪ್ರಭು ಒಪ್ಪಲಿಲ್ಲ.

"ದೇವನ ಒಳಗಾದುದು ನಿಜವಾದರೆ, ಅದನ್ನು ನೀನೇ ಹೇಗೆ ಹೇಳಲು

ಾಧ್ಯ? ನಾ ಸತ್ತೆನು ಎಂದು ಹೆಣ ಕೂಗಿದುದುಂಟೇ ! ಹೆಪ್ಪಿಟ್ಟ ಹಾಲು ಹಿಯಪ್ಪುದೇ ?"

"ಸತ್ತ ಹೆಣ ಕೂಗಿದುದುಂಟು. ಹೆಪ್ಪಿಟ್ಟ ಹಾಲು ಸಿಹಿಯಾಗುವದೂ ಉಂಟು."

"ಅದು ಹೇಗೆ?"

"ದೀರ್ಘ ನಿದ್ರೆಯಲ್ಲಿ ಕನಸ ಕಂಡುದನ್ನು, ಎಚ್ಚರಾಗಿ ಹೇಳುವಾಗ ತ್ತ ಹೆಣ ಕೂಗಿದಂತಲ್ಲವೇ? ಹೆಪ್ಪಿಟ್ಟ ಹಾಲು ಹುಳಿಯಾದರೂ ಮಥನ ಂದ ಬೆಣ್ಣೆ-ತುಪ್ಪ ಆಗಿ ಸಿಹಿಯೇ ಆಗುವದು. ಚೆನ್ನಮಲ್ಲಿಕಾರ್ಜುನದೇವ ಲ್ಲಿ ವಾಸ್ತವವಾಗಿ ಬೆರೆತವರೂ ತಾತ್ಕಾಲಿಕವಾಗಿ ಬೇರೆಯಾಗಿ, ನಿಂತು ಡಿಯಬಹುದು. ದೇಹದಲ್ಲಿರುವ ದೇವನೊಡನೆ ಬೆರೆತು. ನಿರ್ಲಿಪ್ತತೆಯಿಂದ ್ಯವಹರಿಸುವದರಲ್ಲಿ ದೋಷವೇನು ಪ್ರಭುವೇ?"

ಪ್ರಭುದೇವರು ಸಂತೋಷಗೊಂಡರು. ಭಕ್ತಿ-ಜ್ಞಾನ-ವೈರಾಗ್ಯಗಳ ಂಗಮವನ್ನು ಕಂಡರು ಅಕ್ಕನಲ್ಲಿ!

"ಅನುವರಿದು ಘನವ ಬೆರಸಿ ಹಿರಿದು ಕಿರಿದೆಂಬ ಭೇದವ ಮರೆದು,
ಲಿಂಗದಲ್ಲಿ ಬೆರಸಿ ಬೇರಿಲ್ಲದಿಪ್ಪ ಹಿರಿಯತನ
ನಮ್ಮ ಮಹಾದೇವಿ ಅಕ್ಕಂಗಾಯಿತ್ತು!
ಬಾ ತಾಯೆ ಕುಳಿತುಕೊಳ್ಳು."

ಎನ್ನುತ್ತ ಶರಣೆಯರ ಸಮೂಹದತ್ತ ನೋಡಿದರು. ಅಕ್ಕನು ಕೈ ುಗಿದು ಬದಿಗೆ ಹೊರಳಿದಳು. ಅಕ್ಕ ನಾಗಲದೇವಿಯು, ನೀಲಲೋಚ ಯು ಎದ್ದು ನಿಂತು ಕೈಮಾಡಿ ಕರೆದು ತಮ್ಮ ಹತ್ತಿರ ಕೂಡ್ರಿಸಿಕೊಂಡರು.

"ರೂಹಿಲ್ಲದಂಗೆ ಒಲಿದವರಿಗೆ ತನುವಿನ ಹಂಗುಂಟೇ?
ಮನವಿಲ್ಲದವರಿಗೆ ಮೆಚ್ಚಿದವಂಗೆ ಅಭಿಮಾನದ ಹಂಗುಂಟೇ?
ದಿಗಂಬರಂಗೆ ಒಲಿದವರಿಗೆ ಕೌಪೀನದ ಹಂಗುಂಟೇ?
ಕೂಡಲ ಸಂಗಮದೇವಯ್ಯಾ ಮಹಾದೇವಿಯಕ್ಕನೆಂಬ ಭಕ್ತೆಗೆ
ಅವ ಹೊರೆಯೂ ಇಲ್ಲ ನೋಡಾ ಪ್ರಭುವೇ?"

ಂದು ಕೊಂಡಾಡಿ ನುಡಿದರು ಬಸವರಾಜರು ! ಬಳಿಕ ಚೆನ್ನಬಸವಣ್ಣನು, ಾಚಯ್ಯ, ಸಿದ್ಧರಾಮಣ್ಣ ಇವರೆಲ್ಲರೂ ಮನಮೆಚ್ಚಿ ಅಕ್ಕನ ಹಿರಿಮೆಯನ್ನು ೊಗಳಿದರು.

ಮುಂದೆ ಕೆಲವು ವರ್ಷ ಮಹಮನೆಯಲ್ಲಿ ನಿಂತು ಅಕ್ಕನು ಜ್ಞಾನಿಗಳ ಮಾರ್ಗದರ್ಶನದಲ್ಲಿ ತನ್ನ ಸಾಧನೆಯನ್ನು ಬಲಿಸಿದಳು. ಪ್ರಭುದೇವರು ಅಕ್ಕನ ಯೋಗಶಕ್ತಿಯನ್ನು ಕಂಡು, ತನು-ಮನೋ-ವಾಯುಗಳನ್ನು ಜ್ಞಾನಾಗ್ನಿಯಲ್ಲಿ ಸುಟ್ಟು ಜೀವನನ್ನು ಪರಮನಲ್ಲಿ ಅನುಗೊಳಿಸಿ ನಿರ್ವಿಕಲ್ಪ ಸಮಾಧಿಯನ್ನು ಸಾಧಿಸುವ ದಿವ್ಯ ಕ್ರಮವನ್ನು ಕ್ರಮವಾಗಿ ಅರುಹಿದರು. ಹಾಗೆಯೇ ಅವರು ಲೀಲಾಜಾಲವಾಗಿ ಅಕ್ಕನಾಗಲಿ, ಬಸವಣ್ಣ, ಮಾಚಯ್ಯ, ಚೆನ್ನಬಸವಣ್ಣ, ಸಕಲೇಶ ಮಾದರಸ, ಕಿನ್ನರಿಬೊಮ್ಮಯ್ಯ, ನೀಲಾಂಬೆ ಮುಂತಾದ ನೂರಾರು ಶರಣ ಶರಣೆಯರಿಗೆ ಅವರವರ ಸಾಧನೆಯ ಘಟ್ಟದಲ್ಲಿ ಮುಂದುವರಿಯುವದಕ್ಕೆ ಪ್ರತ್ಯೇಕವಾಗಿ ಯೋಗಮಾರ್ಗವನ್ನು ಬೋಧಿಸುತ್ತಿದ್ದರು.

ಶೀಲವಂತ, ಪ್ರತಿಭಾವಂತ, ಕಲಾವಂತ,

ಅಲ್ಲಮಪ್ರಭುದೇವರು ಲಿಂಗಲೀಲೆಯಲ್ಲಿ ಮತ್ತೆ ದೇಶಸಂಚಾರಕ್ಕೆ ಅಣಿಯಾಗಿದ್ದರು. ಅಂದು ಮಹಮನೆಯಲ್ಲಿ ಪೂಜೆಗೆ, ಪಾದೋದಕ ಪ್ರಸಾದಕ್ಕೆ ಮಧುವರಸನು ಬಂದಿದ್ದನು. ಪ್ರಸಾದಭವನದಿಂದ ಹೊರಟ ಪ್ರಭುದೇವರು ಮಧುವರಸು ಸಿದ್ಧರಾಮಣ್ಣರೊಡನೆ ತಮ್ಮ ಅನುಷ್ಠಾನ ಮಂದಿರದ ಕಡೆಗೆ ಹೊರಟು ಅಲೆದಾಡುತ್ತ ಅನುಭವ ಮಂಟಪದಲ್ಲಿ ಬಲದ ಗೋಡೆಯ ಮೇಲೆ ಶೀಲವಂತ ಚಿತ್ರಬರೆಯುವಲ್ಲಿ ಬಂದು ನಿಂತರು. ಶೀಲವಂತ ಸಿದ್ಧವಾದ ಚಿತ್ರವನ್ನು ತಿದ್ದಿ ಒಪ್ಪಗೊಳಿಸುತ್ತಿದ್ದನು. ಅದನ್ನು ನೋಡಿದಾಗ ಸಿದ್ಧರಾಮಣ್ಣನವರಿಗೆ ತಿಳಿಯಿತು : ಅನುಭವ ಗೋಷ್ಠಿಯಲ್ಲಿ ಶೀಲವಂತ ಸಮೀಪದಲ್ಲಿ ಕುಳಿತು ಪ್ರಭುದೇವರನ್ನೊಮ್ಮೆ ತನ್ನನ್ನೊಮ್ಮೆ ದಿಟ್ಟಿಸಿ ದಿಟ್ಟಿಸಿ ಏಕೆ ನೋಡುತ್ತಿದ್ದನೆಂಬುದು ! ಶಿಲ್ಪಪ್ರಿಯನಾದ ಸಿದ್ಧರಾಮಣ್ಣನು ಶೀಲವಂತನ ಚಿತ್ರಕಲಾ ಪ್ರೌಢಿಮೆಯನ್ನು ಮೆಚ್ಚಿದ್ದನು. ಕೆಲವು ಸಾರೆ ಚಿತ್ರಬರೆಯುವಾಗ ಅವನ ಹತ್ತಿರ ನಿಂತು ನೋಡಿ ಪ್ರಶಂಸಿಸಿ ಪ್ರೋತ್ಸಾಹಿಸಿದ್ದನು. ಈಗ ಶಿವಯೋಗಿಗಳೂ ಸಚಿವರೂ ಬಂದದ್ದರಿಂದ ಶೀಲವಂತ ವಂದಿಸಿ ಸರಿದು ನಿಂತನು. ಮೂವರೂ ನೋಡಿದರು ಮೌನವಾಗಿ ಆ ಚಿತ್ರವನ್ನು ! ಅದು ಹೀಗಿತ್ತು:

‘ ಮಹಮನೆಯ ಹೆಬ್ಬಾಗಿಲಲ್ಲಿ ಪ್ರಭುದೇವರು ಸಿದ್ಧರಾಮಣ್ಣನೊಡನೆ ಬಂದು ನಿಂತಿದ್ದಾರೆ. ಮಂದಸ್ಮಿತ ಅವರ ಮುಖದಲ್ಲಿ ! ಗಾಂಭೀರ್ಯ

ಸಿದ್ಧರಾಮನ ನಿಲವಿನಲ್ಲಿ ! ಬಸವರಸರು ಕೈಮುಗಿದು ಬಾಗಿ ಪ್ರಾರ್ಥಿಸುತ್ತಿದ್ದಾರೆ. ಅವರ ಕೆನ್ನೆಯ ಮೇಲೆ ಕಂಬನಿಗಳೊಂದೆರಡು ! ಬಾಗಿಲದ ಕಡೆಗೆ ಓರೆಯಾದ ಚೆನ್ನಬಸವಣ್ಣನ ಮುಕುಳಿತ ಹಸ್ತದ ಕುಡಿಯು, ಒಳಗೆ ದಯಮಾಡಿಸಬೇಕೆಂದು ಪ್ರಾರ್ಥಿಸುವದನ್ನು ಸೂಚಿಸುವಂತಿತ್ತು. ಸುತ್ತಲೂ ನಾಲ್ಕೆಂಟು ಜನ ಶರಣರು !'

ಕ್ಷಣಹೊತ್ತಿನ ಮೇಲೆ ಪ್ರಭುಗಳು ಮಧುವರಸನತ್ತ ಹೊರಳಿ ನುಡಿದರು:

" ಕಣ್ಣು ಮನಗಳು ಏಕಾಗ್ರವಾಗಿ ಸಚೇತನ ಕಲೆಯೊಂದಿಗೆ ಯೋಗ ಹೊಂದಿದಾಗ ಬರುವ ಪ್ರತಿಕೃತಿಯಿದು ! ಚೆನ್ನಾಗಿದೆ. ಇವನ ಹೆಸರು?"

" ಶೀಲವಂತ; ಈತ ಹರಳಯ್ಯಶರಣರ ಮಗ ಗುರುವೇ ! "

" ಹೌದೂ ? ಹರಳಯ್ಯನ ಕಾಯಕವೇನು ? ಅವನೂ ಕಲಾಭಿಜ್ಞನೇ ? "

" ಪ್ರತಿಭಾವಂತಕಲಾಭಿಜ್ಞರೇನಲ್ಲ; ಕಸಬುದಾರರು. ಶರಣರ ಪಾದರಕ್ಷೆ ಮಾಡುವದು ಅವರ ಕಾಯಕ. ಸುರಪುರದಲ್ಲಿ ಬಸವರಾಜರು ಈ ಭಕ್ತಿವಂತರನ್ನು ನೋಡಿದಾಗ, ಇವರು ಕೃತ್ರಿಮ ಚರ್ಮದ ಅಟ್ಟೆಗಳಿಂದ ಮೆಟ್ಟು ಮಾಡುವ ಪ್ರಯೋಗ ನಡಿಸಿದ್ದರು. ಅಣ್ಣನವರ ಸೂಚನೆಯಂತೆ ಕಲ್ಯಾಣಕ್ಕೆ ಬಂದು ಹೊಸ ಕೈಗಾರಿಕೆಯಲ್ಲಿ ಯಶಸ್ಸನ್ನು ಪಡೆದಿದ್ದಾರೆ. ಬಾಲ್ಯದಲ್ಲಿಯೇ ಈ ಶೀಲವಂತನಲ್ಲಿ ಚಿತ್ರಕಲೆಯ ಅಭಿರುಚಿ ಇದ್ದುದನ್ನು ತಿಳಿದು ಅಣ್ಣನವರು ಇವನನ್ನು ಅಜಂತೆಯ ಹತ್ತಿರದ ಚೀರಘಟ್ಟೆಯ ಚಿತ್ರಶಲಾಮಂದಿರಕ್ಕೆ ಕಳಿಸಿದ್ದರು. ಅಜಂತೆಯಲ್ಲಿ ಅಣ್ಣನವರ ಪರಿಚಯದ ಐಹೊಳೆಯ ವಿಶ್ವಕರ್ಮಾಚಾರ್ಯರು ಇವನ ಯೋಗಕ್ಷೇಮವನ್ನು ನೋಡಿಕೊಂಡರು. ವೇರೂಳ-ಅಜಂತೆಗಳಲ್ಲಿಯ ಶಿಲ್ಪ ಹಾಗು ಚಿತ್ರಗಳ ಭಾವಪೂರ್ಣತೆಗಳನ್ನು ನೋಡಿ, ಮಾಡಿ, ತೀಡಿ ಅಳವಡಿಸಿಕೊಂಡಿದ್ದಾನೆ ಶೀಲವಂತ ! "

" ನಡೆಯಲ್ಲಿಯೂ ಶೀಲವಂತ ಗುರುದೇವಾ ! " ಸಿದ್ಧರಾಮಣ್ಣನೆಂದನು."

" ಅಂತೆಯೇ ಪ್ರತಿಭಾವಂತ ಕಲಾವಂತ ! ಪರಿಶುದ್ಧತೆಯಿಂದಲೇ ಪೂರ್ಣತ್ವ ! "

ಪ್ರಭುಗಳು ಹೀಗೆ ನುಡಿಯುತ್ತಿರುವಾಗ ಮೂಲೆಯ ಚಿಕ್ಕ ಬಾಗಿಲು ತೆರೆಯಿತು. ಹಿಂದಿನ ಗೋಡೆಯ ಆಚೆಯ ಮಂದಿರದಲ್ಲಿ ಸಿಂಹಾಸನಕಟೆಯುತ್ತಿರುವಲ್ಲಿ–ಬಸವಣ್ಣನವರು ಮಾದರಸರು ಮಾಚಯ್ಯನವರು ಬಂದು ನಿಂತಿದ್ದರು. ಆಗ ಈ ಮಗ್ಗಲಿನಲ್ಲಿ ಪ್ರಭುದೇವರ ದನಿ ಕೇಳಿ ಮಾಚಯ್ಯನು ಆ ಕಡೆಯಿಂದ ಹಾಕಿದ್ದ ಆ ನಡುವಿನ ಬಾಗಿಲ ತೆರೆದನು. ಅವರೆಲ್ಲರು ಇತ್ತ ಬರುವದರಲ್ಲಿದ್ದರು; ಅಷ್ಟರಲ್ಲಿ ಪ್ರಭುದೇವರೇ ಮುಂದಾಗಿ ಅವರಿದ್ದ ಮಂದಿರದೊಳಕ್ಕೆ ಹೋದರು. ಮಧುವರಸು ಸಿದ್ಧರಾಮರು ಅವರನ್ನು ಹಿಂಬಾಲಿಸಿದರು.

ಅವರೆಲ್ಲರು ಅಲ್ಲಿಂದ ಹೋದಬಳಿಕ ಅದುವರೆಗೆ ಸ್ವಲ್ಪದೂರದಲ್ಲಿ ಹಿಂದೆ ನಿಂತಿದ್ದ ಕಲಾವತಿಯು ಶೀಲವಂತನ ಹತ್ತಿರ ಬಂದಳು. ಅಷ್ಟರಲ್ಲಿ ಶೀಲವಂತನು ಕುಂಚವನ್ನು ಬಣ್ಣದಲ್ಲಿ ಅದ್ದಿ ಗೋಡೆಗಭಿಮುಖವಾಗಿ ನಿಂತಿದ್ದನು. ಕಲಾವತಿಯನ್ನು ನೋಡಿರಲಿಲ್ಲ.

ಕಲಾವತಿ ಸಾಮಂತ ಮಂತ್ರಿ ಮಧುವರಸನ ಏಕಮಾತ್ರ ಪ್ರಿಯ ಪುತ್ರಿ. ನೀಲಲೋಚನೆಗೆ ಚಿಕ್ಕ ಗೆಳತಿಯಾಗಿದ್ದಳು. ನೀಲಲೋಚನೆ ಬಸವರಸರನ್ನು ಮದುವೆಯಾಗಿ ಮಹಮನೆಗೆ ಬಂದಬಳಿಕ ಕಲಾವತಿ ವಿದ್ಯಾರ್ಜನೆಯಲ್ಲಿ ಲಲಿತ ಕಲೆಗಳ ನಿರ್ಮಾಣದಲ್ಲಿ ವೇಳೆ ಕಳೆಯುತ್ತಿದ್ದಳು. ಮಧುವರಸನು ಮನೆಯವರೊಡನೆ ಶರಣಧರ್ಮವನ್ನು ಸ್ವೀಕರಿಸಿ ಮಹಮನೆಯ ಸಂಪರ್ಕವನ್ನು ಹೆಚ್ಚಿಸಿಕೊಂಡ ಬಳಿಕ ಕಲಾವತಿಗೆ ನೀಲಲೋಚನೆಯೊಡನೆ ಸ್ನೇಹ ವರ್ತನೆಯು ಮತ್ತೆ ಸಂಭವಿಸಿತು. ಅದೇ ಕಾಲಕ್ಕೆ ಚೀರಘಟ್ಟೆಯಿಂದ ಮರಳಿ ಬಂದ ಶೀಲವಂತ ಮಹಮನೆಯನ್ನು ಚಿತ್ರಗಳಿಂದ ಅಲಂಕರಿಸುವದರಲ್ಲಿ ತೊಡಗಿದ್ದನು. ತನ್ನ ಸಹಜಾಭಿರುಚಿಗನುಸರಿಸಿ ಕಲಾವತಿ ಅಲ್ಲಿ ಬಂದು ನಿಲ್ಲುತ್ತಿದ್ದಳು. ಒಂದು ಸಲ ಆ ಕಲಾವಿದನು ಚಿತ್ರದಲ್ಲಿ ತುಂಬಿ ಮೂಡಿಸಿದ ರಸಭಾವಗಳನ್ನು ಅನುಭವಿಸುವಾಗ ಅಲ್ಲಿ ಕಂಡ ಒಂದು ದೋಷವನ್ನು ಅನಪೇಕ್ಷಿತವಾಗಿಯೇ ಹೇಳಿಬಿಟ್ಟಳು. ನಿಸ್ಪೃಹನಾದ ಶೀಲವಂತ ಕೃತಜ್ಞತೆಯನ್ನು ಸೂಚಿಸಿ ತಿದ್ದಿಕೊಂಡನು. ಮುಂದೆ ಆಕೆ ಬಂದಾಗ ಸರಿದು ನಿಂತು ಕಲೆಯಲ್ಲಿಯ ಆಕೆಯ ಅಭಿಜ್ಞತೆಗೆ ತಲೆವಾಗಿ ಸೂಚನೆಗಳನ್ನು ಸ್ವೀಕರಿಸಹತ್ತಿದನು. ಆ ಮೇಲೆ ಅವರಲ್ಲಿ ಆ ವಿಷಯದಲ್ಲಿ

ಚರ್ಚೆಗಳೂ ನಡೆಯುಹತ್ತಿದ್ದವು. ಈಗ ಹಿಂದೆ ಬಂದು ನಿಂತ ಕಲಾವತಿ ಕೇಳಿದಳು :

"ಪ್ರಭುದೇವರ ಸ್ವಾಗತಕ್ಕೆ ಎಲ್ಲರೂ ಪುರುಷರೇ ಬಂದಿದ್ದರೇ ? ಶರಣೆಯರನ್ನು ನೀವು ನೋಡಿರಲಿಲ್ಲವೇ ?"

ಶೀಲವಂತ ಹೊರಳಿ ನೋಡಿ ಆದರದ ನಗೆಯೊಡನೆ ನುಡಿದನು :

"ಹೌದಲ್ಲ ! ಬೇಗ ಬಂದು ಹೇಳಬಾರದಾಗಿತ್ತೇ ನೀವಿದನ್ನು? ಮುಗಿದು ಹೋಗಿದೆ ಚಿತ್ರ. ತಪ್ಪಿದೆ ನಾನು; ಏನು ಮಾಡಲಿ ?"

"ನೋಡಿ ಸರಿಪಡಿಸಿರಿ; ಅವರೂ ಇದ್ದರಲ್ಲ !"

ಚಿತ್ರದಲ್ಲಿ ನಿಂತವರ ಆಚೆಗೆ ಕಾಣುವ ಹೆಬ್ಬಾಗಿಲಿನ ಒಳಮಗ್ಗಲಿನ ನೆಳಲಿನ ಮಂದಪ್ರಕಾಶದಲ್ಲಿ, ಕೈಯಲ್ಲಿ ಕಲಶ ಹಿಡಿದು ಬಂದು ನಿಂತ ಮಹಿಳೆಯರು ಅಸ್ಪಷ್ಟವಾಗಿ ಕಾಣುವಂತೆ, ಕೆಲವು ಸ್ತ್ರೀಮುಖಗಳನ್ನು ಚೌಕಟ್ಟಿನ ನಡುವೆ ಚಿತ್ರಿಸಿದನು. ತುಂಬ ಹೊಂದಿಕೆಯಾಯಿತು. ಭಾವಪೂರ್ಣವಾಯಿತು.

"ಚಿತ್ರದ ಸುಪ್ತಚೇತನವು ಈಗ ವ್ಯಕ್ತವಾಯಿತು. ಇದನ್ನು ಸೂಚಿಸಿ ಒಳ್ಳೇದು ಮಾಡಿದಿರಿ ದೇವಿಯವರೇ !"

ಎಂದು ಕೃತಜ್ಞತೆಯ ನುಡಿಯನ್ನಾಡಿದನು. ಅಷ್ಟರಲ್ಲಿ ಪ್ರಸಾದಸೇವನೆಯ ನಂತರ ನೀಲಲೋಚನೆ ಕೆಲವು ಶರಣೆಯರೊಡನೆ ಹೊಸ ಚಿತ್ರ ನೋಡುತ್ತ ಅಲ್ಲಿಗೆ ಬಂದಳು. ಕಲಾವತಿ ಅವರನ್ನು ಕೂಡಿಕೊಂಡಳು.

ಶೂನ್ಯ ಸಿಂಹಾಸನ

ವಸುಗುಪ್ತ ಶಿಲ್ಪಿಯು ಅಮೃತಶಿಲೆಯನ್ನು ಕಟೆದು ಸಿಂಹಾಸನವನ್ನು ರಚಿಸಲು ತೊಡಗಿ ಒಂದು ವರ್ಷವಾಗಿತ್ತು. ಸ್ಥೂಲರೂಪವು ಸಿದ್ಧವಾಗಿತ್ತು. ಬಸವರಾಜರು ರೂಪಿಸಿಕೊಟ್ಟ ಷಟ್‌ಸ್ಥಲ ತತ್ವದರ್ಶನದ ನಕ್ಷೆಯಂತೆ ಆ ಸಿಂಹಾಸನ ರೂಪುಗೊಳ್ಳುತ್ತಿತ್ತು. ಚಕ್ರಗಳ ದಳಗಳನ್ನೂ, ಪ್ರಣವಾಕ್ಷರಗಳನ್ನೂ ಷಡಂಗಗಳ ಸಂಜ್ಞೆಗಳನ್ನೂ ಇನ್ನೂ ಕಟೆದು ಬಿಡಿಸಿ ತಿದ್ದುವದಿತ್ತು. ಮುಂದೆ ನಿಂತು ನೋಡುತ್ತಿದ್ದ ಪ್ರಭುದೇವರು ದಂಡನಾಯಕರ ಆ ಆಶಯ

ವನ್ನೆಲ್ಲ ಗುರುತಿಸಿ ಕಣ್ಣರಳಿಸಿ ನಸುನಕ್ಕರು. ಅದನ್ನೇ ನೋಡುತ್ತಿದ ಬಸವಣ್ಣನವರು ಸಮಯ ಸಾಧಿಸಿ ಕೈಮುಗಿದು ಬಿನ್ನವಿಸಿದರು:

"ಪ್ರಭುದೇವಾ, ತಾವು ದೇಶಾಟನಕ್ಕೆ ದಯಮಾಡಿಸುವಿರಿ! ತಮ್ಮ ಅಡಿಯ ಧೂಳಿಯ ತಾಳಿ ನಾಡೆಲ್ಲ ಪಾವನವಾಗುವದು. ನಿಜ! ಆದರೆ ಮರಾಳವಿಲ್ಲದ ಕಮಲಾಕರದಂತಾಗುವದು ಈ ಅನುಭವಮಂಟಪ! ಈ ಮಹಮನೆ!! ಸಿಂಹಾಸನವು ಸಿದ್ಧವಾಗುವ ಹೊತ್ತಿಗಾದರೂ ಮರಳಿ ಬಿಜಯಂಗೈಯಬೇಕು. ಸಿಂಹಾಸನವ ಬರಿದಾಗಿಟ್ಟುಕೊಂಡು ದಾರಿಕಾಯುತ್ತ ಈ ಬಡಭಕ್ತರು ಕೊರಗುವಂತೆ ಮಾಡಬಾರದೆಂದು ಪ್ರಾರ್ಥಿಸುವೆ.

"ಹೌದು ಪ್ರಭುವೇ ಹಾಗೆ ಕರುಣಿಸಬೇಕು."

—ಸಕಲೇಶ ಮಾದರಸು, ಮಾಚಯ್ಯ, ಮಧುವರಸು ಮೂವರೂ ಕೈಮುಗಿದು ಬಸವರಾಜರ ಬೆಂಬಲವಾಗಿ ಬೇಡಿಕೊಂಡರು.

ಸಿದ್ಧರಾಮನು ನುಡಿದನು:

"ಬಸವಣ್ಣನವರಲ್ಲಿ ದಯೆಯಿಟ್ಟು ಕಲ್ಯಾಣಕ್ಕೆ ಬಂದಂತೆ, ಮುಂದೆಯೂ ಬಂದು, ಈ ಶೂನ್ಯಸಿಂಹಾಸನವನ್ನು ನಿಶ್ಶೂನ್ಯಗೊಳಿಸಬೇಕು ಪ್ರಭುದೇವಾ!"

"ಆಗಲಿ ನಿಮ್ಮೆಲ್ಲರ ಇಚ್ಛೆ! ಚಿಂತಿಸಬೇಡ ಬಸವಣ್ಣ, ಶೂನ್ಯವಿಷ್ಟರ ಸಿದ್ಧವಾಗಲಿ, ನಿನ್ನ ಅರಿವಿನ ಅಲಿ ಗುರುವನ್ನು ಗುರ್ತಿಸಲಿ! ಗುರು ಗುಹೇಶ್ವರ ಆಗ ಅದನ್ನು ಆರೋಹಣ ಮಾಡುವನು."

ಎನ್ನುತ್ತ ಮುಂದೆ ನಡೆದರು. ಹಾಗೆಯೇ ಎಲ್ಲರೊಡನೆ ಸಭಾಂಗಣಕ್ಕೆ ಇಳಿದ ಬಳಿಕ ತಾವೊಬ್ಬರೇ ತಮ್ಮ ಏಕಾಂತಭವನಕ್ಕೆ ನಡೆದರು.

ಮರುದಿನ ಬ್ರಹ್ಮಮುಹೂರ್ತದಲ್ಲಿ ಮಹಮನೆಯ ಶರಣರೆಲ್ಲರು ಶುಚಿರ್ಭೂತರಾಗಿ ಶಿವಯೋಗಿದ್ವಯರನ್ನು ವಂದಿಸಿ ಬೀಳ್ಕೊಟ್ಟರು. ಅಲ್ಲಮಪ್ರಭುಗಳು ಸಿದ್ಧರಾಮಣ್ಣನಿಗೆ ಸೊನ್ನಲಗಿಗೆ ತೆರಳಲು ಅಪ್ಪಣೆಕೊಟ್ಟು ತಾವು ಲೀಲಾಮಯವಾಗಿ ನಡೆದು ಬಿಟ್ಟರು.

* * * *

ಮುಂದೆ ಒಂದು ವರ್ಷದ ಬಳಿಕ ಶೂನ್ಯಸಿಂಹಾಸನವು ಸಿದ್ಧವಾಯಿತು. ಅಮೃತಶಿಲೆಯ ಹಲಗೆಗಳಲ್ಲಿ ಭಾಗಭಾಗವಾಗಿ ರಚಿಸಿ ಕೀಲುಗಳಿಂದ ಜೋಡಿಸಲಾಗಿತ್ತು. ಮೂಲಾಧಾರಾದಿ ಷಟ್‌ಚಕ್ರಗಳೆನಿಸಿದ ನಾಲ್ಕು, ಆರು, ಹತ್ತು, ಹನ್ನೆರಡು, ಹದಿನಾರು, ಎರಡು ದಲಗಳುಳ್ಳ ಆರು ಪದ್ಮಗಳನ್ನು

ಒಂದರಮೇಲೊಂದು ಕೂಡ್ರಿಸಿದ್ದರು. ಅವು ಮೇಲೇರುವ ಮೆಟ್ಟಲುಗಳೂ ಆಗಿದ್ದವು. ದಲಗಳಿಗೆ ಬೇಕಾದ ಬಣ್ಣಗಳು, ಆಯಾ ವರ್ಣದ ಮಣಿಗಳನ್ನು ಅಮೃತಶಿಲೆಯಲ್ಲಿ ಕೆಚ್ಚಿ ಕೂಡ್ರಿಸಿದ್ದರಿಂದ ಉಂಟಾಗಿದ್ದವು. ಮೂಲಾಧಾರವು ಚಿನ್ನದ ಬಣ್ಣದಿಂದ, ಸ್ವಾಧಿಷ್ಠಾನವು ಹಾಲಿನ ವರ್ಣದಿಂದ, ಮಣಿಪೂರಕವು ಹರಿದ್ವರ್ಣದಿಂದ (ಎಳೆ ಮುಗುಳಿನ ಬಣ್ಣದಿಂದ), ಅನಾಹತವು ಮಾಂಜಿಷ್ಟ (ಕಿತ್ತಲೆ) ವರ್ಣದಿಂದ, ವಿಶುದ್ಧವು ಕಪೋತ (ಮುಗಿಲ) ಬಣ್ಣದಿಂದ, ಆಜ್ಞಾ ಚಕ್ರವು ಮಾಣಿಕ್ಯ (ಕೆಂದಾವರೆ) ಬಣ್ಣದಿಂದ ಪ್ರಕಾಶಿಸುತ್ತಿದ್ದವು. ನಕಾರಾದಿ ಪ್ರಣವಗಳು ಕ್ರಮವಾಗಿ ಒಂದೊಂದರಲ್ಲಿ ಮಿರುಗುತ್ತಿದ್ದವು. ವಿವಿಧ ಮಣಿ ಗಳನ್ನು ಕೆಚ್ಚಿ ಭೂಜಲಾದಿಗಳ ಸಂಜ್ಞೆಗಳನ್ನು ಮಗ್ಗಲುಗಳಲ್ಲಿ ಕೂಡ್ರಿಸಿದ್ದರು. ಈ ಆರು ಕಮಲಗಳ ಮೇಲೆ ಕೂಡ್ರಿಸಿದ ಜ್ಯೋತಿರ್ವರ್ಣದ ಸಹಸ್ರಾರವು ವಿಶಾಲವಾಗಿತ್ತು. ಅದರ ಕರ್ಣಿಕೆಯಲ್ಲಿ ಸ್ಫಟಿಕದ ಪೀಠವನ್ನು ರಚಿಸಿದ್ದರು. ಅದರಲ್ಲಿ ಸಹಸ್ರ ದಲಗಳು ಪ್ರತಿಬಿಂಬಿಸಿದ್ದವು. ಸಹಸ್ರಾರದ ಮುಂದಿನ ದಲ ಗಳು ಕೆಳಗೆ ಬಾಗಿದ್ದರೆ ಹಿಂದಿನ ದಲಗಳು ನಿಡಿದಾಗಿ ನಿಂತಿದ್ದವು. ತಲೆಯ ಮೇಲೆ ತ್ರಿದಲಾತ್ಮಕ ಶಿಖಾ ಚಕ್ರವು ಚಂದ್ರವರ್ಣದಿಂದ ರಂಜಿತವಾಗಿದ್ದರೆ ಅದರ ಹಿಂಬದಿಯಲ್ಲಿಯ ಗೋಲವು ಸಕಲ ವರ್ಣಗಳು ಸೇರಿ ಆದ ವರ್ಣಾ ತೀತ ಅನಿರ್ವಚನೀಯ ಪ್ರಭೆಯಾಗಿದ್ದಿತು. ನಿಶ್ಶೂನ್ಯದ ಪ್ರತೀಕವದು ! ಬ್ರಹ್ಮ, ಶಿಖೆ, ಪಶ್ಚಿಮ ಚಕ್ರಗಳು ಒಡಲೊಳಗಾಗುವಂತೆ ಓಂಕಾರವು ಅವು ಗಳನ್ನು ಸುತ್ತುಗಟ್ಟಿದ್ದಿತು.

ಅನುಭವ ಮಂಟಪದ ಹಿಂದಿನ ಮಂದಿರದಲ್ಲಿ ಸಿಂಹಾಸನವು ಸ್ಥಾಪಿಸಲ್ಪ ಟ್ಟಿತ್ತು. ಮಂದಿರದ ಗೋಡೆ, ಕಮಾನು, ಕಂಬ, ಮೇಲ್ಕಟ್ಟುಗಳನ್ನೆಲ್ಲ ಶೀಲವಂತನು ಚಿತ್ರಗಳಿಂದ ಸುಳಿವುಗಳಿಂದ ವರ್ಷವೆಲ್ಲ ಶ್ರಮಬಟ್ಟು ಅಲಂಕರಿಸಿ ದನು. ಶುದ್ಧಭಾವದ ಸಲುಗೆಯಿಂದ ಶೀಲವಂತನಿಗೆ ಸಲಹೆ ನೀಡುತ್ತಿದ್ದ ಕಲಾವತಿ, ಅವನ ಪ್ರೋತ್ಸಾಹನೆಯಿಂದ ಶರಣೆಯರ ಶಿವಪೂಜಾಗೃಹಗಳನ್ನು ಶಾಂತ-ಸುಂದರ-ಪ್ರಸನ್ನಭಾವದ ಚಿತ್ರಗಳಿಂದ ಅಲಂಕರಿಸಿದ್ದಳು.

ಪ್ರಭುವಿನ ಪುನರಾಗಮನ

ಮಾಘಮಾಸದಲ್ಲಿ ಶೂನ್ಯಸಿಂಹಾಸನಾರೋಹಣ-ಮಹೋತ್ಸವವು ಜರ ಗುವದೆಂದು ಎರಡು ತಿಂಗಳು ಮೊದಲೇ ವಿಚಾರ ಸಮಿತಿಯು ಪ್ರಕಟನೆ

ಕೊಟ್ಟಿತು. ಈ ವಾರ್ತೆಯನ್ನು ಪ್ರಚಾರದ ಜಂಗಮರು ನಾಡಿನಲ್ಲೆಲ್ಲ ಹರಡಿದರು. ಒಂದು ತಿಂಗಳ ನಂತರ ಮಾಘ ಶುದ್ಧ ಸಪ್ತಮಿಯು ಉತ್ಸವದ ದಿನವೆಂದು ಪುನಃ ಪ್ರಚುರ ಪಡಿಸಿದರು. ಪ್ರಭುದೇವರು ಎಲ್ಲಿದ್ದರೂ ಅವರಿಗೆ ಅರಿಕೆಯಾಗಬೇಕೆಂಬುದು ಸಮಿತಿಯ ಉದ್ದೇಶವಾಗಿದ್ದಿತು. ಅಂತರ್ ಜ್ಞಾನಿಯೂ ಭಕ್ತಾಧೀನನೂ ಆದ ಪ್ರಭುದೇವರು ಎಲ್ಲಿದ್ದರೂ ಬರುವರೆಂದು ಬಸವರಾಜ ದಂಡನಾಯಕರು ನಂಬಿದ್ದರು.

ಉತ್ಸವಕ್ಕೆ ಒಂದು ದಿನ ಮಾತ್ರ ಉಳಿಯಿತು. ಎಲ್ಲಿಯೂ ಪ್ರಭುವಿನ ಸುಳುಹಿನ ಸುದ್ದಿಯಿಲ್ಲ. ಆ ನಿರಂಜನ ಮಹಾಗುರುವನ್ನು ಎಲ್ಲಿ ಕಾಣುವೆ? ಹೇಗೆ ಗುರ್ತಿಸುವೆ ? ಎಂದು ಬಸವಣ್ಣನವರು ಆಲೋಚನಾಮಗ್ನರಾಗಿದ್ದರು. ಗುರುವಿನಾಗಮನವು ಸೂರ್ಯೋದಯದಷ್ಟೇ ಸತ್ಯವೆಂದು ತಿಳಿದಿದ್ದರು. ಅಂದಿನ ರಾತ್ರಿ ಕಡೆಯ ಪ್ರಹರದಲ್ಲಿ ಉಪ್ಪರಿಗೆಯ ಮಾಳಿಗೆಯ ಮೇಲೆ ಅದೇ ನೆನಹಿನಲ್ಲಿ ನಿಂತಿರುವಾಗ ಸ್ವರ್ಲೋಕದಿಂದ ಮಹಾಪ್ರಕಾಶವೊಂದು ಅವರ ತಲೆಯ ಮೇಲೆ ಇಳಿದು ಕಲ್ಯಾಣವನ್ನು ಬೆಳಗಿದಂತೆ ಭಾಸವಾಯಿತು. ವ್ಯೋಮನವೆಲ್ಲ ಆನಂದದಿಂದ ಮಾರ್ದವಗೊಂಡಂತಾಯಿತು. ಬೆಳಗಿನಲ್ಲಿ ಬೇಗ ಪ್ರಾರ್ಥನಾ ಸಭೆಗೆ ಬಂದರು. ಪ್ರಭುದೇವರ ಆಗಮನವನ್ನೇ ಆಗ ಈಗ ಎಂದು ಹಾರೈಸುತ್ತ ತದೇಕಧ್ಯಾನಸ್ಥರಾದ ಶರಣ ಶರಣೆಯರಿಗೆಲ್ಲ ಅಂದು ಆ ಪರಮನಿರಂಜನನು ಬಂದೇ ಬರುವನೆಂಬ ನಂಬಿಗೆ ಮೂಡಿ, ಬಗೆಬಗೆಯ ಶುಭ ಸೂಚನೆ ಕಾಣುತ್ತಿದ್ದವು. ಪ್ರಾರ್ಥನೆಯನಂತರ ಬಸವರಸರು ತಮ್ಮ ಅನುಭವ ತಿಳಿಸಿದೊಡನೆ ಉಳಿದವರೂ ತಮ್ಮ ತಮ್ಮ ಭಾವನೆಗಳನ್ನು ಬಿಚ್ಚಿ ಇಟ್ಟರು. ನಾಳಿನ ಉತ್ಸವಕ್ಕೆ ಗುರುದೇವರು ಕಲ್ಯಾಣಕ್ಕೆ ಬಿಜಯ ಮಾಡುವರೆಂದು ಒಮ್ಮನದಿಂದ ಒಂದೇ ಸ್ವರದಿಂದ ನುಡಿದರು ಸಕಲರು ! ಅವರನ್ನು ವೈಭವ-ವಿಜೃಂಭಣೆಗಳಿಂದ ಸ್ವಾಗತಿಸಿ ನಗರದಲ್ಲಿ ಕರೆತರಬೇಕೆಂದರು ಮಾಚಯ್ಯನವರು ! ಆಗಬಹುದೆಂದರು ಎಲ್ಲರು !

ಮಧುವರಸರು ಸಲ್ಲಿಸಿದ ಮನವಿಯಂತೆ ಬಿಜ್ಜಳರಾಜನು, ಮಹಮನೆಯ ಉತ್ಸವಕ್ಕೆ ದಂಡನಾಯಕ ಬಸವರಸರು ಅಪೇಕ್ಷಿಸುವ ಸಹಾಯ-ಸೌಕರ್ಯಗಳನ್ನೆಲ್ಲ ಒದಗಿಸಬೇಕೆಂದು ರಾಜಾಧ್ಯಕ್ಷಶಾಖೆಗೂ ನಗರಾಧಿಪತಿಗೂ ಆಜ್ಞೆ ಮಾಡಿದನು. ನಗರದ ಸಾಮಂತ ಮನ್ನೆಯರಿಗೆ ಸಕಲ ಮಠಾಧೀಶರಿಗೆ ಉತ್ಸವದ ಆಮಂತ್ರಣ ಕಳಿಸಲ್ಪಟ್ಟವು.

ಉತ್ಸವದ ದಿನ ಮುಂಜಾನೆ ಮಹಮನೆಯಿಂದ ಮೆರವಣಿಗೆ ಹೊರಟಿತು ಎಲ್ಲಕ್ಕೂ ಮುಂದೆ ಚಾಲುಕ್ಯಕಲಚೂರ್ಯಧ್ವಜಗಳೊಡನೆ ಚಿಕ್ಕ ಅಶ್ವದಳವು, ಅದರ ಹಿಂದೆ ಧಂ ಧಳಂ ಧಳಂ ಎಂದು ಮೊಳಗುತ್ತಿದ್ದ ಮಹಾ ಭೇರಿಯನ್ನು ಹೊತ್ತ ಆನೆ, ಅದರ ಹಿಂದೆ ಕಾಲ್ದಳವು. ಸಾಗಿದ್ದವು. ಆ ಮೇಲೆ ಕೊಂಬು, ಹಲಗೆ, ನಗಾರಿ, ಶಂಖ, ಜಾಗಟೆ ವಾದ್ಯಗಳು ಘೋಷಿಸುತ್ತಿದ್ದವು. ಹಿಂದೆ ಶಿವಲಾಂಛನಗಳಿಂದ ಅಲಂಕಾರಿತವಾದ ಅಂದಣವು (ಪಲ್ಲಕ್ಕಿ). ಅದರ ಹಿಂದೆ ಆಮಂತ್ರಿತರಾದ ಅಧಿಕಾರಿಗಳು ಮಹಾಜನರು ಬಳಿಕ ಬಸವರಾಜರು ಮಧುವರಸರು ಚಾಲುಕ್ಯಾಧಿಕಾರಿಗಳ ವೇಷದಲ್ಲಿ, ಅವರ ಎಡಬಲದಲ್ಲಿ ಭಸ್ಮರುದ್ರಾಕ್ಷಿಭೂಷಿತರಾದ ಶರಣರು, ಅವರ ಹಿಂದೆ ಶರಣೆಯರು ನಡೆದಿದ್ದರು. ಆ ಮೇಲೆ ಕಳಸದಾರತಿಯ ನಾಗರಿಕ ಮಹಿಳೆಯರು ಬರುತ್ತಿದ್ದರು. ಎಲ್ಲಕ್ಕೂ ಹಿಂದೆ ರಕ್ಷಕ ರಾಜಭಟರು ನಡೆದಿದ್ದರು.

ಮೆರವಣಿಗೆ ಎಲ್ಲಿಗೆ ಹೋಗುವದು, ಗುರುದೇವರನ್ನು ಎಲ್ಲಿಂದ-ಯಾವ ಬಿಡಾರದಿಂದ-ಕರೆದು ತರುವದು ಎಂಬುದು ಯಾರಿಗೂ ಗೊತ್ತಿಲ್ಲ. ಅವರಿದ್ದಲ್ಲಿ ಹೋಗುವದೆಂಬುದು ಒಂದೇ ಗೊತ್ತು. ತ್ರಿಪುರಾಂತಕೇಶ್ವರ ಮಂದಿರಕ್ಕೆಂದು ಮುಂದಲದವರಿಗೆ ಮಾತ್ರ ತಿಳಿಸಲಾಗಿತ್ತು. ಈ ಬಗೆಯಾಗಿ ಸಾಗಿದ ಮೆರವಣಿಗೆಯು ವಿಕ್ರಮಾದಿತ್ಯರ ವಿಜಯಸ್ತಂಭವಿದ್ದ ನಗರದ ಬಹು ದೊಡ್ಡ ಚೌಕಿಗೆ ಬಂದಿತು. ಅದು ವಿಜಯಸ್ತಂಭವನ್ನು ಸುತ್ತಿ ಬಲಗಡೆಗೆ ದೇವಸ್ಥಾನದ ಬೀದಿಗೆ ಹೊರಳಬೇಕಾಗಿತ್ತು.

ಆ ದಾರಿಯ ಮೊದಲ ಭಾಗದಲ್ಲಿ ಭಿಕ್ಷುಕ-ಸನ್ಯಾಸಿಗಳ ಯಾತ್ರಾ ತಂಡವೊಂದು ನಿಂತಿದ್ದಿತು. ಅಲ್ಲಿಯ ರಾಜಭಟರು ಅವರನ್ನು ಬದಿಗೆ ಸರಿಸಿ ಮಾರ್ಗವನ್ನು ತೆರವಿಡುವದರಲ್ಲಿ ತೊಡಗಿದ್ದರು. ಇನ್ನೊಂದು ಕಡೆಯಿಂದ ಹರಕು ಕಫನಿಯ ಹಾಗು ಅಷ್ಟೇ ಹರಿದ ಮೂಲೆಗಂಬಳಿಯನ್ನು ಹೆಗಲಮೇಲೆ ಹಾಕಿಕೊಂಡ ಮುದಿ ಸನ್ಯಾಸಿಯೊಬ್ಬನು ಬೆನ್ನಟ್ಟಿ ಬರುವ ಹುಡುಗರ ಗುಂಪಿನ ಕಾಟವನ್ನು ತಪ್ಪಿಸಿಕೊಳ್ಳುವವನಂತೆ ಓಡಿ ಬರುತ್ತಿದ್ದನು. ಅಡ್ಡ ಬರುವ ಹುಡುಗರಿಗೆ ಮಂಡಕ್ಕಿ ಸಕ್ಕರೆಯುಂಡೆ ಕೊಟ್ಟು ಮುಂದೆ ಬರುತ್ತಿದ್ದನು. ಸೀ ಉಂಡೆಯ ಆಸೆಯಿಂದ ಕೂಡಿದ ಹುಡುಗರ ಸಂಖ್ಯೆ ಇನ್ನೂ ಹೆಚ್ಚಾಯಿತು. ಅವನು ಅವರಿಂದ ಪಾರಾಗುವದಕ್ಕಾಗಿ ಭಿಕ್ಷುಕ-ಸನ್ಯಾಸಿಗಳ ಗುಂಪನ್ನು

ಹೊಕ್ಕನು. ಹುಡುಗರ ದಂಡೂ ಒಳಗೆ ನುಗ್ಗಿತು. ಆತ ತಪ್ಪಿಸಿಕೊಳ್ಳುವದಕ್ಕೆ ಹುಡುಗರು ಅವನನ್ನು ಹಿಡಿಯುವದಕ್ಕೆ ಓಡಾಡಿದ್ದರಿಂದ ಭಿಕ್ಷುಕ ಸನ್ಯಾಸಿಗಳು ನೂಕು-ನುಗ್ಗಲುಗಳಿಗೊಳಗಾಗಿ ಘಾಸಿಯಾದರು. ಕೆಲವರು ಬಿದ್ದರು. ಕೆಲವು ಹುಡುಗರೂ ಏಟು ತಿಂದರು ಭಿಕ್ಷುಕನೊಬ್ಬನ ಕಾಲ್ಬೆರಳು ಒಡೆದು ರಕ್ತ ಚಿಮ್ಮಿತು. ಏಟು ತಿಂದ ಹುಡುಗನೊಬ್ಬ ಮೂರ್ಛಿತನಾದನು. ಎಲ್ಲರೂ ಹುಯ್ಯೆಂದು ಕೂಗಿ ಹುಯ್ಯಲೆಬ್ಬಿಸಿದರು. ತಿರುವಿನ ದಾರಿಯ ಮೇಲೆ ನಡೆದ ಈ ಗೊಂದಲವು ಉತ್ಸವದಲ್ಲಿದ್ದವರಿಗೆಲ್ಲ ಸಹಜ ಕಾಣುತ್ತಿತ್ತು. ಹಲವರು ಆ ಕಡೆಗೆ ಓಡಿದರು.

ಅದೇನು ದೊಂಬಿಯೆಂದು ಬಸವರಾಜರು ಮಧುವರಸರು ಅಲ್ಲಿಗೆ ಧಾವಿಸಿದರು. ರಾಜಭಟರ ಪ್ರಯತ್ನದಿಂದ ಜನರು ಹಿಂದಕ್ಕೆ ಸರಿದು ಕೆಲಮಟ್ಟಿಗೆ ಬಯಲಾಗಿತ್ತು.

ಸಕ್ಕರೆಯುಂಡೆಯ ಸನ್ಯಾಸಿಯು ಬಿದ್ದ ಭಿಕ್ಷುಕನ ಗಾಯವಾದ ಬೆರಳಿಗೆ ತನ್ನ ಕಪನಿಯನ್ನು ಹರಿದು ಪಟ್ಟೀ ಕಟ್ಟುತ್ತಿದ್ದನು. ಅವನಿಂದಲೇ ಈ ಗೊಂದಲವಾಯಿತೆಂದು ಅವನನ್ನು ಚಾವಡಿಗೆ ಒಯ್ಯಲು ಭಟನೊಬ್ಬನು ಅವನ ರಟ್ಟೆಯನ್ನು ಹಿಡಿದಿದ್ದನು. ಸನ್ಯಾಸಿಯು ಅದನ್ನು ಗಮನಿಸದೆ ತನ್ನ ಕೆಲಸದಲ್ಲಿಯೇ ಇದ್ದನು. ಇದೆಲ್ಲವನ್ನು ನೋಡುತ್ತ ನಿಂತಿದ್ದ ಬಸವರಾಜರನ್ನೂ ಮಧುವರಸರನ್ನೂ ಕಂಡು ಭಟನು ಸರಿದು ನಿಂತನು. ಪಟ್ಟೀಕಟ್ಟಿ ಸನ್ಯಾಸಿ ಕಂಬಳಿಯನ್ನು ಹೆಗಲಿಗೇರಿಸಿ ಎದ್ದನು. ಕೂಡಲೇ ಬಸವರಾಜರು ಅವನ ಕಾಲಿಗೆರಗಿದರು. ಬಳಿಕ ಕೈಹಿಡಿದು ಕರೆದುಕೊಂಡು ನಡೆದರು. ಅದನ್ನು ಕಂಡ ಜನರು ಅವಾಕ್ಕಾದರು. ಜನಜಂಗುಳಿಯ ನಿಯಂತ್ರಣದ ಬಗೆಗೆ ಭಟರಿಗೆ ಸಲಹೆ ನೀಡಿ ಮಧುವರಸರೂ ಮರಳಿದರು. ಬಸವರಾಜರು ಸನ್ಯಾಸಿಯ ಕಾಲು ತೊಳೆದು ಹೊಸಕಪನಿಯನ್ನು ತೊಡಿಸಿ ಅಂದಣವನ್ನೇರಿಸಿದರು. 'ನಿರಂಜನ ಜಗದ್ಗುರು ಅಲ್ಲಮಪ್ರಭುದೇವ ಉಘೇ ಉಘೇ' ಎಂಬು ಜಯಧ್ವನಿಯಾಯಿತು. ವಿಜಯಸ್ತಂಭವನ್ನು ಸುತ್ತಿ ಮೆರವಣಿಗೆ ಮಹಮನೆಗೆ ನಡೆಯಿತು.

ಬಸವರಾಜರ ಈ ವರ್ತನೆಯಿಂದ ನಾಗರಿಕರಲ್ಲಿ ಹಲವರಿಗೆ ಆಶ್ಚರ್ಯವಾಯಿತು. ಈ ತಿರುಕನನ್ನು ಸ್ವಾಗತಿಸುವದಕ್ಕೇ ಇಷ್ಟೆಲ್ಲ ಸೌಭಾಗ್ಯವೇ

ಎಂದು ಅಣಕನಾಡಿ ಕೆಲವು ಸಾಮಂತ ಮನ್ನೆಯರು ದೂರ ಸರಿದರು. ಆರೋಗಣೆಗೆಂದು ಮಹಮನೆಗೆ ಬಂದು ಮೆರವಣಿಗೆಯಲ್ಲಿ ಸೇರಿದ ಕೆಲವರು ಜಂಗಮರು ಒಳಗೆ ಮುನಿದರೂ ಸದ್ಯಕ್ಕೆ ಬಾಯಿ ಮುಚ್ಚಿಕೊಂಡಿದ್ದರು. ಉತ್ಸವವು ಮಹಮನೆಗೆ ಬಂದಾಗ ಹೊರಗಿನ ಬಹುಜನರು ಮತ್ತೆ ಸೇರಿ ಹೊರಡುವಾಗಿನ ಹತ್ತುಪಟ್ಟು ಜನರಾಗಿದ್ದರು. ಅವರೆಲ್ಲರೂ ಮಹಮನೆಯನ್ನು ಹೊಕ್ಕರು. ಅಲ್ಲಿ ಸ್ನಾನಕ್ಕೆ ಬಂದವರಿಗೆಲ್ಲ ಸ್ನಾನ, ಭೋಜನದಾವರಣಲ್ಲಿ ಕುಳಿತವರಿಗೆಲ್ಲ ಭೋಜನ ಸದಾ ಸಿದ್ಧವಾಗಿದ್ದವು. ಅಲ್ಲಮಪ್ರಭುಗಳ ಸತ್ಕಾರದಲ್ಲಿ ಬಸವರಸರು, ಚೆನ್ನಬಸವಣ್ಣನು ತೊಡಗಿದ್ದರು. ಉಳಿದವರು ಉಳಿದ ವ್ಯವಸ್ಥೆ ನೋಡುತ್ತಿದ್ದರು.

ಜನದಟ್ಟಣೆ ಮಿತಿಮೀರಿ ತಲಕುಮಲಕಾಯಿತು. ಭಕ್ತರೂ ಭವಿಗಳೂ ಬೆರೆತುಹೋಗಿದ್ದರು. ಅದನ್ನು ನೋಡಿ, ಇದುವರೆಗೆ ಅಶನಕ್ಕೆ ಅವಕಾಶ ಸಿಗದಿದ್ದ ಅಭಿಮಾನಿ ಜಂಗಮರಿಬ್ಬರು ಗೋಡೆಯ ಹತ್ತಿರ ನಿಂತು "ಇದುವರೆಗಾದ ವರ್ಣಸಂಕರ ಒಂದು ಬಗೆ! ಇಂದು ಭಕ್ತ-ಭವಿಗಳನ್ನು ಒಂದುಗೂಡಿಸುವ ಈ ಸಂಕರ ಹೊಸಬಗೆ! ಬಸವನೊಬ್ಬ ಡಂಭಾಚಾರಿ, ಪ್ರಭುವೆಂಬವನೊಬ್ಬ ಅನಾಚಾರಿ ತಿರಕ!" ಎಂದು ಆಕ್ರೋಶದಿಂದ ನುಡಿಯುತ್ತಿದ್ದರು. ಹಿಂದೆ ನಿಂತ ಇನ್ನೊಬ್ಬನು ಇದನ್ನು ಕೇಳಿ "ಇದೇನು ಅಣ್ಣಗಳಿರಾ ಹೀಗೆ ನುಡಿಯುತ್ತಿರುವಿರಿ. ಹುಟ್ಟಿದಾಗೆಲ್ಲರೂ ಭವಿಗಳೇ! ಗುರು-ಕೃಪಾದೃಷ್ಟಿ ಬಿದ್ದ ಮೇಲೆಯೇ ಭವಿಗಳು ಭಕ್ತರಾಗುವರು. ಮಹಮನೆಯನ್ನು ಹೊಕ್ಕ ಭವಿಗಳು ಭಕ್ತರಾಗಿ ಹೊರಬರುವದನ್ನು ಅರಿಯಿರಾ?" ಎಂದು ಜಂಕಿಸಿ ನುಡಿದನು. ಆ ಜಂಗಮರು ಹೊರಳಿ ನೋಡಿ ನಾಚಿಕೊಂಡು ಅಲ್ಲಿಂದ ಕಾಲ್ತೆಗೆದರು. ನಾಲ್ಕೈದು ಗಳಿಗೆಗಳಲ್ಲಿ ಸುತ್ತಲೂ ಸಮಾಧಾನ ಪಸರಿಸಿತು.

ಶೂನ್ಯ ಸಿಂಹಾಸನಾರೋಹಣ

ಬಸವರಸರು ಸ್ವಹಸ್ತದಿಂದ ಪ್ರಭುವಿಗೆ ಮಂಗಲಸ್ನಾನ ಮಾಡಿಸಿ ಗುರುಮನೆಯ ಪೀಠದಲ್ಲಿ ಕೂಡ್ರಿಸಿ ಜವನಿಕೆಯೆಳೆದರು. ಒಂದು ಘಳಿಗೆಯ ಮೇಲೆ ಅವರ ಕೈ ಹಿಡಿದುಕೊಂಡು ಶೂನ್ಯ ಸಿಂಹಾಸನವಿದ್ದ ಮಂದಿರದಲ್ಲಿ ಬಂದರು. ಅಲ್ಲಿ ಭಕ್ತರು ಶರಣರು ಕಿಕ್ಕಿರಿದು ತುಂಬಿದ್ದರು. ಅವರೆಲ್ಲರ ಉಘೇ ಉಘೇ,

ಹರಹರಮಹಾದೇವ ಜಯಘೋಷಗಳಿಂದ ಮಹಮನೆ ಧುಮಿಧುಮಿಸುತ್ತಿರಲು ಶೂನ್ಯಸಿಂಹಾಸನಾಧೀಶ ಅಲ್ಲಮಪ್ರಭುದೇವರು ಬಸವಣ್ಣನವರ ಕೈ ಹಿಡಿದು ಅದರ ಮೇಲೆ ಆರೋಹಣ ಮಾಡಿದರು. ಪೂಜಾಸಾಧನಗಳು ಸಿದ್ಧವಾಗಿದ್ದವು. ದಂಡನಾಯಕರು ಪಾದಪೂಜೆಗೈದರು, ಸ್ತೋತ್ರ ಪಾಠಗಳಾದವು. ಉಪನಿಷದಾಗಮಗಳಿಂದ ಆಯ್ದ ವಾಕ್ಯಗಳ-ಸಿದ್ಧಾಂತ ವಚನಗಳ ಪಠನವಾದವು. ಮಂಗಲಗೀತಗಳಾದವು. ಪ್ರಸಾದವಿತರಣೆಯಿಂದಆರಂಭವಾಗಿ ಮಹಾಗಣಾರಾಧನೆ ದಿನವೆಲ್ಲ ನಡೆಯಿತು. ಪ್ರಭುದೇವರು ಶೂನ್ಯವನ್ನೇರಿದ ಭಾವವು, ತಾತ್ವಿಕವಾಗಿ ಅರ್ಥೈಸಿಕೊಳ್ಳುವವರಿಗೆಲ್ಲ ಪರಮ ತೃಪ್ತಿಯನ್ನುಂಟುಮಾಡಿದ್ದರಿಂದ ಅವರಿಗೆ ಹಸಿವೆಯ ಅರಿವೇ ಇರಲಿಲ್ಲ. ಆದಾಗಿ ಇತ್ತ ಆರೋಗಣೆಗೈದು ಭೋಜನಾವರಣದಿಂದ ಜನರ ತಂಡದ ಮೇಲೆ ತಂಡಗಳು ಹೊರಗೆ ಬರುತ್ತಿದ್ದಂತೆ ಹೊರಗೂ ಸಂತೃಪ್ತಿ ಸರ್ವತ್ರ ವ್ಯಾಪಿಸಿತು. ನಗರದ ಪ್ರತಿಯೊಂದು ಮಠದಲ್ಲಿಯೂ ಸಾವಿರಗಟ್ಟಲೆ ಜನರಿಗೆ ಆರೋಗಣೆ ನಡೆದಿತ್ತು. ಮರುದಿನ ಬಿಜ್ಜಳನಿಗೆ ವರದಿಯಾದಾಗ ಲಕ್ಷದ ಮೇಲೆ ತೊಂಬತ್ತಾರು ಸಾವಿರ ಹೊರಗಿನ ಜನರಿಗೆ ಊಟ ನಡೆದಿದ್ದಿತ್ತೆಂದು ತಿಳಿಸಲಾಗಿತ್ತು.

ಆ ದಿನ ಸಾಯಂಕಾಲದ ಬಹು ದೊಡ್ಡ ಸಭೆಯಲ್ಲಿ ಪ್ರಭುದೇವರು ಪ್ರವಚನ ಮಾಡಿ ಶಿವಾದ್ವೈತ ಸಂದೇಶವನ್ನು ಸಾರಿದರು. ಶರಣಧರ್ಮದಲ್ಲಿಯ ಸಾಧಕಾಂಗಗಳನ್ನು ಸ್ಥೂಲವಾಗಿ ವಿವರಿಸಿ, ಐಕ್ಯಸ್ಥಲದ ಅಂತ್ಯದಲ್ಲಿ ಜೀವನ್ಮುಕ್ತನಾಗಿರುವ ಶಿವಯೋಗಿಯ ಲಕ್ಷಣಗಳನ್ನು ಕೆಳಗಿನ ವಚನಗಳಿಂದ ನಿರೂಪಿಸಿದರು.

"ತೆರೆಯ ಮರೆಯ ಕುರುಹೆಂಬುದೇನೋ?
ಒಳಗೆ ಲಿಂಗವ ಅನುವಿಡಿದ ಬಳಿಕ
ಪೂಜಿಸುವನಾರೋ, ಪೂಜಿಸಿಕೊಂಬ ದೇವನಾರೋ?
ಹಿಂದು ಮುಂದು, ಮುಂದು ಹಿಂದಾಯಿತ್ತು ಗುಹೇಶ್ವರಾ!
ನಾನು ನೀನು, ನೀನು ನಾನಾದ ಬಳಿಕ ಮತ್ತೇನುಂಟು ಹೇಳಾ?
ನೆನೆಯೆಂದರೆ ಏನ ನೆನೆವೆನಯ್ಯಾ!
ಎನ್ನ ಕಾಯವೇ ಕೈಲಾಸವಾಯಿತ್ತು; ಮನ ಲಿಂಗವಾಯಿತ್ತು
ತನು ಸೆಜ್ಜೆಯಾಯಿತ್ತು!

ನೆನೆವರೆ ದೇವರುಂಟೇ ? ನೋಡುವರೆ ಭಕ್ತರುಂಟೇ ?
ಗುಹೇಶ್ವರಾ ಲಿಂಗಲೀಯವಾಯಿತ್ತು.

*　　*　　*　　*

ಪ್ರವಚನಸಭೆ ಮುಕ್ತಾಯಗೊಂಡ ಬಳಿಕ ಜನರು ಹೊರಬರುತ್ತಿರುವಾಗ, ಹೊರಗೆ ಮಾರ್ಗದ ಬದಿಯಲ್ಲಿ ಬೆಳದಿಂಗಳಲ್ಲಿ ಇಬ್ಬರು ಗೌರವದ ವೇಷದವರು ನಿಂತಿದ್ದರು. ಅವರಲ್ಲೊಬ್ಬನು ಸ್ವಲ್ಪ ಮುಂದೆ ಹೋಗಿ ಬಾಗಿಲಲ್ಲಿದ್ದ ಭಟನೊಬ್ಬನನ್ನು ಕರೆದು ಗುಟ್ಟಾಗಿ ಏನೋ ಹೇಳಿದನು. ಭಟನು ಅವಸರದಿಂದ ಒಳಗೆ ಹೋಗಿ ಬಸವರಾಜನನ್ನು ಕರೆದುಕೊಂಡು ಬಂದನು. ಅದುವರೆಗೆ ಅಲ್ಲಿ ನಿಂತಿದ್ದ ಆ ಮಂಚಣ್ಣನಾಯಕನು ಅವರನ್ನು ಗಿಡದ ಬುಡದಲ್ಲಿ ನಿಂತಿದ್ದ ಬಿಜ್ಜಳರಾಜನ ಹತ್ತಿರ ಕರೆದುಕೊಂಡು ಹೋದನು.

*　　*　　*　　*

ಅಂದು ಈ ಮೊದಲು ಬೇಗಿನ ಹೊತ್ತಿನಲ್ಲಿ ಮಂಚಣ್ಣನು ಬಿಜ್ಜಳರಾಜನ ಹತ್ತಿರ ಮಹಮನೆಯ ಉತ್ಸವದ ಬಗ್ಗೆ ಮಾತನಾಡುತ್ತ ಕುಳಿತಿದ್ದನು. 'ರಾಜವೈಭವದಿಂದ ಹೋದ ಮೆರವಣಿಗೆಯಲ್ಲಿ ತಿರಕನೊಬ್ಬನನ್ನು ಪ್ರಭುವೆಂದು ಪಲ್ಲಕ್ಕಿಯಲ್ಲಿ ಕುಳ್ಳಿರಿಸಿಕೊಂಡು ಬಂದನು ಬಸವಣ್ಣನು! ಶರಣಧರ್ಮದ ಹುಚ್ಚಾಟಕ್ಕೆ ಇದೊಂದು ನಿದರ್ಶನ! ಎಂದಿಗೂ ಇವರ ನಡೆಯೇ ಹೀಗೆ! ಹುಚ್ಚಾಟವೆಂದರೆ ಜನ ನೆರೆಯುವವು ಸಹಜ' ಎಂದು ವಿಡಂಬಿಸಿ ನುಡಿದನು. ಇದಕ್ಕೂ ಮೊದಲು ಕೆಲದಿನಗಳಿಂದ ರತ್ನಖಚಿತಸಿಂಹಾಸನ ರಚನೆ, ನಾಡಿನಲ್ಲಿ ಅದರ ಪ್ರಚಾರ ಇವುಗಳಿಗೆ ರಾಜಕೀಯ ಬಣ್ಣ ಬಳಿದು ವಿರೋಧಿಗಳು ರಾಜನ ಮನದಲ್ಲಿ ಸಂದೇಹದ ಗಾಳಿಯನ್ನು ಎಬ್ಬಿಸಿದ್ದರು. ಈಗ ಮಂಚಣ್ಣನ ಮಾತಿನಿಂದ ಆತನು ಎಲ್ಲ ಸಂದೇಹಗಳ ಪರಿಹಾರಕ್ಕಾಗಿ, ಮಹಮನೆಯ ಕಾರ್ಯಕಲಾಪಗಳನ್ನು ತಾನೇ ಗುಟ್ಟಾಗಿ ಹೋಗಿ ನೋಡಿ ಬರಬೇಕೆಂದು ನಿಶ್ಚಯಿಸಿದನು. ಅದಕ್ಕಾಗಿ ಮಧುವರಸನನ್ನು ಕರೆಯಿಸಿ, ವೇಷ ಮರೆಮಾಡಿ ಬರುವ ತನಗೂ ಮಂಚಣ್ಣನಿಗೂ ಪ್ರವಚನ ಸಭೆಯಲ್ಲಿ ಸ್ಥಳದ ವ್ಯವಸ್ಥೆ ಮಾಡಬೇಕೆಂದೂ, ತಾವು ಮರಳಿ ಬರುವವರೆಗೆ ಈ ಮಾತು ಗುಟ್ಟಾಗಿರಬೇಕೆಂದೂ ಆಜ್ಞೆ ಮಾಡಿದ್ದನು. ಬಿಜ್ಜಳನ ಮನದಲ್ಲಿ ಮೂಡಿದ ಸಂಶಯಗಳ ನಿವಾರಣೆಗೆ ಅವನ ಈ ಕ್ರಮವು ಒಳ್ಳೆಯದೇ ಆಗಿದೆಯೆಂದು

ಮಧುವರಸನು ತಿಳಿದನು. ಪ್ರವಚನಸಭೆಯಲ್ಲಿ ವೇದಿಕೆಯು ಚೆನ್ನಾಗಿ ಕಾಣುವ ಮುಂದ ಪ್ರಕಾಶದ ಒಂದು ಸ್ಥಳದಲ್ಲಿ, ಸಂತಳಿಗೆ ನಾಡಿನ ಇಬ್ಬರು ಸಾಮಂತರಿಗೆಂದು ಎರಡು ಭದ್ರಾಸನಗಳ ವ್ಯವಸ್ಥೆ ಮಾಡಿ ಈ ವೇಷಧಾರಿಗಳನ್ನು ಕೂಡ್ರಿಸಿದ್ದನು, ಸಭೆ ಮುಗಿದ ಬಳಿಕ ಅವರಿಬ್ಬರು ಹೊರಗೆ ಬಂದು ಹೀಗೆ ಬಸವರಾಜರನ್ನು ಬರಮಾಡಿಕೊಂಡಿದ್ದರು.

ಬಸವರಾಜರು ಕೈಮುಗಿದು ಎಂದರು :

" ಅಪರಿಚಿತರಂತೆ ಬಂದು ಹೀಗೆ ಹೊರಗೆ ನಿಲ್ಲಬೇಕೇ ದೊರೆಗಳು ? ನಾನೇನಾದರೂ ಅಪರಾಧ ಮಾಡಿದೆನೇ ? ತಮಗೆ ಅತೃಪ್ತಿಯಾಗುವದೇನಾದರೂ ನಡೆಯಿತೇ ? "

" ನಿಮ್ಮ ದಾಸೋಹ ಸಮಾರಂಭಗಳಿಂದ ಕಲ್ಯಾಣವೆಲ್ಲ ಸಂತೃಪ್ತವಾಗಿರುವಾಗ ನಮ್ಮ ಅತೃಪ್ತಿಗೆ ಕಾರಣವೇನು ? ಇಂದು ನಾವು ಅಪರಿಚಿತರಂತೆ ಬಂದು ಅಪರಿಚಿತರಂತೆ ಹೋಗುವದರಿಂದಲೇ ಪರಮ ಆನಂದವಾಗುತ್ತಲಿದೆ. ಪ್ರವಚನದ ಆರಂಭದಲ್ಲಿಯೇ ನಾವಿಲ್ಲಿಗೆ ಬಂದೆವು. ಪ್ರವಚನವನ್ನೂ ಕೇಳಿದೆವು. ನಿಮ್ಮ ಗುರುದೇವರು ನಿಜವಾಗಿ ಹಿರಿಯ ಅನುಭಾವಿಗಳು ! ಪರಾಜ್ಞಾನದ ಪ್ರತ್ಯಕ್ಷಮೂರ್ತಿ ! ಇಂತಹ ಮಹಾತ್ಮರು ಅವತಾರಪುರುಷರೆಂಬುದು ನಿಜ ! ಅವರ ವಾಕ್ ಶಕ್ತಿ ಸ್ಫೂರ್ತಿದಾಯಕವಾಗಿದೆ. ನಿಮ್ಮ ಪ್ರತಿಯೊಂದು ಕಾರ್ಯವೂ ಮಹತ್ತರವಾಗಿವೆ ಬಸವಣ್ಣನವರೇ; ಆದರೆ ಅವುಗಳಿಗೆ ರಾಜಕೀಯ ಬಣ್ಣ ಹಚ್ಚಿ ಹೇಳುತ್ತಿದ್ದಾರೆ ಕೊಂಡೆಯರು. ಪ್ರಭುದೇವರನ್ನೂ ಅರಿಯದೆ ಸಾಮಾನ್ಯ ತಿರುಕನೆಂದು ಅಂದವರೂ ಇದ್ದಾರೆ. ಅದರಿಂದಲೇ ನಾವು 'ಹೀಗೆ ಬಂದು ನೋಡುವ' ಸಣ್ಣ ಮನಸ್ಸು ಮಾಡಬೇಕಾಯಿತು ಈಗ ಆ ಕಲುಷಿತಬುದ್ಧಿಯನ್ನೂ ಬದಿಗೊತ್ತಿ ಪುನೀತರಾಗಿ ಮರಳುತ್ತಿದ್ದೇವೆ."

" ತಮ್ಮ ಸದಿಚ್ಛೆಗೆ ನಾನು ಕೃತಜ್ಞನಾಗಿದ್ದೇನೆ" ಬಸವರಾಜರೆಂದರು.

ಅಷ್ಟರಲ್ಲಿ ಮಧುವರಸನೂ ಚೆನ್ನಬಸವಣ್ಣನೂ ಪ್ರಭುದೇವರನ್ನು ಅವರ ಏಕಾಂತಸ್ಥಲಕ್ಕೆ ಬಿಜಯಂಗೈಸಿ, ಮಹಾದ್ವಾರದ ಹೊರಗೆ ಬಂದು ಬಿಜ್ಜಳನನ್ನು

ಕಂಡು ಕೈಮುಗಿದರು. ಬಳಿಕ ಒಳಗೆ ದಯಮಾಡಿಸಬೇಕೆಂದು ಅವರೆಲ್ಲರು ಬಿಜ್ಜಳನಿಗೆ ಬಿನ್ನವಿಸಿದರು.

"ಆಗಲಿ ನಡೆಯಿರಿ; ನಾವು ಶೂನ್ಯಸಿಂಹಾಸನವನ್ನು ನೋಡಬಹುದೇ?" ಎನ್ನುತ್ತ ಬಿಜ್ಜಳನು ಮಹಮನೆಗೆ ಮರಳಿದನು.

"ಅಗತ್ಯವಾಗಿ ನೋಡಬಹುದು ದೊರೆಗಳೇ," ಎಂದು ಬಸವರಾಜರು ಮುಂದಾಗಿ ಕರೆದುಕೊಂಡು ಹೋದರು.

ಢಾಳವಾದ ದೀಪದ ಬೆಳಕಿನಲ್ಲಿ ಹೊಳೆಯುತ್ತಿತ್ತು ಶೂನ್ಯಪೀಠ. ಸಾಧಕಾಂಗದ ಪ್ರತೀಕವಾಗಿ ಇದು ರಚಿತವಾಗಿದೆಯೆಂಬುದನ್ನೂ ಪ್ರಭುದೇವರು ಆರೋಹಿಸುವದು ಆತ್ಮಸಾಕ್ಷಾತ್ಕಾರದ ಪ್ರತೀಕವೆಂದೂ ಬಸವಣ್ಣನವರು ಭಾಗ ಭಾಗವನ್ನು ತೋರಿಸುತ್ತ ವಿವರಿಸಿದರು. ಬಿಜ್ಜಳನು ತುಂಬುಗೊರಳಿನಿಂದ ನುಡಿದನು.

"ಇದೊಂದು ಅಮೌಲ್ಯ ಕಲಾಕೃತಿ! ಇದನ್ನು ರಚಿಸಿದ ಶಿಲ್ಪಿ ಭಾರತದಲ್ಲಿಯೇ ಶ್ರೇಷ್ಠ ಕಲಾವಿದ! ಇದು ಸಭಾಮಂದಿರದಲ್ಲಿ ಸ್ಥಾಪಿಸಲ್ಪಟ್ಟಿಲ್ಲ? ಇದರ ಮೇಲೆ ಗುರುದೇವರು ಕುಳಿತುಕೊಳ್ಳುವದಿಲ್ಲವೇ? ಇಂದು ಆರೋಹಣ ಮಾಡಿದರೆಂದು ಕೇಳಿದೆವು."

"ಹೌದು, ಇಂದು ಗುರುಗಳು ಆರೋಹಿಸಿದುದು ಒಂದು ತಾತ್ವಿಕ ಸಂಕೇತ ಮಾತ್ರ! ಗುರುವಿನ ಅನುಗ್ರಹವಾದಾಗ ಪ್ರತಿಯೊಬ್ಬ ಸಾಧಕನ ಹೃದಯದಲ್ಲಿಯೂ ಈ ಶೂನ್ಯಾರೋಹಣದ ಮಹಾಕಾರ್ಯ ನಡೆಯುತ್ತಿದೆ. ನಿತ್ಯದ ಹೊರಗಿನ ವ್ಯವಹಾರವು ಇದಾಗಿರುವದಿಲ್ಲ"

ಸಕಲೇಶ ಮಾದರಸನ ಈ ಮಾತು ಬಿಜ್ಜಳನ ಕುತೂಹಲವನ್ನು ಕಳೆದಿತ್ತೋ ಇಲ್ಲವೋ? ಆತನು ಕೈಮುಗಿದು ಹೊರಳಿದನು.

---

೧೨. ದ್ವೇಷದ ಬಳ್ಳಿಗೆ ನೀರೆರೆದ ಘಟನೆಗಳು

ಮತದ್ವೇಷ ವ್ಯೈವೆತ್ರಿತು

ಹಿಂದೆ ನಾಲ್ಕು ಸಲ ರಾಜಸಭೆಯಲ್ಲಿ ಬಸವರಾಜರ ಬುದ್ಧಿಬಲ ವ್ಯಕ್ತವಾದಾಗ ನಾರಣಕ್ರಮಿತನಿಗೆ ಸೋಲೂ ಮುಖಭಂಗವೂ ಆಗುತ್ತಲೇ ಇದ್ದವು. ಆ ಪ್ರಸಂಗಗಳಲ್ಲೆಲ್ಲ ತನಗೆ ಸಜಾತಿ ಸಗೋತ್ರದವನಾದ ಮಧುವರಸನು ಬಸವಣ್ಣನ ಪಕ್ಷವನ್ನೇ ವಹಿಸಿ ತನಗೆ ಅಪಮಾನ ಮಾಡುತ್ತಿರುವನೆಂದು ಕ್ರಮಿತನು ಗ್ರಹಿಸಿದನು. ಇದರಿಂದ ಅವನ ಮನದಲ್ಲಿ ಮಧುವರಸನ ಹಾಗು ಶರಣಧರ್ಮದ ಬಗೆಗೆ ದ್ವೇಷ ಮನೆಮಾಡಿತು. ಮಧುವರಸು ಶಿವದೀಕ್ಷೆ ಹೊಂದಿ ಶರಣಧರ್ಮ ಸ್ವೀಕರಿಸಿದನೆಂಬದನ್ನು ಕೇಳಿಯಂತೂ ಆತನು ಕರಿಕರಿಗೊಂಡನು. ನಾಡಿನಲ್ಲಿ ದಡತುಂಬಿ ಸೂಸುವ ಶರಣಧರ್ಮದ ಪ್ರವಾಹದಲ್ಲಿ, ಹಲವು ಜನ ಸನಾತನ ಕರ್ಮಠರ ಪ್ರತಿಷ್ಠೆಯೂ ಪರೋಪಜೀವನಮಾರ್ಗಗಳೂ ಕೊಚ್ಚಿ ಹೋದವು. ಅಂಥವರ ಆಕ್ರೋಶದ ವರದಿಗಳು ಹದಿನೆಂಟು ಅಗ್ರಹಾರಗಳ ಪ್ರತಿನಿಧಿಯೆನಿಸಿದ ನಾರಣಕ್ರಮಿತನಿಗೆ ಬಂದೇ ಬರುತ್ತಿದ್ದವು. ಅವೂ ಅವನ ದ್ವೇಷಾಗ್ನಿಯನ್ನು ಹೆಚ್ಚಿಸಿದವು. ಹಾಗೆಯೇ ದ್ವೇಷತಾಳಿದ ಕೆಲವು ಜೈನ ಪ್ರಮುಖರೂ ಅವನಿಗೆ ಬೆಂಬಲವಾದರು.

ಇವೇ ಕಾಲಕ್ಕೆ ನಡೆದ ಕೆಲವು ರಾಜಕೀಯ ಘಟನೆಗಳು ಇಬ್ಬಣಗಳನ್ನು ನಿರ್ಮಾಣಮಾಡಹತ್ತಿದ್ದವು. ಮತದ ಹಾಗು ರಾಜಕೀಯ ಪಂಗಡಗಳು ಒಂದರೊಳಗೊಂದು ಕೂಡಿ ಪರಿಣಮಿಸಹತ್ತಿದವು.

ಬಿಜ್ಜಳನು ತನ್ನ ರಾಜ್ಯಾಪಹಾರಕ್ಕೆ ಬೆಂಬಲ ಪಡೆಯಲು ವಿವಿಧಾಕಾಂಕ್ಷೆಯ ಎಲ್ಲ ಸಮಾಜದ ಪ್ರತಿನಿಧಿಗಳನ್ನು ಅಧಿಕಾರಕ್ಕೇರಿಸಿದನು. ಆಗ ನಾರಣಕ್ರಮಿತನು ರಾಜಪುರೋಹಿತನೆಂದೂ ಮಂತ್ರಿಮಂಡಲದಲ್ಲಿ ಧರ್ಮಾಧಿಕರಣದ ಪ್ರತಿನಿಧಿಯೆಂದೂ ಅಧಿಕಾರಕ್ಕೆ ಬಂದನು. ಇದೇ ಸಮಯದಲ್ಲಿ ಕ್ರಮಿತನ ಸಲಹೆಯಂತೆ ನೂತನ ಮತದ್ವೇಷಿ ಮಾಧವನಾಯಕನು ಸೈನ್ಯದಲ್ಲಿ

ಉನ್ನತಾಧಿಕಾರಕ್ಕೆ ಬಂದನು. ಕ್ರಮಿತನ ಸಾಹಸದಿಂದ ದ್ವೇಷಸಾಧನೆಯ ಅಧಿಕಾರಿಗಳ ಒಂದು ವಲಯವೇ ಉಂಟಾಯಿತು.

ಒಂದು ವರ್ಷದ ಹಿಂದೆ ಅವನಿಗೆ ಹೆಚ್ಚಿನ ಪೆಟ್ಟಾಗುವ ಇನ್ನೊಂದು ಘಟನೆಯು ನಡೆದಿತ್ತು. ಪಾಟಲಿಕೆ-ಪ್ರೇಮಾವತಿಯರು, ತೈಲಪದೇವನ ಮರಣಾನಂತರ ಕಲ್ಯಾಣಕ್ಕೆ ಬಂದು ಭಕ್ತಿಮಾರ್ಗವನ್ನು ಕೈಕೊಂಡು ಶರಣಿಯರಾಗಿ ಸಭ್ಯಜೀವನ ಸಾಗಿಸಿದ್ದರು. ಕಳೆದ ವರ್ಷದ ನವರಾತ್ರಿಯ ರಾಜ್ಯೋತ್ಸವದಲ್ಲಿ ಆಮಂತ್ರಿತರಾಗಿ ಅವರು ಮಹಿಳೆಯರಲ್ಲಿ ಬಂದು ಕುಳಿತಿದ್ದರು, ಮಹಿಳೆಯರನ್ನು ಕೂಡ್ರಿಸುವ ವ್ಯವಸ್ಥೆಯಲ್ಲಿಯೂ ಇದೇ ಸಮಯದಲ್ಲಿ ಬದಲಾವಣೆ ಮಾಡಲ್ಪಟ್ಟಿದ್ದಿತು. ಇದಕ್ಕೂ ಮೊದಲು ಆಮಂತ್ರಿತ ಮಹಿಳೆಯರಲ್ಲಿಯೇ ಮಂತ್ರಿಗಳ ಸಾಮಂತಮನ್ನೆಯರ ಮನೆತನದವರಿಗೆ ಮೇಲ್ಪಂಕ್ತಿಯಲ್ಲಿ ಸ್ಥಳವನ್ನು ಕಾಯ್ದಿಡುತ್ತಿದ್ದರು. ಉಳಿದವರಿಗೆ ಸಾಮಾನ್ಯ ಸ್ಥಳ! ಈಗ ಶರಣಧರ್ಮದ ಸಮತೆಯ ತತ್ವದ ಪ್ರಭಾವಕ್ಕೊಳಗಾದ ಮಧುವರಸನು ಆಡಳಿತ (ಗೃಹ) ಮಂತ್ರಿಯಾದ್ದರಿಂದ ಅವನ ಆದೇಶದಂತೆ ಮಹಿಳೆಯರಲ್ಲಿ ಭೇದ ಮಾಡದೆ ಎಲ್ಲರಿಗೂ ಸಾಮಾನ್ಯ ಸ್ಥಳದ ವ್ಯವಸ್ಥೆಯೇ ಇದ್ದಿತು. ಸಭೆಗೆ ಬಂದ ನಾರಣಕ್ರಮಿತನ ಹೆಂಡತಿಯೂ ಮಗಳೂ ಈ ಬದಲಾವಣೆಯಿಂದ ಅಸಮಾಧಾನಗೊಂಡು ಅತ್ತಿತ್ತ ನೋಡಿ ಒಳಗೆ ಮುನಿದು ಬಿಗುವಿನಲ್ಲಿಯೇ ಹಿಂದೆ ಕುಳಿತರು. ಸ್ವಲ್ಪ ಸಮಯದ ಬಳಿಕ ಹತ್ತಿರದಲ್ಲಿಯೇ ಕುಳಿತಿದ್ದ ಪಾಟಲಿಕೆ-ಪ್ರೇಮಾವತಿಯರನ್ನು ನೋಡಿ ಅವರಿಂದ ತಮ್ಮ ಗೌರವ ಹಾನಿಯಾಯಿತೆಂದು ಹುಯಿಲೆಬ್ಬಿಸಿ ಎದ್ದು ಹೋದರು. ಅದನ್ನು ಕಂಡು ನಾರಣಕ್ರಮಿತನು ರಭಸದಿಂದ ಮಹಾದ್ವಾರಕ್ಕೆ ಬಂದು ಗೌರವಸ್ಥ ಮಹಿಳೆಯರಲ್ಲಿ ಗಣಿಕೆಯರನ್ನು ಕೂಡ್ರಿಸಿದುದೇಕೆಂದು ಕರ್ಮಚಾರಿಯನ್ನು ಕೂಗಾಡಿ ಕೇಳಹತ್ತಿದನು. ಅವನು ಗಾಬರಿಯಾಗಿದ್ದನು. ಗದ್ದಲ ಕೇಳಿ ಮಧುವರಸು ಅಲ್ಲಿಗೆ ಬಂದು ನಡೆದುದನ್ನು ತಿಳಿದು "ಅವರು ಗಣಿಕೆಯರಲ್ಲ; ಶರಣಿಯರು! ಅವರಿಂದ ನಿಮ್ಮ ಮನೆಯವರಿಗಾದ ಮಹಾ ನಷ್ಟವೇನು ?" ಎಂದನು. ಕ್ರಮಿತನು ಕೆಂಗಣ್ಣಿನಿಂದ ನೋಡಿ ಬಾಯಿಬಿಡುವಷ್ಟರಲ್ಲಿ ಬಿಜ್ಜಳನು ಪರಿವಾರದೊಡನೆ ಬರಲು ಮಧುವರಸು ಅವನೊಡನೆ ಒಳಗೆ ಹೋದನು. ಉತ್ಸವಕಾರ್ಯದ ಆರಂಭವಾಯಿತು. ಕ್ರಮಿತನು

ಸಂಯುತಜ್ವಾಲಾಮುಖಿಯಂತೆ ಅಂತರಂಗದಲ್ಲಿ ಪರಿತಪಿಸುತ್ತ ಮೇಲೆ ಬಾಯಿಮುಚ್ಚಿಕೊಂಡು ಒಳಗೆ ಹೋದನು.

ಮಧುವರಸನ ಪ್ರತಿಕ್ರಿಯೆಯನ್ನು ಕೇಳಿದ್ದ ಕ್ರಮಿತನ ಮಡದಿ ಮನೆಯಲ್ಲಿ ಪತಿಯ ಮೇಲೆ ಉರಿದೆದ್ದಳು. 'ಕುಲಗೇಡಿಯಿಂದ ನಿಂದಿತರಾದ ನಿಮ್ಮ ರಾಜಮನ್ನಣೆಯೇನು ಸುಟ್ಟಿತು' ಎಂದು ಮೂದಲಿಸಿ ರೇಗಾಡಿದಳು. ಆ ಅಪಮಾನದ ಪರಿಹಾರಕ್ಕೆ ಕ್ರಮಿತನು ಉದ್ಯೋಗಿಸಿ ಕೆಲವು ನಾಗರಿಕ ರಿಂದ ಪಾಟಲಿಕೆ-ಪ್ರೇಮಾವತಿಯರ ವಿರುದ್ಧವಾಗಿ ರಾಜನಲ್ಲಿ ದೂರು ಕೊಡಿಸಿ ದನು. ಬಿಜ್ಜಳನು ಘಟನೆಯ ವಿವರ ತಿಳಿದು ಅಪರಾಧ ಆಗಿದೆಯೋ ಎಂಬ ಬಗ್ಗೆ ನಿರ್ಣಯಕೊಡಲು ಬಸವದಂಡನಾಯಕರನ್ನು ಧರ್ಮಾಧಿಕಾರಿ ಯೆಂದು ನೇಮಿಸಿ ಆ ದೂರನ್ನು ಅವರಿಗೆ ಒಪ್ಪಿಸಿದನು. ವಿಚಾರಣೆ ನಡಿಸಿ ಬಸವರಾಜರು ಕೊಟ್ಟ ನಿರ್ಣಯದ ಸಾರಾಂಶ ಹೀಗಿತ್ತು :

'ಪಾಟಲಿಕೆ—ಪ್ರೇಮಾವತಿಯರು ಗಣಿಕೆಯರೆಂದು ಆಪಾದನೆಯಿದೆ. ಆದರೆ ಆ ವೃತ್ತಿಯನ್ನು ಇವರು ಕೈಕೊಂಡಿಲ್ಲ. ಗಣಿಕಾನಿವೇಶನದಲ್ಲಿ ಎಂದೂ ವಾಸಿಸಿಲ್ಲ. ಇವರು ಆಳಿದ ಚಕ್ರವರ್ತಿ ತೈಲಪದೇವರ ಪ್ರೇಯಸಿ ಯರು, ದಾಸಿಯರು ಎಂಬದು ನಿಜ; ಆದರೂ ಅವರ ಏಕನಿಷ್ಠಸೇವಕರೆಂದು ಹೆಸರಾಗಿದ್ದಾರೆ. ಚಕ್ರವರ್ತಿಗಳ ಪರಿವಾರದಲ್ಲಿ ಇವರಿಗೆ ಗೌರವಸ್ಥಾನವಿತ್ತು. ಅವರ ಮರಣಾನಂತರ ಪ್ರಭುತ್ವವು ಇವರಿಗೆ ಚಾಲುಕ್ಯ ಅರಮನೆಯ ಆವಾರ ದಲ್ಲಿ ವಾಸವ್ಯವಸ್ಥೆ ಮಾಡಿದೆ. ಇದು ಅವರ ಹಿಂದಿನ ಸ್ಥಾನಮಾನದ ವಿವರಣೆ. ಅದು ಹೇಗಿದ್ದರೂ ಈಗ ಇವರು ಸಂಸ್ಕಾರದಿಂದ ಶಿವಭಕ್ತರಾಗಿ ಶರಣ ಧರ್ಮಾನುಯಾಯಿಗಳಾಗಿದ್ದಾರೆ. ಎಂತಹ ಪಾಪಿಯೂ ಪಶ್ಚಾತ್ತಾಪಪಟ್ಟು ಶಿವನಿಗೆ ಶರಣುಹೋದರೆ ಅವರ ಉದ್ಧಾರವು ನಿಶ್ಚಿತವಾಗಿ ಆಗುವದು. ಆ ಅರ್ಹತೆಯು ಪಾಟಲಿಕೆ-ಪ್ರೇಮಾವತಿಯರಿಗೆ ನಿರಾತಂಕವಾಗಿ ಇರುವದು. ಇವರ ವೇಷಭೂಷಣಗಳು ನಡೆನುಡಿಗಳು ಸಭ್ಯರಿಗೆ ಉಚಿತವಾಗಿವೆ. ಇವ ರಿಗೂ ಗಣಿಕೆಯರ ಲಕ್ಷಣಗಳಿಗೂ ಬಹುದೂರ ! ಸಭೆಯಲ್ಲಿ ಇವರು ಅಸಭ್ಯ ವಾಗಿ ವರ್ತಿಸಿದರೆಂದೂ ಸಾಕ್ಷ್ಯಗಳಿಲ್ಲ. ಇವರನ್ನು ಗಣಿಕೆಯರೆಂದು ತಿಳಿ ಯುವದು ವ್ಯಕ್ತಿನಿಂದೆ, ಸಮಾಜದ್ರೋಹ ! ಪತಿತೋದ್ಧಾರದ ಇಂತಹ ಅವ ಕಾಶಗಳನ್ನು ನಿರಾಕರಿಸುವದು ಪ್ರಗತಿಯಲ್ಲ, ಪಾಪಕರವು. ಪ್ರಭುತ್ವವು

ಗೌರವಸ್ಥರಿಗೆ ನೀಡುವ ಆಮಂತ್ರಣವನ್ನು ಇವರಿಗೂ ನೀಡಿದೆ. ಪಾಟಲಿಕೆ-ಪ್ರೇಮಾವತಿಯರು ತಪ್ಪು ಮಾಡಿಲ್ಲವೆಂದು ನಿರ್ಧರಿಸುತ್ತೇನೆ'

ಬಸವರಾಜರು ನಿರ್ಣಯ ಓದಿದ ಬಳಿಕ ಮಧುವರಸು ನುಡಿದನು :

"ನಾರಣಕ್ರಮಿತರಂತಹ ಗಣ್ಯ-ಪ್ರಾಜ್ಞ ಮುಖಂಡರು, ತಮ್ಮ ವೈಯಕ್ತಿಕ ಅಸಮಾಧಾನಕ್ಕೆ ಸಾಮಾಜಿಕ ಬಣ್ಣ ಬಳಿದುದು ಖಂಡನೀಯ !"

ಆಗ ನೋಡಬೇಕಿತ್ತು ಕ್ರಮಿತನ ಮುಖವನ್ನು.

ಮಧುವರಸನ ವ್ಯಕ್ತಿತ್ವವನ್ನು ನಾಶಗೊಳಿಸಿ ಸೇಡುತೀರಿಸಿಕೊಳ್ಳುವದೂ ಶರಣಧರ್ಮವನ್ನು ನಿಗ್ರಹಿಸಿ ಕೀಳುಗೊಳಿಸುವದೂ ತನ್ನ ಜೀವನದ ಪರಮೋದ್ದೇಶವೆಂದು ಕ್ರಮಿತನು ನಿರ್ಣಯಿಸಿಕೊಂಡುಬಿಟ್ಟನು. ಅದಕ್ಕಾಗಿ ತನ್ನ ದಕ್ಷತೆ ವಿಧೇಯತೆಗಳಿಂದ ಸಾಹಸಕಾರ್ಯಗಳಿಂದ ಬಿಜ್ಜಳನನ್ನು ಒಲಿಸಿಕೊಂಡು, ತನಗೆ ಬೇಡಾದವರ ಬಗೆಗೆ ಅವನಲ್ಲಿ ಅಪನಂಬಿಗೆಯನ್ನು ಹುಟ್ಟಿಸಹತ್ತಿದನು. ಎರಡು ವರ್ಷಗಳೊಳಗಾಗಿ ಬಿಜ್ಜಳನ ಮನಸ್ಸನ್ನು ಬದಲಿಸಿದನು. ಶರಣಧರ್ಮದ ಅಪರಿಮಿತ ಜನಸಂಘಟನೆಗೆ ಬಿಜ್ಜಳನು ಭಯಗ್ರಸ್ತನಾಗಿದ್ದನು. ಶೂನ್ಯಸಿಂಹಾಸನೋತ್ಸವಕಾಲದಲ್ಲಿ ಬಿಜ್ಜಳನು ಬಸವರಾಜರ ಬಗೆಗೆ ಇಟ್ಟುಕೊಂಡಿದ್ದ ಅಷ್ಟಿಷ್ಟು ಗೌರವಭಾವನೆಯನ್ನೂ ಈಗ ಬಿಟ್ಟುಕೊಟ್ಟಿದ್ದನು. ಶರಣಧರ್ಮದ ಆಂದೋಲನದಿಂದ ವರ್ಣಭೇದದ ತಳಹದಿಯ ಮೇಲೆ ನಿಂತ ಸಮಾಜಮಂದಿರ ಕುಸಿದು ಅರಾಜಕತೆ ಉಂಟಾಗುವದೆಂಬ ಕಲ್ಪನೆಯನ್ನು ಕ್ರಮಿತನು ಬಿಜ್ಜಳನ ತಲೆಯಲ್ಲಿ ತುಂಬಿದನು. ಬಿಜ್ಜಳನಲ್ಲಿ ಉಂಟಾದ ಇದರ ಭಯವೇ ಅಗಣಿತ ಅನರ್ಥಗಳಿಗೆ ಕಾರಣವಾಯಿತು.

ಯಜ್ಞನಿರೋಧ

ತೈಲಪನ ರಾಣಿಯು ಈ ವರ್ಷದ ಚಟುವಟಿಕೆಗಳಿಂದ ಬಿಜ್ಜಳನು ಸಂದೇಹಿತನಾಗಿದ್ದನು. ಅವಳು ಕರ್ಹಾಡದಿಂದ ಬಂದು ಕಲ್ಯಾಣದಲ್ಲಿ ನಾಲ್ಕು ತಿಂಗಳು ಇದ್ದು ಒಮ್ಮೆಲೇ ದೇವಗಿರಿಗೆ ಹೋದಳು. ಅದೇ ಕಾಲಕ್ಕೆ ಮಹಮನೆಯ ತರುಣ ಶರಣರ ತಂಡವೊಂದು ಚೆನ್ನಬಸವಣ್ಣನ ನೇತೃತ್ವದಲ್ಲಿ ಉತ್ತರಕ್ಕೆ ಹೊರಟಿತು. ಅವರ ಆಕರ್ಷಣೆಗೆ ಆ ಕಡೆಯ ವಿವಿಧ ಜಾತಿಯವರೂ ಒಳಗಾಗುವರೆಂದು ಕಲ್ಯಾಣದ ವಿರೋಧಿಗಳಿಗೆ ಮತ್ತೆ ಅಸೂಯೆ! ಹಾಗೆ ಹೋದ

ಶರಣರಿಗೂ ರಾಣಿಯ ಪ್ರಯಾಣಕ್ಕೂ ಸಂಬಂಧ ಹಚ್ಚಿ ನಾರಣಕ್ರಮಿತನು ಬಿಜ್ಜಳನ ಹತ್ತಿರ ಪ್ರಸ್ತಾಪಿಸಿದನು. ಉಪಾಯಗಳಿಂದ ಇದರ ರಹಸ್ಯವನ್ನು ಭೇದಿಸುವ ನಾರಣಕ್ರಮಿತನ ಇಚ್ಛೆಗೆ ಬಿಜ್ಜಳನು ಒಪ್ಪಿಗೆಕೊಟ್ಟು, ಅದಕ್ಕೆ ಅನು ಕೂಲವಾದನು. ಕ್ರಮಿತನ ಪ್ರೇರಣೆಯಿಂದ ದೇವಗಿರಿ ಭಾಗದ ಸನಾತನಿ ಗಳು ಇಳಾಪುರದ ಕೈಲಾಸನಾಥನ ಮಂದಿರದಲ್ಲಿ ಇಂದ್ರೋತ್ಸವ ಕಾಲದಲ್ಲಿ ಒಂದು ಯಾಗವನ್ನು ಮಾಡಬಯಸಿ, ಅದಕ್ಕೆ ಅನುಮತಿ ನೀಡಬೇಕೆಂದೂ ರಾಜಪುರೋಹಿತ ಕ್ರಮಿತರು ಬಂದು ಅದನ್ನು ನೆರವೇರಿಸಿಕೊಡಬೇಕೆಂದೂ ಬಿಜ್ಜಳರಾಜನಲ್ಲಿಗೆ ಬಿನ್ನಹ ಕಳಿಸಿದರು.

ಇಳಾಪುರವು ದೇವಗಿರಿ ಮಂಡಲಕ್ಕೆ ಒಳಪಟ್ಟಿತ್ತು. ದೇವಗಿರಿಯ ಮಾಂಡಲಿಕ ಸೇವುಣವಂಶದ ಭಿಲ್ಲಮರಾಜನಿಗೆ ಬಿಜ್ಜಳನು ಆ ಯಜ್ಞಕ್ಕೆ ಸಹಾಯ ಮಾಡಬೇಕೆಂದು ಆಜ್ಞೆ ಬರೆದು ತಕ್ಕಷ್ಟು ಹಣದೊಡನೆ ಕ್ರಮಿತ ನನ್ನು ಅಲ್ಲಿಗೆ ಕಳಿಸಿದನು.

ಭಿಲ್ಲಮನು ಬಿಜ್ಜಳನ ಆಡಳಿತದಲ್ಲಿಟ್ಟ ನಿಷ್ಠೆಯನ್ನು ಕಂಡುಹಿಡಿಯು ವದು, ವೈದಿಕಧರ್ಮತತ್ವಗಳನ್ನು ಜಾಗ್ರತಗೊಳಿಸುವದು, ರಾಣಿಯ ಉದ್ದೇಶವನ್ನು ತಿಳಿಯುವದು ಕ್ರಮಿತನ ಈ ಯೋಜನೆಗೆ ಕಾರಣವಾಗಿದ್ದವು.

ಇಂದ್ರೋತ್ಸವಕ್ಕಾಗಿ ಭಾರತದ ನಾನಾ ಕಡೆಗಳಿಂದ ಅಸಂಖ್ಯಾತ ಯಾತ್ರಿಕರು ಇಳಾಪುರಕ್ಕೆ ಬಂದಿದ್ದರು. ಅವರಲ್ಲಿ ಬಹುಜನರಿಗೆ ಈ ವರ್ಷ ಏರ್ಪಡಿಸಿದ ಯಜ್ಞ ಇಷ್ಟವಾಗಿರಲಿಲ್ಲ, ಕ್ರಮಿತನು ಹಣ ಸುರಿದು ಅದರ ಏರ್ಪಾಡು ಮಾಡಿದ್ದನು. ಆ ಭಾಗದ ಸಾಮಂತಮನ್ನೆಯರಿಗೆ ಆಮಂತ್ರಣ ಕೊಟ್ಟಿದ್ದನು. ಭಿಲ್ಲಮನು ಬಿಜ್ಜಳನ ಆಜ್ಞೆಯಂತೆ ಸಾಮಗ್ರಿಗಳನ್ನು ಒದಗಿಸಿ ರಕ್ಷಕರ ನೆರವು ಕೊಟ್ಟಿದ್ದರೂ ತಾನು ಸ್ವತಃ ಅದರಲ್ಲಿ ಭಾಗವಹಿಸಲಿಲ್ಲ. ಕೈಲಾಸ ಮಂದಿರದ ಅಂಗಣದಲ್ಲಿ ಯಜ್ಞ ನಡೆದಿತ್ತು. ಸಾಮಗಾನ ಗಂಭೀರ ವಾಗಿ ಕೇಳುತ್ತಿತ್ತು. ಆಗ ಘೋತರ ಅಂಗಿಗಳ ಸೌಮ್ಯ ವೇಷಧರಿಸಿದ ಶರಣರ ಸಣ್ಣ ತಂಡವೊಂದು ಚೆನ್ನಬಸವಣ್ಣನ ನೇತೃತ್ವದಲ್ಲಿ ಸಾಲಾಗಿ ಬಂದಿತು. ಅವರು ಯಜ್ಞಕರ್ಮವನ್ನು ವಿಡಂಬಿಸುವ ವಚನಗೀತ ಹಾಡುತ್ತಿದ್ದರು.

ನಿಮ್ಮ ವಚನ ಎನ್ನ ಪುಣ್ಯವೆಂಬದು ಹುಸಿಯಾಯಿತ್ತು ನೋಡಾ;
ಶಾಸ್ತ್ರದ ವಚನ ಹೋತಿಂಗೆ ಮಾರಿ ! ಎಂತು ನಂಬುವೆನಯ್ಯಾ ?

'ನಾನು ಕೊಲ್ಲೆ, ನೀಣು ಕೊಂದಿತ್ತೆಂ'ಬ ಸೊನೆಗಾರನೇನೆಂಬೆ;
ಕೂಡಲ ಸಂಗಮ ದೇವಾ?
ಮಾತಿನ ಮಾತಿಂಗೆ ನಿನ್ನ ಕೊಂದಹರೆಂದು ಎಲೇ ಹೋತೇ ಅಳು ಕಂಡಾ!
ವೇದವನೋದಿದವರ ಮುಂದೆ ಅಳು ಕಂಡಾ!
ಶಾಸ್ತ್ರವ ಕೇಳಿದವರ ಮುಂದೆ ಅಳು ಕಂಡಾ!!
ನೀನತ್ತುದಕ್ಕೆ ತಕ್ಕುದ ಮಾಡುವ ಕೂಡಲ ಸಂಗಮ ದೇವ."

ಅವರನ್ನು ಕಂಡು ಹೊರಗಿದ್ದ ಯಾತ್ರಿಕರು ಹರಹರ ಮಹಾದೇವ ಎಂದು ಜಯಘೋಷಮಾಡಿ ಬದಿಗೆ ಸರಿದು ಅವರಿಗೆ ದಾರೀಮಾಡಿಕೊಟ್ಟರು. ಜನ ಸ್ತೋಮದ ಬಲವನ್ನು ಕಂಡು, ಭಟರಿಗೆ ಅವರನ್ನು ತಡೆಯುವ ಧೈರ್ಯವಾಗಲಿಲ್ಲ. ಶರಣರು ಹಾಗೆಯೇ ಯಜ್ಞಶಾಲೆಯನ್ನು ಪ್ರವೇಶಿಸಿದರು. ಚೆನ್ನಬಸವಣ್ಣನು ಯೂಪಸ್ತಂಭಕ್ಕೆ ಕಟ್ಟಿದ ಹೋತನ್ನು ಬಿಚ್ಚಿಕೊಂಡನು. ಸ್ವತಃ ಬ್ರಹ್ಮಋತ್ವಿಜನು ಶಾಸ್ತ್ರಪ್ರಮಾಣದಿಂದ ಚೆನ್ನಬಸವಣ್ಣನ ಕೃತಿಯನ್ನು ಖಂಡಿಸಲು ಯತ್ನಿಸಿದನು. ಶಾಸ್ತ್ರಪ್ರಮಾಣದಿಂದಲೇ ಚೆನ್ನಬಸವಣ್ಣನು ಯಜ್ಞವನ್ನು ಖಂಡಿಸಿ ಉತ್ತರ ಕೊಟ್ಟನು. ಯಜ್ಞದೀಕ್ಷಿತನಾಗಿ ಕುಳಿತ ನಾರಣಕ್ರಮಿತನು ದೀಕ್ಷೆಗೆ ಅಕ್ರಮವಾದರೂ ಅಡ್ಡಿಯಿಲ್ಲವೆಂದು ಕೋಪಾಟೋಪದಿಂದ ಭಟರನ್ನು ಕೂಗಿ, 'ಈ ಅಯ್ಯಗಳನ್ನು ಬಂಧಿಸಿರಿ' ಎಂದನು. ಭಟರು ಬಂದರು; ಆದರೆ ಶರಣರನ್ನು ಒಬ್ಬರೂ ಮುಟ್ಟಲಿಲ್ಲ. ಶರಣರ ಮೇಲೆ ಕೈಮಾಡಿದರೆ ಯಾತ್ರಿಕರು ತಮ್ಮನ್ನು ಯಜ್ಞಕುಂಡದಲ್ಲಿಯೇ ಸುಡುತ್ತಾರೆಂದು ಭಟರು ತಿಳಿದಿದ್ದರು: ಶರಣರು ಹಾಡುತ್ತ ಹೋತಿನೊಡನೆ ಹೊರಗೆ ಹೋದರು.

'ಹೊಲೆಯೊಳಗೆ ಹುಟ್ಟಿ ಕುಲವನರಸುವ ಎಲವೋ ಮಾತಂಗಿಯ ಮಗ ನೀನು.
ಸತ್ತುದನೆಳೆವ ನೆತ್ತಣ ಹೊಲೆಯ ? ಹೊತ್ತು ತಂದು ನೀವು ಕೊಲುವಿರಿ.
ಶಾಸ್ತ್ರವೆಂಬುದು ಹೋತಿಂಗೆ ಮಾರಿ ! ವೇದವೆಂಬದು ನಿಮಗೆ ತಿಳಿಯದು.
ನಮ್ಮ ಕೂಡಲಸಂಗನ ಶರಣರು ಕರ್ಮವಿರಹಿತರು; ಶರಣ ಸನ್ನಿಹಿತರು!
ಅನುಪಮ ಚರಿತರು! ಅವರಿಗೆ ತೋರಲು ಪ್ರತಿಯಿಲ್ಲವೋ!

ಈ ಅಪಮಾನ ಹಿಡಿಸದಾಯಿತು ಕ್ರಮಿತನಿಗೆ! ಭಿಲ್ಲಮನು ದೇವಗಿರಿಗೆ ಹೋಗಿಬಿಟ್ಟನು. ಕ್ರಮಿತನು ಮೂರು ದಿವಸ ಬೀಡಾರದಲ್ಲಿಯೇ ಅಡಗಿಕೊಂಡು ಕುಳಿತನು. ನಾಲ್ಕನೆಯ ದಿವಸ ಅಲ್ಲಿಯೇ ಬೀಡಾರ ಮಾಡಿದ ಚಾಲುಕ್ಯ

ರಾಣಿಯು ಹೆಗ್ಗಡೆಗೆ ಹೇಳಿ ಕಳುಹಿ ಅವಳ ಭೆಟ್ಟಿಯನ್ನು ಏರ್ಪಡಿಸಿಕೊಂಡನು. ಚತುರಳಾದ ರಾಣಿಯು ನಾರಣಕ್ರಮಿತನನ್ನು ಸನ್ಮಾನಿಸಿ ಶರಣರಿಂದ ಯಜ್ಞ ಭಂಗವಾದುದಕ್ಕೆ ವಿಷಾದಿಸಿ ಕಳಿಸಿಕೊಟ್ಟಳು. ಆದರೆ ಆಕೆಯು ಶರಣರ ಶಿಬಿರಕ್ಕೆ ಹೋಗಿ ಚೆನ್ನಬಸವಣ್ಣನನ್ನು ಕಂಡು ಮಾತನಾಡಿದುದನ್ನು ಕೇಳಿದಾಗ ಕ್ರಮಿತನಿಗೆ ತನ್ನ ಸನ್ಮಾನದ ಅರ್ಥವಾಗದೆ ಹೋಗಲಿಲ್ಲ. ಶರಣರು ರಾಣಿಯೊಡನೆ ದೇವಗಿರಿಗೆ ಹೋದರು. ಅಲ್ಲಿ ಚೆನ್ನಬಸವಣ್ಣನಿಂದ ಪ್ರವಚನ ಸಭೆ ನಡೆದವು. ಇದನ್ನೂ ಕೇಳಿದ ಬಳಿಕ ನಾರಣಕ್ರಮಿತನು, ಯಜ್ಞ ಭಂಗ, ತನ್ನ ಪ್ರತಿಷ್ಠೆಯ ಹಾನಿ, ಭಿಲ್ಲಮನ ಉಪೇಕ್ಷೆ, ಶರಣರ ಪ್ರಭಾವದ ಹೆಚ್ಚಳ, ರಾಣಿ ಶರಣರ ದರ್ಶನ ಪಡೆಯುತ್ತಿರುವದು ಇವೆಲ್ಲವನ್ನು ಒಂದುಗೂಡಿಸಿ ನೋಡಿ, ಒಡಲಲ್ಲಿ ವಿಷ ತುಂಬಿಕೊಂಡು ಕಲ್ಯಾಣದ ಹಾದಿ ಹಿಡಿದನು.

ಅವನಿಗೆ ಪರಾಭವದ ಹೊರೆ ಹೊರಲಾರದಷ್ಟಾಗಿತ್ತು. ರಾಜ್ಯದಲ್ಲಿ ಧರ್ಮನಾಶ, ಸಂಚು, ಅರಾಜಕತೆಗಳು ವ್ಯಾಪಿಸಿವೆ; ಗಂಡಾಂತರ ಕಾದಿದೆ ಎಂಬ ಬಹು ದೊಡ್ಡ ವರದಿಯನ್ನು ಬಿಜ್ಜಳನಿಗೆ ಒಪ್ಪಿಸಲು ಸಿದ್ಧವಾಗಿದ್ದನು. ಬಿಜ್ಜಳನು ಒಂದು ವಾರದ ಹಿಂದೆ ಮಂಗಳವೇಡೆಗೆ ಹೋಗಿದ್ದನು ಕ್ರಮಿತನು ಅಲ್ಲಿಗೇ ಓಡಿದನು.

ಮಂಗಳವೇಡೆಯಲ್ಲಿ ಬಿಜ್ಜಳನು ತನ್ನ ಮನೆತನದ ಒಂದು ಸಮಸ್ಯೆಯ ಪರಿಹಾರದಲ್ಲಿ ತೊಡಗಿದ್ದನು. ಕ್ರಮಿತನು ಅದರಲ್ಲಿಯೂ ತನ್ನ ಕೈಚಳಕದಿಂದ ಅವನಿಗೆ ನೆರವಾಗಿ ಪ್ರಸನ್ನಗೊಳಿಸಿ, ಸಮಯಾನುಸಾರವಾಗಿ, ರಾಣಿಯು ಮತ್ತು ಶರಣರ ವಿಷಯದಲ್ಲಿ ತನ್ನ ಒಡಲಲ್ಲಿ ತುಂಬಿಕೊಂಡ ವಿಷವನ್ನೆಲ್ಲ ಅವನ ಕಿವಿಯಲ್ಲಿ ಸುರಿದನು. ಬಿಜ್ಜಳನ ತಲೆ ಸ್ಥಳದಲ್ಲಿ ಉಳಿಯಲಿಲ್ಲ. ಒಳಗೂ ಹೊರಗೂ ವಿರೋಧಿಗಳು ಕಂಡರು. 'ಬಸವಣ್ಣನನ್ನು ಬಲಿಯಗೊಟ್ಟದ್ದೇ ತಪ್ಪಾಯಿತು; ಇಲ್ಲದಿದ್ದರೆ ಶರಣರ ಪೀಡೆಯೇ ಇರುತ್ತಿರಲಿಲ್ಲ' ಎಂದು ತಲೆಕೆಟ್ಟು ಬಡಬಡಿಸಿದನು. ಚಾಲುಕ್ಯವಂಶದ ನಿರ್ಮೂಲನವೂ ಅವಶ್ಯವೆಂದು ಅವನು ನೆನಿಸಿದನು. ನಾಲ್ಕು ದಿನ ಆಲೋಚಿಸಿ ಆಲೋಚಿಸಿ ಕ್ರಮಿತನ ಸಲಹೆಯಂತೆ ಒಂದು ಯೋಜನೆ ರೂಪಿಸಿಕೊಂಡನು. ಬಳಿಕ ನಾರಣಕ್ರಮಿತನನ್ನು ಕಲ್ಯಾಣಕ್ಕೆ ಕಳುಹಿ ಅರಮನೆಯ ಜೀರ್ಣೋದ್ಧಾರಕ್ಕಾಗಿ ಮತ್ತೆ ಮೂರು ವಾರ ಅಲ್ಲಿಯೇ ಉಳಿದನು.

ನಾರಣ ಕ್ರಮಿತನು ಕಲ್ಯಾಣಕ್ಕೆ ಬಂದ ಕೂಡಲೆ, ತಾನು ನಗರದಲ್ಲಿಲ್ಲದ ನಾಲ್ಕಾರು ವಾರಗಳಲ್ಲಿ ಅಲ್ಲಿ ಸಂಭವಿಸಿದ ಕೆಲವು ಮಹತ್ವದ ಸಂಗತಿಗಳನ್ನು ಕೇಳಬೇಕಾಯಿತು. ಮತ್ತು ಅವನ ಕ್ರೋಧ-ಮತ್ಸರಗಳು ಉಲ್ಬಣಿಸುವಂತಾದವು.

ಲಿಂಗದ ನಡೆಯಲ್ಲಿ ನಾವೆಲ್ಲ ಒಂದು

ಶೀಲವಂತ-ಕಲಾವತಿಯರು ಚಿತ್ರಕಲೆಯಲ್ಲಿ ಸಮಾನ ಅಭಿರುಚಿಯುಳ್ಳವರು. ಕಲಾವತಿ ಆ ಕಲೆಯ ಆರಾಧಕಳು; ಸಾಧನೆಯಲ್ಲಿದ್ದವಳು. ಶೀಲವಂತ ಪರಿಣತಿಯ ಫಲ ಪಡೆದವನು ! ಆದರೂ ಅವನು ತನ್ನ ಕಲಾಕೃತಿಯನ್ನು ಕಲಾವತಿ ನೋಡಿ ಮೆಚ್ಚಿದ ಮೇಲೆಯೇ ಅದು ಪೂರ್ಣವಾಯಿತೆಂದು ತಿಳಿಯುವನು. ಚಿತ್ರದಲ್ಲಿಯ ರಸ ಭಾವಗಳನ್ನೂ, ಅವುಗಳನ್ನು ಸ್ಪಷ್ಟಗೊಳಿಸುವ ಹಿನ್ನೆಲೆಯ ಚಿತ್ರಣವನ್ನು ಅವರು ಚರ್ಚಿಸುತ್ತಿದ್ದರು. ಮನಬಿಚ್ಚಿ ಸಲುಗೆಯಿಂದ ಮಾತನಾಡುತ್ತಿದ್ದರು. ಮಹಮನೆಯನ್ನು ಚಿತ್ರಿಸುವದರಲ್ಲಿ ಅವರು ಕೂಡಿ ಕೆಲಸ ಮಾಡುವದು ರೂಢಿಯ ಮಾತಾಗಿತ್ತು. ಇಬ್ಬರೂ ಯುವಕರು, ರೂಪ ಗುಣಸಂಪನ್ನರು ಅವರಲ್ಲಿ ಪರಸ್ಪರವಾಗಿದ್ದ ಉದಾರ ಗೌರವಾದರದ ಭಾವನೆಯು ದಾಂಪತ್ಯದ ಇಚ್ಛೆಯಲ್ಲಿ ಮೆಲ್ಲನೆ ಪರಿವರ್ತನೆ ಹೊಂದಿದುದನ್ನು ನಾವಿಲ್ಲಿ ವಿವರಿಸಿ ಹೇಳಬೇಕಾಗಿಲ್ಲ. ಹೆಜ್ಜೆ ಹೆಜ್ಜೆಗೆ ಇರುವ ನಮ್ಮಲ್ಲಿಯ ಪ್ರೇಮಸಾಹಿತ್ಯದಲ್ಲಿ ಆ ಕ್ರಮವನ್ನು ಬೇಕಾದಷ್ಟು ಕಾಣಬಹುದಾಗಿದೆ.

ಸಿದ್ದಣ್ಣಮಂತ್ರಿಗೆ ನೀಲಲೋಚನೆ, ಬಲದೇವ ಮಂತ್ರಿಗೆ ಗಂಗಾಂಬಿಕೆ ಇದ್ದಂತೆ ಮಧುವರಸು ಮಂತ್ರಿಗೂ ಕಲಾವತಿ ಒಬ್ಬಳೇ ಪ್ರೀತಿ ಪಾತ್ರಳಾದ ಪುತ್ರಿಯು ! ಸುಸಂಸ್ಕೃತರ ಮಗಳಿಗೆ ತಕ್ಕ ವಿದ್ಯಾಬುದ್ಧಿಯನ್ನು ಕಲಿತು ತಂದೆಯ ಅಪಾರವಾದ ಪ್ರೀತಿಯಲ್ಲಿ ಬೆಳೆದು ಪ್ರೌಢೆಯಾದಳು. ಮದುವೆಯ ಮಾತು ಬಂದಾಗ 'ಈಗೇಕಪ್ಪಾ! ಹೋಗಲಿ ಇನ್ನೂ ಕೆಲದಿನ' ಎನ್ನುತ್ತಿದ್ದಳು. ಆದರೆ ಸ್ತ್ರೀಸಹಜಭಾವನೆಗಳು ಕಾಲಕ್ಕೆ ಸರಿಯಾಗಿ, ಉತ್ತೇಜಕದ ನೆರೆಯಲ್ಲಿ, ವಿಕಾಸಗೊಳ್ಳಲೇ ಬೇಕಷ್ಟೆ ! ಹಾಗಾಗಿತ್ತು ಕಲಾವತಿಯ ಪರಿಸ್ಥಿತಿ. !!

ಮಧುವರಸನು ವಿರಾಮಮಂದಿರದಲ್ಲಿ ಕುಳಿತಾಗ ಕಲಾವತಿ ಬಂದು ಹತ್ತಿರ ನಿಂತಳು. ಮೊಗದಲ್ಲಿ ಆತುರ, ತಂದೆಯಲ್ಲಿಯೇ ನೆಟ್ಟ ನೋಟ! ಮಧುವರಸನು ಏನೋ ವಿಶೇಷವೆಂದು ತಿಳಿದು ಕೇಳಿದನು:

"ಏನಮ್ಮಾ ಕಲಾ ? ಏನೋ ವಿಚಾರಿಸುವಂತಿದೆ ?"

"ಹೌದಪ್ಪ...."

"ಏನು ಹೇಳು."

"ನೀವು ನನಗೆ ಚಿಕ್ಕಂದಿನಲ್ಲಿಯೇ ಮದುವೆ ಮಾಡಬೇಕಾಗಿತ್ತು !"

"ನೀನೇ 'ಈಗ ಬೇಡ' ಎಂದು ಹಲವು ಸಲ ಹೇಳಿದೆ"

"ಸಣ್ಣವರು ಹಾಗೆ ಹೇಳಿದರೆ ಹಿರಿಯರು ಬಿಡಬೇಕೇ ? ಹಿತಕರವಾದ ಔಷಧವನ್ನು ತಂದೆತಾಯಿಗಳು ಒತ್ತಾಯದಿಂದ ಕುಡಿಸುವರಲ್ಲದೆ ಮಕ್ಕಳು ಬೇಡಿ ಕುಡಿಯುವದಿಲ್ಲ."

"ಆಗಲಿ ಈಗ ಮಾಡೋಣ."

"ದೊಡ್ಡವರಾದ ಹೆಣ್ಣುಮಕ್ಕಳಿಗೆ ತಮ್ಮವೇ ಆದ ಕೆಲವು ಅಭಿಪ್ರಾಯ ಉಂಟಾಗುತ್ತವೆ"

"ಆಗಬಹುದು; ನೀನು ಬಯಸಿದ ವರನೊಡನೆ ನಿನ್ನ ಮದುವೆ ಮಾಡುತ್ತೇನೆ."

"ನನ್ನ ಬಯಕೆಯನ್ನು ವಿಚಾರಶೀಲರಾದ ನೀವು ಒಪ್ಪಿದರೂ ಸಂಪ್ರದಾಯಗಳು ಸಾಮಾಜಿಕ ಕಟ್ಟಳೆಗಳೂ ಅಡ್ಡಬರಬಹುದು. ಅದಕ್ಕಾಗಿ ನನಗೆ ತಿಳುವಳಿಕೆ ಬರುವ ಮೊದಲೇ ಈ ಮಾತು ಮುಗಿದುಹೋಗಬೇಕಾಗಿತ್ತೆಂದೆನು"

"ಆ ನಿನ್ನ ಬಯಕೆಯ ತಿಳಿಸಮ್ಮಾ ! ಆತಂಕವೇನಿದೆ ನೋಡೋಣ !"

"...ನಾನು....ಶೀಲವಂತನನ್ನು ಮದುವೆಯಾಗಬಯಸಿದ್ದೇನೆ."

ಮಧುವರಸನು ಮೌನವಾದನು — •ಸಲಹೆ ಸರಿಯಾದರೂ ಸುಲಭವಲ್ಲ; ಸಾಮಾಜಿಕ ಸಮಸ್ಯೆ ಏಳದೆ ಹೋಗಲಿಕ್ಕಿಲ್ಲ ! ಆಳವಾಗಿ ವಿಚಾರಿಸಿದರೆ

ಮಗಳ ಬಯಕೆ ತಪ್ಪಲ್ಲ. ವರನು ಯಾವ ರೀತಿಯಿಂದಲೂ ಅಯೋಗ್ಯ ನಲ್ಲ! ಹಿಂದೆ ಹರಳಯ್ಯ ಮುಚ್ಚಿಗ ನಾನು ಬ್ರಾಹ್ಮಣ! ಆದರೆ ಈಗ ಇಬ್ಬರೂ ಭಕ್ತರು, ಶರಣರು! ಲಿಂಗಕುಲದವರು ಯಾಕಾಗಬಾರದು?' ಎಂದು ಆಲೋಚಿಸುತ್ತಿದ್ದನು. ಕೆಲ ನಿಮಿಷ ಕಾದು ಕಲಾವತಿ ಕೇಳಿದಳು :

"ನಿಮ್ಮ ಮನಸ್ಸಿಗೆ ತೊಂದರೆ ಆಯಿತೇ ಅಪ್ಪಾ?"

"ತೊಂದರೆಗೆ ಪರಿಹಾರವಿದೆ, ನಿನ್ನ ಅಪೇಕ್ಷೆ ಸರಿಯಾಗಿದೆ; ಹಾಗೆ ಮಾಡುವಾ!"

ಗೆಲವಿನ ಮೊಗದಲ್ಲಿ ನಸುನಗುತ್ತ ಹೋದಳು ಕಲಾವತಿ.

ಮಧುವರಸನು ಅದೇ ಕೈಯಲ್ಲಿ ಹರಳಯ್ಯನನ್ನು ಕರೆಯಿಸಿ ತನ್ನ ಅಭಿಮತವನ್ನು ತಿಳಿಸಿದಾಗ, ಹರಳಯ್ಯ ತಲೆಯಮೇಲೆ ಕೈಯಿಟ್ಟುಕೊಂಡು ಕುಸಿದು ಕುಳಿತನು.

"ಸಾಮ್ರಾಜ್ಯದ ಸಾಮಂತಮಂತ್ರಿಗಳೆಲ್ಲಿ? ಮುಚ್ಚಿಗ ಕಾಯಕದ ಕಂಗಾಲನೆಲ್ಲಿ? ಒಡೆಯರೆ ಈ ಅಣಕದಿಂದ ನನ್ನ ಕೊಲ್ಲಬೇಡಿ."

"ಅಣಕವಲ್ಲ ಹರಳಯ್ಯನವರೇ ನಿಜವಾದ ಮಾತು. ಐಶ್ವರ್ಯ ಅಧಿಕಾರಗಳ ಹೆಮ್ಮೆ-ಹೆಕ್ಕಳಗಳಿಲ್ಲ ನನ್ನಲ್ಲಿ!

'ವಿಪ್ರಜ ಮೊದಲು ಅಂತ್ಯಜ ಕಡೆಯಾಗಿ
ಶಿವಭಕ್ತರಾದವರನೆಲ್ಲರನೊಂದೇ ಎಂಬೆ'

ಎನ್ನುವ ಅಣ್ಣನವರ ವಾಕ್ಯವನ್ನು ಅನುಭವಮಂಟಪ ಶಾಸನ ಮಾಡಿಲ್ಲವೇ? ನಾವಿಬ್ಬರೂ ಶಿವಭಕ್ತರು!"

"ಆದರೇನು ಅಯ್ಯನವರೇ, ದೀನ ದರಿದ್ರರು ನಾವು! ಅನಾಮಿಕರೆಂಬುದೂ ತೊಲಗಲಾರದ ರೂಢಿ! ನಮ್ಮ ನಿಮ್ಮ ಶರೀರ ಸಂಬಂಧವೆಂದರೆ ಜನರು ನಕ್ಕಾರು?"

ಹರಳಯ್ಯನ ನಿರ್ಧಾರದ ದನಿಯ ಮಾತು ಕೇಳಿ, ಕಲಾವತಿ ಕೋಣೆಯೊಳಗಿಂದ ಬಂದು ಅವನ ಕಾಲಿಗೆರಗಿ 'ಅಯ್ಯ, ನಿರಾಕರಿಸಬೇಡಿ' ಎಂದು ನುಡಿದು ಹಾಗೆಯೇ ಸರಿದುಕೊಂಡು ಹೋದಳು. ಅವಳನ್ನು ಕಂಡು ಹರಳಯ್ಯ ದಿಗ್ಭ್ರಾಂತನಾದನು. ಮಧುವರಸು ಮತ್ತೆ ಮಾತಾಡಿದನು.

"ಆ ರೂಢಿಗೀಢಿಗಳು ನಮ್ಮ ಮುಂದೇ ಹೋದವು. ನಾವಿನ್ನು ಮುಂದಿನ ವಿಚಾರವನ್ನು ಮಾಡಬೇಕಾಗಿದೆ. ಬಲ್ಲವರು ನೀವು! ನಿತ್ಯದಲ್ಲಿ ಕೇಳಿ ಅಳವಡಿಸಿಕೊಂಡ ತತ್ವದೃಷ್ಟಿಯಿಂದ ನೋಡಿರಿ. ನಡೆನುಡಿಗಳು ಒಂದಾಗದಿದ್ದರೆ ಶರಣಧರ್ಮದ ಅಪಚಾರ ಮಾಡಿದಂತೆ! ಲಿಂಗದ ನಡೆಯಲ್ಲಿ ನಾವೆಲ್ಲ ಒಂದುಗೂಡಿದ ಬಳಿಕ ಕೂಸು ಕೊಡದಿರಲು ಕಾರಣವಿಲ್ಲ."

ಹರಳಯ್ಯ ಮುಖವೆತ್ತಿ ನೋಡಿದ; ಮಧುವರಸನ ನೇತ್ರತೇಜಸ್ಸು ತನ್ನ ಕಣ್ಣಲ್ಲಿ ಸೇರಿದಂತಾಯಿತು. ಕಣ್ಣು ಮುಚ್ಚಿ ಕೆಲ ಹೊತ್ತು ಕುಳಿತನು. ಬಳಿಕ ಮೆಲ್ಲನೆ ನುಡಿದನು:

"ತತ್ವ ದೃಷ್ಟಿಯಲ್ಲಿ ತಪ್ಪಿಲ್ಲ; ನೀವು ಸುಜ್ಞರು, ನಾನು ಅಜ್ಞನು. ಸಮಾಜದ ಕೀಟಲೆಗೆ ಅಂಜುವೆ. ನಿಮಗೆ ತಿಳಿದಂತೆ ಮಾಡಿರಿ ಅಯ್ಯನವರೆ. ಮಹಮನೆಯ ಅನುಮತಿ, ಶರಣರ ಆಶೀರ್ವಾದ ಸಿಕ್ಕರೆ ಮಾತ್ರ ಆಗಬಹುದು."

"ಮಹಮನೆಯ ಒಪ್ಪಿಗೆ ಪಡೆಯದೆ ನಾನು ಯಾವದನ್ನೂ ಮಾಡುವದಿಲ್ಲ. ಅದರ ಚಿಂತೆ ಬೇಡ ಹರಳಯ್ಯನವರೆ, ಪ್ರಭುದೇವರು ಕಲ್ಯಾಣದಿಂದ ತೆರಳುವ ತಮ್ಮಿಷ್ಟವನ್ನು ತೋರಿಸಿದ್ದಾರೆ. ವಧೂ-ವರರು ಬೇಗನೆ ಅವರ ಆಶೀರ್ವಾದವನ್ನು ಪಡೆಯಲಿ!"

ಶರಣಧರ್ಮದಲ್ಲಿಯೇ ಬೇರೆ ಯೋಗ್ಯ ವರಗಳಿದ್ದವು. ಚರ್ಮಕಾರನಾಗಿದ್ದು ಶರಣನಾದವನು ಹರಳಯ್ಯ! ಹೀಗಿದ್ದರೂ ಅವನ ಮಗನನ್ನೇ ಮದುವೆಯಾಗುವ ಮಗಳ ಬಯಕೆಯನ್ನು ಒಪ್ಪುವದರಲ್ಲಿ ಮಧುವರಸನು ಶರಣರ ಉನ್ನತ ತತ್ವದಂತೆ ಪೂರ್ವಾಶ್ರಮದ ವಿಚಾರವನ್ನು ಗಮನಕ್ಕೆ ತರಲಿಲ್ಲ. ಇದರಿಂದ ಅವನು ಅಮೌಲ್ಯ ಆದರ್ಶವನ್ನು ವ್ಯಕ್ತಪಡಿಸಿದನೆಂಬುದು ಮಹತ್ವದ್ದು.

ಪಾನಕ ತಾಂಬೂಲ ತಕ್ಕೊಂಡು ಹರಳಯ್ಯ ಬೀಳ್ಕೊಂಡನು.

ಅಕ್ಕನೂ ಪ್ರಭುದೇವರೂ ನಿರ್ಗಮಿಸಿದರು

ಚೆನ್ನಬಸವಣ್ಣನು ಉತ್ತರದ ಪ್ರವಾಸದಿಂದ ಬಂದು ಒಂದು ವಾರವಾಗಿತ್ತು. ಮಹಾದೇವಿಯಕ್ಕನು ಒಂದು ದಿನ ಸಮಾಧಿಯಲ್ಲಿ ನಿಶ್ಚಲಳಾಗಿ ಕುಳಿತು ಬಹಳ ಹೊತ್ತಾದರೂ ಏಳಲಿಲ್ಲ ಕಾತರಳಾದ ನಾಗಲಾಂಬೆಯಿಂದ

ತಿಳಿದು ಪ್ರಭುದೇವರು ಚೆನ್ನಬಸವಣ್ಣನೊಡನೆ ನೋಡಹೋದರು. ಪ್ರಣವದ ಆದಿಯಂತೆ ತುಸು ಅಗಲಿದ ತುಟಿಗಳು, ಅರೆಮುಗಿದ ಕಣ್ಣುಗಳು, ಮಿದುನಗೆಯನ್ನು ಮೀರಿದ ಅವರ್ಣನೀಯವಾದ ಆನಂದದ ತೇಜ ಮೊಗದಲ್ಲಿ ! ಆ ನಿಲವನ್ನು ಗುರ್ತಿಸಿ ಪ್ರಭುದೇವರೆಂದರು:

> "ಅಂಗ್ನೆಯ ಲಿಂಗದಲ್ಲಿ ಕಂಗಳ ನೋಟ ಸ್ವಯವಾದ ಇರವ ನೋಡಾ,
> ತನ್ನ ಸ್ವಾನುಭಾವದ ಉದಯದಿಂದ ತನ್ನನರಿದ ನಿಜಶಕ್ತಿಯ ನೋಡಾ,
> ಭಿನ್ನವಿಲ್ಲದಿರವು ಮನ್ನಣೆಯ ಮಮಕಾರವ ಮೀರಿದ ಭಾವ,
> ತನ್ನಿಂದ ತಾನಾದಳು.
> ನಮ್ಮ ಗುಹೇಶ್ವರ ಲಿಂಗದಲ್ಲಿ ಸಂದಿಲ್ಲದಿಪ್ಪ ಮಹಾದೇವಿಯಕ್ಕನ ನಿಲವಿಂಗೆ
> ನಮೋ ನಮೋ ಎನುತಿರ್ದೆ ಕಾಣಾ ಚೆನ್ನಬಸವಣ್ಣ."

ಪ್ರಭುಗಳು ಕೈಮುಗಿದರು. ಚೆನ್ನಬಸವಣ್ಣನೂ ಕೊಂಡಾಡಿ ಕೈಮುಗಿದನು. ಪ್ರಭುದೇವರ ಸೂಚನೆಯಂತೆ ನಾಗಕ್ಕನು ಹತ್ತಿರ ಕುಳಿತು ಹಾಡಹತ್ತಿದಳು. ಬಹಳ ಹೊತ್ತಿನ ಮೇಲೆ ಮಹದೇವಿಯಕ್ಕನ ಶರೀರ ಚಲಿಸಿತು; ಕಣ್ಣು ತೆರೆದಳು.

ಮುಂದೆ ಅಕ್ಕನ ವರ್ತನೆಯು ಪ್ರಕೃತವನ್ನು ಮೀರಿ ಅಂತರಂಗಿಕವಾಯಿತು. ಆತ್ಮನಲ್ಲಿ ಬೆರೆವ ಆತುರ ಸ್ಫುರಿಸಿ ತರಹರಗೊಳ್ಳದಾಯಿತು. ಪ್ರಭುದೇವರು ತಿಳಿದು, ಆ ಶಿವಯೋಗಿಣಿಗೆ ಶ್ರೀಶೈಲಕ್ಕೆ ಹೋಗಿ ಕದಳಿಯಲ್ಲಿ ಬಯಲ ಬೆರೆಯಲು ಸೂಚಿಸಿದರು. ಶಾಂತಚಿತ್ತದಿಂದ ಅಕ್ಕನು ಪ್ರಭುಗಳ ಅಡಿಗಳಿಗೆರಗಿ ಬಸವರಾಜರನ್ನು—

> ನಿಮ್ಮ ಅಂಗದ ಆಚಾರವ ಕಂಡು ಎನಗೆ ಲಿಂಗಸಂಗವಾಯಿತ್ತು ಬಸವಣ್ಣ,
> ನಿಮ್ಮ ಮನದ ಸುಜ್ಞಾನವ ಕಂಡು ಎನಗೆ ಜಂಗಮ ಸಂಬಂಧವಾಯಿತಯ್ಯ
> ಬಸವಣ್ಣ.
> ನಿಮ್ಮ ಸದ್ಭಕ್ತಿಯ ತಿಳಿದು ಎನ್ನ ನಿಜ ಸಾಧ್ಯವಾಯಿತಯ್ಯ ಬಸವಣ್ಣ.
> ಚೆನ್ನಮಲ್ಲಿಕಾರ್ಜುನನ ಹೆಸರಿಟ್ಟ ಗುರು ನೀನಾದ ಕಾರಣ
> ನಾನೆಂಬುದಿಲ್ಲವಯ್ಯ ಬಸವಣ್ಣ !"

ಎಂದು ಸ್ತುತಿಸಿ ಶರಣು ಮಾಡಿದಳು. ಉಳಿದ ಶರಣರನ್ನೂ ಮನವಾರೆ ಕೊಂಡಾಡಿ ಬೀಳ್ಕೊಂಡಳು.

ಬಳಿಕ ಪ್ರಭುದೇವರು ತಾವುಕೂಡ ದೇಶಾಟನಕ್ಕೆ ಹೊರಡುವದನ್ನು ಸಾರಿಬಿಟ್ಟರು. ಅವರು ಹೊರಡಲಿದ್ದ ದಿನದ ಮುನ್ನಾದಿನ ಸಕಲೇಶವಾದ ರಸರನ್ನೂ ಚೆನ್ನಬಸವಣ್ಣನನ್ನೂ ಕೂಡಿಕೊಂಡು ಬಸವರಾಜರು ಪ್ರಭುದೇವರ ಪ್ರಯಾಣದ ವ್ಯವಸ್ಥೆಯ ಬಗೆಗೆ ಆಲೋಚಿಸುತ್ತಿದ್ದರು. ಉಗ್ರ ತಪದಿಂದ ಪ್ರಭುದೇವರ ಶರೀರವು ಲಿಕಿಲಿಕಿಯಾಗಿತ್ತು. ನೋಡುವದಕ್ಕೆ ಕಂದಿತ್ತು. ಆದರೂ ಅವರು ಬಯಸಿದರೆ ತರುಣರಂತೆ ಬೇಕಾದಷ್ಟು ದೂರ ನಡೆದುಕೊಂಡು ಹೋಗುತ್ತಿದ್ದರು. ಶಕ್ತಿ ಕುಂದಿರಲಿಲ್ಲ. ತೀಕ್ಷ್ಣದೃಷ್ಟಿ, ಸ್ಪಷ್ಟವಾದ ಮಾತು, ಗಂಭೀರವಾದ ನಡೆ ಇವುಗಳಿಂದ ಕಲ್ಯಾಣದ ನಾಗರಿಕರ ಮನದಲ್ಲಿ ಉನ್ನತಸ್ಥಾನವನ್ನು ಪಡೆದಿದ್ದರು. ಅವರ ಜ್ಞಾನ, ವೈರಾಗ್ಯ, ಯೋಗಗಳ ಮಾತು ಬೇರೆ! ಅವರಿನ್ನು ಹೋದರೆ ಕಲ್ಯಾಣಕ್ಕೆ ಮರಳುವದಿಲ್ಲವೆಂಬದು ಸಹಜವಾಗಿತ್ತು. ಅನುಭವ ಮಂಟಪದ ಘನತೆ ಕುಗ್ಗುವದು ಎಂದು ಬಸವರಾಜರು ಚಿಂತಿಸಿದರೂ ಆ ಕೇವಲಾನಂದದ ಮಹಾಶಿವಯೋಗಿಯನ್ನು ತಡೆಯುವದಕ್ಕೆ ಶಕ್ತರಾಗಲಿಲ್ಲ. ಅನಿವಾರ್ಯವಾಗಿ ಅವರ ಪ್ರಯಾಣಕ್ಕೆ ಒದಗಿಸುವ ಅನುಕೂಲತೆಯ ಬಗೆಗೆ ಮಾತನಾಡುತ್ತಿದ್ದರು. ಆ ಹೊತ್ತಿಗೆ ಮಧುವರಸನು ಬಂದನು.

ಅವನು ತನ್ನ ಕೈಯೊಳಗಿನ ಶಾಸನಪತ್ರಗಳನ್ನು ಬಸವರಾಜ ದಂಡನಾಯಕರ ಮುಂದೆ ಇಡುತ್ತ ಹೇಳಿದನು :

"ಬಹಳ ದಿವಸಗಳ ನಂತರ ನನ್ನ ಆಸ್ತಿಯ ಈ ಮೂರು ದಾನಪತ್ರಗಳಿಗೆ ಬಿಜ್ಜಳರಾಜರು ಅಂಕಿತ ಹಾಕಿ ಶಾಸನಮಾಡಿ ಮಂಗಳವೇಡೆಗೆ ಹೊರಡುವಾಗ ಕಳಿಸಿಕೊಟ್ಟು ಹೋಗಿದ್ದಾರೆ. ಅನುಭವ ಮಂಟಪದ ದಾನಪತ್ರವನ್ನು ನೀವು ಸ್ವೀಕರಿಸಿರಿ. ಈ ಮಹಾಜನಸಂಘದ ದಾನಪತ್ರವು, ಅವರ ನಿಯಮಬದ್ಧ ಸಮಿತಿಯ ರಚನೆಯಾಗುವವರೆಗೆ ನಿಮ್ಮ ಹತ್ತಿರವಿರಲಿ. ಇನ್ನು ಈ ಮೂರನೆಯದನ್ನು ಮುಂದಿನವಾರ ಮಗಳ ಮದುವೆಯ ಕಾಲದಲ್ಲಿ ನೀವೇ ಅದನ್ನು ಅವಳಿಗೆ ಸಲ್ಲಿಸಬೇಕು."

"ಏನು ಕಲಾವತಕ್ಕನ ಮದುವೆಯೇ ? ವರನಾರು ?"

—ಚೆನ್ನಬಸವಣ್ಣ ಕೇಳಿದನು.

"ಶೀಲವಂತ, ಹರಳಯ್ಯನವರ ಮಗ!"

ಕೌತುಕ ಮಿಂಚಿ ಕ್ಷಣಹೊತ್ತು ಮೌನವಾವರಿಸಿತು ಅಲ್ಲಿದ್ದವರನ್ನು!

ಚೆನ್ನಬಸವಣ್ಣ ಸಕಲೇಶ ಮಾದರಸರ ಮುಖ ನೋಡಲು ಅವರು ಹೇಳಿದರು

"ಪ್ರತಿಭೆಯೊಂದು ಮಾನವನನ್ನು ಮೇಲಕ್ಕೆತ್ತುವ ಶಕ್ತಿ! ಅದರ ಮುಂದೆ ಕುಲವಿಚಾರ ಬಹಳ ಕೀಳು! ಪ್ರತಿಭಾವಂತರಾದ ಕವಿ ಕಲಾವಿದ-ಶಿಲ್ಪಿಗಳಲ್ಲಿ ಜಾತಿ ಕುಲ ಶೀಲಗಳನ್ನು ಶಿಷ್ಟರು ನೋಡುವದಿಲ್ಲ. ಪ್ರತಿಭಾ ಸಂಪನ್ನರನ್ನು ರಾಜಪುತ್ರರಂತೆ ಗೌರವಿಸಬೇಕೆಂದು ಆಗಮಗಳು ಹೇಳುತ್ತವೆ. ಮೇಲಾಗಿ ಈ ವರ ಶರಣಸಂತಾನ; ವಧು ಶರಣಸಂತಾನ!

ನಿರಾತಂಕವಾಗಿದ್ದ ರಾಜವೈಭವವನ್ನು ತ್ಯಜಿಸಿ, ವೀರ ವಿರಕ್ತನಾಗಿ ಅನುಭವ ಮಂಟಪಕ್ಕೆ ಬಂದ ಸಕಲೇಶಮಾದರಸನ ಪ್ರಗತಿಪರ ವಿಚಾರವನ್ನು ಬಲ್ಲವರಾದ್ದರಿಂದ ಯಾರೂ ಅವನ ಮಾತಿಗೆ ಆಶ್ಚರ್ಯಪಡಲಿಲ್ಲ.

ಬಸವರಾಜರು ಹೇಳಿದರು:

"ಸಕಲೇಶಮಾದರಸರು ಸರಿಯಾದುದನ್ನೇ ಹೇಳಿದರು. ಶೀಲವಂತನು ಅನುಭವಮಂಟಪವನ್ನು ಅಲಂಕಾರಗೊಳಿಸಿದ ಪ್ರತಿಭಾವಂತ ಕಲಾವಂತ. ತಮ್ಮ ಕ್ರಾಂತಿಕಾರಕ ವಿಚಾರಗಳನ್ನು ಅಂತಿಮವಾಗಿ ತಮ್ಮ ಮೂಲ ಸ್ಥಳದಲ್ಲಿಯೇ ಆಚಾರದಲ್ಲಿ ತರುತ್ತಿರುವ ಮಧುವರಸರು ಧೈರ್ಯಶಾಲಿಗಳು! ಧನ್ಯರು!!"

"ಅಂತಹ ತಾತ್ವಿಕ ನಡೆಯು ನಿಶ್ಚಲವಾದ ಧೃತಿ-ಮತಿಗಳು ಬಂದುದು ತಮ್ಮಿಂದಲೇ ದಂಡನಾಯಕರೇ! ನಾಳೆ ಪ್ರಭುದೇವರು ಪ್ರಯಾಣ ಮಾಡತಕ್ಕವರು; ಇಂದು ಸಂಜೆಯು ಅನುಭವಗೋಷ್ಠಿಯಲ್ಲಿ ಶೀಲವಂತ ಕಲಾವತಿಯರು ಅವರ ಆಶೀರ್ವಾದ ಪಡೆಯಲಿ!"

ಅಂದು ಪ್ರಭುದೇವರ ಕೊನೆಯ ಪ್ರವಚನ. ಜನ ಕಿಕ್ಕಿರಿದು ತುಂಬಿತ್ತು. ಶರಣರಿಗೆಲ್ಲ ಒಂದೇ ಕಾತರ: 'ನಾಳೆ ನಮಗೆ ಈ ಅಮೃತ ವಾಣಿ ಇಲ್ಲ.'

ಮುಕ್ತಾಯದ ಸಮಯದಲ್ಲಿ ಶೀಲವಂತ—ಕಲಾವತಿಯರು ತಮ್ಮ ಪಾದಗಳಿಗೆರಗಿದಾಗ ಪ್ರಭುದೇವರು ನುಡಿದರು :

"ಮನ ಬಸುರಾದರೆ ಕೈ ಬೆಸಲಾಯಿತ್ತ ಕಂಡೆ.
ಕರ್ಪುರದ ಕಂಪ ಕಿವಿ ಕುಡಿಯಿತ್ತ ಕಂಡೆ
ಮುತ್ತಿನ ಢಾಳವ ಮೂಗ ನುಂಗಿತ್ತ ಕಂಡೆ
ಕಂಗಳು ಹಸಿಸು ವಜ್ರವ ನುಂಗಿತ್ತ ಕಂಡೆ.
ಒಂದು ನೀಲದೊಳಗೆ ಮೂರು ಲೋಕವು ಅಡಗಿತ್ತು ಕಂಡೆ ಗುಹೇಶ್ವರಾ."

ಅಂದು ಚೆನ್ನಬಸವಣ್ಣನಿಗೆ ಪ್ರಭುದೇವರು ತಮ್ಮ ನಿರಂಜನಪೀಠಾಧಿಕಾರವನ್ನು ಒಪ್ಪಿಸಿದರು. ಮರುದಿನ ನಸುಕಿನಲ್ಲಿ ಹೊರಡುವಾಗ ಅಂಗಳದಲ್ಲಿ ಶರಣರ ಗುಂಪಿನ ಮಧ್ಯದಲ್ಲಿ ತಮ್ಮ ಪಾದಗಳಿಗೆರಗಿದ ಬಸವಣ್ಣನವರನ್ನು ಹಿಡಿವೆತ್ತಿ ಆಲಂಗಿಸಿ ನುಡಿದರು :

"ಕುಂಡಲಿಗ ಕೀಟದಂತೆ ಮೈ ಮಣ್ಣಾಗದೆ,
ಜಲದೊಳಗಣ ತಾವರೆಯಂತೆ ಹೊದ್ದಿ ಹೊದ್ದದೆ
ಸಂಗರದ ಮೌಕ್ತಿಕದಂತೆ ಜಲವು ತಾನಾಗದೆ
ಇರ್ದೆಯಲ್ಲ ಗುಹೇಶ್ವರಲಿಂಗದಾಣತಿವಿಡಿದು !
ತನುಗುಣ ಮತ್ತರಾಗಿರ್ಪ ಐಶ್ವರ್ಯಾಂಧಕರ
ಮತವನೇನ ಮಾಡಬಂದೆಯಯ್ಯಾ ಬಸವಣ್ಣ ?"

ಶರಣರ ಸಂದೋಹವು ನಗರದ ಹೊರಗೆ, ನಿರಂಜನಮೂರ್ತಿ ಶ್ರೀ ಅಲ್ಲಮ ಪ್ರಭುದೇವರನ್ನು 'ಹರಹರಮಹಾದೇವ' ಎನ್ನುತ್ತ ಬೀಳ್ಕೊಟ್ಟರು. ಜತೆಗೆ ಯಾರನ್ನೂ ಒಲ್ಲದೆ ಪ್ರಭು ತಾವೊಬ್ಬರೇ ಹೊರಟರು. ಕಲ್ಯಾಣದ ಕಟ್ಟಿಯೊಡೆದು ಆಧ್ಯಾತ್ಮಿಕ ಸಂಪತ್ತು ಹರಿದು ಹೋದಂತಾಯಿತು ಪ್ರಮಥರಿಗೆ !

ಐತಿಹಾಸಿಕಮಹತ್ವದ ಮದುವೆ

'ಶರಣಧರ್ಮವು ಭಾರತದ ರಾಷ್ಟ್ರಧರ್ಮವಾಯಿತು' ಎಂದು ಇತಿಹಾಸದಲ್ಲಿ ಬರೆಯಬಹುದಾದ ವರ್ಣಪಂಕ್ತಿಯನ್ನು ಹಿಂದೆ ತಳ್ಳಿದ ದುರದೃಷ್ಟಕರವಾದ ಮದುವೆ ಮುಂದಿನ ಗುರುವಾರ ನಡೆಯಿತು. ಅದಾದ ಮರುದಿನವೇ ನಾರಣಕ್ರಮಿತನು ಮಂಗಳವೇಡೆಯಿಂದ ಮರಳಿ ಬಂದದ್ದು.

ಶರಣನ ಮಗ, ಶರಣನ ಮಗಳು; ಈ ಮದುವೆ ಸಹಜ ಹಾಗ ಸ್ವಾಭಾವಿಕವಾಗಿತ್ತು. ಪೂರ್ವಾಶ್ರಮದಲ್ಲಿ ಹರಳಯ್ಯ ಚರ್ಮಕಾರ ಮಾಚಿಗ;

ಮಧುವಯ್ಯ ಬ್ರಾಹ್ಮಣ-ಸಾಮಂತ ಮಂತ್ರಿ. ಸನಾತನಿಗಳ ದೃಷ್ಟಿಯಲ್ಲಿ ಅಸ್ವಾಭಾವಿಕ ಮತ್ತು ಪ್ರತಿಲೋಮವಿವಾಹ! ನಾರಣಕ್ರಮಿತನು ಎರಡನೆಯ ಮುಖದಿಂದಲೇ ನೋಡುವದು ಸಹಜವಾಗಿತ್ತು. ಅದನ್ನೇ ಮುಂದು ಮಾಡಿ ಆತನು 'ವರ್ಣಸಂಕರ, ಧರ್ಮಹಾನಿ, ಪ್ರಭುತ್ವದ ವಿರೋಧ, ದೈವದ್ರೋಹ, ಅನಿಷ್ಟಸೂಚನೆ' ಎಂದು ಕೋಲಾಹಲ ಎಬ್ಬಿಸಿದನು.

ಅವನು ಬಂದ ಮರುದಿನ ಮಧುವರಸನು ನಗರದ ಪ್ರತಿಷ್ಠಿತರನ್ನು ಅನುಭವ ಮಂಟಪದ ಅಧಿಕಾರಿಗಳನ್ನು ಆಮಂತ್ರಿಸಿ ಸಂತೋಷಕೂಟವನ್ನು ಏರ್ಪಡಿಸಿದ್ದನು. ಇದೆಲ್ಲವನ್ನು ಕೇಳಿ ಕ್ರಮಿತನು ಕರ್ಣದೇವನ ಕಡೆಗೆ ಓಡಿ ಹೋದನು. ಶರಣಧರ್ಮದ್ವೇಷಿಯಾದ ಮಾಧವನಾಯಕನನ್ನು ಕರೆಯಿಸಿ ಕೊಂಡನು. ಈ ವಿವಾಹವು ಅಶಾಸ್ತ್ರೀಯವೆಂದು ನಿಷೇಧಿಸುವ ಘೋಷಣೆಯನ್ನು ಧರ್ಮಪ್ರವರ್ತಕ-ಅಗ್ರಹಾರಗಳ ಪ್ರತಿನಿಧಿಯಾಗಿ ಪ್ರಕಟಿಸಿದನು. ಮಾಧವನಾಯಕನ ದಲದಿಂದ ಕರೆಯಿಸಿಕೊಂಡ ರಕ್ಷಕಭಟರನ್ನು ಬೆಂಗಾವಲಿಗಿಟ್ಟುಕೊಂಡು, ಸಂತೋಷಸಮಾರಂಭದ ಹೊತ್ತಿಗೆ ಮಧುವರಸನ ಮನೆಗೆ ಬಂದನು.

ಸಮಾರಂಭದಲ್ಲಿ ಬಸವಣ್ಣನವರು ಮಾತನಾಡುತ್ತಿದ್ದರು. ಅವರು ನೂತನ ದಂಪತಿಗಳನ್ನು ಆಶೀರ್ವದಿಸಿದ ಬಳಿಕ ಈ ವಚನ ಹೇಳಿದರು :

"ಲಿಂಗವಶದಿಂದ ಬಂದ ನಡೆಗಳು, ಲಿಂಗವಶದಿಂದ ಬಂದ ನುಡಿಗಳು;
ಲಿಂಗವಂತರು ತಾವು ಅಂಜಲೇಕೆ,
ಲಿಂಗವಿರಿಸಿದಂತಿಪ್ಪುದಲ್ಲದೆ,
ಕೂಡಲಸಂಗಮದೇವ ತನ್ನ ಭಕ್ತರಭಿಮಾನ ತನ್ನದೆಂಬನಾಗಿ ?"

ಈ ವಚನವು ನಗರದಲ್ಲಿ ಭವಿಗಳು ಹೊರಡಿಸಿದ ನಿಷೇಧಘೋಷಣೆಗೆ ಪ್ರತ್ಯುತ್ತರವಾಗಿರಬಹುದು.

ಅಣ್ಣನವರು ತಮ್ಮ ಮಾತು ಮುಗಿಸುವಾಗ ವಧುವರರು ತಮ್ಮ ಸಂಪತ್ತನ್ನು ಅನುಭವ ಮಂಟಪ-ಮಹಾಜನ ಸಂಘಗಳಿಗೆ ದಾನವಾಗಿತ್ತ ದಾನ ಪತ್ರಗಳ ವಿಷಯ ಪ್ರಕಟಿಸಲು ಸಭಿಕರು ಆನಂದದಿಂದ ಕರತಾಡನ ಮಾಡಿದರು.

ಆ ಹೊತ್ತಿಗೆ ಕ್ರಮಿತನು ಒಳಬಾಗಿಲಲ್ಲಿ ಬಂದು ತುತ್ತೂರಿಯನ್ನು ಊದಿಸಿ ಸಭಿಕರ ಗಮನ ಸೆಳೆದು, ತನ್ನ ಘೋಷಣೆಯನ್ನು ಗಟ್ಟಿಸಿ ನುಡಿದನು:

'ತ್ರಿಭುವನಮಲ್ಲ ವಿಕ್ರಮಾದಿತ್ಯದೇವರ ದಂಡನಾಯಕ ಕಾಳಿದಾಸ ಚಮೂಪತಿಗಳು ಜನಿಸಿದ ಪವಿತ್ರವಾದ ಶ್ರೀವತ್ಸಗೋತ್ರದಲ್ಲಿ ಮಧುವರಸನು ಜನಿಸಿದನು. ನಾನೂ ಜನಿಸಿದೆ. ಮಧುವರಸನು ನೀತಿವಿಹೀನನಾಗಿ ಅಧರ್ಮಾಚಾರದಿಂದ ಸಗೋತ್ರದವರಾದ ನಾವು ತಲೆಬಾಗಿಸುವಂತೆ ಮಾಡಿದ್ದಾನೆ. ಶ್ರೇಷ್ಠವರ್ಣದ ಬ್ರಾಹ್ಮಣನಾದ ತಾನು ತನ್ನ ಮಗಳನ್ನು ಜಾತಿಹೀನನೊಬ್ಬನ ಮಗನಿಗೆ ಮದುವೆಮಾಡಿಕೊಟ್ಟು ಧರ್ಮದ್ರೋಹದ ಮಹಾಪಾತಕಿಯಾಗಿದ್ದಾನೆ. ವರ್ಣಸಂಕರದ ವಿಷಬೀಜ ಬಿತ್ತಿದ್ದಾನೆ. ಸಮಾಜ ಕಟ್ಟಳೆಗಳನ್ನು ಮೀರಿ ಪ್ರಭುತ್ವವನ್ನು ವಿರೋಧಿಸಿದ್ದಾನೆ. ಧರ್ಮ ಪ್ರವರ್ತಕ ಸಂಸ್ಥೆಗಳ ಪರವಾಗಿ ಇವನಿಗೆ ಸಾಮಾಜಿಕಬಹಿಷ್ಕಾರ ಹಾಕಿದುದನ್ನು ಸಾರ್ವಜನಿಕವಾಗಿ ಈ ಪ್ರಕಟಸಭೆಯಲ್ಲಿ ಘೋಷಿಸುತ್ತೇನೆ. ಇದು ಪೈಶಾಚಿಕ ವಿವಾಹ! ಕನ್ಯಾಪಹಾರ! ಇದನ್ನು ನಿಷೇಧಿಸುವ ಶಾಸ್ತ್ರೀಯವಾದ ಘಟಸ್ಫೋಟ'ವೆಂಬ ಕೃತಿಯನ್ನು ಈಗ ನಡಿಸುತ್ತೇನೆ.'

ಎಂದು ಮುಗಿಸಿ ಸರಿದು ನಿಲ್ಲಲು, ಹಿಂದೆ ನಿಂತಿರುವ ಅನಾಮಿಕ ದಾಸಿಯು ಹಿಹಿಹಿ ಎಂದು ಹಲ್ಲು ಕಿರಿದು ಕೈಯೆತ್ತಿ ಮರಳಿದಳು.

ಅಕಸ್ಮಾತ್ತಾಗಿ ಬಂದು ಒಂದೇ ಸಮನೆ ಒದರಹತ್ತಿದ್ದರಿಂದ ಸಭಿಕರು ಸ್ತಂಭಿತರಾಗಿ ಕೇಳಿದರು. ಮಧುವರಸನು ಕೆರಳಿ ಅವನನ್ನು ಹೊರದೂಡಲು ಧಾವಿಸಿದ್ದನು. ಇನ್ನು ಕೆಲವರು ಅವನಿಗೆ ಸಹಾಯಕರಾಗಿ ನಡೆದರು. ಆದರೆ ಚೆನ್ನಬಸವಣ್ಣನು ಅವರನ್ನು ತಡೆದನು :

"ಈ ಉನ್ಮತ್ತರನ್ನು ನಾನು ಬಲ್ಲೆನು; ಇವರ ಶಾಸ್ತ್ರಗಳನ್ನೂ ಕಂಡಿದ್ದೇನೆ. ಮಧುವರಸರೇ, ಸಮಾಧಾನ ತಾಳಿರಿ. ಇವರ ಹುಚ್ಚಾಟ ಇಲ್ಲಿಗೆ ಮುಗಿಯಿತು."

ಸಭೆಯಲ್ಲಿ ಹಲವರು ಘೊಳ್ಳನೆ ನಕ್ಕರು. ಕ್ರಮಿತನು ಚೆನ್ನಬಸವಣ್ಣನನ್ನು ದುರುದುರು ನೋಡಿ ಹೊರಟುಹೋದನು. ಸಭೆಯಲ್ಲಿ ಮತ್ತೆ

ಶಾಂತಿ ನೆಲಿಸಿತು. ಯಥಾರೀತಿಯಾಗಿ ಪೂರೈಸಿತು ಸಭೆ. ಮುಕ್ತಾಯದಲ್ಲಿ ಬಸವರಾಜರು ಹೇಳಿದ ನುಡಿಯಿದು :

'ಆಯುಷ್ಯ ತೀರಿದಲ್ಲದೆ ಮರಣವಿಲ್ಲ. ಭಾಷೆ ತಪ್ಪಿದಲ್ಲದೆ ದಾರಿದ್ರ್ಯವಿಲ್ಲ !
ಅಂಜಲದೇಕೋ ಲೋಕವಿಗುರ್ಬಣೆಗೆ ?
ಅಂಜಲದೇಕೋ ಕೂಡಲಸಂಗಮದೇವಾ, ನಿಮ್ಮ ಆಳಾಗಿ?

ಗಂಡಾಂತರ ಸೂಚನೆಯ ಪತ್ರ ಬರೆದು ಕ್ರಮಿತನು ಮರುದಿನವೇ ಅವಸರದ ಭಟನೊಡನೆ ಮಂಗಳವೇಡೆಗೆ ಕಳಿಸಿದನು. ಬಿಜ್ಜಳನು ವಿಲಂಬ ಮಾಡದೆ ಕಲ್ಯಾಣಕ್ಕೆ ಬಂದುಬಿಟ್ಟನು.

೧೩. ಚಾಲುಕ್ಯ ವಂಶೀಯರ ಒಳಸಂಚು

ಚಾಲುಕ್ಯ ಮಹಾರಾಣಿ ಮಾಹೇಶ್ವರಿ

ಬಿಜ್ಜಳನು ಚಾಲುಕ್ಯರ ಸಿಂಹಾಸನವನ್ನೇ ಅಪಹರಿಸುತ್ತಿರುವದನ್ನು ಕಾಣುತ್ತ ತೈಲಪದೇವನ ಹಿಂದೆ ಉಳಿದ ಚಾಲುಕ್ಯರು ಸುಮ್ಮನೆ ಕೂಡ್ರಲಿಲ್ಲ.

ತೈಲಪದೇವನ ನಿಜವಾದ ಇಚ್ಛಾಪತ್ರವನ್ನು ಬಚ್ಚಿಟ್ಟು ಕೃತ್ರಿಮವಾದುದನ್ನು ಪ್ರಕಟಿಸಿ ಕೀರ್ತಿವರ್ಮನನ್ನು ಕರ್ಹಾಡಕ್ಕೆ ಅಟ್ಟಿದ್ದರಿಂದ ರಾಣಿ ಮಾಹೇಶ್ವರಿಯು ಬಿಜ್ಜಳನ ಮೇಲೆ ರೋಷಗೊಂಡಳು. ಆದರೆ ಮಾಡುವದೇನು ? ಅಣ್ಣ ವಿಜಯಾರ್ಕನು ಚಾಲುಕ್ಯರ ಮಾಂಡಲಿಕನು: ಬಿಜ್ಜಳನನ್ನು ಒಬ್ಬನೇ ಎದುರಿಸುವಷ್ಟು ಬಲ ಅವನಿಗೆ ಎಲ್ಲಿಂದ ಬರಬೇಕು ? ಆದರೂ ಅವನು ಸಾವಧಾನದಿಂದ ಗುಪ್ತವಾಗಿ ಪ್ರಯತ್ನಿಸಿ ಬಿಜ್ಜಳನ ವಿರೋಧಿಗಳಾದ ಸಾಮಂತರನ್ನೆಲ್ಲ ಒಂದುಗೂಡಿಸಿ, ಯುದ್ಧಮಾಡಿ ಬಿಜ್ಜಳನನ್ನು ತಳ್ಳಿ, ಅಳಿಯನ ಪಟ್ಟವನ್ನು ದೊರಕಿಸುವ ಆಲೋಚನೆ ಮಾಡಿ, ತಂಗಿಯನ್ನು ಸಮಾಧಾನ ಪಡಿಸಿದ್ದನು. ಅವರಿಬ್ಬರು ಜಾಣರಾದ ಸಂಧಿವಿಗ್ರಹಿಗಳನ್ನು ಸಂಪಾದಿಸುವದರಲ್ಲಿಯೂ ಸಮಯ ನಿರೀಕ್ಷಿಸುವದರಲ್ಲಿಯೂ ಎರಡು ವರ್ಷ ಕಳೆದರು.

ಮೈದುನ ಜಗದೇಕಮಲ್ಲನ ಗೆಳೆಯನಾದ ನಿಡುಗಲ್ಲಿನ ಮಲ್ಲದೇವ ಬೊಮ್ಮರಸನ ಪರಿಚಯವು ಮಾಹೇಶ್ವರಿಗಿತ್ತು. ಆ ಬೊಮ್ಮರಸನನ್ನು ಬಿಜ್ಜಳನು ಸೆರೆಯಲ್ಲಿಟ್ಟಿದ್ದನಷ್ಟೆ ! ಅವನ ತಂದೆಯಾದ ಮಲ್ಲದೇವರಸನು ಮಗನ ಸಲುವಾಗಿ ಹೊಟ್ಟೆಬೇನೆ ಹಚ್ಚಿಕೊಂಡು ಎರಡು ಮೂರು ವರ್ಷ ಹಾಸಿಗೆ ಹಿಡಿದು ಮರಣೋನ್ಮುಖನಾದನು. ಆಗ ಅವನ ಮನವಿಯಂತೆ ಬಿಜ್ಜಳನು ಬೊಮ್ಮರಸನನ್ನು ಬಿಡುಗಡೆ ಮಾಡಿದನು. ಆದರೂ ಬೊಮ್ಮರಸನಿಗೆ ತಂದೆಯ ಮುಖ ಸಿಗಲಿಲ್ಲ. ಹೀಗೆ ಹಲವು ಬಗೆಯಿಂದ ನೊಂದ ಬೊಮ್ಮರಸನು ಬಿಜ್ಜಳನ ಆಜನ್ಮವೈರಿಯಾದುದು ಸಹಜವಾಗಿತ್ತು. ಅದರಿಂದ ಬೊಮ್ಮರಸನ ಆ ವೈರದ ಉಪಯೋಗವನ್ನು ಮಾಡಿಕೊಳ್ಳಬೇಕೆಂದೂ, ಜಗದೇಕಮಲ್ಲನ ಬಿಡುಗಡೆಯನ್ನೂ ತಮ್ಮ ಉದ್ದೇಶವಾಗಿಟ್ಟುಕೊಂಡರೆ,

ಸಾಹಸಿಯಾದ ಬೊಮ್ಮರಸನು ತಮಗೆ ನಂಬಿಗೆಯಿಂದ ಸಹಾಯ ಮಾಡುವ ನೆಂದೂ ಮಾಹೇಶ್ವರಿಯು ಆಲೋಚಿಸಿದಳು. ಈ ವಿಚಾರವನ್ನು ವಿಜ ಯಾರ್ಕನು ಒಪ್ಪಿದನು. ಜಗದೇಕಮಲ್ಲನನ್ನು ಬಿಡುಗಡೆ ಮಾಡಿ ಸಿಂಹಾಸ ನಕ್ಕೆ ತರುವದೆಂದರೆ, ಸಾಮಂತರಲ್ಲಿ ಹಲವರು ತಮ್ಮ ಸಂಚಿಗೆ ಸಹಾಯ ರಾಗುವರೆಂದೂ, ಜಗದೇಕಮಲ್ಲನಿಗೆ ಸಂತಾನವಿಲ್ಲದ್ದರಿಂದ ಕೀರ್ತಿವರ್ಮನಿಗೆ ಯುವರಾಜಪಟ್ಟಗಟ್ಟಿದರೆ, ಮುಂದೆ ಸಾರ್ವಭೌಮನಾಗುವನೆಂದೂ ಅಣ್ಣ ತಂಗಿಯರು ಆಶಿಸಿದರು.

ಶಿವದತ್ತನೆಂಬ ರಾಜಿಕ ತಂತ್ರಜ್ಞನನ್ನು ತಮ್ಮ ಪರಿಚಯದ ಪತ್ರ ದೊಡನೆ ಮಲ್ಲ (ದೇವ) ಬೊಮ್ಮರಸನ ಕಡೆಗೆ ಗುಪ್ತಸಂಧಾನ ಮಾಡಿಕೊಳ್ಳುವ ದಕ್ಕಾಗಿ ಕಳಿಸಿದರು. 'ಬೊಮ್ಮರಸನು ಸಾಮ್ರಾಜ್ಯದಲ್ಲಿ ಸಂಚರಿಸಿ ಸಾಮಂತ ಮಾಂಡಲಿಕರನ್ನು ಒಲಿಸಿಕೊಳ್ಳಬೇಕು. ಆದರ ಖರ್ಚಿಗಾಗಿ ಎರಡು ಲಕ್ಷ ವರಹಗಳನ್ನು ಅವನ ಕಡೆಗೆ ಕೊಡಬೇಕು. ಇಡಿಯಾಗಿ ಕಾರ್ಯ ಪೂರೈಸಿದ ಮೇಲೆ ಅವನಿಗೆ ಹತ್ತುಲಕ್ಷ ವರಹಗಳನ್ನೂ ನೋಳಂಬವಾಡಿಯ ಮಹಾಮಂಡಲೇಶ್ವರಾಧಿಕಾರವನ್ನೂ ಪ್ರತಿಫಲವಾಗಿ ಕೊಡಬೇಕು. ಚಾಲುಕ್ಯ ಮಹಾರಾಣಿಯುವರು ಎರಡು ತಿಂಗಳಲ್ಲಿ ಕಲ್ಯಾಣಕ್ಕೆ ಬಂದಾಗ ಬೊಮ್ಮರ ಸನು ರಹಸ್ಯವಾಗಿ ಅವರನ್ನು ಕಂಡು ನಂಬಿಗೆಕೊಟ್ಟು ೨ ಲಕ್ಷ ವರಹಗಳನ್ನು ಪಡೆಯಬೇಕು' ಎಂದು ಸಂಧಿಯಾಯಿತು. ಬಿಜ್ಜಳನ ನಾಶ, ಜಗದೇಕ ಮಲ್ಲನ ಬಿಡುಗಡೆ, ಅಲ್ಲದೆ ಮುಂದೆ ದೊರೆಯುವ ಹಣ ಮತ್ತು ಅಧಿಕಾರದ ಆಶೆ! ಮುಂದಾದರೂ ಕೀರ್ತಿವರ್ಮನು ಸಾರ್ವಭೌಮನಾಗುವ ನ್ಯಾಯ ವಾದ ಸಂಗತಿ! ಈ ವಿಚಾರದಿಂದ ಬೊಮ್ಮರಸನು ಸಂಚನ್ನು ಸಂಘಟಿಸಿ ಮುಂದಾಳಾಗಿ ನಡಿಸಲು ಒಪ್ಪಿದನು.

ರಾಣಿಯು ತಾನು ಕಲ್ಯಾಣದಲ್ಲಿ ಕೆಲವು ತಿಂಗಳು ನಿಂತು ಚಕ್ರವರ್ತಿ ಗಳ ಮನೆತನದ ಬಗೆಗೆ ಜನರಲ್ಲಿದ್ದ ಪೂಜ್ಯಭಾವನೆಯನ್ನು ಜಾಗ್ರತಗೊಳಿಸ ಬೇಕೆಂದೂ ಬಳಿಕ ದೇವಗಿರಿಗೆ ಹೋಗಿ, ತನ್ನ ತಂಗಿಯ ಪತಿ ಭಿಲ್ಲಮದೇವ ನಿಂದ ಸಂಚಿನ ಘಟನೆಗೆ ಸಹಾಯವನ್ನು ಸಂಪಾದಿಸಬೇಕೆಂದೂ ಅಣ್ಣನೊಡನೆ ಚರ್ಚಿಸಿ ನಿರ್ಣಯಿಸಿದಳು.

ಯೋಗ್ಯ ಸಮಯದಲ್ಲಿ ಮಹಾರಾಣಿ ಮಾಹೇಶ್ವರಿಯು ದೊಡ್ಡ ಪರಿವಾರದೊಡನೆ ಕಲ್ಯಾಣಯಾತ್ರೆಯನ್ನು ಕೈಕೊಂಡಳು. ಅಷ್ಟರಲ್ಲಿ ಬೊಮ್ಮರಸನು ಶಿವದತ್ತನೊಡನೆ ವೇಷಾಂತರದಿಂದ ಬಂದು ಕಲ್ಯಾಣದಲ್ಲಿ ಬೀಡಾರ ಮಾಡಿದ್ದನು. ಮಹಾರಾಣಿ ಬಂದ ಬಳಿಕ ಗುಪ್ತವಾಗಿ ಕಂಡು ಚಾಲುಕ್ಯ ವಂಶದಲ್ಲಿ ನಿಷ್ಠನಾಗಿರುವದಕ್ಕೂ, ತನ್ನ ಪ್ರಾಣಾರ್ಪಣ ಮಾಡಿಯಾದರೂ ರಾಣಿಯ ಕಾರ್ಯ ಸಾಧಿಸುವದಕ್ಕೂ ಪ್ರತಿಜ್ಞೆಮಾಡಿದನು. ರಾಣಿಯು ಐವತ್ತು ಸಾವಿರ ವರಹಗಳನ್ನು ಅಲ್ಲಿಯೇ ಕೊಟ್ಟು, ಉಳಿದ ಹಣವು ಅವನಿಗೆ ಸಂಚಾರದಲ್ಲಿ ಅನುಕೂಲವಾಗಿ ಅಲ್ಲಲ್ಲಿ ಸಿಗುವಂತೆ ವ್ಯವಸ್ಥೆ ಮಾಡಿದಳು. ರಾಣಿಯ ಮೇಲೆ ಬಿಜ್ಜಳನ ಬೇಹುಗಾರಿಕೆಯ ಜಾಲ ಬೆಳೆಯುವದರೊಳಗಾಗಿ ಈ ಕೆಲಸ ಮಾಡಿಕೊಂಡು ರಾಣಿಯ ಅನುಮತಿಯಿಂದ ಶಿವದತ್ತನನ್ನೂ ತನ್ನ ಜೊತೆಗೆ ಕರಕೊಂಡು ಬೊಮ್ಮರಸನು ಹೊರಟು ಹೋದನು.

ಕಲ್ಯಾಣದಲ್ಲಿ ಚಾಲುಕ್ಯ ರಾಜಗೃಹದಲ್ಲಿ ಜಗದೇಕಮಲ್ಲನು ಬಂಧನದಲ್ಲಿದ್ದುದರಿಂದ ಮಾಹೇಶ್ವರಿಯು ನಗರದಲ್ಲಿಯ ಹಳೆಯ ಅರಮನೆಯಲ್ಲಿ ನಿಂತು ಅದರ ಜೀರ್ಣೋದ್ಧಾರ ಮಾಡಿಸುತ್ತ ಹಲವು ತಿಂಗಳು ಕಳೆದಳು. ಬಿಜ್ಜಳನು ಮನಸ್ಸಿಲ್ಲದಿದ್ದರೂ ಆದರವನ್ನು ತೋರ್ಪಡಿಸುತ್ತ ರಾಜವಂಶೀಯರ ಹಣವನ್ನು ರಾಣಿಗೆ ಸಂದಾಯ ಮಾಡುತ್ತಾ, ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ಅವಲೋಕಿಸುತ್ತಿದ್ದನು. ರಾಜ್ಯಭಂಡಾರದಿಂದ ಲೆಕ್ಕಾಚಾರವಾಗಿ ಬರಬೇಕಾದ ಹಣ ತನ್ನ ಕೈಸೇರಿದ ಬಳಿಕ ಮಹಾರಾಣಿಯು ತನ್ನ ಬೀಡಾರವನ್ನು ಕಿತ್ತು ಉತ್ತರಕ್ಕೆ ಪ್ರಯಾಣ ಬೆಳಿಸಿದಳು. ಅದೇ ಸಮಯಕ್ಕೆ ದೇವಗಿರಿಯ ಕಡೆಗೆ ಬಂದ ಶರಣರ ಸಮೂಹದಲ್ಲಿದ್ದ ಚೆನ್ನಬಸವಣ್ಣನನ್ನು ಕಂಡು ಅವನು ಪಡೆಯುತ್ತಿರುವ ಲೋಕಪ್ರೀತಿಯಲ್ಲಿ ತಾನೂ ಪಾಲು ಪಡೆಯುವಂತೆ ನಡೆದಳು. ಆಗ ಸಂದೇಹಿತರಾದ ಬಿಜ್ಜಳನೂ ನಾರಣಕ್ರಮಿತನೂ ನಡಿಸಿದ ತಂತ್ರವನ್ನು ಹಿಂದೆ ವಿವರಿಸಿದೆ.

ಬಿಜ್ಜಳನು ಅಡ್ಡಹಾದಿಗೆ

ಬಿಜ್ಜಳನು ಚಾಲುಕ್ಯಸಾಮ್ರಾಜ್ಯದ ಸರ್ವಾಧಿಕಾರಿಯಾದಾಗ, ತನ್ನ ತಮ್ಮ ಕರ್ಣದೇವನನ್ನು ತರ್ದವಾಡಿಯ ಮಂಡಲೇಶ್ವರನನ್ನಾಗಿ ನೇಮಿಸಬಹುದಾಗಿತ್ತು. ಆದರೆ ಕರ್ಣದೇವ ವಿಷಯಾಸಕ್ತ! ಮೇಲಾಗಿ ಮುಂದೆ

ಅಧಿಕಾರವನ್ನು ತನ್ನ ಮಕ್ಕಳಿಗೆ ಬಿಡಲಿಕ್ಕಿಲ್ಲ ಎಂಬ ಕಾರಣಗಳಿಂದ ಅವನನ್ನು ಹಾಗೆ ಮಂಗಳವೇಡೆಯಲ್ಲಿಡದೆ ತನ್ನ ಹತ್ತಿರವೇ ನಗರರಕ್ಷಣಾಧಿಕಾರಿಯನ್ನಾಗಿ ಮಾಡಿ ಇಟ್ಟುಕೊಂಡಿದ್ದನು. ತರ್ದವಾಡಿಯ ಮಂಡಲೇಶ್ವರನೆಂದು ವೈಲಾರದೇವ ಎಂಬವನನ್ನು ಮಂಗಳವೇಡೆಯಲ್ಲಿ ನೇಮಿಸಿದ್ದನು.

ಮುಂದೆ ಬಂಧನದಲ್ಲಿದ್ದ ನಾಮಧಾರಿ ಚಕ್ರವರ್ತಿ ಜಗದೇಕಮಲ್ಲನ ಕಾವಲಿನ ದಳದ ಅಧಿಪತಿಯನ್ನಾಗಿ ಕರ್ಣದೇವನನ್ನು ನೇಮಿಸಿದನು. ಅವನ ಕೈಕೆಳಗೆ ಇನ್ನೂರು ಜನರ ಅಶ್ವದಳವೂ ಸಾವಿರಪದಾತಿಗಳೂ ಇದ್ದರು. ಕಾವಲಿನಲ್ಲಿದ್ದ ಜಗದೇಕಮಲ್ಲ, ಕಾಪಿನ ದಳಪತಿ ಕರ್ಣದೇವ ಇವರಿಬ್ಬರ, ಮಧುಪಾನ ಗಣಿಕಾವಿಹಾರಾದಿ ವಿಲಾಸಭೋಗಗಳು ಒಟ್ಟಾಗಿಯೇ ನಡೆಯುತ್ತಿದ್ದವು. ಆದರೂ ಕರ್ಣನು ಅಣ್ಣನ ದರ್ಪಕ್ಕೆ ಅಂಜಿ ಕಾವಲಿನ ವಿಷಯದಲ್ಲಿ ಎಚ್ಚರವಾಗಿದ್ದನು. ಜಗದೇಕಮಲ್ಲನು ಬಿಜ್ಜಳನ ಕಾಲಚಕ್ರ ತಿರುಗುವ ದಾರಿಯನ್ನು ನೋಡುತ್ತಿದ್ದನು.

ಬಿಜ್ಜಳನ ಹಿರಿಯ ಮಗ ಸೋವಿದೇವನು ಗೋವೆಯ ಕ್ಷತ್ರಿಯ ವಿದ್ಯಾಲಯದಲ್ಲಿದ್ದನಷ್ಟೆ! ಅಲ್ಲಿ ವಿದ್ಯಾರ್ಥಿಗಳ ಮೇಲೆ ಅಧ್ಯಾಪಕರ ಹಿಡಿತವೇ ಇರಲಿಲ್ಲ. ವಿದ್ಯಾರ್ಥಿಗಳು ವಿಷಯಲೋಲುಪರಾಗಿರುತ್ತಾರೆಂಬ ವಾರ್ತೆಯೂ ಇತ್ತು. ಆದರೂ ಕ್ಷತ್ರಿಯೋಚಿತವಾದ ವೀರ-ಕಾಠಿಣ್ಯಾದಿ ಗುಣಗಳೂ ಚತುರತೆಯೂ ಶಸ್ತ್ರವಿದ್ಯೆಯೂ ಅವಶ್ಯವೆಂದು ಬಿಜ್ಜಳನು ಅವನನ್ನು ಒಳ್ಳೆಗಾಂವಿಯಿಂದ ಬಿಡಿಸಿ ಅಲ್ಲಿಗೆ ಕಳಿಸಿದ್ದನು. ಈಗ ಅವನಿಗೆ ೨೫ ವರ್ಷ! ಅವನನ್ನು ಬೇಗನೆ ಕರೆಯಿಸಿಕೊಂಡು ಮದುವೆ ಮಾಡಿ, ಯುವರಾಜ ಪಟ್ಟಗಟ್ಟಿ ಮಂಡಲೇಶ್ವರಾಧಿಕಾರದಲ್ಲಿ ನಿಯೋಜಿಸುವದು ಅಗತ್ಯವಾಗಿತ್ತು. ಅದಕ್ಕಾಗಿ ಮಂಗಳವೇಡೆಯ ಅರಮನೆಯನ್ನು ಜೀರ್ಣೋದ್ಧಾರಮಾಡಿ ಅಲಂಕರಿಸುವ ಕಾರ್ಯಪ್ರಾರಂಭಿಸುವದಕ್ಕಾಗಿ ಬಿಜ್ಜಳನು ಸ್ವತಃ ಮಂಗಳವೇಡೆಗೆ ಹೋದನು. ಅಲ್ಲಿಗೆ ಬಂದ ಎರಡು ವಾರಗಳ ಮೇಲೆ ಸೋವಿದೇವನು ವಾತಾಪಿದುರ್ಗದಿಂದ ಕಳುಹಿದ ಪತ್ರವು ಬಿಜ್ಜಳನಿಗೆ ತಲುಪಿತು. ಅದರ ಸಾರಾಂಶ ಹೀಗಿತ್ತು :

“ನನ್ನ ಅವಿನಯಕ್ಕಾಗಿ ತಂದೆಯವರಲ್ಲಿ ಕ್ಷಮೆ ಕೇಳಿಕೊಳ್ಳಲು ಈ ಪತ್ರ ಬರೆಯುತ್ತಿದ್ದೇನೆ. ಗೋವೆಯಲ್ಲಿಯ ಶಸ್ತ್ರಾಭ್ಯಾಸವನ್ನು ಮುಗಿಸಿದೆ.

ಶಸ್ತ್ರಪ್ರಯೋಗ ಪರೀಕ್ಷೆಯಲ್ಲಿ ತೇರ್ಗಡೆಯಾಗದಿದ್ದುದು ವಿಷಾದದ ಸಂಗತಿ ! ಕ್ಷತ್ರಿಯ ರಾಜಕುಮಾರನಿಗೆ ತನ್ನ ಅರಸಿಯನ್ನು ತಾನೇ ಗೊತ್ತುಮಾಡಿಕೊಳ್ಳುವ ಅಧಿಕಾರವಿರುವದನ್ನು ಅನುಲಕ್ಷಿಸಿ, ನಾನು ನನ್ನ ಜೀವನದ ಜತೆಗಾರ್ತಿಯನ್ನು ಆರಿಸಿಕೊಂಡಿದ್ದೇನೆ. ಅವಳು ನಿರಾಶ್ರಿತ ಕನ್ಯೆಯಾದರೂ ರಾಜಪುತ್ರಿ ! ರೂಪ-ಗುಣಗಳಲ್ಲಿ ನಿಮ್ಮ ಸೊಸೆಯಾಗಲು ಯೋಗ್ಯಳೆಂದು ನೀವು ನೋಡಿದಾಗ ಮನಗಾಣುವಿರಿ. ಅವಳನ್ನು ನಾನು ಗಾಂಧರ್ವವಿಧಿಯಿಂದ ವಿವಾಹವಾಗಿದ್ದೇನೆ. ಹೆಸರು ಸಾವಲದೇವಿ ! ತಮಗೆ ತಿಳಿಸದೆ ಹೀಗೆ ಮಾಡಿದುದಕ್ಕೆ ಕ್ಷಮಿಸಬೇಕಾಗಿ ಪ್ರಾರ್ಥಿಸುತ್ತೇನೆ.”

ಬಿಜ್ಜಳನು ಎರಡು ದಿವಸ ಕಾತರದಲ್ಲಿ ಕಳೆದನು. ಇದರಲ್ಲಿ ಅವನ ಹಲವು ಎಣಿಕೆ ಮಣ್ಣುಗೂಡಿದ್ದವು. ಮಗನು ವಿದ್ಯಾಪರಿಣತನಾಗಲಿಲ್ಲ. ಮೋಹಪರವಶನಾಗಿ ಯಾವದೋ ಕುಲಹೀನಕನ್ಯೆಯನ್ನು ಮದುವೆಯಾದುದು ತನ್ನ ವಂಶದ ಗೌರವಹಾನಿ; ತನ್ನ ಹಿರಿತನವನ್ನು ಗಣಿಸದೆ ವರ್ತಿಸಿದನು. ಈ ಬಗೆಯಾಗಿ ಚಡಪಡಿಸುತ್ತಿದ್ದನು. ಹೀಗಿರುವಾಗಲೇ ನಾರಣಕ್ರಮಿತನು ದೇವಗಿರಿ, ಇಳಾಪುರಗಳ ಕಡೆಯ ಅಪಮಾನದ ಹೊರೆಯನ್ನೂ ಅರಾಜಕತೆಯ ವರದಿಯನ್ನೂ ಹೊತ್ತು ಬಂದದ್ದು! ಹಿಂದೆ ಹೇಳಿದಂತೆ ಪರಿಸ್ಥಿತಿಯನ್ನು ಎದುರಿಸಲು ಇಬ್ಬರೂ ಕೆಲವೊಂದು ಯೋಜನೆ ಮಾಡಿದರು.

‘ಇನ್ನು ಶರಣರನ್ನು ನಿಗ್ರಹಿಸಲೇಬೇಕು. ರಾಣಿಯ ಚತುರನಾದ ಈಗಿನ ಹೆಗ್ಗಡೆಯನ್ನು ಉಪಾಯದಿಂದ ಬರಮಾಡಿಕೊಂಡು ಸೆರೆಯಲ್ಲಿಡಬೇಕು. ರಾಣಿ ಮಾಹೇಶ್ವರಿಯ ಚಟುವಟಿಕೆಗಳನ್ನು ಪ್ರತಿಬಂಧಿಸಬೇಕು. ಅಗತ್ಯವಾದರೆ ಅವಳನ್ನೂ ಬಂಧನದಲ್ಲಿಡಬೇಕು. ಸಾಮ್ರಾಜ್ಯದ ಸೈನ್ಯದಲ್ಲಿ ಪುನರ್ಘಟನೆ ಮಾಡಿ, ಸಾಮಂತರ ಅಧೀನ ಸೈನ್ಯವನ್ನು ಕಡಿಮೆ ಮಾಡಬೇಕು. ಈ ಕಾಲಕ್ಕೆ ಗೃಹಕಲಹಕ್ಕೆ ಆಸ್ಪದವಾಗಬಾರದು. ಅದರಿಂದ ಸೋವಿದೇವನ ಕೈಹಿಡಿದಾಕೆ ರೂಪಗುಣಸಂಪನ್ನಳೇ ಆಗಿದ್ದರೆ ಸೊಸೆಯೆಂದು ಗ್ರಹಿಸಿ ಅವನ ಯುವರಾಜ ಪಟ್ಟಾಭಿಷೇಕಕ್ಕೆ ಏರ್ಪಡಿಸಬೇಕು.’

ಮಂಗಳವೇಡೆಗೆ ಬಂದು ತನ್ನನ್ನು ಕಾಣಬೇಕೆಂದು ಸೋವಿದೇವನಿಗೆ ನಿರೂಪ ಹೋಯಿತು. ರಾಜಕುಮಾರನನ್ನು ಸಂಭ್ರಮದಿಂದ ಸ್ವಾಗತಿಸುವ ಸಿದ್ಧತೆಯನ್ನು ಕ್ರಮಿತನು ತಾನೇ ವಹಿಸಿಕೊಂಡನು.

ಉತ್ಸವದೊಡನೆ ನಗರಪ್ರವೇಶಮಾಡಿದ ರಾಜಕುಮಾರನ ಹಾಗು ಅವನ ಪತ್ನಿಯ ಕುದುರೆಗಳು ಅರಮನೆಯ ಮುಂದಿನ ಅಂಗಣದಲ್ಲಿ ಬಂದವು. ಬಿಜ್ಜಳನು ಪರಿವಾರದೊಡನೆ ಮುಖಮಂಟಪದಲ್ಲಿ ನಿಂತು ನೋಡುತ್ತಿದ್ದನು. ಸೋವಿದೇವನು ದೂರದಿಂದಲೇ ಕುದುರೆಯನ್ನಿಳಿದು ತಂದೆಗೆ ನಮಿಸಿ ಕೈ ಮುಗಿದು ಬಾಗಿ ನಿಂತನು. ಬಿಜ್ಜಳನು ಅವನನ್ನು ಗಮನಿಸದೆ ಹಿಂದಿನ ಕುದುರೆಯನ್ನಿಳಿದು ಬರುವ ಯುವತಿಯನ್ನೇ ನೋಡುತ್ತಿದ್ದನು. ಆಕೆಯು ಜರದಂಚಿನ ಮುಗಿಲಬಣ್ಣದ ಸೀರೆಯನ್ನುಟ್ಟು ವೀರಗಚ್ಚೆಯನ್ನು ಹಾಕಿದ್ದಳು. ಕಾಲಲ್ಲಿ ಪಾಪೋಸು ಮೆಟ್ಟಿದ್ದಳು. ಸೆರಗನ್ನು ಎದೆಗೆ ಸುತ್ತಿ ಬಿಗಿದು ಕಟ್ಟಿದ್ದಳು. ಮೇಲೆ ಎರಡೆಳೆಯ ಮುತ್ತಿನ ಹಾರ ಅಲೆದಾಡುತ್ತಿತ್ತು. ಗುಲಾಬಿ ಮಕಮಲ್ಲಿನ ಪಟ್ಟಿಯನ್ನು ಟೊಂಕಕ್ಕೆ ಬಿಗಿದು ಅದಕ್ಕೆ ಖಡ್ಗವನ್ನು ಕಟ್ಟಿದ್ದಳು. ತಲೆಗೂದಲನ್ನು ಸ್ವಲ್ಪ ಸಡಿಲಾಗಿ ಅರ್ಧ ಇಳಿಬಿಟ್ಟು, ಮುತ್ತಿನ ಶಿರೋಭೂಷಣವನ್ನು ಹಚ್ಚಿದ ಸುವರ್ಣ ಪಟ್ಟಿಯ ಟೊಪ್ಪರವನ್ನು ಹಾಕಿದ್ದಳು. ಅಂಗಾಂಗಗಳು ಚೆಲುವಾಗಿದ್ದು ಮುಖದ ಮೇಲೆ ವೀರಶ್ರೀಯು ನಲಿದಾಡುತ್ತಿತ್ತು. ವಿನಯದಿಂದ ಬಂದು ಪಾಪೋಸು ಕಳೆದು ಬಿಜ್ಜಳರಾಜನಿಗೆ ವಂದಿಸಿ ಅವನ ಪಾದಧೂಳಿಯನ್ನು ತಳೆದಳು. ಬಿಜ್ಜಳನ ಮುಖ ಪ್ರಸನ್ನವಾಗಿತ್ತು. ಅದನ್ನು ಗಮನಿಸಿ ನಾರಣಕ್ರಮಿತನು ಮಂಗಲಪಾಠ ಹೇಳಿದನು. ಆ ದನಿಗೆ ಎಚ್ಚೆತ್ತ ಬಿಜ್ಜಳನು ಮಗನನ್ನು ಅಪ್ಪಿ ಸೊಸೆಯ ತಲೆಯನ್ನು ನೇವರಿಸಿದನು. ಸುಮಂಗಲೆಯರು ಮಂಗಲಾರತಿ ಮಾಡಿ, ಪೀಡೆಗಳೆದು ದಂಪತಿಗಳನ್ನು ಒಳಗೆ ಕರೆದೊಯ್ದರು.

ಈ ಸಂದರ್ಭದಲ್ಲಿ ಕ್ರಮಿತನು ಬಿಜ್ಜಳನಿಗೆ ಸರಿಯಾದ ಬೆಸುಗೆ ಹಾಕಿದನು. ಬಿಜ್ಜಳನು ಅಡ್ಡಹಾದಿ ಹಿಡಿದನು. ಕಲ್ಯಾಣದಲ್ಲಿಯ ಕಾರಭಾರಕ್ಕೆ ಕ್ರಮಿತನಿಗೆ ಹೆಚ್ಚಿನ ಅವಕಾಶ ಕೊಟ್ಟು ಹಿಂದೆ ಹೇಳಿದಂತೆ ಅವನನ್ನು ಮುಂದೆ ಕಳಿಸಿದ್ದನು.

ಪರಸ್ಪರ ಹೊಂಚು

ಯಾತ್ರಾರ್ಥಿಗಳಾದ ಶರಣರ ತಂಡ ದೇವಗಿರಿಯನ್ನು ಬಿಟ್ಟು ಕಲ್ಯಾಣಕ್ಕೆ ಮರಳಿದ ಮೇಲೆಯೂ ಚಾಲುಕ್ಯ ರಾಣಿಯು ದೇವಗಿರಿಯಲ್ಲಿಯೇ ಹಲವು ದಿವಸ ಉಳಿದಿದ್ದಳು. ಮೊದಲೇ ಗೊತ್ತಾದಂತೆ ಮಲ್ಲಬೊಮ್ಮರಸನು

ಶಿವದತ್ತನೊಡನೆ ಆರು ತಿಂಗಳು ಸಂಚರಿಸಿದ ಬಳಿಕ ದೇವಗಿರಿಯಲ್ಲಿ ರಾಣಿಯನ್ನು ಕಾಣಬಂದನು. ಅವರು ವಿವಿಧ ವೇಷಗಳಿಂದ-ವಿಶೇಷವಾಗಿ ಶರಣಧರ್ಮಪ್ರಚಾರದ ಜಂಗಮವೇಷದಿಂದ-ದಕ್ಷಿಣಪೂರ್ವ ದೇಶದ ಸಾಮಂತರನ್ನೆಲ್ಲ ಕಂಡು ಬಂದಿದ್ದರು. ಈ ಅವಧಿಯಲ್ಲಿ ಬೊಮ್ಮರಸನು ಶರಣರ ವಚನಗಳನ್ನು ಕಲಿತು ಪ್ರವಚನಮಾಡುವದನ್ನು ರೂಢಿಸಿಕೊಂಡಿದ್ದನು. ಬುದ್ಧಿವಂತರು ಯಾವದನ್ನಾದರೂ ತೀವ್ರವಾಗಿ ಗ್ರಹಿಸಿ ಅನುಸರಿಸುವರು. ಬೊಮ್ಮರಸನು ತನ್ನ ಪೂರ್ವಪರಿಚಿತ ನಂಬಿಗೆಯ ಸಾಮಂತಮಾಂಡಲಿಕರೊಡನೆ ಪ್ರಕಟವಾಗಿ ಚರ್ಚಿಸಿದನು. ಅವರ ನೆರವಿನಿಂದ ಬೇರೆಯವರನ್ನು ಒಲಿಸಿಕೊಳ್ಳಲು ಪ್ರಯತ್ನಿಸಿದನು. ಹೀಗೆ ಯುಕ್ತಿ-ಪ್ರಯುಕ್ತಿಗಳಿಂದ ಬಿಜ್ಜಳನ ಬಗೆಗೆ ಅಸಂತೋಷವನ್ನು ಹರಡಿದನು. ಕೆಲವರೊಡನೆ ರಹಸ್ಯವಾಗಿ ಒಡಂಬಡಿಕೆ ಮಾಡಿಕೊಂಡನು. ಧನ, ರಾಜ್ಯ, ಸ್ವಾತಂತ್ರ್ಯಗಳ ಆಸೆಯಿಂದ ಕೆಲಕೆಲವರು ಸಂಚಿಗೆ ಸೇರಲು ಹಾತೊರೆದರು.

ಮಾಹೇಶ್ವರಿ ರಾಣಿಯು ಬೊಮ್ಮರಸ ಶಿವದತ್ತರನ್ನು ತನ್ನ ಬೀಡಾರದಲ್ಲಿ ಬರಮಾಡಿಕೊಂಡು ಅವರ ಕಾರ್ಯ ಸಾಧನೆಗಳನ್ನು ಕೇಳಿ ಸಂತೋಷಪಟ್ಟಳು. ಇನ್ನು ಜಗದೇಕಮಲ್ಲನನ್ನು ಸಂಧಿಸುವ ಉಪಾಯ-ಹುಡುಕಬೇಕಾಗಿತ್ತವರಿಗೆ ! ಮೊದಲು ನಾಲ್ಕು ದಿವಸ ವಿಶ್ರಾಂತಿಗೊಳ್ಳಲಿ; ಮತ್ತೆ ಮಾತಾಡಬಹುದು ಎಂದು ಆ ದಿನ ಅಲ್ಲಿಗೆ ಬಿಟ್ಟು ಅವರ ವಸತಿ ಉಪಚಾರಗಳ ವ್ಯವಸ್ಥೆ ಮಾಡಿಸಿದಳು.

ಬಿಜ್ಜಳನ ರಾಜ್ಯಾಪಹಾರದಿಂದ ಭಿಲ್ಲಮನೂ ಅಸಂತುಷ್ಟನಾಗಿದ್ದನು. ಆದರೆ ಸುಮ್ಮನಿದ್ದನು. ಈಗ ತನ್ನ ಪತ್ನಿಯ ಆಗ್ರಹದಿಂದ, ಚಾಲುಕ್ಯ ರಾಣಿಗೆ ಪ್ರತ್ಯಕ್ಷವಾಗಿ ಸಮಯಾನುಸಾರ ಸಹಾಯ ಮಾಡಲು ಒಪ್ಪಿಕೊಂಡನು. ಯುದ್ಧವೇ ಸಂಭವಿಸಿದರೆ ಕರ್ಹಾಡದ ವಿಜಯಾರ್ಕದೇವನೊಡನೆ ಕೂಡಿ, ಕಲ್ಯಾಣದ ಮೇಲೆ ಏರಿ ಬರುವದಾಗಿ ಮಾತುಕೊಟ್ಟನು.

ಇತ್ತ ಬಿಜ್ಜಳನು ಮಾಹೇಶ್ವರಿ ರಾಣಿಗಾಗಿ ತಾನು ರಚಿಸಿದ ಬಲೆಯನ್ನು ಬೀಸಿದನು. ಮಂಗಳವೇಡೆಯಿಂದ ರಾಜದೂತನೊಬ್ಬನು ಚಾಲುಕ್ಯಮಹಾರಾಣಿಗೆ ಬಿಜ್ಜಳರಾಜನ ಪತ್ರವನ್ನು ತಕ್ಕೊಂಡು ದೇವಗಿರಿಗೆ ಬಂದನು. ರಾಣಿಯ ದರ್ಶನ ಪಡೆದು ತಲುಪಿಸಿದನು.

'ಸ್ವಸ್ತಿ ಸಮಸ್ತ ಭುವನಾಶ್ರಯ ಚಾಲುಕ್ಯಾಭರಣ ಮಹಾರಾಜಾಧಿರಾಜ ರಾಜಪರಮೇಶ್ವರ ತ್ರೈಲೋಕ್ಯಮಲ್ಲ ಕೈಲಾಸವಾಸಿ ನೂರ್ಮಡಿ ತೈಲಪದೇವರ ಪಟ್ಟಮಹಿಷಿ, ಮಾಹೇಶ್ವರೀ ದೇವಿಯವರ ಸನ್ನಿಧಾನಕ್ಕೆ—

ಚಾಲುಕ್ಯರಾಜ್ಯ ಸರ್ವಾಧಿಕಾರಿ ಭುಜಬಲಚಕ್ರವರ್ತಿ, ತ್ರಿಭುವನಮಲ್ಲ ಬಿಜ್ಜಳರಾಯರ ಬಿನ್ನಪ !

ಜಗದೇಕಮಲ್ಲರಸರ ಬಳಿಕ ಚಾಲುಕ್ಯ ಸಾಮ್ರಾಜ್ಯಕ್ಕೆ ಕುಮಾರ ಕೀರ್ತಿವರ್ಮರೇ ಸಿಂಹಾಸನಾಧಿಕಾರಿಗಳು. ಬರುವ ಮಾಘದಲ್ಲಿ ಕುಮಾರ ಸೋಮಿದೇವನಿಗೆ ಮಂಗಳವೇಡೆಯಲ್ಲಿ ಕಲಚೂರೀ ಯುವರಾಜ ಪಟ್ಟಬಂಧೋತ್ಸವವಾದ ಬಳಿಕ, ವೈಶಾಖದಲ್ಲಿ ಕಲ್ಯಾಣದಲ್ಲಿ ಕೀರ್ತಿವರ್ಮದೇವರಿಗೆ ಚಾಲುಕ್ಯಯುವರಾಜ ಪಟ್ಟಾಭಿಷೇಕ ಮಾಡಬೇಕೆಂದು ಆಲೋಚಿಸಿದ್ದೇವೆ. ಆದರೆ ಜಗದೇಕಮಲ್ಲರಸರು ಕುಮಾರ ಕೀರ್ತಿವರ್ಮರ ಅಧಿಕಾರವನ್ನು ಒಪ್ಪದಿರುವದು ನಮಗೆ ಆತಂಕವಾಗಿದೆ. ನೀವು ನಿಮ್ಮ ಚತುರ ಪ್ರತಿನಿಧಿಯೊಬ್ಬನನ್ನು ಕಳಿಸಿ ಅವರನ್ನು ಒಪ್ಪಿಸುವಂತೆ ಮಾಡಬೇಕು. ನಿಮ್ಮಿಂದ ಆಜ್ಞಪ್ತನಾಗಿ ಬರುವ ಒಬ್ಬನನ್ನು ಜಗದೇಕಮಲ್ಲರಸರಿಗೆ ದರ್ಶನ ಮಾಡಿಸುತ್ತೇವೆ. ಆ ರಾಯಭಾರಿ ತನ್ನ ಸಂಧಾನಕಾರ್ಯ ಪೂರೈಸಿಕೊಳ್ಳುವ ವರೆಗೆ ದೊರೆಗಳ ನಿವಾಸದಲ್ಲಿಯೇ ಇರಬೇಕಾಗುವದು. ಆದುವರೆಗೆ ಹೊರಗೆ ಬರುವದಕ್ಕಾಗಲಿ, ಹೊರಗಿನವರೊಡನೆ ಸಂಬಂಧ ಇಟ್ಟುಕೊಳ್ಳುವದಕ್ಕಾಗಲಿ ಆಸ್ಪದವಿಲ್ಲ.

ಮಂಗಳವೇಡೆಯ ಉತ್ಸವಕ್ಕೆ ಸಾರ್ವಭೌಮ ಮಹಾರಾಣಿಯವರಾದ ತಮ್ಮನ್ನು ಬರಮಾಡಿಕೊಳ್ಳುವ ಆಶೆಯನ್ನು ಇಟ್ಟುಕೊಂಡಿದ್ದೇವೆ. ಆಗ ನಾವು ಕುಮಾರ ಕೀರ್ತಿವರ್ಮರ ಯುವರಾಜ ಪಟ್ಟಾಭಿಷೇಕೋತ್ಸವದ ರೂಪರೇಷೆ ಗೊತ್ತುಮಾಡಬಹುದು. ನಾವೀಗ ಕಲ್ಯಾಣಕ್ಕೆ ಹೋಗುತ್ತೇವೆ. ನಿಮ್ಮ ಉತ್ತರಕ್ಕಾಗಿ ಕಲ್ಯಾಣದಲ್ಲಿ ಕಾದಿರುವೆನು.

ತಮ್ಮ ಸರ್ವಾಧಿಕಾರಿ
ಬಿಜ್ಜಳರಾಯ

ಚತುರಳಾದ ರಾಣಿಯು ಪತ್ರದ ಒಕ್ಕಣಿಕೆಯನ್ನು ನಂಬಲಿಲ್ಲ. ಆದರೆ ಅದನ್ನು ತಮ್ಮ ಕಾರ್ಯಸಾಧನೆಗೇ ಉಪಯೋಗಿಸಿಕೊಳ್ಳಬಹುದೆಂದು ನೆನಿ

ಸಿದಳು. ರಾಯಭಾರಿಯನ್ನು ಗೊತ್ತುಮಾಡಿ ಕಳಿಸಲಾಗುವದೆಂದು ತಾತ್ಕಾಲಿಕ ಉತ್ತರ ಬರೆಯಿಸಿ ರಾಜದೂತನನ್ನು ಸನ್ಮಾನಿಸಿ ಕಳಿಸಿದಳು.

ಗುಪ್ತಯೋಜನೆ

ಮಹಾರಾಣಿಯ ಪರಿವಾರದಲ್ಲಿ ಹೆಗ್ಗಡೆ ಅಗ್ಗಳನೂ ನರ್ಮಸಖಿ-ಆಪ್ತ ದಾಸಿ-ಭಾಮೆಯೂ ಆಕೆಗೆ ಅತ್ಯಂತ ನಂಬಿಗೆಯವರಾಗಿದ್ದರು. ಅಗ್ಗಳನು ರಸಿಕ ಕವಿ, ವಾಕ್‌ಪಟು, ಜಾಣ, ಸಾಹಸಿ! ಅಲ್ಲದೆ ಕರ್ತವ್ಯನಿಷ್ಠನಾಗಿದ್ದನು. ಭಾಮೆ ಚತುರೆ, ಮಾಟಗಾರ್ತಿ, ಅಗ್ಗಳನ ಪ್ರೇಯಸಿ.

ಮಹಾರಾಣಿಯು ಇವರಿಬ್ಬರನ್ನೂ ಬೊಮ್ಮರಸು—ಶಿವದತ್ತರನ್ನೂ ಕೂಡಿಕೊಂಡು ಗುಪ್ತವಾಗಿ ಬಿಜ್ಜಳನ ಪತ್ರದ ವಿಷಯವನ್ನು ಚರ್ಚಿಸಿದಳು. 'ಮೋಸದ ಮೂರ್ತರೂಪ ಈ ಪತ್ರ, ನಂಬಿಗೆಗೆ ಅರ್ಹವಾಗಿಲ್ಲ' ಎಂದು ಎಲ್ಲರ ಅಭಿಪ್ರಾಯವಾಯಿತು. ಬಳಿಕ ಶಿವದತ್ತನಿಂದ ಆರಂಭವಾದ ಮಾತುಗಳು ಹೀಗೆ :

"ನಮಗೆ ಜಗದೇಕಮಲ್ಲರಸರನ್ನು ಕಾಣುವ ಉಪಾಯ ಬೇಕಾಗಿತ್ತು; ಈಗ ಈ ಪತ್ರದಂತೆ ರಾಯಭಾರಿಯು ನೋಗಿನಿಂದ ಹೋಗಿ ಅವರನ್ನು ಕಾಣಬಹುದು."

"ಹಾಗೆ ಹೋದವನು ಬಂಧನದಲ್ಲಿ ಶಿಲುಕುವನು; ಮೋಲೆಯೇ ಕಾಣುತ್ತದೆ"

"ಹೌದು, ಹಾಗೆ ಹೋಗುವ ಮೊದಲು ಹೊರಗಿನವರೊಡನೆ ಸುದ್ದಿ-ಸಂಪರ್ಕವನ್ನಿಟ್ಟುಕೊಳ್ಳುವ ವ್ಯವಸ್ಥೆಮಾಡಿಕೊಂಡೇ ಹೋಗಬೇಕು. ಆ ಮೇಲೆ ಬೇಕಾದುದನ್ನು ಸಾಧಿಸಿಕೊಳ್ಳಬಹುದು."

"ಜಗದೇಕಮಲ್ಲದೇವರಿಗೆ ನೇಮಿಸಿದ ಗಣಿಕೆಯರ ಅಧ್ಯಕ್ಷಿಣಿಯಾಗಿ ನಮ್ಮ ಅಕ್ಕ ಇದ್ದಾಳೆ. ಅವಳಿಗೆ ನಾನು ಪತ್ರ ಕೊಡುತ್ತೇನೆ. ಗುಪ್ತವಾಗಿ ಸುದ್ದಿಯನ್ನು ಕಳಿಸುವ ಏರ್ಪಾಡು ಮಾಡುತ್ತಾಳೆ."

—ಎಂದು ಭಾಮೆ ಹೇಳಿದಳು.

"ಹಾಗಿದ್ದರೆ ಬಹಳ ಅನುಕೂಲವಾಯಿತು. ಜಗದೇಕಮಲ್ಲನ ಸ್ನೇಹಿತರೇ ಆಗಿರುವ ಬೊಮ್ಮರಸರು ರಾಯಭಾರಿಯಾಗಿ ಹೋಗಲಿ! ಅವರಿಗೆ ನಂಬಿಗೆಯುಂಟಾಗುವದು"

—ಅಗ್ಗಳನು ಎಂದನು. ಶಿವದತ್ತನು ಅದನ್ನು ಒಪ್ಪದೆ ಹೇಳಿದನು:

"ಬೊಮ್ಮರಸರಲ್ಲಿ ಚಕ್ರವರ್ತಿಯ ನಂಬಿಗೆ ಇದ್ದುದು ನಿಜ! ಆದರೆ ಬೊಮ್ಮರಸನು ನಿಡುಗಲ್ಲು ಬಿಟ್ಟದನ್ನು ತಿಳಿದು ಬಿಜ್ಜಳನು ದಶದಿಕ್ಕುಗಳಲ್ಲಿ ಇವರನ್ನು ಹುಡುಕಿಸುತ್ತಿರಬಹುದು. ಇದುವರೆಗೆ ನಾವು ವೇಷಮರಿಸಿ ಸಂಚರಿಸುತ್ತಿದ್ದೇವೆ. ಇವರನ್ನು ಬಲ್ಲವರು ಕಲ್ಯಾಣದ ರಾಜಕೀಯದಲ್ಲಿ ಬಹಳ ಮಂದಿ! ಯಾರಾದರೂ ಗುರ್ತಿಸಿ ಬಿಜ್ಜಳನಿಗೆ ಗೊತ್ತಾದರೆ ಬೊಮ್ಮರಸರ ಪ್ರಾಣವೇ ಉಳಿಯದು. ಇನ್ನು ಕೆಲವೇ ತಿಂಗಳು ಕಳೆದರೆ ಇವರ ಗಡ್ಡ, ಮೀಸಿ, ಜಡೆ, ಇನ್ನಷ್ಟು ಬೆಳೆದು ನಿಜವಾದ ಸನ್ಯಾಸಿಗಳಂತಾಗುವರು. ಆಗ ಯಾರೂ ಗುರ್ತಿಸರು. ಬೇಕಾದಲ್ಲಿ ಹೋಗಬಹುದು.

ಅದು ಸರಿಯೆನಿಸಿತೆಲ್ಲರಿಗೆ! ಮತ್ತೆ ಕೆಲವು ಮಾತುಕತೆಗಳಾದ ಮೇಲೆ, ಅವರು ಸಿದ್ಧಗೊಳಿಸಿದ ಮುಂದಿನ ಸಂಚು-ಹೊಂಚುಗಳ ಯೋಜನೆ ಹೀಗಿತ್ತು:

ಅಗ್ಗಳನು ಮಹಾರಾಣಿಯ ಪ್ರತಿನಿಧಿಯಾಗಿ ಬಿಜ್ಜಳನನ್ನು ಕಂಡು ಜಗದೇಕಮಲ್ಲನ ಕಡೆಗೆ ಹೋಗಬೇಕು. ಚಾಲುಕ್ಯರಾಜ್ಯದ ಪುನರುದ್ಧಾರಕ್ಕೆ ನಡಿಸಿದ ಪ್ರಯತ್ನಗಳನ್ನು ವಿವರವಾಗಿ ತಿಳಿಸಿ ಈ ಸಂಚಿನ ಯೋಜನೆಗೆ ಅವರನ್ನು ಸಿದ್ಧಗೊಳಿಸಬೇಕು. ಜಗದೇಕಮಲ್ಲನು ವಿಲಾಸವನ್ನು ಉಪೇಕ್ಷಿಸಿ ಧಾರ್ಮಿಕ ವಿಷಯದಲ್ಲಿ ಆಸಕ್ತಿವುಂಟಾದವರಂತೆ ನಟಿಸಿ, ಕೆಲವು ದಿವಸದ ಮೇಲೆ ತನಗೆ ಧರ್ಮೋಪದೇಶ ಮಾಡಲು ಮಹಮನೆಯ ಶರಣರೊಬ್ಬರನ್ನು ಕಳಿಸಬೇಕೆಂದು ಬಿಜ್ಜಳನಿಗೆ ಮನವಿಯನ್ನು ಸಲ್ಲಿಸಬೇಕು. ಶಿವದತ್ತ ಬೊಮ್ಮರಸರು ಇಲ್ಲಿಂದ ಸೊನ್ನಲಿಗೆಗೆ ಹೋಗಬೇಕು. ಅಲ್ಲಿಂದ ಶಿವದತ್ತನೊಬ್ಬನೇ ಕಾ. ಶು. ಪ್ರ. ದಿವಸ ಕಲ್ಯಾಣಕ್ಕೆ ಹೋಗಿ ಯೋಜಿಸಿದ ಗುಪ್ತಮಾರ್ಗದಿಂದ ಅಗ್ಗಳನ ವರದಿಯನ್ನು ಪಡೆಯಬೇಕು. ತಿರುಗಿ ಸೊನ್ನಲಿಗೆಗೆ ಬಂದು ಇಬ್ಬರೂ ಕೂಡಿ ಪಶ್ಚಿಮದ ಕಡೆಯಿಂದ ದಕ್ಷಿಣಕ್ಕೆ ಹೋಗಬೇಕು. ಹೀಗೆ ಎರಡು ತಿಂಗಳು ಸಂಚರಿಸಬೇಕು. ಅಷ್ಟರಲ್ಲಿ ಬೊಮ್ಮರಸನ ಗಡ್ಡ

ಮೀಸೆ ತಕ್ಕಷ್ಟು ಬೆಳೆಯುವವು. ಅದರೊಡನೆ ಶರಣಧರ್ಮದ ತತ್ವ ಬೋಧಿಸು ಕಾರ್ಯವನ್ನು ಹೆಚ್ಚಾಗಿ-ಚೆನ್ನಾಗಿ ರೂಢಿಸಿಕೊಂಡಿರಬೇಕು. ದಕ್ಷಿಣ ಕಡೆಯಿಂದ ಬಂದು ಬೇರೆ ಹೆಸರುಗಳಿಂದ ಮಹಮನೆಯ ಶರಣರಲ್ಲಿ ಸೇರಿಕೊಳ್ಳಬೇಕು. ಒಬ್ಬ ಶರಣರನ್ನು ಕಳಿಸಲು ಬಿಜ್ಜಳನಿಂದ ಮಹಮನೆಗೆ ಬಿನ್ನಪ ಬಂದಾಗ ಬೊಮ್ಮರಸನು ಸಿದ್ಧನಾಗಿ ಜಗದೇಕಮಲ್ಲನನ್ನು ಕೂಡಿಕೊಳ್ಳಬೇಕು. ಗುರುಶಿಷ್ಯರಾಗಿ ನಡೆದು ತಮ್ಮ ಬಿಡುಗಡೆಯ ಮತ್ತು ಬಿಜ್ಜಳನ ನಾಶದ ಏರ್ಪಾಡು ಮಾಡಿಕೊಳ್ಳಬೇಕು.

ಮಹಾರಾಣಿಯು ಅಗ್ಗಳನನ್ನು ತನ್ನ ಪ್ರತಿನಿಧಿಯಾಗಿ ಕಳಿಸಿದ ಬಗೆಗೆ ಬಿಜ್ಜಳನಿಗೆ ಪತ್ರ ಬರೆದುಕೊಟ್ಟಳು.

ಭಾಮೆಯು ತನ್ನ ಅಕ್ಕನಾದ ಅಲ್ಲಿಯ ಗಣಿಕಾಧ್ಯಕ್ಷೆಣಿಗೆ ಒಂದು ಗುಪ್ತ ಪತ್ರವನ್ನು ಬರೆದುಕೊಟ್ಟಳು. ಅದರ ಅಭಿಪ್ರಾಯ ಹೀಗೆ :

'ನಮ್ಮ ಮಹಾರಾಣಿಯವರ ಹೆಗ್ಗಡೆ ಅಗ್ಗಳದೇವರು ನಿಮ್ಮ ಹತ್ತಿರ ಬಂಧನಕ್ಕೊಳಗಾಗಿ ಇರಬಹುದಾಗಿದೆ. ನನಗಾಗಿ ನೀನು ಅವರಿಗೆ ತಕ್ಕ ಸೌಕರ್ಯ ಒದಗಿಸಬೇಕು. ಅವರಿಗೂ, ಹೊರಗೆ ನಗರದಲ್ಲಿ ಗುಪ್ತವಾಗಿರುವ ನಮ್ಮ ಮಹಾರಾಣಿಯವರ ಸೇವಕರಿಗೂ ಸುದ್ದಿಸಂಪರ್ಕ ಇಟ್ಟುಕೊಳ್ಳುವ ರಹಸ್ಯಮಾರ್ಗವನ್ನು ನೀನು ಗೊತ್ತುಮಾಡಿಕೊಡಬೇಕು. ಅದನ್ನು ತಿಳಿದುಕೊಳ್ಳುವದಕ್ಕಾಗಿ ಬರುವ ಕಾರ್ತಿಕ ಶುದ್ಧ ಪ್ರತಿಪದೆಯ ದಿನ ಸೂರ್ಯಾಸ್ತ ಸಮಯಕ್ಕೆ ತ್ರಿಪುರಾಂತಕ ದೇವಾಲಯದ ಹೆಬ್ಬಾಗಿಲ ಎಡಗಡೆಯ ಕಟ್ಟೆಯ ಮೂಲೆಯ ಮೇಲೆ, ಗಂಧಮುದ್ರೆ ಬಿಳಿಯಧೋತರ ಧರಿಸಿದ ಒಬ್ಬ ತರುಣನು ಕುಳಿತಿರುವನು. ನೀನು ನಿನ್ನ ವಿಶ್ವಾಸದ ಸೇವಿಕೆಯೊಬ್ಬಳನ್ನು ಕಳಿಸಿ ಅದನ್ನು ತಿಳಿಸಬೇಕು. ತನ್ನ ಕಡೆಗೆ ಹೆಂಗಸು ಬರುತ್ತಿರುವಾಗ ಆ ತರುಣನು

'ಮಾಡುವಂತಿರಬೇಕು, ಮಾಡದಂತಿರಬೇಕು
ಮಾಡುವ ಮಾಟದೊಳು ತಾನಿಲ್ಲದಿರಬೇಕು;
ಮಾಡುವಡೆ ಹಿಂದು ಮುಂದಣದೆಚ್ಚರಿರಬೇಕು.
ಶಿವನೊಲಿವನಾಗ ಕಂಡಾ,'

ಈ ನುಡಿಗಳನ್ನು ಮೆಲ್ಲನೆ ಉಲಿಸುತ್ತಿರುವನೆಂಬುದು ವಿಶೇಷ ಗುರುತು.

ನನಗೂ ನಿನಗೂ ಮುಂದೆ ಅಲಭ್ಯಲಾಭವಾದೀತು !"

ಓದಿ ನೋಡಿ ಅಗ್ಗಳನು ತನ್ನ ಪ್ರೇಯಸಿಯ ಚಾತುರ್ಯಕ್ಕೆ ಮೆಚ್ಚಿ, "ನೋಡಯ್ಯ ಶಿವದತ್ತರೆ, ಸಂಜ್ಞೆಯ ನುಡಿಗಳು ಸರಿಯಾಗಿ ಕಂಠಗತವಾಗಲಿ; ಬೇಕಾದರೆ ಬರೆದಿಟ್ಟುಕೊಳ್ಳಿರಿ. ವೇಷದ ಕ್ರಮ ನೆನಪಿರಲಿ !"

ಎಂದು ನಗುತ್ತ ನುಡಿದನು.

"ನಾನು ಏಕಾವಧಾನಿ ಕಾಣಿರಿ ಹೆಗ್ಗಡೆಯವರೆ !" ಎಂದು ಶಿವದತ್ತನು ಪತ್ರವನ್ನು ಓದಿಕೊಟ್ಟು, ಅದನ್ನು ಕಂಠೋಕ್ತವಾಗಿ ಹೇಳಿಬಿಟ್ಟನು. ಹತ್ತು ಸಲ ಅಂದು ತೋರಿಸಿದನು.

ಅವರೆಲ್ಲರನ್ನೂ ಕಳಿಸಿ ರಾಣಿಯು ಕೆಲವು ದಿವಸ ನಿಶ್ಚಿಂತಳಾಗಿ ದೇವಗಿರಿಯಲ್ಲಿ ಉಳಿದಳು.

ಹೂವಮ್ಮಸಂಗಡಿ

ನಾರಣಕ್ರಮಿತನ ಪತ್ರನೋಡಿ ಬಿಜ್ಜಳನು ಮಂಗಳವಾಡದಿಂದ ಕಲ್ಯಾಣಕ್ಕೆ ಬಂದಕೂಡಲೆ ನಾಗರಿಕ ಮನವಿಯೊಂದು ಅವನಿಗೆ ಅರ್ಪಿಸಲ್ಪಟ್ಟಿತು.

'ರಾಜ್ಯ ವ್ಯವಸ್ಥೆ, ಪ್ರಜಾಕ್ಷೇಮ. ರಾಷ್ಟ್ರೀಯ ಭದ್ರತೆಗಳಿಗೆ ಆಧಾರವಾಗಿರುವ ವರ್ಣಧರ್ಮವ ನಾಶಗೈದು ಜಾತಿಸಂಕರ ಮಾಡುವ ಪ್ರಯತ್ನಗಳು ನಗರದಲ್ಲಿ ನಡೆಯುತ್ತಲಿವೆ. ಸಾಮಂತಮಂತ್ರಿಮಧುವರಸು ಹರಳಯ್ಯಗಳು ಪ್ರತ್ಯಕ್ಷವಾಗಿ ಈ ಅಪಕೃತ್ಯಗೈದಿದ್ದಾರೆ. ಶರಣರು ಇದಕ್ಕೆ ಪ್ರೇರಕರಾಗಿದ್ದಾರೆ. ಪ್ರಭುಗಳು ಇದನ್ನು ತಡೆಯಬೇಕು. ಮತ್ತು ವರ್ಣಸಂಕರಗೈದ ಅಪರಾಧಿಗಳನ್ನು ದಂಡಿಸಬೇಕು.'

ಎಂಬುದು ಆ ಮನವಿಯ ಅಭಿಪ್ರಾಯ ! ಕ್ರಮಿತನೇ ಅದನ್ನು ರಚಿಸಿ ತನ್ನ ಹಸ್ತಕರ ಹಾಗು ಒತ್ತಾಯದಿಂದ ಕೆಲವು ಸಾಮಾಜಿಕರ ಅಂಕಿತಗಳನ್ನು ಹಾಕಿಸಿದ್ದನು.

ಬಿಜ್ಜಳನ ಮನಸ್ಸು ಹಲವು ಬಗೆಯ ಚಿಂತೆ ಅಸಮಾಧಾನಗಳ ಆಗರವಾಗಿತ್ತು. ಸ್ವತಃ ತಾನು ಲೋಭ, ಮೋಹ, ಪ್ರತಿಷ್ಠಾಕಾಂಕ್ಷೆಗಳ ಎಳೆದಾಟದಲ್ಲಿ ಘಾಸಿಯಾಗಿದ್ದನು. ಹೊರಗೆ ಎಲ್ಲೆಲ್ಲಿಯೂ ಅಶಾಂತಿ, ವೈರ, ವಂಚನ

ಗಳೇ ಕಾಣಹತ್ತಿದ್ದವು. ಹಲವು ಕೋಲಾಹಲಗಳು ಶರಣಧರ್ಮದ ಬಿರುಗಾಳಿಗೇ ಎದ್ದಿವೆಯೆಂದು ಅವನಿಗೆ ಭಾಸವಾಯಿತು. ಇಂತಹ ಸಮಯದಲ್ಲಿ ಮಹಾರಾಣಿಯ ರಾಯಭಾರಿ ಅಗ್ಗಳನು ಸಂದರ್ಶನಕ್ಕೆ ಬಂದನು. ಮಾಹೇಶ್ವರೀದೇವಿಯ ಚಟುವಟಿಕೆಗಳ ಸೂತ್ರಧಾರನಾಗಿರುವ ಈ ಧೂರ್ತ ಚಾಣಾಕ್ಷ ನರಿಯನ್ನು ಉಪೇಕ್ಷಿಸಬಾರದೆಂದು ಬಗೆದು ಬಿಜ್ಜಳನು ಅವನನ್ನು ಗೌರವಿಸಿದನು. ಕರ್ಣದೇವನನ್ನು ಕರೆಯಿಸಿ "ಮಹಾರಾಣಿಯವರ ಈ ಪ್ರತಿನಿಧಿಯು ಜಗದೇಕಮಲ್ಲ ಪ್ರಭುಗಳನ್ನು ಕಾಣುವರು. ತಮ್ಮ ಉದ್ದೇಶಿಸಿದ ಸಂಧಾನ ಕಾರ್ಯ ಮುಗಿಯುವವರೆಗೆ ಅಲ್ಲಿಯೇ ಇರುವರು, ಅವರ ಜತೆಯಲ್ಲಿಯೇ ವಸತಿ-ಉಪಚಾರಗಳ ವ್ಯವಸ್ಥೆ ಮಾಡಬೇಕು. ಇವರ ಇಚ್ಛೆಗಳನ್ನು ನಮಗೆ ತಿಳಿಸುತ್ತಿರಬೇಕು," ಎಂದು ಹೇಳಿ ಅವನೊಡನೆ ಅಗ್ಗಳನನ್ನು ಕಳಿಸಿಕೊಟ್ಟನು. ಹೊರಗಿನ ಜನರ ಸಂಪರ್ಕವಿರದಂತೆ ಬಂಧನ ಬಿಗಿಯಾಗಿರಬೇಕೆಂದು ರಹಸ್ಯವಾಗಿ ಹೇಳುವದನ್ನು ಮರೆಯಲಿಲ್ಲ.

ತಾವು ಯೋಚಿಸಿದಂತೆ ಕಾರ್ಯ ನಡೆಯುತ್ತಿವೆಯೆಂದು ಅಗ್ಗಳನು ಸಮಾಧಾನದಿಂದ ಹೋಗಿ ಜಗದೇಕಮಲ್ಲನೊಡನೆ ಸ್ಥಾನಬದ್ಧತೆಗೊಳಗಾದನು. ತನ್ನ ರಸಿಕವಾಣಿಯಿಂದ ವಿಲಾಸಭೋಗದಲ್ಲಿ ಕರ್ಣದೇವನ ಅಭಿರುಚಿಯನ್ನು ಹೆಚ್ಚಿಸುತ್ತ ಅವನಿಗೆ ಗೆಳೆಯನಾದನು. ಜಗದೇಕಮಲ್ಲದೇವನಿಗೆ, ಅವನ ಬಿಡುಗಡೆಗಾಗಿ ಮಹಾರಾಣಿಯವರು ನಡಿಸಿದ ಸಾಹಸಕಾರ್ಯಗಳನ್ನೆಲ್ಲ ರಹಸ್ಯವಾಗಿ ವಿವರಿಸಿ, ಮಧುಪಾನವಿಲಾಸ, ಗಣಿಕಾಸಹವಾಸಗಳನ್ನು ಕಡಿಮೆ ಮಾಡಿ ಸ್ವಭಾವ ಬದಲಾಗುತ್ತಿರುವಂತೆ ನಟಿಸಬೇಕೆಂದು ಬೋಧಿಸಿದನು. ಭಾನೆಯ ಪ್ರಿಯಕರನಾದ್ದರಿಂದ ಅಲ್ಲಿಯ ಗಣಿಕಾಧ್ಯಕ್ಷಿಣಿ ಸುವರ್ಣೆಗೆ ಪ್ರೇಮಾಸ್ಪದನಾದನು. ತನ್ನ ರಾಜಕೀಯ ಕಾರ್ಯಗಳನ್ನು ಈಡೇರಿಸಿಕೊಳ್ಳುತ್ತ ಪರಿಮಿತ ವಿಲಾಸವನ್ನು ಅನುಭೋಗಿಸುತ್ತ ಬಂಧನದಲ್ಲಿಯೂ ಅಗ್ಗಳನು ಸುಖವಾಗಿದ್ದನು.

ಕಾರ್ತಿಕ ಶು ಪ್ರತಿಪದೆಯ ದಿವಸ ಸಾಯಂಕಾಲ ಹೂವಾಡಗಿತ್ತಿಯೊಬ್ಬಳು ಕೈಯಲ್ಲಿ ಅರಳುಮಲ್ಲಿಗೆ ಮಾಲೆಯನ್ನು ಹಿಡಿದುಕೊಂಡು 'ಅಗ್ಗಳದ ಸೌರಭದ ಸುಮಮಾಲೆ ಬೇಕೇನು?' ಎಂದು ಕೂಗುತ್ತ ತ್ರಿಪುರಾಂತಕ ದೇವಾಲಯದ ಹೆಬ್ಬಾಗಿಲ ಕಡೆಗೆ ಬಂದಳು. ಅವಳ ನುಡಿ, ಗಂಧಮುದ್ರೆ

ಧರಿಸಿ ಘೋತರಹೊದೆದು ಕಟ್ಟೆಯ ಮೂಲಿಯ ಮೇಲೆ ಕುಳಿತ ಶಿವದತ್ತನನ್ನು ಎಚ್ಚರಿಸಿತು. ತನ್ನ ಹತ್ತಿರವೇ ಬರುತ್ತಿದ್ದ ಅವಳನ್ನು ನೋಡಿ ತನ್ನ ಪಾಠ ಪಠಿಸಿದನು :

'ಮಾಡುವಂತಿರಬೇಕು, ಮಾಡದಂತಿರಬೇಕು.
ಮಾಡುವ ಮಾಟದೊಳು ತಾನಿಲ್ಲದಿರಬೇಕು!
ಮಾಡುವೊಡೆ ಹಿಂದು ಮುಂದಣದೆಚ್ಚರಿರಬೇಕು.
ಶಿವನೊಲಿವಾಗ ಕಂಡಾ.'

ಹೂವಾಡಗಿತ್ತಿಯು ಜನಸಂದಣಿಯನ್ನು ನೋಡುತ್ತಿರುವಂತೆ ಬೇರೆ ಕಡೆಗೆ ಮುಖಮಾಡಿ ಅವನ ಹತ್ತಿರ ನಿಂತು ಲಕ್ಷಗೊಟ್ಟು ಕೇಳಿದಳದನ್ನು! ಬಳಿಕ-

ಅಗ್ಗಳದ ಸೌರಭದ ಸುಮಮಾಲೆ ಬೇಕೇನು ?
ಬಂದು ಕಾಣಿರಿ ಬಯಸಿ ನುಡಿಯಲೇಕವುಗಳನು ?'

ಎಂದು ಹಾಡುತ್ತ, ಶಿವದತ್ತನ ಕಡೆಗೆ ಕಣ್ಣು ಹಾರಿಸಿ ಕೈದಿರುವಿ ಕರೆವ ಸನ್ನೆಯ ಮಾಡಿ ಮರಳಿ ಹೊರಟಳು. ಅವಳ ಚುಟುಕು ಹಾಡಿನ ರಹಸ್ಯಾರ್ಥವಾಯಿತು ಶಿವದತ್ತನಿಗೆ. ಅಗ್ಗಳನ ಪತ್ರವೇ ಅಲ್ಲಿ ತನಗಾಗಿ ಕಾದಿದೆಯೆಂದು ಭಾವಿಸಿ ಸ್ವಲ್ಪ ದೂರದಿಂದ ಜನರ ನಡು ನಡುವೆ ಅಲೆದಾಡುತ್ತ ಆ ಹೂವಾಡಗಿತ್ತಿಯನ್ನು ಅನುಸರಿಸಿಹೋಗಿ ಅವಳ ಹೂವಿನಂಗಡಿಯ ಮುಂದೆ ನಿಂತನು.

ಹೂಗಾರಿತಿಯು ಮಂದಸ್ಮಿತದಿಂದ ಆದರಿಸಿ, ಮುಚ್ಚಿಟ್ಟ ಮೊಗ್ಗು ಮಲ್ಲಿಗೆಯ ಮಾಲೆಯೊಂದನ್ನು ತೆಗೆದುಕೊಟ್ಟು ಅದರ ಕೂಡುಗಟ್ಟಿನಲ್ಲಿ ಸುತ್ತಿದೆಲೆಯ ಮಧ್ಯದಲ್ಲಿ ಪತ್ರವೊಂದಿರುವದನ್ನು ಹಿಚುಕಿ ತೋರಿಸಿದಳು. ಶಿವದತ್ತನು ಎತ್ತಿಕೊಂಡು ನೋಡಿದನು.

"ನಾನು ಬಯಸಿದಂತಹ ಮಾಲೆ ಸಿಕ್ಕಿತಮ್ಮ! ಯಾರ ಅಂಗಡಿ ಇದು?"

"ಹೂವಮ್ಮನಂಗಡಿ, ಬೇಕಾದಾಗ ನೀವು ಇಲ್ಲಿಗೆ ಬನ್ನಿರಿ ಇಂತಹ ಮಾಲೆ ತಂದಿದ್ದರೆ ಕೊಡುತ್ತೇನೆ."

"ಅಗತ್ಯವಾಗಿ ಆಗಲಿ "

ಶಿವದತ್ತನು ತಾನೆ ಬಂದುದರ ನಂಬಿಗೆಗಾಗಿ ತನ್ನ ಹತ್ತಿರ ಇಟ್ಟು ಕೊಂಡಿದ್ದ ತಾಡದೆಲೆಯ, ಅಗ್ಗಳನ ಹಸ್ತಾಕ್ಷರವಿದ್ದ ಚಿಕ್ಕ ಪತ್ರಿಕೆಯೊಂದನ್ನು ಹಣಕಾಸು ಕೊಡುವದರೊಡನೆ ಕೂಡಿಸಿ, ಅವಳ ಕೈಗೆ ಕೊಟ್ಟು ಹೊರಟು ಹೋದನು.

೧೪. ವರ್ಣಧರ್ಮದ ವಿವೇಚನೆ.

ವರ್ಣಸಂಕರದ ಆಪಾದನೆ

ಬಿಜ್ಜಳನು ನಾಗರಿಕರ ಪರವಾಗಿ ಬಂದ ಬಿನ್ನಪದ ವಿಚಾರಣೆಗಾಗಿ ರಾಜಸಭೆಯನ್ನು ಕರೆದನು. ಆ ಮನವಿಗೆ ಅಂಕಿತ ಹಾಕಿದವರನ್ನು ಆಪಾದನೆಗೆ ಸಂಬಂಧಿಸಿದವರನ್ನು ಕರೆಯಿಸಲಾಗಿತ್ತು. ಪ್ರಮುಖ ಮನ್ನೆಯರು ಆಮಂತ್ರಿತರಾಗಿದ್ದರು. ಸಭೆ ಸೇರುವದು ಒಂದು ಪ್ರಹರ ಮಾತ್ರ ಇರುವಾಗ ಬಸವಣ್ಣನವರಿಗೆ ಆಹ್ವಾನ ಹೋಯಿತು; ಅವರೂ ಬಂದರು.

ಬಿನ್ನಪದ ಪರವಾಗಿ ವಾದಿಸಲು ವಿಜಯಪುರದ ನ್ಯಾಯಶಾಸ್ತ್ರಿ ರುದ್ರಭಟ್ಟನು ತಾನಾಗಿಯೇ ಮುಂದಾಗಿದ್ದನು. ಅಂಕಿತ ಹಾಕಿದವರು ಒಂದು ರೀತಿಯಿಂದ ಪಾರಾದೆವೆಂದು ಭಾವಿಸಿದರು. ಉಭಯ ಪಕ್ಷಗಳ ಮುಖ್ಯ ವಾದವನ್ನು ಇಲ್ಲಿ ಸಂಗ್ರಹವಾಗಿ ಕೊಡುವೆವು.

ಆರಂಭದಲ್ಲಿ ಬಿಜ್ಜಳನ ಆಜ್ಞೆಯಂತೆ ಬಿನ್ನಪದಲ್ಲಿಯ ಆಪಾದನೆಗಳ ಪಠಣವಾಯಿತು. ಅದರ ಮುಖ್ಯಾಂಶ:

'ಬಸವ ದಂಡನಾಯಕರು ಅನುಭವ ಮಂಟಪ ಧರ್ಮಪ್ರತಿಷ್ಠಾನದಿಂದ, ಅಲ್ಲಿ ಬಂದವರೆಲ್ಲ ಶಿವಭಕ್ತರೆಂಬ ಹೆಸರಿನಿಂದ ಎಲ್ಲ ಜಾತಿಮತದವರನ್ನು ಒಂದುಗೂಡಿಸಿ ವರ್ಣಸಂಕರ ಮಾಡುತ್ತಿದ್ದಾರೆ. ಧರ್ಮಪ್ರಸಾರದ ನೆವದಲ್ಲಿ ಪ್ರಭುತ್ವಕ್ಕೆ ವಿರೋಧವಾಗಿ ವಾಕ್‌ಸ್ವಾತಂತ್ರ್ಯ-ಧರ್ಮಸ್ವಾತಂತ್ರ್ಯಗಳ ಭಾವನೆಯನ್ನು ಶರಣರು ದೇಶದಲ್ಲಿ ಹರಡುತ್ತಿದ್ದಾರೆ. ಸಮಾಜಸೇವೆ ವಿದ್ಯಾಪ್ರಸಾರಗಳ ಉದ್ದೇಶವೆಂದು ದೇಶದಾದ್ಯಂತ ಸಂಘ-ಸಂಸ್ಥೆಗಳನ್ನು ಸ್ಥಾಪಿಸಿ ಗುಪ್ತದಳಗಳನ್ನು ನಿರ್ಮಿಸುತ್ತಿದ್ದಾರೆ. ಸಾಮಂತ ಮಂತ್ರಿ ಮಧುವರಸರು ತಮ್ಮ ಮಗಳನ್ನು ಅಂತ್ಯಜನಾದ ಹರಳಯ್ಯನ ಮಗನಿಗೆ ಕೊಟ್ಟು, ಧರ್ಮಸಂಪ್ರದಾಯಗಳನ್ನು ಮೀರಿ ವರ್ಣಸಂಕರಕ್ಕೆ ಕಾರಣರಾಗಿದ್ದಾರೆ. ಇದಕ್ಕೆ ಶರಣರು ಪ್ರೇರಕರೂ ಸಹಾಯಕರೂ ಆಗಿದ್ದಾರೆ.........”

ರುದ್ರಭಟ್ಟನು ವೇದ, ಧರ್ಮಸೂತ್ರ, ಸ್ಮೃತಿ, ಮಹಾಭಾರತಗಳ ವಾಕ್ಯಗಳನ್ನು ಉದಾಹರಿಸಿ ವಾದಿಸಿದರು:

'ವಿರಾಟಪುರುಷನ ಮುಖದಿಂದ ಹುಟ್ಟಿದ ಬ್ರಾಹ್ಮಣನು ಶ್ರೇಷ್ಠನು. ಅವನು ಸಮಾಜದ ಅಧಿಪತಿ! ಕ್ಷತ್ರಿಯ ವೈಶ್ಯ ಶೂದ್ರರು ಅವನಿಗೆ ಅಧೀನರಾಗಿರಬೇಕು. ಬ್ರಾಹ್ಮಣನೇ ಕಣ್ಣಿಗೆ ಕಾಣುವ ಪ್ರತ್ಯಕ್ಷದೇವತೆ; ಅವನ ಅನುಗ್ರಹದಿಂದ ಸ್ವರ್ಗದಲ್ಲಿ ದೇವತೆಗಳಿದ್ದಾರೆ. ಅವನ ಮಾತೇ ದೇವತೆಗಳ ಮಾತು! ಭಂಗಬಟ್ಟುದೆಲ್ಲ ಬ್ರಾಹ್ಮಣನ ಅನುಮೋದನೆಯಿಂದ ಸರಿಗೊಳ್ಳುತ್ತದೆ. ಕನಿಷ್ಠರಾದ ಶೂದ್ರರು, ಬ್ರಾಹ್ಮಣ, ಕ್ಷತ್ರಿಯ, ವೈಶ್ಯರ ಸೇವೆ ಮಾಡಬೇಕು. ಇದು ಧರ್ಮಶಾಸ್ತ್ರದಲ್ಲಿ ಹೇಳಲ್ಪಟ್ಟ ಚಾಲುಕ್ಯರಾಜ್ಯದಲ್ಲಿ ಸಮಾಜ ವ್ಯವಸ್ಥೆಗೆ ಆಧಾರವಾಗಿ ನಿರಂತರ ಪ್ರಚಾರದಲ್ಲಿರುವ ವರ್ಣಧರ್ಮ!

"ಮಧುವರಸರು ಜನ್ಮತಃ ಬ್ರಾಹ್ಮಣರು; ನಾರಣಕ್ರಮಿತರ ಸಂಬಂಧಿಕರು. ಶರಣಧರ್ಮದೀಕ್ಷಿತನಾದರೆ ಗೋತ್ರಸೂತ್ರಗಳು ಬದಲಾಗಲಾರವು. ಹೀಗೆ ಬ್ರಾಹ್ಮಣ ಮಧುವರಸರು ತಮ್ಮ ಮಗಳನ್ನು-ಬ್ರಾಹ್ಮಣ ಕನ್ಯೆಯನ್ನು ಶೂದ್ರನಾದ ಹರಳಯ್ಯನ ಮಗನಿಗೆ ಕೊಟ್ಟು ವರ್ಣಧರ್ಮಕ್ಕೆ ಅಪಚಾರ ಮಾಡಿದ್ದಾರೆ; ವರ್ಣಸಂಕರವೆಸಗಿದ್ದಾರೆ. ಅದು ರಾಷ್ಟ್ರಕ್ಕೆ ತುಂಬ ಅನಿಷ್ಟಕಾರಿ, ಮಂತ್ರಿಮಂಡಲದಲ್ಲಿ ರಾಜಪುರೋಹಿತನ ಸ್ಥಾನ ಬಹಳ ದೊಡ್ಡದು. ರಾಜಪುರೋಹಿತ ನಾರಣಕ್ರಮಿತರು ಈ ಮದುವೆಯ ಘಟಸ್ಫೋಟ ನಡಿಸಿ ಯೋಗ್ಯಕ್ರಮ ಕೈಕೊಂಡಿದ್ದಾರೆ. ಕಾತ್ಯಾಯನ ಸ್ಮೃತಿಯಲ್ಲಿ ರಾಜಪುರೋಹಿತನು ಹೇಳಿದಂತೆ ರಾಜನು ನಡೆಯಬೇಕೆಂದು ಹೇಳಿದೆ. ಇಂತಹ ಉನ್ನತಾಧಿಕಾರಿ ಕ್ರಮಿತರು ಬಹಿಷ್ಕಾರ ಘೋಷಿಸಲು ಹೋದಾಗ, ಮಧುವರಸರು ಅವರ ಬಗೆಗೆ ಹೀನಾಯವಾಗಿ ವರ್ತಿಸಿ ಪ್ರಭುತ್ವದ ಗೌರವ ಹಾನಿಮಾಡಿ, ಎರಡನೆಯ ಅಪರಾಧ ಮಾಡಿದ್ದಾರೆ. ಬಸವದಂಡನಾಯಕರು ಅವರ ಅನುಯಾಯಿಗಳಾದ ಶರಣರು ಮಧುವರಸರಿಗೆ ಎರಡೂ ಅಪರಾಧಗಳಲ್ಲಿ ಪ್ರೇರಕರಾಗಿ ಸಹಾಯಕರಾಗಿ ಅಪರಾಧ ಮಾಡಿದ್ದಾರೆ."

ವರ್ಣಧರ್ಮ ಅವಾಸ್ತವಿಕ

ಬಿಜ್ಜಳನ ಬಸವಣ್ಣನವರನ್ನು ಕೇಳಿದನು :

"ಬಿನ್ನಪದಲ್ಲಿಯ ಆಪಾದನೆಯ ಬಗೆಗೆ ನಿಮ್ಮ ಅಭಿಪ್ರಾಯವೇನು?"

ಬಸವಣ್ಣನವರು ಎದ್ದು ನಿಂತು ಕೈಮುಗಿದು ಶೂನ್ಯವನ್ನು ನೋಡುತ್ತ,

"……ಕೂಡಲಸಂಗಮದೇವಾ, ನೀನೆನಗೊಳ್ಳಿದನಾದರೆ ಎನ್ನ ಹೊಗ-
ಳತೆಗಡ್ಡಬಾರಾ, ಧರ್ಮಿ!

ಎಂದು ನಿತ್ಯ ನಾನು ಪರಶಿವನಲ್ಲಿ ಮೊರೆಯಿಡುತಿದ್ದುದಕ್ಕೆ ಉತ್ತರವಾಗಿ ಈ ಬಿನ್ನಪದಲ್ಲಿಯ ಆಪಾದನೆಗಳು ಹೊರಟಿವೆ. ಸಂಗಮನಾಥನ ಕರುಣೆಯ ಬಲದಿಂದ ಉತ್ತರಿಸುವೆನು."

ಹೀಗೆ ಒಮ್ಮಿಂದೊಮ್ಮೆ ನಿಂತಕಾಲಮೇಲೆ ಉತ್ತರಕೊಡಲಿಕ್ಕೆ ಸಿದ್ಧರಾದರು. ಕಣ್ಣುಮುಚ್ಚಿ ಕ್ಷಣಹೊತ್ತು ಧ್ಯಾನಮಗ್ನರಾಗಿ, ಬಳಿಕ ತಲೆಯೆತ್ತಿ ದನಿ ಬದಲಿಸಿ ನುಡಿದರು.

"ರುದ್ರಭಟ್ಟರು ಶೃತಿ-ಸ್ಮೃತಿಗಳಿಂದ ಪ್ರಮಾಣ ತೋರಿಸಿದ್ದಾರೆ. ವೇದಶಾಸ್ತ್ರಗಳ ಸಾಗರದಲ್ಲಿ ಮುಳುಗಿ ಮುತ್ತು ರತ್ನಗಳಂತಹ ಮಾತುಗಳನ್ನು ಬಿಟ್ಟು, ಒಡಕು ಚಿಪ್ಪುಗಳನ್ನು ಹುಡುಕಿ ತಂದಂತಾಗಿದೆ ಅವರ ಪ್ರಮಾಣೋಕ್ತಿಗಳ ಪರಿಶ್ರಮ ! ವೇದಕಾಲದಲ್ಲಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯರೆಂದು ಆಯಾ ಉದ್ಯೋಗದವರನ್ನು ಕರೆಯುತ್ತಿದ್ದರು. ಅವು ಜಾತಿ ಅಥವಾ ವರ್ಣವಾಗಿರಲಿಲ್ಲ. ವಸಿಷ್ಠನು ಊರ್ವಸಿಯೆಂಬ ಅಪ್ಸರೆಯಲ್ಲಿ ಹುಟ್ಟಿ ರಾಜಗುರುವಾದನು. ವಿಶ್ವಾಮಿತ್ರನು ಯುದ್ಧಕಾರ್ಯ ಬಿಟ್ಟು ತಪಸ್ಸುಮಾಡಿ ಬ್ರಾಹ್ಮಣನಾದನು. ಋತಸೇನನ ಒಬ್ಬ ಮಗ ರಾಜ, ಒಬ್ಬ ಮಗ ಪುರೋಹಿತ ಆದರು. ಋಗ್ವೇದ ಸೂಕ್ತದಲ್ಲಿ ಮಂತ್ರದೃಷ್ಟಾರನ ತಂದೆ ವೈದ್ಯ, ತಾಯಿ ಶ್ರಮಜೀವಿಯಾಗಿದ್ದರೆಂದು ಹೇಳಿವೆ. ವೇದಕಾಲದ ಈ ಸ್ವಾತಂತ್ರ್ಯ, ವಿಶಾಲಭಾವನೆ ಮುಂದೆ ಹಲವು ಶತಮಾನಗಳ ನಂತರ 'ಬ್ರಾಹ್ಮಣ'ಗಳ ಕಾಲದಲ್ಲಿ ಅಡಗಿ ಜಾತಿ-ಪಂಥ-ವರ್ಣಭೇದಗಳು ಉಂಟಾದಂತೆ ಉಲ್ಲೇಖಗಳಿವೆ. ಈ ವರ್ಣಭೇದವು ಧರ್ಮಸೂತ್ರ-ಸ್ಮೃತಿಗಳ ಕಾಲದಲ್ಲಿ ಹೆಮ್ಮರವಾಗಿ ಬೆಳೆದಿದೆ. ಅದಕ್ಕೆ ಸ್ವಾರ್ಥ ಮತ್ತು ವೈಷಯಿಕ ಸುಖಾಸಕ್ತಿಗಳೇ ಕಾರಣವೆಂಬದನ್ನು ಹೇಳುವದೇ ಬೇಡ. ಶೂದ್ರನ ಸ್ಥಾನ ಹೀನವೆಂಬದಕ್ಕೆ ರುದ್ರಭಟ್ಟರು ಮನುಸ್ಮೃತಿಯನ್ನು ಉದಾಹರಿಸಿದ್ದಾರೆ. ಒಬ್ಬ ಮನುವೇ ಏಕೆ ? ಸ್ಮೃತಿಕಾರರೆಲ್ಲ 'ಶೂದ್ರರೂ ಮನುಷ್ಯರೆ'ಂಬುದನ್ನೇ ಮರೆತಿದ್ದಾರೆ. 'ಶೂದ್ರರು ವೇದ

ಶ್ರವಣ ಮಾಡಿದರೆ ಅವರ ಕಿವಿಯಲ್ಲಿ ಸೀಸಕಾಸಿ ಸುರಿಯಬೇಕು; ಪಠಿಸಿದರೆ ನಾಲಿಗೆ ಕೊಯ್ಯಬೇಕು; ಅಧ್ಯಯನ ಮಾಡಿದವನನ್ನು ಕೊಂದು ಬಿಡಬೇಕು; ಅವರನ್ನು ಬೇಕಾದಾಗ ದೇಶದಿಂದ ಓಡಿಸಿ ಬಿಡಬೇಕು; ಶೂದ್ರನು ತಪಸ್ಸು ಮಾಡಿದರೆ ರಾಜನು ಅವನನ್ನು ಕೊಲ್ಲಬೇಕು' ಎಂದು ಹೇಳಿದ್ದಾರೆ. ಈ ಅಮಾನುಷ ಅತ್ಯಾಚಾರದ ಪ್ರತಿಪಾದನೆಗೆ ಅಂತ್ಯವೇ ಇಲ್ಲ. ಇದರಿಂದಾಗುವ ಅನಾಹುತವನ್ನು ಜನರು ಬೇಗನೆ ಅರಿತುಕೊಂಡರು. ಜಾತಿಪಂಥಗಳನ್ನು ಹೊಡೆದೋಡಿಸುವ ಪ್ರಯತ್ನವೂ ಆಗಿನಿಂದಲೇ ನಡೆದಿದೆ. ದೇವಯಾನಿ ಬ್ರಾಹ್ಮಣ ಕನ್ಯೆ! ಯಯಾತಿ (ಕ್ಷತ್ರಿಯ) ರಾಜನೊಡನೆ ಅವಳ ಮದುವೆ ಯಾಯಿತು. ಕೃಷ್ಣನಾರು ? ಜಾಂಬವತಿಯಾರು ? ಗುಣಕರ್ಮಗಳಿಂದ ನಾಲ್ಕು ವರ್ಣಗಳೆಂದು ಸಾರಿ ಶ್ರೀಕೃಷ್ಣನು ಈ ಚಳವಳಿಯನ್ನು ಆರಂಭಿಸಿದನು. 'ಮಾತು ಮೈಥುನ ಹುಟ್ಟು ಸಾವುಗಳು ಸರ್ವರಿಗೆ ಸಮಾನವಾಗಿವೆ. ವ್ಯಕ್ತಿ ಸ್ವಾತಂತ್ರ್ಯ, ವೃತ್ತಿಸ್ವಾತಂತ್ರ್ಯ, ಧರ್ಮಸ್ವಾತಂತ್ರ್ಯ, ಸಮಾನತೆ ಈ ತಳ ಹದಿಯ ಮೇಲೆ ಕಟ್ಟಿದ ಧರ್ಮವೇ ಶ್ರೇಷ್ಠಧರ್ಮ. ಸುಖವನ್ನು ಬಯಸುವ ಮಾನವನು ಇತರರಿಗೂ ಅದನ್ನು ಒದಗಿಸಬೇಕು. ತನಗೆ ಅಪ್ರಿಯವಾದು ದನ್ನು ಮತ್ತೊಬ್ಬರಿಗೆ ಮಾಡಬಾರದು. ಸತ್ಯ, ದಾನ, ಸದಿಚ್ಛೆ, ಅನುಕಂಪೆ, ನಮ್ರತೆ, ತಪಸ್ಸು ಇವು ಇದ್ದವನು ಬ್ರಾಹ್ಮಣನು; ಇವು ಇದ್ದ ಶೂದ್ರನು ಶೂದ್ರನಲ್ಲ; ಇವಿಲ್ಲದ ಬ್ರಾಹ್ಮಣ ಬ್ರಾಹ್ಮಣನಲ್ಲ. ಗುಣಶೀಲಗಳೇ ದ್ವಿಜತ್ವದ ಗುರುತು ! ದೇವತೆಗಳು ಶೀಲವಂತನಾದ ಚಂಡಾಲನನ್ನೂ ಬ್ರಾಹ್ಮಣನೆಂದು ತಿಳಿಯುತ್ತಾರೆ' ಎಂದು ಪದೇ ಪದೇ ಭಾರತ ಹೇಳುವದನ್ನು ರುದ್ರಭಟ್ಟರು ಅರಿಯರೇ ? ಅವರು ಸವರ್ಣೀಯ ಸ್ತ್ರೀಪುರುಷರ ಅಧರ್ಮ, ಅನೀತಿ, ಅವಿ ವೇಕ ಅವ್ಯವಹಾರಗಳಿಂದ ಅಂತ್ಯಜರ ಉತ್ಪತ್ತಿಯೆಂದು ಹೇಳುತ್ತಾರೆ. ತಾಯಿ ತಂದೆಗಳ ತಪ್ಪಿಗೆ ಮಕ್ಕಳನ್ನು ಶಿಕ್ಷಿಸುವದು ಯಾವ ನ್ಯಾಯ ? ರುದ್ರ ಭಟ್ಟರು ಕೈಯೂರಿದ ಸ್ಮೃತಿಗಳಲ್ಲಿಯೇ ಅವರಿಗೆ ವಿರೋಧವಾಗಿರುವ ಪ್ರಮಾಣಗಳಿವೆ. 'ಯಾತ್ರೆ, ವಿವಾಹ, ಯಜ್ಞಗಳಲ್ಲಿ ಸ್ಪೃಶ್ಯಾಸ್ಪೃಶ್ಯತೆ ಗಳಿಲ್ಲ. ಸ್ತ್ರೀಯರಿಗೂ ಪ್ರತಿಲೋಮಜ ಶೂದ್ರರಿಗೂ ಪೂಜಾವ್ರತಗಳ ಅಧಿ ಕಾರವಿದೆ.' ಈ ಮಾತುಗಳನ್ನು ಸ್ಮೃತಿಗಳಲ್ಲಿಯೂ ಕಾಣುತ್ತೇವೆ. ರುದ್ರ ಭಟ್ಟರ ಕನ್ನಡಿಯಲ್ಲಿಯೇ ತೋರಿಸಿದ ಅವರ ತಪ್ಪು ವಿಚಾರಗಳಿವು.

"ಅಸ್ಪೃಶ್ಯತೆಯನ್ನೂ ಜಾತಿಪಂಥಗಳನ್ನೂ ಹೊಡೆದೋಡಿಸಲು ಶೈವ ಧರ್ಮ ಪ್ರಯತ್ನಿಸಿತು.

ಶಿವಸಂಸ್ಕಾರಸಂಪನ್ನೇ ಹ್ಯಯಂ ಶೂದ್ರೋ ಹ್ಯಯಂ ದ್ವಿಜಃ
ಲಿಂಗಭೇದಃ ಕೃತೋ ಯೇನ ರೌರವಂ ನರಕಂ ವ್ರಜೇತ್.
ಗತಂ ಶೂದ್ರಸ್ಯ ಶೂದ್ರತ್ವಂ ಬ್ರಾಹ್ಮಣತ್ವಂ ಬ್ರಾಹ್ಮಣಸ್ಯ ಚ
ಶಿವಸಂಸ್ಕಾರ ಸಂಪನ್ನೇ ಜಾತಿಭೇದಂ ನವಿದ್ಯತೇ ॥(ಸೂಕ್ಷ್ಮಾಗಮ)

ಶಿವಸಂಸ್ಕಾರ ಪಡೆದವರಲ್ಲಿ ಇವ ಶೂದ್ರ, ಇವ ಬ್ರಾಹ್ಮಣ ಎಂದು ಜಾತಿ ಭೇದ ಮಾಡುವವರು ನರಕಕ್ಕೆ ಹೋಗುತ್ತಾರೆ. ಶಿವಸಂಸ್ಕಾರದಿಂದ ಶೂದ್ರನ ಶೂದ್ರತ್ವವೂ, ಬ್ರಾಹ್ಮಣನ ಬ್ರಾಹ್ಮಣತ್ವವೂ ತೊಲಗುತ್ತವೆ. ಶಿವಸಂಸ್ಕಾರಿತರಲ್ಲಿ ಜಾತಿಭೇದವೇ ಇರುವದಿಲ್ಲ. ಹರಳಯ್ಯ ಮಧುವರಸಯ್ಯನವರು ಶಿವಸಂಸ್ಕಾರ ಹೊಂದಿದ ಶರಣರು. ಪ್ರಬುದ್ಧರಾದ ತಮ್ಮ ಮಕ್ಕಳಿಗೆ ಅವರು ಮಾಡಿದ ಮದುವೆ, ಶೈವಧರ್ಮಸಮ್ಮತ ! ಶರಣರು ಒಪ್ಪುತ್ತಾರೆ. ಸಮಾಜ ಸುಧಾರಣೆಯ ದೃಷ್ಟಿಯಿಂದಲೂ ಈ ವಿವಾಹಕ್ಕೆ ಹೆಚ್ಚಿನ ಗೌರವಸ್ಥಾನವಿದೆ. ಶರಣಪುತ್ರ, ಶರಣ ಶೀಲವಂತಯ್ಯ ಕಲ್ಯಾಣದ ಶ್ರೇಷ್ಠ ಕಲಾವಿದ ! ಕಲಾವತಿ ಪ್ರಬುದ್ಧ ಶರಣೆ, ಸಮಾನಧರ್ಮ, ಸಮಾನ ಸಂಸ್ಕೃತಿ, ಸಮಾನಾದರ್ಶ, ಸಮಾನಾಭಿರುಚಿ ಈ ಧರ್ಮದೃಷ್ಟಿಯಲ್ಲಿ ಮದುವೆ ನಡೆದಿದೆ.

"ಇಂತಹ ಆದರ್ಶ ವಿವಾಹದಿಂದ ವರ್ಣಸಂಕರವಾಯಿತೆಂದು ಹೇಳುವದು ಜಾತ್ಯಂಧತೆಯು ! ಚಾಲುಕ್ಯರಾಜ್ಯದಲ್ಲಿ ವೈದಿಕ ಸಂಪ್ರದಾಯದ ಕೆಲವರು ಮಾತ್ರ ವರ್ಣಧರ್ಮ ಅಂಗೀಕರಿಸಿದ್ದಾರೆ. ಅದನ್ನು ಉಳಿದವರ ಮೇಲೆಯೂ ಹೇರುವದು ನ್ಯಾಯದ ವಿಡಂಬನೆ ! ಇಂತಹ ಕಟ್ಟಳೆಯನ್ನು ಭಾರತದ ಯಾವ ಅರಸರೂ ಯಾವ ಕಾಲದಲ್ಲಿಯೂ ಮಾಡಿಲ್ಲ; ಅದು ಸಾಧ್ಯವೂ ಇಲ್ಲ. ರಾಜ್ಯದ ಎಲ್ಲ ಧರ್ಮಗಳನ್ನು ಅವವುಗಳ ಸ್ಥಿತಿಯಲ್ಲಿ ರಕ್ಷಿಸುವದು ರಾಜನ ಕರ್ತವ್ಯ ! ರಾಜನ ಧರ್ಮ !!

ಮಧುವರಸನ ಮಹತ್ವದ ಹೇಳಿಕೆ

"ಈ ಆಪಾದನೆಗೆ ನೀವು ಏನು ಹೇಳುತ್ತೀರಿ ?" ಎಂದು ಬಿಜ್ಜಳನು ಮಧುವರಸನನ್ನು ಕೇಳಿದನು. ರಾಜಸಭೆಗೆ ವಂದಿಸಿ ಮಧುವರಸನು ಹೇಳಿದನು :

"ಹಿರಿಯ ಅನುಭಾವಿಗಳಾದ ಬಸವರಾಜ ದಂಡನಾಯಕರು ಬಿನ್ನಪದಲ್ಲಿಯ ಆಪಾದನೆಗಳನ್ನು ಧರ್ಮ-ನ್ಯಾಯಗಳ ದೃಷ್ಟಿಯಿಂದ ವಿಮರ್ಶಿಸಿ ಖಂಡಿಸಿದ್ದಾರೆ. ಅವರ ಮಾತುಗಳನ್ನು ನಾನು ಅನುಮೋದಿಸುತ್ತೇನೆ. ನನ್ನ ಸಲುವಾಗಿ ಮಾತ್ರ ಎರಡು ಮಾತು ಹೇಳುತ್ತೇನೆ.

"ನಾನು ಬ್ರಾಹ್ಮಣನೆಂದೂ, ನಾರಣಕ್ರಮಿತನ ಗೋತ್ರದವನೆಂದೂ ರುದ್ರಭಟ್ಟರು ಹೇಳಿದ್ದಾರೆ. ನನ್ನ ಪೂರ್ವಜರು ಹಾಗಿದ್ದರು. ಆ ಗೋತ್ರ ಸಂಬಂಧಗಳು ನನ್ನ ಪಾಲಿಗೆ ಎಂದೋ ನಾಶವಾಗಿ ಹೋಗಿವೆ. ನಾನು ಬ್ರಾಹ್ಮಣನಲ್ಲ. ಶ್ರೀ ಬಸವರಾಜ ದಂಡನಾಯಕರ ಅನುಗ್ರಹದಿಂದ ಶಿವದೀಕ್ಷೆ ಹೊಂದಿ ಶರಣನಾಗಿದ್ದೇನೆ. ನನ್ನ ಮಗಳೂ ದೀಕ್ಷೆ ಹೊಂದಿದ್ದಾಳೆ. ಶರಣಧರ್ಮದ ನಿಯಮ ನಿಬಂಧನೆಗಳು ಮಾತ್ರ ನಮಗೆ ಸಂಬಂಧಿಸುವವು. ಉಳಿದ ಯಾವ ವಿಧಿನಿಷೇಧಗಳಿಗೂ ನಾವು ಬದ್ಧರಲ್ಲ. ಶರಣಧರ್ಮಕ್ಕೆ ವಿರೋಧವಾದ ಜಾತಿ-ಪಂಥಗಳನ್ನು ನಾವು ಒಪ್ಪುವದಿಲ್ಲ. ಲಿಂಗವಂತರ-ಬ್ರಾಹ್ಮಣರ ವ್ಯವಹಾರಗಳನ್ನು ಅವರವರ ಧರ್ಮನಿಯಮದಂತೆ ನಿಶ್ಚಯಿಸತಕ್ಕದ್ದೆಂದು ಮನುವಾರ್ತಿಕೆಯಲ್ಲಿ ಹೇಳಿದೆ. ನಮ್ಮ ವ್ಯವಹಾರಗಳನ್ನು ನಮ್ಮ ಧರ್ಮದಂತೆ ನೋಡಬೇಕೆಂದು ಪ್ರಭುಗಳಲ್ಲಿ ಪ್ರಾರ್ಥನೆ.

"ಬಿನ್ನಪದಲ್ಲಿಯ ಆಪಾದನೆಗಳ ಬಗೆಗೆ ಸ್ಪಷ್ಟವಾದ ಇನ್ನೊಂದು ಮಾತು, ಕಲ್ಯಾಣದ ಯಾವ ನಾಗರಿಕರ ಮನದಲ್ಲಿಯೂ ಈ ಬಿನ್ನಪವು ಅಂಕುರಿಸಿ ಬೆಳೆದು ಬಂದಿಲ್ಲ. ದ್ವೇಷ-ಅಸೂಯೆಗಳಿಂದ ಮತಿಭ್ರಾಂತನಾದ ಉನ್ಮತ್ತನೊಬ್ಬನ ಅಪಲಾಪವೀ ಬಿನ್ನಹ ಪತ್ರ ! ಆತನ ದುಷ್ಟಶಕ್ತಿಗೆ ಅಧೀನರಾಗಿ ಅಂಕಿತ ಹಾಕಿದವರು ಅವನ ಕೈಗೊಂಬೆಯಂತೆ ವರ್ತಿಸಿದ್ದಾರೆ. ಇಂತಹ ವ್ಯಕ್ತಿಗತ ದುರಾಗ್ರಹಕ್ಕೆ ಧರ್ಮಪ್ರಭುಗಳು ಅಸ್ಪದ ಕೊಡಬಾರದೆಂದು ಬೇಡುತ್ತೇನೆ. ರಾಜನ ಕೀರ್ತಿಯನ್ನು ಹಾಳು ಮಾಡುವ, ರಾಜ್ಯಕ್ಕೆ ಕಂಟಕವಾಗಿರುವ ಇಂತಹ ಪ್ರವೃತ್ತಿಯನ್ನು ತಡೆದು ಸತ್ಯ-ನ್ಯಾಯ ಧರ್ಮಗಳನ್ನು ರಕ್ಷಿಸುವದು ಧರ್ಮಾವತಾರರ ಕರ್ತವ್ಯ !"

ಸಭೆ ಸ್ತಂಭಿತವಾಯಿತು. ಮಧುವರಸನ ವಾಗ್ಬಾಣಗಳಿಗೆ ಕ್ರಮಿತನೇ ಗುರಿಯೆಂಬುದು ಎಲ್ಲರಿಗೂ ತಿಳಿದಿತ್ತು. ಬಿಜ್ಜಳನ ಪ್ರೇಮದ ಮಂತ್ರಿಯನ್ನು

ಪ್ರಕಟಸಭೆಯಲ್ಲಿ ಟೀಕಿಸುವವರ ಪರಿಣಾಮವನ್ನು ಊಹಿಸಿ ಹಲವರು ಭಯ ಗ್ರಸ್ತರಾಗಿದ್ದರು. ಬಿಜ್ಜಳನು ಮಾತ್ರ ಗಂಭೀರವಾಗಿಯೇ ಇದ್ದನು. ಆತನು ಹರಳಯ್ಯನನ್ನು ಕೇಳಿದನು :

"ಎಲವೋ ನೀನಾವ ಕುಲದವನು ?"

"ಶಿವಕುಲದವನು ದೊರೆಯೇ !"

"ಅಬ್ಬಾ, ಮಧುವರಸನ ಮಗಳೊಡನೆ ನಿನ್ನ ಮಗನ ಮದುವೆ ಮಾಡಿದೆಯಾ ?"

"ಹೌದು ಮಹಾಪ್ರಭು."

"ಇವುಗಳಿಗೆ ನಿಮ್ಮ ಉತ್ತರಗಳೇನು ?" ಬಿಜ್ಜಳನು ರುದ್ರಭಟ್ಟರನ್ನು ಕೇಳಲು ರುದ್ರಭಟ್ಟ ಪುನಃ ಎದ್ದನು :

"ವರ್ಣಸಂಕರಕ್ಕೆ ಕಾರಣವಾದ ಮದುವೆ ಮಾಡಿದುದನ್ನು ಬಸವಣ್ಣ ನವರು, ಮಧುವರಸರು, ಹರಳಯ್ಯ ಒಪ್ಪಿಕೊಳ್ಳುತ್ತಾರೆ. ವರ್ಣಸಂಕರ ಮಾಡಿದುದಕ್ಕೆ ಅಪರಾಧಿಗಳನ್ನು ದಂಡಿಸಬೇಕು."

"ವರ್ಣಸಂಕರಕ್ಕೆ ಧರ್ಮಶಾಸ್ತ್ರಗಳು ವಿಧಿಸುವ ಶಿಕ್ಷೆಯೇನು ?''

"ವರ್ಣಸಂಕರಕ್ಕೆ ಒಳಗಾದವರು ಪಿತ್ರಾರ್ಜಿತ ಸೊತ್ತಿಗೆ ಅನಧಿಕಾರಿ ಗಳಾಗುತ್ತಾರೆ. ಸಮಾಜದಿಂದ ಬಹಿಸ್ಕೃತರಾಗುತ್ತಾರೆ. ಅವರಿಗೆ ಶಿಕ್ಷೆ ವಿಧಿಸುವ ವಿಷಯದಲ್ಲಿ ಧರ್ಮಶಾಸ್ತ್ರಗಳು ಮೌನ ತಾಳಿವೆ. ಅದನ್ನು ಸಮಾ ಜದ ಗುರುಪೀಠಗಳು ವಹಿಸಿಕೊಂಡಿವೆ."

"ವರ್ಣಧರ್ಮ ರಕ್ಷಣೆ ರಾಜನ ಕರ್ತವ್ಯವೆಂದು ಹೇಳುವಿರಿ. ಶಿಕ್ಷೆಯ ಅಧಿಕಾರವಿಲ್ಲದೆ ರಕ್ಷಣೆ ಹೇಗೆ ಸಾಧ್ಯ ?"

ಬಿನ್ನಪದ ಪತ್ರಿಕೆಯನ್ನು ಕಾರ್ಯದರ್ಶಿಯ ಕಡೆಗೆ ಕೊಟ್ಟು ಹುಬ್ಬು ಕುಂಚಕಗೊಳಿಸಿ ಏಳುವದಕ್ಕೆ ಸಿದ್ಧನಾದನು ಬಿಜ್ಜಳನು ! ರುದ್ರಭಟ್ಟನ ಎದೆ ಬಡಿದುಕೊಂಡಿತು. ಬಸವರಾಜ-ಮಧುವರಸರು ಗಂಭೀರವಾಗಿದ್ದರು. ಸಭೆ ಯಲ್ಲಿ ಮೌನ ! ಕ್ರಮಿತನು ಜಾಗ್ರತನಾದನು. ಮೆಲ್ಲನೆ ಎದ್ದು ಕೈಮುಗಿದು ನುಡಿದನು :

“ಪ್ರಭುಗಳು ಬೇಸರಗೊಳ್ಳಬಾರದು. ವರ್ಣಸಂಕರಕ್ಕೆ ಶಿಕ್ಷೆ ವಿಧಿಸುವದನ್ನು ಗುರುಪೀಠಗಳಿಗೆ ವಹಿಸಿಯೇ ಸಮಾಜದಲ್ಲಿ ಇಷ್ಟೆಲ್ಲ ಅವ್ಯವಸ್ಥೆಯಾಗಿದೆ. ಇಂತಹ ಸಂದರ್ಭಗಳಲ್ಲಿ ಇತಿಹಾಸವು ನಮಗೆ ಮಾರ್ಗದರ್ಶನ ಮಾಡುತ್ತದೆ. ಶೂದ್ರನಾಗಿದ್ದು ತಪಸ್ಸು ಮಾಡಿದ ಶಂಭುಕನನ್ನು ರಾಮಚಂದ್ರನು ವಧಿಸಿದನು.”

“ನಮ್ಮ ಮುಂದಿರುವದು ತಪಸ್ಸಲ್ಲ ಪ್ರತಿಲೋಮ ವಿವಾಹದ ಸಮಸ್ಯೆ !”

“ಎರಡೂ ಇವೆ. ಪ್ರಭುಗಳು ಚಿತ್ತೈಸಬೇಕು. ಪ್ರತಿಲೋಮ ವಿವಾಹದಲ್ಲಿ ಆಪಾದಿತರಾದ ಹರಳಯ್ಯ ಶೀಲವಂತರು ಅಂತ್ಯಜರು. ಹರಳಯ್ಯ ನಡಿಸಿದ ಸದಾಚಾರ ಸದ್ಭಕ್ತಿಗಳೂ ಜಂಗಮ ಪೂಜೆ, ದಾಸೋಹಗಳೂ ತಪಸ್ಸಿನ ರೂಪಗಳೇ ಆಗಿವೆ. ಶೀಲವಂತನು ತನ್ನ ಚರ್ಮಕಾರ ವೃತ್ತಿಯನ್ನು ಬಿಟ್ಟು ಚಿತ್ರಗಾರನಾಗಿ ವರ್ಣಾತಿಕ್ರಮ ಮಾಡಿದ್ದಾನೆ. ಮತ್ತು ಮಧುವರಸನ ಮಗಳನ್ನು ಮದುವೆಯಾಗಿ ವರ್ಣಧರ್ಮದ ವಿಡಂಬನೆ ಮಾಡಿದ್ದಾನೆ.”

“ಇದಕ್ಕೆ ಪರಿಹಾರವೇನು ?”

“ಹರಳಯ್ಯ-ಶೀಲವಂತಯ್ಯಗಳನ್ನು ಶೂಲಕ್ಕೇರಿಸುವದೇ ಇತಿಹಾಸ ತೋರಿಸುವ ಪರಿಹಾರ ಮಾರ್ಗ! ಆ ಚಾಲುಕ್ಯ ರಾಜ್ಯವು ರಾಮರಾಜ್ಯವಾಗುವದು.”

ಬಿಜ್ಜಳನು ತೀಕ್ಷ್ಣ ದೃಷ್ಟಿಯಿಂದ ಕ್ರಮಿತನನ್ನು ನೋಡಿದನು. ಅದೊಂದು ನಟನೆಯೆಂದು ಕ್ರಮಿತನು ತಿಳಿದನು.

ಅನುಭವ ಮಂಟಪದ ಮೇಲೆ ಗದೆ

ಬಿಜ್ಜಳನು ಬಸವಣ್ಣನವರ ಕಡೆಗೆ ತಿರುಗಿ ಅನುಭವ ಮಂಟಪದ ಮೇಲಿನ ಆಪಾದನೆಗಳಿಗೆ ನಿಮ್ಮ ಉತ್ತರವೇನು ? ಎಂದು ಕೇಳಿದನು.

ಬಸವಣ್ಣನವರು ಪುನಃ ಎದ್ದರು.

“ಪ್ರಭುಗಳ ಅನುಮತಿ ಪಡೆದು ವಿದ್ಯಾಪ್ರಸಾರ, ಧರ್ಮ ಜಾಗ್ರತೆ-ಸಮಾಜ ಸಂಘಟನೆಗಳಿಗಾಗಿ, ಶೈವ ಧರ್ಮಶಾಖೆಗಳ ಸಮನ್ವಯಕ್ಕಾಗಿ ಅನುಭವ ಮಂಟಪ ಸ್ಥಾಪನೆಯಾಗಿದೆ. ಅದು ಪ್ರಭುತ್ವಕ್ಕೆ ವಿರೋಧವಾಗಿದೆ

ಯೆಂಬುದು ರಹಸ್ಯದಳಗಳನ್ನು ಸಿದ್ಧಗೊಳಿಸಿದೆಯೆಂಬುದು ಅವಿವೇಕ, ಸಾಹಸದ ಮಾತು! ಅನುಭವ ಮಂಟಪವು ಹನ್ನೆರಡು ವರ್ಷ ನಡಿಸಿದ ಪ್ರಯತ್ನದ ಫಲವಾಗಿ ರಾಜ್ಯದಲ್ಲಿ ಶೈವಮಠಗಳೆಲ್ಲ ವಿದ್ಯಾಜ್ಞಾನ ಪ್ರಚಾರ ಮಾಡುವ, ದೀನದರಿದ್ರ ರೋಗಿಗಳಿಗೆ ಔಷಧೋಪಚಾರ ಮಾಡುವ ಕೇಂದ್ರಗಳಾಗಿವೆ. ಅವು ಸದಾಚಾರ ಸದ್ಭಕ್ತಿಗಳಿಂದ ಕೂಡಿದ ಧರ್ಮ ಸಮಾಜವನ್ನು ನಿರ್ಮಿಸುತ್ತಿವೆ. ಶ್ರೀಮಂತರು ಸಾಮಂತರು ವರ್ತಕರು ಕೊಡುವ ದಾನ-ದತ್ತಿಗಳಿಂದ ಕಾರ್ಯ ಕೈಕೊಂಡಿವೆ. ಕಾಯಕ ದಾಸೋಹ ಮುಂತಾದ ಆದರ್ಶಗಳು, ಜನರಲ್ಲಿ ಔದಾರ್ಯ, ಸ್ವಾವಲಂಬನೆ, ಕಾರ್ಯತತ್ಪರತೆ ಇವುಗಳನ್ನು ಹೆಚ್ಚಿಸಿ ದೇಶ-ಧರ್ಮಗಳ ಸಂಘಟನೆಗೆ ಕಾರಣವಾಗಿವೆ. ಅಲ್ಲಲ್ಲಿಯ ಸಾಮಂತ-ಮಂಡಲೇಶ್ವರರ ಕಣ್ಣರಿಕೆಯಲ್ಲಿ ಕೆಲಸ ಮಾಡುವ ಸಂಘ-ಸಂಸ್ಥೆಗಳ ಸಮಾಜ ಸೇವಕರನ್ನು ರಹಸ್ಯದಳವೆಂದು ಸಂದೇಹದ ದೃಷ್ಟಿಯಿಂದ ನೋಡುವದು ಸತ್ಯದ ಅಪಚಾರ! ಪ್ರಗತಿಯನ್ನು ವಿರೋಧಿಸುವವರೂ ಸಂಪ್ರದಾಯದ ಅಂಧಃಪ್ರವರ್ತಕರೂ ಆದ ಕೆಲವರು ಸಲ್ಲಿಸಿದ ಈ ಬಿನ್ನಪಕ್ಕೆ ಯಾವ ಬೆಲೆಯೂ ಇಲ್ಲ. ಧರ್ಮಾವತಾರರು ಇದನ್ನು ತಿರಸ್ಕರಿಸಬೇಕೆಂದು ಪ್ರಾರ್ಥಿಸುತ್ತೇನೆ"

ಕ್ರಮಿತನು ರಭಸದಿಂದ ಎದ್ದನು :

"ಒಳ್ಳೆಯ ಹೆಸರಿನಿಂದ ಅನುಭವ ಮಂಟಪವು ಅಸಂಗತ ಘಟನೆಗಳ ಸಂಘಟನೆಗೆ ಕೇಂದ್ರ ಸಂಸ್ಥೆಯಾಗಿದೆ. ಅದರ ಆಶ್ರಯದಲ್ಲಿ ಶೂದ್ರರೂ ಚಂಡಾಲರೂ ಸೇರಿ ಉಚ್ಚವರ್ಣದವರನ್ನು ಧಿಕ್ಕರಿಸಿ ಉದ್ಯೋಗ ವ್ಯವಸ್ಥೆಯನ್ನು ಕೆಡಿಸಿ ಸಮಾಜದ ಚೌಕಟ್ಟನ್ನು ಸಡಿಲು ಮಾಡುತ್ತಿದ್ದಾರೆ. ಬಸವಣ್ಣನವರು ಅದು ಸಮಾಜೋದ್ಧಾರಸಂಸ್ಥೆಯೆಂದು ಹೇಳಿದ್ದಾರೆ. ಸಮಾಜ ಸೇವೆಯೆಂಬುದು ಅನುಭವಮಂಟಪವ್ಯಾಘ್ರವು ಧರಿಸಿದ ಗೋಮುಖವು. ಅದರ ಪ್ರಮುಖರು ಅಲ್ಲಲ್ಲಿ ಸಂಚರಿಸಿ ಆಡಳಿತದ ಸುವ್ಯವಸ್ಥೆಯನ್ನು ಮುಂದ ವರದಿಯಾದುದು ಪ್ರಭುಗಳ ಲಕ್ಷದಲ್ಲಿರಬಹುದು. ಆದ್ದರಿಂದ ಅನುಭವ ಮಂಟಪವನ್ನು ಶಾಸನಬಾಹಿರಸಂಸ್ಥೆಯೆಂದು ಸಾರಿ ಅದರ ಸೊತ್ತನ್ನೆಲ್ಲ ಪ್ರಭುತ್ವ ವಶಪಡಿಸಿಕೊಳ್ಳಬೇಕೆಂದು ಸೂಚಿಸುತ್ತೇನೆ. ವರ್ಣಸಂಕರಕ್ಕೆ ಆಶ್ರಯಕೊಡುವ ಶರಣಧರ್ಮದ ಬಗೆಗೆ ಪ್ರಭುತ್ವವು ಕಠೋರವಾಗಿ ವರ್ತಿಸುವದೇ ವರ್ಣಧರ್ಮರಕ್ಷಣೆಯ ಉಪಾಯವಾಗಿದೆ."

ರಾಜಸಭೆ ಚಿತ್ರದಂತೆ ನಿಶ್ಚಲವಾಗಿತ್ತು. ಬಸವರಾಜರು ದೃಢವಾದ ಕಂಠದಿಂದ ನುಡಿದರು :

"ಅನುಭವ ಮಂಟಪವು ಶ್ರಮಿಸುತ್ತಿರುವ, ಸಾಮಾನ್ಯರ ಜ್ಞಾನಸಾಧನೆ, ಲೋಕಕಲ್ಯಾಣ ಶೈವಧರ್ಮೋದ್ಧರಣ ಕಾರ್ಯಗಳು ಪ್ರತಿಗಾಮೀ ವಿರೋಧಿಗಳಿಗೆ ಅಪ್ರಿಯವಾದುದೇ ಈ ಬಿನ್ನಪದ ಜನನಕ್ಕೆ ಕಾರಣವೆಂಬುದು ಈಗ ಸ್ಪಷ್ಟವಾಯಿತು. ಆರ್ಯ-ಅನಾರ್ಯ ಸಂಘರ್ಷಣದ ಅಂಧಃಕಾರ ಯುಗದಲ್ಲಿ ಉಂಟಾದ ಜಾತಿಪಂಥವರ್ಣ ವ್ಯವಸ್ಥೆ ಇಂದಿನ ಬುದ್ಧಿಯ ಬೆಳಕಿನ ಕಾಲದಲ್ಲಿ ತಾವಾಗಿಯೇ ಮರೆಯಾಗುತ್ತಿವೆ. ಅವುಗಳನ್ನು ಉಳಿಸುವದೂ ಅವು ಇರುವವೆನ್ನುವದೂ ಮೂಢತನವು !

"ರಾಜಪುರೋಹಿತರು ಸೂಚಿಸುವಂತೆ ಇಂದು ಅನುಭವಮಂಟಪವನ್ನು ಶಾಸನಬಾಹಿರಗೊಳಿಸಬಹುದು; ಆದರೆ ಜನಸಾಮಾನ್ಯರಲ್ಲೆಲ್ಲ ಉಂಟಾದ ಆತ್ಮಾನುಸಂಧಾನದ ಭಾವನೆಯನ್ನು ಕಿತ್ತುಹಾಕುವದು ಸಾಧ್ಯವಿಲ್ಲ. ಅದಕ್ಕಾಗಿ ನೂರಾರು ಸಾವಿರಾರು ಅನುಭವಮಂಟಪ ಉಂಟಾದಾವು. ಅವೆಲ್ಲವನ್ನು ಶಾಸನಬಾಹಿರ ಮಾಡಲಿಕ್ಕೆ ಪ್ರಭುತ್ವವು ಹೀಗೆ ಅತ್ಯಾಚಾರಗಳಿಗೆ ಇಳಿಯುವದು ಅನಿವಾರ್ಯವಾದೀತು ! ಆಗ ಪ್ರಭುಗಳ ಕೀರ್ತಿ ಏನಾದೀತು ? ಅನುಭವಮಂಟಪವನ್ನು ನ್ಯಾಯಬಾಹಿರ ಮಾಡಲಿಕ್ಕೆ ಕೇಳಿದ ರಾಜಪುರೋಹಿತರು ನಾಳೆ ಶರಣರನ್ನು ದೇಶದಿಂದ ಹೊಡೆದೋಡಿಸಲು ಕೇಳಬಹುದು. ಅವರ ವಿನಾಶಕಾರಿ ಸೂಚನೆಗೆ ಪ್ರಭುಗಳ ಅಭಿಪ್ರಾಯವೇನು ? ಸ್ಪಷ್ಟವಾಗಿ ಹೇಳಿಬಿಡಬೇಕು. ಪ್ರಸ್ತುತ ಮದುವೆ ವರ್ಣಾತೀತ ಧರ್ಮವಾದ ಲಿಂಗವಂತರ ಮದುವೆಯೆಂಬದನ್ನು ಪ್ರಭುಗಳು ಗಮನಿಸಬೇಕೆಂದು ಪುನಃ ಪುನಃ ವಿನಯದಿಂದ ಕೇಳಿಕೊಳ್ಳುತ್ತೇನೆ. ಈ ಮದುವೆಯಿಂದ ವರ್ಣಸಂಕರದ ಪ್ರಶ್ನೆಯೇ ಉದ್ಭವಿಸುವದಿಲ್ಲ. ಅನುಭವಮಂಟಪವು ಹಿತಕಾರಿಯಲ್ಲದೆ ಅನರ್ಥಕಾರಿಯಲ್ಲ. ಸುಳ್ಳು ಬಿನ್ನಪವನ್ನು ನಿರಾಕರಿಸಿ ಪ್ರಭುಗಳು ತಮ್ಮ ಸತ್ಯನ್ಯಾಯ ದೃಷ್ಟಿಯನ್ನು ತೋರ್ಪಡಿಸಬೇಕು."

ಬಸವಣ್ಣನವರ ಆವೇಶಪೂರ್ಣವಾದ ಮಾತುಗಳಿಂದ ಬಿಜ್ಜಳನು ಅಂತರಂಗದಲ್ಲಿ ಗಡಬಡಿಸಿಹೋದನು. ಸಭೆಯ ಪ್ರತಿಕ್ರಿಯೆಯೇನೆಂದು

ಸುತ್ತಲೂ ನೋಡಿದನು. ಆಗಲೇ ವೇಳೆ ಬಹಳವಾದ್ದರಿಂದ ಈ ಪ್ರಸಂಗ ವನ್ನು ಮುಂದಕ್ಕೆ ಹಾಕುವ ಯೋಜನೆ ಮಾಡಿ ಹೇಳಿದನು :

"ಶಾಸ್ತ್ರದಲ್ಲಿ ಹೇಳಿರುವ ವಿವಾಹ ಪ್ರಕಾರಗಳಲ್ಲಿ ಈ ವಿವಾಹವು ಯಾವ ಪ್ರಕಾರದ್ದು ? ಆದರಿಂದ ವರ್ಣಸಂಕರವಾಗಿದೆಯೇ ? ಸಂಬಂಧಿಸಿದ ಅಪರಾಧಿಗಳಿಗೆ ಶಿಕ್ಷೆಯೇನು ? ಈ ಪ್ರಶ್ನೆಗಳಿಗೆ ರಾಜಸಭೆಯಲ್ಲಿ ನಿರ್ಣಯು ಪಡೆಯುುವದು ಸಾಧ್ಯವಿಲ್ಲ ! ಇವುಗಳನ್ನು ಧರ್ಮಾಧಿಕರಣ ನ್ಯಾಯಪೀಠಕ್ಕೆ ಒಪ್ಪಿಸುವೆವು. ಆದರೆ ಬಸವಣ್ಣನವರೇ, ನೀವು ಏನೇ ಹೇಳಿದರೂ ಅನುಭವ ಮಂಟಪದ ಅನುಯಾಯಿಗಳು ರಾಜ್ಯದ ಆಡಳಿತಕ್ಕೆ ಆತಂಕ ತರುತ್ತಿದ್ದಾ ರೆಂದು ಮಾತ್ರ ನಮಗೆ ತಿಳಿದುಬಂದಿದೆ."

"ಅದು ನಿಜವಲ್ಲ."

—ಬಸವರಾಜರು ಎದ್ದು ನಿರಾಕರಿಸಿದರು. ಬಿಜ್ಜಳನು ಗಮನಿಸಲಿಲ್ಲ.

"ಕಳೆದ ವಾರದಲ್ಲಿ ಇಂತಹ ಒಂದು ಘಟನೆಯಾದ ವರದಿಯಾಗಿದೆ. ನಗರದ ಹೊರವಲಯದಲ್ಲಿ ಒಂದು 'ಹೆಣ್ಣಿನ ಮಾನರಕ್ಷಣೆಗಾಗಿ' ಎಂದು ನಾಲ್ವರು ರಾಜಭಟರು ಕೆಲವು ಶರಣರು ಪರಸ್ಪರ ಹೋರಾಡಿದರು. ಅದರಲ್ಲಿ ಒಬ್ಬ ಭಟನು ಇಬ್ಬರು ಶರಣರು ಮಡಿದರು. ಅತ್ಯಾಚಾರಿಗಳಾರೋ ರಕ್ಷಕ ರಾರೋ ಇನ್ನೂ ತಿಳಿದಿಲ್ಲ"

"ವಿಚಾರಣೆಯಿಂದ ತಿಳಿಯುುವದು" ಬಸವರಾಜರೆಂದರು.

ಬಿಜ್ಜಳನು ವಕ್ರದೃಷ್ಟಿಯಿಂದ ನೋಡಿ ಮುಂದುವರಿದನು.

"ತಾವೇ ರಕ್ಷಣೆಗೆ ಯತ್ನಿಸಿದವರೆಂದು ಎರಡೂ ಪಕ್ಷದವರು ಹೇಳು ತ್ತಾರೆ. ಅದಿರಲಿ. ಅಕ್ರಮವಾಗಿ ಸತ್ತ ಆ ಶರಣರ ದೇಹಗಳನ್ನು ಮಾರ ಯ್ಯನ ನೇತೃತ್ವದಲ್ಲಿ ಬಹುಜನ ಶರಣರು ಬಂದು ಒತ್ತಾಯದಿಂದ ಒಯ್ದರು. ಅದೆಲ್ಲವನ್ನು ಹಿಂದಿನಿಂದ ನೋಡಿಕೊಳ್ಳೋಣ. ಬಸವಣ್ಣನವರಿಂದಲೇ ಅನು ಭವ ಮಂಟಪ ! ಅವರು ಅದನ್ನು ತ್ಯಜಿಸಿದರೆ ಅದು ತಾನೇ ನಿಶ್ಶೇಷಿತ ವಾಗುವದು. ಬಸವರಾಜ ದಂಡನಾಯಕರೆ, ನಿಮ್ಮ ಹಾಗು ರಾಜ್ಯದ ಹಿತದ ದೃಷ್ಟಿಯಿಂದ ನೀವು ಅನುಭವಮಂಟಪದ ಸಂಬಂಧವನ್ನು ಕಡಿದುಕೊಳ್ಳು ವದು ಯೋಗ್ಯವಾಗಿದೆ. ಹಾಗೆ ಮಾಡಬೇಕೆಂದು ನಾನು ಸೂಚಿಸುತ್ತೇನೆ."

"ಅನುಭವಮಂಟಪವು ಯಾರೊಬ್ಬರ ಪ್ರಭಾವದಿಂದ ನಡೆಯುತ್ತಿದೆ ಯೆಂಬುದು ಆಶ್ಚರ್ಯದ ಮಾತು. ಕಲ್ಯಾಣದ ನಾಗರಿಕರೂ ಶರಣರೂ ಅದರ ಅಭ್ಯುದಯಕ್ಕೆ ಕಾರಣರು. ಅದು ರಾಜ್ಯಕ್ಕೆ ಉಪಕಾರ ಮಾಡಿದೆ ಯಲ್ಲದೆ ಅಪಾಯಕಾರಿಯಾಗಿಲ್ಲ. ನಾನು ಅದರ ಸಂಬಂಧವನ್ನು ಕಡಿದು ಕೊಳ್ಳುವದೆಂದರೆ ಆತ್ಮಘಾತವೇ ಸರಿ. ಅದು ಸಾಧ್ಯವಿಲ್ಲವೆಂದು ವಿನಯ ದಿಂದ ಬಿನ್ನವಿಸುತ್ತೇನೆ.

ಮಣ್ಣ ಮಡಕೆ, ಮಣ್ಣಾಗದು ಕ್ರೀಯುಳ್ಳುದು;
ಬೆಣ್ಣೆ ಕರಗಿ ತುಪ್ಪವಾಗಿ, ಮರಳಿ ತುಪ್ಪ ಬೆಣ್ಣೆಯಾಗದು ಕ್ರೀಯುಳಿದು;
ಹೊನ್ನು ಕಬ್ಬುಣವಾಗದು ಕ್ರೀಯುಳಿದು;
ಮುತ್ತು ನೀರಲ್ಲಿ ಹುಟ್ಟಿ, ಮತ್ತೆ ನೀರಾಗದು ಕ್ರೀಯುಳಿದು;
ಕೂಡಲಸಂಗನ ಶರಣನಾಗಿ ಮರಳಿ ಮಾನವನಾಗನು ಕ್ರೀಯುಳಿದು."

ದಿಟ್ಟಿಸಿ ನೋಡಿ ಬಿಜ್ಜಳನೆಂದನು :

"ಈ ಕಿಡಿಗೇಡಿತನದ ಫಲವನ್ನು ಉಣ್ಣಬೇಕಾಗುವದು."

"ಈ ನಿಮ್ಮ ಮುಂಡಿಗೆಯ ನುಡಿಗೆ ನನ್ನದೊಂದೇ ವಿನಯದ ಉತ್ತರ :

ನಾಳೆ ಬಪ್ಪುದು ನಮಗಿಂದೆ ಬರಲಿ;
ಇಂದು ಬಪ್ಪುದು ನಮಗೀಗಲೆ ಬರಲಿ,
ಇದಕಾರಂಜುವರು, ಇದಕಾರಳಕುವರು ?
'ಜಾತಸ್ಯ ಮರಣಂ ಧ್ರುವಂ' ಎಂದುದಾಗಿ
ನಮ್ಮ ಕೂಡಲಸಂಗಮದೇವರು ಬರೆದ ಬರೆಹವ
ತಪ್ಪಿಸುವರೆ ಹರಿಬ್ರಹ್ಮಾದಿಗಳಿಗಳವಲ್ಲಾ."

ಬಿಜ್ಜಳನು ಎದ್ದು ನಡೆದನು. ಸಭೆಯು ಮುಕ್ತಾಯದ ಘಂಟೆಯಾ ಯಿತು. ಹೊರ ಅಂಗಣಕ್ಕೆ ಬಂದು ಬಿಜ್ಜಳನೂ ವೃದ್ಧಮಂತ್ರಿ ಮಂಚಣ್ಣನೂ ರಥವನ್ನು ಹತ್ತಿದರು. ಅದು ಇನ್ನೂ ಹೊರಡುವದರಲ್ಲಿತ್ತು. ಅಷ್ಟರಲ್ಲಿ ಹೊರಗೆಬಂದ ಮಧುವರಸು-ಬಸವರಸರನ್ನು ಕಂಡು, ಅಸಂಖ್ಯಾತ ನಾಗರಿ ಕರು ಜಂಗಮರು ಶರಣರು 'ಹರಹರ ಮಹದೇವ' ಎಂದು ಗಗನ ಬಿರಿರುವಂತೆ ಘೋಷಿಸಿದರು. ಮಂಚಣ್ಣನು ಬಿಜ್ಜಳನ ಮುಖ ನೋಡಿದನು. ಬಿಜ್ಜಳನು "ಬಸವಣ್ಣನೇ ಈಗ ಕಲ್ಯಾಣದ ಪ್ರಭು !" ಎಂದು ಕಟಕಿಯಾಡಿದನು. ಅವರ

ರಥವು ದೂರ ಹೋಗುವ ವರೆಗೆ 'ಗುರುಬಸವೇಶ್ವರ ಜಯು, ಬಸವ ತಂದೆ, ಬಸವರಾಜ ಜಯು' ಎಂಬ ಘೋಷ ಕೇಳುತ್ತಲೇ ಇತ್ತು.

ಎದುರಿಸುವದು ಹೇಗೆ ?

ಮಾಚಯ್ಯನು ಮೂರು ತಿಂಗಳ ಸಂಚಾರದಿಂದ ಮರಳಿ ಕಲ್ಯಾಣಕ್ಕೆ ಬಂದುದು ಅದೇ ದಿನ. ತಾನು ಹೋದಲ್ಲೆಲ್ಲ ಕಂಡ ಲಿಂಗವಂತರ ಉತ್ಕರ್ಷ ಗಳನ್ನು ಮಹಮನೆಗೆ ವರದಿ ಮಾಡುವ ಉತ್ಸಾಹ ಅವನಿಗೆ! ಆದರೆ ಪ್ರಭು ದೇವರು ಅಕ್ಕಮಹಾದೇವಿ ಹೋದುದು ಶರಣರ ಮೇಲೆ ವಿವಿಧ ಆಪಾದನೆ ಬಂದು ವಿಚಾರಣೆ ನಡೆದುದು ತಿಳಿದು ಅವನ ಉತ್ಸಾಹವನ್ನು ಕುಗ್ಗಿಸಿದವು. ಪರಿಶುದ್ಧರಾದ ಶರಣರ ಮೇಲೆ, ಶ್ರೇಷ್ಠವಾದ ಷಟ್‌ಸ್ಥಲತತ್ವದಾಚಾರದ ಮೇಲೆ ದೋಷಾರೋಪಣೆ ಮಾಡಿದುದನ್ನು ಮಾಚಯ್ಯನು ಸಹಿಸದಾದನು. ಮಹಮನೆಗೆ ಬಂದ ಕೂಡಲೆ ಸಕಲೇಶಮಾದರಸರಿಂದ ನಡೆದುದೆಲ್ಲವನ್ನು ಕೇಳಿ ಆಗಲೇ ರಾಜಸಭೆಗೆ ಹೋಗಲನುವಾದನು. ಮಾದರಸನು ಅವನನ್ನು ತಡೆದು ವಿಶ್ರಮಿಸಿಕೊಳ್ಳಹಚ್ಚಿದನು. ಸಂಜೆಯ ಶಿವಾನುಭವಗೋಷ್ಠಿಯನ್ನು ಮುಗಿಸಿ ಕೊಂಡು ಅವರಿಬ್ಬರು ಮಹಮನೆಯ ಮುಂದಿನ ಮೊಗಸಾಲೆಗೆ ಬಂದರು. ಗೋಷ್ಠಿಯಲ್ಲಿ ಕೂಡಿದ ಶರಣರೆಲ್ಲ ರಾಜಸಭೆಯ ಕಡೆಗೆ ಹೋದರು. ನಾಗರಿ ಕರು ಸಹ ಕೂಡಿ ಅಲ್ಲಿ ದೊಡ್ಡ ಜನ ಸಮುದಾಯವಾಯಿತು. ಅವರೆಲ್ಲರು ಪಂಜುಗಳನ್ನು ಹಚ್ಚಿಕೊಂಡು, ಜಯಘೋಷ ಮಾಡುತ್ತ ಬಸವರಸು-ಮಧು ವರಸರನ್ನು ಸುತ್ತುಗಟ್ಟಿ ಕರಕೊಂಡು ಮಹಮನೆಗೆ ಬಂದರು. ಬಸವರಾಜರು ಮೊಗಸಾಲೆಯಲ್ಲಿ ನಿಂತ ವೃದ್ಧ ಶರಣರಿಬ್ಬರಿಗೂ ವಂದಿಸಿ, "ಮಾಚಯ್ಯನವರು ದಯಮಾಡಿಸಿದುದು ಯಾವಾಗ ? ಸರ್ವಾನಂದ ತಾನೆ ?" ಎಂದರು.

ಮಾಚಯ್ಯ ಪ್ರತಿಯಾಗಿ ವಂದಿಸಿ, ಕೇಳಿದರು :

ಎಲ್ಲವೂ ಆನಂದ; ವಿಚಾರಣೆ ಮುಗಿಯಿತೇ ? ರಾಜನ ತೀರ್ಪು ಏನು ?"

"ವಿಚಾರಣೆ ಮುಗಿಯಲಿಲ್ಲ. ಮುಖ್ಯವಾಗಿ ಇದು ನಾರಣಕ್ರಮಿತನು ಎಬ್ಬಿಸಿದ ಧೂಳು! ಶರಣರನ್ನು ಪೀಡಿಸುವದು ಅವನ ಉದ್ದೇಶ !"

ಜನಸಮುದಾಯ ಮರಳಿತು. ಶರಣರು ಒಳಗೆ ಬಂದರು. ಅಂಗಣದಲ್ಲಿ ನಿಂತು ಮಧುವರಸನು ರಾಜಸಭೆಯಲ್ಲಿ ನಡೆದುದನ್ನು ವಿವರಿಸಿ, ಅಣ್ಣನವರ

ವಾದಸರಣಿಯನ್ನು ಪ್ರಶಂಸಿಸಿದನು. ಬಿಜ್ಜಳನ ವಿಚಾರದಲ್ಲಿ ತಾನು ಊಹಿಸಿದುದು ಸತ್ಯವೇ ಆಗಿದೆಯೆಂದು ಮಾಚಯ್ಯನು ತಿಳಿದುಕೊಂಡನು. ಆಗಲೆ ರಾತ್ರಿ ಒಂದು ಪ್ರಹರವಾಗಿತ್ತು. ಪರಿಸ್ಥಿತಿಯ ವಿಚಾರ ಮಾಡುವದಕ್ಕಾಗಿ ಮುಂಜಾನೆ ವಿಚಾರಸಮಿತಿ ಸೇರಬೇಕೆಂದು ಗೊತ್ತಾಗಿ ಎಲ್ಲರೂ ವಾಸಗೃಹಗಳ ಕಡೆಗೆ ನಡೆದರು.

ಮರುದಿನ ವಿಚಾರಸಮಿತಿಸಭೆಗೆ ಸದಸ್ಯರಲ್ಲದೆ ಉಳಿದ ಶರಣರೂ ಆಗಮಿಸಿದ್ದರು. ಅನಿಶ್ಚಿತ ವಾತಾವರಣವೇ ಅದಕ್ಕೆ ಕಾರಣವಾಗಿತ್ತು. ಅಧ್ಯಕ್ಷರಾದ ಸಕಲೇಶ ಮಾದರಸರ ಸೂಚನೆಯಂತೆ ಮಧುವರಸನು ಶರಣರ ಮೇಲೆ, ಅನುಭವ ಮಂಟಪದ ಮೇಲೆ, ಮೂಲಕಾರಣರೆಂದು ದಂಡನಾಯಕರ ಮೇಲೆ ಎರಗಿ ಬಂದ ದೋಷಾರೋಪಣೆಗಳನ್ನು ತಿಳಿಸಿ, ವಿಚಾರಣೆಯಲ್ಲಿಯ ದ್ವೇಷ ಗ್ರಸ್ತ-ಪಕ್ಷಪಾತದ ದೃಷ್ಟಿಯನ್ನು, ಬಿಜ್ಜಳನ ಭಾವನೆಯನ್ನು ಉದಾಹರಣೆಗಳಿಂದ ಸ್ಪಷ್ಟಗೊಳಿಸಿದನು. ಕಡೆಗೆ "ಶರಣರ ನ್ಯಾಯಬದ್ಧವಾದ ವರ್ತನೆಯಿಂದಲೂ ಅದಕ್ಕೆ ದೊರೆಯುತ್ತಿರುವ ಪ್ರೋತ್ಸಾಹನೆಯಿಂದಲೂ ಸಂಪ್ರದಾಯನಿಷ್ಠ ವೈದಿಕರೂ ಜೈನ-ಬೌದ್ಧಾದಿಗಳೂ ಚಿದರಿದ್ದಾರೆ. ಅವರೆಲ್ಲರು ರಾಜನ ತಲೆ ಕೆಡಿಸಿದ್ದಾರೆ. ಎಲ್ಲವನ್ನು ಬಿಟ್ಟರೂ, ಕಳೆದ ವಾರದಲ್ಲಿ ಆದ ರಾಜಭಟರ ಸಾವು, ಶರಣರ ಸತ್ಯಾಗ್ರಹಗಳನ್ನು ರಾಜಕಾರಣವು ಅಲಕ್ಷಿಸುವದಿಲ್ಲ. ಅನುಭವಮಂಟಪದ ಬಗೆಗೆ ಬಿಜ್ಜಳನು ತಾಳಿದ ಭಾವನೆ ಅಪಾಯಕಾರಿಯಾಗಿದೆ. ಆತನು ಅದನ್ನು ನಿರ್ಮೂಲಗೊಳಿಸಲು ನಿಶ್ಚಯಿಸಿದ್ದಾನೆ. ಕ್ರಮಿತಾದಿಗಳು ತಮ್ಮ ಶಕ್ತಿಯನ್ನೆಲ್ಲ ಇದಕ್ಕೆ ಉಪಯೋಗಿಸುತ್ತಿದ್ದಾರೆ. ನಾವಿದಕ್ಕೆ ಉತ್ತರ ಕೊಡುವ ಸಿದ್ಧತೆಯಲ್ಲಿ ಇರಬೇಕಾಗಿದೆ" ಎಂದನು.

ಬಸವಣ್ಣನವರು ನುಡಿದರು :

"ಮಧುವರಸರ ಭೀತಿ, ಸಂದೇಹಗಳನ್ನು ನಿರಾಕರಿಸಲಿಕ್ಕಾಗದಿದ್ದರೂ ಅವರು ಹೇಳುವ ಸ್ವರೂಪ ಈಗಲೇ ಅವಕ್ಕಿಲ್ಲ; ನಿವಾರಣೆಯು ಶಕ್ಯವಿದೆ "

"ಅಣ್ಣನವರೆ, ಸಮಸ್ಯೆಯನ್ನು ನೀವು ನಿಮ್ಮ ಭಾವನೆಯಿಂದ ನೋಡುತ್ತೀರಿ. ನಿನ್ನೆ ಕಡೆಕಡೆಯ ಭಾಗದ ಬಿಜ್ಜಳರಾಜನ ಪ್ರತಿಯೊಂದು ವಾಕ್ಯದಲ್ಲಿ ಅವನ ದ್ವೇಷದ ಕಠೋರ ರೂಪವು ಎದ್ದು ಕಾಣುತ್ತಿತ್ತು. ಅನುಭವಮಂಟಪವನ್ನು ಗೊತ್ತಿಗೆ ಹಚ್ಚುವದು ನಿಶ್ಚಿತ! ನೀವು ಅದರ ಸಂಬಂಧ ಕಡಿದುಕೊಳ್ಳ

ದಿದ್ದರೆ ನಿಮ್ಮ ಪರಿಣಾಮ ನೆಟ್ಟಗಾಗದು’ ಎಂದು ನಿಮ್ಮನ್ನು ಮೊದಲೇ ಎಚ್ಚರಿಸಿದ್ದಾನೆ. ಇನ್ನೇನು ಬೇಕು ? ಧರ್ಮಾಧಿಕರಣದ ನ್ಯಾಯ ನಿರ್ಣಯ ಹೇಗಾಗುವದೆಂಬದು ಸ್ಪಷ್ಟವೇ ಇದೆ.”

“ನಿರ್ಣಯ ಹೇಗೆಯೇ ಆಗಲಿ ! ಆ ಮೇಲೆ ನೋಡೋಣ. ಆಪತ್ತನ್ನು ಮೊದಲೇ ಕಲ್ಪಿಸಿಕೊಂಡು ಚಿಂತಿಸುವದು, ಹೋರಾಟಕ್ಕೆ ಸಿದ್ಧವಾಗುವದು ಶರಣರಿಗೆ ಸಲ್ಲದು !” ಬಸವರಸರ ದನಿ ಏರಿತ್ತು.

ಸಭೆ ಸ್ತಬ್ಧವಾಯಿತು ಪ್ರತಿಯಾಗಿ ಮಾತಾಡಲು ಯಾರಿಗೆ ಧೈರ್ಯ? ಸುತ್ತಲೂ ನೋಡಿ ಮಾಚಯ್ಯನೆಂದನು :

“ಅಣ್ಣನವರು ಹೇಳುವದೇನು ? ಆ ಜಾತಿವಾದಿಗಳು ನಮಗೆ ಕಲ್ಲೆಸೆಯುತ್ತಿರುವಾಗ, ನಾವು ನಗುತ್ತ ಶಿವಶರಣು ಎನ್ನುತ್ತ ಕುಳ್ಳಿರಬೇಕೇ ? ಆಗ ಧ್ಯಾನವಾದರೂ ಹೇಗೆ ಸಾಧ್ಯ ? ಈ ಅಂಜುಬುರುಕತನ ನಮಗೆ ಬೇಡ.”

“ಅಂಜಬೇಕೆಂದು ಹೇಳುವದಿಲ್ಲ ನಾನು; ಅನ್ಯಾಯವನ್ನು ಪ್ರತಿಭಟಿಸುವ ನಮ್ಮ ಕ್ರಮವು ಶರಣರ ಶೀಲಕ್ಕೆ ಅನುಗುಣವಾಗಿರಬೇಕೆನ್ನುತ್ತೇನೆ ”

ಮಾಚಯ್ಯನ ಕಣ್ಣು ಕೆಂಪಾಗಿದ್ದವು. ಚೆನ್ನಬಸವಣ್ಣನು ನಡುವೆ ಬಂದು ‘ಈಗ ನೀವೇನು ಮಾಡಬೇಕೆನ್ನುವಿರಿ ?’ ಎಂದು ಮಾಚಯ್ಯನನ್ನು ಕೇಳಲು, ಮಾಚಯ್ಯನು ತುಸು ಯೋಚಿಸಿ ಉತ್ತರ ಕೊಟ್ಟನು:

”ಸಭೆಗೆ ತಿಳಿಸಿದ ವಿವರಣೆಯಿಂದ ಬಿಜ್ಜಳನ ತೀರ್ಪು ಏನೆಂಬುದು ತಿಳಿದ ಮಾತಾಗಿದೆ. ಸನಾತನಿಗಳ ಶಾಸ್ತ್ರದಲ್ಲಿ ಶೂಲಕ್ಕೇರಿಸುವದೇ ವರ್ಣಸಂಕರಕ್ಕೆ ಶಿಕ್ಷೆ! ಅದನ್ನೇ ವಿಧಿಸುವರು. ಆ ಮೇಲೆ ಅನುಭವ ಮಂಟಪ ಮುಚ್ಚಿ ಶರಣರನ್ನು ಸೆರೆಹಿಡಿಯಬಹುದು. ಬಹುಜನರು ಬಹು ನಿಷ್ಠೆಯಿಂದ ಬೆಳೆಸಿದ ಸಂಸ್ಥೆ ಅಳಿಯುವದು ಇಷ್ಟವೇ ? ಬಿಜ್ಜಳನ ತೀರ್ಪನ್ನು ವಿಫಲವಾಗಿಸಲು ಮೊದಲೇ ಸಿದ್ಧವಾಗಿರಬೇಕು.”

“ಸರಿಯಾದ ಸಲಹೆ ! ಅಗತ್ಯವಾಗಿ ಸಿದ್ಧವಾಗಿರಬೇಕು !” ಸಭೆಯಲ್ಲಿ ಧ್ವನಿ !

ಶರಣನೊಬ್ಬನು ಮಾತ್ರ ವ್ಯಂಗವಾಗಿ ಕೇಳಿದನು :

“ಏನು ನಿಮ್ಮ ಸಿದ್ಧತೆ ? ರಾಜನಿಗೆ ಸೈನ್ಯವಿದೆ.”

"ಸೈನ್ಯವನ್ನು ಎದುರಿಸುವ ಶಕ್ತಿ ನಮ್ಮಲ್ಲಿಯೂ ಇದೆ. ಅದನ್ನು ಮೊದಲು ಸಂಘಟಿಸಬೇಕಾಗಿದೆ. ನಾನು ಬಳ್ಳೀಗಾಂವಿಯಿಂದ ಸೊನ್ನಲಾಪುರದ ವರೆಗೆ ಸಂಚರಿಸಿ ಬಂದಿದ್ದೇನೆ. ಶರಣಧರ್ಮದ ಸಾಮಂತರು ವೀರವ್ರತಿಗಳೇ ಆಗಿದ್ದಾರೆ. ಅಭಿಮಾನಿಗಳಾದ ಅವರು ಶರಣರಿಗೆ ಬೇಕಾದ ಸಹಾಯ ನೀಡಲು ಸಿದ್ಧರಿದ್ದಾರೆ. ಪರಿಸ್ಥಿತಿಯನ್ನು ತಿಳಿಸಿ, ಈಗಲೇ ಅವರೆಲ್ಲರಿಗೆ ಮನವಿಯನ್ನು ಕಳಿಸಬೇಕು. ಸ್ವತಃ ನಾನು ಸಾವಿರ ಜನರನ್ನು ಸಂಗ್ರಹಿಸಲು ಶಕ್ತನಾಗಿದ್ದೇನೆ..........."

ಅವರ ಮಾತು ಮುಗಿಯುವದಕ್ಕೆ ಕಾಯದೆ ಸಭಾಪತಿ ಸಕಲೇಶರು 'ತಿಳಿಯಿತು ನಿಮ್ಮ ಯೋಜನೆ, ಅಣ್ಣನವರು ಚಡಪಡಿಸುತ್ತಿದ್ದಾರೆ. ಅವರೇನು ಹೇಳುತ್ತಾರೆ ಕೇಳಿರಿ' ಎಂದರು. ಬಸವರಾಜರು ಚಟ್ಟನೆ ಎದ್ದರು.

"ಮಾಚಿದೇವರು ಅನುಭಾವದಲ್ಲಿ ಪರಿಣಿತರಾದಂತೆ, ರಾಜಿಕದಲ್ಲಿಯೂ ನಿಪುಣರು; ಮತ್ತು ಹಿರಿಯರು. ತಮಗೆ ಉಚಿತವೆನಿಸಿದ ಸೂಚನೆಯನ್ನು ಸಭೆಯ ಮುಂದೆ ಇಟ್ಟಿದ್ದಾರೆ. ಅದನ್ನು ನಾನು ವಿಷಾದದಿಂದ ವಿರೋಧಿಸಬೇಕಾಗಿದೆ. ಧರ್ಮಾಧಿಕರಣದ ತೀರ್ಮಾನ ಹೀಗೆಯೇ ಎಂದು ಕಲ್ಪಿಸಿಕೊಂಡು ಅದನ್ನು ಎದುರಿಸಲು ಈಗಲೇ ಯೋಚಿಸಿದರೆ ಆಪಾದನೆಗಳನ್ನು ನಾವಾಗಿಯೇ ಒಪ್ಪಿಕೊಂಡಂತಾಗುವದು. ಹರಳಯ್ಯ – ಮಧುವರಸಯ್ಯನವರಿಗೆ, ನೂತನ ದಂಪತಿಗಳಿಗೆ ಒದಗಿರುವ ವಿಪತ್ತಿಗೆ, ಉಳಿದ ಶರಣರಿಗೆ ಕಾದಿರುವ ವಿಪತ್ತಿಗೆ ಪರಿಹಾರವನ್ನು ಹಿಂದೊಮ್ಮೆ ಸಭಾಪತಿ ಸಕಲೇಶ ಮಾದರಸರು ಹೇಳಿದಂತೆ, ಯೋಚಿಸಿಕೊಳ್ಳಬೇಕು. ಸತ್ಯಾಗ್ರಹದ ರೂಪದಿಂದ, ನೆನಹಿನ ಅಲಗಿನಿಂದ ನಗುನಗುತ್ತ ಎದುರಿಸಬೇಕು. ಮಾಚಿದೇವರು ತಮ್ಮ ಹಿಂಸಾತ್ಮಕ ಸಲಹೆಯನ್ನು ಹಿಂದೆಗೆದುಕೊಳ್ಳಬೇಕೆಂದು ವಿನಯದಿಂದ ಬೇಡಿಕೊಳ್ಳುತ್ತೇನೆ.

ತನಗೆ ಮುನಿವರಿಗೆ ತಾ ಮುನಿಯಲೇಕಯ್ಯಾ ?
ತನಗಾದ ಆಗೇನು? ಅವರಿಗಾದ ಚೇಗೇನು?
ತನುವಿನ ಕೋಪ ತನ್ನ ಹಿರಿಯತನದ ಕೇಡು !
ಮನದ ಕೋಪ ತನ್ನರುಹಿನ ಕೇಡು !
ಮನೆಯೊಳಗಿನ ಕಿಚ್ಚು ಮನೆಯ ಸುಟ್ಟಲ್ಲದೆ,
ನೆರೆಮನೆಯ ಸುಡುವುದೇ ಕೂಡಲಸಂಗಮದೇವಾ ?''

ಒಳಗೆ ವಿಡುಕಿವರೂ ಪ್ರತಿ ಮಾತಾಡಲಾರದೆ ಸುಮ್ಮನಾದನು ಮಾಚಯ್ಯನು. ಸಭಾಪತಿ ಸಕಲೇಶಮಾದರಸರು ಹೇಳಿದರು :

"ಎಲ್ಲರಿಗೂ ಪರಿಸ್ಥಿತಿಯು ಅರಿವಾಗಿದೆ ಇಂದಿನ ಚರ್ಚೆಯಿಂದ. ಪ್ರಸ್ತುತದಲ್ಲಿ ಜಾಗ್ರತ ಸಹನೆ ಸರಿಯಾದುದೆಂದು ತೋರುತ್ತದೆ. ಇನ್ನು ದಿನದಿನವೂ ಸಭೆ ಸೇರಿ, ಸಕಲೇಶ್ವರದೇವರ ಸಂದೇಶವೇನೆಂದು ವಿಚಾರಿಸುತ್ತಿರೋಣ."

ಸಭೆ ಮುಕ್ತಾಯವಾಯಿತು.

ಅಂದು ಪೂಜಾಧ್ಯಾನಗಳಲ್ಲಿಯೇ ಹೆಚ್ಚು ಹೊತ್ತು ಕಳೆದು ಮನಸ್ಸನ್ನು ಸಂಗಮನಾಥನ ಸನ್ನಿಧಿಯಲ್ಲಿರಿಸುವದಕ್ಕೆ ಪ್ರಯತ್ನಿಸುತ್ತಿದ್ದರು ಅಣ್ಣನವರು.

ಅತ್ತ ಹಗಲೆಲ್ಲ ರಾಜಾಧ್ಯಕ್ಷ, ಸೇನಾಧ್ಯಕ್ಷ ಅಧಿಕರಣಗಳ ಕಡೆಗೆ ಅಧಿಕಾರಿಗಳ ಚಲನವಲನ ಎಡೆಬಿಡದೆ ನಡೆದಿತ್ತು.

೧೫. ಅಶಾಂತಿ ಮೂಡಿತು

ಅಣ್ಣನವರು ಸಂಗಮಕ್ಕೆ

ಆ ಹೊತ್ತು ಸಂಜೆಯ ಅನುಭವಗೋಷ್ಠಿಗೆ ನಿತ್ಯನಿಷ್ಠರಲ್ಲದೆ ಉಳಿದವರು ಬಂದಿರಲಿಲ್ಲ. ಅದು ಮುಗಿದು ಶರಣರು ಏಳುವ ಹೊತ್ತಿಗೆ, ನಗರದಲ್ಲಿಯ ಜಂಗಮರೊಬ್ಬರು 'ಹರಳಯ್ಯ ಶೀಲವಂತರನ್ನು ಬಂಧಿಸಿ ಕರದೊಯ್ದ'ರೆಂದು ಸುದ್ದಿಯನ್ನು ತಂದು ಹೇಳಿದರು. ಆಪತ್ತು ದೂರವಾಗಿಲ್ಲವೆಂದೆನಿಸಿತೆಲ್ಲರಿಗೆ. ಚೆನ್ನಬಸವಣ್ಣನ ಸೂಚನೆಯಂತೆ ಓಲೆಯ ಶಾಂತಯ್ಯನು ಮಧುವರಸನ ಮನೆಗೆ ನೋಡಹೋದನು. ಮಧುವರಸನನ್ನೂ ಬಂಧಿಸಿಕೊಂಡು ಹೋಗಿದ್ದರು. ದುಃಖಿಸುತ್ತ ಕುಳಿತಿದ್ದ ಕಲಾವತಿಯನ್ನು ಶಾಂತಯ್ಯನು ಮಹಮನೆಗೆ ಕರದುಕೊಂಡು ಬಂದನು. ಅದೇ ಸಮಯಕ್ಕೆ ರಾಹುತನೊಬ್ಬನು ಬಸವರಾಜರಿಗೆ ಬಿಜ್ಜಳನ ಆಜ್ಞಾಪತ್ರವನ್ನು ತೆಗೆದುಕೊಂಡು ಬಂದನು. ಚೆನ್ನಬಸವಣ್ಣ ತೆಗೆದುಕೊಂಡು ಓದಿದನು !

'ಸ್ವಸ್ತಿಶ್ರೀ ಚಾಲುಕ್ಯರಾಜ್ಯ ಸರ್ವಾಧಿಕಾರಿ, ಭುಜಬಲ ಚಕ್ರವರ್ತಿ, ಬಿಜ್ಜಳರಾಯರು, ಚಾಲುಕ್ಯರಾಜ್ಯದ ನಿವೃತ್ತಮಂತ್ರಿ ಬಸವೇಶ ದಂಡನಾಯಕರಿಗೆ—

ಕಲ್ಯಾಣದ ನಾಗರಿಕರು ಸಲ್ಲಿಸಿದ ಬಿನ್ನಪದ ವಿಷಯಗಳಿಗೆ ಸಂಬಂಧಿಸಿ ಆಜ್ಞೆ ಮಾಡುವದೇನಂದರೆ—

ಆಪಾದನೆಗೊಳಪಟ್ಟ ಅನುಭವ ಮಂಟಪ ಧರ್ಮಪ್ರತಿಷ್ಠಾನದೊಡನೆ ಇರುವ ನಿಮ್ಮ ಸಂಬಂಧವನ್ನು ತ್ಯಜಿಸಬೇಕೆಂಬ ಧರ್ಮಾಧಿಕರಣದ ಸಲಹೆಯನ್ನು ನೀವು ನಿರಾಕರಿಸಿದ್ದರಿಂದ ಈ ಆಜ್ಞೆ ಮಾಡಬೇಕಾಗಿದೆ. ಈಗ ಕಲ್ಯಾಣದಲ್ಲಿ ಉಂಟಾದ ಪ್ರಕ್ಷುಬ್ಧ ಪರಿಸ್ಥಿತಿಯನ್ನು ಶಾಂತಗೊಳಿಸುವದಕ್ಕೆ ನಿಮ್ಮ ವರ್ತನವು ಆತಂಕಕಾರಿಯಾಗಿದೆ. ಆದ್ದರಿಂದ ನೀವು ನಾಳೆಯ ಸೂರ್ಯೋದಯದೊಳಗೆ ಕಲ್ಯಾಣವನ್ನು ಬಿಟ್ಟು ಸಂಗಮಕ್ಕೆ ಹೋಗಬೇಕು. ಪ್ರಭುತ್ವ

ಎರಡನೆಯ ಆಜ್ಞೆ ಮಾಡುವವರೆಗೆ ಅಲ್ಲಿ ಸ್ಥಾನಬದ್ಧರಾಗಿರಬೇಕು. ನಿಮ್ಮನ್ನು ಪ್ರಯಾಣ ಮಾಡಿಸಿ ಸಂಗಮಕ್ಕೆ ಮುಟ್ಟಿಸುವ ಸೈನಿಕದಳವು ಸಕಲ ಸೌಕರ್ಯಗಳೊಡನೆ ಇಂದು ರಾತ್ರಿ ಎರಡನೆಯ ಪ್ರಹರದಲ್ಲಿ ಮಹಮನೆಯ ಮುಂದೆ ಸಿದ್ಧವಾಗಿರುವದು.'

–ಸ್ವಹಸ್ತ–ಬಿಜ್ಜಳರಾಯ.

ಮಹಮನೆ ಸ್ತಬ್ಧವಾಯಿತು; ಹಿರಿಯ ಶರಣರು ಹಾಗೆಯೇ ವಿಚಾರ ಮಂದಿರ ಸೇರಿದರು. ಸಕಲೇಶ ಮಾದರಸರು ಕಂಠ ಬಿಗಿದು ಎಂದರು :

"ಕಾಮಿಸಿ, ಕಲ್ಪಿಸಿ, ಭಾವಿಸಿ, ಬರಿದೆ ಬಳಲದಿರು; ಚಿಂತೆ ಮರುಳತನ !
ಅದೆಂತು ಬಂದುದನಂತೆ ಕಾಂಬುದು; ಚಿಂತೆ ಮರುಳತನ !
ಅಚಿಂತ್ಯ ಸಕಲೇಶ್ವರ ಮಾಡಿದಂತಲ್ಲದೆ
ಅದೆಂತೂ ಆಗದು. ಚಿಂತೆ ಮರುಳತನ !!

ಬಸವಣ್ಣನವರ ಸೇವೆ ಅನುಭಾವಗಳು ಅನುಭವಮುಂಟಹಕ್ಕೆ ಬಹುಕಾಲ ದೊರೆಯುವವೆಂದು ತಿಳಿದಿದ್ದೆನು. ಅವರೊಡನೆ ಓಲಾಡಿ ಅವರ ಕಣ್ಣಮುಂದೆ ಸಕಲೇಶನಲ್ಲಿ ಬಯಲಾಗುವ ಆಸೆಯನ್ನು ಇಟ್ಟುಕೊಂಡಿದ್ದೆನು. ಆ ಚಿಂತೆ ಮರುಳತನವೆಂದು ಈಗ ಅರಿವಾಗುತ್ತದೆ."

ಮಧುವಯ್ಯ-ಹರಳಯ್ಯ-ಶೀಲವಂತಯ್ಯಗಳ ಸೆರೆಮನೆ ವಾಸ ! ಬಸವಣ್ಣನವರ ನಿಷ್ಕ್ರಮಣ ಇವು ಮಹಮನೆಯ ಸಾಮಾನ್ಯ ವಾತಾವರಣದ ಮೇಲೆ ಆಘಾತಮಾಡಿದಂತಾಗಿತ್ತು. ವಿಚಾರ ವಿನಿಮಯದ ನಂತರ 'ಈಗ ರಾಜಾಜ್ಞೆಯನ್ನು ಪಾಲಿಸಿ ನ್ಯಾಯಪೀಠದ ತೀರ್ಪು ಸುಲಭವಾಗುವಂತೆ ಮಾಡುವ'ದೆಂದು ಗೊತ್ತಾಯಿತು. ಕೂಡಲೆ ಬಸವಣ್ಣನವರು ಬೀಳ್ಕೊಳ್ಳುವ ನಾಲ್ಕು ಮಾತು ಆಡುವದು ಸಹಜವಾಯಿತು.

"ಎನ್ನಿಂದ ಕಿರಿಯರಿಲ್ಲ; ಶಿವಭಕ್ತರಿಂದ ಹಿರಿಯರಿಲ್ಲ.
ನಿಮ್ಮ ಪಾದಸಾಕ್ಷಿ, ಎನ್ನ ಮನಸಾಕ್ಷಿ,
ಸಂಗಮದೇವಾ, ಎನಗಿದೇ ದಿಬ್ಯ !

ಇದೇ ನನಗೆ ತಾರಕ ! ಈ ಭಾವನೆ ಅಚ್ಚಳಿಯದಿರಲೆಂದು ಪರಾತ್ಪರಘನದಲ್ಲಿ ಪ್ರಾರ್ಥನೆ. ಕೂಡಲಸಂಗನ ಬೆಸನವಲ್ಲದೆ ಬೇರೆ ಸುಖದುಃಖ ನನಗಿಲ್ಲ.

ಕಾಣದ ಠಾವಿನಲ್ಲಿ ಜರಿದರೆಂದರೆ, ಕೇಳಿ ಪರಿಣಾಮಿಸಬೇಕು.
ಅದೇನು ಕಾರಣ ? ಕೊಳ್ಳದೆ ಕೊಡದೆ ಅವರಿಗೆ ಸಂತೋಷವಹುದಾಗಿ !
ಎನ್ನ ಮನದ ತದ್‌ದ್ವೇಷವಳಿದು, ನಿಮ್ಮ ಶರಣರಿಗೆ
ಶರಣೆಂಬುದ ಕರುಣಿಸು ಕೂಡಲಸಂಗಮದೇವಾ."

ಸ್ವಲ್ಪ ಹೊತ್ತು ಯೋಚಿಸಿ ಪುನಃ ಹೇಳಿದರು :

"ಆದರೆ ಅನುಭವಮಂಟಪದ ವಿಚಾರ ! ಅರಸೊತ್ತಿಗೆ ಅದನ್ನು ಪೀಡಿಸುವದಕ್ಕೆ ಹೊರಟುದು ದುರ್ದೈವದ ಸಂಗತಿ !

ಉರಿವ ಕೊಳ್ಳಿಯ ಮಂಡೆಯಲ್ಲಿಕ್ಕಿದೊಡುರಿವುದು ಮಾಣ್ಬುದೇ ?
ಕಲ್ಲ ಗುಗ್ಗರಿಯ ಮೆಲಿದರೆ ಹಲ್ಲು ಹೋಹುದು ಮಾಣ್ಬುದೇ ?
ಶರಣರೊಡನೆ ಸರಸವಾಡಿದರೆ ನರಕ ತಪ್ಪದು ಕಾಣಾ,
ಕೂಡಲ ಸಂಗಮದೇವಾ !

ಈಗ ನಮ್ಮ ಕರ್ತವ್ಯ ಸ್ಪಷ್ಟವಾಗಿದೆ.

ಅಂಜಿದರಾಗದು, ಅಳುಕಿದರಾಗದು;
ವಜ್ರಪಂಜರದೊಳಗಿದ್ದರಾಗದು;
ತಪ್ಪದುವೋ ಲಲಾಟಲಿಖಿತ !
ಕಕ್ಕುಲತೆಗೆ ಬಂದರೆ ಆಗದು ನೋಡಾ !
ಧೃತಿಗೆಟ್ಟು ಮನ ಧಾತುಗೆಟ್ಟರೆ ಅಪ್ಪುದು ತಪ್ಪದು. ಕೂ.ಸಂ.ದೇವಾ.

ತೀರ್ಪು ವಿರುದ್ಧವಾದರೆ ನಗುನಗುತ್ತ ಅದನ್ನು ಎದುರಿಸಬೇಕು. ಧೃತಿಗೆಡಬೇಕಾಗಿಲ್ಲ. ಇದೇ ನನ್ನ ಪ್ರಾರ್ಥನೆ !”

ಮಾಚಯ್ಯ ಅಣ್ಣನವರಿಗೆ ವಂದಿಸಿ ಕೈಮುಗಿದು ಎಂದನು:

“ನಿಮ್ಮ ಸಹನೆಗೆ ಎಣೆಯಿಲ್ಲ ಅಣ್ಣನವರೆ, ತೀರ್ಮಾನದ ದಾರೀಕಾಯುವೆವು. ಅದರಲ್ಲಿ ಅನ್ಯಾಯವಾಗಿದ್ದರೆ, ಮುಂದೆ ನಿಮ್ಮ ಹಾದಿ ನಿಮಗೆ ! ನಮ್ಮ ಹಾದಿ ನಮಗೆ !”

ಬಸವರಾಜರು ತಲೆ ತಗ್ಗಿಸಿ ‘ಶಿವಧೋ ಶಿವಧೋ’ ಎಂದು ಶರಣರೆಲ್ಲರಿಗೆ ವಂದಿಸಿ ಹೊರಬಂದರು. ಅವರೊಡನೆ ಹೊರಬಂದ ಶರಣರ ಹೆಜ್ಜೆಗಳು ಭಾರವಾಗಿದ್ದವು.

ನಿರ್ವಾಸನದ ಆಜ್ಞೆಯಿಂದ ಅಕ್ಕನಾಗಮ್ಮ, ಗಂಗಾಬಿಕೆ, ನಿಲಾಂಬಿಕೆ ಮೊದಲಾದ ಶರಣೆಯರೆಲ್ಲ ಬೆಬ್ಬೆರಗಾಗಿದ್ದರೂ ಸಾವಧಾನದಿಂದ ಮೌನವಾಗಿದ್ದರು.

ಗಂಗಾಂಬಿಕೆ ಬಸವರಾಜರ ಜೊತೆಗೆ ಹೋಗುವವಳಾದಳು. ಬಿಜ್ಜಳನಿಂದ ಶರಣರಿಗೆ ಆಗುವ ಅನ್ಯಾಯವನ್ನು ತಪ್ಪಿಸಲು ತನ್ನಿಂದ ಸಾಧ್ಯವಾಗುವದೇನೋ ನೋಡಲು ನೀಲಲೋಚನೆ ಉಳಿಯುವವಳಾದಳು. ನಾಗಲಾಂಬೆ ಚೆನ್ನಬಸವರು, ಸಕಲೇಶಮಾದರಸರು, ಮಾಚಯ್ಯಗಳು ಮುಖ್ಯರಾಗಿ ಅನುಭವ ಮಂಟಪಕಾರ್ಯಕಲಾಪ ಮುಂದುವರಿಸುವವರಾದರು.

ಅಕ್ಕನಾಗಮ್ಮನು ಬಸವರಾಜರಿಗೆ ವಿಶ್ರಾಂತಿ ಹೊಂದಲು ಹೇಳಿ ಉಳಿದವರೊಡನೆ ಅವರ ಪ್ರಯಾಣದ ವ್ಯವಸ್ಥೆಯಲ್ಲಿ ತೊಡಗಿದಳು. ಮೂರು ಪ್ರಹರಗಳು ಕಳೆದ ಬಳಿಕ ಬಸವಣ್ಣನವರನ್ನು ಎಬ್ಬಿಸಲಿಕ್ಕೆಂದು ಒಳಗೆ ಹೋದಾಗ ಅವರು ಯಾವಾಗಲೋ ಎದ್ದು ಧ್ಯಾನಸ್ಥರಾಗಿ ಕುಳಿತಿದ್ದರು. ಅವರು ಪುರುಷತತ್ವದ ಕುಂಚುಕಗಳನ್ನು ಕತ್ತರಿಸಿ ಪರತತ್ವದ ಪ್ರಕಾಶದಲ್ಲಿ ಸೇರಿದಾಗ ಹಿಂದುಮುಂದೆಂಬ ಭೇದವಿಲ್ಲದೆ ಅನೇಕ ಘಟನೆಗಳು ಚಿತ್ರದ ಪಟಗಳಂತೆ ಅವರ ಮುಂದೆ ಬಂದು ಹೋದವು. ಅಸ್ಪಷ್ಟವಾಗಿ ಅವರು ಏನೋ ನುಡಿಯುತ್ತಿದ್ದರು. ಬರಬರುತ್ತ ನುಡಿ ಸ್ಪಷ್ಟವಾಗಲು ಚೆನ್ನಬಸವಣ್ಣನು ಅವುಗಳನ್ನು ಬರೆದುಕೊಳ್ಳಹತ್ತಿದನು. ಕೊನೆಗೆ

'ಅರಸುವಿಚಾರ, ಸಿರಿಯು ಶೃಂಗಾರ ಸ್ಥಿರವಲ್ಲ ಮಾನವಾ;
ಕೆಟ್ಟಿತ್ತು ಕಲ್ಯಾಣ, ಹಾಳಾಯಿತ್ತು ನೋಡಾ!
ಒಬ್ಬ ಜಂಗಮದಭಿಮಾನದಿಂದ ಚಾಲುಕ್ಯರಾಯನ ಆಳಿಕೆ ತೆಗೆಯಿತ್ತು;
ಸಂದಿತ್ತು ಕೂಡಲಸಂಗಮದೇವಾ ನಿಮ್ಮ ಕವಳಿಕೆಗೆ".

ಬಸವಣ್ಣನವರು ಕಣ್ದೆರೆದರು. ಎದುರಿದ್ದವರಿಂದ ವೇಳೆಯನ್ನು ತಿಳಿದು ಪ್ರಾತಃಕಾರ್ಯಕ್ಕೆ ಹೊರಟರು.

ನಗರದಲ್ಲಿ ಸುದ್ದಿ ತಿಳಿದು ಗೊಂದಲವಾಗುವ ಮುನ್ನ ಕಲ್ಯಾಣವನ್ನು ಬಿಡಬೇಕೆಂದು ಬಸವರಾಜರೂ ಅವಸರ ಮಾಡುತ್ತಿದ್ದರು. ಮಹಮನೆಯ ಜನವೆಲ್ಲ ಎಚ್ಚತ್ತು ಮೌನವಾಗಿ ಬಸವರಸು ಗಂಗಾಂಬಿಕೆಯರನ್ನು ಸುತ್ತುಗಟ್ಟಿದ್ದರು. ಕೆಲವರು ಕೈಮುಗಿದರು, ಕೆಲವರು ಕಾಲಿಗೆರಗಿದರು. ಕೆಲವರು ಆಲಿಂಗಿಸಿದರು. ಬಸವರಾಜ, ಬಸವತಂದೆ ಎಂದು ಬಿಗಿದ ಕಂಠದಲ್ಲಿಯೇ ಕೆಲವರು ನುಡಿಯುತ್ತಿದ್ದರು. ಭಾರವಾದ ಭಾವದಲ್ಲಿ ಮಾತು ಬಾರವು ಯಾರಿಗೂ ! ಎಲ್ಲರ ಕಣ್ಣು ತೇವಾಗಿದ್ದವು ಬಸವರಾಜರು ಸಕಲರಿಗೆ

ಶರಣುಮಾಡಿ, ಗಂಗಾಂಬಿಕೆಯೊಡನೆ ಮಹಮನೆಯ ಮುಂದೆ ಕಾದಿದ್ದ ದಳವನ್ನು ಸೇರಿ ಮೇನೆಗಳನ್ನೇರಿ ನಡೆದರು.

ಪ್ರಯಾಣಿಕರು ನಗರದ ಮಹಾದ್ವಾರವನ್ನು ದಾಟಿ ಮೋಳಿಗೆಯ ಮಾರಯ್ಯನವರ ಆಶ್ರಮದ ಸಮೀಪಕ್ಕೆ ಬಂದಿದ್ದರು. ರಾಜಾಜ್ಞೆಯ ಸುದ್ದಿ ರಾತ್ರಿಯಲ್ಲಿಯೇ ನಗರದಲ್ಲಿ ಹರಡಿ ನಾಗರಿಕರು, ವರ್ತಕರು, ನೂರೆಂಟು ಮಠದವರು ಬೆಳಗಿನ ಜಾವದಲ್ಲಿಯೇ ಮಹಮನೆಗೆ ಹೋಗಿದ್ದರು. ಅಲ್ಲಿ ಬಸವರಾಜರು ಹೋದರೆಂಬದನ್ನು ಕೇಳಿ ಅವರೂ ಇತ್ತ ಕಡೆಗೆ ಬರುತ್ತಿದ್ದರು. ನಗರದಲ್ಲಿಯ ಆ ಗದ್ದಲದ ಧ್ವನಿ ಬದಿಯ ಬೆಟ್ಟಗಳಲ್ಲಿ ಪ್ರತಿಧ್ವನಿಗೊಡುತ್ತಿತ್ತು. ಮೋಳಿಗೆಯ ಮಾರಯ್ಯನು ಹಳ್ಳಿಗಳಿಂದ ಬಂದ ಜನರ ಗುಂಪಿನೊಡನೆ ಆಶ್ರಮದಿಂದ ಹೊರಬಂದು ಹೆದ್ದಾರಿಯ ಮೇಲೆ ಅಡ್ಡಲಾಗಿ ನಿಂತನು. ಅದನ್ನು ಕಂಡು ರಾಹುತ ಪಡೆಯ ನಾಯಕನು ಮುಂದೆ ಬಂದು ಕೇಳಿದನು:

“ಏನು ನಿಮ್ಮ ಉದ್ದೇಶ ? ದಂಡನಾಯಕರನ್ನು ಬಿಡಿಸಿಕೊಳ್ಳುವದೇ?”

“ಅದೇನಿಲ್ಲ; ಮೊದಲು ಅವರೇ ಬಿಡುಗಡೆಗೆ ಇಚ್ಛಿಸುವದಿಲ್ಲ.”

“ಹಾಗಾದರೆ ದಾರಿಯನ್ನೇಕೆ ಕಟ್ಟಿದಿರಿ ?”

“ಬಸವರಾಜರ ನಿಷ್ಕ್ರಮಣದಲ್ಲಿ ನಾಗರಿಕರಿಗೆ ಅವರ ದರ್ಶನ ದೊರೆಯಬಾರದೆಂದು ದೊರೆಯ ಇಚ್ಛೆ ! ಅದನ್ನು ವ್ಯರ್ಥಗೊಳಿಸುದು ನಮ್ಮ ಇಚ್ಛೆ ! ಹಿಂದೆ ಕೇಳುವದಿಲ್ಲವೇ ಕಲಕಲಧ್ವನಿ ! ನಾಗರಿಕರೆಲ್ಲ ಇತ್ತ ಬರುತ್ತಿದ್ದಾರೆ. ಅವರಿಂದ ಬೀಳ್ಕೊಳ್ಳಬೇಕು ಬಸವರಸರು ಇಲ್ಲಿ !”

“ಅದಕ್ಕೆ ಆಸ್ಪದವಿಲ್ಲ; ರಾಜಾಜ್ಞೆಯಂತೆ ಹೊತ್ತು ಹುಟ್ಟುವ ಮೊದಲು ನಾಲ್ಕು ಹರದಾರಿ ಹೋಗಬೇಕು.”

“ಹಾಗೆಯೇ ಹೋಗುವದಕ್ಕೂ ಆಸ್ಪದವಿಲ್ಲ.”

—ರಾಹುತನಾಯಕನು ಆವೇಶದಿಂದ ಕುದುರೆಯನ್ನು ಅಮುಕಿ ಹೊಡೆದನು.

—ಮಾರಯ್ಯನು ಅದರ ಲಗಾಮನ್ನು ಗಟ್ಟಿಯಾಗಿ ಹಿಡಿದನು.

—ಆಜಾನುಬಾಹುವಾದ ವೀರವೃದ್ಧನ ಸ್ವರೂಪಕ್ಕೆ ನಾಯಕನ ಮಗ್ಗಲಿಗೆ ಬಂದ ಬೇರೆ ರಾಹುತರ ಕುದುರೆಗಳು ಬೆದರಿ ಹಿಂದೋಡಿದವು.

—ನಾಯಕನು ಸಿಟ್ಟಾಗಿ ಖಡ್ಗವನ್ನು ಹಿರಿದು ಮೇಲೆತ್ತಿದನು.

—ಮಾರಯ್ಯನು ಕುತ್ತಿಗೆಯನ್ನೊಡ್ಡಿದನು.

—ನಾಯಕನ ಕೈ ಕೆಳಗಿಳಿಯಲಿಲ್ಲ; ಖಡ್ಗ ಕಳಚಿಬಿತ್ತು.

—ಮುಖವೆತ್ತಿ ನೋಡಿದ ಮಾರಯ್ಯ; ಅವನ ಭುಜವನ್ನು ತಟ್ಟಿ ಕೈಯನ್ನು ಕೆಳಗಿಳಿಸಿದನು.

—ನಾಯಕನು ಕುದುರೆಯಿಂದಿಳಿದು ವಂದಿಸಿದನು.

ಬಸವಣ್ಣನವರೂ ಮೇನೆಯಿಂದಿಳಿದು ಬಂದು ಮಾರಯ್ಯನವರಿಗೆ ವಂದಿಸಿದರು. ಗಂಗಾಂಬಿಕೆ ಬಂದು ಗಂಗಾದೇವಿಗೆ (ಮಾರಯ್ಯನ ಪತ್ನಿಗೆ) ವಂದಿಸಿದಳು. ಅಷ್ಟರಲ್ಲಿ ನಗರದಿಂದ ಬಂದ ಜನಸಮುದಾಯದಿಂದ ಆ ಬಯಲೆಲ್ಲ ತುಂಬಿತು. ಮಾರಯ್ಯನು ಕೈಮುಗಿದು ಕೂಗಿ ಹೇಳಿದನು :

"ಸರ್ವರೂ ಶಾಂತವಾಗಿ ಸರಿಯಾಗಿ ಕುಳಿತುಕೊಳ್ಳಬೇಕು. ನೀವೆಲ್ಲರು ಇಲ್ಲಿ ಬಂದು ಅಣ್ಣನವರನ್ನು ಬೀಳ್ಕೊಡಬೇಕಾಗುವದೆಂದು ಯಾರು ತಿಳಿದಿದ್ದರು ? ನಿಃಕಲಂಕಮಲ್ಲನ ಇಚ್ಛೆ ! ಅಣ್ಣನವರ ಆದೇಶ ಕೇಳುವ ಮೊದಲು ನಾನೊಂದು ಮಾತು ಹೇಳುವದು ಅಗತ್ಯವಾಗಿದೆ. ನಾನು ಶರಣ ಧರ್ಮದ ಮೇಲಿನ ಶ್ರದ್ಧೆಯಿಂದ ಅರಸುತನ ತೊರೆದು ಇಲ್ಲಿಗೆ ಬಂದಾಗ ಮಹಮನೆಯ ಸೇವಾಕಾರ್ಯವನ್ನು ಪರಿಶೀಲಿಸಿದೆನು. ಆಗದುದಕ್ಕೆ ಕೈಯಿಕ್ಕಿದವರೆಂದು ಟೀಕಿಸಿದವರಲ್ಲಿ ನಾನೂ ಒಬ್ಬನು. ಆದರೆ ಅಣ್ಣನವರ ದರ್ಶನ ಪಡೆದಂತೆ ನನ್ನ ಭಾವನೆ ಬದಲಾಗುತ್ತ ಬಂದಿತು. ಶರಣಧರ್ಮದ ಮೇಲಿನ ಶ್ರದ್ಧೆ ಹೆಚ್ಚಾಗುತ್ತ ಬಂದಿತು. ನನ್ನ ಮನವೀಗ ಹೇಳುತ್ತದೆ :

ಎನ್ನರಿವು ಮರೆವು ಬಸವಂಗರ್ಪಿತ, ಎನ್ನ ಆಚಾರ ವಿಚಾರ ಬಸವಂಗರ್ಪಿತ
ಎನ್ನ ಭಾವ ನಿರ್ಭಾವ ಬಸವಂಗರ್ಪಿತ, ಎನ್ನ ಅಂತರಂಗ ಬಹಿರಂಗ ಬಸವಂಗರ್ಪಿತ
ನೀನು ನಾನೆಂಬುದು ಬಸವಂಗರ್ಪಿತ.
ಇಂತು ಬಸವಣ್ಣಂಗೆ ಎನ್ನ ನಿವೇದಿಸಿದೆನಾಗಿ ಉಭಯವೆಂಬುದು ಇಲ್ಲವಾದೆ.
ನಿರಾಲಂಬದಲ್ಲಿ ನಿಜನಿವಾಸಿಯಾಗಿರ್ಪೆನಯ್ಯ ನಿಃಕಳಂಕ ಮಲ್ಲಿಕಾರ್ಜುನಾ."

ಬಳಿಕ ಮಾರಯ್ಯನ ಅಪೇಕ್ಷೆಯಂತೆ ಬಸವರಾಜರು ಕೈ ಮುಗಿದು ನುಡಿದರು:

"ಕಲ್ಯಾಣ ನನಗೆ ಕಾರಣರೂಪ! ಕಲ್ಯಾಣದಲ್ಲಿ ಜೀವನ, ಕಲ್ಯಾಣದಲ್ಲಿ ಲೋಕಸೇವೆ, ಕಲ್ಯಾಣದಲ್ಲಿ ಅನುಭಾವ !! ಅರುವಿನ ಕಣ್ ತೆರೆದುದು ಇಲ್ಲಿ. ಕಲ್ಯಾಣವನ್ನು ತೊರೆದು ನಿಮ್ಮೆಲ್ಲರಿಂದ ಬೀಳ್ಕೊಳ್ಳಲಾಗುವ ದುಃಖವನ್ನು ಸಹಿಸುವ ಸಾಮರ್ಥ್ಯವನ್ನು ಕರುಣಿಸೆಂದು ಸಂಗಮನಾಥನನ್ನು ಪ್ರಾರ್ಥಿಸುವೆ.

ಶರಣಧರ್ಮ ಶೈವಮತದ ಶಿರೋಮಣಿ ! ಶರಣರು ಅತಿವರ್ಣಾಶ್ರಮಿಗಳು. ನೀವು ನಿಜವಾಗಿ ಶರಣರಾದರೆ ಜಾತಿಪಂಥಗಳ ನಿರ್ಮೂಲನಕ್ಕೆ ಬದ್ಧಕಂಕಣರಾಗಿರಿ. ಶಾಂತವೀರತ್ವದಿಂದ ಅದನ್ನು ಸಾಧಿಸಿರಿ.

ಕುಲಮದವಳಿಯದನ್ನಕ್ಕ ಶರಣನಾಗಲೇಕೆ ?
ವಿಧಿವಶ ಬಿಡದನ್ನಕ್ಕ ಭಕ್ತನಾಗಲೇಕೆ ?
ಹಮ್ಮಿನ ಸೊಮ್ಮಿನ ಸಂಬಂಧಬಿಟ್ಟು ಕಿಂಕಿಲ ಕಿಂಕಿಲ ಕಿಂಕಿಲ ನಾಗಿರಬೇಕು.
ಹೆಪ್ಪನೆರೆದ ಹಾಲುಕೆಟ್ಟು ತುಪ್ಪವಪ್ಪಂತೆ ಇಪ್ಪರು.
ಕೂಡಲಸಂಗಮದೇವಾ ನಿಮ್ಮ ಶರಣರು.

ಶರಣು ಶರಣು ಶರಣು" ಸುತ್ತಲೂ ಕೈಮುಗಿದು ಮಾರಯ್ಯನಿಗೆ ವಂದಿಸಿ ಮೇಣೆ ಹತ್ತಿದರು.

ಪ್ರಯಾಣಿಕರು ಮರೆಯಾಗುವವರೆಗೆ ನೀರವ ಸಾಗರದಂತೆ ನಿಂತು ನೋಡಿ ಜನರು ಭಾರವಾದ ಕಾಲು ಕಿತ್ತುಕೊಂಡು ನಗರದೊಳಕ್ಕೆ ಮರಳಿದರು.

ಕರಳಲ್ಲಿ ಕತ್ತರಿ, ಬಾಯಲ್ಲಿ ಬೆಣ್ಣೆ.

"........ಚಕ್ರವರ್ತಿ ಜಗದೇಕಮಲ್ಲರ ವಿಲಾಸ ಪ್ರವೃತ್ತಿ ಕಡಿಮೆಯಾಗುತ್ತಿದ್ದುದನ್ನು ಹಿಂದೆ ತಮಗೆ ತಿಳಿಸಿದ್ದೆನು. ಈಗ ಅವರು ಆ ವಿಲಾಸ ಸಾಧನಗಳು ಕಣ್ಣಿಗೆ ಬಿದ್ದರೇ ಸಹಿಸುವದಿಲ್ಲ. ಮನಸ್ಸು ವೈರಾಗ್ಯಕ್ಕೆ ಒಲಿಯುಹತ್ತಿದೆ. ಜ್ಞಾನ-ತೃಷೆ ಹೆಚ್ಚಾಗಿದೆ. ಸಿಂಹಾಸನತ್ಯಾಗ ಮಾಡಿ ಸನ್ಯಾಸಿಯಾಗಿ ಸುಖಿಸಬೇಕೆಂದು ಆಗಾಗ ಅನ್ನುತ್ತಾರೆ ಅವರು ತಮಗೆ ತತ್ತ್ವೋಪದೇಶ ಮಾಡಲು ಮಹಮನೆಯ ಒಬ್ಬ ಪಂಡಿತನಾದ ಜಂಗಮನನ್ನು ಈಗ ಕಳಿಸುವ ವ್ಯವಸ್ಥೆಮಾಡಬೇಕೆಂದು ನಿಮಗೆ ಬಿನ್ನವಿಸಿಕೊಂಡಿದ್ದಾರೆ. ನೀವು ಬೇಗನೆ ಆ ಏರ್ಪಾಡು ಮಾಡುವದಾಗಬೇಕು. ತತ್ವಾನುಸಂಧಾನದಿಂದ

ಅವರ ಮನದಲ್ಲಿ ಮೂಡುತ್ತಿರುವ ವೈರಾಗ್ಯ ಗಟ್ಟಿಗೊಂಡು ನಿಂತರೆ ಕಲಚೂರ್ಯ ವಂಶಕ್ಕೊಂದು ಕಲ್ಯಾಣವಾದೀತು........

ರಾಜಗೃಹದ ರಕ್ಷಕ ದಳಪತಿ

ಮಾರ್ಗಶೀರ್ಷ ಬ. ಬಿದಿಗೆ. ಕರ್ಣದೇವ.

ಎರಡನೆಯ ಸಲ ಪತ್ರವನ್ನೋದಿ ಮತ್ತೆ ಆಲೋಚಿಸಹತ್ತಿದನು ಬಿಜ್ಜಳನು. ಕಡೆಯ ವಾಕ್ಯದಲ್ಲಿ ಕಾಣುವ ಫಲಾಪೇಕ್ಷೆ ಅವನ ಮನಸ್ಸನ್ನು ಸೆರೆಹಿಡಿಯಿತು.

ಮನುಷ್ಯನು ಉದಾತ್ತ ವಿಚಾರಗಳಿಂದ ಒಮ್ಮೆ ದೂರಾದನೆಂದರೆ ಅವನ ಮಾನವತ್ವವು ನಾಶದ ಹಾದಿಯನ್ನು ಹಿಡಿಯುತ್ತದೆ. ಅವನ ಆಶೋತ್ತರಗಳು ಹೊಲಸಾಗಿರುತ್ತವೆ. ಆ ದುರಾಶೆಗಳ ಪೂರೈಕೆಗಾಗಿ ನಿರ್ಲಜ್ಜನಂತೆ ವರ್ತಿಸುತ್ತಾನೆ. ಯಾರನ್ನೂ ನಂಬುವದಿಲ್ಲ. ತನಗೆ ಉಪಕಾರ ಮಾಡಿದವನನ್ನು ನಾಶಮಾಡುವದಕ್ಕೂ ಹೇಸುವದಿಲ್ಲ. ಇಂದು ಒಬ್ಬರಿಗೆ ಕೇಡು ಮಾಡಿ ನಾಳೆ ಅವರಿಂದ ಸಹಾಯವನ್ನು ಅಪೇಕ್ಷಿಸುವದಕ್ಕೂ ನಾಚುವದಿಲ್ಲ. ಒಡೆಯನಿಲ್ಲದ ತೋಟವನ್ನು ತುಡುಗುಣಿ ದನಗಳು ಹೊಕ್ಕು ಮೇದಂತೆ ವಿವೇಕವಿಲ್ಲದವನ ಮನಸ್ಸನ್ನು ದುರ್ಗುಣಗಳು ಹಾಳು ಮಾಡಿ ಬಿಡುತ್ತವೆ. ಅಧಿಕಾರದ ಬಲವೊಂದು ಜೋಡಾದರೆ ಅವನು ಬೇಕಾದ ದುಷ್ಕರ್ಮಗಳನ್ನು ಮಾಡಬಹುದು. ೧೦-೧೨ ವರ್ಷಗಳ ಹಿಂದೆ ವೀರ, ಚತುರ, ಪ್ರಜಾಹಿತದಕ್ಷ ರಾಜರ್ಷಿಯಂತಿದ್ದ ಬಿಜ್ಜಳರಾಜನೀಗ ಮದಾಂಧ ರಾಜನಾಗಿದ್ದಾನೆ, ರಾಕ್ಷಸನಾಗಿದ್ದಾನೆ. ಆದಕ್ಕನುಸರಿಸಿ ಅವನು ಆಲೋಚನೆಯಲ್ಲಿ 'ಜಗದೇಕಮಲ್ಲನಿಗೆ ಮಹಮನೆಯ ಜಂಗಮರಿಂದ ತತ್ವೋಪದೇಶ ಮಾಡಿಸಿ ಅವನ ವೈರಾಗ್ಯವೃತ್ತಿ ಬೆಳೆಯುವದಕ್ಕೆ ಅನುಕೂಲ ಮಾಡಿಕೊಡುವದೇ ಒಳ್ಳೆಯದು; ಇದಲ್ಲದೆ ಮಾಹೇಶ್ವರಿ ರಾಣಿಗೆ ಅವಳನ್ನು ಬೆದರಿಸುವ ಕೊನೆಯ ಕಠೋರ ಪತ್ರ ಬರೆಯಬೇಕಾಗಿದೆ. ಅದರಿಂದೇನಾದರೂ ಆ ಪಕ್ಷದಿಂದ ಪ್ರತಿರೋಧವುಂಟಾದರೆ, ಅದೇ ಕಾಲಕ್ಕೆ ಶರಣರಾಗಲಿ ಅತ್ತ ಚಕ್ರವರ್ತಿಯಾಗಲಿ ಅಸಂತೋಷದಿಂದಿರುವದು ಅಪಾಯಕಾರಿಯಾದೀತು. ಚಕ್ರವರ್ತಿಯೊಡನೆ ಈಗ ಶರಣರನ್ನೂ ಸಂತೈಸುವದು ಅಗತ್ಯವು ಎಂದು ನಿರ್ಧರಿಸಿದನು. ದ್ವೇಷರಹಿತ ಮೃದುಹೃದಯದ ಶರಣರ ಸ್ವಭಾವ ಅವನಿಗೆ ಅಪರಿಚಿತವಾಗಿರಲಿಲ್ಲ.

ಬಸವಣ್ಣನವರ ನಿರ್ವಾಸನ, ಮೂವರು ಶರಣರ ಬಂಧನ ಇವುಗಳನ್ನು ನೆನಿಸಿ ಅವರು ತನ್ನನ್ನು ಅಗೌರವಗೊಳಿಸುವದಿಲ್ಲವೆಂದು ಅವನಿಗೆ ನಂಬಿಗೆ. ಆಗಲೇ ಪಸಾಯಿತನೊಬ್ಬನೊಡನೆ ಮುಂಜಾನೆ ಮಹಮನೆಗೆ ಬರುವೆನೆಂದು ಚೆನ್ನ ಬಸವಣ್ಣನಿಗೆ ಹೇಳಿಕಳುಹಿದನು.

ಮರುದಿನ ಅದರಂತೆ ಮಂಚಣ್ಣನೊಡನೆ ಮಹಮನೆಗೆ ಬಂದನು. ಶರಣರು ಸ್ವಾಗತಿಸಿದರು. ಬಿಜ್ಜಳನು ವಾಸಗೃಹಕ್ಕೇ ನಡೆದು ಆಸನಸ್ಥನಾದನು. ನೀಲಲೋಚನೆ ಬಂದು ವಂದಿಸಿ, ತಲೆ ತಗ್ಗಿಸಿ ಸರಿದು ಹೋದಳು. ಅವಳ ಕಣ್ಣು ತೇವಾಗಿದ್ದುದು ಬಿಜ್ಜಳನಿಗೆ ತಿಳಿಯಿತು. ಸಂಗಯ್ಯ ಬಾಯಿ ಮುಚ್ಚಿ ಸುಮ್ಮನೆ ನಿಂತಿದ್ದನು. ಬಿಜ್ಜಳನೇ ಕೈಹಿಡಿದು ಮುಂದಕ್ಕೆ ಕರೆದು ಅಪ್ಪಿದನು. ಸ್ವಲ್ಪ ದೂರ ನಾಗಲಾಂಬೆ ನಿಂತಿದ್ದಳು. ತನ್ನ ಕಡೆಗೆ ಬಿಜ್ಜಳನ ದೃಷ್ಟಿ ಹೊರಳಿದಾಗ ಕೈಮುಗಿದಳು! ಮೊಗದಲ್ಲಿ ಯಾವ ವಿಕಾರವೂ ಇಲ್ಲದ ಗಾಂಭೀರ್ಯ ! ಈ ಉದಾಸ ಮೌನದಿಂದ ಬಿಜ್ಜಳನ ಜೀವ ಹಿಂಡಿದಂತಾಯಿತು. ಆದರೂ ಆತನು ಅನುನಯಕ್ಕಿಳಿಯಲು ಪಳಗಿದ ಕೈ ! ಮಿದು ನಗೆಯಿಂದ ನೋಡಿ, ಮಂಚಣ್ಣ, ಮಾದರಸು, ಚೆನ್ನಬಸವರಿಗೆ ಕುಳ್ಳಿರಲು ಹೇಳಿ, "ರಾಜಿಕವು ಮುಳ್ಳಿನ ಹಾಸಿಗೆ, ಎತ್ತ ಹೊರಳಿದರೂ ಸುಖವಿಲ್ಲ. ಸಕಲೇಶಮಾದರಸರಂತೆ ಎಂದು ಅಲಿಪ್ತನಾದೇನೋ ಎನಿಸುತ್ತದೆ" ದೃಷ್ಟಿ ಹೊರಳಿಸಿ ನುಡಿದನು. ಚೆನ್ನಬಸವಣ್ಣ ಉತ್ತರ ಕೊಟ್ಟನು:

"ಪ್ರಜಾರಕ್ಷಣೆ ಗುರುತರವಾದ ಹೊಣೆ! ಅದನ್ನು ನಿರ್ವಹಿಸಲು ನೀವಲ್ಲದೆ ಮತ್ತಾರು ಸಮರ್ಥರು? ಸೋವಿದೇವರಿಗೆ ಇನ್ನೂ ಅನುಭವ ಸಾಲದು."

"ನಿಮ್ಮಿಂದ ಅದು ಪೂರೈಸುವದು. ದೇವರೇ ನಿಮ್ಮಿಬ್ಬರಲ್ಲಿ ಸ್ನೇಹದ ಗಂಟು ಹಾಕಿದ್ದಾನೆ. ಅದನ್ನು ನಾನು ರಾಜಕೀಯ ಯೋಜನೆಯಿಂದ ಗಟ್ಟಿಗೊಳಿಸಬೇಕೆಂದಿದ್ದೇನೆ."

ಮಹಮನೆಯಲ್ಲಿ ತುಂಬಿದ ನಾದದಿಂದ ಗೀತ ಕೇಳಿಸಿತು.

'ಭಾಂಡವ ತುಂಬಿದಬಳಿಕ ಸುಂಕವ ತೆತ್ತಲ್ಲದೆ ವಿಹಿತಹೋಗಬಾರದು
ಕಳ್ಳನಾಣ್ಯ ಸಲುಗೆಗೆ ಸಲ್ಲದು; ಕಳ್ಳನಾಣ್ಯ ಸಲ್ಲಲೀಯರಯ್ಯಾ!
ಭಕ್ತಿಯೆಂಬ ಭಾಂಡಕ್ಕೆ ಜಂಗಮವೇ ಸುಂಕಿಗ. ಕೂಡಲಸಂಗಮದೇವಾ'

"ಎಲ್ಲಿಂದ ಕೇಳುತ್ತಿದೆ ಈ ಗೀತ?" ಬಿಜ್ಜಳ ಅಚ್ಚರಿಯಿಂದ ಕೇಳಿದನು.

"ಮಹಮನೆಯಲ್ಲಿ ಪೂಜಾರಂಭವಾಗಿದೆ; ಯಾರೋ ಒಬ್ಬರು ಆವೇಶ ದಿಂದ ಹಾಡುತ್ತಾರೆ" ಎಂದು ನಾಗಲಾಂಬೆ ಹೇಳಿದಳು.

ಚೆನ್ನಬಸವಣ್ಣ ಚಿಕ್ಕದಣ್ಣಾಯಕ

ಬಿಜ್ಜಳನು ಗೀತದ ಪರಿಣಾಮವಾಗಿ ನುಡಿದನು:

"ನಿಜ. ನಮ್ಮ ಆಗು ಹೋಗುಗಳ ಭಾಂಡ ತುಂಬಿದೆ. ಸುಂಕ ತೆರುವದೇ ಉಳಿದಿದೆ. ಅದನ್ನೇ ಈಗ ಯೋಚಿಸಬೇಕಾಗಿದೆ. ಚೆನ್ನಬಸವಣ್ಣನವರೆ, ನೀವೀಗ ನಮ್ಮ ಹೊಣೆ ಹಗುರಾಗಲು ನೆರವಾಗಬೇಕು. ಇದನ್ನೇ ಭಿನ್ನವಿಸಿಕೊಳ್ಳಲು ನಾನೀಗ ಬಂದುದು. ಈ ಮಂಚಣ್ಣನವರು ಮುದುಕರಾದರು. ಸಾಮಾಜಿಕ ತೊಡಕಿನಿಂದ ಬಸವರಾಜ-ಮಧುವರಸರು ನಮಗೆ ದೂರಾದರು. ನೀವು ಒಪ್ಪುವದಾದರೆ ಸಚೇತನವಾದ ಹೊಸ ಮಂತ್ರಿಮಂಡಲ ರಚಿಸುವ ವಿಚಾರದಲ್ಲಿದ್ದೇನೆ."

"ಮಂತ್ರಿತನವೆಂಬುದು ನನ್ನ ಜೀವನಕ್ಕೆ ಸುಸಂಗತವೇ ಅಲ್ಲ! ಲೌಕಿಕ ಗಂಧವೂ ಇಲ್ಲ ನನಗೆ! ಕೋಡಿಯ ಮಠದಲ್ಲಿದ್ದಾಗಲೇ ಬ್ರಹ್ಮಚರ್ಯದಿಂದ ಧಾರ್ಮಿಕ ಜೀವನಕ್ಕೆ ಮುಡಿಪಾಗಿರುವ ಪ್ರತಿಜ್ಞೆ ಮಾಡಿದ್ದೇನೆ. ಶಾಸ್ತ್ರಾರ್ಥಗಳ ಹೊರತು ನನಗೇನೂ ತಿಳಿಯದು."

"ತಪ್ಪೇನಿದೆ. ರಾಜ್ಯಾಡಳಿತಕ್ಕೆ ಧಾರ್ಮಿಕ ಜ್ಞಾನದ ಕೊರತೆಯಾಗಿಯೇ ನಾವೀಗ ಎಡವಿ ಎಡವಿ ನಡೆಯಬೇಕಾಗಿದೆ. ಆ ಭಾಗವನ್ನೇ ನೀವು ನಿರ್ವಹಿಸಿರಿ. ಮಂತ್ರಿಮಂಡಲದ ಸಭೆಗೆ ಮಾತ್ರ ನೀವು ಬಂದು, ಕಾಗದ ಪತ್ರಗಳನ್ನು ಮನೆಯಲ್ಲಿಯೇ ನೋಡಿದರಾಗುವದು. ಆಗಲಿ ಎನ್ನಿರಿ ನೀವು."

ಚೆನ್ನಬಸವಣ್ಣ ಅಪ್ರತಿಭನಾದನು. ಉತ್ತರಕ್ಕೆ ಯೋಚಿಸಹತ್ತಿದನು. ಬಿಜ್ಜಳನು ಮಂಚಣ್ಣನ ಕಡೆ ಹೊರಳಿ ಹೇಳಿದನು:

"ನೀವು ಹೇಳಿರಿ ಮಂಚಣ್ಣನವರೇ, ಆಳವಾದ ಆಲೋಚನೆಗೆ ಬಿದ್ದಂತಿದೆ ಚೆನ್ನಬಸವಣ್ಣ!"

"ಅಕಸ್ಮಾತ್ತಾಗಿ ಬಂದ ಇಂಥ ಗಡುಚಾದ ಪ್ರಶ್ನೆಗೆ ಅವರು ಒಮ್ಮೆಲೇ ಹೇಗೆ ಉತ್ತರ ಹೇಳುವರು? ಪ್ರಭುಗಳು ನಾಲ್ಕಾರು ದಿವಸಗಳ ವರೆಗೆ ಅವಧಿ

ಕೊಡಬೇಕು. ಜತೆಯು ಅನುಭಾವಿಗಳನ್ನು ವಿಚಾರಿಸಿ ಬಸವಣ್ಣನವರ ಅನುಮೋದನೆ ಪಡೆದು ಉತ್ತರ ಕೊಡಲಿ."

"ಹಾಗೆ ಮಾಡಿರಿ ಸೋವಿದೇವನ ಪಟ್ಟಾಭಿಷೇಕದ ಸಲುವಾಗಿ ಮಂಗಳವೇಡೆಗೆ ಹೋಗುವ ಮೊದಲು ಹೊಸ ವ್ಯವಸ್ಥೆ ಮಾಡಿಬಿಡಬೇಕಾಗಿದೆ. ಒಂದು ವಾರದಲ್ಲಿ ತಿಳಿಸಿರಿ. ನಾವು ಮಾತ್ರ ನಿಮ್ಮ ಹೆಸರನ್ನು ನಮ್ಮ ಹೊಸ ವ್ಯವಸ್ಥೆಯಲ್ಲಿ ಇರಿಸಿಕೊಂಡೇ ಸಾಗುತ್ತೇವೆ."

ಮಂಚಣ್ಣನ ನೆರವಿನಿಂದ ಸಮಾಧಾನಗೊಂಡ ಚೆನ್ನಬಸವಣ್ಣ ಕೈಮುಗಿದು ಹೇಳಿದನು!

"ನಾನು ನಿರಾಕರಣೆಯ ಉತ್ತರ ಕೊಟ್ಟರೆ ಪ್ರಭುಗಳು ಕ್ಷಮಿಸಬೇಕು."

"ನೀವು ಸ್ವತಂತ್ರರೇ ಇದ್ದೀರಿ; ಆದರೆ ನಿರಾಕರಿಸಬೇಡಿರೆಂದು ನನ್ನ ವಿನಂತಿ! ರಾಜಿಕದಲ್ಲಿಯೂ ನಿಮಗೆ ಅನುಭವವಾದರೆ ಸೋವಿದೇವನ ಹಿರಿಯ ಮಂತ್ರಿಯಾಗುವಿರಿ."

ನಗುತ್ತ ಬಿಜ್ಜಳನು ಎದ್ದನು. ಕೋಣೆಯಿಂದ ಕಂಬನಿದುಂಬಿದ ನೀಲಲೋಚನೆ ಹೊರಗೆ ಬಂದಳು. ಆ ಭಾವ ತಿಳಿಯಿತು ಬಿಜ್ಜಳನಿಗೆ!

"ನಿನ್ನ ಮನೋವ್ಯಥೆ ತಿಳಿದಿದೆ ನೀಲಾ ! ನಿನ್ನ ದಾಂಪತ್ಯಜೀವನಕ್ಕೆ ಚ್ಯುತಿ ಬಾರದಂತೆ ನೋಡಿಕೊಳ್ಳುವೆ "

"ನನ್ನ ಪತಿಯ ಪ್ರಾಣವು ಅವರ ತನುವಿನ ಮಟ್ಟಿಗಿಲ್ಲ ಅಣ್ಣಾ!"

"ಆ ಮಹಾವಿಚಾರಕ್ಕೆ ಅವರು ಸಮರ್ಥರೇ ಇದ್ದಾರೆ ! ಉಳಿದುದೆಲ್ಲ ನನ್ನೊಬ್ಬನ ಕೈಯೊಳಗಿನವಲ್ಲ ತಾಯೀ!"

"ಪ್ರಭುಗಳು ಯಥಾರ್ಥವನ್ನೇ ಹೇಳುತ್ತಾರೆ." ನಾಗಲಾಂಬೆ ಎಂದಳು. ಮುಂದಿನ ಅಂಗಳಕ್ಕೆ ಬಂದು ಬಿಜ್ಜಳನು ಹೊರಳಿ 'ಚೆನ್ನಬಸವಣ್ಣ ನಾನು ಬಂದ ಇನ್ನೊಂದು ಉದ್ದೇಶವನ್ನೇ ಮರೆತಿದ್ದೇನೆ. ಜಗದೇಕಮಲ್ಲದೇವರಿಗೆ ತತ್ತ್ವೋಪದೇಶ ಮಾಡಲು ಪಂಡಿತ ಜಂಗಮರೊಬ್ಬರು ಬೇಕಂತೆ! ಅಂತಹ ಒಬ್ಬರನ್ನು ನೀವು ನಮಗೆ ಕೊಡಬೇಕು. ಚಕ್ರವರ್ತಿಗಳು ಅಪೇಕ್ಷಿಸುವವರೆಗೆ ಅವರು ರಾಜಗೃಹದಲ್ಲಿಯೇ ಇರಬೇಕಾಗುವದು."

"ಚೆನ್ನಬಸವಣ್ಣನು ಸಕಲೇಶ ಮಾದರಸರ ಮುಖ ನೋಡಿದನು. ಸಕಲೇಶ ಮಾದರಸರು ತುಸು ಯೋಚಿಸಿ ಹೇಳಿದರು:

"ಬ್ರಹ್ಮೇಂದ್ರಶಿವಯೋಗಿಗಳನ್ನು ಕಳಿಸಬಹುದು. ಎರಡು ವಾರಗಳಿಂದ ಅವರ ಪ್ರವಚನಕ್ಕೆ ಶರಣರೆಲ್ಲ ತಲೆದೂಗುತ್ತಿದ್ದಾರೆ."

"ಅವರ ಕೆಲವು ವಿಶಿಷ್ಟ ವ್ರತಗಳಿವೆ" ಚೆನ್ನಬಸವಣ್ಣನೆಂದನು.

"ರಾಜಗೃಹದಲ್ಲಿ ಅವರ ವಾಸಕ್ಕೆ ಪ್ರತ್ಯೇಕ ವ್ಯವಸ್ಥೆ ಮಾಡುತ್ತೇವೆ. ಸಾಧ್ಯವಿದ್ದ ಅನುಕೂಲತೆ ಒದಗಿಸುತ್ತೇವೆ. ಮತ್ತೇನಾದರೂ ...."

"ವಿಶೇಷವೇನಿಲ್ಲ; ಅವರೇ ರಚಿಸಿಕೊಂಡ ಗುಂಡದ ಅಗ್ಗವಣಿ ಅವರ ಪೂಜೆಗೆ ಬೇಕು. ಅವರ ಶಿಷ್ಯನಿಗೆ ದಿನಕ್ಕೊಮ್ಮೆ ಹೊರಗೆ ಹೋಗಿ ಬರಲು ಅಪ್ಪಣೆ ಕೊಟ್ಟರೆ ಅವನು ಅಗ್ಗವಣಿ, ಪತ್ರಿ-ಪುಷ್ಪ ಒಯ್ಯುವನು. ಹೋಗುವಾಗ, ಬರುವಾಗ ಕಾವಲುಗಾರರು ನೋಡಿ ಬಿಡಬಹುದು."

"ಆಗಬಹುದು ಅದಕ್ಕೇನಂತೆ! ಅವರಿಬ್ಬರ ಹೆಸರು ಕಳಿಸಿರಿ. ಕರ್ಣದೇವನಿಗೆ ಆಜ್ಞೆ ಬರೆದು ಇಲ್ಲಿಗೇ ಕಳಿಸುತ್ತೇನೆ. ಹೋಗುವವರು ಅದನ್ನು ತಮ್ಮ ಸಂಗಡ ಒಯ್ಯಲಿ!"

ತಲೆಯಾಡಿಸಿ ಒಪ್ಪಿಕೊಂಡನು ಚೆನ್ನಬಸವಣ್ಣ!

ಆಧ್ಯತೆಯಿಂದ ನಡೆದನು ಬಿಜ್ಜಳನು. ವಿನಾಶ ಕಾಲಕ್ಕೆ ಬುದ್ಧಿ ವಿಪರೀತವಾಗುವಂತೆ ಮುಂದವೂ ಆಗುತ್ತಿರಬಹುದು.

ಬಿಜ್ಜಳನ ಬಲೆಗೆ ಬೀಳಲಿಲ್ಲ ಚಾಲುಕ್ಯ ರಾಣಿ

ಬಿಜ್ಜಳನ ಇತ್ತೀಚಿನ ವಂಚನೆಯ ವರ್ತನದ ಪರಿಚಯವಾಗಿತ್ತಾದರೂ ಮಾಚಯ್ಯನ ಮುತ್ಸದ್ದಿತನದ ಪರಿಣಾಮವಾಗಿ ವಿಚಾರ ಸಮಿತಿಯು ಚೆನ್ನಬಸವಣ್ಣನಿಗೆ ಸಚಿವಪದ ಸ್ವೀಕರಿಸಲು ಸಲಹೆ ನೀಡಿತು. ಸಂಗಮಕ್ಕೆ ಹೋದ ತರುಣ ಶರಣನು ಆರು ದಿವಸಗಳಲ್ಲಿ ಬಸವೇಶ್ವರರ ಅನುಮೋದನೆಯನ್ನು ತಂದೊಪ್ಪಿಸಿದನು. ಶರಣರಿಗೆ ನ್ಯಾಯುವಾದ ಜೀವನ ಕ್ರಮ ಒದಗಿಸಲು ಸಹಾಯಕವಾದೀತೆಂದು ಅಣ್ಣನವರು ಆಲೋಚಿಸಿದ್ದರು.

ಚೆನ್ನಬಸವಣ್ಣನ ಅನುಮತಿಯುನ್ನು ತಿಳಿದುಕೊಂಡ ಮೇಲೆ ಬಿಜ್ಜಳನು ಅವನ ನೇಮಕದ ಆಜ್ಞೆ ಹೊರಡಿಸಿದನು. ಇದರಿಂದ ಭಿನ್ನಮತೀಯರು ಅಸ

ಮಾಧಾನಗೊಳ್ಳದಂತೆ ಸಮತೂಕ ಕಾಯಲು ಮಾಧವನಾಯಕನನ್ನು ಮಹಾ ಸೇನಾನಿಯ ಸ್ಥಲಕ್ಕೆ ನೇಮಿಸಿದನು. ಶರಣಧರ್ಮಕ್ಕೆ ಆಜನ್ಮ ಹಗೆ ಮಾಧ ವನಾಯಕ! ಹೊತ್ತು ಬಂದಂತೆ ಅದನ್ನೂ ಉಪಯೋಗಿಸಿಕೊಳ್ಳುವದು ಬಿಜ್ಜ ಳನ ದುಷ್ಟಬಯಕೆ! ಅವನ ಧೋರಣೆಯೇ ವಿಚಿತ್ರವಾಗಿತ್ತು. ಇದರಿಂದ ಕರ್ಣದೇವನ ಅಧಿಕಾರ ಕಡಿಮೆಯಾಗಿ ಅವನ ಅಸಮಾಧಾನಕ್ಕೆ ಕಾರಣವಾ ಯಿತು. ಅವನು ರಾಜಗೃಹದ ರಕ್ಷಣೆಯಲ್ಲಿ ಅನಾಸಕ್ತನಾದನು.

ಕರ್ಹಾಡದಲ್ಲಿ ಮಾಹೇಶ್ವರಿರಾಣಿಗೆ ಅಗ್ಗಳನ ಪತ್ರವೊಂದು ಬಂದು ತಲುಪಿತು. ರಾಜಗೃಹದಿಂದ ಹೂವಮ್ಮನಂಗಡಿ, ಶಿವದತ್ತ ಅಲ್ಲಿಂದ ಕರ್ಹಾ ಡದ ಗುಪ್ತಚಾರರು ಈ ಮಾರ್ಗದಿಂದ ಸುದ್ದಿ ಸಂಪರ್ಕವಿದ್ದಿತು. ಆ ಪತ್ರದ ಸಾರಾಂಶ ಹೀಗಿತ್ತು :

"ಜಗದೇಕಮಲ್ಲ ದೇವರು ಸಂಚಿನ ಯೋಜನೆಯನ್ನು ಸಂಪೂರ್ಣವಾಗಿ ಅನುಮೋದಿಸಿದ್ದಾರೆ. ಅವರ ತತ್ವೋಪದೇಶದ ಗುರುವಾಗಿ ಬ್ರಹ್ಮೇಂದ್ರ ಶಿವಯೋಗಿ ಎಂಬ ಹೆಸರಿನಿಂದ ಬೊಮ್ಮರಸನು ಬಂದಮೇಲೆ ನಮ್ಮ ಮೇಲಿನ ಅವರ ನಂಬಿಗೆ ದೃಢವಾಗಿ ಬಿಟ್ಟಿವೆ. ತಾವೇ ಮುಂದಾಗಿ ಕಾರ್ಯಸಾಧನೆಯ ಹಂಚಿಕೆಗಳನ್ನು ಯೋಚಿಸುತ್ತಿದ್ದಾರೆ. ಕರ್ಣದೇವನ ಕಾವಲದ ಬಿಗುವು ಮೊದಲಿನಷ್ಟಿಲ್ಲ. ಬ್ರಹ್ಮೇಂದ್ರಶಿವಯೋಗಿಗಳ ಶಿಷ್ಯನಾಗಿ ಬಂದ ಶಿವದತ್ತನಿಗೆ ದಿನಕ್ಕೊಂದು ಸಲ ಹೊರಗೆ ಹೋಗಿಬರಲು ಅನುಮತಿ ಇದೆ.

"ಜಗದೇಕಮಲ್ಲ ದೇವರಿಗೆ ಸಿಂಹಾಸನದಲ್ಲಿ ಪ್ರತಿಷ್ಠಿತರಾಗುವ ಆಸೆ ಎಳ್ಳಷ್ಟೂ ಇಲ್ಲ ವೈರಿಯ ಸೇಡು ತೀರಿಸುವದಕ್ಕೇ ಬದ್ಧರಾಗಿದ್ದಾರೆ. ಕೀರ್ತಿ ವರ್ಮದೇವರೇ ಚಾಲುಕ್ಯ ಚಕ್ರವರ್ತಿಗಳೆಂದು ಪ್ರತಿಜ್ಞೆ ಮಾಡಿ ಹೇಳು ತ್ತಾರೆ................. ವಂದನೆಗಳು"

ಮಹಾರಾಣಿ ಮನದಾಸೆ ಕೈಗೂಡುವ ಕನಸ ಕಾಣಹತ್ತಿದಳು. ಮಂಗಳ ವೇಡೆಯ ಯುವರಾಜ ಪಟ್ಟಾಭಿಷೇಕೋತ್ಸವಕ್ಕೆ ಅಸ್ವಸ್ಥದ ನೆವಮಾಡಿ ತಾನು ಹೋಗದೆ ತಾನು ಕೊಡುವ ಉಡುಗೊರೆಗಳನ್ನು ಅಣ್ಣ ವಿಜಯಾರ್ಕ ದೇವ ನೊಡನೆಯೇ ಕಳಿಸಿದಳು. ಅಲ್ಲಿ ಹೋದರೆ ತಾನು ಆಪತ್ತಿಗೊಳಗಾಗುವದು ನಿಶ್ಚಿತವೆಂದು ಭಾವಿಸಿದ್ದಳು. ಅದಕ್ಕಾಗಿಯೇ ಹೊಂಚು ಹಾಕಿದ್ದ ಬಿಜ್ಜಳ

ನಿಗೆ ಸ್ವಲ್ಪ ನಿರಾಶೆಯಾಯಿತು. ಕಲ್ಯಾಣದ ಶರಣರನ್ನು ಸಂತೈಸಿದ್ದೇನೆಂದು ತಿಳಿದ ಆತನು, ಮಹಾರಾಣಿಯ ಸಲ್ಲು ಅಡಗಿಸುವದಕ್ಕೆ ತಕ್ಕ ಸಮಯವೆಂದು ನೆನಿಸಿದ್ದನು. ಉತ್ಸವ ಮುಗಿದ ಮರುದಿನ ವಿಜಯಾರ್ಕದೇವನಿಗಿಂತ ಮೊದಲು ಮುಟ್ಟುವಂತೆ ಮಹಾರಾಣಿಗೆ ಗುಪ್ತವಾಗಿ ಒಂದು ಪತ್ರ ಕಳಿಸಿದನು. ಅದರ ಮುಖ್ಯಾಂಶವಿಷ್ಟು :

‘........ಕೀರ್ತಿವರ್ಮರ ಸಲುವಾಗಿ ಜಗದೇಕಮಲ್ಲರ ಮನವೊಲಿಸಲು ನಿಮ್ಮ ಪ್ರತಿನಿಧಿಯು ಶಕ್ತನಾಗಿಲ್ಲ. ‘ಕೀರ್ತಿಶೇಷ ತೈಲಪದೇವರಿಂದಲೇ ಜಾರಿಣಿಯ ಮಗನೆಂದು ತಿರಸ್ಕರಿಸಲ್ಪಟ್ಟ ಕೀರ್ತಿವರ್ಮನು ಹಕ್ಕುದಾರನಾಗಲು ಸಮ್ಮತಿಸೆನು’ ಎಂದು ಜಗದೇಕಮಲ್ಲ ಪ್ರಭುಗಳು ಸ್ಪಷ್ಟವಾಗಿ ಹೇಳುತ್ತಾರೆ. ನೀವೇ ಕಲ್ಯಾಣಕ್ಕೆ ಬಂದು ಅವರನ್ನು ಕಾಣುತ್ತಿದ್ದರೆ ಏರ್ಪಾಡು ಮಾಡುತ್ತೇವೆ............”

ರಾಣಿಗೆ ಆಶ್ಚರ್ಯವೇನೂ ಆಗಲಿಲ್ಲ. ಅಗ್ಗಳನಿಂದ ವಿಶ್ವಾಸದ ಪತ್ರ ಬಂದಿತ್ತಾದ್ದರಿಂದ ಬಿಜ್ಜಳನ ಪತ್ರದಿಂದ ಮೋಸಹೋಗುವದು ಶಕ್ಯವಿರಲಿಲ್ಲ. ಆತನು ತನ್ನ ಇಷ್ಟಾರ್ಥಸಿದ್ಧಿಗೆ ಆಧಾರವಾಗಿಟ್ಟುಕೊಂಡ ಕೃತ್ರಿಮವಾದ ನುಡಿಗಳನ್ನೇ ಮುಂದೆಮಾಡುತ್ತಾನೆಂದೂ ತನ್ನನ್ನು ಬಂಧನಗೊಳಿಸಲು ಆತುರನಾಗಿದ್ದಾನೆಂದೂ ಸಹಜ ತಿಳಿದಳು. ತನ್ನ ಮಗನಿಗೆ ಸಿಂಹಾಸನವಿಲ್ಲದಾಗುವದಕ್ಕಿಂತ, ಬಿಜ್ಜಳನು ತನ್ನ ಶೀಲಕ್ಕೆ ಕಲಂಕ ಹಚ್ಚಿ ಲೋಕನಿಂದೆಗೆ ಗುರಿಮಾಡುತ್ತಿರುವದಕ್ಕೆ ಅತ್ಯಂತವಾಗಿ ನೊಂದುಕೊಂಡಳು. ವಿಜಯಾರ್ಕದೇವನು ಮರಳಿ ಬಂದ ಬಳಿಕ ಪ್ರಸಂಗದ ಪರಿಶೀಲನೆ ಮಾಡಿ ಮುಂದಿನ ಕ್ರಮ ನಿರ್ಣಯಿಸಿದರು.

ದೇವಗಿರಿಯ ಭಿಲ್ಲಮನೊಡನೆ ಸಂಪರ್ಕವನ್ನು ಹೆಚ್ಚಿಸಿದರು. ಹೈವೆ ಕದಂಬಾಳಿಗಳ ಮಂಡಲೇಶ್ವರರಿಗೆ ಸೂಚನೆ ಕಳಿಸಿದರು.

ಎರಡುವಾರ ತಡೆದ ಬಳಿಕ ರಾಣಿಯು ಬಿಜ್ಜಳನಿಗೆ ‘ನಿಮ್ಮ ಸದಿಚ್ಛೆಗೆ ಕೃತಜ್ಞಳಾಗಿದ್ದೇನೆ. ನಾನು ದುರ್ದೈವಿ! ವೈದುನದೇವ ಜಗದೇಕಮಲ್ಲ ಚಕ್ರವರ್ತಿಗಳನ್ನು ದೂಷಿಸುವದು ನನ್ನ ಧರ್ಮವಲ್ಲ!’ ಎಂಬ ಅಭಿಪ್ರಾಯದ ಪತ್ರ ಕಳಿಸಿದಳು.

ಇತ್ತ ಜಗದೇಕಮಲ್ಲದೇವರಿಗೆ ತನ್ನ ಮನದಳಲ ಹಾಗು ಜೀವನದ ನಿರಾಶೆಯನ್ನು ತೋಡಿಕೊಂಡು ಬೇರೆ ಒಂದು ಪತ್ರವನ್ನು ಬರೆದಳು. ಅದು ಗುಪ್ತಚಾರರಿಂದ ನಿಯಮಿತ ಗುಪ್ತಕ್ರಮದಿಂದ ಕಲ್ಯಾಣದ ರಾಜಗೃಹಕ್ಕೆ ಹೋಯಿತು. ಅದರ ಸಂಗತಿ ಯಾರಿಗೂ ತಿಳಿದಿರಲಿಲ್ಲ.

ಮರಣದಂಡನೆ

ಸೋವಿದೇವನ ಪಟ್ಟಾಭಿಷೇಕ ಮುಗಿಸಿ ಮಂಗಳವೇಡೆಯಿಂದ ಮರಳಿ ಬಂದ ಕೂಡಲೆ ಬಿಜ್ಜಳರಾಜನು ಧರ್ಮಾಧಿಕರಣದ ನ್ಯಾಯಪೀಠರಚನೆಯ ಆಜ್ಞೆ ಹೊರಡಿಸಿದನು. ತಾನೇ ಆ ನ್ಯಾಯಮಂಡಲದ ಅಧ್ಯಕ್ಷನಾದನು. ಮಂಚಣ್ಣನಾಯಕ, ರುದ್ರಭಟ್ಟ ಉಳಿದ ಸದಸ್ಯರು.

ವೃದ್ಧನಾಗಿದ್ದ ಮಂಚಣ್ಣನು, ಬಸವೇಶ್ವರರ ವ್ಯಕ್ತಿತ್ವದ ಬೆಳವಣಿಗೆ ಯಲ್ಲಿ ತಾನು ತಾಳುತ್ತಿದ್ದ ಅಸೂಯಾಭಾವನೆಗಾಗಿ ಈಗ ಪಶ್ಚಾತ್ತಾಪ ಪಡುತ್ತಿದ್ದನು. ಅವನ ಮನಸ್ಸು ಈಗ ಶರಣಧರ್ಮದ ಕಡೆಗೆ ಒಲಿದಿತ್ತು. ಬಿಜ್ಜಳನು ದುರಾಶೆ, ಕ್ರೌರ್ಯಗಳ ಸೆಳವಿಗೆ ಬಿದ್ದುದಕ್ಕೆ ರೋಷಿಕೊಂಡಿದ್ದನು. ಆದರೆ ಆ ವಿಷಮಸ್ಥಿತಿಯನ್ನು ತಡೆಯಲು ಆತನು ಅಸಮರ್ಥನಾಗಿದ್ದನು.

ಮಧುವಯ್ಯ ಹರಳಯ್ಯ ಶೀಲವಂತ ಇವರು ಸೆರೆಮನೆಯ ಯಾತನೆಗಳನ್ನು ತಾತ್ವಿಕ ಭಾವನೆಯ ಆಧಾರದಿಂದ ಸಹಿಸಿಕೊಂಡಿದ್ದರು. ವಿಚಾರಣೆಯಲ್ಲಿ ಅವರು ತಮ್ಮ ಸತ್ಯ ನಿತ್ಯ ನಿಲುವಿಗೇ ಅಂಟಿಕೊಂಡರು. ಮದುವೆ ನಡೆದುದನ್ನು ಯಾರೂ ಅಲ್ಲಗಳೆಯಲಿಲ್ಲ. ವರ್ಣಸಂಕರಕ್ಕೆ ಒಪ್ಪಲಿಲ್ಲ. ಕ್ಷಮೆಯನ್ನು ಕೇಳಲಿಲ್ಲ. ತಾವು ವರ್ಣಧರ್ಮದವರಲ್ಲವೆಂದು ಹೇಳಿಕೆ ಕೊಟ್ಟರು. ನ್ಯಾಯಪೀಠವು ಅದನ್ನು ಗಮನಿಸಲಿಲ್ಲ. ಹಿಂದಿನ ವರ್ಣಧರ್ಮ ರಕ್ಷಕ ರಾಜರ ವರ್ತನೆಯ ಆಧಾರದ ಮೇಲೆ ಹರಳಯ್ಯ ಮಧುವರಸು ಶೀಲವಂತ ಇವರಿಗೆ ವರ್ಣಸಂಕರ, ಶಿಷ್ಟಾಚಾರದ ಅತಿಕ್ರಮಣ, ಕನ್ಯಾಪಹಾರ, ಶಾಂತಿ ಭಂಗ ಈ ಅಪರಾಧಗಳಿಗಾಗಿ ಮರಣದಂಡನೆ ವಿಧಿಸಿತು. (ಮಾಘ ಬ. ೧೦ ೧೦೮೮ ಕ್ರಿ. ವ. ೧೧೬೭.)

ಮಂಚಣ್ಣನಾಯಕನೊಬ್ಬನ ಮತಭೇದವು ಬಿಜ್ಜಳನ ಕೋಪಕ್ಕೇ ಕಾರಣವಾಯಿತು. ಮಂಚಣ್ಣನು ಮನೆಗೆ ಬಂದು ಅಸ್ವಸ್ಥನಾಗಿ ಹಾಸಿಗೆ ಹಿಡಿದವನು ಮರಳಿ ಮೇಲಕ್ಕೇಳಲೇ ಇಲ್ಲ.

ಮರಣದಂಡನೆಯ ತೀರ್ಪು ಆದ ವಾರ್ತೆಯು ಮಹಮನೆಗೆ ಬರಸಿಡಿಲಂತೆ ಎರಗಿತು. ತೀರ್ಪು ಹೀಗಾಗುವದೆಂದು ಮೊದಲೇ ಊಹಿಸಿದ ಹಿರಿಯ ಶರಣರಿಗೆ ಆಶ್ಚರ್ಯವೆನಿಸಲಿಲ್ಲ. ಮರುದಿನ ಸಂಜೆಗೆ ಆಪತ್ಕಾರಕ ಪರಿಸ್ಥಿತಿಯ ಪರಿಶೀಲನೆಗೆ ಪ್ರಮುಖ ಶರಣರ ಸಭೆ ಸೇರಿತು. ಚೆನ್ನಬಸವಣ್ಣನು ಸಂಕ್ಷೇಪವಾಗಿ ವಿವರಣೆ ಕೊಟ್ಟನು:

"ಮಂತ್ರಿಮಂಡಲದ ಸಭೆಯಲ್ಲಿ ಶರಣರ ಬಂಧನದ ಕಾರಣವನ್ನು ಪುನಃ ಪರಿಶೀಲಿಸಬೇಕೆಂದು ನಾನು ಸೂಚನೆ ಕೊಟ್ಟಾಗ ಬಿಜ್ಜಳನು 'ನ್ಯಾಯಾಸ್ಥಾನಕ್ಕೆ ಒಪ್ಪಿಸಿದ ಬಳಿಕ ಮಂತ್ರಿಮಂಡಲ ಕೈಹಾಕಲಿಕ್ಕೆ ಬರುವದಿಲ್ಲ'ವೆಂದು ಕೋಪದಿಂದಲೇ ಹೇಳಿದನು. ಆಗಲೇ ನಾನು ಊಹಿಸಿದಂತೆ ಈಗ ತೀರ್ಮಾನವಾಗಿದೆ. ಮೂವರು ಶರಣರ ಮರಣದಂಡನೆ ಸಹಿಸಲಾರದ ದುಃಖ. ದುಃಖಿಸುವದು ಶರಣರಿಗೆ ಸಲ್ಲದು. ಚೆನ್ನಸಂಗಯ್ಯನ ಕರುಣೆ ಹೇಗೋ ಹಾಗೆ ಆಗುತ್ತದೆ. ಇದು ಇಲ್ಲಿಗೆ ಮುಗಿದಂತೆಯೂ ಅಲ್ಲ; ತೀರ್ಪು ಕೇಳಿದಾಗ ಮಧುವರಸರು ನುಡಿದ ನುಡಿ ಅಂತರಾತ್ಮನ ಸಂದೇಶವಾಗಿದೆ 'ಶರಣರಿಗೆ ಅಗ್ನಿಪರೀಕ್ಷೆ ಒದಗಿದೆ. ನಾವು ಮೂವರು ಅದರಲ್ಲಿ ತೇರ್ಗಡೆ ಹೊಂದಿದ್ದೇವೆ. ಭಕ್ತಿಪ್ರಧಾನವಾದ ಶೈವಧರ್ಮದಲ್ಲಿ ವೀರತ್ವವನ್ನು ಮೂಡಿಸಲು ಶರಣರು ಪಣತೊಡಬೇಕು. ನಮ್ಮ ಬಲಿದಾನ ಅವರಿಗೆ ಮಾರ್ಗ ತೋರಲಿ !' ಎಂದು ಉದ್ಗರಿಸಿದುದು ಪರಿಸ್ಥಿತಿಯ ಚಿತ್ರವಾಗಿದೆ. ಧೂರ್ತರಾಜನು ಶರಣರ ನಾಶವನ್ನೇ ಚಿಂತಿಸುತ್ತಿರಬಹುದು. ಅವನ ತೋರಿಕೆಯ ಮಾತುಗಳು ನಂಬಿಗೆಗೆ ಅರ್ಹವಾಗಿಲ್ಲ."

"ಬಸವರಾಜರು ತಮ್ಮ ಅಧ್ಯಯನ ಕಾಲದಿಂದ ಸಂಗ್ರಹಿಸಿದ ಉಪನಿಷದಾಗಮಗಳು, ಶಾಸ್ತ್ರ ಪುರಾಣಗಳು ಪ್ರತ್ಯೇಕ ಶರಣರ ವಚನಗಳ ಕಟ್ಟುಗಳು, ವಚನ ಸಂಕಲನಗಳು ಅನುಭಾವಗೋಷ್ಠಿಯ ಕಾರ್ಯವಿವರಣೆಗಳು, ಪ್ರಬಂಧಗಳು ಸೇರಿ ಸಾವಿರಾರು ಗ್ರಂಥಗಳ ಸಂಗ್ರಹವು ಮಹಮನೆಯ ಸರ

ಸ್ವತೀ ಭಾಂಡಾರದಲ್ಲಿದೆ. ಶರಣಧರ್ಮದ ಅಸ್ತಿತ್ವವು ಅದನ್ನೇ ಅವಲಂಬಿಸಿದೆ. ಅದನ್ನೊಳಗೊಂಡು ಶರಣರ ರಕ್ಷಣೆಯ ವಿಚಾರ ಮಾಡಬೇಕಾಗಿದೆ."

ತಾವು ನಂಬಿದ ಬಲಪ್ರಯೋಗದ ಉಪಾಯ ಸೂಚಿಸಿ ಮಾಚಯ್ಯ ಮಾತಾಡಿದನು ಕೊನೆಗೆ ಐಯ್ಯಾಹೊಳೆಯ ಐನೂರ್ವರ ಗಣಾಚಾರಿ ಸಂಘಕ್ಕೆ ಈಗಲೇ ಬಿನ್ನವಿಸಿಕೊಳ್ಳಬೇಕೆಂದು ಹೇಳಿದನು.

"ಬಲಪ್ರಯೋಗವನ್ನು ಒಪ್ಪದೆ ಬಸವರಾಜರು ವಲಸೆ ಹೋದರು. ನಾವು ಅದನ್ನು ಮರೆಯುವಂತಿಲ್ಲ. ಗ್ರಂಥ ಭಾಂಡಾರದೊಡನೆ ಸಹ್ಯಾದ್ರಿಯ ಶಿಖರಗಳ ಮಧ್ಯದ ಉಳವೆಯ ಮಹಾರಣ್ಯಕ್ಕೆ ಶರಣರು ವಲಸೆ ಹೋಗುವದೇ ಉಳಿವೆಯ ದಾರಿ ಎಂದು ನಾನು ತಿಳಿಯುತ್ತೇನೆ" ಎಂದನು ಚೆನ್ನಬಸವಣ್ಣ !

"ಗ್ರಂಥರಾಶಿ ಮತ್ತು ಹಿರಿಯ ಅನುಭಾವಿಗಳ ದೃಷ್ಟಿಯಿಂದ ಈ ಮಾತು ಸರಿಯಾದೀತು. ಆದರೆ ಅಸಂಖ್ಯಾತರಾದ ವೀರವ್ರತದ ಭಕ್ತರು ನಾಗರಿಕರು ನಾಶವಾಗಬೇಕೇ ? ಅವರು ಬಲದ ಸಾಧನೆಯಿಂದಲೇ ಉಳಿಯಬೇಕು; ನಿಮ್ಮ ಪ್ರಯಾಣಕ್ಕೆ ಅಡ್ಡಿಬಂದರೆ ಬಲದ ಸಹಾಯದಿಂದಲೇ ಪರಿಹರಿಸಬೇಕು. ನಿಮ್ಮ ಅಹಿಂಸಾಪಾಲನೆಗೂ ಸೀಮೆಯಿದೆ."

ಮಾಚಯ್ಯನ ಮಾತು ಸರಿಯೆನಿಸಿತು. ಮತ್ತದೆಷ್ಟೋ ವಿಚಾರ ವಿನಿಮಯ ನಡೆದು ಹೀಗೆ ನಿರ್ಣಯಗಳಾದವು :

೧. ಆತ್ಮರಕ್ಷಣೆಗೆ ಶರಣರು ಶಸ್ತ್ರಧರಿಸಬಹುದು.

೨. ಮರಣದಂಡನೆಗೊಳಗಾದವರಿಗೆ ಪ್ರಾಣದಾನ ನೀಡುವಂತೆ ಸರ್ವಾಧಿಕಾರಿ ದೊರೆಗೆ ಶರಣರ ಒಂದು ಮನವಿಯನ್ನು ಕಳಿಸಬೇಕು.

೩. ಶರಣರು ಉಳಿವೆಯ ಸುರಕ್ಷಿತ ಸ್ಥಲಕ್ಕೆ ವಲಸೆಹೋಗಲು ಸಿದ್ಧರಾಗಿರಬೇಕು.

೪. ನಗರದ ಮಠಾಧಿಪತಿಗಳಿಗೆ, ಜಂಗಮರಿಗೆ ಈ ಪ್ರಯಾಣಕ್ಕೆ ಸಿದ್ಧವಾಗಿರಲು ಸೂಚಿಸಬೇಕು.

೫. ದಂಡಾಜ್ಞೆ ನೆರವೇರುವದರೊಳಗಾಗಿ ಸಿದ್ಧತೆ ಪೂರ್ಣವಾಗಿರಬೇಕು.

೬. ಈ ಯೋಜನೆಗಳಿಗೆ ಅಡ್ಡಬರುವ ಆತಂಕಗಳನ್ನು ಮಾಚಯ್ಯನವರ ಅಧಿಪತ್ಯದಲ್ಲಿ ನಿವಾರಿಸಿಕೊಳ್ಳಬೇಕು.

ಮಾಚಯ್ಯನು ಎದ್ದು ನಿಂತು ಪ್ರತಿಜ್ಞೆಮಾಡಿ ಹೇಳಿದನು.

ನಮ್ಮ ಪ್ರಮಥಗಣಂಗಳು ಉಳಿವೆಯ ಮಹಾಮನೆಗೆ
ಹೋಹ ಪರಿಯಂತ ಒಬ್ಬರನು ಬಿಟ್ಟೆನಾದೊಡೆ
ನನ್ನ ಕೈಯೊಳಗಿರ್ಪ ವೀರಭದ್ರವಿಜಯವೆಂಬ ಖಡ್ಗ
ಉರಿದೆದ್ದು ಸಿಡಿದು ಹೋಗಲಿ. ಕಲಿದೇವನ ಸಾಕ್ಷಿಯಾಗಿ
ಚೆನ್ನಬಸವಣ್ಣ!''

ಗದ್ದಲವಿಲ್ಲದೆ ಸಿದ್ಧತೆಗಳು ಸಾಗಿದವು. ಮಾಚಯ್ಯನು ಕೂಡಲೆ ಐಯ್ಯಾ ಹೊಳೆಯ ಐನೂರ್ವರ ಗಣಾಚಾರಸಂಘಕ್ಕೂ, ಶರಣಧರ್ಮನಿಷ್ಠ ಸಾಮಂತ ಮನ್ನೆಯರಿಗೂ ತಮಗೆ ಸಹಾಯಮಾಡಲು ಸಿದ್ಧರಾಗಿರುವಂತೆ ಬಿನ್ನಪ ವನ್ನು ಕಳಿಸಿಬಿಟ್ಟನು.

ಗ್ರಂಥಗಳನ್ನು ಹೊಂದಿಸಿ ಕಟ್ಟಿ ಗಂಟುಗಳನ್ನು ಮಾಡಿದರು. ಶೂನ್ಯ ಸಿಂಹಾಸನದ ಭಾಗಗಳನ್ನು ಬೇರೆ ಬೇರೆ ಮಾಡಿ ಹುಲ್ಲುಸೊರಬಿಯಲ್ಲಿ ಸುತ್ತಿ ದರು. ಒಂದು ವಾರದ ಮೇಲೆ ಒಂದುದಿನ ಮಾರಯ್ಯನು ಹಳ್ಳಿಗಳಿಂದ ವ್ಯವಸ್ಥೆಮಾಡಿ ಕಳಿಸಿದ ಎಂಟು ಬಂಡಿಗಳು ಮಹಮನೆಗೆ ಬಂದು ಅವುಗಳನ್ನು ಹೇರಿಕೊಂಡು ನಸುಕಿನಲ್ಲಿ ಹೊರಟು ಹೋದವು. ನಗರದ ಹೊರಗೆ ಹೋದ ಬಳಿಕ ರಕ್ಷಕ ಜನರು ಕೂಡಿ ಕಿನ್ನರಿ ಬೊಮ್ಮಯ್ಯನ ನಾಯಕತ್ವದಲ್ಲಿ ಸಾಗಿಸಿ ಕೊಂಡು ಮಲೆನಾಡ ಕಡೆಗೆ ಹೋದರು.

ಮಹಮನೆಯಲ್ಲಿ ಸಂಗ್ರಹವಾಗಿದ್ದ ವಸ್ತ್ರಧಾನ್ಯಗಳನ್ನು ಪಾತ್ರೆಗಳನ್ನು ದಿನಾಲು ಎರಡು ತಾಸು ಬಡಬಗ್ಗರಿಗೆ ದಾನ ಮಾಡುವ ಕ್ರಮವನ್ನಿಟ್ಟು ಕೊಂಡು ಆ ಸಂಗ್ರಹವನ್ನು ಸವೆಯಿಸಿದರು.

ದಂಡಿತರ ಜೀವದಾನ ಬೇಡುವ ಶರಣರ ಮನವಿಗೆ ಬಿಜ್ಜಳನಿಂದ ನಿರಾ ಕರಣೆಯ ಉತ್ತರ ಬಂದಿತು. ಪ್ರತಿಪಕ್ಷದ ನಿಯೋಗವೊಂದು ನಿಮ್ಮ ಮನ ವಿಗೆ ವಿರುದ್ಧವಾಗಿ ವಿನಂತಿಸಿದೆಯೆಂದು, ಪಕ್ಷಪಾತ ಮಾಡಲಿಕ್ಕಾಗದೆಂದು ಕಾರಣ ಕೊಡಲಾಗಿತ್ತು. ನಾರಣಕ್ರಮಿತನ ಕೈವಾಡದಿಂದ ಹಾಗೆ ನಡಿಸ ಲಾಗಿತ್ತು. ಮರಣದಂಡನೆ ದೃಢಪಟ್ಟಿತು.

---

೧೬. ಮೃತ್ಯುವಿಲಾಸ

ಮಂತ್ರ ಮೂರ್ತಿಗಳು

ಚೆನ್ನಬಸವಣ್ಣನು ಸಚಿವ ಸ್ಥಲಕ್ಕೆ ತ್ಯಾಗಪತ್ರವನ್ನು ಕಳಿಸಿಬಿಟ್ಟನು. ದಂಡಾಜ್ಞೆ ಕಾರ್ಯಗತವಾಗುವ ದಿನ ಬಂದೇಬಿಟ್ಟಿತು.

ನೀಲಲೋಚನೆ ಅರಮನೆಗೆ ಹೋಗಿ ಬಿಜ್ಜಳನನ್ನು ಕಂಡು ಪ್ರಸ್ತಾಪಿಸಿ ತಂದೆ, ಮಾವ, ಪತಿಗಳನ್ನು ಒಮ್ಮೆಲೇ ಕಳೆದುಕೊಳ್ಳಲಿರುವ ಕಲಾವತಿಯು ಹೃದ್ರೋಗದ ಭಯಂಕರ ಜ್ವರದಲ್ಲಿ ಬೇಯುತ್ತಲಿದ್ದಾಳೆ. ಅವಳಲ್ಲಿ ದಯೆತೋರಿ ನಾಲ್ವರ ಜೀವವನ್ನು ಉಳಿಸಬೇಕೆಂದು ಕಾಲಿಗೆರಗಿ ಬೇಡಿಕೊಂಡಳು. ಆದರೆ ಬಿಜ್ಜಳನು 'ನಿನಗೆ ಕೊಟ್ಟ ಅಭಿವಚನಕ್ಕೆ ಹೊರತಾದ ಸಂಗತಿಗಳನ್ನು ಕುರಿತು ನೀನು ಮಾತೆತ್ತಕೂಡದು' ಎಂದು ಸ್ಪಷ್ಟವಾಗಿ ಹೇಳಿಬಿಟ್ಟನು.

ಅಂದು ರಾತ್ರಿ ಸೈನಿಕರ ಕಾವಲಿನಲ್ಲಿ ಹರಳಯ್ಯ-ಮಧುವಯ್ಯಗಳನ್ನು ಶೂಲಕ್ಕೇರಿಸುವಂತೆ ಶೀಲವಂತನ ಶಿರಚ್ಛೇದ ಮಾಡುವಂತೆ ಆಜ್ಞೆಯಾಗಿತ್ತು. ನಗರದ ಹೊರಗಿನ ಭೀಮನ ಮರಡಿಯ ಆಚೆಯ ಮಗ್ಗಲಿಗೆ ವಧಾಸ್ಥಳದ ರಚನೆಯಾಗಿತ್ತು. ಎರಡು ಕಂಬಗಳ ಮೇಲೆ ಅಡ್ಡಲಾಗಿ ಹಾಕಿದ ಮರದಿಂದ ಎರಡು ಉರುಲು ಹಗ್ಗಗಳು ನಾಲ್ಕು ಮೊಳ ಅಂತರದಿಂದ ಇಳಿಬಿದ್ದಿದ್ದವು. ಆದರ ಮುಂದೆ ಕೊಲ್ಲಗಟ್ಟೆಯನ್ನು ಕಟ್ಟಿದ್ದರು. ನಾಲ್ಕು ಮೂಲೆಗೆ ನಾಲ್ಕು ದೊಡ್ಡ ಪಂಜುಗಳನ್ನು ನೆಟ್ಟಿದ್ದರು. ಅವುಗಳ ಬೆಳಕಿನಲ್ಲಿ ಮರಡಿಯ ಕಡೆಯಿಂದ ಬರುವವರಿಗೆ; 'ಅಡ್ಡಮರವು ಮೇಲ್ದುಟಿಯಾಗಿ ಹಗ್ಗಗಳು ಶೂಲದ ಹಲ್ಲುಗಳಾಗಿ ಕೊಲ್ಲಗಟ್ಟೆ ಕೆನ್ನಾಲಿಗೆಯಾಗಿ' ಮೃತ್ಯುವಿನ ಬೃಹದಾಕಾರದ ತೆರೆದ ಬಾಯಿಯಂತೆ ಕಾಣುತ್ತಿತ್ತು ಆ ನೋಟ! ಐವತ್ತು ಜನ ಅಶ್ವಾರೋಹಿಗಳು ಕಾವಲಿದ್ದರು.

ಒಂದಾದಮೇಲೊಂದರಂತೆ ಎರಡು ಮುಸುಕಿನ ಗಾಡಿಗಳು ಬಂದು ನಿಂತವು. ಅವುಗಳಿಂದ ಹರಳಯ್ಯ ಮಧುವಯ್ಯಗಳನ್ನು ಇಳಿಸಿ ಒಂದೊಂದು

ಹಗ್ಗದ ಹತ್ತಿರ ನಿಲ್ಲಿಸಿದರು. ಅವರು ಒಬ್ಬರನ್ನೊಬ್ಬರು ಗುರ್ತಿಸಿ ಶರಣು-ಶರಣಾರ್ಥಿ ಎಂದರು.

"ನಿಮ್ಮ ಈ ಬವಣೆಗೆ ಕಾರಣನು ನಾನು; ನನ್ನನ್ನು ಕ್ಷಮಿಸಬೇಕು. ಹರಳಯ್ಯನವರೇ."

ಎಂದು ಮಧುವಯ್ಯ ಪುನಃ ಕೈಮುಗಿದನು.

"ಕರ್ತಾರನ ಕಮ್ಮಟದ ವಸ್ತುಗಳಲ್ಲವೇ ನಾವು ? ಶರಣರ ಪಾದ ಧೂಳಿಯಿಂದ ಪಾವನನು ನಾನು !"

ಎನ್ನುತ್ತ ಹರಳಯ್ಯ ಪಾದಕ್ಕೆರಗಬರಲು, ಮಧುವಯ್ಯ ತಡೆದು ಹಿಡಿದು ಆಲಿಂಗಿಸಿ ಎಂದನು :

"ನಾವಿಬ್ಬರೂ ಸಹಯಾತ್ರಿಕರು. ಸ್ವಯದಲ್ಲಿ ಒಂದು……."

ವಧಕರು ಅವರನ್ನು ಪ್ರತ್ಯೇಕಿಸಿ ನಿಲ್ಲಿಸಿದರು. ಕೊರಳಿಗೆ ಹಗ್ಗಗಳ ಕುಣಿಕೆಗಳನ್ನು ಹಾಕಿದರು. ಹರಳಯ್ಯ ಮೂರ್ಛಿತನಾದಂತೆ ಕಂಡಿತು. ಮಧುವಯ್ಯ ಸ್ವಲ್ಪ ಸರಿದು ಅವನ ಕಿವಿಯಲ್ಲಿ ಷಡಕ್ಷರ ಮಂತ್ರವನ್ನು ಪಠಿಸಿದನು. ಹರಳಯ್ಯ ಎಚ್ಚತ್ತು ಪಠಿಸಹತ್ತಿದನು. ಇಬ್ಬರ ದನಿ ಒಂದಾಗಿ 'ಓಂ ನಮಃಶಿವಾಯ' ಅಲೆಅಲೆಯಾಗಿ ಸಾಗಿ ಆ ಸ್ಥಾನವೆಲ್ಲ ನಾದಮಯವಾಯಿತು.

ಅಷ್ಟರಲ್ಲಿ ಅಶ್ವಾರೋಹಿಗಳ ಕಾವಲಿನಲ್ಲಿ ಬಂದ ರಥದಿಂದ ಮಹಾ ಸೇನಾನಿ ಮಾಧವನಾಯಕನು ಶ್ರಮಿತನೊಡನೆ ಇಳಿದನು. ಮತ್ತು ಹತ್ತಿರವಿದ್ದ ಭಟನ ಕೈಯಿಂದ ಪಂಜನ್ನು ಕಿತ್ತುಕೊಂಡು ಮೇಲೆ ಕೆಳಗೆ ಬೀಸಿ ಸಂಜ್ಞೆ ಮಾಡಿದನು. ಹಗ್ಗದ ಹಿಂದುದಿಗಳನ್ನು ಹಿಡಿದು ನಿಂತ ಇಬ್ಬರು ವಧಕರು ಹಗ್ಗಗಳನ್ನು ಎಳೆದರು. ಮಂತ್ರಧ್ವನಿ ಅನಂತದಲ್ಲಿ ಲೀನವಾಯಿತು. ಎರಡು ಶವಗಳು ನೇತಾಡಹತ್ತಿದವು.

ಒಡನೆ ಮತ್ತೊಂದು ಮುಚ್ಚುಗಾಡಿ ಬಂದಿತು ಶೀಲವಂತನನ್ನು ಇಳಿಸಿ ತಂದರು. ಎದುರಿಗಿರುವ ಶವಗಳು ತಂದೆ ಮಾವಂದಿರವೆಂದು ಗುರ್ತಿಸಿ ಶೀಲವಂತ ಸಾಷ್ಟಾಂಗವಾಗಿ ಎರಗಿದನು. ಗಾಳಿಯ ಸುಳಿಯೊಂದು ಮೈಗೆ ತಗಲಿ ಸರ್ವಾಂಗ ಪುಳುಕಿತವಾಯಿತು. ಆ ಗಾಳಿಯಲ್ಲಿ ಅಡಗಿದ ಮಂತ್ರದ ಸ್ಪರ್ಶ

ದಿಂದಲೋ ಅಥವಾ ಶರಣಜನದ ಜೀವಾಳದ ಸ್ಫುರಣದಿಂದಲೋ ತಲೆಯೆತ್ತಿ ನೋಡಿದಾಗ ಅವನು ಕಂಡುದು ಶವಗಳನ್ನಲ್ಲ! ಭಿತ್ತಿಯ ಮೇಲೆ ಬಣ್ಣದಿಂದ ಬರೆದ 'ಓಂ ನಮಃಶಿವಾಯ'ವನ್ನು!! ಮತ್ತೆ ಕಣ್ಣುಮುಚ್ಚಿದನು. ಹೃದಯ ದಾಳದಿಂದ ಹೊರಬಿದ್ದಿತು ಓಂ ನಮಃಶಿವಾಯ! ಪಠಿಸುತ್ತ ಎದ್ದನು. ದನಿ ಏರಿಸಿ ಪಠಿಸಿದನು. ರೋಷಗೊಂಡ ಮಾಧವ ಮತ್ತೆ ಸನ್ನೆ ಮಾಡಿದನು. ವಧ ಕನೊಬ್ಬನು ಅವನನ್ನು ಹಿಡಿದು ಕೊಲ್ಗಟ್ಟಿಯ ಕೊರಡಿನ ಮೇಲೆ ಕೊರಳ ನ್ನಿಡಿಸಿದನು; ಒಂದೇ ಏಟಿಗೆ ತುಂಡರಿಸಿದನು.

ಶವಗಳ ರಕ್ಷಣೆಯ ಮಟ್ಟಿಗೆ ಭಟರನ್ನು ನಿಲ್ಲಿಸಿ ಉಳಿದ ದಳ ಸಾಗಿತು. ಸೇನಾನಿಯೂ ಕ್ರಮಿತನೊಡನೆ ನಡೆದನು.

ಶವಗಳನ್ನು ಪಡೆದು ಸಮಾಧಿಗೊಳಿಸಲು ಧರ್ಮಾಧಿಕರಣದಿಂದ ಅನು ಮತಿ ಪಡೆದಿದ್ದ ಮಾಚಯ್ಯನು ಶರಣರ ತಂಡದೊಡನೆ ಅಲ್ಲಿಗೆ ಬಂದನು. ಭಟರ ನಾಯಕನು ಶವಗಳನ್ನೊಪ್ಪಿಸಿ ಸರಿದು ಹೋದನು. ಅಷ್ಟರಲ್ಲಿ ಜಂಗ ಮರೊಬ್ಬರು ಓಡುತ್ತ ಬಂದು ಹೇಳಿದರು, ಕಲಾವತಿ ಅಸುದೊರೆದಳೆಂದು.

* * * *

ನಾಲ್ಕು ದಿನಗಳಿಂದ ಕಲಾವತಿಯ ಜ್ವರ ಮಿತಿಮೀರಿ ಏರಿ ವಿಷಮ ಪರಿಸ್ಥಿತಿಯುಂಟಾಗಿತ್ತು. ಅಂದು ಸಂಜೆಗೆ ನೀಲಲೋಚನೆ ಅರಮನೆಯಿಂದ ಮರಳಿ ಬಂದಾಗ, ನಾಗಲಾಂಬೆಯ ತೊಡೆಯಮೇಲೆ ತಲೆಯಿಟ್ಟು, ಬಲ ಗುಂದಿದ ಕಣ್ಣುಗಳಿಂದ ಬಾಗಿಲಕಡೆಗೇ ನೋಡುತ್ತಿದ್ದ ಕಲಾವತಿಯು, ನೀಲ ಲೋಚನೆಯ ಮೌನಮುಖವನ್ನು ಕಂಡು ಕಣ್ಣುಮುಚ್ಚಿದಳು. ಹಾಲು ಗುಟುಕರಿಸಲಿಲ್ಲ. ನಾಗಲಾಂಬೆ-ನೀಲಾಂಬೆಯರು ಆಕೆಯ ಎರಡೂ ಕಿವಿ ಗಳಲ್ಲಿ ಮಂತ್ರಹೇಳಿದಂತೆ ತುಟಿ ಮಾತ್ರ ಚಲಿಸುತ್ತಿದ್ದವು. ಮುಂದೆ ಒಂದು ಪ್ರಹರದ ಮೇಲೆ ಶ್ವಾಸ ನಿಂತು ಹೋಯಿತು.

ಈ ಸುದ್ದಿಯನ್ನು ಕೇಳಿ ಮಾಚಯ್ಯನು ಅರ್ಥಜನ ಶರಣರೊಡನೆ ಮಹಮನೆಗೆ ಹಿಂದಿರುಗಿ ಹೋಗಿ ಆ ಶರಣಸತಿಯ ದೇಹವನ್ನು ಸಿಂಗರಿಸಿ ತೆಗೆದುಕೊಂಡು ಬಂದನು. ಮಂತ್ರಪಠಣವು ಓರಣದಿಂದ ನಡೆದಿತ್ತು. ವಧಾ ಸ್ಥಾನವು ಆ ರಾತ್ರಿ ಕ್ಷೇತ್ರಸ್ಥಾನವಾಯಿತು.

ಮರಡಿಯ ಬದಿಯ ರುದ್ರಭೂಮಿಯಲ್ಲಿ ಲಿಂಗೈಕ್ಯಕ್ರಮದ ಸಂಕೇತದಂತೆ ಸಮಾಧಿಗಳನ್ನು ರಚಿಸಿ ಜಯಘೋಷದ ಮಧ್ಯದಲ್ಲಿ ದೇಹಗಳನ್ನಿಟ್ಟರು. ಶೀಲವಂತ ಕಲಾವತಿಯರ ದೇಹಗಳನ್ನು ಜತೆಯಾಗಿ ಸಮಾಧಿಗೊಳಿಸಿದರು. ಆ ಸಂದರ್ಭದಲ್ಲಿ ಸಕಲೇಶಮಾದರಸು ಚೆನ್ನಬಸವಣ್ಣ ಮಾಚಯ್ಯನವರು ಪ್ರಶಂಸೆಯ ನುಡಿಗಳನ್ನಾಡಿದರು. ಬಳಿಕ ಮಾರಯ್ಯನವರು ಮಾತಾಡಿ ಕೊನೆಗೆ ಹೇಳಿದರು :

"ಅಗ್ರಜ ಅಂತ್ಯಜ ವರ್ಣಧರ್ಮದ ಎರಡು ಧ್ರುವಗಳು
ಒಂದು ಉತ್ತರ, ಇನ್ನೊಂದು ದಕ್ಷಿಣ, ನಡುವೆ ದೊಡ್ಡ ಕಮರಿ,
ಸಮತೆಯ ಗಾಳಿ ಬೀಸಿ ಶಿವಭಕ್ತಿಯ ಸೂತ್ರ ಬಂಧಿಸಿತ್ತು ಎರಡನ್ನು !
ಅಗ್ರಜನ ಪುತ್ರಿ ಅಂತ್ಯಜನ ಪುತ್ರನ ಕೈಹಿಡಿದಳು;
ಸಾಧಿಸಿತ್ತು ಮಾನವತೆಯ ಮಹಾಸಿದ್ಧಿ ಶರಣರಲ್ಲಿ !
ನಿಷ್ಕಲಂಕ ಮಲ್ಲಿಕಾರ್ಜುನಾ ನೋಡಿ ಬೆರಗಾದೆ ನಾನು."

ಸಮಯ ಸಮೀಪಿಸಿತು

ದುರ್ದೈವವನ್ನು ಆಶ್ರಯಿಸಿ ಬರೆದ ಮಾಹೇಶ್ವರಿಯ ಪತ್ರ ನೋಡಿ ಬಿಜ್ಜಳನು ರಾಣಿಯ ರೆಕ್ಕೆ ಮುದುಡಿದವೆಂದು ತಿಳಿದುಕೊಂಡನು. ಆದರೆ ಅತ್ತ ತೆರೆಯ ಮರೆಯಲ್ಲಿ ನಡೆದುದನ್ನು ಆತನು ಅರಿಯನು. ಅದೇ ಕಾಲಕ್ಕೆ ರಾಜಗೃಹದಲ್ಲಿಯ ಬಂದಿ ಜಗದೇಕಮಲ್ಲನು, ಮಹಾರಾಣಿಯ ಮತ್ತೊಂದು ಪತ್ರವನ್ನು ಬೊಮ್ಮರಸನೊಂದಿಗೆ ಓದುತ್ತಿದ್ದನು.

"ಸತೀ ಧರ್ಮದಲ್ಲಿ ಪತಿಯ ನಂತರ ನೀವು ನನಗೆ ಪೂಜ್ಯರು. ನನ್ನ ಕೊರಗನ್ನು ಇನ್ನಾರಲ್ಲಿ ಹೇಳುವದು ? ಬಿಜ್ಜಳನು ಸ್ವಾರ್ಥಸಾಧನೆಗಾಗಿ ಅತಿ ಹೀನವಾದ ರೀತಿಯಿಂದ ನನ್ನ ಶೀಲಕ್ಕೆ ಕಲಂಕ ಹಚ್ಚಿ ನನ್ನ ಹೃದಯವನ್ನು ಇರಿದಿದ್ದಾನೆ. ನನ್ನ ಶೀಲದಲ್ಲಿ ನಿಮಗೆ ನಂಬಿಗೆ ಇದ್ದರೆ, ನಾನು ನಿಮಗೆ ದ್ರೋಹವನ್ನು ಬಗೆದಿಲ್ಲವಾದರೆ, ನಿಮ್ಮ ಕುಲಗೌರವದ ಅಭಿಮಾನ ನಿಮಗಿದ್ದರೆ, ನೀವು ಆ ವಂಚಕನನ್ನು ವಧಿಸಿ ನನಗೆ ಸಮಾಧಾನ ಹೇಳಿರಿ. ಇಲ್ಲವಾದರೆ ನನ್ನ ಅಂತ್ಯವನ್ನು ನಾನು ಕಾಣುತ್ತೇನೆ. ಹೇಗಾದರೂ ಇದ್ದು ಎಷ್ಟು ದಿನ ಜೀವಿಸಿದರೇನು?

ತಮ್ಮ ಪಾದಾವನತೆ
ಮಾಹೇಶ್ವರಿ.

"ನಮ್ಮ ನಿರ್ಲಜ್ಜ ಜೀವನಕ್ಕೆ ಕನ್ನಡಿ ಹಿಡಿದಿದ್ದಾಳೆ ಮಹಾರಾಣಿ."

"ನಾವೇನು ಸುಮ್ಮನೆ ಕುಳಿತಿರುವೆವೇ ರಾಜರೇ? ಕಾಲ ಈಗ ಸನ್ನಿಹಿತವಾಗಿದೆಯೆಂದು ಸೂಚಿಸುತ್ತಿದೆ ಈ ಪತ್ರ!" ಬೊಮ್ಮರಸನೆಂದನು.

ಸ್ವಲ್ಪದರಲ್ಲಿ ಮಾತು ಮುಗಿಸಿ ತಮ್ಮ ಕಾರ್ಯ ವಿಧಾನವನ್ನು ತ್ವರಿತಗೊಳಿಸಿದರು.

* * * *

ಮಹಮನೆಯ ಧಾನ್ಯ-ವಸ್ತ್ರ-ಪಾತ್ರೆಗಳನ್ನು ದಾನ ಮಾಡುವ ಕ್ರಮವು ಹಾಗೆಯೇ ನಡೆದಿತ್ತು. ಜನರು ತಮ್ಮ ಸರತಿಯನ್ನು ಕಾದು ನಿಂತಿದ್ದರು.

ಒಳಗೆ ಮಾಚಿದೇವನಿಗೆ ವಂದಿಸಿ ಮಾತನಾಡಿದ ಬಳಿಕ ಶಿವದತ್ತನು ಬಟ್ಟೆಗಳ ಹತ್ತಿರ ಕುಳಿತ ಉಗ್ರಾಣದ ಕರಣಿಕ ಉತ್ತಣ್ಣನ ಹತ್ತಿರ ಬಂದನು. ಅಲ್ಲಿ ಪಸಾಯಿತರ ಎರಡು ಜತೆ ಸಮವಸ್ತ್ರಗಳನ್ನು ಕಂಡು ಕೈಗೆತ್ತಿಕೊಂಡನು. ಅದನ್ನು ಕಂಡು ಉತ್ತಣ್ಣನು 'ಏನಯ್ಯಾ ರಾಜಸೇವಕರ ಬಟ್ಟೆಗೆ ಕೈನೀಡಿವೆ; ಜಮದಂಡಿಗಳೆರಡಿವೆ ಬೇಕೇನು?' ಎಂದನು.

ಒಳಗೆ ಸುರಗಿಯನ್ನಿರಿಸಿಕೊಂಡು ಹೊರಗೆ ಸಾಮಾನ್ಯ ಕೈಗೋಲಿನಂತೆ ಕಾಣುವ ರಹಸ್ಯಾಯುಧವೇ ಜಮದಂಡಿ.

"ಅವಶ್ಯ ಬೇಕು ಕೊಡಿ ಅಯ್ಯನವರೆ," ಎನ್ನುತ್ತ ಶಿವದತ್ತನು ಎರಡು ಜತೆ ಸಮವಸ್ತ್ರಗಳನ್ನು ಎರಡು ಜಮದಂಡಿಗಳನ್ನು ಬೇರೆಯಾಗಿಡುತ್ತ "ಇವೇಕೆ ಇಲ್ಲಿ?" ಎಂದನು.

"ಚಿಕ್ಕ ದಣ್ಣಾಯಕರು ತ್ಯಾಗಪತ್ರ ಕೊಟ್ಟನಂತರ ಅವರ ಪಸಾಯಿತರು ಬಿಟ್ಟು ಹೋಗಿದ್ದಾರೆ. ಅವುಗಳ ಲೆಕ್ಕವಿಟ್ಟು ತರಿಸಿಕೊಳ್ಳುವ ಜಾಗ್ರತೆಯೆಲ್ಲಿದೆ ರಾಜಭಾಂಡಾರದ ಚಾವಡಿಯಲ್ಲಿ?"

"ಇರಲಿ, ನಮಗಾದರೂ ಆದವಲ್ಲ" ಎನ್ನುತ್ತ ಶಿವದತ್ತ ಸ್ನಾನಕ್ಕೆ ಹೋದನು. ಮರಳಿ ಬಂದು ಒಂದು ಜತೆ ಸಮವಸ್ತ್ರವನ್ನು ತನ್ನ ಜೋಳಿಗೆಯಲ್ಲಿಟ್ಟು ಮೇಲೆ ಪತ್ರಿ-ಪುಷ್ಪ ಹಾಕಿದನು. ತಾನು ಮಡಿಯಾಗಿದ್ದವನೆಂದು ತೋರಿಸುವಂತೆ ಜಮದಂಡಿಗೆ ಒಗೆದ ಕಾವಿಯುರವಿಯ ಪತಾಕೆಯನ್ನು ಕಟ್ಟಿ ಹೆಗಲಮೇಲಿಟ್ಟುಕೊಂಡನು. ರಾಜಗೃಹಕ್ಕೆ ಹೋಗಿ ಬೊಮ್ಮರಸನಿಗೆ ತೋರಿ

ಸಿದನು. ಇದೇ ಬಗೆಯಿಂದ ಮರುದಿನ ಮತ್ತೊಂದು ಜತೆ ಸಮವಸ್ತ್ರವನ್ನೂ ಜಮದಂಡಿಯನ್ನೂ ಒಯ್ದನು. ಕರ್ಣದೇವನ ಅಸಮಾಧಾನ ಉದಾಸೀನತೆಗಳ ಪರಿಣಾಮವಾಗಿ ರಾಜಗೃಹದ ಕಾವಲು ಶಿಥಿಲವಾಗಿತ್ತು. ಬರಬರುತ್ತ ರೂಢಿಗೊಂಡ ಶಿವದತ್ತನನ್ನು ದ್ವಾರದಲ್ಲಿ ಪರೀಕ್ಷಿಸುವದು ನಿಂತು ಹೋಗಿತ್ತು.

* * * *

'ಕಲ್ಯಾಣದಲ್ಲಿ ಕದನಗಳು ನಡೆಯುವವು. ಮಹಮನೆಯ ಶರಣರು ಫಾಲ್ಗುಣ ಬಹುಳ ಷಷ್ಠಿಯ ದಿವಸ ಉಳಿವೆಗೆ ವಲಸೆ ಹೊರಡುವರು. ನಗರದಲ್ಲಿಯ ಮಠಾಧೀಶರು, ಜಂಗಮರು ಅವರನ್ನು ಕೂಡಿ ಹೊರಡುವ ಸಿದ್ಧತೆಯಲ್ಲಿರಬೇಕು. ಇಲ್ಲವೆ ಅವರು ತಮ್ಮಿಷ್ಟದಂತೆ ಬೇರೆ ಕಡೆಗಾದರೂ ಹೋಗಬೇಕು.'

ಮಹಮನೆಯ ಈ ಸಂದೇಶವನ್ನು ನಗರದ ೧೦೮ ಮಠಗಳಿಗೆ ಮುಟ್ಟಿಸಲಾಯಿತು. ಕೆಲರು ಒಪ್ಪಿದರು; ಕೆಲರು ಒಲ್ಲೆವೆಂದರು. ಕೆಲರು ಕೆಲವು ದಿವಸ ಪರಿಣಾಮ ನೋಡುವೆವೆಂದರು. ಶರಣರ ವಲಸೆಯ ಸುದ್ದಿ ನಗರದಲ್ಲೆಲ್ಲ ಹಬ್ಬಿ ಎರಡು ದಿವಸಕ್ಕೆ ಬಿಜ್ಜಳನ ಕಿವಿಗೂ ಮುಟ್ಟಿತು. ಬಿಜ್ಜಳನು ಚೆನ್ನಬಸವಣ್ಣನನ್ನು ಕರೆಸಿದನು.

"ಇದೇನು ನಿಮ್ಮ ಗದ್ದಲ ?"

"ನಮ್ಮ ಗದ್ದಲ ಇಲ್ಲದಂತಾಗುವದಕ್ಕೆ ನಾವು ಹೊರಟು ಹೋಗುತ್ತೇವೆ. ಪ್ರಭುಗಳೇ !"

"ಹಾಗೆ ಹೋಗಿ, ನೀವು ರಾಜ್ಯದಲ್ಲಿ ಅಶಾಂತಿಯನ್ನು ಹರಡುತ್ತೀರಿ."

"ಹಾಗೇನಿಲ್ಲ; ನಾವು ನೆಟ್ಟಗೆ ಉದ್ದೇಶಿಸಿದ ಸ್ಥಳಕ್ಕೇ ಹೋಗುತ್ತೇವೆ."

"ಈ ತ್ವರಿತ ತೀಕ್ಷ್ಣ ಬದಲಾವಣೆಯಿಂದ ಜನರ ಮೇಲಾಗುವ ಪರಿಣಾಮವನ್ನು ನೀವು ಅರಿಯಿರಿ; ನೀವು ಹೋಗಲಾಗದು."

"ನಮಗೆ ಇರಲೂ ಆಗದು, ಶರಣರ ನಿರ್ಣಯ ಅಚಲ !"

"ಪರಿಣಾಮ ಏನಾದೀತು ನೋಡಿಕೊಂಡು ಹೋಗಿರಿ."

"ಆದದ್ದು ಆಗಲಿ ಪ್ರಭುಗಳೇ !" ಚೆನ್ನಬಸವಣ್ಣ ಕೈ ಮುಗಿದನು.

ಅಂದು ರಾತ್ರಿ ಸೇರಲಿದ್ದ ಗುಪ್ತರಾಜಸಭೆಯಲ್ಲಿ ಶರಣರ ನಿರ್ಮೂಲನದ ನಿರ್ಣಯಮಾಡಲು ಹವಣಿಸಿ ಬಿಜ್ಜಳನು ಚೆನ್ನಬಸವಣ್ಣನನ್ನು ಈಗಲೇ ಬಂಧಿಸಲು ಇಚ್ಛಿಸದೆ ಸಡಿಲು ಬಿಟ್ಟನು. 'ಒಳ್ಳೆಯದು' ಎಂದು ಹುಬ್ಬು ಗಂಟಿಕ್ಕಿ ಹೇಳಿದನು. ಚೆನ್ನಬಸವಣ್ಣ ನಡೆದನು. ಮಹಮನೆಗೆ ಬಂದು ಸಂದರ್ಶನದ ಸ್ವರೂಪವನ್ನು ತಿಳಿಸಿದನು.

'ಆಪತ್ತು ತೀರ ಹತ್ತಿರ ಬಂದಿದೆ. ಮಹಮನೆಯ ಸುತ್ತಲು ಸೈನ್ಯ ನಿಲ್ಲಬಹುದು. ಬೇಗನೆ ನಗರದ ಮಹಾದ್ವಾರಗಳನ್ನು ಮುಚ್ಚಿಬಿಡಬಹುದು. ಇಂದಿನ ರಾತ್ರಿ ಮಹಾರಾತ್ರಿ ! ಮೂರನೆಯ ಪ್ರಹರದಲ್ಲಿ ಬಂಡಿಗಳು ಸಿದ್ಧವಾಗಿ ನಿಂತಿರಬೇಕು' ಎಂದು ಎಚ್ಚರಿಸಿ ಮಾಚಯ್ಯನು ಹೊರಗೆ ಹೊರಟನು. ನಗರದಲ್ಲಿ ಸುತ್ತಾಡಿ ತನ್ನ ಪರಿಚಯದ ಮಹಾದ್ವಾರ ರಕ್ಷಕರನ್ನು, ಆಯಕಟ್ಟಿನ ಸ್ಥಳದ ರಕ್ಷಕರನ್ನು ಕಂಡು, ತಮ್ಮ ನಿರ್ಗಮನಕ್ಕೆ ಅವಶ್ಯವಾದ ಸೌಕರ್ಯಗಳ ಅನುವು ಮಾಡಿಕೊಂಡನು.

ಮಹಾರಾತ್ರಿ

ಗುಪ್ತರಾಜಸಭೆಗೆ ಕರ್ಣದೇವ ಹೋಗುವದು ಜಗದೇಕಮಲ್ಲನಿಗೆ ಮೂರುದಿವಸ ಮೊದಲೇ ತಿಳಿದಿತ್ತು. ಈ ದಿನ ಮುಂಜಾವಿನಿಂದ ಅಸ್ವಸ್ಥತೆಯ ಸೋಗು ಹಾಕಿ ಮಲಗಿದ್ದನು. ಇಳಿಹೊತ್ತಿಗೆ ಸಂಕಟ ಹೆಚ್ಚಾದಂತೆ ಉರುಳಾಡಿ ಉಪಚಾರಕರನ್ನು ಗಾಬರಿ ಮಾಡಿದನು. ಗುರು ಬ್ರಹ್ಮೇಂದ್ರ ಶಿವಯೋಗಿಯನ್ನು ಕರೆಯಿಸಿಕೊಂಡು ಕಾಲಿಗೆ ಬಿದ್ದನು. ಶಿವಯೋಗಿ ಅವನಿಗೆ ಅನ್ನಪಾನಗಳನ್ನೇನೂ ಕೊಳ್ಳದೆ ಸ್ವಸ್ಥವಾಗಿ ಮಲಗಬೇಕೆಂದು ಹೇಳಿದನು. 'ಹಾಗಾದರೆ ಬೆಳಗಿನವರೆಗೆ ನನ್ನ ಹತ್ತಿರ ಯಾರೂ ಬರಕೂಡದು. ಅವಶ್ಯಬಿದ್ದರೆ ಗುರುಗಳು ಬಂದು ಹೋಗುತ್ತಿರುತ್ತಾರೆ' ಎಂದು ಹೆಗ್ಗಡೆಗೆ ಹೇಳಿ ಜಗದೇಕಮಲ್ಲದೇವನು ಮಲಗಿಬಿಟ್ಟನು ....

ಹೆಗ್ಗಡೆ ಒಪ್ಪಿ ಕರ್ಣದೇವನನ್ನು ರಾಜಸಭೆಗೆ ಕಳಿಸುವ ಸಿದ್ಧತೆಯಲ್ಲಿ ತೊಡಗಿದನು.

ಒಳಮನೆಯಲ್ಲಿ ಗುರುಶಿಷ್ಯರು ಸ್ವತಂತ್ರರಾದರು. ಬ್ರಹ್ಮೇಂದ್ರ ಶಿವಯೋಗಿ ಗಡ್ಡಗಳನ್ನು ಬೋಳಿಸಿಕೊಂಡು ಮೀಸೆಗಳನ್ನು ಹುರಿಮಾಡಿ

ಬೊಮ್ಮರಸನಾದನು. ಇಬ್ಬರೂ ಎದ್ದು ನಿಂತು 'ತಮ್ಮ ಸಾಹಸ ದುಷ್ಟ ನಿಗ್ರಹಕ್ಕಾಗಿದೆ' ಎಂದು ಪರಮಾತ್ಮನಲ್ಲಿ ಅರಿಕೆಮಾಡಿ ಕೈಮುಗಿದರು. ಸಮವಸ್ತ್ರಗಳನ್ನು ಧರಿಸಿ ಜಮದಂಡಿಗಳಿಗೆ ಪಂಜುಗಳನ್ನು ಸಿಕ್ಕಿಸಿ ಕರ್ಣದೇವನ ಪರಿವಾರದಲ್ಲಿ ಹೊಕ್ಕು ಅವನ ಮೇಣೆಯ ಮುಂದೆ ಬೆಳಕು ಹಿಡಿದು ನಿಂತರು. ಸಮಯ ಅನುಕೂಲವಾಗಿತ್ತು, ಯಾರೂ ಗುರುತಿಸಲಿಲ್ಲ.

ರಾಜನ ರಹಸ್ಯ ಸಭೆಯಲ್ಲಿಯ ಚರ್ಚೆ ಬಹಳ ಬಿಸಿಯಾಗಿತ್ತು. ಮಾಧವ ನಾಯಕನು ರಾಜ್ಯದಲ್ಲಿ ಅರಾಜಕತೆ ಉಗ್ರರೂಪ ತಾಳುತ್ತಿದೆಯೆಂದು ವಿವರಿಸಿ ಕೊನೆಗೆ ಬಸವಣ್ಣನ ಅನುಯಾಯಿಗಳ ಕುತಂತ್ರಗಳಿಂದ ರಾಜ್ಯವ್ಯವಸ್ಥೆ ಗಳಕುಳವಾಗಿದೆ. ಅದರ ಸಂದುಸಂದುಗಳಲ್ಲಿ ಶರಣಧರ್ಮದ ರೋಗ ಸೇರಿದೆ. ಶರಣರನ್ನು ನಾಶಮಾಡದೆ ಆಡಳಿತದಲ್ಲಿ ಸುವ್ಯವಸ್ಥೆಯನ್ನು ಸ್ಥಾಪಿಸುವದು ಶಕ್ಯವಿಲ್ಲ" ಎಂದನು.

ಕರ್ಣದೇವನು ಸಂತಪ್ತನಾಗಿ "ರಾಜನೇ ತನ್ನ ಪ್ರಜೆಗಳನ್ನು ಕ್ರೂರತನದಿಂದ ಕೊಲ್ಲಬೇಕೆಂದು ಹೇಳುವ ಮಾತ್ರಾವ ಸೇನಾನಿಯನ್ನೂ ನಾನು ಕಾಣಲಿಲ್ಲ" ಎಂದನು.

ವಿಧರ್ಮದ ಮಂತ್ರಿಗಳು ದ್ವೇಷಪೂರಿತರಾದವರು ಮಾತನಾಡಿ ಮಾಧವ ನಾಯಕನ ಸೂಚನೆಯನ್ನು ವಿರೋಧಿಸಲಿಲ್ಲ. ಕರ್ಣದೇವನು ವ್ಯಕ್ತಿಗತ ಕಾರಣದಿಂದ ಹಾಗೆ ಹೇಳುವನೆಂದು ಬಿಜ್ಜಳನು ಅರ್ಥಮಾಡಿದನು.

'ಅಡ್ಡಬರುವವರ ಪ್ರಾಣಹಾನಿಯನ್ನು ಲೆಕ್ಕಿಸದೆ ಅನುಭವ ಮಂಟಪ ಮುಂತಾದ ಶರಣಧರ್ಮದ ಸಂಸ್ಥೆಗಳನ್ನೂ ಅವುಗಳಿಗೆ ಸಹಾಯ ಮಾಡುವ ಮಠಗಳನ್ನೂ ವಿಧ್ವಂಸಗೊಳಿಸಬೇಕು. ಶರಣ ಧರ್ಮಪ್ರಚಾರಕ್ಕೆ ತಡೆಗಟ್ಟಬೇಕು. ಕಟ್ಟಳೆ ಮುರಿಯುವವರಿಗೆ ಮರಣದಂಡನೆ ವಿಧಿಸಬೇಕು' ಎಂದು ನಿರ್ಣಯವಾಯಿತು.

ಅದಕ್ಕನುಸರಿಸಿ ರಾಜಾಜ್ಞೆಯನ್ನು ರಚಿಸಿ ತರಲು ಸಮ್ಮುಖದ ಕರಣಿಕನಿಗೆ ಹೇಳಿ ಬಿಜ್ಜಳನು ಚಾವಡಿಯ ತನ್ನ ಕೋಣೆಗೆ ಹೋಗಿ ಕುಳಿತನು. ಎಡಬಲದಲ್ಲಿ ಇಬ್ಬರು ಪಂಜಿನವರು ಬೆಳಕು ಹಿಡಿದಿದ್ದರು. ಕರಣಿಕನು ಬರೆದ ಕಾಗದವನ್ನು ತಂದು ಮುಂದಿಟ್ಟು ಸಭೆಯ ನಿರ್ಣಯದ ಕರಡು ತರ

ಲಿಕ್ಕೆ ಮತ್ತೆ ಹೋದನು. ತಾನು ಅಂಕಿತ ಹಾಕಬೇಕಾಗಿದ್ದ ಬರೆಹವನ್ನು ಬಿಜ್ಜಳನು ಏಕಾಗ್ರವಾಗಿ ಪರಿಶೀಲಿಸುತ್ತಿದ್ದನು. ಬಲಗಡೆಯು ಪಂಜು ಆರಿತು. ಬಿಜ್ಜಳನ ಹೊಟ್ಟೆಗೆ ಇರಿತ ಬಿತ್ತು; ಎಡಗಡೆಯ ಪಂಜು ಆರಿತು ಚಂಡು ಕತ್ತರಿಸಿತು.

'ಜಗದೇವ ಮಲ್ಲಿ ಬೊಮ್ಮಯ್ಯಗಳು ನಾವು! ಹರಳಯ್ಯ ಮಧುವಯ್ಯಗಳನ್ನು ಕೊಲ್ಲಿಸಿದ ಬಿಜ್ಜಳನ ಕೊಂದ ವೀರ ಕುಮಾರರು ನಾವು' ಎಂದು ಕೂಗುತ್ತ ಇಬ್ಬರು ಹೆಬ್ಬಾಗಿಲ ಕಡೆಗೆ ಓಡಿದರು ಅಲ್ಲಿ ಕಾವಲಿದ್ದ ನಾಲ್ವರು ಭಟರು ಅವರನ್ನು ತಡೆದರು. ಹೋರಾಟವಾಗಿ ಜಗದೇಕಮಲ್ಲನು ಹತನಾದನು. ಬೊಮ್ಮರಸನು ಇಬ್ಬರು ರಾಜಭಟರನ್ನು ಸಂಹರಿಸಿ ಪಾರಾಗಿ ಹೋದನು. ಕ್ಷಣಾರ್ಧದಲ್ಲಿ ಹಾಹಾಕಾರ ಹಬ್ಬಿತು!

ಮಾಧವನಾಯಕನು ರಾಜಾಜ್ಞೆ ತನ್ನ ಕೈಸೇರಿದೊಡನೆ ಕಾರ್ಯಾರಂಭ ಮಾಡುವ ಉಬ್ಬಿನಲ್ಲಿ ಸೈನಿಕರನ್ನು ಅಲ್ಲಲ್ಲಿ ನಿಲ್ಲಿಸುವದಕ್ಕೆಂದು ಹೋಗಿದ್ದನು. ಮೊದಲು ಮಹಮನೆಗೆ ಹೋಗುವ ದಳವನ್ನು ಗೊತ್ತುಮಾಡಿದ್ದನು. ಅಷ್ಟರಲ್ಲಿ ಈ ದುರ್ಘಟನೆಯ ಸುದ್ದಿಯನ್ನು ಕೇಳಿ ಅದನ್ನು ತಡೆದು ಮರಳಿ ಬಂದನು. ರಾಜಗೃಹಕ್ಕೆ ಹೊರಟಿದ್ದ ಕರ್ಣದೇವ ಹೊರಳಿ ಬಂದನು. ರಕ್ತದ ಮಡುವಿನಲ್ಲಿ ಹೊರಳಿದ ಅಣ್ಣನ ದೇಹವನ್ನು ನೋಡಿ, ಬಾಲ್ಯದಿಂದಲೂ ತಂದೆಯಂತೆ ಕಾಪಾಡಿದ ಅಣ್ಣನಿಗಾಗಿ ಅಳಹತ್ತಿದನು. ಸುತ್ತು ಬೆಳಕಾಗುವಂತೆ ಪಂಜುಗಳು ಹತ್ತಿದವು. ಮಾಧವನು ಗದ್ದಲವನ್ನು ನಿಯಂತ್ರಿಸಿದನು. ಸಾವರಿಸಿಕೊಂಡ ಬಳಿಕ ಕರ್ಣದೇವನು ಅಣ್ಣನ ಹಾಗು ಜಗದೇಕಮಲ್ಲನ ದೇಹಗಳನ್ನು ಆಯಾ ಅರಮನೆಗಳಿಗೆ ಕಳುಹಿದನು. ಅಲ್ಲಿ ಜನರ ದರ್ಶನಕ್ಕೆ ಇಡಿಸಿದನು. ನಗರದಲ್ಲಿ ಹೆಚ್ಚಿನ ಗೊಂದಲವೇಳದಂತೆ ನೋಡಿಕೊಳ್ಳಬೇಕೆಂದು ಸೇನಾಧಿಕಾರಿಗಳಿಗೆ ತಿಳಿಸಿ ಮಾಧವನು ಮನೆಗೆ ಹೋದನು.

ರಾಜ್ಯಾಧಿಪತ್ಯಕ್ಕೆ ಒಬ್ಬರನ್ನೊಬ್ಬರು ವಂಚಿಸುತ್ತಿದ್ದ ಇಬ್ಬರು ಪ್ರಭುಗಳು ಒಮ್ಮೆಲೆ ಹತರಾದುದು ದೈವಲೀಲೆ!

ಅಗ್ಗಳ ಶಿವದತ್ತರು ರಾಜಗೃಹದಿಂದ ಹೊರಬಿದ್ದು ಮಾರಯ್ಯನವರ ಆಶ್ರಮಕ್ಕೆ ಹೋದರು. ದಾರಿಯಲ್ಲಿ ಸುವರ್ಣೆ, ಕರ್ಹಾಡದಿಂದ ಬಂದ ವಿಜ

ಯಾರ್ಕದೇವನ ಪತ್ರವನ್ನು ಅವರಿಗೆ ಕೊಟ್ಟಳು. ಕರ್ಹಾಡದಲ್ಲಿ ಕೀರ್ತಿವರ್ಮನು ಷೈಹಾಳಿಯಲ್ಲಿ ಅಪಮೃತ್ಯುವಿಗೀಡಾಗಿದ್ದನು. ಮಹಾರಾಣಿ ಮಾಹೇಶ್ವರಿ ಎರಡುವಾರದ ವೇಳೆಲೆ ಹೃದ್ರೋಗದಿಂದ ಮರಣ ಹೊಂದಿದ್ದಳು.

ಸೂರ್ಯಾಸ್ತದ ಸಮಯಕ್ಕೆ ಮಂಚಣ್ಣನು ಮೃತನಾದ ಸುದ್ದಿ ಮಹಮನೆಗೆ ಬಂದಿತ್ತು.

ಮಾಧವನಾಯಕನ ದ್ವೇಷಾಗ್ನಿ, ಮಹಾಬಲಿಗೆ ಆತುರವಾಗಿಯೇ ಇತ್ತು. ಮನೆಗೆ ಬಂದ ವೇಳೆ ಅವನಿಗೆ ದುರ್ಘಟನೆಯು ಮೊದಲು ಬಿಜ್ಜಳನು ಅಂಕಿತ ಹಾಕಲು ಕೈಗೆತ್ತಿಕೊಂಡ ರಾಜಾಜ್ಞೆಯು ನೆನಪಾಯಿತು. ಮತ್ತೆ ಕುದುರೆಯ ಮೇಲೆ ಕುಳಿತು ಸಮ್ಮುಖದ ಚಾವಡಿಗೆ ಬಂದು ಬಿಜ್ಜಳನ ಕೊಲೆಯಾದ ಕೋಣೆಯನ್ನು ಹೊಕ್ಕು ನೋಡಿದನು. ಅಂಕಿತವಿಲ್ಲದ ಆಜ್ಞಾಪತ್ರವು ರಕ್ತದ ಕಲೆಹತ್ತಿ ದೂರ ಹಾರಿ ಬಿದ್ದಿತ್ತು. ತನಗೆ ಗೊತ್ತಿದ್ದ ಬಿಜ್ಜಳನ ಅಂಕಿತದ ಅಕ್ಷರಗಳನ್ನು ತಾನೇ ಬರೆದು ತನ್ನ ಹತ್ತಿರ ಇಟ್ಟುಕೊಂಡನು.

ಮಾಚಯ್ಯನ ಮುಂಜಾಗ್ರತೆ

ಆ ದಿನ ಇಳಿಹೊತ್ತಿನಲ್ಲಿ ಮಹಮನೆಯಲ್ಲಿ ಹೇರು ಕಟ್ಟುವ ಸಿದ್ಧತೆ ನಡೆದಾಗ ಪಡಿಹಾರಿ ಅಪ್ಪಣ್ಣನು ಸಂಗಮದಿಂದ ಮರಳಿ ಬಂದನು. ಅವನೊಡನೆ ಗಂಗಾಂಬೆ ಬಂದಿದ್ದಳು. ಮೂವರು ಶರಣರ ಕೊಲೆಯ ಸಂಗತಿಯನ್ನು ಅಣ್ಣನವರಿಗೆ ತಿಳಿಸಿ, ವಲಸೆ ಹೋಗುವ ವಿಚಾರದಲ್ಲಿ ಅವರ ಅಭಿಪ್ರಾಯ ಪಡೆಯಲು ಅಪ್ಪಣ್ಣನು ಸಂಗಮಕ್ಕೆ ಹೋಗಿದ್ದನು. ಅಣ್ಣನವರು ಅವನೊಡನೆ ಶರಣರಿಗೆ ಕಳಿಸಿದ ಸಂದೇಶ ಒಂದು ಬೆಡಗಿನ ವಚನವೇ ಆಗಿತ್ತು.

ಜೋಳವಾಳಿಯಾನಲ್ಲ; ವೇಳೆಯಾಳಿಯವ ನಾನಯ್ಯ !
ಹಾಳುಗೆಟ್ಟೋಡುವ ಆಳು ನಾನಲ್ಲವಯ್ಯಾ !
ಕೇಳು ಕೂಡಲಸಂಗಮದೇವಾ, ಮರಣವೆ ಮಹಾನವಮಿ !'

ಸಮಯಕ್ಕೆ ಅನುಗುಣವಾದ ಕ್ರಮದಿಂದ ಅನ್ಯಾಯವನ್ನು ಪ್ರತಿಭಟಿಸಬೇಕಲ್ಲದೆ ಹೆದರಿ ಹಿಂಜರಿಯಬಾರದು ಎಂದು, ಅದರಲ್ಲಿ ಮರಣ ಬಂದರೆ ಸಂತೋಷದಿಂದ ಸ್ವಾಗತಿಸಬೇಕೆಂದು ಅರ್ಥಯಿಸಿ ಶರಣರು ಉತ್ಸಾಹಿತರಾದರು.

ಬಸವಣ್ಣನವರು ಕಲ್ಯಾಣದಿಂದ ಹೊರಡುವಾಗ ನೀಲಲೋಚನೆಯ ಭಾವನೆಯನ್ನು ಗುರುತಿಸಿದ್ದರು. ಅಣ್ಣನವರು ಈಗ ಅವಳನ್ನು ಸಂಗಮಕ್ಕೆ

ಕರೆಯಿಸಿಕೊಳ್ಳುವ ಮನಸ್ಸಿನಿಂದ ಗಂಗಾಂಬೆಗೂ ಅಪ್ಪಣ್ಣನಿಗೂ ಹೇಳಿದ್ದರು. ಗಂಗಾಂಬೆ ಸಂಗಯ್ಯನ ಸಲುವಾಗಿ ಕಲ್ಯಾಣಕ್ಕೆ ಮರಳಿದ್ದಳು. ಆದರೆ ನೀಲಲೋಚನೆ ಇಷ್ಟರಲ್ಲಿ ನಾಗಲಾಂಬೆಯ ಉಪದೇಶದಂತೆ ಸಮಚಿತ್ತ ಸಂಯಮಗಳಿಂದ ಮನದ ವಾಸನೆಗಳನ್ನು ಬಹುಮಟ್ಟಿಗೆ ನಾಶಗೊಳಿಸಿದ್ದಳು. ಅವುಗಳನ್ನು ಪುನಃ ಬಲಗೊಳಿಸುವದು ಸರಿಯೆನಿಸಲಿಲ್ಲ:

"ನಾನಾರ ಸಾರಲೆಂದು ಚಿಂತಿಸಲೇತಕಯ್ಯ ?
ನಾನಾರ ಹೊಂದುವೆನೆಂದು ಭ್ರಮೆ ಪಡಲೇತಕಯ್ಯ ?
ನಾನಾರ ಇರುವನರಿಯಲೆಂದು ಪ್ರಲಾಪಿಸಲೇತಕಯ್ಯ ?
ಪರಿಣಾಮ ದುರ್ಗಿ ಬಸವನನುಭಾವ ಕರಸ್ಥಳದಲ್ಲಿ ಬೆಳಗಿದ ಬಳಿಕ
ಸಂಗಯ್ಯನ ಹಂಗು ನನಗೇತಕಯ್ಯಾ ?

ಎಂದು ಆಲೋಚಿಸಿ ಸಂಗಮಕ್ಕೆ ಹೋಗುವದನ್ನು ಸದ್ಯಕ್ಕೆ ಹಿಂದಿಟ್ಟಳು. ಶರಣರೊಡನೆ ಉಳವಿಯ ಪ್ರಯಾಣವೇ ಅವಳ ಉದ್ದೇಶವಾಗಿತ್ತು.

ಸ್ವಲ್ಪ ಕತ್ತಲಾಗುವ ಹೊತ್ತಿಗೆ ಬಾಂಧವರ ಹಳ್ಳಿಗಳಿಂದ ಇಪ್ಪತ್ತು ಬಂಡಿಗಳು ಬಂದು ಮಹಮನೆಯ ಮುಂದೆ ನಿಂತವು. ದಾರಿಯಲ್ಲಿ ಬೇಕಾಗುವ ದವಸ-ಧಾನ್ಯ ಪಾತ್ರೆ-ಸಾಮಾನುಗಳನ್ನು ನಾಲ್ಕು ತಾಸುಗಳಲ್ಲಿ ಹೇರಿದರು. ಬಾಲಕರು-ವೃದ್ಧರು-ಸ್ತ್ರೀಯರು ಇವರಿಗಾಗಿ ಕುಳಿತುಕೊಳ್ಳಲು ಐದು ಗಾಡಿಗಳು ಸ್ಥಿರವಾಗಿದ್ದವು.

ಮಾಚಯ್ಯನು ನಗರದ ನೈಋತ್ಯದ ಅಗಸಿಯವರೆಗೆ ಹೋಗಿ, ತಮ್ಮ ಮಾರ್ಗ ನಿಷ್ಕಂಟಕವಾಗಿರುವದನ್ನು ನೋಡಿಕೊಂಡು ಮರಳಿ ಬರುತ್ತಿದ್ದನು. ಜನರು ಗುಬುಗುಬು ಮಾತಾಡುತ್ತ ಗಡಬಡಿಸಿ ಓಡಾಡುತ್ತಿರುವದನ್ನು ಕಂಡನು. ಬೇಸಿಗೆಯಾದ್ದರಿಂದ ಬೈಲಿಗೆ ಕುಳಿತವರು ಮಲಗಿದವರು ಎದ್ದು ಮನೆ ಸೇರುತ್ತಿದ್ದರು. ಅಂಗಡಿ ಮುಗ್ಗಟ್ಟುಗಳನ್ನು ಮುಚ್ಚುತ್ತಿದ್ದರು. 'ಹೋಗುವಾಗ ಏನೂ ಇಲ್ಲ; ಮರಳಿ ಬರುವಷ್ಟರಲ್ಲಿ ಇದೇನು?' ಎನ್ನುತ್ತ ಮುಂದೆ ಬಂದು ಮಾಚಯ್ಯನು ತನ್ನ ಪರಿಚಯದ ಸೆಟ್ಟಿಯೊಬ್ಬನನ್ನು ಕೇಳಿದನು. ರಾಜಸಭೆಯ ಅನಂತರ ಸಮ್ಮುಖದ ಚಾವಡಿಯಲ್ಲಿ ಬಿಜ್ಜಳನ ಕೊಲೆಯಾಯಿತೆಂದು ತಿಳಿಯಿತು.

ನೆಟ್ಟಗೆ ಮಹಮನೆಗೆ ಬಂದು ಮಾಚಯ್ಯನು ರಾಜನ ಕೊಲೆಯ ಸುದ್ದಿಯನ್ನು ಚೆನ್ನಬಸವಣ್ಣನಿಗೆ ತಿಳಿಸಿ, ಬಂಡಿಗಳ ಸಿದ್ಧತೆಯ ಕಾರ್ಯವನ್ನು ತ್ವರಿತಗೊಳಿಸಿದನು. ಸೈನಿಕರು ನಗರದಲ್ಲಿ ವ್ಯಾಪಿಸುವ ಮೊದಲು ತಾವು ಹೊರಟು ಹೋಗಬೇಕಾಗಿತ್ತು !

ಅನುಭವ ಮಂಟಪದಲ್ಲಿ ಪ್ರಾರ್ಥನಾ ಸಭೆ ಸೇರಿತು ನಿಯಮಿತ ಸ್ತೋತ್ರ ಪಾಠಗಳಾದವು. ಹನ್ನೆರಡು ವರುಷಕಾಲ ಪರಾತ್ಪರ ತತ್ವದರ್ಶನ ಮಾಡಿಸಿದ ಅನುಭವ ಮಂಟಪವನ್ನು ಬಿಟ್ಟು ಹೋಗಬೇಕಾಗಿತ್ತು. ಎಲ್ಲರ ಭಾವಗಳು ಭಾರವಾಗಿದ್ದವು.

ಮಾಚಯ್ಯನು ವೀರಭದ್ರವಿಜಯ ಖಡ್ಗವನ್ನು ಟೊಂಕಕ್ಕೆ ಬಿಗಿದನು ಮೂರುಸಂಜೆಯಲ್ಲಿ ಬಂದು ಮಹಮನೆಯ ಅತಿಥಿಶಾಲೆಯಲ್ಲಿ ಬೀಡಾರ ಮಾಡಿದ ನೂರುಜನ ಯಾತ್ರಿಕರು ತಮ್ಮ ಗಂಟುಗಳನ್ನು ಬಿಚ್ಚಿ ವೀರವಸ್ತ್ರವನ್ನುಟ್ಟು ಖಡ್ಗಗಳನ್ನು ಕಟ್ಟಿಕೊಂಡು ನಿಂತರು. ಅವರ ರಕ್ಷಣೆಯಲ್ಲಿ ಬಂಡಿಗಳು ಹೊರಟು ನೈಋತ್ಯದ ಮಹಾದ್ವಾರಕ್ಕೆ ಬಂದವು. ಅಲ್ಲಿಯ ದ್ವಾರರಕ್ಷಕನು ಯಾವಾಗ ಯಾವ ಆಜ್ಞೆ ಬಂದೀತೆಂದು ಕಾತುರದಿಂದ ಈ ಯಾತ್ರಿಕರ ದಾರಿಯನ್ನೇ ನೋಡುತ್ತ ನಿಂತಿದ್ದನು ಮೊದಲ ಕೋಳಿ ಕೂಗಿದೊಡನೆ ಮಹಾದ್ವಾರವನ್ನು ತೆರೆದು ಎಲ್ಲ ಬಂಡಿಗಳನ್ನು ಹೊರಗೆ ಹಾಕಿದನು. ಮರುಗಳಿಗೆಯಲ್ಲಿ ಸೂರ್ಯೋದಯದ ಮುನ್ನ ದ್ವಾರಗಳನ್ನು ತೆರೆಯಬಾರದೆಂಬ ಆಜ್ಞೆಯನ್ನು ಅಶ್ವಾರೋಹಿ ಭಟನೊಬ್ಬನು ಬಂದು ಕೊಟ್ಟು ಹೋದನು.

ವಲಸೆಗೆ ಹೊರಟ ನಗರದಲ್ಲಿಯ ಬೇರೆ ಶರಣರು ರಾತ್ರಿಯ ಮೊದಲನೆಯ ಪ್ರಹರದಲ್ಲಿಯೇ ಅರಮನೆಯ ದುರ್ಘಟನೆಗಿಂತ ಮೊದಲೇ ಹೊರಬಿದ್ದು ಮಾರಯ್ಯನ ಆಶ್ರಮದ ಹತ್ತಿರ ತಂಗಿದ್ದರು. ಅವರೂ ಇವರೂ ಸೇರಿ ಸೂರ್ಯೋದಯದ ಸಮಯಕ್ಕೆ ನದಿಯನ್ನು ದಾಟಿ ಶಿಬಿರ ಹಾಕಿದರು.

ಕಲ್ಯಾಣ ಹಾಳಾಯಿತು

ನಗರದಲ್ಲಿ ಇಟ್ಟರು ರಾಜರ ಅಂತ್ಯವಿಧಿಯು ರಾಜವೈಭವದಿಂದ ನಡೆದು ಅಪರಾಹ್ನದಲ್ಲಿ ಮುಗಿಯಿತು. ಅದುವರೆಗೆ ತಲೆದೋರಿದ ಸ್ಮಶಾನ ವೈರಾಗ್ಯವು ಮರುಕ್ಷಣದಲ್ಲಿ ಮರೆಯಾಯಿತು. ಸರ್ವಾಧಿಕಾರವು ತನಗೆ

ಸೇರಿದುದೆಂದು ಕರ್ಣದೇವನು ಸಾರಿದನು. ಮಾಧವನಾಯಕನು ಅದನ್ನು ವಿರೋಧಿಸಿ 'ಸೋವೀದೇವರೇ ಅಧಿಕಾರಿಗಳು. ಅವರು ಬರುವವರೆಗೆ ನಾನಿದನ್ನು ನೋಡಿಕೊಂಡಿರುವೆನು' ಎಂದನು. ರಾಜಾಧ್ಯಕ್ಷ ಚಾವಡಿಯನ್ನು ಆಕ್ರಮಿಸುವ ಸಲುವಾಗಿ ಎರಡೂ ಪಕ್ಷಗಳಲ್ಲಿ ಹೋರಾಟ ನಡೆಯಿತು. ಶರಣರ ಸಹಾನುಭೂತಿ ಇದ್ದರೆ ಸೈನ್ಯದ ಬಹುಭಾಗ ತನಗೆ ಸಹಾಯ ಮಾಡುವದೆಂದು ಕರ್ಣದೇವ ತಿಳಿದಿದ್ದನು. ಅದಕ್ಕಾಗಿ ತನ್ನ ನಂಬಿಗೆಯ ಜನರನ್ನು ಶರಣರ ಶಿಬಿರಕ್ಕೆ ಕಳುಹಿ ಅವರು ಮರಳಿ ಬಂದು ತನಗೆ ಸಹಾಯ ಮಾಡಿದರೆ ತನ್ನ ಆಡಳಿತದಲ್ಲಿ, ಅವರಿಗಿರುವ ಪ್ರತಿಬಂಧಕಗಳನ್ನೆಲ್ಲ ನಿವಾರಿಸುವದಾಗಿ ಕೇಳಿಕೊಂಡನು. ಒಮ್ಮೆ ಸುಟ್ಟ ಬೆಂಕಿಯಲ್ಲಿ ಮರಳಿ ಕೈಯಿಡಲು ಅವರ್‍ಗೆ ಒಪ್ಪಿಕೊಳ್ಳುವದು ಶಕ್ಯವಿರಲಿಲ್ಲ. ಮಾಧವನ ಬಲಹೆಚ್ಚಿ ಕರ್ಣದೇವನು ಸೆರೆಯೊಳಗಾದನು. ಬಳಿಕ ಕರಾಳ ಮೃತ್ಯುವಿನ ಕೈಯೊಳಗಾಯಿತು ಕಲ್ಯಾಣ ನಗರ !

ಚಾವಡಿಯ ಹೋರಾಟದಿಂದ ಇತ್ತ ಶರಣರಿಗೆ ಸ್ವಲ್ಪ ಸಮಯ ಸಿಕ್ಕದ್ದರಿಂದ ಆ ದಿನ ಹಗಲೆಲ್ಲ ಮಾರಯ್ಯನು ನಗರದಲ್ಲಿ ಸಂಚರಿಸಿ ಮತ್ತೆ ಅಸಂಖ್ಯಾತ ಶಿವಭಕ್ತರನ್ನು ಶರಣರನ್ನು ಒತ್ತಾಯದಿಂದ ಹೊರಹೊರಡಿಸಿದನು. ಸಾವಿರಗಟ್ಟಲೆ ಶಿವಶರಣರು ಇನ್ನೂ ಉಳಿದರು. ಸೂರ್ಯಾಸ್ತ ಸಮಯಕ್ಕೇ ನಗರದ ಮಹಾದ್ವಾರಗಳೆಲ್ಲ ಮುಚ್ಚಿದವು. ಸೈನಿಕರ ಅಜ್ಞಗಾವಲು ಕುಳಿತಿತು. ಮಾರನೆಯ ದಿನದ ಹತ್ಯಾಕಾಂಡಕ್ಕೆ ಪುರಕ್ಕೆ ಪುರವನ್ನೇ ಬಂಧಿಸಿಟ್ಟಂತಾಯಿತು.

ನದಿಯ ಆಚೆಯ ಶಿಬಿರದಲ್ಲಿ ಶರಣರು ಆ ಒಂದು ದಿನ ಉಳಿದು ಮತ್ತೆ ಬಂದವರನ್ನೆಲ್ಲ ಕೂಡಿಸಿಕೊಂಡರು. ಶಸ್ತ್ರಧಾರಿಗಳನ್ನು ಬೇರ್ಪಡಿಸಿ ರಕ್ಷಕದಳವನ್ನು ನಿರ್ಮಿಸಿಕೊಂಡರು. ಉಳಿದವರನ್ನು ಪ್ರಯಾಣದಲ್ಲಿಯ ಇನ್ನುಳಿದ ಕೆಲಸಗಳ ಸಲುವಾಗಿ ವರ್ಗೀಕರಿಸಿ ಪ್ರತಿಯೊಂದು ವಿಭಾಗಕ್ಕೆ ಹಿರಿಯರನ್ನು ಗೊತ್ತುಮಾಡಿದರು. ಅರಮನೆಯ ದುರ್ಘಟನೆ, ಶರಣರ ವಲಸೆ ಈ ಸುದ್ದಿಗಳನ್ನು ಅಣ್ಣನವರಿಗೆ ತಿಳಿಸಲು ಅಪ್ಪಣ್ಣನನ್ನು ಮತ್ತೆ ಸಂಗಮಕ್ಕೆ ಕಳಿಸುವದೆಂದು ನಿರ್ಣಯಿಸಿದರು. ಈ ಕಾರ್ಯ ನೆರವೇರಿಸಿ ಸಭೆ ಮುಗಿಯುವ ಘೋಷಣೆಯಲ್ಲಿ ಕೂಡಿಸಿ ಅಂಧಾಭಿಮಾನಿ ಶರಣರು ಕೆಲರು-

'ಬಿಜ್ಜಳನ ವಧೆ ! ಪರವಾದಿಗೆ ಸರಿಯಾದ ಅಂತ್ಯ !

'ಹರಳಯ್ಯ ಮಧುವಯ್ಯಗಳ ಕೊಲೆಯ ಸೇಡು ತೀರಿತು.!

'ಶಿವದ್ರೋಹಕ್ಕೆ ತಕ್ಕ ಶಾಸನ !'

ಎಂದು ಕೂಗಾಡಿದರು.

ಚೆನ್ನಬಸವಣ್ಣನು ಕಾತರದಿಂದ ಮಾಚಯ್ಯನ ಮುಖನೋಡಿದನು. ಮಾಚಯ್ಯನು ಅವರೆಲ್ಲರಿಗೆ ಸುಮ್ಮನಾಗಲು ಸನ್ನೆಮಾಡಿ ಶಾಂತವಾದ ಬಳಿಕ ಪುನಃ ಹೇಳಿದನು.

"ದಯವಿಟ್ಟು ಕುಳಿತು ನನ್ನ ಮತ್ತೆರಡು ಮಾತುಗಳನ್ನು ಕೇಳಿರಿ. ನೀವೀಗ ಕೂಗಿದ ಘೋಷಣೆಗಳು ನನ್ನನ್ನು ದುಃಖಕ್ಕೀಡು ಮಾಡಿವೆ. ಚೆನ್ನಬಸವಣ್ಣನವರೂ ಕಳವಳಗೊಂಡಿದ್ದಾರೆ. ಬಿಜ್ಜಳನು ಪರವಾದಿ; ಮೂವರು ಶರಣರನ್ನು ನಿರ್ದಯವಾಗಿ ಕೊಲ್ಲಿಸಿದನು; ಶರಣರನ್ನು ನಿರ್ಮೂಲನಗೊಳಿಸುವದು ಅವನ ಉದ್ದೇಶವಾಗಿತ್ತು. ಇದೆಲ್ಲವನ್ನು ನಾನು ಒಪ್ಪಿಕೊಳ್ಳುತ್ತೇನೆ- ಆದರೆ ಅದಕ್ಕಾಗಿ.—

ಬಿಜ್ಜಳನ ವಧೆಯನ್ನು ಶರಣರು ಬಯಸಲಿಲ್ಲ.
ಅದಕ್ಕೆ ಯತ್ನಿಸಲೂ ಇಲ್ಲ.
ಈಗ ನಮಗೆ ಅದರಿಂದ ಸಂತೋಷವೂ ಆಗಿಲ್ಲ.

ಅವನ ಅತ್ಯಾಚಾರದಿಂದ ಸರ್ವಸ್ವದ ಬಲಿಯಾಗಬಾರದೆಂದು ಸ್ವಧರ್ಮದ ರಕ್ಷಣೆಗೆ ವಲಿಸೆ ಹೊರಟಿದ್ದೇವೆ. ಬಿಜ್ಜಳನು ನೀಡಬಹುದಾದ ಕಷ್ಟಗಳಿಗಿಂತ. ಅವನ ಕೊಲೆಯ ಮೂಲಕ ಹೆಚ್ಚಿನ ಕಷ್ಟಗಳಿಗೆ ನಾವು ಗುರಿಯಾಗುತ್ತಿದ್ದೇವೆ. ಬಿಜ್ಜಳನ ಮರಣದಿಂದ ಸಂತೋಷಗೊಳ್ಳುವವರು ಕೆಲವರಾದರೂ ಇದ್ದರೆ ಅವರು ತಮ್ಮ ಮೂರ್ಖತನವನ್ನು ತಿಳಿದುಕೊಳ್ಳಬೇಕು." ಕೂಗಾಡಿದವರು ತಲೆ ತಗ್ಗಿಸಿದರು

ಮುಂಬರುವ ಪ್ರಾತಃಕಾಲದಲ್ಲಿ ಶರಣರು ಶಿಬಿರವನ್ನು ಕಿತ್ತಿ ಮುಂದೆ ಪ್ರಯಾಣ ಮಾಡಿದರು. ಇನ್ನೂ ಹೊರಬೀಳದೆ ನಗರದಲ್ಲಿ ಉಳಿದ ಶರಣರ ರಕ್ಷಣೆಯ ಆಸೆಯಿಂದ ಮಾರಯ್ಯನವರು ಹಿಂದುಳಿದರು. ಆದರೆ ಅವಕಾಶ ಕಳೆದು ಹೋಗಿತ್ತು.

ಕರ್ಣದೇವನ ಕಡೆಯಿಂದ ಹೋರಾಡಿದ ಪ್ರಮುಖರನ್ನು ಮಾಧವನಾಯಕನು ಸೆರೆಹಿಡಿದನು. ಸೈನಿಕರಲ್ಲಿ ಕೆಲವರು ಅವನಿಗೆ ಶರಣಾಗತರಾದರು. ಕೆಲವರು ತಪ್ಪಿಸಿಕೊಂಡು ಶರಣದಲವನ್ನು ಸೇರಿದರು.

ಎರಡನೆಯ ದಿವಸ ಮಾಧವನು ತಾನು ಕೃತ್ರಿಮವಾಗಿ ಅಂಕಿತಗೊಳಿಸಿದ ಶರಣ ಧರ್ಮಸಂಸ್ಥೆಗಳನ್ನು ನಾಶಮಾಡಬೇಕೆಂಬ ಬಿಜ್ಜಳನ ರಾಜಾಜ್ಞೆಯನ್ನು ಪ್ರಕಟಿಸಿ ಅದನ್ನು ಕಾರ್ಯಗತಗೊಳಿಸಲು ಸೈನಿಕರಿಗೆ ಅಪ್ಪಣೆ ಮಾಡಿದನು. ವಿಧ್ವಂಸಕರ ದೊಡ್ಡ ತಂಡ ಮಹಮನೆಯನ್ನು ಹೊಕ್ಕಿತು. ಅವರು ಅದನ್ನು ಸುಟ್ಟು ಕೆಡಹಿ ನೆಲಸಮ ಮಾಡಿದರು. ಕಲ್ಯಾಣದ ಹೆಸರಾದ ಶಿಲ್ಪಿಗಳು ಪವಿತ್ರಮನದಿಂದ ನಿರ್ಮಿಸಿದ ಮಹಾಮಂದಿರವು ಶೀಲವಂತನ ಮನೋಹರವಾದ ಚಿತ್ರಗಳೊಡನೆ ಕೆಲವು ತಾಸುಗಳಲ್ಲಿ ಹಾಳಾಗಿ ಹೋಯಿತು. ಅದರ ಭಯಾನಕ ಅವಶೇಷಗಳಂತೆ ಕಲ್ಲಿನ ಕಂಬಗಳು ಮಾತ್ರ ನಿಂತವು. ನಗರದಲ್ಲಿಯೂ ಇದೇ ಬಗೆಯಾಗಿ ಎಲ್ಲ ಶೈವ ಮಠಗಳ ನಾಶವು ಏಕಕಾಲಕ್ಕೆ ನಡೆಯಿತು. ಅಡ್ಡ ಬಂದವರನ್ನು ಕೊಂದು ಹಾಕಿದರು. ಪೂಜಾ-ಜಪ-ಧ್ಯಾನಗಳಲ್ಲಿದ್ದ ಭಕ್ತ-ಗುರು-ಜಂಗಮರನ್ನು ನಿರ್ದಯವಾಗಿ ಬೀದಿಗೆಳೆದು ಕೊಂದರು. ಅವರ ಆ ಹಿಂಸೆಯಿಂದ ಪಾರಾಗಲು ಹಲವರು ತಾವಾಗಿ ಅಗ್ನಿಪ್ರವೇಶವನ್ನು ಮಾಡಿದರು; ಕೆರೆಬಾವಿಗಳಲ್ಲಿ ಬಿದ್ದರು. ಮಾರಯ್ಯನ ಮಾತು ಕೇಳದೆ ನಗರದಲ್ಲಿ ಉಳಿದ ಶಿವಭಕ್ತರು ದಳ್ಳುರಿಗೆದುರಾದ ಪತಂಗಗಳಂತೆ ನಾಶವಾದರು. ಶರಣ ಧರ್ಮದವರು ಇನ್ನುಳಿಯಲಿಲ್ಲವೆಂದು ಗೊತ್ತಾದ ಬಳಿಕ ಉನ್ಮತ್ತರಾದ ದಂಡಾಳುಗಳು ಶ್ರೀಮಂತ ನಾಗರಿಕರನ್ನೂ ವರ್ತಕರನ್ನೂ ಕೊಳ್ಳೆ-ಸುಲಿಗೆಗಳಿಂದ ಘಾಸಿಗೊಳಿಸಿದರು.

ಭೂಮಂಡಲದಲ್ಲಿ ಕಲ್ಯಾಣವನ್ನು ಸರಿಗಟ್ಟುವ ನಗರವಿಲ್ಲೆಂದು ವಿಜ್ಞಾನೇಶ್ವರನಿಂದ ಹೊಗಳಿಸಿಕೊಂಡ ಮಹಾನಗರದ ಮುಖ್ಯ ಮುಖ್ಯ ಭಾಗಗಳು ಎರಡು ದಿನಗಳಲ್ಲಿ ಸ್ಮಶಾನವಾದವು. ಆ ಮೇಲೆ ರಾಜಧಾನಿ ತುಂಬಿ ಪುರದಲ್ಲಿ ಸಂಚರಿಸುತ್ತಿರುವ ಅತ್ಯಾಚಾರಿ ಸೈನಿಕರನ್ನು ಅಂಕೆಯಲ್ಲಿ ತರುವದು ಮಾಧವನಾಯಕನಿಗೂ ಬಿಗಿಯಾಯಿತು. ಅವರೆಲ್ಲರನ್ನು ದಳಬದ್ಧರಾಗಿ ಕೂಡಿಸಿ ಬೀಡಾರಗಳಿಗೆ ಕಳಿಸಲು ಮತ್ತೆರಡು ದಿನಗಳು ಹಿಡಿದವು. ಬಳಿಕ ಮಾಧವನಾಯಕನು ಸೈನ್ಯದಲ್ಲಿ ಹೊಸ ವ್ಯವಸ್ಥೆಯನ್ನು ಮಾಡಿ

ಕೊಂಡು, ಕೆಲವು ಸೈನಿಕರೊಡನೆ ವಲಸೆ ಹೋದ ಶರಣರನ್ನು ಬೆನ್ನಟ್ಟಿ ನಡೆದನು. ಈ ಸುದ್ದಿಯನ್ನು ಪ್ರಯಾಣದಲ್ಲಿರುವ ಶರಣರಿಗೆ ಮುಂಜಾಗ್ರತೆಗಾಗಿ ತಿಳಿಸುವಂತೆ ಮಾರಯ್ಯನು ಅವಸರದ ಜಂಗಮರನ್ನು ಬೇರೆ ಮಾರ್ಗದಿಂದ ಕಳುಹಿ, ತನ್ನ ಕೊನೆಯ ಕರ್ತವ್ಯವನ್ನು ಮಾಡಿದನು. ಗುಪ್ತಸ್ಥಳದಲ್ಲಿ ಮತ್ತೆ ತನ್ನ ಪರಮಾನುಭವದಲ್ಲಿ ಮುಳುಗಿದನು.

ಮಾಧವನು ಸೈನ್ಯದೊಡನೆ ಹೊರಟು ಹೋದಬಳಿಕ ಉಳಿದ ನಾಗರಿಕರಿಗೆ ಉಸಿರಾಡಿಸುವಂತಾಯಿತು. ಆದರೂ ಅರಾಜಕತೆಯ ಭಯ ತಪ್ಪಿರಲಿಲ್ಲ. ತಂದೆಯ ಮರಣದ ಸುದ್ದಿಯನ್ನು ಕೇಳಿ ಮಂಗಳವೇಡೆಯಿಂದ ಸೋವಿದೇವನು ತನ್ನ ಬಲದೊಡನೆ ಬಂದನು. ಆ ಬಳಿಕ ಕಲ್ಯಾಣದ ನಗರ ಜೀವನವು ಮತ್ತೆ ಆರಂಭವಾಯಿತು.

ರಾಜ್ಯಾಧಿಕಾರವನ್ನು ತನ್ನ ಕಡೆಗೆ ತೆಗೆದುಕೊಂಡು ಸೋವಿದೇವನು ತಂದೆಯ ಮರಣದ ಮತ್ತು ಉಳಿದ ಅನಾಹುತಗಳ ವಿಚಾರಣೆ ನಡಿಸಿದನು. 'ಹರಳಯ್ಯ-ಮಧುವಯ್ಯಗಳನ್ನು ಕೊಲ್ಲಿಸಿದ ಬಿಜ್ಜಳನನ್ನು ಕೊಂದ ವೀರಕುಮಾರರು ನಾವು' ಎಂದು ಕೂಗುತ್ತ ಹೋದವರು ಶರಣರ ಪರವಾಗಿಯೇ ಬಿಜ್ಜಳನನ್ನು ಕೊಂದರೆಂಬುದೇ ಜನರಲ್ಲಿ ಮೂಡಿದ ಕಲ್ಪನೆಯಾಗಿತ್ತು. ಅದನ್ನೇ ಮಾಧವನಾಯಕನು ಹೆಚ್ಚಾಗಿ ಪ್ರಚುರಗೊಳಿಸಿದ್ದನು. ಆದರೆ 'ಬಂದಿಯಾಗಿದ್ದ ಜಗದೇಕಮಲ್ಲ ಚಕ್ರವರ್ತಿಯು ಶರಣರ ಪರವಾಗಿ ಹಂತಕನಾದನೇಕೆ ?' ಎಂಬುದು ಸೋವಿದೇವನಿಗೆ ಸಮಸ್ಯೆಯಾಗಿತ್ತು. ರಾಜಗೃಹದಲ್ಲಿ ಜಗದೇಕಮಲ್ಲನ ಹಾಸಿಗೆ ಕೆಳಗೆ ಸಿಕ್ಕ ಮಾಹೇಶ್ವರಿಯ ಪತ್ರವನ್ನು ಅಲ್ಲಿಯ ಹೆಗ್ಗಡೆಯು ತಂದು ತನ್ನ ಹೇಳಿಕೆಯೊಡನೆ ತೋರಿಸಿದ ಬಳಿಕ ತಂದೆಯ ಕೊಲೆಯ ಕಾರಣವು ಯಾವುದೆಂಬುದು ತಿಳಿಯಿತು. ಆದರೂ ಆ ಸಮಯದಲ್ಲಿ ತಲೆಮರಿಸಿಕೊಂಡ ಬ್ರಹ್ಮೇಂದ್ರ ಶಿವಯೋಗಿ ಮಹಮನೆಯಿಂದ ಬಂದವನಾದ್ದರಿಂದ ಮೊದಲಿನ ಮಾತು ಸಂದೇಹದಲ್ಲಾದರೂ ಉಳಿದು ಬಿಟ್ಟಿತು. ಹಾಗೆ ಜಗದೇಕಮಲ್ಲದೇವನೊಡನೆ ಕೂಡಿ ಕೊಲೆಮಾಡಿದವನು ಅವನ ಸ್ನೇಹಿತನಾದ ನಿಡುಗಲ್ಲ ಕಂಪಣದ ಬೊಮ್ಮರಸನೆಂಬುದು ಸೋವಿದೇವನಿಗೆ ಬಹಳ ದಿವಸಗಳ ಮೇಲೆ ಗೊತ್ತಾಯಿತು.

---

೧೭. ಸಂಗಮದಲ್ಲಿ

ಕೊನೆಯ ಬದುಕು

ಕಲ್ಯಾಣವನ್ನು ಬಿಟ್ಟುಬಂದ ಬಸವಣ್ಣನವರು ಸಂಗಮವನ್ನು ಕುರಿತು ದಕ್ಷಿಣಾಭಿಮುಖವಾಗಿ ಪ್ರಯಾಣಿಸುತ್ತಿದ್ದರು. ಸಂಗಮದಲ್ಲಿ ವಾಸಿಸುವ ದೆಂದು ಸಂಕಲ್ಪವಾಗಿತ್ತು. ಅಲ್ಲಿ ಈಗ ಅವರ ಗುರುವರೇಣ್ಯ ಜಾತವೇದಿ ಮುನಿಗಳಿರಲಿಲ್ಲ. ತೀರ ವೃದ್ಧರಾಗಿ ಕಳೆದ ವರ್ಷವೇ ಅವರು ಲಿಂಗದೊಳ ಗಾಗಿದ್ದರು. ಆದರೂ ಅಣ್ಣನವರ ವ್ಯಕ್ತಿತ್ವಕ್ಕೆ ರೂಪಕೊಟ್ಟು ಜೀತನವನ್ನು ತುಂಬಿ ಪ್ರವರ್ಧಮಾನಗೊಳಿಸಿದ ಸಂಗಮದ ಅವ್ಯಕ್ತ ನೆನಹು ಅವರನ್ನು ಅವರಿಗೆ ತಿಳಿಯದ ಹಾಗೆ ಅಲ್ಲಿಗೆ ಎಳೆಯುತ್ತಿತ್ತು. ಅವರು ಅನುಭಾವದ ತುದಿಯಲ್ಲಿ ವಿಹರಿಸುತ್ತಿದ್ದುದರಿಂದ ಅದು–ಇದು, ಅಲ್ಲಿ–ಇಲ್ಲಿ, ನಾನು–ತಾನು ಎಂಬ ಭಾವ ಭ್ರಮೆಗಳ ಸುಳಿವಿಲ್ಲದೆ ಭಾವಾಭಾವದಿಂದ ಸಾಗಿದ್ದರು.

ಅಣ್ಣನವರ ಪ್ರಯಾಣದ ಸುದ್ದಿ ಮುಂಚಿತವಾಗಿ ಬಂದುದರಿಂದ, ಸಂಗ ಮದಲ್ಲಿ ಅವರನ್ನು ಬರಮಾಡಿಕೊಳ್ಳುವ ಸಿದ್ಧತೆಗಳು ಉತ್ಸಾಹದಿಂದ ನಡೆದಿ ದ್ದವು. ವಿದ್ಯಾಪೀಠದ ಆಗಿನ ಕುಲಪತಿಗಳು ಅವರ ವಾಸಕ್ಕೆ ತಕ್ಕ ಮಂದಿರ ವನ್ನು ಗೊತ್ತುಮಾಡಿದರು. ಅವರ ಪ್ರವಚನ ಸಭೆ ನಡೆಯುವದಕ್ಕೆ ಬಹು ದೊಡ್ಡ ಛಪ್ಪರವನ್ನು ಹಾಕಿಸಿದರು. ಮನಸ್ಸು ಪ್ರಸನ್ನವಾಗುವ ರೀತಿಯಲ್ಲಿ ಅವುಗಳನ್ನು ಅಲಂಕರಿಸಿದರು. ಬಳಿಕ ಪ್ರಯಾಣದ ಸೌಕರ್ಯದಿಂದ ನದಿ ಯನ್ನು ದಾಟಿಸಿಕೊಂಡು ಅಣ್ಣನವರನ್ನು ಕರೆದುಕೊಂಡು ಬರುವದಕ್ಕೆ ಅಧ್ಯಾಪಕರೊಬ್ಬರೊಡನೆ ವಿದ್ಯಾರ್ಥಿಗಳ ತಂಡವನ್ನು ಒಂದು ದಿನದ ಪ್ರಯಾ ಣಕ್ಕೆ ಎದುರಿಗೆ ಕಳಿಸಿದರು. ಸಂಗಮದ ಈ ಆದೇಶವು, ಕೂಡಲಸಂಗನ ಉತ್ಕಟ ಕರುಣೆಯೋ ಎಂದು ಬಸವರಾಜದೇವರು ಬಿಜ್ಜಳನ ಸರಂಜಾಮುವನ್ನು ಅಲ್ಲಿಂದಲೇ ಮರಳಿ ಕಳಿಸಿ ಕೂಡಲಸಂಗಮಕ್ಕೆ ಬಿಜಯಂಗೈದರು. ಕಲ್ಯಾ ಣದ ಘಟನೆಗಳು ಅವರ ನೆನಹಿನಲ್ಲಿ ಉಳಿದಿರಲೇ ಇಲ್ಲ. ಅವರ ಜೀವನದ ಕೊನೆಯ ಬದುಕು ಸ್ವಾನುಭವಜ್ಞಾನದಾನದಿಂದ ಆರಂಭವಾಯಿತು.

ಆಶ್ರಮದ ದಕ್ಷಿಣಕ್ಕೆ ಮಲಪ್ರಭೆಯ ಪಶ್ಚಿಮ ದಡದ ಮೇಲಿನ ಶಿಲಾ ಮಂಟಪವೊಂದರಲ್ಲಿ ಅಣ್ಣನವರ ಪೂಜಾನುಸಂಧಾನಗಳು ನಡೆಯುತ್ತಿದ್ದವು. ಪ್ರಸಾದದ ಏರ್ಪಾಡು ಅಲ್ಲಿಯೇ ಆಗುತ್ತಿತ್ತು. ಆಶ್ರಮದಲ್ಲಿಯ ವಾಸ ಮಂದಿರದಲ್ಲಿ ವಿಶ್ರಾಂತಿ, ಗ್ರಂಥಾವಲೋಕನಗಳು ನಡೆಯುತ್ತಿದ್ದವು. ಗುರು ಕುಲದ ಅಧಿಪತ್ಯವನ್ನು ಅಣ್ಣನವರಿಗೆ ಅರ್ಪಿಸಬೇಕೆಂದು ಪ್ರಾಧ್ಯಾಪಕರೆಲ್ಲರು ಕೂಡಿ ನಿರ್ಣಯಿಸಿದರು. ಆದರೆ ಅಣ್ಣನವರು ಒಪ್ಪಲಿಲ್ಲ. ವಿದ್ಯಾಪೀಠದಲ್ಲಿ ತತ್ವಜ್ಞಾನದ ಬೋಧಕರಾಗಿ ಸೇವೆ ಸಲ್ಲಿಸಲು ಒಪ್ಪಿಕೊಂಡರು. ಅದನ್ನೂ ಸಾಯಂಕಾಲ ಸರ್ವರಿಗಾಗಿ ಪ್ರವಚನವನ್ನೂ ನಿರ್ವಹಿಸುತ್ತ ಕಾಲಕ್ಷೇಪ ನಡಿಸಿದರು.

ಕಲ್ಯಾಣದಲ್ಲಿ ಮಧುವರಸಾದಿಗಳನ್ನು ಮರಣದಂಡನೆ ವಿಧಿಸಿ ಕೊಲೆ ಗೈದುದನ್ನೂ ಶರಣರಿಗೆ ವಿಪತ್ತು ಪ್ರಾಪ್ತವಾದುದನ್ನೂ ಅಣ್ಣನವರಿಗೆ ತಿಳಿಸಿ, ಅವರ ಸಂದೇಶವನ್ನು ತೆಗೆದುಕೊಂಡು, ಪಡಿಹಾರಿ ಅಪ್ಪಣ್ಣನು ತಿರುಗಿ ಹೋಗು ವಾಗ ಅವನ ರಕ್ಷಣೆಯಲ್ಲಿ ಗಂಗಾಂಬೆ ಕಲ್ಯಾಣಕ್ಕೆ ಮರಳಿದಳು. ಕಲ್ಯಾಣ ದಲ್ಲಿ ಉಳಿದ ಸಂಗಯ್ಯನಿಗಾಗಿ ಅವಳು ಮರಳುವದು ಅಗತ್ಯವೆನಿಸಿತ್ತು. ಅಣ್ಣನವರು ಅವಳಿಗೆ ನೀಲಲೋಚನೆಯನ್ನು ಕಳಿಸಲು ಹೇಳಿದ್ದರು. ಆದರೆ ಯಾವ ಯೋಜಿತ ಕಾರ್ಯಗಳೂ ನಡೆಯಲು ಆಸ್ಪದವಾಗದಂತೆ, ಕಲ್ಯಾಣ ದಲ್ಲಿ ಭೀತಿಕಾರಕ ಘಟನೆಗಳು ಮಿಂಚಿನವೇಗದಿಂದ ನಡೆದು ಬಿಟ್ಟವು. ಇಲ್ಲಿ ಅಣ್ಣನವರು ತಮ್ಮ ಉಪಚಾರವನ್ನು ತಾವೇ ಮಾಡಿಕೊಳ್ಳುತ್ತಿದ್ದರು. ಆದರೂ ಅವರಿಗೆ ನೆರವಾಗಲು ಕುಲಪತಿಗಳು ವಟುಗಳನ್ನು ಕಳಿಸುತ್ತಿದ್ದರು. ಅಣ್ಣನವರ ಸೇವೆಯೆಂದರೆ ಅಂದೊಂದು ಉಚ್ಚತರದ ಪಾಠಕ್ರಮವೆಂದು ವಟುಗಳ ಉತ್ಸಾಹ ದಿಂದ ನಾನು ತಾನು ಎಂದು ಆತುರಪಡುತ್ತಿದ್ದರು.

ಅಣ್ಣನವರು ಪ್ರಾತಃಕಾಲದಲ್ಲಿ ನಿತ್ಯಕ್ರಿಯೆ ಲಿಂಗೋಪಾಸನೆಗಳನ್ನು ಕೈಕೊಂಡು ಹೊತ್ತು ಹುಟ್ಟಿದ ಮೂರು ಘಳಿಗೆಯೊಳಗಾಗಿ ಮುಗಿಸುತ್ತಿದ್ದರು. ಮುಂದೆ ಐದು ಗಳಿಗೆಯ ಹೊತ್ತು ವಿದ್ಯಾರ್ಥಿಗಳಿಗೆ ಅಧ್ಯಾತ್ಮಶಾಸ್ತ್ರದ ಪಾಠ ಹೇಳುವರು. ಬಳಿಕ ಸ್ವಾನುಭವಸಾಧನೆ ಪ್ರಸಾದ ಸೇವನೆ ಮಾಡಿ ಅಪರಾಹ್ನ ದಲ್ಲಿ ಗ್ರಂಥಾವಲೋಕನದಲ್ಲಿ ಕಾಲಕಳೆಯುವರು. ಬಳಿಕ ಸಾಯಂಕಾಲ ಸರ್ವ ರಿಗಾಗಿ ಪ್ರವಚನ ಮಾಡುವರು. ಅವರ ಪ್ರವಚನಗಳಿಗೆ ಗುರುಕುಲದ ಜನ

ರಲ್ಲದೆ ಸುತ್ತಲಿನ ಹಳ್ಳಿಗಳ ಜನರೂ ಬರುತ್ತಿದ್ದರು. ಮೂರು ತಿಂಗಳಲ್ಲಿ ಸಂಗಮವು ಮತ್ತೆ ಮಹಾಯಾತ್ರಾಸ್ಥಳವಾಯಿತು. ಹೀಗೆ ಅಣ್ಣನವರ ಕೊನೆಯ ಕಾಯಕ ಬದುಕು ಸಾಗಿರುವಾಗ ಆ ಜೀವಜ್ಯೋತಿಯು ಮಹಾಜ್ಯೋತಿಯಲ್ಲಿ ಬೆರೆಯುವ ದಿನವು ಯಾರಿಗೂ ತಿಳಿಯದೆ ಸನ್ನಿಹಿತವಾಗಿತ್ತು.

ಆ ದಿನ ಬಸವಣ್ಣನವರ, ಬಸವ ತಂದೆಯ, ಬಸವ ಗುರುವಿನ, ಬಸವ ರಾಜದೇವರ ಪ್ರವಚನವು ಬಹು ಸಡಗರದಿಂದ ಸಾಗಿತ್ತು. ಭಕ್ತಿಯ ಸ್ವರೂಪ ಭಕ್ತನ ಲಕ್ಷಣಗಳನ್ನೂ ಭಕ್ತಿಗೆ ಭಕ್ತಿಯ ಸ್ವರೂಪವೇ ಪ್ರತಿಫಲವು. ಮೋಕ್ಷವು ಭಕ್ತಿಯ ಒಡಲಿನಲ್ಲಿ ಅದರದೊಂದಂಶವಾಗಿರುವದು ಎಂಬುದನ್ನು ಹೇಳುತ್ತಾ ನಿರತಿಶಯ ಭಕ್ತಿ ಭರವೇ ನಿಜಲಿಂಗೈಕ್ಯ ಸ್ಥಿತಿಯೆನ್ನುವ ಮಟ್ಟಿಗೆ ವಿವರಣೆ ಉನ್ನತಮಟ್ಟಕೇರಿದಾಗ ಶ್ರೋತೃಗಳ ಮನೋಭಾವಗಳೆಲ್ಲ ಅಣ್ಣನವರ ನುಡಿಗಳಲ್ಲಿ ಲೀಯವಾಗಿದ್ದವು ಕಡೆಯಲ್ಲಿ–

"ಅಂಗೈಯೊಳಗಣ ಲಿಂಗವ ನೋಡುತ್ತ
    ಕಂಗಳು ಕಡೆಗೋಡಿವರಿವುತ್ತ ಸುರಿವುತ್ತ ಎಂದಿಪ್ಪೆನೋ?
ನೋಟವೇ ಪ್ರಾಣವಾಗಿ ಎಂದಿಪ್ಪೆನೋ?
ಕೂಟವೇ ಪ್ರಾಣವಾಗಿ ಎಂದಿಪ್ಪೆನೊ
    ಎನ್ನಂಗ ವಿಕಾರದ ಸಂಗವಳಿದು,
ಕೂಡಲಸಂಗಯ್ಯಾ, ಲಿಂಗಯ್ಯಾ ಲಿಂಗ ಲಿಂಗ ಲಿಂಗ ಎನ್ನುತ್ತ?"

ವಚನ ಗೀತ ಹೇಳಿ ಜನಸಮುದಾಯದೊಡನೆ ತಾವೂ ಪರವಶರಾದರು. ಕೆಲವು ಕ್ಷಣಗಳ ನಂತರ ಕಣ್ದೆರೆದು ಮೆಲ್ಲನೆ ಶಾಂತಿಪಾಠ ಹೇಳಿ ಮುಕ್ತಾಯವನ್ನು ಸೂಚಿಸಿ ಕೈಮುಗಿದರು. ಬಳಿಕ ಅಕಸ್ಮಾತ್ತಾಗಿ ಬದಿಗೆ ಹೊರಳಿದಾಗ, ವೇದಿಕೆಯ ಹತ್ತಿರ ಕಂಬನಿದುಂಬಿ ಅಧೋವದನನಾಗಿ ನಿಂತ ಪಡಿಹಾರಿ ಅಪ್ಪಣ್ಣನನ್ನು ಕಂಡರು.

ಕಲ್ಯಾಣದ ವಾರ್ತೆ

"ಇದೇನು ಅಪ್ಪಣ್ಣ, ಯಾವಾಗ ಬಂದೆ? ಹೀಗೆ ಬಾಡಿದ ಮುಖವೇಕೆ?"

"ಪ್ರವಚನ ಪ್ರಾರಂಭವಾಗಿ ಸ್ವಲ್ಪದರಲ್ಲಿ ಬಂದೆನು ಅಣ್ಣನವರೆ, ಹೊರಗಡೆಯೇ ನನ್ನನ್ನು ನೋಡಿದ ಕುಲಪತಿಗಳ ಹತ್ತಿರ ಕೆಲಹೊತ್ತು ಮಾತಾಡಿ ಒಳಗೆ ಬಂದೆನು."

"ಕಲ್ಯಾಣದ ಕಡೆಯು ವಿಚಾರವೇನು ?"

ಅಪ್ಪಣ್ಣ ಮುಂದಕ್ಕೆ ಬಾಗಿ ಮೆಲ್ಲನೆ ಹೇಳಿದನು. ಕಂಬನಿ ಎರಡು ನೆಲಕ್ಕೆ ಬಿದ್ದವು.

"ಕಲ್ಯಾಣದ ಕತೆ ಮುಗಿಯಿತು ಗುರುದೇವಾ! ಶರಣರು ಕಲ್ಯಾಣವನ್ನು ತ್ಯಜಿಸಿ ಉಳವೆಗಾಗಿ ಹೊರಟರು. ಅದೇ ರಾತ್ರಿ ಯಾರೋ ಬಿಜ್ಜಳ ರಾಜನ ಕೊಲೆ ಮಾಡಿದರು. ಮಾಧವನಾಯಕನು ಮಾರನೆಯ ದಿನ ಸೈನಿಕರಿಂದ ಮಹಮನೆಯನ್ನೂ, ನಗರದಲ್ಲಿಯ ಎಲ್ಲ ಲಿಂಗವಂತರ ಮಠಗಳನ್ನೂ, ಶಿವಪುರವನ್ನೂ ಧ್ವಂಸಗೊಳಿಸಿ ಹಿಂದೆ ಉಳಿದ ಶರಣರನ್ನು ಕೊಲ್ಲಿಸಿದನು. ಅಷ್ಟರಲ್ಲಿ ಮೋಳಿಗೆಯ ಮಾರಯ್ಯನವರು ಬಂದು ಹಗಲೆಲ್ಲ ಸುತ್ತಾಡಿ ಒತ್ತಾಯದಿಂದ ಎಷ್ಟೋ ಶರಣರನ್ನು ನಗರದಿಂದ ಹೊರಗೆ ಸಾಗಿಸಿದ್ದರು. ಅವರ ಮಾತು ಮೀರಿ ಉಳಿದವರು ನಾಶವಾದರು. ಮಾಧವನಾಯಕನು ವಲಸೆ ಹೊರಟ ಶರಣರನ್ನು ಬೆನ್ನಟ್ಟುವ ಸನ್ನಾಹದಲ್ಲಿ ಇದ್ದಾನೆಂದು ತಿಳಿಯಿತು. ಈ ಸಂಗತಿಯನ್ನು ನಿಮಗೆ ಅರಿಕೆ ಮಾಡಲು ಚಿಕ್ಕದಣ್ಣಾಯಕರು ಹೇಳಿದರು. ಅವಸರದಿಂದ ಪ್ರಯಾಣಮಾಡಿ ಬಂದೆನು. ನೀಲಮ್ಮ ತಾಯಿ ಕೊಟ್ಟ ಪತ್ರಿಕೆಯಿದು."

ಎಂದು ಒಂದು ಬಿಡಿ ಪತ್ರವನ್ನು ಮುಂದಿಟ್ಟನು.

ಅಣ್ಣನವರು ಮೂಕರಾಗಿ ಕುಳಿತಿದ್ದರು. ಹಲವು ಘಟನೆಗಳ ನೆನಹು ಅವರ ಚಿತ್ತದಲ್ಲಿ ತಳಮಳವೆಬ್ಬಿಸಿದ್ದವು. ನಿಶ್ಶಬ್ದಸಾಗರದಂತೆ ಇದ್ದ ಶ್ರೋತೃಸಮುದಾಯದಲ್ಲಿ ಗುಜುಗುಜು ನಡೆಯಿತು. ಕುಲಪತಿಗಳು ಕೈಯೆತ್ತಿ ಸುಮ್ಮನಿರಿಸಿ, ಬಂದ ಸುದ್ದಿಯನ್ನು ಪ್ರಕಟಿಸುವದಕ್ಕಾಗಿ ಅಣ್ಣನವರ ಸಾಜ್ಞಿಕ ಒಪ್ಪಿಗೆಯನ್ನು ಪಡೆದು ಮಾತನಾಡಿದರು.

"ಕಲ್ಯಾಣದಲ್ಲಿ ವಿಷಾದಕರ ಘಟನೆಗಳು ನಡೆದ ವಾರ್ತೆಯನ್ನು ಅಪ್ಪಣ್ಣ ಶರಣರು ತಂದಿದ್ದಾರೆ. ಬಿಜ್ಜಳರಾಜರು ಶರಣರಲ್ಲಿ ಶರಣಧರ್ಮದಲ್ಲಿ ವಿರೋಧವನ್ನು ತಾಳಿದ್ದಾರೆಂಬದನ್ನು ಕೇಳಿದ್ದೀರಿ. ಅವರಿಂದ ಛಲಿಸಲ್ಪಟ್ಟ ಶರಣರು ಕಲ್ಯಾಣವನ್ನು ಬಿಟ್ಟು ವಲಸೆಹೊರಟಿದ್ದಾರೆ. ಅವರು ಹೊರಟ ದಿನವೇ ಬಿಜ್ಜಳರಾಜರ ಕೊಲೆಯಾಗಿದೆ. ಸೇನಾಪತಿ ಮಾಧವ

ನಾಯಕನಿಂದ ಅನುಭವಮಂಟಪದ ಮಹಮನೆಗಳು ನಾಶಮಾಡಲ್ಪಟ್ಟಿವೆ. ಉಳಿದ ಶರಣರು ವಧೆಗೊಳಿಸಲ್ಪಟ್ಟಿದ್ದಾರೆ. ಮಠಗಳು ನೆಲಸಮವಾಗಿವೆ. ಕಲ್ಯಾಣ ಹಾಳಾಗಿದೆ. ಬಿಜ್ಜಳರಾಜರು ಶರಣರನ್ನು ದ್ವೇಷಿಸಿ ಹರಳಯ್ಯ ಮಧುವಯ್ಯನವರನ್ನು ಕೊಲ್ಲಿಸಿದ್ದರಿಂದ ಈಗ ಶರಣರೇ ರಾಜರ ಕೊಲೆ ಮಾಡಿಸಿರಬಹುದೆಂದು ಜನರು ಅನ್ನುತ್ತಾರಂತೆ! ಕೊಲೆಗಡಕರು, 'ಮಧುವರಸಾದಿಗಳನ್ನು ಕೊಲೆಗೈದವನ ಕೊಂದ ವೀರರು ನಾವು! ಜಗದ್ದೇವ ಮಲ್ಲಬೊಮ್ಮಯ್ಯಗಳು ನಾವು!' ಎಂದು ಕೂಗುತ್ತ ಹೋದುದೂ ಈ ಮಾತಿಗೆ ಇನ್ನೊಂದು ಕಾರಣವಾಗಿದೆ. ಆದರೆ ಶರಣರು ಇಂತಹ ಕಾರ್ಯ ಮಾಡಿರಲಾರರು. ಬಿಜ್ಜಳರಾಜರು ರಾಜ್ಯಾಪಹಾರ ಮಾಡಿದುದನ್ನು ವಿರೋಧಿಸುವದಕ್ಕಾಗಿ ನಡೆದ ರಾಜಕೀಯ ಸಂಚು ಇತ್ತೀತ್ತಲಾಗಿ ಪ್ರಬಲವಾಗುತ್ತಲಿತ್ತು. ರಾಜರ ಕೊಲೆಯಾದ ಸಮಯದಲ್ಲಿಯೇ ಹೆಬ್ಬಾಗಿಲಲ್ಲಿ ಚಕ್ರವರ್ತಿ ಜಗದೇಕಮಲ್ಲದೇವರ ಮರಣವಾದುದು ಗಮನಿಸತಕ್ಕ ಸಂಗತಿಯಾಗಿದೆ. ಅವರ ಮೈಮೇಲೆ ಹೋರಾಟದ ಗಾಯಗಳಿದ್ದವೆಂದು ಶವಸಂಸ್ಕಾರ ಮಾಡಿದವರು ಹೇಳುತ್ತಾರಂತೆ. ಏನಿದ್ದರೂ ಬಿಜ್ಜಳರಾಜರ ಮರಣವು ಶೋಚನೀಯವಾಗಿದೆ. ಸಂಗಮೇಶನ ಇಚ್ಛೆ!"

ಭಾರವಾದ ಹೃದಯ

ಬಸವರಾಜದೇವರು ಚೇತರಿಸಿಕೊಂಡು ಸಾವರಿಸಿ ನುಡಿದರು:

"ಅಪರಿಚಿತ ಕೊಲೆಗಡಕರಿಂದ ಬಿಜ್ಜಳರಾಜರ ವಧೆಯಾಗಿದೆ. ಶರಣರು ಸಹ್ಯಾದ್ರಿಯ ಅರಣ್ಯಾಭಿಮುಖವಾಗಿದ್ದಾರೆ. ಇವೆರಡು ದುರ್ಘಟನೆಗಳ ವಾರ್ತೆಯಿಂದ ನನಗೆ ದುಃಖವಾಗಿದೆ. ಬಿಜ್ಜಳರಾಜರು ದಕ್ಷರು, ಚತುರರು; ಅವರ ಜಾಣ್ಮೆಯಿಂದ ಅಂತರ್ಯುದ್ಧ ಹಾಗು ಆರ್ಥಿಕ ಆಘಾತಗಳಿಂದ ಚಾಲುಕ್ಯರಾಜ್ಯವು ಪಾರಾಯಿತು. ಅವರ ಹನ್ನೆರಡು ವರ್ಷಗಳ ಸ್ವತಂತ್ರ ಆಳಿಕೆಯು ಸುಖಸಮೃದ್ಧಿಗಳಿಂದ ಕೂಡಿತ್ತು. ಅವರಿತ್ತ ಆಸರದಲ್ಲಿ ನನ್ನ ಜೀವಿತ ಕಾರ್ಯಗಳು ಕೈಗೂಡಿದವು; ಅವರ ಅನುಮತಿ ಪಡೆದು ಸ್ಥಾಪಿತವಾದ ಅನುಭವ ಮಂಟಪದ ಕಾರ್ಯಕಲಾಪಗಳು ಅಲ್ಪಾವಧಿಯಲ್ಲಿ ಅಭಿವೃದ್ಧಿಗೊಂಡು, ಉದ್ದೇಶಿಸಿದ ಧಾರ್ಮಿಕ ಸಾಮಾಜಿಕ ಸುಧಾರಣೆಗಳು ಅನು

ಷ್ಠಾನದಲ್ಲಿ ಬಂದವು. ಇಂತಹ ದೊರೆಗಳು ಪರಂಪರಾಗತವಾಗಿ ದೊರಕಿದರೆ ನಾಡಿಗೆ ದುಃಖವೆಂಬುದೇ ಇಲ್ಲ. ದುರ್ದೈವದಿಂದ ಇವರು ಒಂದೆರಡು ವರ್ಷಗಳಿಂದ ತಮ್ಮ ಕೆಲ ಮಂತ್ರಿಗಳ ಅನುಚಿತ ಉಪದೇಶಕ್ಕೆ ಕಿವಿಗೊಟ್ಟು ಶರಣಧರ್ಮದ ಬಗೆಗೆ ವಿಚಿತ್ರವಾದ ಮನೋಭಾವನೆಯನ್ನು ತಾಳಿದರು. ಇದಕ್ಕಾಗಿ ಶರಣರು ಅಡವಿಯ ಪಾಲಾಗಲು ಹೊರಟರು. ಅಲ್ಲಿ ಉಳಿದ ಶರಣರು ವಿವಿಧ ಯಾತನೆಗಳಿಗೊಳಗಾಗಿ ಅಸುನೀಗಬೇಕಾಯಿತು. ರಾಜಕೀಯವಾಗಿಯೂ ಅನಿಶ್ಚಿತತೆಯು ತಲೆದೋರಿ ರಾಜ್ಯವು ಬಾಹುಬಲರ ಕೈವಶವಾಗಿ ಜನರ ನೆಮ್ಮದಿ ಕೆಡಬಹುದಾಗಿದೆ.

ಶರಣರು ವಲಸೆ ಹೊರಟುದೂ ಬಿಜ್ಜಳರಾಜರ ಕೊಲೆಯೂ ಏಕಕಾಲಕ್ಕೆ ಆದುದು 'ಕಾಕತಾಲೀಯ'ವಾಗಿದೆ. ಚಾಲುಕ್ಯರಾಜ್ಯದ ಪುನಃ ಪ್ರತಿಷ್ಠಾಪನೆಯ ಸಂಚು ಕೊಲೆಗೆ ಕಾರಣವಾಗಿರಬಹುದು. ಚಾಲುಕ್ಯವಂಶೀಯರನ್ನು ಪುನಃ ಸಿಂಹಾಸನಕ್ಕೆ ತರುವ ಉದ್ದೇಶವು ಶರಣರಿಗೆ ಎಳ್ಳಷ್ಟೂ ಇರಲಿಲ್ಲ. ಆದರೂ ತಮ್ಮ ಮೇಲೆ ಬಂದಿರಬಹುದಾದ ಅಪವಾದಕ್ಕೆ ಉತ್ತರಕೊಡಲಿಕ್ಕೂ ಒದಗಬಹುದಾದ ಕಷ್ಟಗಳಲ್ಲಿ ಆತ್ಮರಕ್ಷಣೆ ಮಾಡಿಕೊಳ್ಳಲಿಕ್ಕೂ ಶರಣಧರ್ಮವನ್ನು ನೆಲೆಗೊಳಿಸಲಿಕ್ಕೂ ಶರಣರು ಸಿದ್ಧರಿರಬೇಕು. ಯಾವಾಗಲೂ ಅವರು ರಾಜಕೀಯದಿಂದ ದೂರವಿರಬೇಕು. ಇದೆಲ್ಲದಕ್ಕೆ ತಕ್ಕ ಶಕ್ತಿಯನ್ನು ಸಂಯಮವನ್ನು ಸಂಗಮದೇವನು ಕರುಣಿಸಬೇಕು. ತಮ್ಮ ಅಡಿಯಲ್ಲಿ ನನ್ನ ಮನವಿಯಿದು :

ನಿಮ್ಮ ಬಂಟರ ಬಂಟ ನಾನಯ್ಯ, ನಿಮ್ಮ ಲೆಂಕರ ಲೆಂಕ ನಾನಯ್ಯ !
ನಾನು ನಿಮ್ಮ ತೊತ್ತಿರ ಪಡುಗವ ತೆಗೆವ ಪಡಿಗದೊತ್ತಯ್ಯಾ !
ಕೂಡಲಸಂಗನ ಶರಣರಿಗೆಲ್ಲ ಸಂಗನಬಸವನ ಬಿನ್ನಪ !
'ಕವಳಿಗೆ ಸಂದುದು ನಿಜಪದದಲ್ಲಿ ಬೆರಸು'
ಎಂದು ಕೃಪೆ ಮಾಡಿರಯ್ಯ !
ಆನು ಮಾಡಿದ ತಪ್ಪನೆಣಿಸಿಹೆನೆಂದಡೆ ಗಣನೆಯಿಲ್ಲ.
ನಡೆದು ತಪ್ಪುವೆ, ನುಡಿದ ತಪ್ಪುವೆ, ಮಾಡಿ ತಪ್ಪುವೆ,
ನೀಡಿ ತಪ್ಪುವೆ, ನೋಡಿ ತಪ್ಪುವೆ, ಅರಿದು ತಪ್ಪುವೆ, ಮರೆದು ತಪ್ಪುವೆ.
ಎನ್ನ ತಪ್ಪನೊಪ್ಪ ಮಾಡಿಕೊಂಬುದಲ್ಲದೆ ಚಿತ್ತಕ್ಕೆ ತರಲಾಗದು.
ಕೂಡಲ ಸಂಗಯ್ಯನೆಂಬ ಗಂಡನೆನ್ನ ಬೆರೆಯಬೇಕೆಂದು ಕರೆಯಟ್ಟಲೊಡನೆ
ಶಿವಶರಣರಿಗೆಲ್ಲ ಶರಣೆಂದು ಹೇಳ್ವೊಂಬ ತವಕದಲ್ಲಿಪ್ಪೆ.

ಭೀತ ಶಾಂತಿಯಿದ್ದಿತು ಸಭೆಯಲ್ಲಿ! ಹಲವರು ಭವಿಷತ್ತಿನ ಬಗೆಗೆ ಚಿಂತಾತುರ ರಾದರು. ಕೆಲವರು ವಿಭ್ರಾಂತರಾಗದೆ ಎಂದಿನಂತೆ ಶಾಂತವಾಗಿಯೇ ಇದ್ದರು. ಮತ್ತೆ ಕೆಲವರು ಅಣ್ಣನವರ ಕೊನೆಯ ನುಡಿಗಳಿಂದ ಅವರು ಸ್ಥಳಾಂತರ ಮಾಡುವರೇ ಎಂದು ಶಂಕಿತರಾಗಿದ್ದರು. ಜನರು ಹೊರಟು ಹೋದ ಮೇಲೆ ಕೆಲವು ಹೊತ್ತು ವೇದಿಕೆಯ ಮೇಲೆ ಅಣ್ಣನವರು, ಕುಲಪತಿಗಳು ಅಪ್ಪಣ್ಣ ನಿಂದ ಹೆಚ್ಚಿನ ವಿವರ ತಿಳಿದುಕೊಳ್ಳುತ್ತಾ ಕುಳಿತಿದ್ದರು. ಸಭೆಯ ಮುಂದೆ ಅಣ್ಣನವರಾಡಿದ ಕೊನೆಯ ನುಡಿಗಳ ಅರ್ಥವನ್ನು ಕುಲಪತಿಗಳು ತಮ್ಮ ಮನದಲ್ಲಿಯೇ ಪರಿಶೀಲಿಸುತ್ತಿದ್ದರು. ಈಗ ಅವರ ಮಾತುಗಳನ್ನು ಕುತೂಹಲದಿಂದ ಗಮನಿಸಿದ್ದರು.

ಬಸವರಾಜರು "ಅಪ್ಪಣ್ಣ, ಬಜ್ಜಳರಾಜರ ಕೊಲೆಗೈದವರು ಯಾರೇ ಇರಲಿ, 'ಪರೋಕ್ಷವಾಗಿಯಾದರೂ ಇವರ ಅಂಗವಿತ್ತು' ಎಂಬ ಅಪವಾದವು ಶರಣರ ಬೆನ್ನು ಬಿಟ್ಟದ್ದಲ್ಲ." ಎಂದು ನುಡಿದು ಕ್ಷಣಹೊತ್ತು ಕಣ್ಣುಮುಚ್ಚಿ ಮತ್ತೆ ತೆರೆದರು. ಆಗ ಅವರ ಕಣ್ಣುಗಳು ಅಪೂರ್ವಕಾಂತಿಗೂಡಿದ್ದವು. "ಸಾಕು ಮಾಡೈ ತಂದೆ ಲೋಕದಾಟವನಿನ್ನು" ಎನ್ನುತ್ತ ವೇದಿಕೆಯಿಂದಿಳಿದು ಕುಲ ಪತಿಗಳಿಗೆ ಶರಣುಮಾಡಿ ಬೀಳ್ಕೊಂಡು ತಮ್ಮ ಪೂಜಾನುಷ್ಠಾನದ ಶಿಲಾ ಮಂಟಪದ ಕಡೆಗೆ ನಡೆದರು. ಸೇವಾನಿರತ ವಟುಗಳಿಬ್ಬರು ಅವರನ್ನು ಅನು ಸರಿಸಿದರು. ಅವರ ಭಾವ ನಿಬ್ಬೆರಗಾಗುತ್ತಿದ್ದುದನ್ನು ಗಮನಿಸಿದ್ದ ಕುಲಪತಿ ಗಳು ಮತ್ತೆ ನಾಲ್ವರು ವಟುಗಳನ್ನು ಆ ಕಡೆಗೆ ಕಳುಹಿ ತಾವು ಅಪ್ಪಣ್ಣ ನೊಡನೆ ಆಶ್ರಮದಲ್ಲಿ ನಡೆದರು.

ಲಿಂಗೈಕ್ಯ

ಬಸವಣ್ಣನವರ ಅಂದಿನ ಬಾಹ್ಯಪೂಜಾಕ್ರಮಗಳು ನಿತ್ಯದಂತೆ ಇರಲಿಲ್ಲ. ಅವೆಲ್ಲ ಸಂಕ್ಷೇಪಗೊಂಡಿದ್ದು ಅಂತರಂಗದಲ್ಲಿ ಐಕ್ಯಹೊಂದಿದ್ದವು. ಇಷ್ಟ ಲಿಂಗಕ್ಕೆ ಬಾಹ್ಯದಲ್ಲಿ ಭಸ್ಮಗಂಧಾಕ್ಷತೆ–ಪತ್ರಿ ಪುಷ್ಪಗಳು ಧೂಪದೀಪಗಳು ಕ್ರಮವಾಗಿ ಸಮರ್ಪಿತವಾಗಿದ್ದವೋ ಇಲ್ಲವೋ ಬೇಗನೆ ಲಿಂಗದಲ್ಲಿ ದೃಷ್ಟಿ ಯನ್ನು ನಿಲ್ಲಿಸಿದರು. ವಾಯುಸ್ತಂಭಿತವಾಯಿತು. ಕರಣೇಂದ್ರಿಯಗಳು ಶಾಂತಿಯಲ್ಲಿ ಸಮರಸಗೊಂಡವು. ಶಿವಯೋಗ ಸಮಾಧಿ ಸಂಧಿಸಿತ್ತು. ಬಹಳ ಹೊತ್ತು ಕಳೆಯಿತು.

ಹೊರಗೆ ಕತ್ತಲು ಕವಿದಿತ್ತು. ಎಡಬಲದ ಪ್ರಣತಿಗಳ ದೀಪದಿಂದ ಅವರ ಮುಖದ ಮೇಲೆ ಬೆಳಕು ಬಿದ್ದಿತ್ತು. ಅವರಿಗಭಿಮುಖವಾಗಿ ಎದುರಿಗಿನ ಗೋಡೆಯ ಹತ್ತಿರ ಕುಳಿತಿದ್ದ ಇಬ್ಬರು ವಟುಗಳು ಅವರನ್ನೇ ನೋಡುತ್ತಿದ್ದರು. ಅಂಗಳದಲ್ಲಿ ನಾಲ್ವರು ಕುಳಿತು ಮೆಲ್ಲನೆ ಮಾತನಾಡುತ್ತಿದ್ದರು. 'ಹೊತ್ತಾಯಿತಲ್ಲ' ಎಂದು ಅವರು ಆಗಾಗ ಎದ್ದು ನಿಂತು ಒಳಗೆ ನೋಡುತ್ತಿದ್ದರು. ಇರಇರುತ್ತ ಅಮೃತದಲ್ಲಿ ತೊಳೆದ ಕಮಲದಂತೆ ಅಣ್ಣನವರ ಮುಖಕಮಲವು ಅರಳಿ ಪ್ರಕಾಶಮಾನವಾಯಿತು. ತುಟಿಗಳು ತುಸು ಅಗಲವಾದವು. ನೋಡನೋಡುತ್ತಿರಲು ಭ್ರೂಮಧ್ಯದಲ್ಲಿ ಬೆಳಕು ತೋರಿ ಮುಖವೆಲ್ಲ ನೀಲವರ್ಣವಾಯಿತು. ಅದು ಪ್ರಕಾಶವಾಯಿತು. ಆ ನೀಲಪ್ರಕಾಶವು ಫಲಕ್ಕನೇ ಹಬ್ಬಿ ಮಂಟಪವನ್ನೆಲ್ಲ ತುಂಬಿ ಅಂಗಳಕ್ಕೂ ಚಿಮ್ಮಿತು. ಎದುರಿಗಿದ್ದ ವಟುಗಳು 'ಹಾಂ' ಎಂದು ಚೀರಿದರು. ಅಂಗಳದಲ್ಲಿದ್ದವರೂ ಕಟ್ಟೆಯನ್ನೇರಿ ಬಂದರು. ಆ ಬೆಳಕು ಮತ್ತೆ ಸಂಕುಚಿತವಾಗುತ್ತ ಮುಖದ ಮೇಲಾಡಿ ಮೇಲಕ್ಕೇರಿ ಹೋಗುತ್ತಿರುವಾಗ ಲಿಂಗ ಹಿಡಿದೆತ್ತಿದ ಕರವು ತೊಡೆಯಮೇಲೆ ಇಳಿಯಿತು. ಕರದ ಮೂಬೆರಳುಗಳಲ್ಲಿ ಶಿಲುಕಿ ಸ್ಥೂಲಲಿಂಗ ನಿಂತಿದ್ದಿತು. ತಲೆಯು ಬಲಗಡೆ ಬಿದ್ದು ಬೆನ್ನುಮಣಿಯು ಬಲಗಡೆಯ ಕಳಸಕ್ಕೆ ತಾಗಿ ನಿಂತಿತು. ಓಡಿಬಂದಿಬ್ಬರು ವಟುಗಳು ಹಿಡಿದರು; ವಾಯುಬಯಲಗೂಡಿತ್ತು.

ಅಣ್ಣನವರು ಪೂಜಾಮಂಟಪದಿಂದ ಬರಲು ತಡವಾಯಿತೆಂದು ಮೂವರು ಅಧ್ಯಾಪಕರು ಪಂಜುಗಳನ್ನು ಹಚ್ಚಿಕೊಂಡು ಅಪ್ಪಣ್ಣನೊಡನೆ ಇತ್ತ ಕಡೆಗೆ ಹೊರಟಿದ್ದರು. ಮಂಟಪದಲ್ಲಿ ಒಮ್ಮಿಂದೊಮ್ಮೆ ಬೆಳಕಾಗಿ ಮಾಳಿಗೆಯಿಂದ ಮೇಲೆ ಕಿರಣಗಳನ್ನು ತೂರಿ ಅಡಗಿದುದನ್ನು ದೂರದಿಂದಲೇ ನೋಡಿ ಕಾತರದಿಂದ ಅವಸರವಾಗಿ ಹೆಜ್ಜೆ ಹಾಕಿದರು. ಅಷ್ಟರಲ್ಲಿ ವಟುವೊಬ್ಬನು ಅಳುತ್ತ ಎದುರಿಗೆ ಬಂದನು. ಎಲ್ಲರೂ ಒಳಗೆ ಹೋದರು. ಅಪ್ಪಣ್ಣ ಕಾಲು ಹಿಡಿದು ಎದೆಯ ಮೇಲೆ ಕೈಯಿಟ್ಟು ನೋಡಿ 'ಅಣ್ಣನವರು ಲಿಂಗೈಕ್ಯರಾದರು. ಅವರ ಆತ್ಮ ಪರಮಾತ್ಮನಲ್ಲಿ ಬೆರೆತು ಬಯಲಾಯಿತು. ನಾವು ಕಂಡ ಆ ಹೆಬ್ಬೆಳಗು ಆ ಮಹಾ ಮಿಲನದ ದಿವ್ಯಪ್ರಭೆ!' ಬಸವರಾಜದೇವ ಉಘೇ ಉಘೇ ಎನ್ನುತ್ತಿರುವಾಗ ನಿಂತವರೂ ಘೋಷಿಸಿದರು. ನದಿಯ ದಡಗಳಲ್ಲಿ ಪ್ರತಿಧ್ವನಿಗೊಂಡ ಘೋಷವು ಆಶ್ರಮಕ್ಕೂ ಗ್ರಾಮಕ್ಕೂ ತಲುಪಿ ಎಚ್ಚರಿ

ಸಿತು. ಕ್ಷಣದಲ್ಲಿ ಅಣ್ಣನವರ ಐಕ್ಯದ ಸುದ್ದಿಯೂ ಅಲ್ಲಿಗೆ ಮುಟ್ಟಿತು. ಒಂದೆರಡು ತಾಸುಗಳಲ್ಲಿಯೇ ನೂರಾರು ಪಂಜುಗಳೊಡನೆ ಜನರು ಬಂದು ಬಿಟ್ಟರು. ಅಪ್ಪಣ್ಣನು ಬಸವರಾಜರ ಪಾದಗಳನ್ನು ತೊಡೆಯ ಮೇಲೆ ತಕ್ಕೊಂಡು ಅವರನ್ನು ಕೊಂಡಾಡುತ್ತಿದ್ದನು.

‘‘ಧ್ಯಾನದಲ್ಲಿ ಕುಳ್ಳಿರ್ದು, ಜ್ಞಾನದಲ್ಲಿ ನೋಡಿ
ಮೌನಮುಗ್ಧವ ಮಾಡಿ, ಸ್ವಾನುಭವದಿಂದರಿದು
ಮತ್ತೇನೇನು ಹೊದ್ದಲೀಯದೆ, ತಾನು ತಾನಾಗಿ
ಜ್ಞಾನಕ್ಕತೀತನಾಗಿ ಧ್ಯಾನ, ಧಾರಣ, ಸಮಾಧಿಯ ಮೆಟ್ಟಿನಿಂದ
ನಿಜಲಿಂಗೈಕ್ಯ ಬಸವಣ್ಣನ ಕಂಡು ನಮೋ ನಮೋ ಎನುತಿದ್ದೆ.
ಕಾಣಾ ಬಸವಪ್ರಿಯ ಕೂಡಲ ಚೆನ್ನಬಸವಣ್ಣಾ’’

* * * *

ಸನಿಹದ ಹಳ್ಳಿಗಳಿಗೂ ಮಠಗಳಿಗೂ ಆ ರಾತ್ರಿಯೇ ವಾರ್ತೆ ಕಳಿಸಲ್ಪಟ್ಟಿತು. ಮುಂಜಾವಿನಲ್ಲಿಯೇ ಅಂತ್ಯದರ್ಶನಕ್ಕಾಗಿ ಜನರು ತಂಡತಂಡವಾಗಿ ಬರಹತ್ತಿದರು. ಮಲಪ್ರಭೆಯ ತೀರವು ಜನರಿಂದ ತುಂಬಿತು.

ಶ್ರದ್ಧಾಂಜಲಿ

ಚಿಕ್ಕದೊಂದು ದಳದೊಡನೆ ಪ್ರಯಾಣದಲ್ಲಿದ್ದ ಕಿಸುವೊಳಲಿನ ಮಂಡಲಾಧಿಕಾರಿಯು ಸಮೀಪದಲ್ಲಿ ಶಿಬಿರ ಹಾಕಿದ್ದನು. ಈ ಹೃದಯದ್ರಾವಕ ವಾರ್ತೆಯನ್ನು ಕೇಳಿ ಆತನು ಸಂಗಮಕ್ಕೆ ಬಂದು ಗುರುಕುಲದ ಅಧಿಪತಿಗಳನ್ನು ಕಂಡು ‘‘ಬಸವರಾಜರು ಚಾಲುಕ್ಯ ಸಾಮ್ರಾಜ್ಯದ ನಿವೃತ್ತ ಮಹಾಮಂತ್ರಿಗಳು ! ದಂಡನಾಯಕರು !! ಅವರ ಅಂತ್ಯಯಾತ್ರೆಯು ರಾಜಮರ್ಯಾದೆಯಿಂದ ನಡೆಯಬೇಕು. ತಾವು ಅನುಮತಿಕೊಟ್ಟರೆ ಹಾಗೆ ಎಲ್ಲ ವ್ಯವಸ್ಥೆಯನ್ನು ನಾನು ಮಾಡುತ್ತೇನೆ” ಎಂದು ಕೇಳಿದನು.

ಕುಲಪತಿಗಳು ಕಂಠಬಿಗಿದು ನುಡಿದರು :

‘‘ಬಸವೇಶ್ವರರು ರಾಜಕೀಯ ಮಹಾಪುರುಷರಾಗಿದ್ದಂತೆ ಪರಮ ತತ್ವಜ್ಞಾನಿಗಳೂ ಆಗಿದ್ದರು. ಮಹಾನುಭಾವಿಗಳು, ಮಹಾತ್ಮರು ಅವರು ! ದೀನ ಜನೋದ್ಧಾರಕರೂ ಆಗಿದ್ದರು. ಯಾರು ಯಾರು ಯಾವ ಯಾವ ಬಗೆಯ

ಅವರ ಘನತೆಯನ್ನು ಅರಿದು ಗೌರವ ಸಲ್ಲಿಸಲು ಇಚ್ಛಿಸುವರೋ ಅವರೆಲ್ಲರು ಸೇರಿ ಅಂತ್ಯಯಾತ್ರೆಯ ಏರ್ಪಾಡು ಮಾಡಲು ಆತಂಕವೇನು ?''

ಮಂಡಲಾಧಿಪತಿ ಒಪ್ಪಿದನು. ಸಾರಂಗಮಠದ ಕಲ್ಯಾಣಶಕ್ತಿ ಪಂಡಿತರ ಹಿರಿಯತನದಲ್ಲಿ ಗುರುಕುಲದ ಹಾಗು ಗ್ರಾಮಾಂತರ ಹಿರಿಯರು ಕೂಡಿ ಅಂತ್ಯಯಾತ್ರೆಯ ಕಾರ್ಯಕ್ರಮ ಗೊತ್ತುಮಾಡಿದರು. ಮಂಡಲಾಧಿಪತಿಯ ಶಿಬಿರದಿಂದ ಛತ್ರಚಾಮರಗಳೊಡನೆ ದಂಡಿಗೆ (ಪಲ್ಲಕ್ಕಿ) ಯನ್ನು ತರಿಸಲಾಯಿತು. ಮಧ್ಯಾಹ್ನದ ಹೊತ್ತಿಗೆ ನಾಲ್ಕಾರು ಹರದಾರಿಗಳ ವರೆಗಿನ ಹಿರಿಯರು ಭಕ್ತರು, ಗುರುಮಠ-ಅಗ್ರಹಾರಗಳ ಜಂಗಮಮೂರ್ತಿಗಳು ಶಾಸ್ತ್ರಿಗಳು ಪಂಡಿತರು ರಾಜಪ್ರತಿನಿಧಿಗಳು ಬಂದು ಸೇರಿದರು. ಶಿವಭಜನೆ-ಷಡಕ್ಷರ ಮಂತ್ರ ಜಪಗಳು ತೆರಪಿಲ್ಲದೆ ನಡೆದಿದ್ದವು.

ಬಸವರಾಜದೇವರ ಪಾರ್ಥಿವ ಶರೀರವನ್ನು ಶಿವಲಾಂಛನಗಳಿಂದಲೂ ರಾಜೋಚಿತವಾದ ಉಡುಗೊರೆಗಳಿಂದಲೂ ಅಲಂಕರಿಸಿ ಅಂದಣದಲ್ಲಿ ಇಟ್ಟು ಮೆರವಣಿಗೆ ಹೊರಡಿಸಿದರು. ಅದರಲ್ಲಿ ಸೇರಿ ಸಾಗಿದ ಮಹಾಜನ ಸಂದಣಿಯು, ಅಣ್ಣನವರ ಲೋಕಸಂಗ್ರಹದ, ಹಾಗು ತತ್ವಾನುಭಾವದ ಸಮಗ್ರ ಸ್ವರೂಪದ ನಿದರ್ಶನವಾಗಿತ್ತು.

ಗುರುಕುಲವನ್ನು ಬಳಸಿ ಗ್ರಾಮದಲ್ಲಿ ಹಾಯ್ದು ಮೆರವಣಿಗೆಯು ಕೃಷ್ಣಾ-ಮಲಪ್ರಭೆಗಳ ಸಂಗಮದ ದಡಕ್ಕೆ ಬಂದಿತು. ಅಲ್ಲಿ ಕಲ್ಯಾಣಶಕ್ತಿ ದೇವರ ಸಲಹೆಯಂತೆ ಮುಕುಟಾಗಮದಲ್ಲಿ ಹೇಳಿದ ವಿಧಾನದಿಂದ ಸಮಾಧಿಯನ್ನು ರಚಿಸಿದ್ದರು. ಐದಡಿ ಭುಜದ ಚೌರಸಾಕಾರದ ಒಂಭತ್ತು ಅಡಿ ಆಳವಾದ ಹಳ್ಳತೋಡಿ ದಕ್ಷಿಣದ ಬದಿಯಲ್ಲಿ ತ್ರಿಕೋನಾಕಾರದ ಮನೆಯನ್ನು ಮುಂದೆ ಪೀಠವನ್ನು ರಚಿಸಿ ಉತ್ತರದ ಬದಿಯಲ್ಲಿ ಮೂರು ಪಾವಟಿಗೆ ಮಾಡಿದ್ದರು. ಸ್ವಚ್ಛಗೊಳಿಸಿ ಸುಣ್ಣ ಬಣ್ಣಗಳಿಂದ ಸಾರಿಸಿ, ಐದು ಬಣ್ಣಗಳ ಹಿಟ್ಟಿನಿಂದ ಪ್ರಣವಪಂಚಾಕ್ಷರಿಗಳನ್ನೂ ಪಂಚಬ್ರಹ್ಮಸ್ತೋತ್ರ ಮಂತ್ರಗಳನ್ನೂ ಬರೆದಿದ್ದರು. ಮೂಲೆ ಮೂಲೆಗೂ ಬೆಳ್ಳಿಯ ತಗಡುಗಳ ಮೇಲೆ ಮಹಾವಾಕ್ಯಗಳನ್ನು ಬರೆದು ಇಟ್ಟಿದ್ದರು. ಮೇಲೆ ತಳಿರಿನ ಹಂದರ ಹಾಕಿ, ಬಾಳೆ, ಹಲಸು, ಮಾವುಗಳ ಫಲಗಳನ್ನು ತೂಗುಬಿಟ್ಟಿದ್ದರು. ಕಾವಿಯ ಅರಿವೆಯ ಮೇಲೆ ಬಿಳಿಯದಾಗಿ ಬರೆದ ಓಂಕಾರದ ನಿಶಾನೆಗಳನ್ನು ಕಟ್ಟಿದ್ದರು.

ಮೆರವಣಿಗೆ ಸಮಾಧಿಗೆ ಅಭಿಮುಖವಾಗಿ ಬಂದಾಗ ಕಲ್ಯಾಣ ಶಕ್ತಿಗಳು ಎಂಟುಜನ ಗಣಾಧೀಶರೊಡನೆ ಸ್ನಾನಮಾಡಿ ಭಸ್ಮರುದ್ರಾಕ್ಷಿ ಭೂಷಿತರಾಗಿ ಸ್ವಾಗತಕ್ಕೆ ಸಿದ್ಧರಾಗಿ ನಿಂತಿದ್ದರು. ಅವರು ಎದುರುಹೋಗಿ ಅಂದಣಕ್ಕೆ ಪ್ರದಕ್ಷಿಣೆ ಮಾಡಿ ತಮ್ಮ ಹೆಗಲ ಮೇಲೆ ಹೊತ್ತುಕೊಂಡು ಬಂದರು. ಸಮಾಧಿಯ ಹತ್ತಿರ ಪಲ್ಲಕ್ಕಿಯನ್ನು ಇಳಿಸುತ್ತಿರುವಾಗ 'ಹರಹರ ಮಹಾದೇವ' 'ಬಸವರಾಜದೇವ ಉಘೇ' ಎಂಬ ಜಯಘೋಷವು ಆ ಪ್ರಾಂತವನ್ನೇ ತುಂಬಿತು.

ಬಳಿಕ ಬಸವಣ್ಣನವರ ದೇಹವನ್ನು ಅಂದಣದಿಂದ ತಂದು ಸಮಾಧಿಯಲ್ಲಿ ಇಳಿಸಿ ಗದ್ದುಗೆಯಲ್ಲಿಟ್ಟು ಚರಪಾದ ತೀರ್ಥದಿಂದ ಮುಖವನ್ನು ತೊಳೆದರು. ಭಸ್ಮಗಂಧಾಕ್ಷತೆಗಳನ್ನು ಧರಿಸಿ ಪತ್ರಿ-ಪುಷ್ಪ ಧೂಪಗಳಿಂದ ಅರ್ಚಿಸಿದರು. ಆ ಮೇಲೆ ತ್ರಿಕೋನಸ್ಥಳದಲ್ಲಿ ಓಂಕಾರದೊಳಗಿಟ್ಟ ಭಸ್ಮವನ್ನು ತುಂಬಿ ಸಮಾಧಿಯನ್ನು ಮುಚ್ಚಿದರು. ಜಂಗಮ ಮೂರ್ತಿಗಳು ನಾಗರಿಕಭಕ್ತರು ಗುರುಕುಲದ ಅಧ್ಯಾಪಕರು ವಿದ್ಯಾರ್ಥಿಗಳು ಶರಣರು ಮಹಿಳೆಯರು ಬೇರೆಬೇರೆಯಾಗಿ ಓರಣದಿಂದ ಕುಳಿತು ಬಿಡುವಿಲ್ಲದೆ ಪಂಚಾಕ್ಷರಿ ಮಂತ್ರವನ್ನು ಪಠಿಸುತ್ತಿದ್ದರು. ಆ ನಾದವು ಆ ಪ್ರದೇಶದ ಹೊಲ-ಹೊನಲು-ಬನಗಳಲ್ಲೆಲ್ಲ ತುಂಬಿ ಮೊರೆಯುತ್ತಿತ್ತು.

ಪಂಡಿತರು ಜ್ಞಾನಿಗಳು ಪರೋಕ್ಷವಿನಯಕ್ಕಾಗಿ ಪ್ರೇಮ-ಭಕ್ತಿ-ಗೌರವಾದರಗಳನ್ನು ವ್ಯಕ್ತಪಡಿಸುವ ದುಃಖಮಿಶ್ರಿತವಾದ ಭಾಷಣಗಳಿಂದ ತಮ್ಮ ಶ್ರದ್ಧಾಂಜಲಿಗಳನ್ನು ಅರ್ಪಿಸಿದರು. ಅಣ್ಣನವರ ಮಹಾಸಾಧನೆಯ ಅರಿವು ಅವರೆಲ್ಲರನ್ನು ಕೆಲಹೊತ್ತು ಮಾತುಬಾರದಂತಾಗಿಸಿತ್ತು. ಸರ್ವರ ಕಣ್ಣುಗಳಿಂದ ಅಶ್ರುಗಳಿಳಿಯುತ್ತಿದ್ದವು. ಸರ್ವತ್ರ ಮೌನ ಕೆಲಹೊತ್ತು !

* * *

ಬಸವಣ್ಣನವರ ಭೆಟ್ಟಿಗೆಂದು ಕಲ್ಯಾಣದಿಂದ ಹೊರಟು ಪ್ರತ್ಯೇಕವಾಗಿ ಒತ್ತರದಿಂದ ಪ್ರಯಾಣ ಮಾಡಿ ಬಂದ ಅಗ್ಗಳ-ಶಿವದತ್ತರು ಆ ದಿನ ಮುಂಜಾನೆ ಸಂಗಮಕ್ಕೆ ಬಂದಿದ್ದರು. ಅವರು ಕಾಣಬಾರದುದನ್ನು ಕಂಡು ದುಃಖಿತರಾಗಿದ್ದರು. ಅಗ್ಗಳನು ಸಮಾಧಿಯ ಮುಂದೆ ನಿಂತು ಭಾವ ಪರವಶನಾಗಿ ಹಾಡಿದನು :


ಬಸವ ತಂದೆ ಬಯಲೊಳಡಗಿ ಕಾಣದಾದೆಯಾ ?
ಒಸೆದು ಒಂದು ಮಧುರ ವಚನ ನುಡಿಯ-ದಾದೆಯಾ ?
ಅಮರಭಕ್ತಿ ಪಥದ ಪಥಿಕನಾಗಿ ನಡೆದೆಯಾ ?
ವಿಮಲನೀತಿ ನಿತ್ಯ ಧರ್ಮ ಬಿತ್ತಿ ಪೋದೆಯಾ ?
ಅವಯವಗಳ ಬಂಧನದಿ ಸಮಾಜ ಪುರುಷನು.
ಬಳಲಿರಲ್ಕೆ ಬಿಡಿಸಿ ತಂದು ತೋರಿ ಬೆಳಕನು.
ಪೂರೆದು ಸಮತೆ ಶಾಂತಿ ತುಷ್ಟಿಗಳನು ನೀಡಿದೆ.
ಸಾರ್ಥಕವಹ ಮಾನವತೆಯ ಪ್ರಚುರ ಪಡಿಸಿದೆ.
ವಸುಧೆಯಲಿ ಮಹಾತ್ಮನಾದೆ ಲೋಕವಂದ್ಯನೇ
ಕಸದಿ ರಸವ ಸುರಿದ ಬಸವರಾಜ ದೇವನೇ
ನಿನ್ನ ನುಡಿಯು ನಿನ್ನ ನಡೆಯು ನಿನ್ನ ಜೀವನ
ಇನ್ನು ಜಗಕೆ ದಾರಿ ದೀಪ, ಪರಮ ಪಾವನ.


ಕವಿ, ಪಂಡಿತ, ರಾಜಕಾರಣಿ ಆದ ಅಗ್ಗಳನು ಶರಣಧರ್ಮದ ಶ್ರೇಷ್ಠ ತತ್ವಗಳನ್ನು ಪರಿಶೀಲಿಸಿ ನೋಡಿ ನೋಡಿ ಅದಕ್ಕೊಲಿದಿದ್ದನು. ಶಿವದತ್ತ ನಿಂದ ಬಸವಣ್ಣನವರ ಘನತೆಯನ್ನು ಕೇಳಿಕೇಳಿ ಅವರ ದರ್ಶನಕ್ಕೆ ಆತುರ ನಾಗಿದ್ದನು. ಚಾಲುಕ್ಯ ವಂಶೀಯರ ಒಳಸಂಚಿನಲ್ಲಿಯ ತನ್ನ ಕರ್ತವ್ಯವು ವಿಫಲಜಯದಲ್ಲಿ ಮುಕ್ತಾಯಗೊಂಡ ಬಳಿಕ ಬಸವೇಶ್ವರರ ಅನುಯಾಯಿ ಯಾಗಲು ಹಾತೊರೆದು ಬಂದಿದ್ದನು.

* * *

ಕ್ರಮವಾಗಿ ನದಿಯ ಪಾತ್ರವು ಅಗಲವಾಗಿ ಬಸವೇಶ್ವರರ ಸಮಾಧಿ ಒಡಲೊಳಗಾದುದರಿಂದ ಅದರ ಮೇಲೆ ಎತ್ತರವಾಗಿ ಕಟ್ಟೆಯನ್ನು ಕಟ್ಟಿ ಮೇಲೆ ಚಿಕ್ಕ ಮಂಟಪ ರಚಿಸಿ ಲಿಂಗಸ್ಥಾಪನೆ ಮಾಡಿದ್ದಾರೆ.

ಕೂಡಲ ಸಂಗಮ ಮಂಟಪ





ಕಿನ್ನರಿ ಬ್ರಹ್ಮಯ್ಯನ ಹೊಳೆ-ಉಳಿವೆ

೧೮. ಆ ಮೇಲೆ

ರಕ್ಷಕ ದಳದ ಸಂಘಟನೆ

ಸಕಲೇಶ ಮಾದರಸರನ್ನು ಅವರ ಇಚ್ಛೆಯಂತೆ ಶ್ರೀಶೈಲಕ್ಕೆ ಮುಟ್ಟಿಸುವ ವ್ಯವಸ್ಥೆಮಾಡಿ ಬೀಳ್ಕೊಟ್ಟ ಬಳಿಕ, ಉಳಿವೆಗೆ ಹೊರಟ ಶರಣರ ಯಾತ್ರಾದಳವು ನೈಋತ್ಯಕ್ಕೆ ಸಾಗಿತು. ಕಲ್ಯಾಣದಲ್ಲಿ ನಡೆದ ನರಹತ್ಯೆ ಹಾಗು ಮಠಗಳ ವಿನಾಶದ ವಾರ್ತೆ ಬರುತ್ತಿದ್ದಂತೆ ಅವರಿಗೆ ವ್ಯಥೆಯೂ ತಮ್ಮ ರಕ್ಷಣೆಯ ಬಗೆಗೆ ಕಾತರವೂ ಉಂಟಾಗುತಲಿದ್ದವು. ಆದರೂ ಮಾಚಯ್ಯನವರ ಧೈರ್ಯದ ರಕ್ಷೆ ಬಲವಾಗಿದ್ದಿತು. ಮುಂದೆ ಸಾಗಿದಂತೆ ಸೊನ್ನಲಾಪುರದ ಸಿದ್ಧರಾಮ ಶಿವಯೋಗಿಗಳು, ತಾಳಿಕೋಟೆಯ ವಿರುಪರಸರು, ಅಣ್ಣೀಗೇರಿಯ ಗೊಗ್ಗಿ ದೇವರಸರು, ಅಬ್ಬಲೂರಿನ ರಾಮಯ್ಯತಂದೆಗಳು, ಸಿಂಧನೂರಿನ ಇಮ್ಮಡಿ ರಾಚಿದೇವರು, ದಶಗಣದ ಸಿಂಗಿರಾಜರು ತಮ್ಮತಮ್ಮಲ್ಲಿಂದ ಗಣಾಚಾರದ ಯೋಧರ ತಂಡಗಳನ್ನು ಶರಣರ ರಕ್ಷಣೆಗಾಗಿ ಹೊರಡಿಸಿದ ಸುದ್ದಿಗಳು ದಿನ ಪ್ರೊಂದಕ್ಕೆ ಬಂದು ತಲುಪಹತ್ತಿದವು. ಐಯಾವಳಿಯ ಐನೂರ್ವರ ಸಂಘದ ಐನೂರು ಗಣಾಚಾರಿ ಯೋಧರು ಮೊಟ್ಟಮೊದಲು ಬಂದು ಯಾತ್ರಾದಳವನ್ನು ಸೇರಿ, 'ಕಲಿದೇವರದೇವ ಉಘೇ ಚೆನ್ನಬಸವರಾಜ ಉಘೇ' ಎಂದು ಉದ್ಘೋಷಿಸಿದರು. ಆಗ ಮಾಚಯ್ಯನವರಿಗೆ ಹೊಸ ಭುಜಗಳು ಚಿಗಿತ ಬಂದಂತಾಯಿತು. ದಳವನ್ನು ತಮ್ಮ ಪರಿಚಿತ ಪ್ರದೇಶದಲ್ಲಿಯೇ ಕೃಷ್ಣೆಯನ್ನು ದಾಟಿಸಬೇಕೆಂದು ಐಯಾವಳಿಯ ನಾಯಕನ ಉದ್ದೇಶವಾಗಿತ್ತು. ಅದೇ ಪ್ರದೇಶದಲ್ಲಿ ಹಾದು ಸಂಗಮದಲ್ಲಿ ಬಸವಣ್ಣನವರನ್ನು ಕಂಡು ಮುಂದೆ ಹೋಗಬೇಕೆಂದು ಚೆನ್ನಬಸವಣ್ಣನವರ ಉದ್ದೇಶವೂ ಇತ್ತು.

ಅತ್ತಿತ್ತಲಾಗಿನ ಶರಣರೆಲ್ಲ ಬಂದು ಕೂಡಿದರು. ಮೇಲೆ ಕಾಣಿಸಿದ ಗಣಾಚಾರದ ಯೋಧರ ದಳಗಳೆಲ್ಲ ಒಂದೊಂದಾಗಿ ಬಂದು ಕೂಡಿದವು. ಯಾತ್ರಾದಳದ ಸಂಖ್ಯೆ ಮೂರು ಸಾವಿರವನ್ನು ಮೀರಿತು. ಮಾಧವನಾಯಕನು ಬೆನ್ನಟ್ಟಿ ಬರುತ್ತಾನೆಂಬ ಸುದ್ದಿಯಿಂದ ಇನ್ನು ಅವರು ಚಿಂತಿಸುವಂತಿರ

ಲಿಲ್ಲ. ಅಲ್ಲಲ್ಲಿ ಪ್ರವಚನ ಸಭೆ ನಡಿಸುತ್ತ ಒತ್ತರದಿಂದ ಪಯಣ ಮಾಡುತ್ತ ಒಂದು ವಾರಕ್ಕೆ ಕೃಷ್ಣೆಯ ತಡಿಗೆ ಬಂದು ತಂಗಡಿಯ ಹತ್ತಿರ ಬೀಡು ಮಾಡಿದರು. ಬೇಸಗೆಯ ಮಳೆಯಿಂದ ನದಿಗೆ ಸ್ವಲ್ಪನೆರೆ ಬಂದು ಎರಡು ದಿವಸ ಕಾಯಬೇಕಾಗಿತ್ತು. ಇಷ್ಟೆಲ್ಲ ಜನರನ್ನು ಚಕ್ಕಡಿ ಎತ್ತು ಕುದುರೆಗಳನ್ನು ಹೇರುಗಳನ್ನು ಸೆಳವು ಅಳವಿನಲ್ಲಿದ್ದಾಗ ನಾವೆಯ ತಡೆಗಳು ತೆರೆದಿರುವಾಗ ದಾಟಿಸಬೇಕಾಗಿತ್ತು.

* * * *

ಪ್ರಯಾಣದಲ್ಲಿದ್ದ ಈ ವಾರವೆಲ್ಲ ನೀಲಾಂಬೆಯ ಅಂತರಂಗದಲ್ಲಿ ಆತ್ಮಶಕ್ತಿ-ಅಂತಃಕರಣಗಳ ನಡುವೆ ತುಮುಲವೇ ನಡೆದಿತ್ತು:

'ತನ್ನ ಮೇಲಿನ ದಾಕ್ಷಿಣ್ಯದಲ್ಲಿ ಶರಣರ ಬಗೆಗಿದ್ದ ಬಿಜ್ಜಳನ ದ್ವೇಷವು ಕಡಿಮೆಯಾದೀತೆಂಬ ಆಶೆ ಮಣ್ಣುಗೂಡಿತ್ತು.'

'ಈ ಆಶೆಯಿಂದಲೇ ಪತಿಯ ಸಂದೇಶವನ್ನು ಉದಾಸೀನವಾಗಿ ಕಂಡು ಸಂಗಮಕ್ಕೆ ಹೋಗದೆ ಯಾತ್ರಾದಳದಲ್ಲಿ ಉಳಿಯಬೇಕಾಗಿತ್ತು.'

'ಇತ್ತೀಚಿಗೆ ದುರಾಗ್ರಹಿಯಾದರೂ ಸೋದರನಂತೆ ತನ್ನನ್ನು ಜೋಪಾನ ಮಾಡಿದ ಬಿಜ್ಜಳನ ಮರಣದಿಂದ ಮರುಕವು ಒಂದು ಕಡೆ ಬಾಧಿಸುತ್ತಿತ್ತು.'

'ಪತಿಯ ಸಂದೇಶದ ನೆನಹು ಮತ್ತೆ ಜಾಗ್ರತವಾಗಿ, ತನ್ನ ನಿಷ್ಠುರದ ನಡೆಯನ್ನು ಒಂದು ಕಡೆ ಕೆಣಕುತ್ತಿತ್ತು.'

'ಶರಣರ ತಂಡದ ಈ ವನವಾಸವೂ ಎಲ್ಲರಿಗಿರುವಂತೆ ಇನ್ನೊಂದು ಕಡೆ ಚಿಂತೆಗೆ ಕಾರಣವಾಗಿತ್ತು.'

'ಜೀವನದಲ್ಲಿಯ ವೈರಾಗ್ಯವು ಇವೆಲ್ಲವುಗಳನ್ನು ಮೆಟ್ಟಿ ಮೇಲೆ ತುಳಿಲಾಡುತ್ತಿತ್ತು. ಶರೀರವು ಮಾತ್ರ ಕೊರಗು ಸೊರಗುಗಳಿಗೆ ಗುರಿಯಾಗಿತ್ತು. ಪ್ರಸಾದವನ್ನೇ ಸರಿಯಾಗಿ ಸೇವಿಸುತ್ತಿರಲಿಲ್ಲ !

ಆ ಮಹಾಶರಣೆ ಉಗ್ರವಾದ ಸಂಯಮವನ್ನು ಸಾಧಿಸಿ, ಅಲ್ಲಿ-ಇಲ್ಲಿ, ನಾನು-ತಾನು, ಪತಿ-ಪತ್ನಿ ಎಂಬ ಭೇದಸ್ವರೂಪಗಳನ್ನು ಬದಿಗೊತ್ತಿ ಜಯಶಾಲಿಯಾಗಿದ್ದಳು. ತಂಗಡಿಯ ಬೀಡಿಗೆ ಬಂದಾಗ ಶಾರೀರಿಕ ಜ್ವರಬಾಧೆಯಿಂದ ಬಹಳ ಅಶಕ್ತಳಾಗಿದ್ದರೂ ಆಕೆಯ ಮೊಗವು ಕಾಂತಿಯುಕ್ತವಾಗಿತ್ತು.

ಓಲೆಯ ಗ್ರಂಥ ಭಾಂಡಾರವನ್ನು ಸಾಗಿಸಿಕೊಂಡು ಹೋದ ಕಿನ್ನರಿ ಬೊಮ್ಮಯ್ಯನು, ಆ ಬಂಡಿಗಳು ಬೆಳವಲ ದಾಟಿ ಮಲೆನಾಡು ಸೇರಿದ ಬಳಿಕ ಹೊಣೆಗಾರರೊಡನೆ ಮುಂದೆ ಸಾಗಿಸಿ ತಾನು ಮರಳಿ ಬಂದು ತಂಗಡಿಯ ಬೀಡಿನಲ್ಲಿ ಯಾತ್ರಾದಳವನ್ನು ಕೂಡಿದನು. ಆತನು ಮನೆತನದಿಂದ ಅಕ್ಕಸಾಲೆಯಾದರೂ ಶರಣನಾಗುವ ಮೊದಲು ಯೋಧನೇ ಆಗಿದ್ದನು. ಮಹಾಯೋಧನಾಗಿದ್ದನು ಅವನು ಬೇಗ ಬಂದು ಕೂಡಿದ್ದರಿಂದ ಮಾಚಿದೇವನಿಗೆ ಬಲಗೈ ಬಂದಂತಾಯಿತು. ದಳದ ಉಪನಾಯಕನೆಂದು ಕಿನ್ನರಿ ಬೊಮ್ಮಯ್ಯನು ನೇಮಕವಾದನು.

ನೀಲಾಂಬೆ ಬಯಲಾದಳು

ಎರಡನೆಯ ದಿನ ಮುಂಜಾನೆ ಮಾಚಯ್ಯನು ಚೆನ್ನಬಸವಣ್ಣನನ್ನು ಕೂಡಿಕೊಂಡು ಅಂಬಿಗರ ಹಿರಿಯರೊಡನೆ ಹೊಳೆ ದಾಟುವ ಸಾಧ್ಯತೆಯನ್ನು ವಿಚಾರಿಸುತ್ತ ಕುಳಿತಿರುವಾಗ ಶಿಬಿರದಲ್ಲಿ ಪಡಿಹಾರಿ ಅಪ್ಪಣ್ಣನು ಕಾಣಿಸಿಕೊಂಡನು. ಅವನು ಹಿಂದಿನ ದಿನವೇ ಮೇಲೆ ಒಂದು ಹರದಾರಿ ದೂರದಲ್ಲಿ ಪರಿಶ್ರಮದಿಂದ ಹೊಳೆದಾಟಿದ್ದನು. ನಸುಕಿನಲ್ಲಿ ನಡೆದು ಶಿಬಿರಕ್ಕೆ ಬಂದನು. ಬಂದವನೇ 'ಶರಣು ಅಣ್ಣನವರೇ! ಮೂರು ದಿನಗಳ ಹಿಂದೆ ಬಸವರಾಜ ದೇವರು ಬಯಲಾದರು' ಎಂದನು.

"ಹಾಂ! ಏನು ಅಪ್ಪಣ್ಣ? ಅದು ಹೇಗೆ? ಏನಾಯಿತು?"

ಎನ್ನುತ್ತ ಎದ್ದು ನಿಂತರು ಚೆನ್ನಬಸವ-ಮಾಚಿದೇವರು! ಹತ್ತಿರದ ಗೂಡಾರದಲ್ಲಿದ್ದವರೂ ಎದ್ದು ಬಂದರು. ಹಿಂದಿನ ಹೆಣ್ಣುಮಕ್ಕಳ ಗೂಡಾರದಿಂದ ನಾಗಲದೇವಿ ಕಾತರದಿಂದ ಹೊರಬಂದಳು. ಕಣ್ಣೀರು ತುಂಬಿದ ಅಪ್ಪಣ್ಣನಿಂದ ಸಂಗಮದಲ್ಲಿಯ ಅಣ್ಣನವರ ಲಿಂಗೈಕ್ಯದ ಸಮಾಚಾರವನ್ನು ಕೇಳುವಾಗ ಎಲ್ಲರ ಹೃದಯಗಳು ಭಾರವಾದವು, ಕಂಠಗಳು ಬಿಗಿದವು. ಚೆನ್ನಬಸವಣ್ಣನು ನಿಂತಲ್ಲಿಯೇ ಕುಸಿದು ಕುಳಿತನು. ಕಣ್ಣೀರು ಧಾರೆಯಾಗಿದ್ದವು ಒಂದು ಗಳಿಗೆಯಲ್ಲಿ ಶಿಬಿರದ ಜನವೆಲ್ಲ ಅಲ್ಲಿ ಕೂಡಿತು. ಚೆನ್ನಬಸವಣ್ಣನು ಕಣ್ದೆರೆದು ನೋಡಿ ಭಾವಾವೇಶದಲ್ಲಿ ಗದ್ಗದವಾದರೂ ಸ್ಥಿರವಾಗಿ ನುಡಿದನು:

"ಲಿಂಗ ಜಂಗಮ, ಜಂಗಮ ಲಿಂಗವೆಂಬುದ ತೋರಿ,
ನಿಜೈಕ್ಯನಾದೆಯಲ್ಲಾ ನಿಜಗುರು ಬಸವಣ್ಣಾ!

ಪ್ರಸಾದ ಕಾಯ, ಕಾಯ ಪ್ರಸಾದವೆಂಬುದ ಎನ್ನ ಸರ್ವಾಂಗದಲ್ಲಿ
ಪ್ರತಿಷ್ಠಿಸಿ, ಎನ್ನನಾಗುಮಾಡಿ, ಮುಂದುವರಿದೆಯಯ್ಯಾ ಬಸವಣ್ಣಾ,
ಲಿಂಗ ಪ್ರಾಣ ಪ್ರಾಣಲಿಂಗವೆಂಬುದ ಎನ್ನಂತರಂಗದಲ್ಲಿ ಸ್ಥಾಪ್ಯವ ಮಾಡಿ.
ಎನ್ನ ನಿನ್ನಂತೆಮಾಡಿ ನಿಜಲಿಂಗದೊಳಗೆ ನಿರವಯವಾದೆಯಲ್ಲಾ
ಬಸವಣ್ಣಾ !

ಎನ್ನ ಮನವ ಮಹಾತತ್ವದಲ್ಲಿ ಲಯವ ಮಾಡಿ,
ನಿರ್ವಯಲಾಗಿ ಹೋದೆಯಲ್ಲಾ ನಿಜಲಿಂಗೈಕ್ಯ ಬಸವಣ್ಣಾ !
ನಿನ್ನ ಒಕ್ಕುಮಿಕ್ಕ ಶೇಷವನಿಕ್ಕಿ ಆಗುಮಾಡಿ, ನಿನ್ನಂತರಂಗದಲ್ಲಿ
ಅನ್ವೆನಾಗಾಯಿಯ.
ಇಂಬುಗೊಂಡಡೆ ಎನ್ನ ಮನ ನಿಮ್ಮ ಪಾದದಲ್ಲಿ ಕೊರಗಿತ್ತಯ್ಯಾ
ಸಂಗನಬಸವಣ್ಣಾ !

ಕೂಡಲ ಚೆನ್ನ ಸಂಗಯ್ಯನಿಗೆ ಸುಜ್ಞಾನವಾಹನವಾಗಬೇಕೆಂದು
ನಿರವಯವಾದೆಯಲ್ಲಾ ಸಂಗನಬಸವಣ್ಣಾ!”

ಮೇರುವಿನಂತೆ ಧೀರೆಯಾದರೂ ಕಳವಳಗೊಂಡ ನಾಗಲಾಂಬಿಯ ಹೃದಯ ದಿಂದ ಹೊರಹೊಮ್ಮಿದ ದುಃಖೋದ್ಗಾರಗಳಿವು :

“ನೀವು ಮೃತ್ಯಕ್ಕೆ ಬಂದು ನಿಂದರೆ
ಭಕ್ತಿಯ ಬೆಳವಿಗೆ ದೆಸೆದೆಸೆಗೆಲ್ಲಾ ಪಸರಿಸಿತಯ್ಯಾ ಬಸವಣ್ಣ !
ಸ್ವರ್ಗ ಮರ್ತ್ಯ ಪಾತಾಳದೊಳಗೆಲ್ಲಾ
ನಿಮ್ಮ ಭಕ್ತಿಯ ಬೆಳವಳಿಗೆಯ ಘನವನಾರು ಬಲ್ಲರೋ ಅಣ್ಣಾ ?
ಶಶಿಧರನಟ್ಟಿದ ಮಣಿಹ ಪೂರೈಸಿತ್ತೆಂದು ನೀವು ಲಿಂಗೈಕ್ಯನಾದರೆ
ಭಕ್ತಿ ನಿಮ್ಮೊಡನೆ ಹೋಯಿತಯ್ಯ ! ನಿಮ್ಮೊಡನೆ ಸದಾಚಾರ
ಹೋಯಿತಯ್ಯಾ !

ನಿಮ್ಮೊಡನೆ ಅಸಂಖ್ಯಾತರು ಹೋದರು ಅಣ್ಣಾ !
ಮೃತ್ಯುಲೋಕದ ಮಹಾಮನೆ ಶೂನ್ಯವಾಯಿತ್ತು ಬಸವಣ್ಣಾ !
ಎನ್ನನೊಯ್ಯದೆ ಹೋದೆಯಲ್ಲಾ ಪಂಚಪರುಷಮೂರ್ತಿ ಬಸವಣ್ಣಾ !
ಬಸವಣ್ಣ ಪ್ರಿಯ ಚೆನ್ನಸಂಗಯ್ಯಂಗೆ ಪ್ರಾಣಲಿಂಗವಾಗಿ
ಹೋದೆಯಲ್ಲಾ ಸಂಗನ ಬಸವಣ್ಣಾ !”

ಹಲವರು ಹಲವು ಬಗೆಯಾಗಿ ಬಸವರಾಜರನ್ನು ನೆನೆದು ನುಡಿದರು. ಮಾಚಯ್ಯನವರ ಉದ್ಗಾರ ಆ ನುಡಿಗಳಿಗೆಲ್ಲ ಮುಡಿಯಿಟ್ಟಂತಿತ್ತು. ಅದು !

“ಆಕಾರ ನಿರಾಕಾರವಾಯಿತಲ್ಲಾ ಬಸವಣ್ಣಾ !
    ಪ್ರಾಣ ನಿಃಪ್ರಾಣವಾಯಿತಲ್ಲಾ ಬಸವಣ್ಣಾ !
ಲಿಂಗಜಂಗಮದ ಮಾಟಕೂಟ ಸಮಾಪ್ತಿಯಾಯಿತಲ್ಲಾ ಬಸವಣ್ಣಾ !
ನಿಶ್ಶಬ್ದ ವೇದ್ಯವಾದೆಯಲ್ಲಾ ಬಸವಣ್ಣಾ !
ಕಲಿದೇವರ ದೇವನ ಹೃದಯ ಕಮಲವಹೊಕ್ಕು
    ದೇವರಿಗೆ ದೇವನಾಗಿ ಹೋದೆಯಲ್ಲಾ ಸಂಗನಬಸವಣ್ಣಾ !”

ನಾಗಲಾಂಬಿಗೆ ಶರಣೆಯರಲ್ಲಿ ಗಂಗಾಂಬಿಕೆ ಕಾಣಲಿಲ್ಲ. ನೀಲಲೋಚನೆಯ ನೆನಪೂ ಆಯಿತು. ಕೂಡಲೆ ಮರಳಿ ಗೂಡಾರದೊಳಗೆ ಬಂದಳು. ಅಲ್ಲಿ ಗಂಗಾಂಬಿಕೆ ನೀಲಾಂಬೆಯನ್ನು ತೊಡೆಯಮೇಲೆ ಹಾಕಿಕೊಂಡು ದುಃಖಿಸುತ್ತಿದ್ದಾಳೆ. ಸುತ್ತ ನಿಂತ ಶರಣೆಯರು ನೀಲಾಂಬೆಯ ಮೈ ಮೂಗು ಮುಟ್ಟಿ ನೋಡುತ್ತಿದ್ದಾರೆ. ತಟ್ಟನೆ ಮುಂದೆ ಬಂದ ನಾಗಲಾಂಬೆಯೂ ಮುಟ್ಟಿ ನೋಡಿದಳು. ನೀಲಾಂಬೆ ಲಿಂಗೈಕ್ಯಳಾಗಿದ್ದಳು.

ಗಂಗಾಂಬಿಕೆ ನಾಗಲಾಂಬೆಯನ್ನು ನೋಡಿ “ಅವರು ಹೋದರು, ಅವರೊಡನೆ ತಂಗಿ ಹೋದಳು ! ನಾನೇಕೆ ಹೋಗಲಿಲ್ಲ ಅಮ್ಮಾ ?” ಎಂದು ಅಳಹತ್ತಿದಳು. ಕಂಬನಿ ಇಳಿಯುತ್ತಿದ್ದರೂ ದೃಢಕಂಠದಿಂದ ಹೇಳಿದಳು ನಾಗಲಾಂಬೆ

“ಹಾಗೆಲ್ಲಾ ಅನ್ನಬಾರದು ಗಂಗಾ ! ಸಂಗಯ್ಯ ದೊಡ್ಡವನಾದ ಮೇಲೆ ನಿನ್ನ ಮಣಿಹ ಮುಗಿಯುವದು.”

*   *   *   *

ಹಿಂದಿನ ದಿನವೇ ನೀಲಾಂಬೆಗೆ ಅಶಕ್ತಿಯಿಂದ ಬಳಲಿಕೆಯಾಗಿತ್ತು. ಈ ದಿನ ಮುಂಜಾನೆ ಗಂಗಾಂಬಿಕೆ ಅವಳ ಸ್ನಾನಮಾಡಿಸಿ ಪೂಜೆಗೆ ನೆರವಾಗಿ ಆಕೆಗಾಗಿ ಹಾಲು–ಗಂಜಿ ತರಲು ಹಿಂದೆ ಅಡುಗೆಯ ಚಪ್ಪರಕ್ಕೆ ಹೋಗಿದ್ದಳು. ಪೂಜೆ ಮುಗಿಸಿ ನೀಲಾಂಬೆ ಲಿಂಗಯ್ಯನನ್ನು ನೋಡುತ್ತ ನಾಲ್ಕುದಿನಗಳಿಂದ ಮನದಲ್ಲಿ ಮೂಡಿದ ನುಡಿಗಳನ್ನು ಮೆಲ್ಲಗೆ ಹಾಡುತ್ತಿದ್ದಳು :

‘ಇಪ್ಪೆಯ ಹೂವನನುಗೊಳಿಸಲು ಇಪ್ಪೆ ಹಿಪ್ಪೆಯಾಯಿತ್ತು
ಸರ್ಪನ ಶಿರಕಂಠದಲ್ಲಿ ಮೂಗುತಿಯ ಸರಗೊಳಿಸಿದೆನಯ್ಯಾ !
ನೀವಲ್ಲಿದ್ದರೇನು, ನಾವಿಲ್ಲಿದ್ದರೇನು ? ನಮ್ಮ ನಿಮ್ಮ ಸಂಸರ್ಗದಲ್ಲಿ

ನಿರುಪಮ ನಿರಾಕಾರ ಮೂರ್ತಿಯಾಗಿ ನಿರುಪಯವಗೈದಿ
ನಿಜಸುಖಿಗಳಾದೆವು
ಬಸವನಲ್ಲಿ ಎನಗೆ ತೆರಹಿಲ್ಲವಯ್ಯ ! ಭಾವಶೂನ್ಯಳು ನಾನು ಸಂಗಯ್ಯಾ!'

ಅಷ್ಟರಲ್ಲಿ ಗೂಡಾರದ ಮಗ್ಗಲಲ್ಲಿ ಒಬ್ಬರಿಗೊಬ್ಬರು ಕಾತರದಿಂದ ಹೇಳುತ್ತಿದ್ದ 'ಬಸವಣ್ಣನವರು ಬಯಲಾದ ಸುದ್ದಿ' ಕಿವಿಗೆ ಬಿದ್ದಿತು. ಕಿವಿಗೊಟ್ಟು ಕೇಳಿದಳು. 'ಹೌದು ನಿಜ ಬಯಲಾದರು' ಮೇಲೆತ್ತಿ ಕೈಯ್ಯಲ್ಲಿಯ ಲಿಂಗವನ್ನು ಮತ್ತೆ ನೋಡಿದಳು. ಎಲ್ಲಿಲ್ಲದ ಶಕ್ತಿ ಕಂಠದಲ್ಲಿ ಬಂದಿತು. ಸ್ಪುಟವಾಗಿ ಹೇಳಹತ್ತಿದ ವಚನ ಮಂದವಾಗಿ ಮುಗಿಯಿತು. ಅದು :

"ಕಾಮಿತವ ಕಂಗೋಳಿಸಿದ ಗುರುವೆ, ಕಲ್ಪಿತವ ನಷ್ಟವ ಮಾಡಿದ ಗುರುವೆ
ಎತ್ತಲಡಗಿದೆಯಯ್ಯಾ ?
ಸುಖದುಃಖವನೊಂದು ರೂಪಮಾಡಿದ ಗುರುವೆ
ಎತ್ತಲಡಗಿದೆಯಯ್ಯಾ ?
ಸಂಗಯ್ಯ ಗುರುಬಸವ, ಕರಸ್ಥಲ ಬಯಲಾಗಿತ್ತೆನಗೆ ಎಲೆ ಅಯ್ಯಾ !
ಕರಸ್ಥಲ ಮನಸ್ಥಲವಾಯಿತ್ತು ಸಂಗಯ್ಯಾ !
ಬಸವ ಹೋದನತ್ತ; ನಾನಡಗಿದೆನಯ್ಯ ನಿನ್ನತ್ತ !

ಜಗತ್ತು ಮರೆಯಾಗಿತ್ತು ಲಿಂಗವೊಂದೇ ಅರಿವಾಗಿತ್ತು. ನೋಡ ನೋಡುತ್ತಲೆ ಲಿಂಗದಲ್ಲಿ ಲೀನವಾಯಿತು ಪ್ರಾಣ ಕೂಡ ! ಇನ್ನೇನು ದೇಹ ಹೊರಳಿ ಬೀಳುತ್ತಿತ್ತು. ಹಿಂದಿನ ಚಪ್ಪರದಿಂದ ಬಂದ ಗಂಗಾಂಬಿಕೆ ಪಾತ್ರೆ ಇಟ್ಟು ಹಿಡಿದು ತೊಡೆಯ ಮೇಲೆ ಹಾಕಿಕೊಂಡಳು: ಶರಣೆಯೊಬ್ಬಳು ಬಂದು ಗಂಗಾಂಬೆಗೆ ಹೇಳಿದಳು ಬಸವರಾಜರು ಬಯಲಾದುದನ್ನು! ಕೇಳಲಾಗದ ವಾರ್ತೆ! ನೋಡಲಾಗದ ದೃಶ್ಯ!! ದುಃಖ ಇಮ್ಮಡಿಸಿತ್ತು ಗಂಗಾಂಬೆಗೆ! ಬಳಿಕ ಸ್ವಲ್ಪ ಹೊತ್ತಿನ ಮೇಲೆ ನಾಗಲಾಂಬೆ ಮೇಲೆ ಹೇಳಿದಂತೆ ಬಂದು ನೋಡಿದ್ದು.

ನೀಲಲೋಚನೆ ಲಿಂಗೈಕ್ಯಳಾದುದು ಶರಣರಿಗೆಲ್ಲ ಎರಡನೆಯ ಆಘಾತವಾಯಿತು.

ಚೆನ್ನಬಸವಣ್ಣನವರು ಆತ್ಮ ಶಕ್ತಿಯಿಂದ ಅಪರಿಮಿತ ಸಂಯಮದಿಂದ ವರ್ತಿಸಿ ಎಲ್ಲರಿಗೂ ಧೈರ್ಯ ಹೇಳಿದರು. ನೀಲಾಂಬೆಗೆ ಕೃಷ್ಣೆಯ ಉತ್ತರದ ತೀರದಲ್ಲಿ ಸಮಾಧಿಯಾಯಿತು. ಅಲ್ಲಿಂದ ದಕ್ಷಿಣ ತೀರದ ಸ್ವಲ್ಪ ಪಶ್ಚಿಮದಲ್ಲಿ

ಸಂಗಮನಾಥನ ಮಂದಿರವೂ ಬಸವಣ್ಣನವರ ಗದ್ದುಗೆಯೂ ನೇರವಾಗಿ ಕಾಣು ತ್ತವೆ. ಆ ಶಿವಯೋಗಿಣಿಯ ಸಮಾಧಿಯ ಪೂಜೆಗೆ ಅಪ್ಪಣ್ಣನು ನಿಯಮಿಸ ಲ್ಪಟ್ಟನು. ತಂಗಡಿಯಲ್ಲಿ ತಂಗಿ ಅಡಗಿದುದರಿಂದ ಆ ಗ್ರಾಮವು ತಂಗಡಗಿ ಯಾಯಿತಂತೆ. ಅಪ್ಪಣ್ಣನ ಸಮಾಧಿಯೂ ಅಲ್ಲಿಯೇ ಆಗಿದೆ.

ವೀರಶೈವವಾಗಿ ಉಳಿಯಿತು ಶರಣಧರ್ಮ

ಬಸವರಾಜ ನೀಲಬ್ಬೆಯರು ಬಯಲಾದ ದುಗುಡ ದುಮ್ಮಾನದಲ್ಲಿಯೇ ಶರಣದಳವಿರುವಾಗ ಮಾರನೆಯ ದಿನ ಹಗಲಿನಲ್ಲಿ 'ಮಾಧವನ ಸೈನ್ಯವು ಸನಿಹದಲ್ಲಿ ಬಂದಿದೆ. ಇಂದಿನ ರಾತ್ರಿ ಶಿಬಿರದ ಮೇಲೆ ದಾಳಿಯಾಗಬಹುದು' ಎಂಬ ವೃತ್ತಾಂತವು ಬಂದಿತು. ಇದು ಅಗ್ನಿಪರೀಕ್ಷೆಯೆಂದು ಬಗೆದರೂ ಶರ ಣರು ಬೆದರಲಿಲ್ಲ. ಮಾಚದೇವ ಕಿನ್ನರಿ ಬೊಮ್ಮಯ್ಯರು ಗಣಾಚಾರಿಯೋಧ ನಾಯಕರನ್ನು ಕೂಡಿಕೊಂಡು ಮಾಧವನನ್ನು ತಂಗಡಿಯ ಕಣಿವೆಯ ಮುಖ ದಲ್ಲಿಯೇ ಎದುರಿಸುವ ಏರ್ಪಾಡು ಮಾಡಿಕೊಂಡರು.

ಮಾಧವನು ಶರಣರ ಬಲ ಬೆಳೆದುದನ್ನು ಅರಿಯನು. ಕಲ್ಯಾಣದಿಂದ ಹೊರಟವರನ್ನಷ್ಟು ಬಲ್ಲವನಾಗಿ 'ಈ ಅಯ್ಯಗಳೆಷ್ಟರವರೆಂದು ಅವಸರದ ಸಣ್ಣ ಸೈನ್ಯದೊಡನೆ ಹೊರಟು ಬಂದಿದ್ದನು. ಚೆನ್ನಬಸವಣ್ಣ ಮಾಚಯ್ಯ ಮುಂತಾ ದವರನ್ನು ಸೆರೆಹಿಡಿದು ಬಿಜ್ಜಳನ ಕೊಲೆಯ ಆರೋಪಕ್ಕೆ ಗುರಿಮಾಡಿ ನಾಶ ಗೊಳಿಸುವದು ಅವನ ಧ್ಯೇಯವಾಗಿತ್ತು. ಅವನ ಈ ಎಣಿಕೆ ತಪ್ಪಾಗಿತ್ತು ! ರಾತ್ರಿ ಅವನ ಅಶ್ವದಳ ರಭಸವಾಗಿ ಕಣಿವೆಯಿಂದ ಹೊರಬೀಳುವಾಗ ಬಿದಿರ ಬಲೆಯಲ್ಲಿ ಶಿಲುಕಿ ಅಶ್ವಗಳು ಉರುಳಿದವು. ಎಡಬಲದ ದಿನ್ನೆಗಳಿಂದ ತೀಕ್ಷ್ಣ ಬಾಣಗಳು ಬಂದು ಭಟರ ಪ್ರಾಣ ತಕ್ಕೊಂಡವು. ಆ ಮೇಲೆ ಮಾಚಿದೇವನು ಮಾಧವನನ್ನು ಹುಡುಕಿ ಎದುರಾದಾಗ ಮಾಧವನು ಗಾಯಗೊಂಡು ಓಡಿ ಹೋದನು. ಅಳಿದುಳಿದವರನ್ನು ಕೂಡಿಕೊಂಡು ದೂರದಲ್ಲಿ ಬೀಡಾರ ಮಾಡಿ ಬೆಳಗಿನಲ್ಲಿ ಕಲ್ಯಾಣದ ಹಾದೀ ಹಿಡಿದನು. ಸೋವಿದೇವನ ಮುಂದೆ ಖಿನ್ನ ವಾಗಿ ನಿಂತನು.

ಇದುವರೆಗೆ ಚೆನ್ನಬಸವಣ್ಣನ ಬಗೆಗೆ ಶರಣರ ಬಗೆಗೆ ಸೋವಿದೇವನು ತಾಳಿದ್ದ ಭಾವನೆಯು, ಶರಣರ ಬಲಪ್ರಯೋಗದ ಪ್ರತಿಭಟನೆಯಿಂದ ಬದಲಾ

ಯಿತು. ಅದೇ ಹೊತ್ತಿಗೆ ಬಿಜ್ಜಳನ ಹಿರಿಯ ಅಳಿಯನಾದ ಎಲಬುರ್ಗಿಯ ಚಾವುಂಡರಾಯನು ಮಾವನ ಮರಣವಾರ್ತೆಯನ್ನು ಕೇಳಿ ಕಲ್ಯಾಣಕ್ಕೆ ಬಂದಿದ್ದನು. ಸೋವಿದೇವನು ಶರಣರನ್ನು ನಿಗ್ರಹಿಸುವದಕ್ಕಾಗಿ ಆ ಚಾವುಂಡ ರಾಯನ ಅಧಿಪತ್ಯದಲ್ಲಿ ಸೈನ್ಯವನ್ನು ಕಳಿಸಿದನು.

ಇತ್ತ ಶರಣರು ತಡಸಿಯ ಹಾಯ್ಗಡದಿಂದ ಕೃಷ್ಣೆಯನ್ನು ದಾಟಿ ತೊರಗಲ್ಲ ಸೀಮೆಗೆ ಬಂದಾಗ ಬಿಜ್ಜಳನಳಿಯನ ಸೈನ್ಯ ಸಮೀಪಿಸಿತ್ತು. ಆ ಭಾಗದ ಕಡಕೋಳ, ಗೊಡಚಿ, ಸತ್ತೀಗೆರಿಗಳಲ್ಲಿ ಬೀಡಾರ ಮಾಡುತ್ತ ಸಾಗಿ ರುವಾಗ ತಮ್ಮ ಮೇಲೆ ಸಾಗಿ ಬಂದ ಸೈನ್ಯದ ಸುದ್ದಿ ಅವರಿಗೆ ತಿಳಿಯಿತು. ತಾವೂ ಯುದ್ಧ ಜೋಡಣೆ ಮಾಡಿಕೊಂಡು ಹಿಂದೆ ರಕ್ಷಕ ದಳವನ್ನಿಟ್ಟು ಕೊಂಡು ಜಾಗ್ರತೆಯೊಡನೆ ಮುರಗೋಡಕ್ಕೆ ಬಂದರು. ಅಲ್ಲಿ ಮೊದಲೂ ರೆಂಬಲ್ಲಿ ಚಾವುಂಡರಾಯನ ಸೈನಿಕರಿಗೂ ಶರಣರಿಗೂ ನಿಕರದ ಕಾಳಗವಾ ಯಿತು. ಅದರಲ್ಲಿ ಶರಣರಿಗೆ ಜಯವಾದರೂ ಅವರಲ್ಲಿಯ ಕೆಲವು ಜನ ಭಟರು ಮರಣ ಹೊಂದಿದರು. ತಲ್ಲೂರ ಮುರಗೋಡಗಳ ಕಾಳಗಗಳಲ್ಲಿಯೂ ಶರಣರು ವಿರೋಧಿಗಳನ್ನು ಹಿಮ್ಮೆಟ್ಟಿಸಿ ರಕ್ಷಣೆ ಮಾಡಿಕೊಂಡರು. ಈ ಹೋರಾಟಗಳಲ್ಲಿ ನಾಗಲಾಂಬೆ ಗಂಗಾದೇವಿಯವರು ಯೋಧರನ್ನು ಪ್ರೋತ್ಸಾ ಹಿಸುತ್ತಿದ್ದರಲ್ಲದೆ ಗಾಯಾಳುಗಳ ಸೇವೆಯನ್ನು ಸ್ವತಃ ಮಾಡಿದರು. ಸೆರೆ ಸಿಕ್ಕು ಮೂರ್ಛಿತನಾದ ಚಾವುಂಡರಾಯನ ಪ್ರಾಣವನ್ನು ನಾಗಲೆಯು ತಮ್ಮ ಭಟರಿಗೆ ಹೇಳಿ ಉಳಿಸಿದಳು. ಸಂಪದ್ಗ್ರಾಮದ (ಸಂಪಗಾವಿಯ) ಮಂಡಲಾ ಧಿಪತಿಯ ಆಶ್ರಯವನ್ನು ಬಯಸಿ ಚೆನ್ನಬಸವಣ್ಣನವರು ತಮ್ಮ ದಳವನ್ನು ಅತ್ತಸಾಗಿಸಿದರು. ದಕ್ಷಿಣದ ಮಂಡಲಾಧಿಕಾರಿಗಳೂ ಜನರೂ ಒಡೆದು ಹೋದ ಕಲಚೂರ್ಯ ಪ್ರಭುತ್ವಕ್ಕೆ ವಿರೋಧವಾಗಿ ಶರಣರಿಗೆ ಸಹಾಯ ಮಾಡಲು ಹಿಂಜರಿಯಲಿಲ್ಲ. ಸಂಚಾರದಲ್ಲಿದ್ದ ರುದ್ರಮುನಿದೇವರು ಅಲ್ಲಿ ಬಂದು ಶರಣರನ್ನು ಕೂಡಿದರು ಅದರಿಂದ ಶರಣರಿಗೆ ಹೆಚ್ಚು ಬಲ ಬಂದಿತು. ಸೋವಿದೇವನ ಸೈನಿಕರ ಕಿರುಕಳ ದಾಳಿಗಳನ್ನೆಲ್ಲ ಹಿಮ್ಮೆಟ್ಟಿಸಲಾಯಿತು. ಆಗ ಹಿಂಚಲ, ಸಂಪಗಾಂವಿ, ಮುದರೇಭಾವಿ, ನಂದೀಹಳ್ಳಿ, ಚಿಪ್ಪಟಗುಂದಿ ಈ ಗ್ರಾಮಗಳಲ್ಲಿ ಶಿಬಿರ ಇಡಲಾಗಿತ್ತು. ಆಗಿನ ಹೋರಾಟದಲ್ಲಿ ಮಡಿವ ಬಂಕ ಯ್ಯನ ಸಮಾಧಿ ಹಿಂಚಲದಲ್ಲಿದೆ. ಆ ಪ್ರಸಂಗದಲ್ಲಿ ನಾಗಲಾಂಬೆಯ ಪ್ರಭಾ

ವವು ಆ ಪ್ರದೇಶದಲ್ಲಿ ತುಂಬಾ ಮೂಡಿತು. ಆಕೆಯ ಮುಖ್ಯ ಶಿಬಿರವಿದ್ದ ಸ್ಥಳದಲ್ಲಿ 'ನಾಗಲಾಪುರ' ವೆಂಬ ಗ್ರಾಮವಾಗಿ ಅಲ್ಲಿ ನಾಗಲಾಂಬೆಯ ಮೂರ್ತಿಯು ಸ್ಥಾಪಿಸಲ್ಪಟ್ಟಿದೆ. ಹತ್ತಿರದಲ್ಲಿ ಚೆನ್ನಬಸವನ ಗುಡಿಯೂ ಇದೆ. ಕಡೆಯ ಸಾರೆ ಮತ್ತೆ ಸುಸಜ್ಜಿತನಾಗಿ ಬಂದ ಅಳಿಯ ಬಿಜ್ಜಳನ (ಬಿಜ್ಜಳನಳಿಯ ಚಾವುಂಡರಾಯನ) ಸೈನ್ಯಕ್ಕೂ ಶರಣರಿಗೂ ಕಾತರವಳ್ಳಿ ಯಲ್ಲಿ ಕಡುತರವಾದ ಕಾಳಗವೆಸಗಿತು. (ಕ್ರಿ. ವ. ೧೧೬೮)

ಈ ಕಾತರವಳ್ಳಿಯ ಕಾಳಗದಲ್ಲಿ ಮಾಚಿದೇವ ಕಿನ್ನರಬೊಮ್ಮಯ್ಯರು ಇಪ್ಪತ್ತೈದು ವರ್ಷಗಳ ಹಿಂದಿನ ತಮ್ಮ ಕಾದಿಟ್ಟ ಯುದ್ಧಚಾತುರ್ಯವನ್ನು ತುಂಬಾ ಉಪಯೋಗಿಸಿದರು. ನಾಗಲಾಂಬೆ, ರುದ್ರಮುನಿ ದೇವರು, ಚೆನ್ನ ಬಸವರು ಸಂಪಾದಿಸಿದ ಲೋಕಸಂಗ್ರಹಶಕ್ತಿಯಿಂದ ಸೈನಿಕ ಸಾಮಗ್ರಿಯುಗಳು ಒದಗಿ ಬಂದವು. ಕಾರಣಗಳಿಂದ ಚಾವುಂಡನು ಸೋತು ಮಡಿದನು. ಅವನ ಅಳಿದುಳಿದ ದಂಡು ಚದರಿ ಹೋಯಿತು. ಆ ಮೇಲೆ ಸೋವಿದೇವನು ಶರಣರ ಗೋಜಿಗೆ ಬರುವದನ್ನು ಬಿಟ್ಟುಬಿಟ್ಟನು.

ಕುರಗೋಡಿನಲ್ಲಿ ಶರಣರ ಮಹಾಪರ್ವ ನಡೆಯಿತು. ಅಲ್ಲಿ ನಡೆದ ಸಭೆ ಚರ್ಚೆಗಳ ಪರಿಣಾಮವಾಗಿ ಎಲ್ಲರೂ ಭವಿಷತ್ಕಾಲದ ತಮ್ಮ ತಮ್ಮ ನೆಲೆಗ ಳನ್ನು ನಿರ್ಧರಿಸಿಕೊಂಡರು. ರಕ್ಷಣೆಯ ನೆರವಿಗೆ ಬಂದ ದೂರದ ಗಣಾಚಾರಿ ದಳಗಳನ್ನು ಅಲ್ಲಿಂದಲೇ ಸನ್ಮಾನಿಸಿ ಬೀಳ್ಕೊಟ್ಟರು. ಸಮೀಪ ಪ್ರದೇಶದ ದಳಗಳು ಮಾತ್ರ ಉಳವೆಯವರೆಗೆ ಉಳಿಯುವದು ಗೊತ್ತಾಯಿತು. ಮುಂದಿನ ಪ್ರಯಾಣದ ರಕ್ಷಣೆಯ ನಾಯಕತ್ವವನ್ನು ಕಿನ್ನರಿ ಬೊಮ್ಮಯ್ಯನು ವಹಿಸಿಕೊಂಡದ್ದರಿಂದ ಮಾಚಿದೇವನು ಸ್ವಸ್ಥಳವಾದ ಹಿಪ್ಪರಿಗಿಗೆ ಹೊರಟನು. ಅವನ ಶೌರ್ಯ ಸಾಹಸಗಳ ಪರಿಣಾಮವಾಗಿ ಮುಂದೆ ಶರಣ ಧರ್ಮವು ವೀರ ಶೈವನಾಗಿ* ಉಳಿಯುವಂತಾಯಿತು.

ಉಳಿವೆ

ಆ ಪ್ರದೇಶದ ಭಕ್ತರ ಆಗ್ರಹದಂತೆ ನಾಗಲಾಂಬೆಯ ಉಪದೇಶದಿಂದ ಗಂಗಾಂಬಿಕೆಯು ಸಂಗಯ್ಯನ ಪಾಲಿಗೆ-ಪೋಷಣೆ-ವಿದ್ಯಾಭ್ಯಾಸಗಳ ನಿರ್ವಹ ಣೆಗಾಗಿ (ಮುಗಟಖಾನ) ಹುಬ್ಬಳ್ಳಿಯ ಹತ್ತಿರ ಮಲಪ್ರಭೆಯ ತೀರದಲ್ಲಿ

ನೆಲಸಿ ನಿಂತಳು. ಹಿರಿಯ ಅನುಭಾವಿಗಳು ತತ್ವಜ್ಞಾನದಲ್ಲಿ ಆಸಕ್ತಿಯುಳ್ಳವರು ಉಳಿವೆಗೆ ಹೊರಟರು. ಉಳಿದ ಹಲಕೆಲವರು ಅಲ್ಲಿಂದಲೇ ಬೇರೆ ಬೇರೆ ಕಡೆಗೆ ಹರಿದು ಹೋಗಿ ಆತ್ಮೋದ್ಧಾರ-ಭಕ್ತೋದ್ಧಾರಗಳನ್ನು ಕೈಕೊಂಡರು.

ಗೋವೆಯ ಕದಂಬರ ಶಿವಚಿತ್ತರಾಜನ ಮಗ ಜಯಕೇಶಿರಾಜನು ಭಕ್ತಿಯುತನಾಗಿ ಚೆನ್ನಬಸವಣ್ಣನನ್ನು ಕಂಡು ಅಲ್ಲಿಂದ ಉಳಿವೆಯವರೆಗಿನ ಶರಣರ ಪ್ರಯಾಣಕ್ಕೆ ಸರಂಜಾಮು ಒದಗಿಸಿದನು. ಈ ಮೊದಲು ಓಲೆಯ ಭಾಂಡಾರವನ್ನು ಮಲೆನಾಡಿನಲ್ಲಿ ಸುರಕ್ಷಿತವಾಗಿ ಸಾಗಿಸುವದಕ್ಕೂ ಸಹಾಯ ಮಾಡಿದ್ದನು. ಈ ಬಗೆಯ ನೆರವಿನಿಂದ ಶರಣರು ಮುಂದೆ ಎರಡು ಗುಂಪುಗಳಾಗಿ ಉಳವೆಗೆ ಹೋದರು

ಒಂದು ಗುಂಪಿನವರು ಬೀಡಿ, ಹಲಸಗೆ, ಕಕ್ಕೇರಿ, ಲಿಂಗನಮಠ, ಜಂಗಮಹಟ್ಟಿ ಇವುಗಳಲ್ಲಿ ಬೀಡಾರ ಮಾಡುತ್ತಾ ಸಾಗಿದರು. ಇಲ್ಲೆಲ್ಲ ಆ ಬಗೆಗೆ ಕುರುಹುಗಳೂ ದೇವಸ್ಥಾನಗಳೂ ಉಂಟಾಗಿವೆ. ಶರಣಕಕ್ಕಯ್ಯನು ಕಕ್ಕೇರಿಯಲ್ಲಿ ಮಡಿದುದರಿಂದ ಅಲ್ಲಿ ಅವನ ಸಮಾಧಿಯಾಗಿದೆ-ಅಲ್ಲಿಂದ ಗಹನಾರಣ್ಯವನ್ನು ಪ್ರವೇಶಿಸಿ ಜಗಳಬೆಟ್ಟ, ಸಾಂಬ್ರಾಣಿಗಳಿಗೆ ಬಂದರು. ಮಲೆನಾಡಿನಲ್ಲಿ ವಸಾಹತು ಮಾಡಿದ ಶರಣರ ಧರ್ಮದ ಪ್ರಭಾವಕ್ಕೆ ಕರುಬಿದ್ದ ಪರಮತ ಪಂಗಡಗಳು ಈ ದಳಕ್ಕೆ ಉಪದ್ರವ ಕೊಟ್ಟವು. ಸಾಂಬ್ರಾಣಿ

---

* ಶರಣರ ಆತ್ಮರಕ್ಷಣೆಯ ಹೋರಾಟದಿಂದ 'ವೀರಶೈವ'ವೆನಿಸಿತೆಂಬುದು ಒಂದು ರೂಪಕ ಮಾತ್ರ. ವೀರವ್ರತ (ವ್ರತನಿಯಮಗಳ ಪಾಲಿಸುವದರಲ್ಲಿ ಛಲ) ಉಳ್ಳುದು ವೀರಶೈವ! ಶೈವದ ಪರಮಾಂತ್ಯ-ಪರಮೋಕ್ಷ-ಸಿದ್ಧಿಯನ್ನು ಸಾಧಿಸುವದು ವೀರಶೈವವು !

'ವೀರಶೈವ' 'ಇಷ್ಟಲಿಂಗ' ಶಬ್ದ ಪ್ರಯೋಗ ಶಿವಾಗಮಗಳಲ್ಲಿದೆ. ಆದರೆ ಅವುಗಳಲ್ಲಿ ವೀರಶೈವದ ವಿವರಣೆ ಷಟ್‌ಸ್ಥಲಯುಕ್ತವಾಗಿದ್ದರೂ, ಅದು ಕರ್ಮಪ್ರಾಧಾನ್ಯ, ಸ್ಥಾವರ ಪೂಜೆ, ಹೋಮವಿಧಾನ ಇವುಗಳಿಂದ ಕೂಡಿ ಇನ್ನುಳಿದ ಶೈವಗಳ ಓಘದಲ್ಲಿ ಶಿಲುಕಿದಂತಿದೆ. ಸಂಸ್ಕರಣಗೊಂಡು ಪರಿಶುದ್ಧವಾದ ಷಟ್‌ಸ್ಥಲ ವಿಕಾಸ ಮಾರ್ಗವು, ಪ್ರಮಥರಿಂದಲೇ-ಮುಖ್ಯವಾಗಿ ಬಸವೇಶ - ಚೆನ್ನಬಸವೇಶರಿಂದಲೇ-ಪ್ರತಿಷ್ಠಿತವಾಯಿತು. ಆದುದರಿಂದ ಅದು ಶರಣಧರ್ಮ ! ಅದುವೇ ಮುಂದೆ ಪ್ರಚಲಿತ ವೀರಶೈವ !

ಆಧಾರ : ಷಟ್‌ಸ್ಥಲ ಪ್ರಭೆ,— ಡಾ. ಆರ್. ಸಿ. ಹಿರೇಮಠ

ಯಲ್ಲಿ ಇಂತಹ ಒಂದು ಪ್ರಸಂಗವನ್ನು ಎದುರಿಸಿ ಪಾರಾಗಬೇಕಾಯಿತು. ಈ ಹೋರಾಟದಲ್ಲಿ ಕಿನ್ನರಿ ಬೊಮ್ಮಯ್ಯನ ಶೌರ್ಯವು ಜಯಪಡೆಯಿತು. ಮುಂದೆ ನಾಲ್ಕು ಗಾವುದ ಪ್ರಯಾಣ ಮಾಡಿ ಯಲ್ಲಾಪುರಕ್ಕೆ ಬಂದರು.

ಎರಡನೆಯ ಗುಂಪಿನವರು ಕಿತ್ತೂರು, ರಣಗಟ್ಟಿ, ನರೇಂದ್ರ, ಧಾರವಾಡ, ಸತ್ತೂರು, ಅಮರಗೋಳ, ಉಣಕಲ್ಲ ಮಾರ್ಗವಾಗಿ ಮಲೆನಾಡು ಪ್ರವೇಶಿಸಿ, ನಾಗರಕೊಪ್ಪ, ಗಂಜೀಗಟ್ಟಿ, ತಂಬೂರ ವರೆಗೆ ಬಂದು ಅಲ್ಲಿ ಕೆಲವು ದಿವಸ ತಂಗಿದ್ದರು. ಈ ಸ್ಥಳಗಳಲ್ಲೆಲ್ಲ ಈ ಬಗೆಗೆ ಕುರುಹುಗಳೂ ಗುಡಿಗಳೂ ಉಂಟಾಗಿವೆ. ತಂಬೂರಲ್ಲಿ ಅದರ ಸಮೀಪದ ಸ್ಥಳಗಳಲ್ಲಿ ಅವು ವಿಶೇಷವಾಗಿವೆ. ಈ ತಂಡದವರಿಗೂ ಅಲ್ಲಲ್ಲಿ ಪರವಾದಿಗಳಿಂದ ವಾದಪ್ರಸಂಗಗಳು ಪ್ರತಿಭಟನೆಗಳು, ಉಪದ್ರವ ದಾಳಿಗಳು ಎದುರಾದವು. ಅವುಗಳನ್ನೆಲ್ಲ ಪಾಂಡಿತ್ಯ-ಬುದ್ಧಿ-ಶೌರ್ಯಗಳಿಂದ ನಿವಾರಿಸಿಕೊಳ್ಳುತ್ತ ಯಲ್ಲಾಪುರಕ್ಕೆ ಬಂದು ಮೊದಲಿನ ತಂಡವನ್ನು ಕೂಡಿದರು.

ಮುಂದೆ ಉನ್ನತವಾದ ಗಿಡಮರಗಳಿಂದ-ಪರ್ವತಶ್ರೇಣಿಗಳಿಂದ-ನದಿಯ ಕೊಳ್ಳಗಳಿಂದ ದುರ್ಗಮವಾದ ಮಾರ್ಗದಲ್ಲಿ ಪ್ರಯಾಣ ಮಾಡಿ ಉಳಿವೆಯನ್ನು ಸೇರಿದರು.

ಗೋವೆಯ ಜಯಕೇಶಿ ರಾಜನ ಸಾಮಂತರಾಜರಾದ ಸೂಪಕಂಪಣದ ಹರಿಯಪ್ಪ ಬೊಪ್ಪರಸರ ವೃದ್ಧರಾಣಿಯರು ತಮ್ಮ ಸಂಪತ್ತನ್ನೆಲ್ಲ ನೀಡಿ ಉಳಿವೆಯಲ್ಲಿ ಮಹಮನೆ ಶಿವಪುರಗಳ ರಚನೆಗೆ ನೆರವಾದರು.

ಕಿನ್ನರಿ ಬೊಮ್ಮಯ್ಯನು ಬೆಟ್ಟವನ್ನು ಕಡಿದು ಸಮೀಪದ ಚಿಕ್ಕ ಹೊಳೆಯ ಪ್ರವಾಹವನ್ನು ಮಹಮನೆಯ ಮುಂದೆ ಹರಿಯಿಸಿದನು. ಆ ಪ್ರವಾಹಕ್ಕೆ ಅವನ ಹೆಸರಾಗಿದೆ.

ಉಳಿವೆಯ ಮಹಮನೆಯಲ್ಲಿ ಪ್ರವಚನ-ಪರ್ವ ಮುಂತಾದ ಜ್ಞಾನ ಸತ್ರಗಳು ಎಡೆಬಿಡದೆ. ನಡೆದವು. ಅದು ನಾಡಿನಲ್ಲೆಲ್ಲ ಪ್ರಚುರಗೊಂಡಿತು. ಪೂರ್ವ-ದಕ್ಷಿಣ ದಿಕ್ಕುಗಳಲ್ಲಿಯ ದೂರದ ರಾಜರು, ಮಂಡಲಾಧಿಪತಿಗಳು ಜ್ಞಾನಿಗಳು ಅಲ್ಲಿಗೆ ಆಕರ್ಷಿಸಲ್ಪಟ್ಟರು. ಆದರೆ ಈ ಕ್ರಮ ಬಹುದಿವಸ ನಡೆಯಲಿಲ್ಲ. ತಮ್ಮ ಅವತಾರದ ಮಣಿಹ ಮುಗಿದಂತೆಯೇ ಎಂದು ಚೆನ್ನಬಸವ

ಣ್ಣನವರು ಅಂತಸ್ಥರಾಗಿ ಶರೀರವನ್ನು ಉಪೇಕ್ಷಿಸಿದರು. ಒಂದು ದಿನ ತಮ್ಮ ನಿರಂಜನಪೀಠಾಧಿಕಾರವನ್ನು ನಿರ್ವಹಿಸುವಂತೆ ನಿರೂಪಣ ಪತ್ರವನ್ನು ಕೊಪ್ಪಿ ಕಮಂಡಲು-ಯೋಗದಂಡಗಳನ್ನು ಕರಣಹಸಿಗೆ ಮೊದಲಾದ ತಾವು ರಚಿಸಿದ ಗ್ರಂಥಗಳ ಪ್ರತಿಗಳನ್ನೂ ಸಮರ್ಥ ನಿಷ್ಠರಾದ ಜಂಗಮ ಮೂರ್ತಿಗಳೊಡನೆ ಸೊನ್ನಲಾಪುರ ಸಿದ್ಧರಾಮ ಶಿವಯೋಗಿಗಳ ಕಡೆಗೆ ಕಳುಹಿದರು. ಬಳಿಕ ಸಮಾಧಿ ಸಾಧನೆಯಲ್ಲಿ ಮುಂದುವರಿದು ಲಿಂಗೈಕ್ಯರಾದರು. ಉಳಿವೆಯ ಗ್ರಾಮದ ಹತ್ತಿರ ಅವರ ಸಮಾಧಿಯಾಯಿತು. (ಕ್ರಿ. ಶ. ೧೧೬೦) ಮುಂದೆ ಅವರ ದೇವಸ್ಥಾನ ಉಂಟಾಗಿ ಮಹೋತ್ಸವ ನಡೆಯುತ್ತಿದೆ.

ಬಸವಯುಗದ ಬೆಳಕು ಪಸರಿಸಿತು

ಚೆನ್ನಬಸವಣ್ಣನವರ ಅವಸಾನದ ನಂತರ ಉಳಿವೆಯ ಮಹಮನೆಯ ಘಟಕವು ಒಡೆಯಿತು. ಘೋರಾರಣ್ಯದಲ್ಲಿ ವರ್ಷದಲ್ಲಿ ನಾಲ್ಕುತಿಂಗಳು ರಭಸದಿಂದ ಸುರಿಯುವ ಮಳೆಯಲ್ಲಿ ಇರಲಾಗದೆ ಅಲ್ಲಿಯ ಅನುಭಾವಿಗಳು ಗ್ರಂಥಭಾಂಡಾರವನ್ನು ಹಂಚಿಕೊಂಡು ತಮ್ಮಿಷ್ಟ ಬಂದ ಕಡೆಗೆ ಸಾಗಿ ಹೋದರು. ನಾಡಿನ ಬೇರೆ ಬೇರೆ ಭಾಗಗಳಲ್ಲಿ ತಮ್ಮ ಮಠಗಳನ್ನು ಸ್ಥಾಪಿಸಿ ಲಿಂಗವಂತ ಧರ್ಮಪ್ರಸಾರವನ್ನು ಕೈಕೊಂಡರು. ಕೊನೆಗೆ ಉಳಿದ ಪ್ರಮುಖ ರೆಂದರೆ ರುದ್ರಮುನಿದೇವರು, ನಾಗಲಾಂಬೆ, ನುಲಿಯ ಚಂದಯ್ಯ; ರುದ್ರ ಮುನಿದೇವರು ನಾಡಿನಲ್ಲಿ ಅಲ್ಲಲ್ಲಿ ಸ್ಥಾಪಿಸಿದ ತಮ್ಮ ಮಠಗಳ ನಿರೀಕ್ಷಣೆಗಾಗಿ ಹೊರಟು ಶ್ರೀಶೈಲದ ಕಡೆಗೆ ಹೋದರು.

ನಾಗಲಾಂಬೆಯೂ ನೂಲಿಯ ಚಂದಯ್ಯನೂ ತುಂಗಭದ್ರಾ ನದಿಗಳ ಪ್ರದೇಶಕ್ಕೆ ಬಂದರು. ನಾಗಲಾಂಬೆ ಮಹಾಧೀರೆ! ದೊಡ್ಡ ಶರಣ ಪರಮ ಅನುಭಾವಿ ! ಉಚ್ಚ ಮಹಿಳೆಯರಲ್ಲಿ ಆಕೆಯ ಸ್ಥಾನವು ಅತ್ಯುಚ್ಚವಾಗಿದೆ. ಬಸವಣ್ಣನವರ ಚರಿತ್ರೆಯಲ್ಲಿ ನಾಗಮ್ಮನವರ ಪಾತ್ರ ಅತಿ ಮಹತ್ವದ್ದು. ಬಸವರಾಜರ ಸರ್ವಕಾರ್ಯತತ್ಪರತೆಗೆ ಆಕೆ ಹಿನ್ನೆಲೆಯ ಶಕ್ತಿಯಾಗಿದ್ದಳು. ಬಸವೇಶ್ವರರ ಘನವಾದ ವ್ಯಕ್ತಿತ್ವವನ್ನು ರೂಪಿಸಿದ ಶ್ರೇಯಸ್ಸಿನಲ್ಲಿ ಬಹು ಭಾಗ ಆಕೆಯದು. ಆ ಶರಣೆ ಮಹಮನೆ ಅನುಭವ ಮಂಟಪಗಳ ಸಂಚಾಲಿಕ ಧುರೀಣೆಯಾಗಿದ್ದಳು. ಜಟಿಲ ಸಮಸ್ಯೆಗಳಲ್ಲಿ ಮಾರ್ಗದರ್ಶಿನಿಯಾಗಿದ್ದಳು;

ಶರಣಸಮುದಾಯದ ಆಪತ್ಕಾಲದಲ್ಲಿ ಬೆಳಕಾಗಿದ್ದಳು; ರಣರಂಗದಲ್ಲಿಯೂ
ಪ್ರೋತ್ಸಾಹಕಳಾಗಿದ್ದಳು ಅರುವತ್ತು ವರುಷದ ಮೇಲಿನ ವೃದ್ಧಾಪ್ಯದಲ್ಲಿಯೂ
ಉಳವಿಯ ವಸಾಹತಿನ ಸಾಹಸದಲ್ಲಿ ಮುಖ್ಯಳೇ ಆಗಿದ್ದಳು. ಅಲ್ಲಿ ಎಲ್ಲರೂ
ಅಗಲಿದ ಮೇಲೆಯೂ ಧೃತಿಗೆಡದೆ ತನ್ನ ಗುರಿಯಾದ ಧರ್ಮೋನ್ನತಿಯ
ಕಾರ್ಯವನ್ನು ಜೀವಾಂತ್ಯದ ವರೆಗೆ ನಡಿಸಿದಳು. ಆಕೆಯು ಎಣ್ಣೆಹೊಳೆ
ಎಂಬಲ್ಲಿ ತನ್ನ ಆಶ್ರಮವನ್ನು ಮಾಡಿಕೊಂಡು ನಿಂತಳು. ಶಿವಯೋಗಸಾಧ
ಕರು ಆ ಶರಣೆತಾಯಿಯ ದರ್ಶನಕ್ಕೆ ಬಂದು ಜ್ಞಾನಸಂಪಾದನೆ ಮಾಡುತ್ತಿ
ದ್ದರು. ಮತಮಾನ್ಯಗಳವರು ಸಲಹೆ ಸೂಚನೆ ಪಡೆಯುತ್ತಿದ್ದರು. ಹೀಗೆ
ಎಂಟು ಹತ್ತು ವರ್ಷವಾದರೂ ಅಲ್ಲಿದ್ದು ಅಲ್ಲಿಯೇ ಲಿಂಗೈಕ್ಯಳಾದಳು
(ಕ್ರಿ. ಶ. ಸುಮಾರು ೧೧೭೦) ಅಲ್ಲಿ ಸಮಾಧಿಯಿದೆ. ಕರ್ನಾಟಕದ ಚರಿತ್ರೆ
ಯಲ್ಲಿ ಅಕ್ಕನಾಗಮ್ಮನ ಹೆಸರು ಚಿರಸ್ಥಾಯಿಯಾಗಿದೆ. ನುಲಿಯ ಚಂದ
ಯ್ಯನು ಮುಂದೆ ಎಲ್ಲಿಗೆ ಹೋದನು ? ಅವನ ಸಮಾಧಿ ಎಲ್ಲಿದೆ? ಎಂಬುದು
ತಿಳಿಯುವಂತಿಲ್ಲ.

ಪತಿಯ ಸೇವೆಗೆ ತನ್ನನ್ನು ಅರ್ಪಿಸಿ, ತಾನೆಂಬುದನ್ನರಿಯದೆ ಸುಖ
ಪಡೆದ ಗಂಗಾಂಬೆಯು, (ಮುಗುಟಖಾನ) ಹುಬ್ಬಳ್ಳಿಯಲ್ಲಿ ಒಂಟಿಯಾಗಿ
ಬಹುದಿವಸ ಬಾಳಲಿಲ್ಲ. ಸಂಗಯ್ಯನು ಪ್ರಬುದ್ಧನಾಗುವ ಮೊದಲೇ ಲಿಂಗೈಕ್ಯ
ಳಾದಳು. ಮಲಪ್ರಭಾ ತೀರದಲ್ಲಿ ಆಕೆಯ ಸಮಾಧಿಯ ಮೇಲೆ ಗುಡಿಯಾ
ಗಿದೆ. ಮುಂದೆ ಸಂಗಯ್ಯನು ಯಾವ ಜಂಗಮ ಶಿವಯೋಗಿಗಳ ಪ್ರೇರಣೆ
ಯಿಂದಲೋ ಅವರ ಪೋಷಣೆಯಲ್ಲಿ ಉತ್ತರಕ್ಕೆ ಹುಕ್ಕೇರಿಯ ಭಾಗಕ್ಕೆ
ಹೋಗಿ ನೆಲಸಿದಂತೆ ತೋರುತ್ತದೆ. ಬಸವರಾಜರ ವಂಶೋನ್ನತಿಯ ವರ್ಣ
ನೆಯು ಆ ಭಾಗದ ಅರ್ಜುನವಾಡದ ಶಿಲಾಶಾಸನದಲ್ಲಿದೆ.

ಕಲ್ಯಾಣದಿಂದ ಚದರಿ ಬೇರೆಯಾಗಿ ಹೊರಟ ಹರಳಯ್ಯನ ಬಳಗದ
ಶರಣರ ತಂಡವೊಂದು ಸೊನ್ನಲಿಗೆಯ ಮೇಲಿಂದ ತರ್ದವಾಡಿ ಭಾಗದ ಬಿಜ್ಜ
ನಹಳ್ಳಿ (ವಿಜಾಪುರ)ಕಡೆಗೆ ಬಂದು ಶೇಗುಣಸಿಯ ಹತ್ತಿರದ ಅಡವಿಯಲ್ಲಿ
ಕೆಲದಿವಸ ಬೀಡಾರ ಮಾಡಿರಬೇಕು. ಅಲ್ಲಿ ಹರಳಯ್ಯನ ಗುಂಡವೂ ಹರ
ಳೇಶ್ವರ ಲಿಂಗವೂ ಇವೆ.

ಮಾಚಯ್ಯನವರು ಕುರುಗೋಡದಿಂದ ಮರಳಿದ ಬಳಿಕ ಅಲ್ಲಲ್ಲಿ ಸಂಚರಿಸುತ್ತ ವಿರೋಧಿಗಳ ಭೀತಿಗೊಳಗಾಗಿದ್ದ ಮತಸ್ಥರಿಗೂ ಸಾಧಕರಿಗೂ ಧೈರ್ಯಾನುಕೂಲತೆಗಳನ್ನು ಒದಗಿಸುತ್ತ ತಮ್ಮ ಸ್ಥಳವಾದ ಹಿಪ್ಪರಿಗಿಗೆ ಬಂದರು. ಅವರು ಕೆಲಕೆಲವು ದಿವಸ ನಿಂತ ಸ್ಥಳಗಳಲ್ಲೆಲ್ಲ ಅವರಿಗೆ ಒಲಿದ ಭಕ್ತರು ಅಲ್ಲಲ್ಲಿ ವೀರಭದ್ರ ದೇವಾಲಯಗಳನ್ನು ನಿರ್ಮಿಸಿದರು. ವೀರಭದ್ರ ವಿಜಯವೆಂಬುದು ಮಾಚಯ್ಯನವರ ಖಡ್ಗವು! ಅದು ಅವರ ಶೌರ್ಯಪ್ರಕಟನೆಯ ಸಾಧನವು ಹಿಪ್ಪರಿಗಿಗೆ ಬಂದ ಬಳಿಕ ಅವರು ತಮ್ಮ ಗುರುಗಳಾದ ಮಲ್ಲಿಕಾರ್ಜುನದೇವರ ಸನ್ನಿಧಿಯಲ್ಲಿ ಅನುಭಾವಸುಖದಲ್ಲಿದ್ದರು. ಅವರ ಸಮಾಧಿ ಅಲ್ಲಿಯೇ ಇದೆ. ಅದು ದೆವಸ್ಥಾನವಾಗಿದೆ.

ಮೋಳಿಗೆಯ ಮಾರಯ್ಯನವರು ಕಲ್ಯಾಣದ ಬಳಿಯಲ್ಲಿಯೇ ಬಹುಕಾಲ ಇದ್ದು ಶಿವಾದ್ವೈತಾನಂದದಲ್ಲಿ ನಿಮಗ್ನರಾಗಿದ್ದರು ಅವರು ೧೨೦ ವರ್ಷದವರಾಗಿ ಲಿಂಗೈಕ್ಯರಾದರಂತೆ! ಅವರ ಗದ್ದುಗೆ ಕಲ್ಯಾಣದಿಂದ ಹತ್ತು ಮೈಲಿನ ಮೇಲೆ ಹೊಮನಾಬಾದದ ದಾರಿಯಲ್ಲಿದೆ

* * * *

ಬಿಜ್ಜಳನ ಕೊಲೆ ಮಾಡಿ ಪಾರಾದ ಮಲ್ಲಿಬೊಮ್ಮರಸು ತಮ್ಮ ಸಂಚಿನ ಅಧಿಪತಿಗಳಾದ ಜಗದೇಕಮಲ್ಲದೇವನೂ, ಕರ್ಹಾಡವಲ್ಲಿ ಮಾಹೇಶ್ವರಿ ಕೀರ್ತಿವರ್ಮರೂ ಮರಣಹೊಂದಿದ್ದರಿಂದ ಭಗ್ನಮನಸ್ಕನಾಗಿ ವೇಷಾಂತರದಿಂದ ಪ್ರಯಾಣ ಮಾಡಿ ತನ್ನ ನಿಡುಗಲ್ಲ ಕಂಪಣಕ್ಕೆ ಹೋದನು. ಅಲ್ಲಿ ಹೊಯ್ಸಳರ ಮಾಂಡಲಿಕನಾಗಿ ಆಳಿದನು. "ಬಿಜ್ಜಗ ಶಿರಚ್ಛೇದಕ" ಎಂದು ತನ್ನನ್ನು ಅಲ್ಲಿಯ ಒಂದು ಶಿಲಾಶಾಸನದಲ್ಲಿ ಹೇಳಿಕೊಂಡಿದ್ದಾನೆ.

ಅಗ್ಗಳ-ಶಿವದತ್ತರು ಸಂಗಮದಿಂದ ಕರ್ಹಾಡಕ್ಕೆ ಹೋಗಿ ಅಲ್ಲಿ ತಮಗಿದ್ದ ಮೊದಲಿನ ಆಶ್ರಯವನ್ನು ಪಡೆದರು.

ಮಧುವರಸನ ಮೇಲೆ ತನಗಿದ್ದ ವೈಯಕ್ತಿಕ ದ್ವೇಷವು ಇಷ್ಟೆಲ್ಲ ಅನರ್ಥಗಳಿಗೆ ಕಾರಣವಾಯಿತೆಂದು ಪಶ್ಚಾತ್ತಾಪಪಟ್ಟ ನಾರಣಕ್ರಮಿತನು ಸಂಸಾರತ್ಯಾಗಮಾಡಿ ವಾನಪ್ರಸ್ಥವನ್ನು ಸ್ವೀಕರಿಸಿ ಹೊರಟು ಹೋದನು.

ಸೋಮೇಶ್ವರನ ಆಳಿಕೆ ಸುರಕ್ಷಿತವಾಗಿ ನಡೆಯಲಿಲ್ಲ. ಬಂಧುಗಳು ರಾಜ್ಯಕ್ಕಾಗಿ ಸೆಣಸಹತ್ತಿದರು. ಮಾಂಡಲಿಕರು ದಂಗೆಏಳಹತ್ತಿದರು. ವಿಜಯಾರ್ಕನೂ ಭಿಲ್ಲಮನೂ ಕಲ್ಯಾಣದ ಮೇಲೆ ದಂಡೆತ್ತಿ ಬಂದರು. ಸೋಮೇಶ್ವರನು ಮಾಧವನಿಗೆ ಮತ್ತೆ ಸೇನಾಪತ್ಯವನ್ನಿತ್ತು ಕಾಳಗ ಹೂಡಿದನು. ಮಾಧವನಿಗೆ ಜಯವಾಯಿತು. ಆತನು ಹರಸೂರು ಶಾಸನದಲ್ಲಿ ತನ್ನ ಹಿಂದಿನ ಮಂತ್ರಿಗಳನ್ನು ಜರಿದು ತನ್ನ ಪರಾಕ್ರಮವನ್ನು ಹೊಗಳಿಕೊಂಡಿದ್ದಾನೆ. ಆದರೆ ಸೋಮೇಶ್ವರನಿಗೆ ಪಟ್ಟವು ಸ್ಥಿರವಾಗಲಿಲ್ಲ. ಆರುವರ್ಷ ಕಳೆಯುವಾಗ ಅವನ ಮಲತಮ್ಮ ವೈಲುಗಿ ಸಿಂಹಾಸನವನ್ನು ಹಿಡಿದುಕೊಂಡನು. ಅವನೂ ಬಾಳಲಿಲ್ಲ. ಸಾತಮ ಸಿಂಗಮರೆಂಬ ಇನ್ನಿಬ್ಬರು ಸಹೋದರರು ಕ್ರಮವಾಗಿ ರಾಜ್ಯವಾಳಿದರು. ಸಾಮ್ರಾಜ್ಯವೆಲ್ಲ ಒಡೆದು ಹೋಗಿ ಕಲ್ಯಾಣದ ಸುತ್ತಲಿನ ಪ್ರದೇಶವು ಮಾತ್ರ ಅವರ ಆಳಿಕೆಯಲ್ಲಿತ್ತು. ಬಿಜ್ಜಳನು ಸತ್ತ ಹದಿನೈದು ವರ್ಷಗಳ ಮೇಲೆ ವೆಂಗಿನಾಡಿನಲ್ಲಿದ್ದ—ತೈಲಪನ ಕಿರಿಯ ಸೋದರ-ಚಾಲುಕ್ಯರ ನಾಲ್ವಡಿ ಸೋಮೇಶ್ವರನು ಸೈನ್ಯದೊಡನೆ ಬಂದು ಸಿಂಗಮನಿಂದ ತನ್ನ ಪೂರ್ವಜರ ರಾಜ್ಯವನ್ನು ಪಡೆದುಕೊಂಡನು. ಆದರೆ ಪುನಃ ಸಾಮ್ರಾಜ್ಯದ ಸಂಘಟನೆಯಾಗಲಿಲ್ಲ. ಉತ್ತರದಿಂದ ಭಿಲ್ಲಮನೂ ದಕ್ಷಿಣದಿಂದ ಹೊಯ್ಸಳರೂ ಆಕ್ರಮಿಸಿ ಚಾಲುಕ್ಯ ಸಾಮ್ರಾಜ್ಯವನ್ನು ಅಡಗಿಸಿಬಿಟ್ಟರು.

* * * *

ಉತ್ತರ ದೇಶದ ಕಲಿಂಜರ ಪುರದಿಂದ ದಕ್ಷಿಣಕ್ಕೆ ಬಂದ ಕಲಚೂರ್ಯ ಕ್ಷತ್ರಿಯ ರಾಜವಂಶವು ಚಾಲುಕ್ಯ ಸಾಮ್ರಾಜ್ಯದ ರಕ್ಷಣೆಗಾಗಿ ಅದರಲ್ಲಿ ಸೇರಿ, ಕೊನೆಗೆ ಅದರ ವಿನಾಶಕ್ಕೇ ಕಾರಣವಾಯಿತು. ಆ ವಂಶದ ಪ್ರಮುಖ ರಾಜನಾದ ಬಿಜ್ಜಳನ ಆಳಿಕೆಯ ಮೊದಲಭಾಗವು ಚಾಲುಕ್ಯ ಸಾಮ್ರಾಜ್ಯಕ್ಕೆ ರಕ್ಷಣೆಯನ್ನೊದಗಿಸಿ, ಕಡೆಯ ಭಾಗವು ಅದಕ್ಕೆ ವಿನಾಶವನ್ನು ತಂದಿತು. ಅವನ ಆಳಿಕೆಯಲ್ಲಿಯೇ ಅಭಿವೃದ್ಧಿ ಹೊಂದಿದ ಶರಣಧರ್ಮವು ಕೊನೆಕೊನೆಗೆ ಅವನಿಂದಲೇ ಹಿಂಸೆಗೆ ಒಳಗಾಯಿತು. ಅವನ ದಬ್ಬಾಳಿಕೆಯಿಂದ ಪ್ರಚೋದಿಸಲ್ಪಟ್ಟ ದುಷ್ಟಶಕ್ತಿಗಳಿಗೆ ಅಸಂಖ್ಯಾತ ಶಿವಶರಣರ ಭೌತಿಕ ಶರೀರಗಳು ಬಲಿಯಾದವು. ಆದರೆ ಈ ಘಟನೆಗಳಿಂದ ಲಿಂಗವಂತ ಧರ್ಮವು ಮಾತ್ರ ನಾಡಿನಲ್ಲೆಲ್ಲ ಹೆಚ್ಚಾಗಿ ಪ್ರಚುರಗೊಂಡು ಬಹುಜನ ಸಮಾಜದಲ್ಲಿ ನೆಲೆಯೂರಿ ನಿಂತಿತು.

ಕಾತರವಳ್ಳಿಯ ಕಾಳಗದ ಬಳಿಕ ಕುರುಗೋಡಿನಿಂದ ಹರಿದುಹೋದ ಜಂಗಮಮೂರ್ತಿಗಳು, ಉಳವೆಯ ಮಹಮನೆಯಿಂದ ಹೊರಬಿದ್ದು ಸಾಗಿದ ಲಿಂಗಾನುಭಾವಿಗಳು ದೇಶದಲ್ಲಿ ವೀರಶೈವ ಧರ್ಮದ ಬಗೆಗೆ ಜ್ಞಾನವನ್ನು ಉಂಟುಮಾಡಿದರು; ನಂಬಿಗೆಯನ್ನು ನೆಲೆಗೊಳಿಸಿದರು. ಕಲ್ಯಾಣದ ಪ್ರಮಥರಿಂದ ರಚಿಸಲ್ಪಟ್ಟ ಗ್ರಂಥಗಳ ಪ್ರತಿಗಳು ನಾಡಿನ ಮೂಲೆ ಮೂಲೆಗೂ ಪ್ರತಿ ಪ್ರತಿಗಳಾಗಿ ಹೋದವು. ಅವುಗಳ ಬುನಾದಿಯ ಮೇಲೆ ಅಪಾರವಾದ ಧಾರ್ಮಿಕ ಸಾಹಿತ್ಯವು ನಿರ್ಮಾಣವಾಯಿತು. ಕಾಯಕವೆಂದು ಕೈಗೊಂಡ ಉದ್ಯೋಗ ವಾಣಿಜ್ಯ-ಕೃಷಿಗಳು ಅಭಿವೃದ್ಧಿ ಪಡೆದವು. ಹೀಗೆ ಶರಣರಿಂದ ನಾಡುನುಡಿಗಳಿಗೆ ಅಪಾರವಾದ ಸೇವೆಯು ಸಲ್ಲುವದಾಯಿತು.

ವೀರಶೈವವು ದಕ್ಷಿಣದ ತಪ್ಪಲಿನ ಪ್ರಭಾವಶಾಲಿ ಧರ್ಮವಾಯಿತು. ಭಾರತದ ಉಳಿದ ಭಾಗಗಳಲ್ಲಿಯೂ ಅದರ ಕೀರ್ತಿ ಮೊಳಗಿ ಅಲ್ಲಲ್ಲಿಯೂ ಅದರ ಪ್ರವೇಶವಾಯಿತು. ವಿಶ್ವಮಾನ್ಯವಾದ ಶಿವಾದ್ವೈತ ತತ್ವವನ್ನು ಲೌಕಿಕರ ಬಾಹ್ಯಾಂತರಂಗದ ದೃಷ್ಟಿಗಳಿಗೆ ತೋರಿಸಿಕೊಟ್ಟ ಬಸವಯುಗದ ಬೆಳಕು ಇಂದಿಗೂ ಆ ಕಾರ್ಯವನ್ನು ಬೆಳಗುತ್ತಿದೆ.

ಬಸವರಾಜದೇವರ ಕೀರ್ತಿ ಅಮರವಾಗಿದೆ.

೧೯. ಅಣ್ಣನವರ ಜೀವನವಿಮರ್ಶೆ

(ಅಣ್ಣನವರ ಬಗೆಗೆ ಅಂದಿಂದಿಗೆ ಮಹಾನುಭಾವಿಗಳು, ಕವಿಗಳು, ವಿದ್ವಾಂಸರು ವ್ಯಕ್ತಪಡಿಸಿದ ಅಭಿಪ್ರಾಯಗಳನ್ನು ಸಂಗ್ರಹಿಸಿ ಈ ಪ್ರಕರಣವನ್ನು ಬರೆದುದಾಗಿದೆ.

ಆದರ್ಶ ಜೀವನ

ಬಸವಣ್ಣನವರು, ತಮ್ಮ ಹೃದಯದಲ್ಲಿ ನೆಲಿಸಿದ್ದ ಮಹಾ ಪ್ರಕಾಶವನ್ನು ಕಂಡು ಅದರಲ್ಲಿ ಬೆರೆತು ಎಲ್ಲ ದುಃಖಗಳನ್ನು ನೀಗಿಕೊಳ್ಳುವ ದಿವ್ಯವಾದ ಆದರ್ಶವನ್ನು ತಮ್ಮ ಗುರಿಯನ್ನಾಗಿಟ್ಟುಕೊಂಡರು. ಅದರ ಸಾಧನೆಗಾಗಿ ತಮ್ಮ ಜೀವನವನ್ನೆಲ್ಲ ಮುಡಿಪಾಗಿಟ್ಟರು. ಸರ್ವ ಹೃದಯಗಳಲ್ಲಿ ಸಮನಾಗಿ, ಒಂದೆಯಾಗಿ, ನೆಲಿಸಿರುವ ಚಿತ್ಪ್ರಕಾಶವನ್ನು ಪೂರ್ಣವಾಗಿ ಅನುಭವಿಸುವದೇ ಪರಮಾರ್ಥವೆಂದು ಭಾವಿಸಿದ್ದರು. ಆದ್ದರಿಂದ ಪರಮಾತ್ಮನ ವ್ಯಕ್ತರೂಪಗಳಾದ ಗುರು-ಲಿಂಗ-ಜಂಗಮವನ್ನು ಆರಾಧಿಸುವದರಿಂದ ಮಾತ್ರ ತೃಪ್ತರಾಗದೆ, ಶಿವನು ಸೂಕ್ಷ್ಮವಾಗಿ ಅವ್ಯಕ್ತವಾಗಿ ವಾಸಿಸಿರುವ ಸರ್ವ ಜೀವಿಗಳ ಲೇಸನೇ ಬಯಸಿ ಸರ್ವರ ಸೇವೆಮಾಡುವ ವಿಶ್ವಧರ್ಮವನ್ನು ಪ್ರತಿಪಾದಿಸಿ, ಆಚರಿಸಿ ತೋರಿಸಿದರು. ಈ ಮಹಾಸಾಧನೆಯಲ್ಲಿ ಅವರು ಅನುಭವಿಸಿದ ಕಷ್ಟಗಳು ಅನಂತ! ಯಾರಿಗೂ ಸಾಧ್ಯವಾಗದ ತಮ್ಮ ತನುಮನಗಳನ್ನು ಸಂಸ್ಕರಿಸಿಕೊಳ್ಳುವದರಲ್ಲಿ ಅವರು ಸುಲಭವಾಗಿ ಜಯಶೀಲರಾದರು. ಆದರೆ ಧರ್ಮಚಕ್ರವನ್ನು ನೆಲೆಗೊಳಿಸುವಾಗ ಚಂಚಲ ಮನದವರ ಹೊಯ್ದಾಟದ ತೊಂದರೆ ಸಹಿಸಬೇಕಾಯಿತು. ದುರ್ಬಲರನ್ನು ಮೇಲೆತ್ತುವಾಗ ಪ್ರಬಲರ ವಿರೋಧಕ್ಕೆ ಎದುರಾಗಬೇಕಾಯಿತು. ಅವಾಸ್ತವವಾದ ಜಾತಿಭೇದಗಳ ನಿರ್ಮೂಲನೆಯಲ್ಲಿ ಸನಾತನಿಗಳ ಪ್ರತಿಭಟನೆಯನ್ನು ತಾಳಬೇಕಾಯಿತು. ತಮ್ಮ ಕಾಯಕವಾಗಿರುವ ರಾಜ್ಯದಾಡಳಿತೆಯಲ್ಲಿ ರಾಜಕೀಯ ವಿದ್ವೇಷವನ್ನು ಎದುರಿಸಬೇಕಾಯಿತು. ಹೆಜ್ಜೆ ಹೆಜ್ಜೆಗಿರುವ ಇಂತಹ ಕಷ್ಟಗಳಿಗೆ ಅವರು ಅಂಜಲಿಲ್ಲ ಅಳುಕಲಿಲ್ಲ; ಮುಂದಿಟ್ಟ ಹೆಜ್ಜೆಯನ್ನು ಹಿಂದಕ್ಕೆ ಸರಿಸಲಿಲ್ಲ. ಧೈರ್ಯವಾಗಿ ಮುಂದುವರಿಯದೆ ನಿಲ್ಲಲಿಲ್ಲ.

ಹೀಗೆ ಅವರು ಅಪ್ರತಿಮ ಧೈರ್ಯವುಳ್ಳವರಾಗಿರುವದಕ್ಕೆ ಅವರು ತಮ್ಮ ಆದರ್ಶ ವಿಚಾರದಲ್ಲಿ ನಿಷ್ಠರಾಗಿ, ಅದಕ್ಕನುಸರಿಸಿ ಪ್ರತಿಯೊಂದು ಕಾರ್ಯ ಮಾಡುತ್ತಿರುವದೇ ಕಾರಣವಾಗಿತ್ತು.

ಅಂತರ್ಯುದ್ಧನಿವಾರಣೆಗೆ ಒಪ್ಪಂದವನ್ನು ಸಾಧಿಸುವದಕ್ಕೆ ಶಾಂತಿ ದೂತರಾಗಿ ಪ್ರತಿಪಕ್ಷದ ಕಡೆಗೆ ಹೋದಾಗ, ಅಶಾಂತಿಯ ಚಿಹ್ನವಾದ ರಕ್ಷಕ ದಳವನ್ನು ಸಂಗಡ ಕರೆದುಕೊಳ್ಳಲಿಲ್ಲ. ಅತುಲ ಐಶ್ವರ್ಯವು ಹಸ್ತಗತವಾಗ ಬಂದಾಗ ಅದನ್ನು ತಮಗಾಗಿ ಸ್ವೀಕರಿಸದೆ ಧರ್ಮಾರ್ಥಕ್ಕಾಗಿ ವಿನಿಯೋಗಿಸಿದರು. ಪರಧನವನ್ನಂತೂ ಸ್ಪರ್ಶಿಸಲಿಲ್ಲ. ತಮ್ಮ ಸೊತ್ತಾದುದೆಲ್ಲವನ್ನೂ ಜಂಗಮ ದಾಸೋಹಕ್ಕೆ ವಿನಿಯೋಗಿಸಿ ತಾವು ಪ್ರಸಾದಭೋಗಿಗಳಾಗಿದ್ದರು. ಪರಸ್ತ್ರೀಯರನ್ನು ಪಾಪದೃಷ್ಟಿಯಿಂದ ನೋಡದೆ ಲೋಕಮಾತೆಯರಂತೆ ಕಂಡರು. ಬೇಕಾದಂತಹ ಪಾಪಿಗಳನ್ನಾದರೂ ಹೀನಾಯವಾಗಿ ಕಾಣದೆ ಅವರನ್ನು ಉದ್ಧರಿಸಲು ಯತ್ನಿಸಿದರು. ಅವರೊಡನೆ ಬಹಳ ಮೃದುವಾಗಿ ನಡೆದುಕೊಂಡರು. ಗವಿಯಲ್ಲಿ ಕುಳಿತು ತಪಸ್ಸು ಮಾಡದೆ, ಪ್ರಪಂಚದಲ್ಲಿ ಎಲ್ಲರೊಡನೆ ಬಾಳುತ್ತ, ಉಗ್ರಸಾಧನೆ ಮಾಡಿದ್ದರಿಂದ ಪಕ್ವವಾದ ಅವರ ಮನಸ್ಸಿನಲ್ಲಿ ಕೋಪವೇ ಇರಲಿಲ್ಲ. ಕೀಳು ಕುಲದವರಾದರೂ ಭಗವದ್ಭಕ್ತರಿದ್ದರೆ ಅವರಿಗೆ ಸರ್ವಮನ್ನಣೆಯನ್ನಿತ್ತರು. ಶೂದ್ರ-ಬ್ರಾಹ್ಮಣ, ಹೆಣ್ಣು-ಗಂಡು ಇತ್ಯಾದಿ ಭೇದಗಳಿಲ್ಲದೆ ಆತ್ಮೋದ್ಧಾರವು ಸರ್ವರಿಗೆ ಸಾಧ್ಯವೆಂಬುದನ್ನು ಸಾರಿ ಕೃತಿಯಲ್ಲಿ ತಂದರು. ಇವರ ಧರ್ಮಪ್ರಕಾಶದಲ್ಲಿ ಹಲವು ಜನ ಕೆಳಣಿಯರು ಜ್ಞಾನಸಂಪನ್ನೆಯರಾಗಿ ಹೊಳೆದರು. ಗೌತಮಬುದ್ಧ ಬಸವಣ್ಣ ಇವರ ಹೊರತು ಮತ್ತಾವ ಮತಪ್ರವರ್ತಕರೂ 'ಮಾನವರೆಲ್ಲ ಸರಿಸಮಾನ' ರೆಂಬುದನ್ನು ಕ್ರಿಯಾತ್ಮಕವಾಗಿ ಸ್ಥಾಪಿಸಲಿಲ್ಲ. ಅಣ್ಣನವರ ಸಮತಾವಾದವು ದೈಹಿಕ ಮತ್ತು ಆರ್ಥಿಕವಾಗಿ ಮಾತ್ರವಿರದೆ ಮುಖ್ಯವಾಗಿ ಪಾರಮಾರ್ಥಿಕವಾಗಿತ್ತು. ಕೂಡಲಸಂಗಯ್ಯ ಯಾವ ಜಾತಿ! ಅವನನ್ನು ನಂಬಿದ ಶರಣರು ಯಾವ ಜಾತಿ? ಎಂದು ಕೇಳುತ್ತ ಯಾರ ವಿರೋಧವನ್ನು, ಯಾರ ಬಹಿಷ್ಕಾರವನ್ನೂ ಲೆಕ್ಕಿಸದೆ ನಡೆದರು:

'ಆರು ಮುನಿದು ನಮ್ಮನೇನ ಮಾಡುವರು'
ಊರು ಮುನಿದು ನಮ್ಮನೆಂತು ಮಾಡುವರು?

ನಮ್ಮ ಕುನ್ನಿಗೆ ಕೂಸ ಕೊಡಬೇಡ;
ನಮ್ಮ ಸೊಣಗಂಗೆ ತಳಿಗೆಯನಿಕ್ಕಬೇಡ;
ಆನೆಯ ಮೇಲೆ ಹೋಹನ ಶ್ವಾನ ಕಚ್ಚಬಲ್ಲುದೆ,
ನಮಗೆ ನಮ್ಮ ಕೂಡಲಸಂಗಯ್ಯನುಳ್ಳನ್ನಕ್ಕ?

ಭಕ್ತ-ಭವಿ ಎಂಬ ಎರಡೇ ಮಾನವ ವರ್ಗಗಳಾಗಿದ್ದವು ಅವರ ದೃಷ್ಟಿಯಲ್ಲಿ! ಅಚ್ಚ ಅರಿವಿನ ಅನುಭಾವಿಗಳಾದ ಇವರಿಗೆ ಶಾಸ್ತ್ರಗಳ ಹಂಗೇ ಇರಲಿಲ್ಲ. ಶಾಸ್ತ್ರದಿಂದ ನಿರ್ಬಂಧಿತರಾದವರಲ್ಲ ಇವರು! ಶಂಕರಾಚಾರ್ಯರು ಶಾಸ್ತ್ರೋಕ್ತ ಸನ್ಯಾಸ ಧರ್ಮವನ್ನು ಮೀರಿ ತಾಯಿಯ ಅಂತ್ಯಸಂಸ್ಕಾರಕ್ಕೆ ತೆರಳಿದರು. ಮಹಾತ್ಮರ ನಡೆ ಹೀಗೆ! ಅಣ್ಣನವರೂ ಶಾಸ್ತ್ರಗಳ ಕುಂದು ಕೊರತೆಗಳನ್ನೇ ಎತ್ತಿ ತೋರಿ ತಿದ್ದಿದವರು. ಅರಿವಿಗೆ ಸರಿಹೋದುದನ್ನು ನಿರ್ಭಯವಾಗಿ ಸಾರಿದವರು!

ಹೀಗೆ ಉದಾತ್ತ ವಿಚಾರ ಅಲೌಕಿಕ ಧೈರ್ಯಗಳಲ್ಲದೆ ಅವರ ಕಾರ್ಯಕ್ಷಮತೆಯೂ ಅವರ್ಣನೀಯವಾಗಿತ್ತು. ಅವರು ನಿರ್ವಹಿಸಬೇಕಾಗಿದ್ದ ಕರ್ತವ್ಯಗಳೂ ಹಲವಾಗಿದ್ದವು. ಅನುಭವಮಂಟಪದ ಕಾರ್ಯಕಲಾಪಗಳನ್ನು ನೋಡಿಕೊಳ್ಳಬೇಕು; ಪ್ರತಿನಿತ್ಯ ಸಾವಿರಾರು ಜನ ಜಂಗಮರ ಆದರ ಸತ್ಕಾರ ನಡೆಯಬೇಕು; ಹೊಟ್ಟೆಬಾಕ ಜಂಗಮರ ಕಟೂಕ್ತಿಗಳನ್ನು ಸಹಿಸಿ ತಿದ್ದಬೇಕು; ತತ್ವಸಾಹಿತ್ಯದ ರಚನೆಯಾಗಬೇಕು; ಪ್ರಚಾರಕಾರ್ಯವು ವ್ಯವಸ್ಥಿತವಾಗಿ ಸಾಗಬೇಕು. ಹೊಸ ಲಿಂಗವಂತರು ಚಂಚಲತೆಯಿಂದ ಹೊರಳದಂತೆ ಅವರಲ್ಲಿ ಭಕ್ತಿವಿಕಾಸವಾಗುವದನ್ನು ನೋಡಿಕೊಳ್ಳಬೇಕು; ಜ್ಞಾನಿಗಳ ಸಂಪರ್ಕವನ್ನು ಹೆಚ್ಚಿಸಿಕೊಳ್ಳಬೇಕು; ಎಷ್ಟಾದರೂ ತಮ್ಮ ಭಕ್ತಿ ಸಾಲದೆಂದು ಹಂಬಲಿಸುತ್ತ ತಮ್ಮ ನಿತ್ಯಕ್ರಿಯಾಚಾರಗಳನ್ನೂ ಸಾಧನೆಯನ್ನೂ ನೆರವೇರಿಸಿಕೊಳ್ಳಬೇಕು; ರಾಜನ ಅವಸರಕ್ಕೆ 'ಜೀ' ಎಂದು ನಿಲ್ಲಬೇಕು ರಾಜಕಾರ್ಯದಲ್ಲಿ ಚ್ಯುತಿಯುಂಟಾಗದಂತೆ ಆಡಳಿತವನ್ನು ನಡೆಯಿಸಬೇಕು. ಇವೆಲ್ಲವನ್ನೂ ಮಾಡುತ್ತ ಯಶಸ್ವಿಯಾದರು ಬಸವರಾಜರು! ಇಂತಹ ಮಹಾಪುರುಷರು ಜಗತ್ತಿನಲ್ಲಿ ವಿರಲವಾಗಿದ್ದಾರೆಂದು ನಿಸ್ಸಂದೇಹವಾಗಿ ಹೇಳಬಹುದು ರಾಜ್ಯಪಾಲ ಶ್ರೀ ನಾಗೇಶರವರು ಹೇಳಿದಂತೆ 'ಒಬ್ಬ ದೊಡ್ಡ ರಾಜ್ಯಾಧಿಕಾರಿಯು ಆಧ್ಯಾತ್ಮಿಕ ವೈಶಾಲ್ಯವನ್ನು ಸಾಧಿಸುವದೂ ಉಳಿಸಿಕೊಳ್ಳುವದೂ ಸಾಧ್ಯ'ವೆಂಬದನ್ನು ಬಸವಣ್ಣನವರು ತೋರಿಸಿದ್ದಾರೆ.

ಅಣ್ಣನವರ ಈ ಸದಾಚಾರ ಸತ್‌ಕ್ರಿಯೆಗಳು ತೋರಿಕೆಗಾಗಿ, ಆಡಂಬರಕ್ಕಾಗಿ, ಪ್ರತಿಷ್ಠೆಗಾಗಿ ಇರಲಿಲ್ಲ; ನಿಷ್ಕಪಟ ವರ್ತನದವಾಗಿದ್ದವು ಅವು ಶುದ್ಧ ಹೃದಯದಿಂದ ನೆರವೇರುತ್ತಿದ್ದುದರಿಂದ ಅವುಗಳಿಗೆ ಅಪಯಶಸ್ಸೇ ಇರಲಿಲ್ಲ. ಇಂತಹ ನಿರತಿಶಯ ಫಲಪ್ರದ ಕಾರ್ಯಕರ್ತರಾಗಿದ್ದರೂ ಮನಸ್ಸು ಗರ್ವಗಿರಿಯನೇರದಂತೆ ತಾವು ಭೃತ್ಯಾಚಾರದಲ್ಲಿ ನಿರತರಾಗಿದ್ದರು:

ತನಗಿಂತ ಕಿರಿಯರಿಲ್ಲ ಶಿವಭಕ್ತರಿಗಿಂತ ಹಿರಿಯರಿಲ್ಲ.
ಎಂಬುದು ಅವರ ಆಚಾರದ ಸಾರವಾಗಿತ್ತು.

ಬೋಧೆ ಮತ್ತು ಸಾಹಿತ್ಯರಚನೆ

ಷಟ್‌ಸ್ಥಲ ಮಾರ್ಗವು ಶಿವಜೀವರೈಕ್ಯವನ್ನು ಹಂತಹಂತವಾಗಿ ಸಾಧಿಸುತ್ತದೆ. ಅದುವೆ ವೀರಶೈವರ ಶಕ್ತಿವಿಶಿಷ್ಟಾದ್ವೈತ ದರ್ಶನದ ಸಂಪ್ರದಾಯವು. ಇದನ್ನೇ ಬಸವಣ್ಣನವರು ಸ್ವೀಕರಿಸಿ ಪುರಸ್ಕರಿಸಿ ಬೋಧಿಸಿ ಪ್ರಚುರಪಡಿಸಿದರು. ಷಟ್‌ಸ್ಥಲಗಳ ಸ್ವರೂಪವನ್ನು ಸಂಕ್ಷೇಪವಾಗಿ ಒಂದು ವಚನದಲ್ಲಿ ಹೀಗೆ ಹೇಳಿದ್ದಾರೆ:

'ಭಕ್ತನೆಂತೆಂಬೆನಯ್ಯಾ ಭವಿಸಂಗ ಬಿಡದನ್ನಕ್ಕ ?
ಮಾಹೇಶ್ವರನೆಂತೆಂಬೆನಯ್ಯಾ ಪರಸ್ತ್ರೀ ಪರಧನದಾಸೆ ಬಿಡದನ್ನಕ್ಕ ?
ಪ್ರಸಾದಿಯೆಂತೆಂಬೆನಯ್ಯಾ ಆಧಿ-ವ್ಯಾಧಿ ನಷ್ಟವಾಗದನ್ನಕ್ಕ ?
ಪ್ರಾಣಲಿಂಗಿಯೆಂತೆಂಬೆನಯ್ಯಾ ಪ್ರಾಣ ಸ್ವಸ್ಥಿರವಾಗದನ್ನಕ್ಕ ?
ಶರಣನೆಂತೆಂಬೆನಯ್ಯಾ ಪಂಚೇಂದ್ರಿಯ ನಾಸ್ತಿಯಾಗದನ್ನಕ್ಕ ?
ಐಕ್ಯನೆಂತೆಂಬೆನಯ್ಯಾ ಜನನ ಮರಣ ವಿರಹಿತನಾಗದನ್ನಕ್ಕ ?
ಇಂತಪ್ಪ ಭಾಷೆ ವ್ರತವೇಷಂಗಳ ನಾನರಿಯೆನಯ್ಯಾ
ಅಘಟಿತ ಘಟಿತ ವರ್ತಮಾನವ ನಾನರಿಯೆನಯ್ಯಾ.
ನಿಮ್ಮ ಶರಣರ ತೊತ್ತು ಭೃತ್ಯಾಚಾರವ ಮಾಡುವೆ ಕೂ. ಸಂ. ದೇವಾ!'

ಇದನ್ನು ತಾವು ಸ್ವತಃ ಅಳವಡಿಸಿಕೊಂಡು ಅನುಭವಿಸಿ ಐಕ್ಯಸ್ಥಿತಿ ಪಡೆದವರಾಗಿದ್ದರೂ, ಷಟ್‌ಸ್ಥಲಮಾರ್ಗಕ್ಕೆ ಆದ್ಯಂತವಾಗಿ ಅಧಿಷ್ಠಾನವೂ ಚೇತನವೂ ಆಗಿರುವ ಭಕ್ತಿಯ ಪರಮೈಶ್ವರ್ಯ ಪ್ರಕಟಗೊಂಡುದೂ ಭಕ್ತಿಭಾಂಡಾರಿ ಬಸವಣ್ಣನವರಿಂದಲೇ.

'ಷಟ್‌ಸ್ಥಲ'ವು ದ್ವೈತಾದ್ವೈತ ಮತಮಾರ್ಗವಾಗಿದೆ. ಆತ್ಮದ ಕುರುಹನ್ನು ಎದುರಿಟ್ಟುಕೊಂಡು ದ್ವೈತದಭಕ್ತಿ ಭಾವನೆಯಲ್ಲಿ ಕ್ರಿಯಾಪ್ರಧಾನವಾಗಿ

ಸಾಗಿ, ಅನುಭವದ ಪರಿಪಾಕದಿಂದ ಜ್ಞಾನೋದಯವಾಗಲು ಜ್ಞಾನಪ್ರಧಾನವಾಗಿ ಸಮರಸದ ಅದ್ವೈತದಲ್ಲಿ ಉಪಾಸನೆಯು ಫಲಿಸುವದು. ಈ ಕ್ರಮದ ಆರು ಅಂತಸ್ತುಗಳು ಷಟ್‌ಸ್ಥಲಮಾರ್ಗವು. ಇದು ಪಾಮರರಿಗೂ ಸ್ತ್ರೀಯರಿಗೂ ಎಲ್ಲ ಕಾಯಕ ವರ್ಗಗಳವರಿಗೂ ಅನುಸರಣೀಯವಾಗಿರುವದು. ಒಮ್ಮೆಲೇ ಅದ್ವೈತಕ್ಕೆ ಹೋಗುವವರು ಎಡವದೇ ಉಳಿದಿಲ್ಲ. ಆ ಹಿಂಪೇಟಿನ ಅನುಭವವು ಮಹಾನಿರಂಜನಮೂರ್ತಿ ಅಲ್ಲಮದೇವರಿಗೂ ತಾಗದೆ ಹೋಗಿಲ್ಲ. ಅವರು ಹೇಳುತ್ತಾರೆ !

"ಅದ್ವೈತವ ನುಡಿದು ಅಹಂಕಾರಿಯಾದೆನಯ್ಯಾ;
ಬ್ರಹ್ಮವ ನುಡಿದು ಭ್ರಮಿತನಾದೆನಯ್ಯಾ;
ಶೂನ್ಯವ ನುಡಿದು ಸುಖದುಃಖಕ್ಕೆ ಗುರಿಯಾದೆನಯ್ಯಾ.
ಗುಹೇಶ್ವರಾ, ನಿಮ್ಮ ಶರಣ ಸಂಗನಬಸವಣ್ಣನ ಸಾನ್ನಿಧ್ಯದಿಂದ ನಾನು ಸದ್ಭಕ್ತನಾದೆನಯ್ಯಾ".

ಇದೆಲ್ಲವನ್ನು ಅರಿದು ಆಚರಿಸಲಾಗದಿದ್ದವರು 'ಶುದ್ಧಮನಸ್ಸಿನಿಂದ ಪರಮ ಭಕ್ತಿಯಿಂದ 'ಶಿವಶರಣು' ಎಂದರೂ ಮುಕ್ತಿ ಸಿದ್ಧಿ! 'ನಂಬಿ ಕರೆದರೆ ಓ ಎನ್ನನೇ ಶಿವನು ?' ಎಂದು ಯಾರಿಗೂ ಅಸಾಧ್ಯವಾಗದ ಭಕ್ತಿಯನ್ನೇ ಅಣ್ಣನವರು ಕೊನೆಯದಾಗಿ ಬೋಧಿಸಿದರು. ದೇಹಪೋಷಣೆ ಮಾತ್ರ ಕರ್ತವ್ಯವಾಗಿರದೆ ಆತ್ಮ ವಿಕಾಸವೂ ಅಗತ್ಯವೆಂಬುದನ್ನು ಈ ಮಾರ್ಗದಿಂದ ಬಿಂಬಿಸಿದರು.

ದೇಹಾಭಿಮಾನವಿರುವದೇ ಅಂಗಗುಣ! ಅಂಗಗುಣದಿಂದ ಭೇದ, ದುಃಖ! ಲಿಂಗಗುಣದಿಂದ ಸಮತೆ, ಸುಖ!! ಲಿಂಗಗುಣಿಯೇ ಸ್ವಯ ಲಿಂಗನು. ಅವನಲ್ಲಿ ಭಕ್ತಿ, ವೈರಾಗ್ಯ, ಶಾಂತಿ, ಕ್ಷಮೆ, ದಯೆ, ಸದಾಚಾರ, ವಿನಯ, ಮೃದುವಚನ ಈ ಸಾತ್ವಿಕ ಗುಣಗಳು ಪ್ರಕಾಶಿಸುವವು. ಇವಲ್ಲವೆ ಶಿವನ ಪರಮೈಶ್ವರ್ಯ ? ಆಗ ಉದಾತ್ತವರ್ತನೆ ಭಾವನೆ ನಿರರ್ಗಳವಾಗಿ ಬೆಳೆಯುಲಿಕ್ಕಿಲ್ಲವೇ? ಇದು ಅಣ್ಣನವರ ಭಕ್ತಿಬೋಧನೆಯ ತಿರುಳು!

ವರ್ಣಭೇದವನ್ನೂ ಬಡತನ ಸಿರಿತನಗಳ ಭೇದವನ್ನೂ ತೆಗೆದೊಗೆದು ದೀಕ್ಷೆಯಿಂದ ಸರ್ವರೂ ಲಿಂಗವಂತರಾಗಲು ಅರ್ಹರೆಂದು ಸಾರಿದರು. ನೀತಿಯು ಮಟ್ಟವನ್ನು ಎತ್ತರಿಸಲು ಸದಾಚಾರದ ಶಿಕ್ಷಣ, ಮೋಕ್ಷ ಸಂಪಾದನೆಗೆ

ಷಟ್‌ಸ್ಥಲಸಾಧನೆ, ಆರ್ಥಿಕ ಅನುಕೂಲತೆಗೆ 'ಕಾಯಕವೇ ಕೈಲಾಸ' ವೆಂದು ದುಡಿಮೆಗೆ ಕೊಟ್ಟ ಗೌರವ ಇವುಗಳಿಂದ ಈ ಮತವು ಸತ್ವಶಾಲಿಯಾಗುವಂತೆ ಮಾಡಿದರು.

ಲಿಂಗಮುಖವಾದ ಜಂಗಮಕ್ಕೆ ತನ್ನ ಸೊತ್ತೆನಿಸಿದುದೆಲ್ಲವನ್ನು ಅರ್ಪಿಸಿ ತತ್ ಪ್ರಸಾದವಾಗಿ ಭೋಗಿಸಬೇಕು ಭಕ್ತನು! ಜಂಗಮನು ಪರಮಾತ್ಮನ ಪರಮ ನಿರಂಜನ ಸ್ವರೂಪನು. ಬಸವಣ್ಣನವರು ಜಂಗಮಪ್ರಾಣಿಯಾಗಿದ್ದು ತಮ್ಮ ನಡತೆಯಿಂದ ಗುರುಲಿಂಗಜಂಗಮ ಸಾಮರಸ್ಯವನ್ನು ಲೋಕದ ಮುಂದೆ ಪ್ರದರ್ಶಿಸಿದರು. ಮಾನವನು ಜ್ಞಾನಸಾಧನೆಯಿಂದ ದೇವನಾಗುವದನ್ನು ತೋರಿಸಿದರು. ಆತ್ಮದ ಏಕತೆಯನ್ನು ಸಾರಿ ಸರ್ವಸಮಾನತೆಯನ್ನು ಸ್ಥಾಪಿಸಿದರು. ಆದರಿಂದಲೇ ಮಹಾತ್ಮರಾದರು.

ಅಣ್ಣನವರು ತಮ್ಮ ಈ ಅನುಭವವನ್ನು ಅನುಭಾವವಾಗಿಸಿದರು. ಅದನ್ನು ಅನುಭವ ಮಂಟಪದ ಮುಖಾಂತರ ಪುಟಕ್ಕೆ ಹಾಕಿ ನಾಡಿನಲ್ಲೆಲ್ಲ ಪ್ರಚಾರಗೊಳಿಸಿದರು ಅದರಿಂದಾಯಿತು ವೀರಶೈವೋದ್ಧರಣ ಕಾರ್ಯವು.

ವಚನಗಳ ಉದಯವು ಬಸವಣ್ಣನವರ ಪೂರ್ವದಲ್ಲಿಯೇ ಆಗಿದ್ದರೂ, ವಚನಸಾಹಿತ್ಯದಲ್ಲಿ ಸಿದ್ಧಾಂತವನ್ನು ಸ್ಫುಟವಾಗಿ ಪ್ರಕಟಿಸಿದವರು ಅಣ್ಣನವರು. ಪರಿಪೂರ್ಣ ಮತಸಿದ್ಧಾಂತವನ್ನು ಕನ್ನಡ ವಚನ ಸಾಹಿತ್ಯವು ಹೊಂದಿದ್ದು ಅನುಭವ ಮಂಟಪದಿಂದ! ತ್ರಿಮತಾಚಾರ್ಯರು ಕರ್ನಾಟಕವನ್ನು ತಮ್ಮ ಕಾರ್ಯಕ್ಷೇತ್ರ ಮಾಡಿಕೊಂಡರೂ ಅವರು ಶುದ್ಧ ಕನ್ನಡಿಗರಲ್ಲ! ಶಂಕರಾಚಾರ್ಯರು ಮಲೆಯಾಳಿಗಳು; ಮಧ್ವಾಚಾರ್ಯರು ತುಳುವರು; ರಾಮಾನುಜಾಚಾರ್ಯರು ತಮಿಳರು. ಅವರ ತತ್ವವಿಚಾರಗಳು ಪ್ರತಿಪಾದಿತವಾದುದು ಸಂಸ್ಕೃತದಲ್ಲಿ! ಆದರೆ ಬಸವಣ್ಣನವರು ಪರಿಪೂರ್ಣವಾಗಿ ಕನ್ನಡ ಕುಲದೀಪಕರು. ಅಣ್ಣನವರು ಸಂಸ್ಕೃತಭಾಷಾತಜ್ಞರಾಗಿ ಆಗಮೋಪನಿಷತ್ತುಗಳ ಅಭ್ಯಾಸ ಮಾಡಿದವರಾಗಿದ್ದರೂ ತಮ್ಮ ತತ್ವಜ್ಞಾನ ಪ್ರಚಾರವನ್ನು ಕನ್ನಡದಲ್ಲಿಯೇ ಮಾಡಿದುದಕ್ಕೆ ಅವರ ಮಾತೃಭಾಷಾಭಿಮಾನವೂ ಮುಖ್ಯ ಕಾರಣವಾಗಿತ್ತು. ಜನರಿಗೆ ಸುಲಭವಾಗಿ ತಿಳಿಯಬೇಕೆಂಬುದು ಇನ್ನೊಂದು ಕಾರಣವಾತ್ತು. ಇದರಿಂದ ಕನ್ನಡ ಭಾಷೆಗೆ ಬಹುದೊಡ್ಡ ಉಪಕಾರವಾ

ಯಿತು. ಅವರ ಅನುಭವದ ಅಮೃತವಾಣಿಗಳು ಕನ್ನಡ ಸರಸ್ವತೀ ಭಾಂಡಾರದಲ್ಲಿ ನೂತನ ಸೊತ್ತಾಗಿ ಪರಿಣಮಿಸಿದವು. ತಾತ್ವಿಕ ಪ್ರೌಢ್ಯದ ಶಬ್ದ ಭಾಂಡಾರವು ಬೆಳೆಯಿತು. ಬಸವರಾಜರು ಪ್ರತಿಯೊಂದು ವಿಚಾರವನ್ನು ತೀವ್ರತರವಾಗಿ ಅನುಭವಿಸುತ್ತಿದ್ದುದರಿಂದ, ಹೃದಯಸ್ಪರ್ಶಿಯಾದ ಮಾತುಗಳು ಅವರ ಬಾಯಿಯಿಂದ ಮುತ್ತಿನಂತೆ ಉದುರುತ್ತಿದ್ದವು. ಅವು ಕೇಳುವವರನ್ನು ಒಳಗೂ ಹೊರಗೂ ಬೆಳಗಿ ಜೀವನ ಇವೈತ್ರ್ಯದ ಕೊರತೆಯನ್ನು ಪರಿಹರಿಸುತ್ತಿದ್ದವು. ಅವುಗಳಲ್ಲಿ ಅರ್ಥ ರಸಭಾವಗಳು ಸೂಸಿ ಬರುತ್ತಿದ್ದವು. ಗಹನವಾದ ವಿಷಯಗಳನ್ನು ವಿವರಿಸುವಾಗ ಅದಕ್ಕೆ ಬೇಕಾದಂತೆ ಶಬ್ದಸಮುದಾಯವನ್ನೂ ಪಡಿಕಟ್ಟನ್ನೂ ಪಡೆದು ಕನ್ನಡ ಭಾಷೆ ಅವರ ಕೈಯಲ್ಲಿ ಪಳಗಿಬಿಟ್ಟಿತು. ಉದಾಹರಣೆ ಉಪಮಾನಗಳು ಒದಗಿ ಬಂದು, ಹಳೆಯ ಭಾವಗಳು ಹೊಸ ರೂಪ ತಾಳಿದವು. ಹೊಸ ಭಾವಗಳು ತಲೆದೋರಿದವು. ರಸವತ್ಕಾವ್ಯ ಲಕ್ಷಣಗಳು ಅವರ ವಚನಗಳಲ್ಲಿ ಮೈಗೂಡಿದವು.

ಲಿಂಗವಂತರ ಲಿಂಗಾಂಗ ಸಾಮರಸ್ಯ ಸಿದ್ಧಾಂತವು ಹೀಗೆ ಕನ್ನಡ ನಾಡಿಯಲ್ಲಿಯೇ ಬೇರೂರಿ ಕ್ರಮವಾಗಿ ಬೆಳೆದದ್ದರಿಂದ ಈ ಕನ್ನಡವು ತನ್ನದೇ ಆದ ತತ್ವಮಯ ಸ್ವತಂತ್ರ ಸಿದ್ಧಾಂತದಿಂದ ಬೆಳಗುವಂತಾಯಿತು. ಕನ್ನಡವೂ ದೇವವಾಣಿಯಾಯಿತು. ಸಂಸ್ಕೃತವನ್ನು ಬಿಟ್ಟರೆ ಬೇರೆ ಯಾವ ಭಾರತೀಯ ಭಾಷೆಗೂ ಕನ್ನಡದ ಈ ಯೋಗ್ಯತೆ ಇಲ್ಲ. ಕನ್ನಡದ ಈ ಮಹಾಸಾಧನೆ ಬಸವಣ್ಣನವರಿಂದಲೇ! ವಚನ ವಾಙ್ಮಯದಿಂದಲೇ!! ವೀರಶೈವ ಸಾಹಿತ್ಯದಿಂದಲೇ!!! ಮಾನವನನ್ನು ಉನ್ನತ ವಿಚಾರಗಳಲ್ಲಿ ಲೀನಗೊಳಿಸುವದು ಸಾಹಿತ್ಯದ ಶ್ರೇಷ್ಠವಾದ ಗುರಿಯೆಂದು ಒಪ್ಪಿದರೆ ಆ ಕೀರ್ತಿ ವೀರಶೈವ ಸಾಹಿತ್ಯಕ್ಕೆ ವಿಶೇಷವಾಗಿ ವಚನ ಸಾಹಿತ್ಯಕ್ಕೆ ಯಥೇಚ್ಛವಾಗಿ ಸಲ್ಲುತ್ತದೆ.

ಬಸವಣ್ಣನವರಿಂದ ವಚನ ಸಾಹಿತ್ಯವು ಕನ್ನಡದಲ್ಲಿ ಮುಖ್ಯ ಪ್ರಭೇದವಾಯಿತು. ವಚನಗಳು ಇಂಪಾದ ನುಡಿಗಳಿಂದ, ತಾಳಲಯಗಳನ್ನು ಅನುಸರಿಸಿ ಬರುವ ಪದಗುಂಪನಗಳಿಂದ ಕೂಡಿದುದರಿಂದಾಗಿ ಮುಂದೆ ಅವುಗಳೇ ಷಟ್ಪದಿ ಸಾಂಗತ್ಯ ತ್ರಿಪದಿ ಮುಂತಾದ ವಿವಿಧರೂಪ ತಾಳಿದವು. ಇದರಿಂದ ಕನ್ನಡ ಸಾಹಿತ್ಯಕ್ಕೆ ವಿಶಾಲಸ್ವರೂಪವುಂಟಾಗಲು ಸಹಾಯವಾಯಿತು. ಈ

ಬಗೆಯಾಗಿ ಅಣ್ಣನವರ ದಯೆಯಿಂದ ಕನ್ನಡ ಭಾಷಾಭಾಂಡಾರವು ಅಗಣಿತವಾಗಿ ಅಭಿವೃದ್ಧಿಹೊಂದಿತು.

ಅಂಧಶ್ರದ್ಧೆಯ (ಸಂಪ್ರದಾಯದ) ಖಂಡನೆ

ಮನುವಿನ ಶಾಸನವು ವರ್ಣಾಂತರ ಮಾನವರ ಜನ್ಮಸಿದ್ಧ ಹಕ್ಕುಗಳನ್ನು ಹತ್ತಿಕ್ಕಿ ಪೀಡಿಸುತ್ತಿದ್ದಿತು. ಬಹುಜನ ಸಮಾಜದ ಈ ಅವನತಿಯನ್ನು ಕಂಡು ಮರುಗಿದ ಅಣ್ಣನವರು ಧೈರ್ಯದಿಂದ ಅದನ್ನು ಎದುರಿಸಿ ವಿಜಯಿಯಾದರು. ಬಹುಸಂಖ್ಯಾಕರಾದ ಮೂಢಭಕ್ತಿಯ ಜನರ ಮೂರ್ತಿಪೂಜೆಯನ್ನೂ ಪ್ರಬಲರಾದ ಸನಾತನಿಗಳ ಶುಷ್ಕ ಕರ್ಮಾಚಾರಗಳನ್ನೂ ಬಿಡಿಸಿ, ಅವರೆಲ್ಲರಲ್ಲಿ ಸತ್ಪ್ರಕೃತಿ ಸದಾಚಾರಗಳನ್ನು ನೆಲೆಗೊಳಿಸಿ ನಿಜಸುಖದ ಮಾರ್ಗಕ್ಕೆ ಹಚ್ಚುವದು ಅಣ್ಣನವರ ಉದ್ದೇಶ! ಇವೆರಡು ಅವರ ಮತಪ್ರಚಾರ ಮಾರ್ಗಕ್ಕೆ ದೊಡ್ಡ ಅಡ್ಡಗೋಡೆಗಳಾಗಿದ್ದವು

ಮರನಗೋಟಿಗೆ ಬರ್ಪ ಕಿರುಕಳ ದೈವಕ್ಕೆ
ಕುರಿಯನಿಕ್ಕಿ ಹೆರೆಂದು ನಲನಲಿದಾಡುವರು!
ಕುರಿ ಸತ್ತು ಕಾವುದೆ ಹರ ಮುಳಿದವರ?
ಕುರಿ ಬೇಡ, ಮರಿ ಬೇಡ, ಬರಿಯ ಪತ್ರಿಯ ತಂದು,
ಮರೆಯದೆ ಪೂಜಿಸು ನಮ್ಮ ಕೂಡಲಸಂಗಮದೇವನ?

ಫಲವಿಲ್ಲದ ಕಾರ್ಯದಲ್ಲಿ ಕಷ್ಟಪಡುವದು ಬೇಡವೆಂದು ತಿಳಿಸಿ ಹೇಳುತ್ತಿದ್ದರು.

ಬಿದಿರೆಲೆಯ ಮೆಲಿದರೆ, ಮೆಲಿದಂತಲ್ಲದೆ ರಸವನು ಹಡೆಯಲು ಬಾರದು.
ಮಳಲ ಹೊಸೆದರೆ ಹೊಸೆದಂತಲ್ಲದೆ ಸರವಿಯ ಹಡೆಯಲು ಬಾರದು.
ನೀರ ಕಡೆದರೆ ಕಡೆದಂತಲ್ಲದೆ ಬೆಣ್ಣೆಯ ಹಡೆಯಲು ಬಾರದು.
ನಮ್ಮ ಕೂಡಲಸಂಗಮದೇವನಲ್ಲದೆ, ಅನ್ಯದೈವಕ್ಕೆರಗಿದರೆ
ಹೊಳ್ಳ ಕುಟ್ಟಿ ಕೈ ಹೊಟ್ಟೆಯಾದಂತಾಯಿತಯ್ಯಾ!

(ಅವ್ಯಭಿಚಾರ ಭಕ್ತಿ ಇರಬೇಕೆಂದು ಗೀತೆ ಹೇಳುವದೂ ಇದೂ ಒಂದೇ)

ಮೆಲ್ಲಗೆ ಮೂರ್ತಿಪೂಜೆಗಳಿಂದ ಪರಾವರ್ತಗೊಳಿಸಿ ಪರಮಾತ್ಮನ ನಿಜಸ್ವರೂಪ ತಿಳಿಸುತ್ತಿದ್ದರು. ಹಲವು ಬಗೆಯಿಂದ ಕಷ್ಟಬಟ್ಟು ಸ್ವಮತಾಚಾರಗಳನ್ನು ನಿರ್ದಿಷ್ಟಗೊಳಿಸಿ, ಬಳಕೆಯಲ್ಲಿ ತಂದು ಜಂಗಮವಿಚಾರದಲ್ಲಿ ವ್ಯವಸ್ಥೆ ಮಾಡಿ, ಆ ಧರ್ಮಮಂದಿರವನ್ನು ಕಟ್ಟುತ್ತಿರುವಾಗ, ಮತಾಂತರ

ಗಳವರ ಆಕ್ಷೇಪಣೆಗಳೂ, ಹೊಸಮತದ ವಿಶಿಷ್ಟ ಕಟ್ಟು-ನಿಯಮಗಳ ಬಗೆಗಿನ ಅಪಹಾಸ್ಯಗಳೂ ಆ ಕಟ್ಟಡವನ್ನು ಸಡಿಲುಗೊಳಿಸಲು ಯತ್ನಿಸುತ್ತಿದ್ದವು. ಬಸವಣ್ಣನವರು ಜಾತ-ಪ್ರೇತಸೂತಕಗಳನ್ನು ತೆಗೆದೊಗೆದಿದ್ದರು; ಜ್ಞಾನ ಕ್ರಿಯಾ ವ್ಯವಹಾರಗಳಲ್ಲಿ ಶ್ರದ್ಧೆಯನ್ನು ತುಂಬಿಸಿದ್ದರು. ಲಿಂಗವಂತರು ಹೊಸ ಹುರುಪಿನಿಂದ ಕೆಲಸ ಕಾರ್ಯಗಳನ್ನು ಕೈಕೊಂಡರು ಒಂದು ಮುಖದಲ್ಲಿ ಭವಿಸಂಪರ್ಕಕ್ಕೆಡೆಗೊಡದ ಮಡಿವಂತಿಕೆ ಮತ್ತೊಂದು ಮುಖದಲ್ಲಿ ಜಾತಿ-ವಿಜಾತಿಗಳ ಸಂಕರ, ಪುಣ್ಯವಂತರ ಪತಿತರೆನಿಸಿದವರ ಸಂಕಲನ; ಏನಿದೇ ? ಎಂದು ನೋಡುವ ಅನ್ಯಮತೀಯರು ಒಳಗೆ ಭೀತಿಗೊಂಡಿದ್ದರೂ ಮೇಲೆ ಸ್ಪಷ್ಟವಾಗಿ 'ಹಲವು ಅನಾಚಾರ ಸೇರಿ ಒಂದು ಶಿವಾಚಾರ' ಎಂದು ಅಪಹಾಸ್ಯದ ನುಡಿ ನುಡಿಯುಹತ್ತಿದರು. (ಸಾಮೂಹಿಕ ಲಿಂಗಧಾರಣೆಯನ್ನು ಲಿಂಗವಂತರ ಪಾದೋದಕ-ಪ್ರಸಾದ-ಪ್ರಕ್ರಿಯೆಗಳನ್ನು ವಿಡಂಬಿಸಿ ಬರೆದುದನ್ನು ಧರಣೀಂದ್ರ, ಚಂದ್ರಸಾಗರವರ್ಣಿ ಈ ಜೈನ ಕವಿಗಳ ಕಾವ್ಯದಲ್ಲಿಯೂ ನೋಡಬಹುದು.) ಮೊದಮೊದಲು ಅಣ್ಣನವರು—

> 'ಸೂಳೆಗೆ ಮೆಚ್ಚಿ ಸೂಳೆಯ ಬಂಟರೆಂಜಲ ತಿಂಬುದೀ ಲೋಕವೆಲ್ಲ;
> ಅಡಗ ಮೆಚ್ಚಿ ಕೊಣಗನ ಎಂಜಲ ತಿಂಬುದೀ ಲೋಕವೆಲ್ಲ!
> ಲಿಂಗವ ಮೆಚ್ಚಿ ಜಂಗಮ ಪ್ರಸಾದವ ಕೊಂಬವರ ನೋಡಿ ನಗುವವರ
> ಕುಂಭೀಪಾತಕ ನಾಯಕ ನರಕದಲ್ಲಿಕ್ಕುವ ಕೂಡಲಸಂಗಮದೇವ.

ಎಂದು ಲೌಕಿಕರ ವಕ್ರಬುದ್ಧಿಯನ್ನು ಪ್ರಕಟಿಸಿ, ಅವರ ತಂಟೆಗೆ ಹೋಗದೆ ಉಳಿಸಿದರು. ಆದರೆ ಅದರಿಂದ ಆ ಕೀಟಕತನ ತಪ್ಪಲಿಲ್ಲ. ಸನಾತನ ಬ್ರಾಹ್ಮಣರು ಜೈನರು ಮುಂತಾದವರ ಕುಹಕ ವಾಕ್ಯ ತಾಗುವದು ನಿಲ್ಲಲಿಲ್ಲ. ಹೊಸದಾಗಿ ಲಿಂಗದೀಕ್ಷಿತರಾದ ಸಾಮಾನ್ಯರಲ್ಲಿ ಅನಿಶ್ಚಯವೃತ್ತಿ, ಅಧೈರ್ಯಗಳು ಇನ್ನಿಷ್ಟು ಹೆಚ್ಚಿದವು ಇದರಿಂದ ಅಣ್ಣನವರ ಚಿಂತೆ-ಶತಾಧಿಕವಾಯಿತು. ಅವರ ಸಂಕಲ್ಪಕ್ಕೆ ಹಾನಿಯೊದಗುವಂತಾಯಿತು. ಮತ ಪ್ರಚಾರಕ್ಕೆ ಭಂಗ ಬರುವಂತಾಯಿತು. ಆಗ ಅವರು ಸ್ವಮತದ ಉತ್ಕೃಷ್ಟತೆಯನ್ನು ಪ್ರಸ್ಥಾಪಿಸುವದಕ್ಕಾಗಿ, ಎದುರಾದ ಮತಗಳಲ್ಲಿಯ ಪೊಳ್ಳುತನವನ್ನು ತೋರಿಸಿ ಖಂಡಿಸುವದೂ ಅನಿವಾರ್ಯವಾಯಿತು ಸತ್ಯದ ವಿಚಾರದಲ್ಲಿ ಮನಸ್ಸಾಕ್ಷಿಗೆ ವಿರೋಧವಾಗಿ ನಡೆಯುವದು ಹೇಗೆ ಸಾಧ್ಯವಾದೀತು ? ಮಹಾತ್ಮರಾದ ಯಾರಿಗೂ ಸಾಧ್ಯವಾಗದು !

ಲಿಂಗವಂತರಿಂದಾದ ಈ ಧಾರ್ಮಿಕ ಸಾಮಾಜಿಕ ಕ್ರಾಂತಿಯಲ್ಲಿ ಜೈನ ಬೌದ್ಧರುಗಳಿಗಿಂತ ಹೆಚ್ಚಾಗಿ ಕೆರಳಿದವರು ಸನಾತನಿ ವೈದಿಕರು, ಯಜ್ಞ ಯಾಗಾದಿ ಕರ್ಮನಿಷ್ಠರು, ಜಾತಿವರ್ಣಗಳ ಮೇಲು ಕೀಳು ಭಾವನೆಯುವರು, ಅಂದರೆ ಮುಖ್ಯವಾಗಿ ಬ್ರಾಹ್ಮಣರು ! ಬಸವಣ್ಣನವರು ಬ್ರಾಹ್ಮಣರಲ್ಲಿಯೇ ಹುಟ್ಟಿ, ಅವರ ಸಾವಿರಾರು ವರ್ಷಗಳ ಸಂಪ್ರದಾಯಗಳನ್ನು ನಿರಾಕರಿಸುವ ಆಂದೋಲನವನ್ನು ನಡಿಸಿದ್ದರಿಂದ ಕರ್ಮನಿಷ್ಠ ಬ್ರಾಹ್ಮಣರೇ ಅವರನ್ನು ಹೆಚ್ಚಾಗಿ ವಿರೋಧಿಸಿದರೆಂದು ತೋರುತ್ತದೆ. ಆದ್ದರಿಂದ ತಮ್ಮ ವಿಚಾರಗಳನ್ನು ಸಿದ್ಧಪಡಿಸುವವರೆಗೂ ಬ್ರಾಹ್ಮಣರ ವಾದಗಳನ್ನೂ ಆಚರಣೆಗಳನ್ನೂ ಅಲ್ಲಗಳೆವ ದಾರಿಯಲ್ಲಿ ಮುನ್ನಡೆಯಬೇಕಾಯಿತು.

ಮತ ಮತಗಳ ಹೋರಾಟದ ಸಮಯದಲ್ಲಿ ಭಾವೋದ್ರೇಕದ ಪರಿಣಾಮವಾಗಿ ಸ್ಪಷ್ಟನೆಯ ನಿಷ್ಠುರ ವಚನಗಳು ಉಂಟಾಗುವದೂ ಸಹಜ ! (ಈ ಕ್ರಮವನ್ನು ಹಿಂದಿನೆಯ ಪ್ರಕರಣ ' ಸಹಜ ಪ್ರಚಾರ'ದ ಭಾಗದಲ್ಲಿ ವಿವರಿಸಿದೆ.)

" ನೀರ ಕಂಡಲ್ಲಿ ಮುಳುಗುವರಯ್ಯಾ, ಮರನ ಕಂಡಲ್ಲಿ ಸುತ್ತುವರಯ್ಯಾ
ಬತ್ತುವಜಲವ ನೊಣಗುವ ಮರನ
ಮಚ್ಚಿದವರು ನಿಮ್ಮನೆತ್ತಬಲ್ಲರು ಕೂಡಲಸಂಗಮದೇವಾ ?
ನಿಮ್ಮನರಿಯುವ ಕಾರಣ ಕೈಯಲ್ಲಿ ಹುಲ್ಲ,
ನಿಮಗೆರಗುವ ಕಾರಣ ಕೊರಳಲ್ಲ ನೇಣು ?
ಹಿಂಡಲೇಕೊ ? ತೊಳೆಯಲೇಕೊ ? ಮುಳುಗಿ ಮುಳುಗಿ
ಮೂಗ ಹಿಡಿಯಲೇಕೊ ?
ಕೂಡಲ ಸಂಗನ ಶರಣರಲ್ಲಿ ಡೋಹರ ಕಕ್ಕಯ್ಯನಾವ ತೊರೆಯಲ್ಲಿ ಮಿಂದ ?
ವೇದವನೋದಿದ ವಿಪ್ರರು ಹೊನಲಿಲ್ಲ ಹೋದ ಕೇಡವ ನೋಡಿರೇ !
' ಭರ್ಗೋ ದೇವಸ್ಯಧೀ ಮಹಿ ' ಎಂಬರು.
ಒಬ್ಬರಿಗಾಗಿ ವಿಚಾರವಿಲ್ಲ ನೋಡಿರೇ ಕೂಡಲಸಂಗಮದೇವಾ "

ಮತ್ತು ಅವರು ಪರಮಾತ್ಮನನ್ನು ಅರಿಯದೆ ಕಾಮ್ಯಾಚಾರದಲ್ಲಿಯೇ ತೊಡಗಿರುವವನ್ನು ಖಂಡಿಸಿ ವಿಡಂಬಿಸಿ ನುಡಿಯುತ್ತಿದ್ದರು.

ದಯವಿಲ್ಲದ ಧರ್ಮ ನಿಷ್ಪ್ರಯೋಜಕ! ಬಾಯಲ್ಲಿ ಅಹಿಂಸೆಯ ಮಾತಾಡಿ ಕೈಯಲ್ಲಿ ಹೋತ ಕೊಲ್ಲುವದು ಎಲ್ಲಿಯ ದಯೆ ? ಇದೆಲ್ಲಿಯ ಧರ್ಮ ?

ನಿಮಗೂ ಹೊಲೆಯ ಮಾದಿಗರಿಗೂ ಭೇದವೇನು 'ಸತ್ತುದ ನೆಳೆವವರವರು; ಹೊತ್ತು ತಂದು ಕೊಲ್ಲುವಿರಿ ನೀವು' ಎಂದು ಅವರ ಯಜ್ಞಕರ್ಮವನ್ನು ಅಲ್ಲಗಳೆವರು. ಮತ್ತು

'ಕಿಚ್ಚು ದೈವವೆಂದು ಹವಿಯನಿಕ್ಕುವ ಹಾರವನ ಮನೆಯಲ್ಲಿ
ಕಿಚ್ಚೆದ್ದು ಸುಡುವಾಗ ಬಚ್ಚಲ ನೀರ ಬೀದಿಯ ಧೂಳಹೊಯ್ದು
ಬೊಬ್ಬಿಟ್ಟೆಲ್ಲರ ಕರೆವರಯ್ಯಾ!
ಕೂಡಲಸಂಗಮದೇವ ವಂದನೆಯ ಮರೆದು ನಿಂದಿಸುತಿರ್ಪರಯ್ಯಾ'

ಎಂದು ಲಿಂಗವಂತರಿಗೆ ಹೇಳಿ ಅವರ ಹೊಸ ಭಾವನೆಗಳನ್ನು ಸ್ಥಿರಗೊಳಿಸುತ್ತಿದ್ದರು.

ಕಡೆಗೆ ಬ್ರಾಹ್ಮಣರು ಜಾತಿಯ ಮಾತನ್ನು ಎತ್ತದಿರುವಂತೆ ಅವರ ಗೋತ್ರ ಪುರುಷರ ಮೂಲಗಳನ್ನು ಎತ್ತಿ ಕೆದಕಿದರು. ಈ ಎಲ್ಲ ಪ್ರಯತ್ನಗಳಿಂದ ಬ್ರಾಹ್ಮಣರನ್ನು ಓಡಿಹೋಗುವಂತೆ ಮಾಡದಿದ್ದರೂ ತಮ್ಮ ವಿಚಾರದಲ್ಲಿ ಜಯವನ್ನು ಪಡೆದರು. ಆಚಾರದ ದೆಸೆಯಿಂದ ವೀರಶೈವವು ಬ್ರಾಹ್ಮಣಮತಕ್ಕಿಂತ ಉತ್ಕೃಷ್ಟವೆಂದು ನಿಶ್ಚಯಗೊಳಿಸಿದರು. ನೂತನವಾಗಿ ಸೇರಿಕೊಂಡವರಿಗೆ ವೀರಶೈವದಲ್ಲಿ ಅತೃಪ್ತಿಯುಂಟಾಗಲು ಎಳ್ಳಷ್ಟು ಆಸ್ಪದ ಉಳಿಯಲಿಲ್ಲ. ಹೀಗೆ ವೀರಶೈವರಿಗೆ ಸ್ವಮತಾಧಿಕ್ಯದಲ್ಲಿ ನಂಬಿಗೆಯುಂಟಾದಾಗ

"ವರ್ಣಾನಾಂ ಬ್ರಾಹ್ಮಣೋ ಗುರು ಎನ್ನುವುದು ಹುಸಿ
ವರ್ಣಾನಾಂ ಗುರು ನಮ್ಮ ಕೂಡಲ ಸಂಗನ ಶರಣ ಮಹಾಜನರು."

ಎಂದು ಸಾರಿ ಶರಣಧರ್ಮದ ಜಯಭೇರಿಯನ್ನು ಮೊಳಗಿಸಿದರು.

ಸ್ತ್ರೀಯರಿಗೂ ಶೂದ್ರರಿಗೂ ಪಾರಮಾರ್ಥಿಕ ವಿದ್ಯಾವ್ಯಾಸಂಗವು ನಿಷಿದ್ಧವೆಂಬ ಬಂಧನವನ್ನು ಕಡಿದೊಗೆದು ಅದರಲ್ಲಿ ಅವರಿಗೆ ಸ್ವಾತಂತ್ರ್ಯವನ್ನು ನೀಡಿದರು.

ದೋಷಾರೋಪಣೆಗಳ ವಿವೇಚನೆ

ಬಸವರಾಜರ ಮೇಲೆ ಅವರ ಜೀವಿತಕಾಲದಲ್ಲಿಯೂ ಮುಂದೆಯೂ ಎರಗಿ ಬಂದ ದೋಷಾರೋಪಣೆಗಳು ಯಾವವು? ಅವು ಯಥಾರ್ಥವೇ? ಎಂಬುದನ್ನು ಮಾನ್ಯ ಶ್ರೀ ಎಮ್. ಆರ್. ಶ್ರೀನಿವಾಸಮೂರ್ತಿಯವರು 'ಭಕ್ತಿಭಂಡಾರಿ ಬಸವಣ್ಣನವರು' ಪುಸ್ತಕದ ೭ನೆಯ ಪ್ರಕರಣದಲ್ಲಿ ಕೂಲಂ

ಕುಷವಾಗಿ ವಿವರಿಸಿದ್ದಾರೆ. ಅದನ್ನೂ ಈ ಗ್ರಂಥದಲ್ಲಿ ಸಂದರ್ಭಾನುಸಾರ ವಾಗಿ ವಿವೇಚಿಸಿದುದನ್ನೂ ಇಲ್ಲಿ ಸಂಗ್ರಹವಾಗಿ ಹೇಳುತ್ತೇವೆ.

ದೋಷಾರೋಪಣೆಗಳು :

೧) ರಾಜ್ಯಭಾಂಡಾರದ ಹಣ ಸುರಿದು ಲಿಂಗವಂತ ಧರ್ಮ ಬೆಳೆಸಿದರು. ಮತ್ತು ಅಸಂಖ್ಯಾತ ಜನರಿಗೆ ಅನ್ನಹಾಕುತ್ತ ಗುಪ್ತದಳವನ್ನು ಏರ್ಪಡಿಸಿದರು.

೨) ಬೇಕುಬೇಕಾದವರಿಗೆ ಲಿಂಗಧಾರಣೆ ಮಾಡಿ ಹೀನ ಜಾತಿಯು ವರನ್ನು ತಂದು ಸಮಾಜದಲ್ಲಿ ಹೊಗಿಸಿ ಅದರ ಪಾವಿತ್ರ್ಯವನ್ನು ಹಾಳು ಮಾಡಿದರು.

೩) ಬ್ರಾಹ್ಮಣ ವಿದ್ವೇಷಿಗಳಾಗಿದ್ದರು.

೪) ತಮಗೆ ಆಶ್ರಯ ಕೊಟ್ಟ ಸ್ವಾಮಿ ಬಿಜ್ಜಳನನ್ನು ಕೊಲ್ಲಿಸಿದರು.

ಇವು ಮುಖ್ಯವಾಗಿದ್ದವು. ಅನ್ಯಮತದವರಿಗಿಂತ ಹೆಚ್ಚಾಗಿ ಸ್ವಮತದವರೇ ಆದ ಅಂಧಾಭಿಮಾನಿಗಳು ಅದೇ ಹುಮ್ಮಸಿನಲ್ಲಿ ಬರೆದ ಪುರಾಣ ಕರ್ತೃಗಳು ಅಣ್ಣನವರಿಗೆ ಈ ಕಲಂಕ ಹತ್ತುವಂತೆ ಮಾಡಿದ್ದಾರೆ. ಅಣ್ಣನವರ ಪವಾಡಗಳನ್ನು ಮೆರಿಸುವ ಭರದಲ್ಲಿ ಅವರ ಸ್ವಭಾವವನ್ನು ಲಕ್ಷಿಸದ ತಪ್ಪು ಮಾಡಿದ್ದಾರೆ ಇಂತಹ ವೀರಶೈವರ ಮತ್ತು ಜೈನರ ಪುರಾಣಗಳ ಈ ದೋಷಗಳನ್ನು ಇತಿಹಾಸಕಾರರೂ ಆಗ ಲಕ್ಷಿಸಲಿಲ್ಲ. ಶಾಸನಾಧಾರ ಮತ್ತು ಅಣ್ಣನವರ ಸ್ವಂತ ಸಾಹಿತ್ಯ ಪ್ರಚುರವಾದಂತೆ ಅವರ ನೈಜ ಸ್ವಭಾವವನ್ನು ತಿಳಿದವರು ಈಗ ಅದನ್ನು ತಿದ್ದಿಕೊಳ್ಳಬೇಕಾಗಿದೆ.

೧) ಬಿಜ್ಜಳನು ತನ್ನ ರಾಜ್ಯದಲ್ಲಿ ಮಾಡಿದ ಆರ್ಥಿಕ ಪುನರ್ವ್ಯವಸ್ಥೆಗೆ ಬಸವರಾಜರೇ ಕಾರಣರೆಂಬುದು ಪ್ರಜೆಗಳೆಲ್ಲ ತಿಳಿದ ಮಾತಾಗಿತ್ತು. ಬಹುಕಾಲ ಉಚ್ಚವರ್ಣದವರಿಂದ ತುಳಿದಿಡಲ್ಪಟ್ಟ ಹಿಂದುಳಿದ ಜನರು ವಿದ್ಯಾ ಬುದ್ಧಿ ಆರೋಗ್ಯಗಳಿಂದ ಸುಖ ಸಂತೋಷ ಕಂಡಾಗ ಇದು ಬಸವರಾಜರಿಂದಾದುದೆಂಬ ನಂಬುಗೆ ಮೂಡಿ ಅವರ ಬಗ್ಗೆ ಭಕ್ತಿ-ಪ್ರೇಮಾದರಗಳು ಉಂಟಾದುದರಲ್ಲಿ ಬಸವಣ್ಣನವರ ತಪ್ಪಿದೆಯೋ ? ಈ ನಂಬಿಗೆ ಅಣ್ಣನವರ ವಾಣಿ-ವಿಚಾರಗಳಿಗೆ, ಮತಕ್ಕೆ ಮನಸೋಲಲು ಸಹಾಯಕವಾಗಿರಬಹುದು. ಹೀಗಾದು

ದನ್ನು ವಿಪಕ್ಷದವರು ಧನದ ಅಪವ್ಯಯದ ಹೆಸರು ಮಾಡಿ ಅಪಪ್ರಚಾರ ಮಾಡಿದರು. ಈ ಅಪವಾದದ ಸುದ್ದಿಯು ಅಣ್ಣನವರಿಗೂ ಹತ್ತಿರಬಹುದು. 'ಕೂಡಲಸಂಗಯ್ಯನುಳ್ಳನ್ನಕ್ಕ ಬಿಜ್ಜಳನ ಭಾಂಡಾರವೆನಗೇಕಯ್ಯಾ?' ಎಂದು ಅದನ್ನು ನಿರಾಕರಿಸಿದ್ದಾರೆ.

"ಒಡೆಯೋಡು ಎನ್ನ ಮನೆಯಲ್ಲಿಲ್ಲದಂತೆ ಮಾಡಯ್ಯಾ !
ಕೊಡು ದೇವ ಎನ್ನ ಕೈಯಲ್ಲೊಂದು ಕರಿಕೆಯ !
ಮೃಡದೇವ ಶರಣೆಂದು ಭಿಕ್ಷಕ್ಕೆ ಹೋದರೆ ಅಲ್ಲಿ
ನಡೆ ದೇವ ಎಂದೆನಿಸು ಕೂಲಸಂಗಮದೇವಾ."

ಎಂಬ ಮನೋಭಾವವುಳ್ಳವರು, 'ನಿಮ್ಮ ಸೊಮ್ಮು ನಿಮಗೆ ಸಲ್ಲಿಸುವೆ ಸಂಗಮದೇವಾ' ಎಂದು ಸರ್ವ ಸೊತ್ತನ್ನೂ, ಸಂಬಳವನ್ನೂ ಜಂಗಮದಾಸೋಹಕ್ಕೆ ನೀಡಿದವರು ಪರರ ಸೊತ್ತಿಗೆ ಆಸೆ ಮಾಡಿರಬಹುದೇ?

ಇನ್ನು ಗುಪ್ತ ದಳವು ಅವರಿಗೇಕೆ ಬೇಕು? 'ತನಗೆ ಮುನಿವರಿಗೆ ತಾ ಮುನಿಯಲೇಕೆ?' ಎನ್ನುವವರು, 'ನಿಂದಿಸಿದವರೆನ್ನ ಮನದ ಕಾಳಿಕೆಯ ಕಳೆದರು' ಎನ್ನುವವರು, 'ದ್ವೇಷಕ್ಕೆ ಪ್ರೇಮವಲ್ಲದೆ ಬಲಪ್ರಯೋಗ ಪರಿಹಾರವಲ್ಲ' ಎನ್ನುವವರು ಗುಪ್ತದಳವನ್ನು ರಚಿಸಬಹುದೇ?

ಮತಪ್ರಚಾರಕ್ಕೆ ರಾಜ್ಯಾಧಿಕಾರವೇ ಬೇಕಾಗಿದ್ದರೆ, ಪೇಶ್ವೆಯವರಂತೆ ಬಸವಣ್ಣನವರೂ ಬಿಜ್ಜಳನ ರಾಜ್ಯವನ್ನೇ ಸೆಳೆದುಕೊಳ್ಳಲು ಯತ್ನಿಸಬಹುದಾಗಿತ್ತು. ಪ್ರಜಾನುರಾಗವನ್ನು ನೋಡಿದರೆ ಅವರಿಗೆ ಅದು ಕಠಿಣವಾಗಿರಲಿಲ್ಲ.

ಅಣ್ಣನವರು ಕಪಟಿಗಳಾಗಿದ್ದರೆ ಅದನ್ನೇ ನೋಡಲೆಂದು ಬಂದರೇ ಅಲ್ಲಮಾದಿ ಮಹಿಮಾಪುರುಷರು ? ಕಲ್ಯಾಣವೆಲ್ಲಿ? ಬನವಾಸಿ, ಬಳ್ಳೀಗಾಂವಿ, ಉಡುತಡಿಗಳೆಲ್ಲಿ ? ಸೋಮನಾಥವೆಲ್ಲಿ ? ಕಾಶ್ಮೀರವೆಲ್ಲಿ? ಕಾಶಿಯೆಲ್ಲಿ ? ಕಳಿಂಗವೆಲ್ಲಿ ? ರಾಜ-ಮಹಾರಾಜರು ವೈರಾಗ್ಯ ತಾಳಿ ಬಂದರು; ಜ್ಞಾನಿಗಳು ಪಂಡಿತರು ತತ್ವಮಥನಕ್ಕಾಗಿ ಬಂದರು. ಇವರೆಲ್ಲರನ್ನು ಮರುಳು ಮಾಡುವ ವಶೀಕರಣ ವಿದ್ಯೆಯೇನಾದರೂ ಇತ್ತೇ ಅಣ್ಣನವರಲ್ಲಿ? ಮೂರ್ಖರು ಹಾಗೂ ಅಂದಿರಬಹುದು. ಅಣ್ಣನವರು:

"ವಶ್ಯವ ಬಲ್ಲೆನೆಂದೆಂಬಿರಯ್ಯಾ, ಬುದ್ಧಿಯನರಿಯದ
ಮನುಜರು ಕೇಳಿರಯ್ಯಾ!
ವಶ್ಯವಾವುದೆಂದರಿಯದೆ ಮರುಳಗೊಂಬಿರೆಲೆ ಗಾಹಿಲ ಮನುಜರಿರಾ!
'ಓಂ ನಮಃ ಶಿವಾಯ' ಎಂಬ ಮಂತ್ರ ಸರ್ವಜನ ವಶ್ಯ!
ಕೂಡಲ ಸಂಗಮದೇವಾ"

ಎಂದು ಉತ್ತರಿಸಿದ್ದಾರೆ.

೨) ಹೀನಜಾತಿಯವರನ್ನು ಮೇಲೆತ್ತುವದರಿಂದ ವರ್ಣಸಂಕರಗೊಳಿಸಿದರೆಂಬುದು ಅಪರಾಧವೇ ಅಲ್ಲ. ಇದನ್ನು ಈ ಗ್ರಂಥದಲ್ಲಿ ಸಾಕಷ್ಟು ವಿವೇಚಿಸಲಾಗಿದೆ. ಶಾಸ್ತ್ರಗಳಲ್ಲಿಯೇ ಜಾತಿಭೇದಕ್ಕೆ ಪ್ರಬಲ ಆಧಾರಗಳಿಲ್ಲ. ಪ್ರತಿಯಾಗಿ ಸಮಾನತೆಗೇ ಪ್ರಮಾಣಗಳಿವೆ. ಬುದ್ಧ, ಕ್ರೈಸ್ತರು ಮಾನವರೆಲ್ಲರ ಸಮಾನತೆಯ ಸಾರಿ, ನಿಜವಾದುದನ್ನು-ನ್ಯಾಯವಾದುದನ್ನು ಮಾಡಿದರು; ಹಾಗೆಯೇ ಅಣ್ಣನವರು !! 'ದೇವರಿಗೆ ನೀವು ದೂರ' ಎಂದು ನಿಮ್ನ ವರ್ಗದವರನ್ನು ಉದಾಸೀನಗೊಳಿಸಿ ದೂರಿಡುವದು ಎಂತಹ ಪಾಪದ ಕೆಲಸ! ಅದನ್ನು ಪರಿಹರಿಸಿದ ಬಸವಣ್ಣನವರ ಈ ಕೆಲಸ ಅನುಚಿತವೆಂದು ವಿಶಾಲಭಾವನೆಯ ಈ ಕಾಲದಲ್ಲಂತೂ ಯಾರೂ ಹೇಳಲಾರರು.

೩) ಬ್ರಾಹ್ಮಣರಲ್ಲಿಯೇ ಹುಟ್ಟಿದ ಅಣ್ಣನವರು ಬಾಲ್ಯದಲ್ಲಿಯೇ ಬ್ರಾಹ್ಮಣರ ಕರ್ಮಾಚಾರಗಳನ್ನು ಮೆಚ್ಚದಾದರು. ಬ್ರಾಹ್ಮಣರು ಸಮಾಜದಲ್ಲಿ ಬೆಳಸಿಕೊಂಡು ಬಂದ 'ತರ-ತಮ' ಭಾವನೆಗಳಿಂದ ಜಿಗುಪ್ಸೆಗೊಂಡಿದ್ದರು. ಇವನ್ನು ಅಲ್ಲಗಳೆಯದಿದ್ದರೆ ಸರಿಯಾದುದನ್ನು ಪರಿಣಾಮಕಾರಿಯಾಗಿ ನೆಲೆಗೊಳಿಸುವದು ಹೇಗೆ? ಈ ಕಾರ್ಯ ಬ್ರಾಹ್ಮಣರಿಗೆ ಅಪ್ರಿಯವಾದರೆ ಅವರು ಬ್ರಾಹ್ಮಣರ ದ್ವೇಷಿಗಳಾದರೇ? ತಮ್ಮ ಮಂತ್ರಿತನದಲ್ಲಿಯೂ 'ಸರ್ವರ ಲೇಸ'ನೇ ಬಯಸಿದರಲ್ಲದೆ ಯಾವದೊಂದು ಜಾತಿಯವರನ್ನು ಎಡಗಣ್ಣಿನಿಂದ ನೋಡಿದರೆಂದು ಆ ಕಾಲದ ಗ್ರಂಥಕಾರರೂ ಹೇಳಿರುವದಿಲ್ಲ.

೪) ತಮ್ಮ ಆಶ್ರಯದಾತ ಬಿಜ್ಜಳನ ಕೊಲೆಮಾಡಿಸಿದರೆಂದು ಹೇಳುವದು, ಹಾಗೆ ತಿಳಿಯುವದು ಅತ್ಯಂತ ಅನುಚಿತವಾಗಿದೆ. ಬಿಜ್ಜಳನ ಮರಣ ಹೇಗಾಯಿತೆಂಬ ವಿಷಯದಲ್ಲಿ ಜೈನಗ್ರಂಥಗಳಲ್ಲಿಯೂ ಏಕಾಭಿಪ್ರಾಯವಿಲ್ಲ. (ಅನುಬಂಧದ ಪ್ರಮಾಣ ವಿಚಾರದಲ್ಲಿ ನೋಡಿರಿ) ವೀರಶೈವ ಪುರಾಣಗಳಲ್ಲಿ

ಜಗದೇವನ ಉಪಕಥೆ ಬಂದು ದೋಷಾರೋಪಣೆಯಾಗುವಂತಾಗಿದೆ. ಬಿಜ್ಜಳನ ಕೊಲೆಯಾದುದು ನಿಜವಾದರೂ ಅದರ ಕಾರಣ ಮತ್ತು ಕ್ರಮಗಳು ಈ ಗ್ರಂಥದಲ್ಲಿ ವಿವರಿಸಿದಂತೆ ಸ್ವಾಭಾವಿಕ ಮತ್ತು ಸತ್ಯವಾಗಿ ಬೇರೆಯಾಗಿವೆ. ಬಿಜ್ಜಳನ ಕೊಲೆಯಾಗುವ ಮೂರು ತಿಂಗಳು ಮೊದಲೇ ಬಸವಣ್ಣನವರು ಕಲ್ಯಾಣವನ್ನು ಬಿಟ್ಟು ಹೋಗಿದ್ದಾರೆ. ಅವರು ಬಿಜ್ಜಳನ ಮರಣದಿಂದ ಬಹಳ ನೊಂದಿದ್ದಾರೆ, ಅವನ ಗುಣಗೌರವಗಳನ್ನು ನೆನಿಸಿ ದುಃಖಿಸಿದ್ದಾರೆ.

ಕಲ್ಯಾಣದಲ್ಲಿ ಬಂದು ಸೇರಿದ ಲಿಂಗವಂತಮತಾನುಯಾಯಿಗಳ ಗುಂಪು ಬಹುದೊಡ್ಡದಾಯಿತು. ಅವರೆಲ್ಲರಲ್ಲಿ ಸಮತಾಭಾವ, ಸ್ವಾತಂತ್ರ್ಯ ಐಕ್ಯಗಳು ಮೂಡಿಬಂದಿದ್ದವು. ಅವರು ಅಣ್ಣನವರ ಆಜ್ಞಾನುವರ್ತಿಗಳೂ ಆಗಿದ್ದರು. ರಾಜ್ಯಾಪಹಾರವನ್ನು ದಕ್ಕಿಸಿಕೊಳ್ಳಬೇಕಾಗಿದ್ದ ಬಿಜ್ಜಳನಿಗೆ ಅಣ್ಣನವರ ಈ ಜನರ ಬೆಂಬಲವು ಭೀತಿಯನ್ನೂ ಸಂದೇಹವನ್ನೂ ಹುಟ್ಟಿಸುವದು ಸಹಜವಾಗಿತ್ತು. ಶರಣರ ಹುಮ್ಮಸದ ಪ್ರಚಾರೋತ್ಸವವನ್ನು ಕಂಡ ಉಳಿದ ಮತದವರೂ ದಿಗಿಲುಗೊಂಡು ಬಿಜ್ಜಳನಲ್ಲಿ ದೂರು ಹೇಳುತ್ತ ಅವನ ಭಯ–ಸಂಶಯುಗಳನ್ನು ಹೆಚ್ಚಿಸಿದರು. ಹೀಗೆ ಚಾಡಿ ಮತ್ತು ಅಪಾರ್ಥಗಳಿಂದ ಬಸವೇಶ್ವರರ ಮತಪ್ರಚಾರಕ್ಕೆ ರಾಜಕೀಯ ಬಣ್ಣ ಹತ್ತಿಬಿಟ್ಟಿತು. ಬಿಜ್ಜಳನು ಕುರುಡನಾಗಿ ಶರಣಧರ್ಮಕ್ಕೆ ವಿರೋಧವಾಗಿ ನಿಂತನು. ಅಪಕ್ವ ವಿಚಾರದ ಮತ್ತು ತಮ್ಮ ಅಭಿವೃದ್ಧಿಯಿಂದ ಅಂಧರಾಗಿದ್ದ ಹಲವು ಲಿಂಗವಂತರು ಕೂಡ ಆ ರಾಜಕೀಯ ಬಣ್ಣವನ್ನು ಒಪ್ಪಿ ಬೆಳಸಿದರೆಂಬುದೂ, ಬಿಜ್ಜಳನ ಕೊಲೆಯಾದಾಗ ಸೇಡುತೀರಿದ ಭಾವನೆಯಿಂದ ಸಂತೋಷಪಟ್ಟರ ಬಹುದೆಂಬುದೂ ಅದೇ ಮುಂದೆ ಹುಟ್ಟಿದ ವೀರಶೈವ ಸಾಹಿತ್ಯದಿಂದ ತಿಳಿಯುತ್ತದೆ. ಆದರೆ ಅದು ಬಸವರಾಜರ ಸ್ವಭಾವ ಮತ್ತು ಕೃತಿಗಳನ್ನು ವ್ಯಕ್ತಪಡಿಸಲಾರದು.

ವ್ಯಕ್ತಿತ್ವದ ಅಗ್ಗಳಿಕೆ

ಕರ್ನಾಟಕದಲ್ಲಿ ಬಸವಣ್ಣನವರ ಪ್ರಭಾವವು ಬಹುಮುಖವಾಗಿ ಪರಿಣಾಮ ಮಾಡಿದೆ. ಒಬ್ಬ ಅವತಾರಿ ಪುರುಷರಿಂದ ಜನಾಂಗದ ಜೀವನದಲ್ಲಿ ಮಹತ್ವದ ಮಾರ್ಪಾಡುಗಳಾಗುತ್ತಿವೆ. ಬಸವಣ್ಣನವರಂಥ ಮಹಾತ್ಮರು

ಒಳ್ಳೆಯ ಸ್ಫೂರ್ತಿಯಿಂದ ಕೆಲಸಮಾಡಲು ತೊಡಗಿದಾಗ ಸಮಾಜದಲ್ಲಿ, ಸಾಹಿತ್ಯದಲ್ಲಿ, ಧರ್ಮದಲ್ಲಿ ಪ್ರಭಾವಯುತ ಮಾರ್ಪಾಡುಗಳಾದುದು ಸಹಜ ವಾಗಿದೆ.

ಜನರು ಸ್ವಾವಲಂಬಿಗಳಾಗುವಂತೆ—ಜೀವನೋಪಾಯಕ್ಕೆ ಒಂದು ವೃತ್ತಿಯನ್ನೇ ಅವಲಂಬಿಸುವಂತೆ-ಜನರನ್ನು ಪ್ರೋತ್ಸಾಹಿಸಿದರು. ಇದು ಸಮಾಜಹಿತಕ್ಕೆ ಬಹುದೊಡ್ಡ ತಳಹದಿಯಾಯಿತು, 'ಕಾಯಕವೆ ಕೈಲಾಸ' ವೆಂಬದಕ್ಕೆ ಕಾರಣವಾಯಿತು. ಕಾಯಕವು ದೇಹರಕ್ಷಣೆಗೆ ಮಾತ್ರವಲ್ಲ; ಜಂಗಮಪೂಜೆಗೆ ಅವಶ್ಯಕ ! ಜಂಗಮವೇ ಲಿಂಗ ! ಲಿಂಗಸಾಧನೆಗೆ (ಮೋಕ್ಷಕ್ಕೆ) ಕಾಯಕವು ಅತ್ಯವಶ್ಯವೆಂದು ಬಿಂಬಿಸಿದರು. ಕಾಯಕದಲ್ಲಿ ಉಚ್ಚನೀಚ ಭೇದವಿಲ್ಲ. ಕಾಯಕದಿಂದ ಉಂಟಾದ ಜಾತಿಗಳು ಅಸಂಬದ್ಧ ವಾಗಿವೆ. ಎಲ್ಲ ಕಾಯಕಗಳಿಗೂ ಸಮಾನವಾದ ಉನ್ನತ ಸ್ಥಾನವನ್ನು ಕಲ್ಪಿಸಿ ಚಾತುರ್ವರ್ಣ್ಯಭೇದಗಳನ್ನು ನಿರಾಕರಿಸಿದರು. ಅದರಿಂದ ಭ್ರಾತೃ ಭಾವವು ಉಂಟಾಗಿ ಸಮಾಜವು ಒಂದಾಗುವದಕ್ಕೆ ಅನುಕೂಲವಾಯಿತು. 'ಗುರು ಜಂಗಮರು ಕೂಡ ಕಾಯಕಕ್ಕೆ ಒಳಗು' ಎಂದು ಸಾರಿದ್ದರಿಂದ ಸಮಾಜಶೋಷಣೆಗೆ ಪ್ರತಿಬಂಧವಾಯಿತು. ಆ ಕಾಲದ ಗುರು-ಜಂಗಮರು ಕರ್ನಾಟಕದಲ್ಲಿ ಹೇರಳವಾಗಿ ತಮ್ಮ ಮಠಗಳನ್ನು ಸ್ಥಾಪಿಸಿ ಸರ್ವಸಮಾತ ಭಾವದಿಂದ ಸಮಾಜ ಸೇವೆಗೆ ಸಿದ್ಧರಾದರು. ಇಂದಿಗೂ ವೀರಶೈವ ಮಠ ಗಳು ವೀರಶೈವೇತರ ಜನಾಂಗಗಳ ಸಂಬಂಧವನ್ನು ಒಳಗೊಂಡು ಸಮಾಜ ಸೇವೆಯನ್ನು ಮಾಡುತ್ತಿರುವದು ಕಂಡುಬರುತ್ತಿದೆ. ಅನ್ಯಮತಗಳ ಮಠಗಳ ವರು ತಮ್ಮ ಮತಾಚಾರದವರನ್ನು ಬಿಟ್ಟು ಉಳಿದವರ ಹಿತಕ್ಕೆ ಕಿಂಚಿನ್ಮಾ ತ್ರವೂ ಲಕ್ಷಕೊಡುತ್ತಿಲ್ಲವೆಂಬುದು ಸ್ಪಷ್ಟವಾಗಿದೆ.

ಸ್ತ್ರೀಯರು ಕೇವಲ ಸಂಸಾರ ನಿರ್ವಹಣಕ್ಕೆ, ಪುರುಷರ ಸೇವೆಗೆ ಮಾತ್ರ ಯೋಗ್ಯರೆಂಬವನ್ನು ಅಣ್ಣನವರು ಅಲ್ಲಗಳೆದು ಅವರೂ ಧಾರ್ಮಿಕ ದೀಕ್ಷೆಗೂ ಮೋಕ್ಷಕ್ಕೂ ಅಧಿಕಾರಿಗಳೆಂಬದನ್ನು ಸ್ಥಾಪಿಸಿದರು. ಇದರಿಂದ 'ಸತಿಪತಿ ಗಳೊಂದಾದ ಭಕ್ತಿ ಹಿತವಾಗಿಪ್ಪುದು ಶಿವಂಗೆ' ಎನ್ನುವಂತೆ ಜತೆಯಾಗಿ ಮಾಡುವ ಸಾಧನೆ ಉಪಾಸನೆಗಳೂ ಸುಲಭವಾಗಿ ಫಲಿಸಿ, ಆತ್ಮೋದ್ಧಾರಕ್ಕೂ ಸಮಾಜೋದ್ಧಾರಕ್ಕೂ ಪೂರ್ಣ ಸಹಾಯವಾಯಿತು.

ಪ್ರಾಣಿಹಿಂಸೆಯನ್ನು ನಿಷೇಧಿಸಿ ಸನ್ಮಾರ್ಗದಲ್ಲಿ ನಡೆಯುವಂತೆ ಪ್ರೇರಿಸಿದ್ದರಿಂದ ಮದ್ಯ-ಮಾಂಸಗಳ ಸೇವನೆ ನಿಂತುಹೋಯಿತು. ಶಿವಭಕ್ತಿಗೂ ಅವುಗಳಿಗೂ ಬಹಳ ದೂರವಾಯಿತು. ಸುರಾಪಾನವು ಸಹಜಾಚರಣೆಯೆಂಬುದು ಮಾಯವಾದ್ದರಿಂದ ಅದರ ಭಕ್ತರು ಸಮಾಜಕ್ಕೆ ಕಳ್ಳರಂತೆ ಹೆದರಿ ಇರಬೇಕಾಯಿತು.

ತತ್ವವಿಚಾರದಲ್ಲಿ ನೋಡಿದರೆ ಬಸವೇಶ್ವರರು ಭವಬಂಧನದ ಗ್ರಂಥಿಗಳನ್ನೆಲ್ಲ ಬಿಚ್ಚಿದರು. ವೇದೋಪನಿಷದಾಗಮಗಳು ಸ್ಪಷ್ಟಮಾಡದ ಪಾರಮಾರ್ಥಿಕ ವಿಚಾರಗಳನ್ನು ಕನ್ನಡದಲ್ಲಿ ತಿಳಿಯಾಗಿ ಹೇಳಿ ಬೆಳಗಿಬಿಟ್ಟರು. ಜೀವನು ದೇವನಾಗುವ ಪರಿಯಲ್ಲಿ ಸಂದೇಹವನ್ನೇ ಉಳಿಸಲಿಲ್ಲ. ಪಾರಮಾರ್ಥಿಕ ಸಾಧನೆಯಲ್ಲಿ ಹಿರಿಯರಾದವರ ಮಾತಿನಲ್ಲಿಯೇ ಈ ಮಾತಿನ ಸತ್ಯತೆಯನ್ನು ಕಾಣುತ್ತೇವೆ.

ಅಲ್ಲಮ ಪ್ರಭುಗಳು ಅಣ್ಣನವರನ್ನು ಹಲವು ಸಂದರ್ಭಗಳಲ್ಲಿ ಅನೇಕ ಬಗೆಯಾಗಿ ಮನವಾರೆ ಕೊಂಡಾಡಿದ್ದಾರೆ.

"ಸತಿಯ ಕಂಡು ಬ್ರತಿಯಾದ ಬಸವಣ್ಣ;
ಬ್ರತಿಯಾಗಿ ಬ್ರಹ್ಮಚಾರಿಯಾದ ಬಸವಣ್ಣ ;
ಬ್ರಹ್ಮಚಾರಿಯಾಗಿ ಭವಗೆಟ್ಟನಯ್ಯ ಬಸವಣ್ಣ !
ಗುಹೇಶ್ವರಾ, ನಿಮ್ಮಲ್ಲಿ ಬಾಲಬ್ರಹ್ಮಚಾರಿಯಾದಾತ ಬಸವಣ್ಣನೊಬ್ಬನೇ!"

ಎಂದು ಒಮ್ಮೆ ಹೇಳಿದ್ದಾರೆ. ತಾವು ಉಪದೇಶ ಮಾಡುವಲ್ಲೆಲ್ಲ ಅಣ್ಣನವರ ನಡೆಯನ್ನು ಉದಾಹರಿಸದೆ ಇರುತ್ತಿರಲಿಲ್ಲ. ಅಣ್ಣನವರ ಕಾರ್ಯೋತ್ಸಾಹವನ್ನು, ಸ್ಪಷ್ಟವಾದ ಪರಿಣಾಮವನ್ನು, ತೀವ್ರತರವಾದ ಸಾಮಾಜಿಕ-ಧಾರ್ಮಿಕ ಕ್ರಾಂತಿಯನ್ನು ಕಂಡ ಪ್ರಭುದೇವರು:

'ತನುಗುಣಮತ್ತರಾದ ಐಶ್ವರ್ಯಾಂಧಕರ
ಮತವನೇನ ಮಾಡ ಬಂದೆಯಯ್ಯಾ, ಬಸವಣ್ಣ?'

ಎಂದು ಅಚ್ಚರಿವಟ್ಟು ಮನವುಕ್ಕಿ ನುಡಿದಿದ್ದಾರೆ.

ಮಾಚಯ್ಯನವರು ಹೇಳುತ್ತಾರೆ:

'ಬಿಂದುವರಿದು, ನಾದವನತಿಗಳೆದು, ಕಳೆಯು ಬೆಳಗ ಸಾಧಿಸಿ
ಅಸಾಧ್ಯ ಸಾಧಕನಾದೆಯಲ್ಲ ಬಸವಣ್ಣಾ!
ಕಾಯವ ಹೊದ್ದದೆ ಮಾಯವ ಸೋಂಕದೆ
ನಿರಾಳದಲ್ಲಿ ನಿಂದೆಯಲ್ಲ ಬಸವಣ್ಣಾ!
ನೀನೆನ್ನನವಗ್ರಹಿಸಿ, ನಾನಿನ್ನನವಗ್ರಹಿಸಿ ಸಂದುಭೇದವಿಲ್ಲದಿಪ್ಪಲ್ಲಿ
ಹೊಗಳಲಿಂಬುಂಟೇ ಬಸವಣ್ಣಾ!
ಕಲಿದೇವರ ದೇವನು ಕಾಯಗೊಂಡಿಪ್ಪುದ
ನಿನ್ನಿಂದ ಕಂಡೆನು ಕಾಣಾ ಸಂಗನ ಬಸವಣ್ಣ!

ಬಾಹುಬಲದಲ್ಲಿ ಹೇಗೆ ವೀರನಾಗಿದ್ದನೋ ಹಾಗೆ ಸುವಿಚಾರದಲ್ಲಿಯೂ ಅಂಥಿಂಥವರಿಗೆ ಮಣಿಯದಂತಿದ್ದ ಮಾಚಯ್ಯನು ಇನ್ನೂ

.........“ನಿಮ್ಮ ಕಾರುಣ್ಯ ಕಟಾಕ್ಷದಲ್ಲಿ ಬಸವಣ್ಣನಲ್ಲದೆ ಮಾಡುವರಿಲ್ಲ
ಆ ಬಸವಣ್ಣ ಹೇಳಿದ್ದ ಮೀರೆ! ಕಾಣಾ ಕಲಿದೇವರ ದೇವಾ.

ಎಂದು ಹೊಗಳಿದ್ದಾನೆ. ಹೀಗೆ ಸೂಕ್ಷ್ಮನಿಷ್ಠುರರಾದ ಪ್ರಭುದೇವರು, ಸ್ಪಷ್ಟ ನಿಷ್ಠುರನಾದ ಮಾಚಯ್ಯನು ಮೆಚ್ಚಿ ಹೊಗಳಿದುದು ಸಾಮಾನ್ಯವಲ್ಲ. ಯಾರಿಗೂ ಒಲಿಯದ ಮತ್ತು ತತ್ವಜ್ಞಾನದಲ್ಲಿ ಕಠೋರನಿಷ್ಠುರನಾದ ಅಂಬಿಗರ ಚೌಡಯ್ಯನ ದೃಷ್ಟಿಯಲ್ಲಿ ಸಿಕ್ಕವರ ಹುಳುಕು ಹೊರಬೀಳದೆ ಉಳಿಯುತ್ತಿರಲಿಲ್ಲ. ಅವನು ಮೆಚ್ಚಿದ್ದು ಬಸವಣ್ಣನವರೊಬ್ಬರನ್ನೇ!

'ಪರಮ ಪುರುಷಾರ್ಥಿಯಾದರೆ ಬಸವಣ್ಣನಂತಿರಬೇಕು!

ಎಂದು ನಿಸ್ಪೃಹನಾಗಿ ನುಡಿದಿದ್ದಾನೆ ಚೌಡಯ್ಯ!

ಶರಣರ ಸಂಗದಿಂದ ತನ್ನ ಯೋಗಮಾರ್ಗದಲ್ಲಿಯೇ ಕ್ರಾಂತಿಯನ್ನು ಕೈಕೊಂಡ ಶಿವಯೋಗಿ ಸಿದ್ಧರಾಮನು—

“ಬಸವ ಗತಿಯೆನಲು ಭವವದು ಹಿಂಗುವದು;
ಬಸವಯ್ಯ, ಬಸವಣ್ಣ ಶರಣಾರ್ಥಿಯೆಂದು ಬದುಕಿದೆನಯ್ಯಾ ಯೋಗಿನಾಥಾ”

ಎಂದು ಶರಣು ಬಂದಿದ್ದಾನೆ.

ಬಸವಣ್ಣನವರ ಬಾಹ್ಯಸ್ವರೂಪ-ಅಂತಃಸ್ವರೂಪಗಳನ್ನು ಅಂತರ್ಬಾಹ್ಯಗಳೊಂದಾದ ಪರಮಸ್ವರೂಪವನ್ನು ಮಹಾವೈರಾಗ್ಯಶಾಲಿನಿ ಮಹಾದೇವಿಯಕ್ಕನ ನುಡಿಗಳಲ್ಲಿ ಕಾಣಿರಿ.

"ಗುರುಕಾರುಣ್ಯವೇದ್ಯನು, ವಿಭೂತಿ ರುದ್ರಾಕ್ಷಿಧಾರಕನು, ಪಂಚಾಕ್ಷರೀ ಭಾಷಾಸಮೇತನು, ಲಿಂಗಾಂಗಸಂಬಂಧಿ, ನಿತ್ಯಲಿಂಗಾರ್ಚಕನು, ಅರ್ಪಿತದಲ್ಲಿ ಅವಧಾನಿ, ಪಾದೋದಕ ಪ್ರಸಾದ ಗ್ರಾಹಕನು, ಗುರುಭಕ್ತಿ ಸಂಪನ್ನನು, ಏಕಲಿಂಗನಿಷ್ಠಾಪರತನು, ಚರಲಿಂಗಲೋಲುಪ್ತನು, ಶರಣಸಂಗಮೇಶ್ವರನು, ತ್ರಿವಿಧಕ್ಕೆ ಆಯತನು, ತ್ರಿಕರಣಶುದ್ಧನು, ತ್ರಿವಿಧ ಲಿಂಗಾಂಗಸಂಬಂಧಿ, ಅನ್ಯದೈವಸ್ಮರಣೆಯು ಹೊದ್ದ, ಭವಿಸಂಗವ ಮಾಡ, ಭವಿ ಪಾಕವ ಕೊಳ್ಳ, ಪರಸ್ತ್ರೀಯರ ಬೆರಸ, ಪರಧನವನೊಲ್ಲ, ಪರನಿಂದೆಯನಾಡ, ಅನೃತವ ನುಡಿಯ, ಹಿಂಸೆಯ ಮಾಡ, ತಾಮಸ ಭಕ್ತಸಂಗವ ಮಾಡ, ಗುರು ಲಿಂಗ ಜಂಗಮಕ್ಕೆ ಅರ್ಥಪ್ರಾಣಾಭಿಮಾನ ಮುಂತಾದ ಸಮಸ್ತವೆಲ್ಲವ ಸಮರ್ಪಿಸಿ ಪ್ರಸಾದ ಮುಂತಾಗಿ ಭೋಗಿಸುವ, ಜಂಗಮನಿಂದೆಯ ಸೈರಿಸ, ಪ್ರಸಾದನಿಂದೆಯ ಕೇಳ, ಅನ್ಯರ ನಾಶಗೆಯ್ಯ, ಪಾತ್ರಾಪಾತ್ರವನರಿದೀವ, ಚತುರ್ವಿಧ ಪದವಿಯ ಹಾರ, ಅರಿಷಡ್ವರ್ಗಕ್ಕಳುಕ, ಕುಲಾದಿ ಮದಂಗಳ ಬಗೆಗೊಳ್ಳ, ದ್ವೈತಾದ್ವೈತವ ನುಡಿವನಲ್ಲ, ಸಂಕಲ್ಪ-ವಿಕಲ್ಪವ ಮಾಡುವನಲ್ಲ, ಕಾಲೋಚಿತವ ಬಲ್ಲ, ಕ್ರಮಯುಕ್ತನಾಗಿಹ, ಷಟ್‌ಸ್ಥಲಭರಿತ ಸರ್ವಾಂಗಲಿಂಗಿ, ದಾಸೋಹ ಸಂಪನ್ನ,.... ಇಂತೀ ಐವತ್ತೆರಡು ವಿಧದಲ್ಲಿ ನಿಪುಣನಾಗಿ ಮೆರೆವ ನಮ್ಮ ಬಸವಣ್ಣನು. ಆ ಬಸವಣ್ಣನ ಶ್ರೀಪಾದಕ್ಕೆ ನಾನು ಅಹೋರಾತ್ರಿಯಲ್ಲಿ ನಮೋ ನಮೋ ಎಂದು ಬದುಕಿದೆನು ಕಾಣಾ ಚೆನ್ನಮಲ್ಲಿಕಾರ್ಜುನಾ."

ಬಾಲಲೀಲಾ ಮಹಾಂತ ಶಿವಯೋಗಿಗಳು
'ಶ್ರೀ ಬಸವೇಶಂ ಪ್ರಣವಾಕಾರಂ
ಶ್ರೀ ಬಸವೇಶಂ ಶಿವಮತ ಸಾರಂ'
ಎಂದು ಸ್ತುತಿಸಿದ್ದಾರೆ.

ಲಿಂ. ಶ್ರೀ. ನಿ. ಪ್ರ ಜ. ಜಯದೇವ ಮುರುಘರಾಜೇಂದ್ರ ಶಿವಯೋಗಿಗಳವರು ಒಮ್ಮೆ ಅಪ್ಪಣೆ ಕೊಡಿಸಿದ್ದು ಹೀಗೆ:

"ಹೊಸದಾಗಿ ಒಂದು ಮತವನ್ನುಂಟು ಮಾಡಿದವನೇ ಮತಸ್ಥಾಪಕನೆಂದು ತಿಳಿಯುವದುಂಟು. ಆದರೆ ಇದರ ಅರ್ಥವು ಹಾಗಲ್ಲ. ಪರಮತ ನಿರಾಕರಣ ಪೂರ್ವಕ, ಸ್ವಮತಸಿದ್ಧಾಂತ ಕಥನವೇ ಸ್ಥಾಪನೆ ಪದಕ್ಕೆ ಅರ್ಥವು.

ಬಸವೇಶ್ವರನು ಉಪನಯನ ಮೊದಲಾದ ಸಂಸ್ಕಾರಗಳನ್ನು ನಿರಾಕರಿಸಿದ್ದು ಷಣ್ಮತ ನಿರಾಕರಣೆ! ಲಿಂಗಧಾರಣಾದಿ ಸಂಸ್ಕಾರ, ಷಟ್‌ಸ್ಥಲಸಿದ್ಧಾಂತ ಕಥನ, ನಿಷ್ಠಾವಾದ ಸಿದ್ಧಾಂತದ ಮಾರ್ಗದರ್ಶನ ಇವುಗಳಿಂದ ಮತಸ್ಥಾಪಕ ನಾಗಿದ್ದಾನೆ."

ಇದನ್ನು ತಿಳಿದ ಬಳಿಕ ಬಸವಣ್ಣನವರು ಮತಸ್ಥಾಪಕರೋ ಮತೋದ್ಧಾರಕರೋ ಎಂಬ ವಾದದಲ್ಲಿ ಬೀಳುವದು ಅನುಚಿತ. ಅವರು ಇವೆರಡನ್ನೂ ಮಾಡಿದವರು; ಇವುಗಳಿಗಿಂತ ಹೆಚ್ಚಿನದನ್ನೂ ಮಾಡಿದವರು. ನಡೆದು ನೀಡಿದ ಮಾರ್ಗದರ್ಶನದಲ್ಲಿ ಮತದ ಹೆಸರೊಂದು ನಿಮಿತ್ತ ಮಾತ್ರ! ಮಾನವ ಕುಲೋದ್ಧಾರದ ದರ್ಶನ ಅವರದು! ಅವರು ಕಾರಣ ಪುರುಷರು!!

ಸಾಹಿತ್ಯದಲ್ಲಿ ಉಂಟಾದ ಅಣ್ಣನವರ ಪ್ರಭಾವಮುದ್ರೆಯನ್ನು ಇದೇ ಪ್ರಕರಣದ ೨ನೆಯ ಭಾಗದಲ್ಲಿ ಹೇಳಿದೆ. ಆರ್ಥಿಕ ರಾಜಕೀಯ ಕ್ಷೇತ್ರಗಳಲ್ಲಿಯೂ ಪ್ರಭಾವ ಬೀರಿದುದನ್ನು ಈ ಗ್ರಂಥದಲ್ಲಿಯೇ ಕಾಣಬಹುದಾಗಿದೆ.

ಬಸವರಾಜರು ಗುರು, ದೇಶಿಕೋತ್ತಮ, ಮಹಾಚಾರ್ಯ, ಜಂಗಮಮೂರ್ತಿ, ಶಿವಯೋಗಿ ಎಲ್ಲ ಆಗಿದ್ದರೂ ಇವೆಲ್ಲಕ್ಕೂ ಮೂಲ ಕಾರಣವೂ ಮೋಕ್ಷಮಾತೆಯೂ ಆದ ಭಕ್ತಿಯ ಪಾರಮ್ಯವನ್ನು ಪ್ರದರ್ಶಿಸಿದ ಪರಂಜ್ಯೋತಿಯಾಗಿದ್ದರು. ಲೋಕಕಲ್ಯಾಣವನ್ನು ಚಿಂತಿಸಿ ಭವಬಂಧನಪರಿಹಾರದ ಮಾರ್ಗವನ್ನು ತೋರಿದರು. ತಮ್ಮ ತಂಗಿಯರನ್ನು ಸಂತೈಸುವಂತೆ ದೀನದಲಿತರನ್ನು ಸಂತುಷ್ಟಗೊಳಿಸಿ, ಸರ್ವರಿಗೂ ಅಣ್ಣನವರೇ ಆಗಿ ಹೆಸರಾದರು. ಜಗತ್ತಿಗೆ ಬೆಳಕಾದರು 'ತಾ' ವಿಲ್ಲದೆ ಪರಾತ್ಪರರಾದರು.

ಅನುಬಂಧಗಳು

೧. ಪ್ರಮಾಣವಿಚಾರ

೧. ಬಸವಣ್ಣನವರ ಜನ್ಮವರ್ಷದ ಬಗೆಗೆ ಪಂಡಿತರಲ್ಲಿ ಒಮ್ಮತವಿಲ್ಲ. ಇದಕ್ಕಾಗಿ ವಾದ ಹೂಡಬೇಕಾಗಿಲ್ಲ. ೧೧೩೩ ಘಟನಾಕ್ರಮಗಳಿಗೆ ಸರಿ ಕಾಣುತ್ತದೆ.

೨. ಆರ್ಯರ ಮೊದಲು 'ಶೈವ'ವಿದ್ದಿತೆಂದು ಈಗ ನಂಬಲಾಗಿದೆ. ಅಂದರೆ ಅದು ವೇದಪೂರ್ವವಾದುದು; ಅನುಭವಜನ್ಯವಾದುದು. ವೇದ ಕಾಲದಿಂದ ಮುಂದೆ ಪರಿಷ್ಕೃತವಾಗುತ್ತ ಬಂದು ಪ್ರಮಥರ ಕಾಲದಲ್ಲಿ ಪೂರ್ಣತ್ವವನ್ನು ಪಡೆದಿದೆ.

೩. ಲಕ್ಕಣ್ಣ ದಂಡೇಶನ 'ಶಿವತತ್ವ ಚಿಂತಾಮಣಿ'ಯಲ್ಲಿ 'ಅಕ್ಕನಾಗಮ್ಮನು ತಂದೆ ತಾಯಿಗಳಿಂದ ನಿಯೋಜಿಸಲ್ಪಟ್ಟು ಬಸವೇಶನ ಪಾಲನೆಗಾಗಿ ಸಂಗಮದಲ್ಲಿದ್ದಳೆಂದೂ, ಬಸವೇಶ–ಗಂಗಾಂಬಿಕೆಯರ ಮದುವೆಯ ವಾಗ್ನಿಶ್ಚಯ ಸಂಗಮದಲ್ಲಿಯೇ ಆಯಿತೆಂದೂ' ಹೇಳಿದೆ.

೪. ಬಿಜ್ಜಳನು ಮಂಗಳವಾಡದಲ್ಲಿ ಆಳುತ್ತಿದ್ದನೆಂದು 'ಸಂಖ'ದ ಶಾಸನದಲ್ಲಿ ಹೇಳಿದೆ. ಶಾಸನದ ಕಾಲ ಉಲ್ಲೇಖಿಸಿಲ್ಲ. ಬಿಜ್ಜಳನು ಚಾಲುಕ್ಯರ ಸರ್ವಾಧಿಕಾರಿಯಾಗುವ ಮೊದಲು ಅಲ್ಲಿ ಮಂಡಲೇಶ್ವರನಾಗಿ ಆಳುತ್ತಿದ್ದುದನ್ನು ಅದು ತೋರಿಸುತ್ತಿದೆ. ಆಗ ಬಸವಣ್ಣ ಮಂತ್ರಿಯಾಗಿದ್ದನೆಂದು ಆ ಶಾಸನದಲ್ಲಿ ಹೇಳಿಲ್ಲ.

೫. ಬಸವಣ್ಣನು ಮಂಗಳವಾಡದಲ್ಲಿದ್ದನೆಂದು ಶಾಸನಗಳಿಲ್ಲ. ಹರಿಹರನ ಬಸವರಾಜದೇವ ರಗಳೆಯಲ್ಲಿ ಹೇಳಿದ್ದು ಚರಿತ್ರಕ್ಕೆ ಹೊಂದಿಕೆಯಾಗುವದಿಲ್ಲ. ಕಲ್ಯಾಣವನ್ನು ಮಂಗಳಪುರ (ಮಂಗಳವಾಡಿ) ಎಂದೂ ಸಿಂಗಿರಾಜ ಪುರಾಣದಲ್ಲಿ ಕರೆಯಲಾಗಿದೆ. ಈ ಅರ್ಥದಿಂದ ಹರಿಹರನ ಹೇಳಿಕೆ ಸರಿಯಾದೀತು.

೬. ಶಿವದೇವನು (ಶಿವಸ್ವಾಮಿಯು)ನಾಗಲಾಂಬೆಯಪತಿ(ಸಿಂಗಿ. ಪು.)

೭. ಬಸವಣ್ಣನವರಿಗೆ ಲಿಂಗದೀಕ್ಷೆ ೧೧೩೫ರಲ್ಲಿ ಆಯಿತು. (ಸಿಂದಗಿ ಸಿದ್ದಪ್ಪನವರ ಬಸವೇಶ್ವರ ಚರಿತ್ರೆ)

೮. ಬಿಜ್ಜಳನ ಮಗ ಸೋವಿದೇವ ಚೆನ್ನಬಸವಣ್ಣನಿಗೆ ಸ್ನೇಹಿತನು. ಸೋವಿದೇವನು ಲಿಂಗಧಾರಣೆ ಮಾಡಿದ್ದನೆಂದು ಚಂದ್ರಸಾಗರವರ್ಣಿ (ಜೈನ) ಕವಿ ಹೇಳಿದ್ದಾನೆ.

೯. ಬಿಜ್ಜಳನು ಜೈನ. (ಚೆನ್ನಬಸವ ಪುರಾಣ, ಜೈನ ಪುರಾಣಗಳು)

,, ಶೈವನಾಗಿದ್ದನು. ಗೋಳರೇವಿಶ್ವೇಶ್ವರ ದೇವರು ಆತನ ಗುರುಗಳು. (ಶಾಸನಾಧಾರದಿಂದ ಶ್ರೀ. ಟಿ. ಎಸ್. ವೆಂಕಣ್ಣಯ್ಯನವರು.)

,, ಬ್ರಾಹ್ಮಣನಿರಬಹುದು. ನಾರಣಕ್ರಮಿತ ಮುಂತಾದವರು ಗುರುಗಳು ರಾಜಪುರೋಹಿತರು ಆಗಿದ್ದರು. (ಬಸವರಾಜದೇವ ರಗಳೆ. ಹರಿಹರ.)

ಆದರೆ ಬಿಜ್ಜಳನ ಪೂರ್ವಜರು ಕಾಲಿಂಜರದಿಂದ ಬಂದ ಕ್ಷತ್ರಿಯ ರಾಜ ಮನೆತನದವರೆಂದು ಇತಿಹಾಸದಿಂದ ತಿಳಿಯುವದು. ಆದ್ದರಿಂದ ಆತನು ಕ್ಷತ್ರಿಯನು. ವರ್ಣಧರ್ಮಕ್ಕೆ ಒಲಿದವನಾಗಿದ್ದನು. ಸರ್ವಧರ್ಮ ಪಾಲನೆ ಮಾಡುವದು ರಾಜರ ಕರ್ತವ್ಯ!

೧೦. ೧೧೪೫ರಲ್ಲಿ ಬಿಜ್ಜಳನು ಚಾಲುಕ್ಯರ ಸೇನಾಪತಿಯಾಗಿ ಹೊಯ್ಸಳರನ್ನು ವರದಾನದಿಯ ತೀರದಲ್ಲಿ ಸೋಲಿಸಿದನು. (ಅಬ್ಬಲೂರ ಶಾಸನ.)

೧೧. ಅಬ್ಬಲೂರ ಏಕಾಂತ ರಾಮಯ್ಯನು ಜೈನ ಮತವನ್ನು ಖಂಡಿಸಿದುದನ್ನು ಮೆಚ್ಚಿ ಆತನ ಕಾಲನ್ನು ತೊಳೆದು ಸತ್ತಳಿಗೆ–ಗೋಗೆಗಳನ್ನು ದತ್ತಿಯಾಗಿ ಬಿಟ್ಟನು. (ಅಬ್ಬಲೂರ ಸೋಮನಾಥ ದೇವಾಲಯದ ಶಾಸನ), ಬಿಜ್ಜಳ ಜೈನನಾಗಿರಲಾರನು.

೧೨. ಬಿಜ್ಜಳನು ೧೧೪೫ರಿಂದ ಮಹಾಮಂಡಲೇಶ್ವರನೆಂದು, ೧೧೫೫ರಿಂದ (ತೈಲಪನು ಕಲ್ಯಾಣವನ್ನು ತ್ಯಜಿಸಿದಂದಿನಿಂದ ಇರಬಹುದು.) ರಾಜ

ನೆಂದು ಶಾಸನಗಳಲ್ಲಿ ಉಲ್ಲೇಖಗಳಿವೆ. ಅದನ್ನನುಸರಿಸಿ ೧೧೫೫ ರಿಂದ ೧೧೬೭ ೧೨ ವರ್ಷ ಬಿಜ್ಜಳನ ಆಳಿಕೆಯೆಂದು ಗ್ರಂಥಗಳು ಹೇಳುತ್ತವೆ.

೧೩. ಅಪರಿಚಿತ ಲಿಪಿಯ ಮೂಲಕ ದೊರಕಿದ ನಿಧಿ ಅರವತ್ತುಕೋಟಿ ಎಂದು ಸಿಂಗಿರಾಜ ಪುರಾಣದಲ್ಲಿಯೂ ಹೇಳಿದೆ.

೧೪. ಬಸವರಾಜ ದಂಡನಾಯಕರಿಗೆ ತಿಂಗಳಿಗೆ ಸಾವಿರ ಹೊನ್ನ ಸಂಬಳವಿತ್ತೆಂದು ಸಿಂಗಿರಾಜ ಪುರಾಣದಲ್ಲಿ ಹೇಳಿದೆ.

೧೫. 'ಕುಕವಿ ಚರಿತ್ರೆ'ಯಲ್ಲಿ ಕಾಕತೀಯ ಪ್ರೊಲ್ಲರಾಜ ಪ್ರತಾಪ ರುದ್ರ ದೇವನು ೧೧೪೦-೧೧೬೭ ರಲ್ಲಿ ಆಳುತ್ತಿದ್ದನೆಂದು ಹೇಳಿದೆ. ಇವನೇ ಗಜಪತಿ ಪ್ರೊಲ್ಲರಾಜನಾಗಿರಬಹುದು.

೧೬. ಧರಣೀಂದ್ರಪಂಡಿತನು ಬಸವೇಶ್ವರರ 'ಭರ್ತ್ಸನೆ' ಮಾಡುವ ದಕ್ಕಾಗಿ ಬರೆದ ಕಾವ್ಯದಲ್ಲಿ ಕೂಡ 'ಬಸವೇಶ್ವರನು ಸ್ವಾಮಿಭಕ್ತಿಯಿಂದ ಬಿಜ್ಜ ಳನಿಗೆ ಆಡಳಿತದಲ್ಲಿ ನೆರವಾದನು' ಎಂದು ವರ್ಣಿಸಿದ್ದಾನೆ.

೧೭. ಶರಣ ಧರ್ಮದ ಪ್ರಸಾರವು ಅತಿ ತೀವ್ರವಾಗಿ ಆಯಿತೆಂದು ಆ ಕಾಲದ ಜೈನ ಕವಿಗಳು ಹೇಳಿದ್ದಾರೆ. (ಉದಾ: ಬ್ರಹ್ಮಶಿವ.)

೧೮. ಎಲ್. ರೈಸ್ ಸಾಹೇಬರು (ಮೈಸೂರು ಶಾಸನ ಇಲಾಖೆ ಅಧ್ಯಕ್ಷರು) ಈ ಧರ್ಮಪ್ರಸಾರದ ತೀವ್ರತೆ ಮತ್ತು ಚತುರತೆಗಳನ್ನು ಹೊಗಳಿದ್ದಾರೆ.

೧೯. ಪ್ರಭುದೇವರು ತಮ್ಮ ನಿರಂಜನ (ಶೂನ್ಯ) ಪೀಠಕ್ಕೆ ಚೆನ್ನಬಸವ ನನ್ನು ಉತ್ತರಾಧಿಕಾರಿಯನ್ನಾಗಿ ನೇಮಿಸಿದರು. ಚೆನ್ನಬಸವಣ್ಣನು ಕೆಲವು ಕಾಲ ಬಿಜ್ಜಳನ ಮಂತ್ರಿಯಾಗಿದ್ದನು. ನ್ಯಾಯ ವಿಚಾರಣೆಯ ಬಿಜ್ಜಳನ ತೀರ್ಪನ್ನು ಚೆನ್ನಬಸವನು ಪ್ರತಿಭಟಿಸಿದನು. (ಶರಣ ಲೀಲಾಮೃತ)

೨೦. ಬಿಜ್ಜಳನ ಆಳಿಕೆಯ ಕೊನೆಯ ಭಾಗದಲ್ಲಿ ಮಾಧವನಾಯ ಕನು ಮಹಾ ಸೇನಾನಿಯಾಗಿದ್ದನು. ಅವನು ಬಸವಣ್ಣನವರನ್ನು ಅವರ ಧರ್ಮ ವನ್ನು ದ್ವೇಷಿಸುತ್ತಿದ್ದನು. ಶರಣರನ್ನು ನಾಶಮಾಡುವ ಕಾರ್ಯದ ಮುಖ್ಯ ನಾಗಿದ್ದನು. ಬಿಜ್ಜಳನ ನಂತರ ಸೋವಿದೇವನ ಮಂತ್ರಿಯಾಗಿದ್ದನು. ಕರ್ಣ

ದೇವನನ್ನು ಕೊಂದನು. ತಾನು 'ಕಸಸಯಾದಿ (?) ದುರ್ಮಂತ್ರಿಗಳಿಂದ ಗಳ ಕುಳ' ವಾದ ರಾಜ್ಯವನ್ನು ಸುಧಾರಿಸಿದವನೆಂದು ಹೇಳಿಕೊಂಡಿದ್ದಾನೆ. ಅಲ್ಲಿ ಮಹಾಪ್ರಧಾನಿ, ದಂಡನಾಯಕ, ಮಹಾಸೇನಾನಿ, ಎಂದು ಹೇಳಲ್ಪಟ್ಟಿದ್ದಾನೆ. (ಹರಸೂರು ಶಾಸನ ೧೧೭೨. ಕಲಬುರ್ಗಿ ತಾಲೂಕು; ಕಾಳಿಗೆಯಪೂರು ಶಾಸನ, ತೆಂಗಳಿ ತಾಲೂಕು)

೨೧. ಬಿಜ್ಜಳನು ಪರನಾರೀ ಸೋದರನಾಗಿದ್ದನು. (ಬಳ್ಳೀಗಾಂವಿ ಶಾಸನ)

೨೨. ಹರಳಯ್ಯ ಮಧುವಯ್ಯಗಳನ್ನು ದಂಡಿಸುವ ಮೊದಲೇ ಬಸವಣ್ಣನವರು ಸಂಗಮಕ್ಕೆ ಹೋಗಿದ್ದರು. (ಶಿವಗಣ ಚಾರಿತ್ರ)

೨೩. ಬಳ್ಳೀಗಾಂವಿಯ ಶಾಸನ ೧೧೬೮, ಕಡಲೆವಾಡ ಶಾಸನ ೧೧೬೮ ಇವುಗಳನ್ನು ಸೋವಿದೇವನ ಆಳಿಕೆಯ ಉಲ್ಲೇಖದೊಡನೆ ಬರೆಯಲಾಗಿದೆ. ಆದ್ದರಿಂದ ಆಗ ಬಿಜ್ಜಳ ಇರಲಿಲ್ಲ. ಅವನ ಅಂತ್ಯವು ೧೧೬೭ ರಲ್ಲಿಯೇ ಆಗಿದೆ.

೨೪. ಬಸವೇಶ್ವರರು 'ಒಬ್ಬ ಜಂಗಮದ ಅಭಿಮಾನದಿಂದ ಚಾಲುಕ್ಯ ರಾಯನ ಆಳಿಕೆ ತೆಗೆಯಿತ್ತು' ಎಂಬುದು ಬಿಜ್ಜಳನ ಆಳಿಕೆಯನ್ನೇ ಕುರಿತಾಗಿದೆ. ಬಿಜ್ಜಳನು ಸಾಮ್ರಾಜ್ಯವನ್ನು ಸ್ವತಂತ್ರವಾಗಿ ಆಳುತ್ತಿದ್ದರೂ ಆ ರಾಜ್ಯಕ್ಕೆ ಚಾಲುಕ್ಯ ರಾಜ್ಯವೆಂದೇ ಕರೆಯುತ್ತಿದ್ದನು. ಬಿಜ್ಜಳನು ಚಾಲುಕ್ಯರಾಜ್ಯ ವನ್ನು ಆಳುತ್ತಿದ್ದನೆಂದೇ ಪ್ರತೀತಿ ಇತ್ತು.

೨೫. ಬಿಜ್ಜಳನ ಕೊಲೆಮಾಡಿದ ಜಗದೇವ-ಮಲ್ಲಿಬೊಮ್ಮರ ಹೆಸರು ಗಳನ್ನು ವೀರಶೈವ ಪುರಾಣಗಳಲ್ಲಿಯೂ ಹೇಳಲಾಗಿದೆ. ಆದರೆ ಅವರು ಯಾರೆಂಬದನ್ನು ವಿವರಿಸಿಲ್ಲ. ಅದನ್ನು ಬಿ. ಪುಟ್ಟಸ್ವಾಮಯ್ಯನವರ ಗ್ರಂಥ ಗಳಲ್ಲಿ ನಿರ್ದಿಷ್ಟಪಡಿಸಲಾಗಿದೆ.

೨೬. ೧೭ ನೆಯ ಶತಮಾನದ ಜೈನ ಕವಿ ಧರಣೀಂದ್ರಪಂಡಿತನ 'ಬಿಜ್ಜಳರಾಯ ಚರಿತ್ರೆ' ಯಲ್ಲಿ ಬಸವಣ್ಣನವರ ಚಾರಿತ್ರ್ಯಕ್ಕೆ ಕುಂದುಕವಾ ಗುವ ಮಾತುಗಳು ಹೇಳಲ್ಪಟ್ಟಿವೆ. ಇವನ ಈ ಕಾವ್ಯಕ್ಕೆ ವಾಸ್ತವಿಕ ಆಧಾ ರವಿಲ್ಲ. ಕವಿಯು 'ತನ್ನ ತಾಯಿಗೆ ಅವಳ ತಾಯಿಯು ಹೇಳಿದಂತ ಕಥೆ ಯನ್ನು, ಆಧರಿಸಿ ಬರೆದೆನೆಂದು ಹೇಳಿದ್ದಾನೆ. ಹಲವು ಶತಮಾನಗಳ ಅನಂತರ ಅನಾದರದ ಭಾವನೆಯವಳೊಬ್ಬಳು ಹೇಳಿದ ಸಂಗತಿ ಹೇಗೆ ಸರಿ ಇದ್ದಾವು?

೨೭. ಬಿಜ್ಜಳನ ತರುವಾಯ ಕರ್ಣದೇವ ಕೆಲಕಾಲ ಬದುಕಿ ಇದ್ದನು. ಮಾಧವನು ಅವನನ್ನು ಕೊಂದನು. ಅದುವರೆಗೆ ಸೆರೆಯಲ್ಲಿಟ್ಟಿದ್ದನು. (ಹರಸೂರು ಶಾಸನ)

೨೮. ತನಗೆ ಸಹಾಯ ಮಾಡಬೇಕೆಂದು ಕರ್ಣದೇವನು ಸಿದ್ಧರಾಮನನ್ನು ಕೇಳಿಕೊಂಡನು. (ರಾಘವಾಂಕನ ಸಿದ್ಧರಾಮನ ಪುರಾಣ.)

೨೯. ಮಲ್ಲಿದೇವ ಬೊಮ್ಮರಸನು (ತಂದೆಯ ಹೆಸರಿನೊಡನೆ ಕೂಡಿದ ಹೆಸರು; ಬಳಿಕೆಯಲ್ಲಿ 'ಮಲ್ಲಿಬೊಮ್ಮಯ್ಯ') ನಿಡುಗಲ್ಲ ಕಂಪಣವನ್ನು ಆಳುತ್ತಿದ್ದನು. (ಶಿರಾ, ಪಾವಗಡ ಶಾಸನಗಳು ೧೧೬೮). ೧೧೬೭ ರಲ್ಲಿ ಬಿಜ್ಜಳನ ಕೊಲೆಮಾಡಿ ಪಾರಾಗಿ ಬಂದ ಬಳಿಕ ಆಳಿದನು.

೩೦. ಮಲ್ಲಿದೇವ ಬೊಮ್ಮರಸನು ತನ್ನನ್ನು 'ಬಿಜ್ಜಗ ಶಿರಚ್ಛೇದಕ' ಎಂದು ಒಂದು ಶಾಸನದಲ್ಲಿ ಹೇಳಿಕೊಂಡಿದ್ದಾನೆ.

೩೧. ಲಿಂಗವಂತ ಮತಕ್ಕೆ 'ವೀರಶೈವ'ವೆಂದು ಕರೆದುದು ಹಿಂದಿನಿಂದ ೧೨ನೆಯ ಶತಮಾನದ ಶರಣರ ವಚನಗಳಲ್ಲಾಗಲಿ, (ಬಸವಣ್ಣನವರ ವಚನಗಳಲ್ಲಿ ಕೂಡ) ತಾತ್ಕಾಲಿಕ ಗ್ರಂಥಗಳಲ್ಲಿ ಇಲ್ಲವೆ ಶಾಸನಗಳಲ್ಲಿ ಆಗಲಿ 'ವೀರಶೈವ' ಶಬ್ದ ಪ್ರಯೋಗವಿಲ್ಲ. ಆಗ ಲಿಂಗವಂತರನ್ನು 'ಶಿವಭಕ್ತರು, ಶರಣರು, ವೀರವ್ರತಿಗಳು (ನಿಯತಾಚಾರದಲ್ಲಿ ಛಲವುಳ್ಳವರು)' ಎಂದು ಪರ್ಯಾಯವಾಗಿ ಹೇಳಿದುದುಂಟು. ಈ ಮತವು ಅನ್ಯರ ವಿರೋಧದಿಂದ ನಾಶವಾಗುವ ಹೊತ್ತು ಬಂದಾಗ ಅದರ ಅನುಯಾಯಿಗಳು ಗಣಾಚಾರವನ್ನು ಮುಂದೆ ಮಾಡಿ ವೀರವೃತ್ತಿಯನ್ನು ಅವಲಂಬಿಸಿ ಶಸ್ತ್ರಧಾರಿಗಳಾಗಿ ಅದನ್ನು ರಕ್ಷಿಸಿದರು. ಆ ಮೇಲೆ ಶೈವರಲ್ಲಿ ಸುಧಾರಣೆ ಹೊಂದಿದ ವೀರವ್ರತದ ಈ ಮತವು 'ವೀರಶೈವ'ವೆಂದುಕರೆಯಲ್ಪಟ್ಟಿದೆ.

ವೀರವ್ರತಿಗಳು (ಬಸವಣ್ಣನವರ ವಚನ)

,, (ಅರ್ಜುನವಾಡದ ಶಾಸನ)

೩೨. ಅರ್ಜುನವಾಡದ ಶಾಸನದಲ್ಲಿ ಬಸವಣ್ಣನವರ ವಂಶದ ಹಾಲಬಸವಿದೇವನು ವೀರವ್ರತಿಯಾಗಿದ್ದನು ಎಂದು ಹೇಳಲಾಗಿದೆ. ಬಸವಣ್ಣನವರ ಒಬ್ಬನೇ ಮಗ ಸಂಗಯ್ಯನಿಂದ ಆ ವಂಶ ಮುಂದುವರಿದಿರಬೇಕು. ಅಲ್ಲಿ ಅವನು ತನಗಿರಬಹುದಾದ ಎರಡನೆಯ ಹೆಸರಿನಿಂದ ಉಲ್ಲೇಖಿತನಾದಂತಿದೆ.

೨. ಕಾಲಸೂಚಿ

(ಈ ಪಟ್ಟಿಯಲ್ಲಿಯ ಕೆಲವು ವರ್ಷಗಳು ನಿರ್ವಿವಾದವಾಗಿಲ್ಲ.)

ಶಾಲಿವಾಹನ ಶಕ ವರ್ಷ	ಕ್ರಿಸ್ತ ಶಕ ವರ್ಷ	ಮುಖ್ಯವಾದ ಘಟನೆಗಳು
೧೦೪೫ (?)	೧೧೨೩ (?)	ಬಸವೇಶ್ವರರ ಜನನ
೧೦೫೩	೧೧೩೧	ಸಂಗಮಕ್ಕೆ ಹೋದುದು
೧೦೫೭	೧೧೩೫	ಲಿಂಗದೀಕ್ಷೆ.
೧೦೬೦	೧೧೩೮	ಬಿಜ್ಜಳನ ತಂದೆ ಪೆರ್ಮಾಡಿರಾಜನ ಮರಣ.
೧೦೬೩	೧೧೪೦	ಚೆನ್ನಬಸವಣ್ಣನ ಜನ್ಮ.
೧೦೬೪	೧೧೪೨	ಬಸವಣ್ಣನನ್ನು ಪೊಮ್ಮಗ ಚೆನ್ನಬಸವಣ್ಣನನ್ನು ಮಾಡಿರಾಜನು ಬಾಗೇವಾಡಿಗೆ ಕರೆಯಿಸಿಕೊಂಡು ಸತ್ಕರಿಸಿ ಅವರ ಉತ್ಕರ್ಷದ ನೆನಹಿಗಾಗಿ ಮಣಂಗವಳ್ಳಿಯ ಶಾಸನ ಮಾಡಿಸಿದ್ದು.
೧೦೬೮	೧೧೪೬	ಸಿದ್ದಣ್ಣಮಂತ್ರಿಯ ಮರಣ.
೧೦೭೦	೧೧೪೮	ಚಾಲುಕ್ಯ ಚ. ಪೆರ್ಮ ಜಗದೇಕಮಲ್ಲನು ಬಿಜ್ಜಳನನ್ನು ಗೌರವಿಸಿದುದು.

೧೦೭೨	೧೧೫೦	ಪೆರ್ಮೆ ಜಗದೇಕಮಲ್ಲನ ಮರಣ ನೂ. ತ್ರೈಲಪನ ಸಿಂಹಾಸನಾರೋಹಣ.
೧೦೭೨ ಮಾಘ.	೧೧೫೧	ಗಂಗಾಂಬಿಯೊಡನೆ ಬಸವಣ್ಣನವರ ಮದುವೆ.
೧೦೭೩	೧೧೫೨	ಬಲದೇವ ಮಂತ್ರಿಯ ಅಂತ್ಯ.
೧೦೭೫	೧೧೫೩	ನಿಧಿಯ ಶೋಧನೆ.
೧೦೭೬	೧೧೫೪	ಪ್ರಜಾಪ್ರತಿನಿಧಿ ಸಭೆ; ಬಸವರಾಜರಿಗೆ ಮಹಾಮಂತ್ರಿಯ ಅಧಿಕಾರ, ದಂಡನಾಯಕ ಪದ ಪ್ರಾಪ್ತವಾದುದು.
೧೦೭೭	೧೧೫೫	ಚ. ತ್ರೈಲಪದೇವನು ಸಿಂಹಾಸನ ತ್ಯಾಗ ಮಾಡಿದನು.
೧೦೭೮	೧೧೫೬	ಬಸವರಾಜರು ಬನವಾಸಿಯ ಮಹಾಮಂಡಲೇಶ್ವರ ಆಡಳಿತವನ್ನು ನೋಡಿಕೊಳ್ಳುವವರಾದುದು.
೧೦೮೩	೧೧೬೧	ಸಾಮ್ರಾಜ್ಯದ ಉತ್ತರಾಧಿಕಾರ ಬಗ್ಗೆ ಕೃತ್ರಿಮತೆ ನಡೆದುದು.
೧೦೮೩	೧೧೬೨	ತ್ರೈಲಪದೇವನ ಮರಣ.
೧೦೮೪	೧೧೬೨	ಬಸವರಾಜರ ನಿವೃತ್ತಿ.
೧೦೮೫	೧೧೬೩	ಪ್ರಭುದೇವರು ಕಲ್ಯಾಣಕ್ಕೆ ಬಂದುದು.
೧೦೮೬ ಮಾಘ	೧೧೬೫	ಶೂನ್ಯ ಸಿಂಹಾಸನಾರೋಹಣ.

ಶಾಲಿವಾಹನ ಶಕ ವರ್ಷ	ಕ್ರಿಸ್ತ ಶಕ ವರ್ಷ	ಮುಖ್ಯವಾದ ಘಟನೆಗಳು
೧೦೮೮	೧೧೬೬	ಇಳಾಪುರಿಯಲ್ಲಿ ಯಜ್ಞಭಂಗ.
,,	,,	ಚಾಲುಕ್ಯವಂಶೀಯರ ಸಂಚು ಪ್ರಬಲವಾಯಿತು.
,,	,,	ಬಸವಣ್ಣನವರು ಸಂಗಮಕ್ಕೆ ಹೋದುದು.
೧೦೮೮ ಫಾಲ್ಗುಣ	೧೧೬೭	ಹರಳಯ್ಯ, ಮಧುವಯ್ಯ, ಶೀಲವಂತಯ್ಯಗಳ ಮರಣದಂಡನೆ ಕಾರ್ಯಗತವಾದುದು.
೧೦೮೯	೧೧೬೭	ಶರಣರು ಕಲ್ಯಾಣದಿಂದ ವಲಸೆ ಹೊರಟರು. ಬಿಜ್ಜಳನ ಕೊಲೆಯಾಯಿತು.
೧೦೮೯	೧೧೬೭	ಬಸವರಾಜರು ಸಂಗಮದಲ್ಲಿ ಲಿಂಗೈಕ್ಯರಾದರು.
,,	,,	ಶರಣದಳ-ಕಲಚೂರ್ಯ ಸೈನ್ಯಗಳಲ್ಲಿ ಹೋರಾಟ.
೧೦೯೦	೧೧೬೮	ಉಳವೆಯಲ್ಲಿ ನೆಲೆಯಾದುದು.
೧೦೯೨	೧೧೭೦	ಚೆನ್ನಬಸವಣ್ಣ ಲಿಂಗೈಕ್ಯನಾದುದು.
೧೧೦೨	೧೧೮೦	ಅಕ್ಕನಾಗಮ್ಮ ಎಣ್ಣೆ ಹೊಳೆ ಆಶ್ರಮದಲ್ಲಿ ಲಿಂಗೈಕ್ಯಳಾದುದು.

೩. ಕಲ್ಯಾಣದ ಚಾಲುಕ್ಯ ಚಕ್ರವರ್ತಿಗಳ ವಂಶಾವಳಿ

ಆಹವಮಲ್ಲ ತೈಲಪದೇವ ೯೯೧-೧೦೪೦

|

ಆಹವಮಲ್ಲ ಸೋಮೇಶ್ವರ ತ್ರೈಲೋಕ್ಯಮಲ್ಲ ೧೦೪೦-೬೯

|

ಸೋಮೇಶ್ವರ, ಭುವನೈಕಮಲ್ಲ ೧೦೬೮-೧೦೭೬ | ವಿಕ್ರಮಾದಿತ್ಯ IV, ತ್ರಿಭುವನಮಲ್ಲ ೧೦೭೬-೧೧೨೬ | ಜಯಸಿಂಗ

|

ಸರ್ವಜ್ಞ ಸೋಮೇಶ್ವರ ೧೧೨೬-೧೧೩೮

|

ಪೆರ್ಮಾಡಿ ಜಗದೇಕಮಲ್ಲ, ೧೧೩೮-೧೧೫೦ | ನೂರ್ಮಡಿ ತೈಲಪದೇವ, ಜಗದೇಕಮಲ್ಲ II, ೧೧೫೦-೧೧೬೨ (೬೫) (ಬಿಜ್ಜಳನ ಬಂದಿ) | ಸೋಮೇಶ್ವರ IV ೧೧೮೪-೮೯

೧೧೫೫ ರಿಂದ ೧೧೮೪ ವರೆಗೆ ಕಲಚೂರ್ಯರ ಆಳಿಕೆ ಕಲ್ಯಾಣದಲ್ಲಿ

ಬಿಜ್ಜಳ ೧೧೫೫-೬೭

|

ಸೋವಿದೇವ ೧೧೬೭-೬೮ | ವೈಲುಗಿ | ಸಂಕಮ | ಸಿಂಗಮ

(ಈ ಮೂವರೂ ೧೧೮೪ ವರೆಗೆ)

೧೧೮೯ ರಲ್ಲಿ ಚಾಲುಕ್ಯ ಸಾಮ್ರಾಜ್ಯ ಕೊನೆಯದಾಗಿ ಕಣ್ಮರೆಯಾಯಿತು.